

ಮಲೆನಾಡ ನುಡಿಕೋಶ

ಸಂಪಾದಕರು
ವೇಣಾಕ್ಷಿ ಎಸ್.ಡಿ.

ಮಲೆನಾಡ ನುಡಿಕೋಶ

ಸಂಪಾದಕರು

ವೇಣಾಕ್ಷಿ. ಎಸ್.ಡಿ.

ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ - ೫೮೧ ೧೯೭, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

MALENADA NUDIKOSHA

(Regional Folklore Dictionary)

Edited by

Venakshi. S.D.

2318, Sarvagna Road

J Division, Kuvempu Nagara

Mysore - 23

Published by

Prof. S.C. Ramesh

Director

Centre for Extension and Consultancy

Karantaka Janapada University

Gotagodi - 581 197.

Shiggavi Taluk, Haveri Dist, Karnataka

Phone: 0836 - 2255180

Pages: xii + 248 = 260 **Price:** ₹ 150/-

www.janapadauni.in

First Impression : 2014

ISBN 978-93-83149-11-7

© **ಕರ್ನಾಟಕ ಜಾನಪದ ವಿಶ್ವವಿದ್ಯಾಲಯ**

ಬೆಲೆ : ೧೫೦/–

ಮುಖಪುಟ ವಿನ್ಯಾಸ: ಡಾ. ಸಿದ್ದಲಿಂಗಸ್ವಾಮಿ ಹಿರೇಮಠ

ರೇಖಾಚಿತ್ರ : ರಮೇಶ್ ಅಗ್ರಹಾರ

ಪುಸ್ತಕ ದೊರೆಯುವ ಸ್ಥಳ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ – ೫೮೧ ೧೯೭,

ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಕಟ್ಟಡ

ನಂ. ೨/೧೦೬, ೩ನೇ ಮಹಡಿ, ೧೭ನೇ ಅಡ್ಡರಸ್ತೆ,

ಮಾಗಡಿ ಕಾರ್ಡ್‌ರಸ್ತೆ, ವಿಜಯನಗರ, ಬೆಂಗಳೂರು--೫೬೦ ೦೪೦

ಮುದ್ರಣ :

ರಾಜಾ ಪ್ರಿಂಟರ್ಸ್, ಬೆಂಗಳೂರು

ದೂರವಾಣಿ : 22234066

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ–ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ

ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯ ವಾಗಿದೆ. ಜಾನಪದವು ಭೂಮಿತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ –ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ

ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾ ಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಭಾಷೆ ಬಹುಮುಖಸಾಧ್ಯತೆಗಳನ್ನು ಒಳಗೊಂಡ ಒಂದು ಸಂವಹನ ಸಾಧನ. ಅದು ನಿರಂತರ ಪರಿವರ್ತನಾಶೀಲವಾದುದು. ಯಾವುದೇ ಒಂದು ಭಾಷೆಯಲ್ಲಿ ಕೊಳು-ಕೊಡೆ ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತಿರುವುದನ್ನು ಕಾಣಬಹುದು. ಕಾಲದಿಂದ ಕಾಲಕ್ಕೆ ಭಾಷೆಯ ಸ್ವರೂಪವು ಬದಲಾಗುವುದನ್ನು ಗುರುತಿಸಬಹುದು. ಭೌಗೋಳಿಕ ಪರಿಸರದ ಪ್ರಭಾವದಿಂದಾಗಿ ಆಯಾಯ ಪ್ರದೇಶದಲ್ಲಿ ವಾಸಿಸುವ ಜನಸಮುದಾಯಗಳು ಬಳಸುವ ಭಾಷೆಯು ಭಿನ್ನವಾಗಿ ಬಳಕೆಯಾಗುವುದು ಸಹಜ. ಈ ಹಿನ್ನೆಲೆಯಲ್ಲಿ ನೋಡಿದಾಗ, ಕರ್ನಾಟಕದಲ್ಲಿ ಭೌಗೋಳಿಕ ಪರಿಸರ ವೈವಿಧ್ಯಮಯವಾಗಿರುವಂತೆ ಆಯಾಯ ಪ್ರದೇಶ ವಾಸಿಗಳ ಭಾಷೆಯಲ್ಲೂ ವೈವಿಧ್ಯತೆ ಇರುವುದು ಕಂಡುಬರುತ್ತದೆ. ಪ್ರಾದೇಶಿಕ ಉಪಭಾಷೆಗಳು ಮತ್ತು ಸಾಮಾಜಿಕ ಉಪಭಾಷೆಗಳು ಭಾಷೆಯನ್ನು ಶ್ರೀಮಂತಗೊಳಿಸುತ್ತವೆ. ಭಾಷಿಕ ಶ್ರೀಮಂತಿಕೆಯನ್ನು ಹೆಚ್ಚುಗೊಳಿಸುವ ಈ ಬಗೆಯ ಹಲವು ಉಪಭಾಷೆಗಳನ್ನು ತಿಳಿಯಲು ಆಡುನುಡಿಕೋಶ, ಜಾನಪದ ನಿಘಂಟು, ಜಾನಪದ ಶಬ್ದಕೋಶಗಳು ಹೆಚ್ಚು ಸಹಾಯಕ್ಕೆ ಬರುತ್ತವೆ. ವಿಶೇಷವಾಗಿ ಮಲೆನಾಡು ಪ್ರದೇಶ ಭಾಷಾವೈವಿಧ್ಯತೆಯನ್ನು ಹೊಂದಿದ ವಿಶಿಷ್ಟ ಪ್ರದೇಶ. ಈ ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡು ಬಳಕೆಯಲ್ಲಿರುವ ಆಡುರೂಪಗಳನ್ನು ಕುರಿತು ಪದ, ಧ್ವನಿ, ಉಚ್ಚರಣೆ, ಅರ್ಥವೈವಿಧ್ಯ ಇತ್ಯಾದಿ ಸಂಗತಿಗಳನ್ನು ಅತ್ಯಂತ ಶ್ರದ್ಧೆಯಿಂದ ಗುರುತಿಸಿ, ದಾಖಲಿಸಿರುವುದು 'ಮಲೆನಾಡ ನುಡಿಕೋಶ'ದ ಹೆಗ್ಗಳಿಕೆ. ಮಲೆನಾಡು ಪ್ರದೇಶದ ಜನಸಂಸ್ಕೃತಿ ಹಾಗೂ ಶ್ರೀಮಂತ ಭಾಷಿಕ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಮಹತ್ವದ ಆಕರವೆನಿಸುವ ಪ್ರಕೃತ ನುಡಿಕೋಶವನ್ನು ಅತ್ಯಂತ ಶ್ರದ್ಧೆ, ಶ್ರಮವಹಿಸಿ ರೂಪಿಸಲಾಗಿದೆ. ನಾಡನುಡಿ ಕೋಶಗಳ ಚರಿತ್ರೆಯಲ್ಲಿ ಮುಖ್ಯವೆನಿಸಬಹುದಾದ ಈ ನುಡಿಕೋಶವನ್ನು ಸಿದ್ಧಪಡಿಸಿಕೊಟ್ಟ ಶ್ರೀಮತಿ ಎಸ್.ಡಿ. ವೇಣಾಕ್ಷಿ ಅವರು ವಿಶೇಷವಾಗಿ ಅಭಿನಂದನಾರ್ಹರು.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ-ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಬರಹದ ಭಾಷೆ ಕುರಿತು ಅಧ್ಯಯನಗಳು ಹೆಚ್ಚು ನಡೆದಿರುವುದನ್ನು ಭಾಷಾನಿಘಂಟು ಚರಿತ್ರೆಯಲ್ಲಿ ಕಾಣುತ್ತೇವೆ. ಆದರೆ ಕಾಲಾನಂತರದಲ್ಲಿ ಜನಸಾಮಾನ್ಯರ ಆಡುನಡಿಗಳು ಒಳಗೊಂಡ ಪದ, ಅರ್ಥವಿಸ್ತಾರ, ವಾಕ್ಯ ಇತ್ಯಾದಿ ಅಂಶಗಳನ್ನು ಅನುಲಕ್ಷಿಸಿ ರಚಿಸುವ ಶಬ್ದಕೋಶ ಪ್ರಕ್ರಿಯೆ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತ ಬಂತು ಎಂಬುದನ್ನು ಗುರುತಿಸಬಹುದು. ಭಾಷೆ, ಸಮಾಜ, ಸಂಸ್ಕೃತಿಗಳ ನಡುವಿನ ಪರಸ್ಪರ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಭಾಷಾಪ್ರಬೇಧಗಳನ್ನು ಅಧ್ಯಯನ ಮಾಡಬೇಕಾದುದು ಅಗತ್ಯ. ಈ ಅಗತ್ಯತೆಯನ್ನು ಪೂರೈಸುವ ನಿಟ್ಟಿನಲ್ಲಿ 'ಮಲೆನಾಡ ನುಡಿಕೋಶ' ಅತ್ಯಂತ ಮಹತ್ವದ್ದು ಮತ್ತು ಅಧ್ಯಯನಯೋಗ್ಯವಾದುದು. ಮಲೆನಾಡು ಪ್ರದೇಶದ ಭಾಷಾವೈವಿಧ್ಯ ಮತ್ತು ಅಲ್ಲಿನ ಸಂಸ್ಕೃತಿಯನ್ನು ತಿಳಿಸಿಕೊಡುವಲ್ಲಿ ಪ್ರಸ್ತುತ ಆಡುನುಡಿ ಕೋಶ ಮುಖ್ಯ ಆಕರವಾಗಬಲ್ಲದು. ನಾಡಿನ ಜಾನಪದ ನಿಘಂಟು ಕ್ಷೇತ್ರಕ್ಕೆ ಹೊಸ ಸೇರ್ಪಡೆಯೆನ್ನಬಹುದಾದ ಈ ಕೋಶವನ್ನು ರೂಪಿಸಿದ ಶ್ರೀಮತಿ ವೇಣಾಕ್ಷಿ ಎಸ್.ಡಿ. ಅವರಿಗೆ ವಿಶೇಷ ಕೃತಜ್ಞತೆಗಳು ಸಲ್ಲಬೇಕು.

ಪ್ರೊ. ಸ.ಚಿ. ರಮೇಶ
ನಿರ್ದೇಶಕರು,
ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಪ್ರಸ್ತಾವನೆ

ಇದೊಂದು ಕನ್ನಡ–ಕನ್ನಡ ನಿಘಂಟು. ವಿಸ್ತರಿಸಿ ಹೇಳಬೇಕೆಂದರೆ, ಮಲೆನಾಡು ಕನ್ನಡ ಅಥವಾ ಆಡುನುಡಿ– ನಾಡುನುಡಿಯ ನಿಘಂಟು. ಅರ್ಥಪೂರ್ಣವಾಗಿ ಏನನ್ನಾದರೂ ಮಾಡಬೇಕೆಂಬ ನನ್ನ ಹಲವು ಹಂಬಲಗಳಲ್ಲಿ ಈ ಶಬ್ದಕೋಶವೂ ಒಂದು. ನನಗೆ ಗೊತ್ತಿರುವ ಭಾಷೆ ಕೂಡ ಒಂದೇ. ನನ್ನ ಮಾತೃಭಾಷೆ – ಕನ್ನಡ.

ಶಾಲಾ ದಿನಗಳಲ್ಲಿ ಅಲ್ಪ ಸ್ವಲ್ಪ ಹಳೆಗನ್ನಡವನ್ನು ಅಭ್ಯಾಸ ಮಾಡಿದ್ದೆ. ಕನ್ನಡ ಪಂಡಿತರಾದ ಶ್ರೀ ಸೀತಾರಾಮ ಶಾಸ್ತ್ರಿಯವರು ನಳದಮಯಂತಿಯನ್ನೋ, ಕುಮಾರವ್ಯಾಸಭಾರತವನ್ನೋ ಓದಿ ಅರ್ಥ ಹೇಳುತ್ತಿದ್ದ ರೀತಿ, ನಮಗೆಲ್ಲ ಹಳೆಗನ್ನಡವನ್ನು ಕಲಿಯಬೇಕೆಂಬ ಆಸಕ್ತಿಯುಂಟಾಗಲು ಸಹಕಾರಿಯಾಯ್ತು. ಮಲೆನಾಡಿನಿಂದ ದೂರದ ಊರಾದ ಮೈಸೂರಿಗೆ ಬಂದು ನೆಲೆಸಿ, ನಗರ ಜೀವನಕ್ಕೆ ಮೈಯೊಡ್ಡಿ, ಹಲವು ಜನರ ಸಂಪರ್ಕವನ್ನು ಬೆಳೆಸಿಕೊಂಡಾಗ ನನಗರಿವಿಲ್ಲದೆಯೇ ನನ್ನ ಭಾಷೆ ಕಲಸುಮೇಲೋಗರವಾಯ್ತು. ಸುಮಾರು ಇಪ್ಪತ್ತು ವರ್ಷಗಳ ಕೆಳಗೆ ಮೈಸೂರಲ್ಲಿ 'ಸೌಂದರ್ಯ ಮಳಿಗೆ'ಯೊಂದನ್ನು ನಡೆಸುತ್ತಿದ್ದೆ. ಅಲ್ಲಿಗೆ ಬೇರೆ ಬೇರೆ ಸ್ಥಳಗಳಿಂದ ಬಂದ ಬೇರೆ ಬೇರೆ ರೀತಿಯಲ್ಲಿ ಮಾತಾಡುವ ಮಹಿಳೆಯರು ಮಕ್ಕಳು ಬರುತ್ತಿದ್ದರು. ಹೀಗಾಗಿ ಮೈಸೂರು, ಮಂಡ್ಯ, ಕೊಡಗು, ಮಂಗಳೂರು, ಧಾರವಾಡ, ಬೆಳಗಾವಿ ಮುಂತಾದ ಪ್ರದೇಶಗಳ ಕನ್ನಡ ಭಾಷೆಯನ್ನು ಆಡುತ್ತಿದ್ದ ರೀತಿ ಕೇಳಲು ತುಂಬಾ ಹಿತವೆನಿಸುತ್ತಿತ್ತು. ಈ ರೀತಿಯ ಹಲವಾರು ಸಂದರ್ಭಗಳು ಮನಸ್ಸಿನಲ್ಲಿ ಅಚ್ಚೊತ್ತಿ, ನಾನಾಡುತ್ತಿದ್ದ ತೊದಲ್ನುಡಿ ಕೇವಲ ಹಳ್ಳಿಯ, ಗ್ರಾಮ್ಯ ಭಾಷೆಯಲ್ಲ ಎಂಬ ಅರಿವಾಯ್ತು. ನನ್ನಲ್ಲಿ ಸುಪ್ತವಾಗಿದ್ದ ಕನ್ನಡಾಭಿಮಾನ ಇನ್ನಷ್ಟು ಬೆಳೆಯಲು ಸಹಕಾರಿಯಾಯ್ತು.

ಇತ್ತೀಚಿನ ದಿನಗಳಲ್ಲಿ ನನಗೆ ತಿಳಿದಷ್ಟು ಕನ್ನಡ ಪದಗಳನ್ನಾದರೂ ಬರೆದಿಡುತ್ತಾ ಹೋದರೆ, ಮಲೆನಾಡ ಭಾಷೆಗೆ ನನ್ನ ಅಳಿಲು ಸೇವೆಯನ್ನು ಸಲ್ಲಿಸಿದಂತೆಯೂ ಆಗುತ್ತದೆ, ಜೊತೆಗೆ ಮುಂದೆ ಅಗತ್ಯವಿರುವವರಿಗೆ ಈ ಶಬ್ದಸಂಪತ್ತಿನ ನಿಧಿ ದೊರೆತಂತಾಗಿ, ಸ್ವಲ್ಪ ಮಟ್ಟಿಗಾದರೂ ಅನುಕೂಲವಾಗಬಹುದೆಂದುಕೊಂಡೆ. ಹಾಗೆಯೇ ನೆನಪಿರುವ ಶಬ್ದಗಳನ್ನೆಲ್ಲಾ ಬರೆದಿಡುತ್ತಾ ಹೋದೆ. ಆದರೆ ಈ ಕೆಲಸ ನಾನೆಣಿಸಿದಷ್ಟು ಸುಲಭಸಾಧ್ಯವಾಗಿರಲಿಲ್ಲ. ಶಬ್ದ–ಅರ್ಥಗಳು ಒಂದೇ ಆಗಿದ್ದ ಸಂದರ್ಭದಲ್ಲಿಯೂ ರಾಗವಾಗಿ ಮಾತನಾಡುವ ಮಲೆನಾಡ ರೀತಿಯೇ ಬೇರೆಯವರಿಗಿಂತ ವಿಭಿನ್ನವಾಗಿರುವಂತೆ ಮಾಡಿದೆ. ಕೆಲವು ಸಾರಿ ಅರ್ಥವನ್ನೂ ಮೀರಿದ ಭಾವನೆಗಳು ಶಬ್ದರೂಪದಲ್ಲಿ ಹೊರಬಿದ್ದಾಗ ಆ ಶಬ್ದಕ್ಕೆ ಅರ್ಥವನ್ನು ಬರೆಯುವುದೂ ಕಷ್ಟವೆಂದೇ

ನನ್ನ ಎಣಿಕೆ ಉದಾ : ಇಸ್ಸಿ, ಉಸ್ಸಪ್ಪಾ, ಅಕ್ಕಳ್ರೋ, ಹಚಾ, ಹಿಡ್ಕಾ ಇತ್ಯಾದಿ ಪದಗಳಿಗೆ ಅರ್ಥವನ್ನು ಬರೆಯುವ ಪ್ರಯತ್ನ ಮಾಡಿದ್ದೇನೆ. ಪದಗಳು ಪದಗುಚ್ಛಗಳಾದಾಗ ಹೆಚ್ಚು ಹೆಚ್ಚು ಅರ್ಥವನ್ನು ಕೊಡುತ್ತವೆ. ಉದಾ: ರುಚಿಗೆ ಸಂಬಂಧಪಟ್ಟಂತೆ -- ಕಕ್ಕಟ್ಟೆ ಖಾರ, ಸಿಪ್ಪಟ್ಟೆಸಿಯ್ಯ, ಹುಪ್ಪಟ್ಟೆಹುಳಿ, ಚಪ್ಪೆಚಾಳು, ಉಪ್ಪಿನ ವರಸಿಂಗೆ ಇತ್ಯಾದಿ..... ಇಲ್ಲಿ ಕಕ್ಕಟ್ಟೆ, ಹುಪ್ಪಟ್ಟೆಗಳಿಗೆ ಸ್ವತಃ ಅರ್ಥವಿದ್ದಂತಿಲ್ಲ. ಆದರೆ ಆ ಪದಗಳು ಆಯಾ ರುಚಿಗಳನ್ನು ಎಷ್ಟು ಚೆನ್ನಾಗಿ ವೈಭವೀಕರಿಸುತ್ತವೆಂದರೆ, ಖಾರ ಮತ್ತೂ ಖಾರವಾಗಿ, ಸಿಹಿ ಇನ್ನೂ ಸಿಹಿಯಾಗಿ, ಹುಳಿ ಮತ್ತಷ್ಟು ಹುಳಿಯಾಗಿ, ಆಡುಗರಂತೆ ಕೇಳುಗರ ಬಾಯಲ್ಲೂ ನೀರೂರಿಸುತ್ತವೆ. ಹಾಗೆಯೇ ಕೆಲವು ಹೋಲಿಕೆಗಳು ಕೂಡ ಅನ್ಯಶಬ್ದಗಳ ಒತ್ತು ಪಡೆದು ಅರ್ಥಪೂರ್ಣವಾಗುತ್ತವೆ. ಉದಾ : 'ಹುಳ ಮಿಜಿಮಿಜಿ ಅಂತಿದ್ವು' 'ನೀರು ಕೊತ ಕೊತಾಂತ ಕುದೀತಿತ್ತು'. 'ಭೋರ್ ಅಂತ ಮಳೆ ಸುರೀತು'..... ಇತ್ಯಾದಿ.

ಇದನ್ನು ಕೇವಲ ನನ್ನ ಸ್ವಸಂತೋಷಕ್ಕೆಂದು ಬರೆಯಲು ಪ್ರಾರಂಭಿಸಿದ್ದಾದರೂ, ನನ್ನ ತಂದೆಯವರು ನನ್ನನ್ನು ಪ್ರೋತ್ಸಾಹಿಸಿ ಪ್ರಕಟಿಸಬೇಕೆಂದು ಹುರಿದುಂಬಿಸಿದರು. ಸುಮಾರು ತೊಂಭತ್ನಾಲ್ಕು ವರ್ಷದ ನನ್ನ ತಂದೆ ಪೂಜ್ಯ ಶಿವಪುರ ದುಗ್ಗಪ್ಪಗೌಡರ ಸಹಜವಾದ ಮಾತುಗಳೇ ಅರ್ಥಕ್ಕರ್ಥ ಶಬ್ದಕೋಶವಾದಂತಾಯ್ತು. ಅವರ ಆಶೀರ್ವಾದವೇ ನನಗೆ ಶ್ರೀರಕ್ಷೆ. ಮಲೆನಾಡಿಗೆ ಹೋದಾಗಲೆಲ್ಲ ತಮ್ಮ ಹರೀಶ್ ಮತ್ತು ಶರಾವತಿ ಹರೀಶ್‌ರವರು ಬರೆದಿಡುತ್ತಿದ್ದ ಪದಗಳು ಸ್ವಲ್ಪ ಮಟ್ಟಿಗೆ ಫಲ ಕೊಟ್ಟಿತು. ನನ್ನ ಈ ಕಾರ್ಯಕ್ಕಾಗಿ ಅನೇಕ ರೀತಿಯಲ್ಲಿ ಸಹಕರಿಸಿದ ಪತಿ ಶ್ರೀ ಎ.ಎಸ್.ರಾಮಪ್ಪ ಅವರಿಗೆ ನನ್ನ ಕೃತಜ್ಞತೆಗಳು. ಮುಖ್ಯವಾಗಿ ನಿಘಂಟನ್ನು ಕೂಲಂಕಷವಾಗಿ ಮೌಲ್ಯಮಾಪನ ಮಾಡಿಸಿ ಈ ನುಡಿಕೋಶವು ಹೊರಬರಲು ಕಾರಣಕರ್ತರಾದ ಜಾನಪದ ವಿಶ್ವವಿದ್ಯಾಲಯಕ್ಕೆ ನಾನು ಸದಾ ಕೃತಜ್ಞಳು.

ಸೌಹಾರ್ದ ಸಂಘದ ಗೆಳತಿಯರ ಸಹಕಾರವನ್ನು ನಾನಿಲ್ಲ ನೆನೆಯಲೇಬೇಕು. ಸುಮಾರು ಐದಾರು ತಿಂಗಳುಗಳಿಂದಲೂ ಅಡುಗೆಮನೆಯಲ್ಲೇ ಕಾಗದ ಲೇಖನಿಗಳನ್ನಿಟ್ಟುಕೊಂಡು ಹೊಸ ಪದಗಳು ಹಳೇ ಪದಗಳು ನೆನಪಾದಂತೆಲ್ಲಾ ಬರೆದಿಡತೊಡಗಿದೆ. ಕೆಲವು ಪದಗಳ ಅರ್ಥವನ್ನು ನೆನಪಿಸಿಕೊಳ್ಳಲು ಐ.ಬಿ.ಎಚ್ ಪ್ರಕಾಶನದ ಕನ್ನಡ–ಕನ್ನಡ–ಇಂಗ್ಲಿಷ್ ನಿಘಂಟು ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ "ಕನ್ನಡ ಜಾನಪದ ನಿಘಂಟು"ಗಳು ಸಹಕಾರಿಯಾಯ್ತು. ಈ ಪುಸ್ತಕವನ್ನು ಹೊರತರಲು ಪ್ರೋತ್ಸಾಹಿಸಿದ 'ಜಾನಪದ ವಿಶ್ವವಿದ್ಯಾಲಯ'ದ ಮಾನ್ಯ ಕುಲಪತಿಗಳು ಹಾಗೂ ಸಂಬಂಧಪಟ್ಟವರಿಗೆ ಕೃತಜ್ಞತೆಗಳನ್ನು ತಿಳಿಸಲು ಇಷ್ಟಪಡುತ್ತೇನೆ. ಕರಡು ತಿದ್ದಿಕೊಟ್ಟಾಗಲೆಲ್ಲ ಸಹನೆಯಿಂದ ಬದಲಾಯಿಸಿಕೊಳ್ಳುತ್ತಾ ಮುದ್ದಾಗಿ ಬೆರಳಚ್ಚು ಮಾಡಿಕೊಟ್ಟ ಕು. ಶಾಲಿನಿಯವರಿಗೂ, ಶಬ್ದಕೋಶವನ್ನು ಅಂದವಾಗಿ ಡಿ.ಟಿ.ಪಿ. ಮಾಡಿಸಿಕೊಟ್ಟ ಅಭಿರುಚಿ ಪ್ರಕಾಶನದ ಶ್ರೀ ಗಣೇಶ್‌ರವರಿಗೂ ಕೃತಜ್ಞತೆಗಳು. ಈ ಕಾರ್ಯಕ್ಕಾಗಿ ಪರೋಕ್ಷವಾಗಿ ಸಹಕರಿಸಿದವರೆಲ್ಲರಿಗೂ ನನ್ನ ಕೃತಜ್ಞತೆಗಳು.

ನನ್ನ ಈ ಪ್ರಯತ್ನದಲ್ಲಿ ಲೋಪ-ದೋಷಗಳು, ತಪ್ಪು-ತಕರಾರುಗಳು ಇದ್ದಲ್ಲಿ ಸಹೃದಯ ಓದುಗರು ಮನ್ನಿಸಿ ಪ್ರೋತ್ಸಾಹಿಸುತ್ತಾರೆಂದು ಆಶಿಸುತ್ತೇನೆ. ಈ ಕೆಲಸವನ್ನು ಇನ್ನೂ ಮುಂದುವರೆಸುವ ನನ್ನ ಅಭಿಲಾಷೆಗೆ ಓದುಗರ ಪ್ರೋತ್ಸಾಹವೇ ಸಹಕಾರಿಯೆಂದು ಭಾವಿಸುತ್ತೇನೆ.

ವೇಣಾಕ್ಷಿ.ಎಸ್.ಡಿ

ಅ

ಅಂಕ = ಜೂಜು, ಕಾಳಗ, ಕುಸ್ತಿ, (ಕೋಳಿ ಅಂಕ).

ಅಂಕಣ = ೧. ಮನೆಯ ಎರಡು ಕಂಬಗಳ ಅಥವಾ ಎರಡು ತೊಲೆಗಳ ನಡುವೆ ಇರುವ ಎಂಟು ಅಡಿ ಅಗಲ, ಎಂಟು ಅಡಿ ಉದ್ದದ ಜಾಗ ೨. ಸ್ಥಳ, ಪ್ರದೇಶ.

ಅಂಕಿ = ಅಂಕೆ, ಸಂಖ್ಯೆ.

ಅಂಕಿ ಅಂಸ = ಲೆಖ್ಖ ಅಥವಾ ವಿಷಯಗಳ ವಿವರವಾದ ಸಂಗ್ರಹ.

ಅಂಕು = ವಕ್ರ, ಡೊಂಕು.

ಅಂಕುಡೊಂಕು = ೧.ಅಂಕು, ೨. ತಿರುವು.

ಅಂಕೆ = ಅಧೀನ, ಹತೋಟಿ, ಹಿಡಿತ.

ಅಂಕೆ ಶಂಕೆ = ಅಂಕೆ.

ಅಂಗತ್ತ = ಮೇಲ್ಮುಖವಾಗಿ ಅಥವಾ ಬೆನ್ನು ಅಡಿಯಾಗಿ ಮಲಗುವುದು.

ಅಂಗ್ಲ = ಅಂಗುಲ, ಒಂದು ಅಡಿಯ ಹನ್ನೆರಡನೇ ಒಂದು ಭಾಗ.

ಅಂಗ್ಳ = ಅಂಗಳ, ಮನೆಗೆ ಸೇರಿದಂತಿರುವ ಹೊರ ಆವರಣ.

ಅಙ್ಳ (ಅಂಗ್ಳ) = ಅಂಗುಳ, ತಾಳುಗೆ ಗಂಟಲಿನ ಮೇಲ್ಭಾಗ, ಮೂಗಿನ ದ್ವಾರವನ್ನೂ, ಬಾಯನ್ನೂ ಪ್ರತ್ಯೇಕಿಸುವ ಕಿರುನಾಲಗೆಯ ಪ್ರದೇಶ.

ಅಂಗಾತ = ಅಂಗತ್ತ.

ಅಂಗಾರ = ಕೆಂಡ, ಇದ್ದಿಲು.

ಅಂಗಾಲು = ಕಾಲ ಅಡಿ, ಪಾದದ ಕೆಳಭಾಗ.

ಅಂಗಿ = ಕಬಚ, ಉಡುಪು.

ಅಂಗ್ಲಾಚು = ಅಂಗಲಾಚು, ಬೇಡಿಕೊಳ್ಳು.

ಅಂಗ್ಡಿ = ಅಂಗಡಿ, ಪದಾರ್ಥಗಳನ್ನು ಮಾರುವ ಸ್ಥಳ.

ಅಂಗ್ಡಿ ಮುಚ್ಚು = ಅಂಗಡಿಯ ವ್ಯಾಪಾರ ನಿಲ್ಲಿಸು.

ಅಂಗ್ಡಿಯಿಡು = ಅಂಗ್ಡಿಯನ್ನು ಪ್ರಾರಂಭಿಸು.

ಅಂಗ್ಡಿಹಾಕು = ಅಂಗ್ಡಿಯಿಡು.

ಅಂಗುಷ್ತ = ಉಂಗುಷ್ಠ, ಕಾಲಿನ ಹೆಬ್ಬೆರಳು.

ಅಂಗ್ಳು = ಅಂಗುಳ.

ಅಂಗ್ರೇಜಿ = ಆಂಗ್ಲ ಭಾಷೆ, ಇಂಗ್ಲೀಷ್ ಭಾಷೆ.

ಅಂಗೈ = ಕೈಯ ಒಳಭಾಗ, ಕರತಲ.

ಅಂಗೊಸ್ತ್ರ = ಕರವಸ್ತ್ರ, ಒರೆಸಿಕೊಳ್ಳುವ ಸಣ್ಣಬಟ್ಟೆ.

ಅಂಚು = ೧. ತುದಿ, ತೆವರಿ/ಗದ್ದೆಯ ನಾಲ್ಕು ಬದಿಗಳು, ೨. ಜಾಗ/ವಸ್ತುವಿನ ಕೊನೆ, ೩. ಪಂಚೆ/ಸೀರೆಯ ಕೊನೆ.

ಅಂಚುಕಡಿ = ನಾಟಿಗೆ ಮೊದಲು ಗದ್ದೆಯ ಬದಿಗಳನ್ನು ಕಡಿದು ಸಮಮಾಡುವುದು, ತೆವರಿ ಕಡಿ.

ಅಂಜನ = ೧. ಕಾಡಿಗೆ, ಕಣ್ಣಿಗೆ

ಹಚ್ಚಿಕೊಳ್ಳುವ ಕಪ್ಪು
೨. ಮುಲಾಮು.

ಅಂಜಿಕಿ = ಹೆದರಿಕೆ, ಭಯ.

ಅಂಜುಕುಳಿ = ಪುಕ್ಕಲು, ಹೆದರುವ ಸ್ವಭಾವದ.

ಅಂಜುಬುರ್ಕ = ಅಂಜುಕುಳಿ.

ಅಂಜೂರ = ದೊಡ್ಡ ಮರ, ಕಾಂಡದಲ್ಲಿ ಬಿಡುವ ಹಣ್ಣು–ಆರೋಗ್ಯ ದಾಯಕ.

ಅಂಟಾಸುಂಟಿ = ೧. ಮನಬಂದಂತೆ ೨.ವಿಚಾರಹೀನತೆ.

ಅಂಟ್ವಾಳ = ಬಟ್ಟೆ ತೊಳೆಯಲು ಉಪಯೋಗಿಸುವ ನೊರೆ ಬರುವ ಕಾಯಿ, ಜಾನುವಾರು ಗಳು ಕಾಯನ್ನು ತಿನ್ನುತ್ತವೆ.

ಅಂಟಿಸು = ಹಚ್ಚು, ಅಂಟಿಕೊಳ್ಳುವಂತೆ ಮಾಡು.

ಅಂಟ್ಗಿ–ಪಂಟ್ಗಿ = ಮಲೆನಾಡಿನ ವೈಶಿಷ್ಟ್ಯ ಗಳಲ್ಲೊಂದು, ದೀಪಾವಳಿಯಲ್ಲಿ ಮನೆ ಮನೆಗೆ ಹೋಗಿ, ಹಾಡುತ್ತಾ ಜ್ಯೋತಿಯನ್ನು ನೀಡುವ ಜಾನಪದ ಮೇಳ.

ಅಂಟು = ಜಿಗುಟು, ಮುಟ್ಟಿದರೆ ಅಂಟಿ ಕೊಳ್ಳುವ ವಸ್ತು.

ಅಂಟು ಪುರ್ಲೆ = ಮುಟ್ಟಿದರೆ ಅಂಟಿ ಕೊಳ್ಳುವ ತೆನೆಯುಳ್ಳ ಒಂದು ಬಗೆಯ ಹುಲ್ಲು/ಗಿಡ.

ಅಂಟ್ರೋಗ = ಅಂಟುರೋಗ, ಒಬ್ಬರಿಂ ದೊಬ್ಬರಿಗೆ ಹರಡುವ ಜಾಡ್ಯ.

ಅಂಡ ಚಂಡಾಳ = ೧. ಚೇಷ್ಟೆ, ಕುಯುಕ್ತಿ, ೨. ಕುಯುಕ್ತಿ ಮಾಡುವವನು.

ಅಂಡಲ್ಲಿ = ಅಡಿಯಲ್ಲಿ, ತಳದಲ್ಲಿ, ಕೆಳಗೆ.

ಅಂಡಲೆ = ಸುಮ್ಮನೆ ಕೆಲಸ ಕಾರ್ಯವಿಲ್ಲದೆ ಓಡಾಡುವುದು.

ಅಂಡಾದುಂಡಿ = ಬೇಕಾಬಿಟ್ಟಿ, ದುಂದು ವೆಚ್ಚ.

ಅಂಡುಕುಸ್ಕ = ಉದ್ದನೆಯ ಕಾಲುಳ್ಳ ಗುಬ್ಬಿಯಂತಹ ಹಕ್ಕಿ.

ಅಂಡುಸುಟ್ಟ ಬೆಕ್ಕಿನಂತೆ = ಕೂತಲ್ಲಿ ಕೂರದೇ ತಿರುಗುವುದು.

ಅಂಡುಸವ್ವು = ಕೆಲಸಮಾಡದೆ ಸೋಮಾರಿ ಯಾಗಿ ಕುಳಿತಿರುವುದು.

ಅಂಡುಹಿಡಿ = ತಳಹಿಡಿ, ಸೀದುಹೋಗು.

ಅಂಡೂರು = ತಳವೂರು, ಕುಳಿತು–ಕೊಳ್ಳುವುದು.

ಅಂಡೆ = ೧.ಲೋಹ/ಬಿದಿರಿನ ಟೊಳ್ಳಾದ ಉದ್ದಪಾತ್ರೆ, ೨.ತಿರುಪು, ಓಲೆ/ ಮೂಗುತಿಯ ಪಾಣಿ

ಅಂಡೊಡಕ = ಅಡಿಕೆಗೆ ತಗಲುವ ಒಂದು ರೋಗ.

ಅಂತ = ಹಾಗಂತ, ಹಾಗೆಂದು, ಆ ರೀತಿ, ಆ ಬಗೆ.

ಅಂತರ್ ಪಿಶಾಚಿ = ಗತಿಯಿಲ್ಲದೆ ಅಲೆ ದಾಡುವ ದೆವ್ವ, (ಅಲಂ) ನೆಲೆ–ಯಿಲ್ಲದವ.

ಅಂತಸ್ತು = ೧. ಮಹಡಿ, ಉಪ್ಪರಿಗೆ ೨. ವ್ಯಕ್ತಿಯ ಶ್ರೀಮಂತಿಕೆ, ಗುಣಮಟ್ಟ, ಅರ್ಹತೆ.

ಅಂತ್ರ = ಕೊರಳಿಗೆ, ಕೈಗೆ ಧರಿಸುವ ಮಂತ್ರಿಸಿದ ಲೋಹದ ಅಂಡೆ.

ಅಂತಿತದ್ದಲ್ಲ = ಸಾಮಾನ್ಯದ್ದಲ್ಲ.

ಅಂತೂ = ೧. ಹಾಗೆ, ಆ ರೀತಿಯಲ್ಲಿ

೨. ಕೊನೆಗೂ.
ಅಂತೂ ಇಂತೂ = ೧. ಹಾಗೂ ಹೀಗೂ ೨. ಯಾವ ರೀತಿಯಲ್ಲೋ.
ಅಂತೆ = ಅಂತೆಯೇ, ಹಾಗೆಯೇ.
ಅಂತ್ಯೆ = ೧.ಅಂತ್ಯ, ಕೊನೆ ೨.ಹೀನ.
ಅಂಥವ್ಣ = ಅಂಥವನು.
ಅಂಥೋಳು = ಅಂಥವಳು.
ಅಂದ = ಚೆಲುವು, ಸೊಗಸು.
ಅಂದಗಾತಿ = ಚೆಲುವೆ, ಸುಂದರಿ, ಸೊಗಸುಗಾತಿ.
ಅಂದಗೇಡಿ = ೧. ಕುರೂಪಿ ೨. ಅಂದವನ್ನು ಕೆಡಿಸುವವನು.
ಅಂದ್ಣ = ಅಂದಣ, ಪಲ್ಲಕ್ಕಿ, ಅಂಬಾರಿ.
ಅಂದಾಜು = ೧. ಊಹೆ, ಊಹಿಸಿದ ಪರಿಮಾಣ ೨. ಮದುವೆಗಾಗಿ ಬಂದ ಸಂಬಂಧ.
ಅಂದಿಗಿ = ಕಾಲ್ಕಡಗ, ಗೆಜ್ಜೆ.
ಅಂದಿಗೆ = ಆ ದಿನಕ್ಕೆ, ಆ ವೇಳೆಗೆ.
ಅಂದು = ಆ ದಿನ, ಕಳೆದು ಹೋದ ದಿನಗಳು.
ಅಂದುಕೊಣ್ತ = ಅಂದುಕೊಳ್ಳುತ್ತಾ.
ಅಂದ್ರೆ = ಅಂದರೆ, ಹಾಗಂದರೆ, ಹೀಗಂದರೆ.
ಅಂಬಡೆಸೂಡಿ = ಒಂದು ಬಗೆಯ ಕೇಶಾಲಂಕಾರ.
ಅಂಬ್ರ = ಅಂಬರ, ಆಕಾಶ.
ಅಂಬಾಡಿ ಎಲೆ = ಒಂದು ಜಾತಿಯ ವೀಳ್ಯದೆಲೆ.
ಅಂಬಾರಿ = ಅಂದ್ಣ.
ಅಂಬಿಗ = ದೋಣಿ/ಹರಿಗೋಲು/ನಾವೆ ನಡೆಸುವವನು
ಅಂಬ್ಲಿ = ಅಂಬಲಿ, ಗಂಜಿ.
ಅಂಬೆಗಾಲು = ಮಂಡಿ ಮತ್ತು ಅಂಗೈಗಳನ್ನು ಊರಿಕೊಂಡು ಮಕ್ಕಳು ಚಲಿಸುವ ರೀತಿ.
ಅಂಬೇ = ೧.ದನಕರುಗಳ ಕೂಗು.
ಅಂಬೇ ಬಾ = ದನಕರುಗಳನ್ನು ಕರೆಯುವುದು.
ಅಂವ್ಣ = ಅವನು.
ಅಂವ್ಕಿ ಹಿಟ್ಟು = ಹೆಂಡ ತಯಾರಿಸಲು ಭತ್ತ ಮತ್ತು ಅಕ್ಕಿಯನ್ನು ಕುಟ್ಟಿ ಮಾಡಿದ ಪುಡಿ..
ಅಂವ್ಚಿಡಿ = ಅವುಚಿ ಹಿಡಿ, ಒತ್ತಿಹಿಡಿ, ಗಟ್ಟಿಯಾಗಿ ಹಿಡಿದುಕೋ
ಅಂವ್ಕು = ಅಮುಕು, ಒತ್ತು.
ಅಂವ್ಚು = ಅಂವ್ಕು.
ಅಂಸ = ಅಂಶ, ಭಾಗ.
ಅಕಯ್ಯ = ಅಕ್ಕ, ಹಿರಿಯ ಸೋದರಿ.
ಅಕರಾಸ್ತೆ = ಅಕ್ಕರೆ, ಪ್ರೀತಿ.
ಅಕಸ್ಮಾತು = ಆಕಸ್ಮಿಕ, ಅಕಸ್ಮಾತ್, ೨.ಇದ್ದಕ್ಕಿದ್ದಂತೆ, ಹಟಾತ್ತಾಗಿ.
ಅಕ್ಕ = ಅಕಯ್ಯ.
ಅಕ್ಕಚ್ಚು = ಅಕ್ಕಿ ತೊಳೆದ ನೀರು.
ಅಕ್ಕಳಪ್ಪ = ಆಶ್ಚರ್ಯ ಸೂಚಿಸುವ ಪದ/ ಉದ್ಗಾರ.
ಅಕ್ಕಳ್ರಪ್ಪ = ಅಕ್ಕಳಪ್ಪ (ಪು).
ಅಕ್ಕಳ್ರವ್ವ = ಅಕ್ಕಳಪ್ಪ (ಸ್ತ್ರೀ).
ಅಕ್ಕಳೇ = (ಸ್ತ್ರೀ. ಏ) =ಅಕ್ಕಳಪ್ಪ.
ಅಕ್ಕಳೋ (ಪು. ಏ.) =ಅಕ್ಕಳಪ್ಪ.
ಅಕ್ಕಂಡು = ಅಗಿದುಕೊಂಡು, ಜಗಿದುಕೊಂಡು.
ಅಕ್ಕ್ಯಂಡೆ = ಮಂಡಿ ಕೆಳಗಿನ ಮಾಂಸ ಖಂಡದ ಭಾಗ, ಮೀನ ಖಂಡ.

ಅಕ್ಕ್ಯಂಡೆ ಹೂ = ಕಮಲದ ಹೂವಿನಂತಿರುವ ಬಿಳಿ ಬಣ್ಣದ ಚಿಕ್ಕ ಹೂ (ಕೆರೆಯ ನೀರಲ್ಲಿ ಬೆಳೆಯುವುದು).

ಅಕ್ತಂಗಿ ಹಣ್ಣು = ಪಪ್ಪಾಯ, ಪರಂಗಿಹಣ್ಣು.

ಅಕ್ಷರಸ = ಚಾಚೂ ತಪ್ಪದೆ, ಪ್ರತಿಯೊಂದನ್ನೂ, ಒಂದಕ್ಷರವನ್ನೂ ಬಿಡದೆ.

ಅಕ್ರ = ಅಕರಾಸ್ತೆ.

ಅಕ್ಕ್ಯಳಬಿ = ಸಣ್ಣ ಸಣ್ಣ ಅಣಬೆ.

ಅಕ್ಸತೆ = ಅಕ್ಷತೆ, ಮಂತ್ರಾಕ್ಷತೆ, ಅರಿಸಿನ/ಕುಂಕುಮ ಸವರಿದ ಅಕ್ಕಿ.

ಅಕಾ = ನೋಡು, ಗಮನಿಸು.

ಅಕಾಲ್ದಮಳೆ = ಮಳೆ ಬೇಡದಿರುವಾಗ ಬರುವ ಮಳೆ.

ಅಕಾಸ್ಮಾತು = ಅಕಸ್ಮಾತು.

ಅಕ್ಸಾಲಿ = ಅಕ್ಕಸಾಲಿಗ, ಚಿನಿವಾರ, ಚಿನ್ನ ಬೆಳ್ಳಿ ಕೆಲಸ ಮಾಡುವವನು.

ಅಕ್ಕಿ = ಸಿಪ್ಪೆ ತೆಗೆದ ಭತ್ತ ಭತ್ತದ ಒಳಗಿರುವ ಕಾಳು.

ಅಕ್ಕಿಕಾಳು = ಅಕ್ಕಿ.

ಅಕ್ಕಿ ಕೇರು = ಮೊರಕ್ಕೆ ಹಾಕಿ ಅಕ್ಕಿಯ ಧೂಳು ತೆಗೆ.

ಅಕ್ಕಿಗೂಡೆ = ಅಕ್ಕಿಯನ್ನು ತುಂಬಿಸಿಡುವ ಬುಟ್ಟಿ.

ಅಕ್ಕಿನುಚ್ಚು = ತುಂಡಾದ ಅಕ್ಕಿ.

ಅಕ್ಕಿಭೋಜ = ಅಕ್ಕಿಯಿಂದ ತಯಾರಿಸಿದ ಹೆಂಡ/ಸಾರಾಯಿ, ಮಾದಕ ಪೇಯ.

ಅಕ್ಕಿಮುಡಿ = ಮುಡಿಕಟ್ಟಿದ ಅಕ್ಕಿ.

ಅಕ್ಕು = ಅರಗು, ಜೀರ್ಣವಾಗು.

ಅಕ್ಕುಸ್ಕಾ = ತಿಂದಿದ್ದು ಅರಗಿಸಿಕೋ, ಜೀರ್ಣಿಸಿಕೋ.

ಅಕ್ರೆ = ಅಕರಾಸ್ತೆ.

ಅಖೈರು = ಕೊನೆ, ಕಡೆ, ಅಂತ್ಯ.

ಅಗಚು = ೧. ಬೇರ್ಪಡು, ಬೇರೆಯಾಗು, ೨.ಕೋಳಿ/ಹಕ್ಕಿಮರಿಗಳು ತಾಯಿಯಿಂದ ಬೇರೆಯಾಗುವುದು.

ಅಗಡಿ = ಭತ್ತದ ಮಡಿ, ನಾಟಿಗಾಗಿ ಭತ್ತದ ಸಸಿಗಳನ್ನು ಬೆಳೆಸುವ ಜಾಗ.

ಅಗಣಿ = ಅಗುಳಿ, ತಾಳ, ಚಿಲಕ.

ಅಗಲ = ಅಡ್ಡಳತೆ, ಉದ್ದಕ್ಕೆ ವಿರುದ್ಧಪದ.

ಅಗಲು = ತೊರೆ, ಬಿಟ್ಟುಹೋಗು, ಅಗಚು.

ಅಗಸ = ಮಡಿವಾಳ, ದೋಬಿ, ಬಟ್ಟೆ ಶುಚಿ ಮಾಡುವವನು.

ಅಗಸಗಿತ್ತಿ = ಮಡಿವಾಳ್ತಿ, ಬಟ್ಟೆ ತೊಳೆಯುವವಳು.

ಅಗಳಿ = ೧.ನೋಡಿ, ಗಮನಿಸಿ ೨.ಅಗಣಿ.

ಅಗಳು = ಅನ್ನದ ಕಾಳು, ಬೇಯಿಸಿದ ಅಕ್ಕಿಯ ಕಾಳು.

ಅಗಳೇ = ಅಕ್ಕಳೇ.

ಅಗ್ಚಪ್ಪಿನ ಬಳ್ಳಿ = ಬಳ್ಳಿಯನ್ನು ಹಿಡಿಕಟ್ಟಲು ಬಳಸುತ್ತಾರೆ, ಎಲೆಗಳನ್ನು ತೆರೆದು ಎಮ್ಮೆಗೆ ಹಾಕಿದರೆ ಹಾಲು ಜಾಸ್ತಿಯಾಗುತ್ತದೆ.

ಅಗ್ಚಪ್ಪು = ಕುರುಚಲು ಗಿಡ, ಮೊದಲು ಇದರ ಕೊಂಬೆಗಳಿಂದ ಅಂಗಳ ಗುಡಿಸುತ್ತಿದ್ದರು.

ಅಗ್ಗ = ರಿಯಾಯ್ತಿ ದರ, ಕಡಿಮೆ ಬೆಲೆ, ಬೆಲೆಯಿಲ್ಲದ

ಅಗ್ರ = ನಾಲಿಗೆ ಮೇಲೆ ಬರುವ ಬಿಳಿಯ ಪದರ.

ಅಗಿ = ೧.ಜಗಿ, ಹಲ್ಲಿಂದ ಕಚ್ಚು ೨.ಗುಂಡಿ ತೋಡು, ಮಣ್ಣನ್ನು ಕೆರೆದು ತೆಗೆ

ಅಗ್ಗಿಷ್ಟಿಕೆ = ಇದ್ದಲಿನ ಬೆಂಕಿ.
ಅಗ್ಣಿ = ಅಗ್ನಿ, ಬೆಂಕಿ.
ಅಗ್ಣಿಗೂಡ್ಸು = ದೇವರ/ಎಡೆಯ ಮುಂದೆ ಹತ್ತಿಸಿದ ದೀಪದ ಒಂದು ಬತ್ತಿಯನ್ನು ಒಲೆಯಲ್ಲಿ ಉರಿಯುವ ಬೆಂಕಿಗೆ ಸೇರಿಸುವ ಒಂದು ಕ್ರಮ.
ಅಗ್ನಿಸರ್ಪ = ಸರ್ಪಸುತ್ತು, ಒಂದು ರೀತಿಯ ಸೋಂಕು ರೋಗ.
ಅಗ್ರಿ = ಗೊಬ್ಬರ, ಗಿಡಮರಗಳ ಪೋಷಕಾಂಶ.
ಅಗುಣಿ = ಅಗಳಿ.
ಅಗ್ಳು = ೧. ಅಗಳು ೨. ಕಂದಕ, ಕುಣಿ, ಹಳ್ಳ, ಚರಂಡಿ.
ಅಗೆ = ಬಿತ್ತನೆ ಮಾಡಿದ ಭತ್ತ.
ಅಗೆಹಾಕು = ನಾಟಿಗಾಗಿ ಭತ್ತವನ್ನು ಬಿತ್ತುವುದು.
ಅಗ್ತೆ = ಬೇರುಗಳಿಗೆ ಗಾಳಿಯಾಡುವಂತೆ ಮಣ್ಣನ್ನು ಅಗೆದು ಅಡಿಮೇಲು ಮಾಡುವುದು.
ಅಗೇಡಿ = ಅಗಡಿ.
ಅಚ್ಚಕ್ಕಿ = ಇಡಿ ಅಕ್ಕಿ, ತುಂಡಾಗದ ಅಕ್ಕಿಕಾಳು.
ಅಚ್ಚಗಟ್ಟು = ಅಚ್ಚುಕಟ್ಟು, ಒಪ್ಪ ಓರಣ.
ಅಚಿಗೆ = ಆ ಕಡೆಗೆ, ಆ ಪಕ್ಕಕ್ಕೆ, ಹೊರಗೆ.
ಅಚಿಗಿಚಿಗೆ = ಎರಡುಕಡೆ, ಅಕ್ಕಪಕ್ಕ.
ಅಚ್ಚಿನ ಮರ = ಗುಂಬದ ಮರ, ಇಡೀ ಗಾಡಿಯ ಭಾರವನ್ನು ಹೊರುವ ಮಧ್ಯದ ಅಡ್ಡಮರ, ಅದರೊಳಗಿಂದ ಕಬ್ಬಿಣದ ಸಬ್ಬಲ್ಲು ತೂರಿಸಿರುತ್ತಾರೆ.
ಅಚ್ಚು = ೧. ಎರಕದ ವಸ್ತು ೨. ಪಡಿಯಚ್ಚು, ತದ್ರೂಪಿ.
ಅಚ್ಚುಕಟ್ಟು = ೧. ಅಚ್ಚಗಟ್ಟು ೨. ನೀರಾವರಿ ಭೂಮಿಯ ಪರಿಮಿತಿ.
ಅಚ್ಚುಮೆಚ್ಚು = ಅತಿಶಯವಾದ ಪ್ರೀತಿ.
ಅಚೆಮನೆ = ಆಚೆಮನೆ, ಪಕ್ಕದ ಮನೆ, ಆ ಕಡೆಗಿರುವ ಮನೆ.
ಅಚೇ ನಾಡ್ದು = ನಾಳೆಯಲ್ಲ, ನಾಡಿದ್ದಿನ ಮರುದಿನ.
ಅಚೇಮನ್ನೆ = ಮೊನ್ನೆಯ ಹಿಂದಿನ ದಿನ.
ಅಚ್ಚೇರು = ಅರ್ಧಸೇರು, ಎರಡುಪಾವು, ಒಂದು ಅಳತೆ.
ಅಚ್ಚೊತ್ತು = ಮುದ್ರೆಯೊತ್ತು, ಅಂಕಿತ ಹಾಕು.
ಅಜಗಜಾಂತರ = ೧.ರೂಪ/ಗುಣದಲ್ಲಿ ಮಾಡುವ ಹೋಲಿಕೆ ೨.ಆಡಿಗು ಆನೆಗು ಇರುವ ವ್ಯತ್ಯಾಸ.
ಅಜ್ಜ = ತಂದೆ/ತಾಯಿಯ ತಂದೆ.
ಅಜ್ಜಮ್ಮ = ತಂದೆ/ತಾಯಿಯ ತಾಯಿ.
ಅಜ್ಜಯ್ಯ = ಅಜ್ಜ.
ಅಜಾಗ್ರತೆ = ಜಾಗರೂಕತೆಯಿಲ್ಲದ, ಬೇಜವಾಬ್ದಾರಿ.
ಅಜ್ಜಿ = ಅಜ್ಜಮ್ಮ.
ಅಜ್ಜು = ಎಸಳುಗಳು ಉದುರುವಷ್ಟು ಹಳೆಯದಾಗಿರುವ ಹೂವು.
ಅಟಮಟ = ಸುಳ್ಳು, ಅಸತ್ಯ, ಕುಚೇಷ್ಟೆ.
ಅಟ್ಟ = ಛಾವಣಿಯ ಕೆಳಗಿನ ಅಟ್ಟಣಿಗೆ/ಜಾಗ.
ಅಟ್ಟಕ್ಕೇರಿಸು = ವಿಪರೀತ ಹೊಗಳು/ಸಲಿಗೆ ಕೊಡು (ಅಲಂ).
ಅಟ್ಟಡುಗೆ = ಸಿದ್ಧಪಡಿಸಿದ ಅಡಿಗೆ.

ಅಟ್ಟಣಿಗೆ = ಕಾವಲು ಗುಡಿಸಲು, ಎತ್ತರದ ವೇದಿಕೆ.

ಅಟ್ರಾಗ = ಅಷ್ಟರಲ್ಲಿ.

ಅಟ್ಟು = ೧. ಬೇಯಿಸು, ಅಡಿಗೆಮಾಡು ೨. ಓಡಿಸು, ಬೆರ್ಸು.

ಅಟ್ಟುಂಬ್ಳಿ = ವರದಕ್ಷಿಣೆ, ವರನಿಗೆ ಕೊಡುವ ಹಣ.

ಅಟ್ರುಕಣೆ = ಅವಸರ, ಗಡಿಬಿಡಿ (ಅಟ್ರುಕಣೆಲಾದ್ರು ಬಂದು ಹೋಗು).

ಅಟ್ಟೆ = ರಸ ಹಿಂಡಿದ ಕಬ್ಬಿನ ಸಿಪ್ಪೆ, ಕಬ್ಬಿನಟ್ಟೆ

ಅಟ್ಟೆಗಾಲು = ಬಿಲ್ಲಿನಂತೆ ಬಾಗಿದ ಕಾಲು.

ಅಟ್ಣೆ = ಅಟ್ಟಣಿಗೆ, ಎತ್ತರದ ಪೀಠ.

ಅಟ್ಟೆಬೀಳು = ಒಂದು ಜಾತಿಯ ಬಲವಾದ ನಾರಿನ ಬೀಳು/ಬಳ್ಳಿ, ಉಡಿ ದಪ್ಪುಗಟ್ಟಿ, ದನಗಳನ್ನು ಕಟ್ಟುವ ಜಾಬಕ್ಕೆ ಉಪಯೋಗಿಸುತ್ತಾರೆ.

ಅಟ್ಹೊತ್ತಿಗೆ = ಅಷ್ಟುಹೊತ್ತಿನಲ್ಲಿ, ಆ ವೇಳೆಗೆ.

ಅಡ = ಒತ್ತೆ, ಗಿರವಿ.

ಅಡಕತ್ರಿ = ಅಡಿಕೆಯನ್ನು ಚೂರು ಮಾಡುವ ಕತ್ತರಿ.

ಅಡಕು = ತುಂಬು, ತುಂಬಿಸು, ತುರುಕು.

ಅಡಕೆ = ಅಡಿಕೆ, ಕೌಂಗು.

ಅಡಕೆ ಕೊಟ್ಟೆ = ಅಡಕೆ ಹಾಳೆಯ ಪೊಟ್ಟಣ.

ಅಡಿಕೆಮಂಡಿ = ವ್ಯಾಪರಕ್ಕೆ ಅಡಿಕೆಯಿಡುವ ಜಾಗ.

ಅಡಿಕೆ ಮುಂಡಿ = ಅಡಿಕೆಗೆ ತಗಲುವ ಮುರುಟುರೋಗ.

ಅಡಕೆಲೆ = ತಾಂಬೂಲ, ಅಡಕೆಯ ಜೊತೆಯಲ್ಲಿ ಸವಿಯುವ ವೀಳ್ಯದೆಲೆ, ವೀಳ್ಯ.

ಅಡಕೆ ದೋಟಿ = ಅಡಕೆ ಕೀಳುವ ಗಳ.

ಅಡಕೆ ಹರಡು = ಅಡಕೆ ಒಣಗಿಸಲು ಚಪ್ಪರದ ತಟ್ಟಿ ಮೇಲೆ ಹಾಕು.

ಅಡಕೆ ಹೆಡ್ಲು = ಅಡಕೆಮರದ ಗರಿ.

ಅಡಗು = ನಿರ್ನಾಮ, ನಿಂತು ಹೋಗು, ಮರೆಯಾಗು, ಸ್ತಬ್ಧವಾಗು.

ಅಡತಡೆ = ಅಡ್ಡಿ, ಆತಂಕ, ವಿಘ್ನ.

ಅಡಪ = ತಾಂಬೂಲವನ್ನು ಸೊಂಟಕ್ಕೆ ಸಿಕ್ಕಿಸಿಕೊಳ್ಳುವ ಚೀಲ.

ಅಡರು = ೧. ಉರಿ, ಬೆಂಕಿ ೨. ಬೆಂಕಿ ಆವರಿಸು, ಹೊತ್ತಿಕೊಳ್ಳು.

ಅಡಯಿಡು = ಒತ್ತೆಯಿಡು, ಸಾಲಕ್ಕೆ ಬದಲಾಗಿ ವಸ್ತು/ವಡವೆಗಳನ್ನು ಗಿರವಿಯಿಡುವುದು.

ಅಡಸಲು = ಹಳ್ಳದ ನೀರನ್ನು ತಡೆಯಲು ಅಡ್ಡಲಾಗಿ ಕೋಲು ಸೊಪ್ಪುಗಳಿಂದ ಚಾಪೆಯಂತೆ ಅರ್ಧ ಗೋಲಾಕೃತಿಯಲ್ಲಿ ಹೆಣೆಯುವುದು.

ಅಡ್ಡ = ೧.ಮರೆಯಾದ, ಕಣ್ಣಿಗೆ ಕಾಣದಾದ, ೨. ನೇರವಲ್ಲದ ೩. ಎದುರು ಬದುರಾದ.

ಅಡ್ಡ್‌ಕಸ್ಬು = ಅಡ್ಡ ಕಸುಬು, ಉಪ ಕಸುಬು, ಸ್ವಂತದ್ದಲ್ಲದ ಬೇರೆ ಕೆಲಸ, ಅಡ್‌ಗೆಲ್ಸ.

ಅಡ್ಡ್‌ಗಟ್ಟು = ತಡೆದು ನಿಲ್ಲಿಸು, ಮುಂದೆ ಹೋಗದಂತೆ ಮಾಡು, ತಡೆಗಟ್ಟು.

ಅಡ್‌ಗಟ್ಟೆ = ನೀರಿಗೆ ಅಡ್ಡಗಟ್ಟು ಹಾಕು.

ಅಡ್ಡ್‌ಗ್ವಾಡೆ = ಅರ್ಧಗೋಡೆ, ಮೋಟು ಗೋಡೆ, ಬೇರ್ಪಡಿಸುವ

ಮಧ್ಯಗೋಡೆ.

ಅಡ್ಡ್‌ಗುಂಟೆ = ದನಕರುಗಳು ಬೇಲಿ ಹಾರಿ ಹೊಲ ಮೇಯದಂತೆ ಕೊರಳಿಗೆ ಕಟ್ಟುವ ಮರದ ತುಂಡು.

ಅಡ್ಡಣಿಗೆ = ಮೂರು ಕಾಲಿನ ಮಣೆ.

ಅಡ್ಡ್‌ತಳಿ = ಬೆರಕೆಯ ಪ್ರಾಣಿ/ಸಸ್ಯ, ವರ್ಣಸಂಕರ.

ಅಡ್ಡ್‌ದನಿ = ಅಡ್ಡಮಾತು, ಬಿನ್ನಾಭಿ–ಪ್ರಾಯದ ಮಾತು.

ಅಡ್ಡ್‌ಪಂಕ್ತಿ = ಸಾಲು ಬಿಟ್ಟು ಬೇರೆ ನಿಲ್ಲು, ಪ್ರತ್ಯೇಕವಾಗಿ ಊಟಕ್ಕೆ ಕುಳಿತು–ಕೊಳ್ಳುವುದು.

ಅಡ್‌ಪಟ್ಟಿ = ಬಾಗಿಲ ಮೇಲಿನ ನಿಲ.

ಅಡ್ಡ್‌ಪನ್ನ = ಬಟ್ಟೆಯ ಅಗಲ.

ಅಡ್‌ಪಿರ್ಕಿ = ಅರೆಹುಚ್ಚನಂತಿರುವವನು.

ಅಡ್ಡ್‌ಬೀಳು = ಅಡ್ಡಲಾಗಿ (ಬೋರಲಾಗಿ) ಬೀಳು, ಸಾಷ್ಟಾಂಗ ನಮಸ್ಕಾರ ಮಾಡು.

ಅಡ್ಡ್‌ಮಳೆ = ಅಕಾಲದಲ್ಲಿ ಬರುವ ಮಳೆ.

ಅಡ್‌ಮುರಿ = ಗರಗಸ.

ಅಡ್ಡ್‌ಮೋರೆ = ೧.ಮುಖ ತಿರುಗಿಸುವುದು ೨. ಅಸಮ್ಮತಿ ತೋರು.

ಅಡ್ರಬಡ್ರ = ಯದ್ವಾತದ್ವಾ.

ಅಡ್ಡ್‌ಹಾಕು = ಅಡ್ಡ್‌ಗಟ್ಟು.

ಅಡ್ಡ್‌ಹಾದಿ = ತಪ್ಪುದಾರಿ, ಅಡ್ಡಾರಿ.

ಅಡ್ಡಾಗು = ಮಲಗು, ವಿಶ್ರಾಂತಿ ತೆಗೆದು–ಕೊಳ್ಳು.

ಅಡ್ಡಾಡು = ಅತ್ತಿತ್ತ ಸುಳಿದಾಡು, ಅತ್ತಿಂದಿತ್ತ ಇತ್ತಿಂದತ್ತ ಓಡಾಡು.

ಅಡ್ಡಾದಿಡ್ಡ = ಹೇಗೆಂದರೆ ಹಾಗೆ, ಕ್ರಮಬದ್ಧವಲ್ಲದ, ಅಸಂಬದ್ಧ.

ಅಡ್ಡಾದಿಡ್ಡಿ = ಅಡ್ಡಾದಿಡ್ಡ.

ಅಡ್ಡಾರಿ = ಅಡ್ಡ್‌ಹಾದಿ.

ಅಡಿಮೇಲು = ತಲೆಕೆಳಗೆ.

ಅಡ್ಡಿ = ಅಡತಡೆ.

ಅಡ್ಡಿಕೆ = ಬಂಗಾರದ ದಪ್ಪ ಸರ.

ಅಡ್ರು = ೧. ಮೈ ನಡುಗುವ ಛಳಿ ೨. ನುಗ್ಗು ೩. ತಳ್ಳು.

ಅಡುಗೋಗ = ಹಾಳಾಗಿ ಹೋಗಲಿ ಎಂಬ ಬೈಗುಳ.

ಅಡುಳಿ = ದೀರ್ಕನ ಓಡಿನ ಹುಳಿ, ಬೇಯಿಸಿದ ಹುಳಿಯ ಲೇಹ.

ಅಡೆಹಾಕು = ಕಾಯಿ ಹಣ್ಣಾಗುವಂತೆ ಹುಲ್ಲಿನಲ್ಲಿ ಮುಚ್ಚಿಡು.

ಅಡೆಹುಲ್ಲು = ದನಗಳಿಗೆ ಹಾಕುವ ಎಲ್ಲ ಜಾತಿಯ ಹುಲ್ಲು.

ಅಡ್ಡೆ = ಬಿದಿರಿನ ಗಳ/ತುಂಡು, ಬಿದಿರಡ್ಡೆ.

ಅಡ್ಡೆಸರು = ಬದಲಿ ಹೆಸರು, ನಿಜವಾದ ಹೆಸರಿಗೆ ಬದಲಾಗಿ ಬಳಸುವ ಹೆಸರು.

ಅಣಗ್ಸು = ಅಣಕಿಸು, ಹೀಯಾಳಿಸು.

ಅಣಯ್ಯ = ಅಣ್ಣ, ಹಿರಿಯ ಸೋದರ.

ಅಣಲೆ = ಹಾವುರಾಣಿ.

ಅಣ್ಣ = ಅಣಯ್ಯ.

ಅಣಿ = ಸಿದ್ಧತೆ, ಸಜ್ಜು, ಅನುವು.

ಅಣಿಗೊಳ್ಸು = ಅಣಿಮಾಡು.

ಅಣಿಮಾಡು = ಸಿದ್ಧಪಡಿಸು, ಸಜ್ಜು–ಗೊಳಿಸು.

ಅಣಿಲು = ಇಣಚಿ, ಅಳಿಲು.

ಅಣೆ = ನೀರಿಗೆ ಹಾಕಿರುವ ಅಡ್ಡಗಟ್ಟೆ.

ಅಣೆಕಟ್ಟು = ಅಣೆ

ಅಣೆಕಲ್ಲಾಟ = ಗೋಲಿಗಾತ್ರದ ಕಲ್ಲಿನಿಂದ ಆಡುವ ಆಟ, ಎತ್ಕಲ್ಲಾಟ.

ಅತತ = ಆ ಕಡೆ, ದೂರ, ಪಕ್ಕಕ್ಕೆ.
ಅತ್ಕಡೆ = ಅತ್ತಕಡೆ, ಅತತ.
ಅತ್ತ = ಆ ಕಡೆ, ಅಲ್ಲಿ.
ಅತ್ತತ್ತ = ಅತತ.
ಅತ್ತಮಖಾ = ಆ ಕಡೆ, ಅತ್ತಕಡೆ, ಅತ್ಲಾಗ.
ಅತ್ರಸ = ಅತಿರಸ, ಕಜ್ಜಾಯ, ಅಕ್ಕಿ ಬೆಲ್ಲ ಹಾಕಿ ಕರಿದ ಸಿಹಿ ಭಕ್ಷ್ಯ.
ಅತ್ತಾ ಇತ್ತಾ = ಆಕಡೆ ಈಕಡೆ, ಎಲ್ಲಾ ಕಡೆ, ಅಕ್ಕಪಕ್ಕ.
ಅತಿ = ತುಂಬಾ, ಹೆಚ್ಚು.
ಅತ್ತಿಗೆ = ಅತ್ಗಿ, ಅಣ್ಣನ ಹೆಂಡತಿ.
ಅತ್ತಿತ್ತ = ಅತ್ತಾ ಇತ್ತಾ.
ಅತ್ಗಿ = ಅತ್ತಿಗೆ.
ಅತ್ತಿಂದಿತ್ತ = ಆ ಕಡೆಯಿಂದ ಈ ಕಡೆಗೆ.
ಅತ್ತಿಂದಿತ್ತ ಇತ್ತಿಂದತ್ತ = ಆಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ.
ಅತ್ತಿಮರ = ಹೆಚ್ಚು ಗಟ್ಟಿಯಿಲ್ಲದ ಮೃದುವಾದ ದೊಡ್ಡ ಮರ. ಇದರ ಎಲೆ, ಘಮಘಮಿಸುವ ಕೆಂಪು ಹಣ್ಣುಗಳನ್ನು ಜಾನುವಾರುಗಳು ತಿನ್ನುತ್ತವೆ.
ಅತ್ತೆ = ಮಾವನ ಹೆಂಡತಿ, ಹೆಂಡತಿಯ/ಗಂಡನ ತಾಯಿ, ತಂದೆಯ ಸಹೋದರಿ.
ಅತ್ತೆಮನೆ = ಹೆಂಡತಿಯ/ಗಂಡನ ತಾಯಿಯ ಮನೆ.
ಅತ್ತೈಮ್ಮ = ಅತ್ತೆ.
ಅದಲ್ಲದೆ = ಅದರ ಹೊರತಾಗಿ, ಅದು ಅಲ್ಲದೆ, ಅದರ ಕೂಡ.
ಅದ್ರಚೇನಾಡ್ದು = ಆಚೇನಾಡಿದ್ದಿನ ಮರುದಿನ.
ಅದ್ರಚೇಮನ್ನೆ = ಅಚೇಮನ್ನೆಯ ಹಿಂದಿನ ದಿನ.
ಅದಾಗದೇ = ತಾನಾಗಿಯೇ, ತಂತಾನೆ.
ಅದಾನೆ = ಇದ್ದಾನೆ.
ಅದಾರೆ = ಇದ್ದಾರೆ.
ಅದಾಳೆ = ಇದ್ದಾಳೆ.
ಅಧ್ವಾನ = ಅವ್ಯವಸ್ಥೆ, ತುಂಬಾ ಹದಗೆಟ್ಟ ಸ್ಥಿತಿ.
ಅದೀಯ = ಇದ್ದೀಯ.
ಅದುರು = ನಡುಗು, ಅಲ್ಲಾಡು.
ಅದ್ದು = ನೆನೆಸು, ಮುಳುಗಿಸು.
ಅದ್ಲು ಬದ್ಲು = ಬದಲಾಯಿಸುವುದು, ಒಂದಕ್ಕೆ ಬದಲಾಗಿ ಇನ್ನೊಂದು.
ಅದೆ = ೧.ಇದೆ ೨.ಸರಿ, ಹೌದು.
ಅದೇ ಮತ್ತೆ = ಅದೇಯ ಎಂದು ಒತ್ತಿ ಹೇಳುವುದು, ಇನ್ನೊಬ್ಬರು ಹೇಳಿದ್ದು ಸರಿ ಎನ್ನುವುದು.
ಅದೇಯ = ೧.ಅದೆ ೨.ಹೌದು, ಸರಿ ಎಂದು ಒಪ್ಪಿಗೆ ಸೂಚಿಸುವುದು.
ಅಧೋಗತಿ = ಅವನತಿ, ಕತೆ ಮುಗಿಯಿತು ಎಂಬರ್ಥ.
ಅನರ್ಥ = ಕೇಡು, ಕೆಟ್ಟದ್ದು, ಅನಿಷ್ಟ.
ಅನಸ್ತಾ ಅದೆ = ಅನ್ನಿಸುತ್ತಿದೆ, ಗಮನಕ್ಕೆ ಬರುತ್ತಿದೆ.
ಅನಸ್ತು = ಅನ್ನಿಸಿತು, ಹಾಗೆಂದೇ ತಿಳಿದುಕೊಂಡೆ.
ಅನ್ಕಂಡ = ಅಂದುಕೊಂಡ (ಪು).
ಅನ್ಕಂಡೆ = ಅಂದುಕೊಂಡೆ.
ಅನ್ನ = ಬೇಯಿಸಿದ ಅಕ್ಕಿ, ಆಹಾರ, ಊಟ.
ಅನ್ನದ ಕೈ = ಅನ್ನ ಬಡಿಸುವ ಸಟುಗ.
ಅನ್ನ ಬಸಿ = ಅಕ್ಕಿ ಬೆಂದು ಅನ್ನವಾದ ತಕ್ಷಣ ಉಳಿದ ಗಂಜಿಯನ್ನು ಬಾಗು–ಮರಿಗೆಗೆ ಬಗ್ಗಿಸಿ ತೆಗೆ

ಅನ್ನಲಿ = ಹೇಳಲಿ, ಬೈಯಲಿ.
ಅನ್ಬಕರೆ = ಅನ್ನಬೇಕಾದರೆ, ಹೇಳಬೇಕಾದರೆ.
ಅನಾಚಾರ = ತಪ್ಪು ನಡೆ, ಅನಿಷ್ಟ ಪದ್ಧತಿ, ಕೆಟ್ಟದ್ದು ಮಾಡುವುದು.
ಅನಾದರ = ಉಪೇಕ್ಷೆ, ನಿರ್ಲಕ್ಷ್ಯ, ಅಲಕ್ಷ್ಯ.
ಅನಾನಸು = ಒಂದು ರೀತಿಯ ಹಣ್ಣು.
ಅನಾಮತ್ತು = ಇದ್ದಕ್ಕಿದ್ದಂತೆ, ಪೂರ್ತಿಯಾಗಿ.
ಅನಾಯಾಸ = ಆಯಾಸವಿಲ್ಲದ, ಕಷ್ಟವಲ್ಲದ.
ಅನಾಹುತ = ಆಕಸ್ಮಿಕ, ಅನರ್ಥ, ಕೇಡು.
ಅನ್ನಾಯ = ಅನ್ಯಾಯ, ನ್ಯಾಯವಲ್ಲದ.
ಅನಿಷ್ಟ = ಕೇಡನ್ನುಂಟುಮಾಡುವ, ಅಪ್ರಿಯ.
ಅನಿವಾರ್ಯ = ಗತ್ಯಂತರವಿಲ್ಲದೆ, ನಿರ್ವಾಹವಿಲ್ಲದೆ.
ಅನ್ನಿಸು = ಹೇಳಿಸು, ಮಾತಾಡಿಸು.
ಅನುಕೂಲ = ೧.ಶ್ರೀಮಂತಿಕೆ, ಬಡತನವಿಲ್ಲದ ೨. ಸಹಕಾರಿ, ಸಹಾಯಕವಾದ.
ಅನುಕೂಲಸ್ಥ = ಸಿರಿವಂತ, ಶ್ರೀಮಂತ.
ಅನುಗ್ರ = ಅನುಗ್ರಹ, ಆಶೀರ್ವಾದ.
ಅನುಭವ = ಜ್ಞಾನ, ತಿಳುವಳಿಕೆ.
ಅನುಭವಸ್ಥ = ಅನುಭವಿ, ಜ್ಞಾನಿ, ತಿಳುವಳಿಕಸ್ಥ.
ಅನುಬೋಸು = ಅನುಭವಿಸು, ಕಷ್ಟಪಡು.
ಅನುಮಾನ = ಸಂದೇಹ.
ಅನುವು = ಅಣಿ, ೨. ಅನುಕೂಲಕರ, ೩. ಸ್ಥಳ.
ಅನ್ನು = ಹೇಳು, ಮಾತಾಡು.
ಅನ್ನೇಕಾರ = ಅನ್ಯಾಯಗಾರ, ಮೋಸ ಮಾಡುವವನು.
ಅನ್ನೇಕಾರ ಬುದ್ಧಿ = ಕೇಡು ಬುದ್ಧಿ, ಅನ್ಯಾಯಗಾರ ಮನಸ್ಸು.
ಅನ್ನೇಕಾರ್ತಿ = ಅನ್ಯಾಯಗಾರ್ತಿ, ಮೋಸ ಮಾಡುವವಳು.
ಅಪ್ಪ = ತಂದೆ, ಜನಕ, ಪಿತ.
ಅಪ್ಪಂತದ್ದು = ಒಳ್ಳೆಯದು, ಒಳ್ಳೆಯ ಬುದ್ಧಿ.
ಅಪ್ಪಟ ಚಿನ್ನ = ಶುದ್ಧ ಬಂಗಾರ, ಅಪರಂಜಿ.
ಅಪ್ಪಟ ಸತ್ಯ = ನಿಜ, ಎಳ್ಳಷ್ಟೂ ಸುಳ್ಳಿಲ್ಲದ ಸತ್ಯ.
ಅಪ್ಪಯ್ಯ = ಅಪ್ಪ.
ಅಪ್ಪಿತಪ್ಪಿ = ಆಕಸ್ಮಿಕವಾಗಿ, ಪೂರ್ವ ಸೂಚನೆಯಿಲ್ಲದೆ.
ಅಪೀಲು = ಮೇಲ್ಮನವಿ, ಮತ್ತೆ ಮನವಿ ಮಾಡುವುದು.
ಅಪ್ಪು = ಅಪ್ಪುಗೆ, ತಬ್ಬಿಕೊಳ್ಳು.
ಅಪ್ಪುಚ್ಚಿ = ಒತ್ತಿಪುಡಿ ಮಾಡು, ಒತ್ತಿ ಹಾಳು ಮಾಡು.
ಅಪೂಟು = ಪೂರ್ತಿ, ಸಂಪೂರ್ಣ.
ಅಪ್ರೂಪ = ಅಪರೂಪ, ವಿರಳ, ಕಡಿಮೆ.
ಅಪ್ಪೆಮಿಡಿ = ಉಪ್ಪಿನಕಾಯಿ ಮಾಡುವ ಮಾವಿನ ಮಿಡಿ.
ಅಪ್ಪೋಣದು = ತಬ್ಬುವುದು, ಅಪ್ಪಿ-ಕೊಳ್ಳುವುದು.
ಅಬಸುಬ = ತುಟಿಪಿಟಕ್ಕೆನ್ನದೆ, ಮಾತಾಡದೆ.
ಅಬ್ಬರ್ಸು = ಅಬ್ಬರಿಸು, ಕಿರುಚು, ಕೂಗಾಡು, ಗಟ್ಟಿಯಾಗಿ ಮಾತಾಡು.
ಅಬ್ಬಲ್ಗಿ ಹೂ = ಕನಕಾಂಬರ, ಜಡೆ ಗೊರಟೆ.
ಅಬ್ರ = ಅಬ್ಬರ, ಬೊಬ್ಬೆ.
ಅಬ್ರಿ = ಅಬ್ಬಿ, ಧರೆ, ಗುಡ್ಡ.

ಅಭ್ಯಂಜ್ನ = ಎಣ್ಣೆ ತೀಡಿ ಬಿಸಿನೀರಿನಲ್ಲಿ ಸ್ನಾನ ಮಾಡುವುದು.

ಅಮಲ್ದಾರ = ತಾಲ್ಲೂಕಿನ ದಂಡಾಧಿಕಾರಿ, ತೆರಿಗೆ ವಸೂಲು ಮಾಡುವ ಅಧಿಕಾರಿ.

ಅಮ್ಮ = ಅವ್ವ, ತಾಯಿ.

ಅಮಾನತ್ತು = ನಿಲಂಬನೆ, ವಸ್ತುಗಳನ್ನು ಉಪಯೋಗಿಸಲು ಬಿಡದೆ ಹಾಗೇ ಇಡುವಂತೆ ಆಜ್ಞೆ ಮಾಡುವುದು.

ಅಮಾಸೆ = ಅಮಾವಾಸ್ಯೆ, ಕೃಷ್ಣಪಕ್ಷದ ಕೊನೆಯ ದಿನ.

ಅಮ್ಮಿ = ಸ್ತನ, ಮೊಲೆ.

ಅಮೀನ = ಬಹಿರಂಗ ಹರಾಜು ಮಾಡುವವ.

ಅಮುಕು = ಒತ್ತು, ಅದುಮು, ಒತ್ತಿ ಒಳಸೇರಿಸು.

ಅಮ್ಲು = ಅಮಲು, ಮತ್ತು.

ಅಮೆಲೆ = ಆಮೇಲೆ, ಆನಂತರ, ತರುವಾಯ.

ಅಮ್ಟೆಕಾಯಿ = ಉಪ್ಪಿನಕಾಯಿ ಮಾಡುವ ಒಂದು ಹುಳಿಕಾಯಿ (ಕೆಸುವಿನ ಸೊಪ್ಪಿನ ಪಲ್ಯಕ್ಕೆ ಅಮಟೆಕಾಯಿ ಹಾಕುವುದರಿಂದ ಬಾಯಿತುರಿಕೆ ಬರುವುದಿಲ್ಲ, ರುಚಿಯೂ ಹೆಚ್ಚುತ್ತದೆ).

ಅಯ್ಯ = ಧಣಿ, ತಂದೆ, ಚಿಕ್ಕಪ್ಪ.

ಅಯ್ಯಪ್ಪಾ = ಸಾಕಾಯ್ತು/ಸುಸ್ತಾಯ್ತು ಎಂದು ಉಸುರುವುದು.

ಅಯ್ದೆ = ಐದೆ, ಮುತ್ತೈದೆ, ಸುಮಂಗಲಿ.

ಅಯ್ದೆತನ = ಸುಮಂಗಲಿಯಾಗಿರುವಿಕೆ.

ಅಯೋಗ್ಯ = ಯೋಗ್ಯವಲ್ಲದ, ಉಚಿತವಲ್ಲದ.

ಅಯ್ಯೋ = ದುಃಖದ ಉದ್ಗಾರ.

ಅರ = ಲೋಹವನ್ನು ಹರಿತ ಮಾಡಲು ಉಪಯೋಗಿಸುವ ಉಕ್ಕಿನ ಸಾಧನ.

ಅರಗು = ೧.ತವರ ೨.ಜೀರ್ಣವಾಗು, ಪಚನವಾಗು.

ಅರಗೇಡಿ = ಬುದ್ಧಿಯಿಲ್ಲದವನು.

ಅರಚು = ಕೂಗು, ಚೀತ್ಕರಿಸು.

ಅರಜೀವ = ಅರ್ಧಜೀವ, ಸಾಯುವಂತಾಗಿರುವಿಕೆ.

ಅರಜೀವ ಮಾಡು = ಸಾಯುವಂತೆ ಹಿಂಸಿಸು.

ಅರರ್ದ = ಅರ್ಧರ್ಧ, ಸಮ ಅರ್ಧ.

ಅರ್ದ = ಎರಡನೇ ಒಂದು ಭಾಗ.

ಅರ್ದಂಬರ್ಧ = ಹೆಚ್ಚೂ ಕಡಿಮೆ ಅರ್ಧ, ಅಪೂರ್ಣ.

ಅರ್ದಲೆ ನೋವು = ಅರ್ಧ ತಲೆಶೂಲೆ, ಪಾರ್ಶ್ವ ತಲೆಬೇನೆ.

ಅರಸಿನ – ಹರಿದ್ರ, ಹಳದಿ ಬಣ್ಣದ ಔಷಧೀಯುಕ್ತ ಪದಾರ್ಥ.

ಅರಸಿನ ಬಳಿ = ಒಂದು ಬಳಿಯ ಹೆಸರು, ಒಂದು ಕುಲದ ಹೆಸರು, ಒಕ್ಕಲಿಗರಲ್ಲಿ ಒಂದು ಕುಲದ ಹೆಸರು.

ಅರಳಿ = ಅಶ್ವತ್ಥ, ಭೋದೀವೃಕ್ಷ.

ಅರಳು = ೧. ಹೂವು ಬಿರಿಯುವುದು, ೨. ಹುರಿದ ಭತ್ತ/ಜೋಳ.

ಅರ್ಮರ್ಲು ಕಾಯಿ = ನಿಂಬೆಕಾಯಿ ಜೊತೆ ಸೇರಿಸಿ ಉಪ್ಪಿನಕಾಯಿ ಹಾಕುವ ಪರಿಮಳಯುಕ್ತ ಕಾಯಿ, ಪೆಟ್ಲುಕಾಯಿ.

ಅರ್ವಾಸಿ = ಅರ್ದಂಬರ್ಧ, ಅರ್ಧದಷ್ಟು, ಅರ್ಧಪಾಲು.

ಅರಿ = ೧.ಕುಯ್ಯು, ಕತ್ತರಿಸು, ಕಡಿದು ಹಾಕು ೨.ಅರಿವು, ತಿಳುವಳಿಕೆ, ಅರಿತುಕೋ.

ಅರಿ ಬಡ್ದುಹೋಗ = ಸತ್ತು ಹೋಗಲಿ, ಹಾಳಾಗಿ ಹೋಗಲಿ ಎಂದು ಬೈಗುಳ.

ಅರಿಯದ = ತಿಳಿಯದ, ತಿಳುವಳಿಕೆಯಿಲ್ಲದ.

ಅರಿವು = ತಿಳುವಳಿಕೆ, ಜ್ಞಾನ.

ಅರ್ಬಿರ್ಗು = ಅರೆಹುಚ್ಚ, ಬಾಯಿಗೆ ಬಂದಂತೆ ಮಾತಾಡುವವ.

ಅರೀದ = ಅರಿಯದ, ತಿಳುವಳಿಕೆಯಿಲ್ಲದ.

ಅರುಬು = ಶೋಧಿಸು, ಆಯ್ದು ತೆಗೆಯುವುದು.

ಅರುಶ್ಣ = ಅರಿಸಿನ.

ಅರುಶ್ಣದ ಕೊಂಬು = ಅರಿಸಿನದ ಚೂರು.

ಅರೆ = ಬಂಡೆ ೨. ಅರ್ಧಭಾಗ, ೩. ಹಂತ, ಗೂಡು, ಬೀರೊಳಗಿನ ಗೂಡು, ೪. ತೇಯುವುದು, ತೇದುವುದು.

ಅರೆ = ಆಶ್ಚರ್ಯ ಸೂಚಿಸುವ ಉದ್ಗಾರ.

ಅರೆಕಲ್ಲು = ಅರೆಯುವ ಕಲ್ಲು, ದೊಡ್ಡ ಬಂಡೆ.

ಅರೆಗಚ್ಚು = ಅರ್ಧಂಬರ್ಧ ಬೆಂದ, ಸರಿಯಾಗಿ ಒಣಗಿರದ.

ಅರೆಬೆತ್ಲೆ = ಅರ್ಧಂಬರ್ಧ ಬಟ್ಟೆ ಹಾಕಿರುವುದು.

ಅರ್ನಿದ್ದೆ = ಅರೆ ನಿದ್ದೆ, ಅಪೂರ್ಣ ನಿದ್ದೆ.

ಅರ್ಶಿನ ಮುಂಡ್ಗಿ = ಕಾಮಾಲೆ, ಮೈಯೆಲ್ಲಾ ಹಳದಿಂಯಾಗುವ ಒಂದು ರೋಗ.

ಅರೆವಾಸಿ = ಅರ್ಧಭಾಗ.

ಅರೆಹೊಟ್ಟೆ = ಊಟ ಕಡಿಮೆಯಾಗುವುದು, ಹೊಟ್ಟೆ ತುಂಬದಿರುವುದು, ಹಸಿವು ಅಡಗದಿರು.

ಅರ್ವೆ = ಅರಿವೆ, ಬಟ್ಟೆ.

ಅರ್ವೆ ತುಂಡು = ಅರೇತುಂಡು.

ಅರೇತುಂಡು = ಅರಿವೆಯ ತುಂಡು, ಹರಿದ ಬಟ್ಟೆ.

ಅರ್ಚು = ಅರಚು, ಕೂಗಿಕೋ ೨. ಅಪ್ಪಚ್ಚಿ ಮಾಡು, ಒತ್ತಿ ಪುಡಿಮಾಡು.

ಅರ್ತು ತೆಗಿ = ಶೋಧಿಸಿ ತೆಗೆ, ಆಯ್ದು ತೆಗೆ, ಸಂಪೂರ್ಣ ಆಯು.

ಅರ್ಜಿ = ಅರಿಕೆ ಪತ್ರ, ಕೋರಿಕೆ ಪತ್ರ.

ಅರ್ಜಿದಾರ = ಅರ್ಜಿ ಸಲ್ಲಿಸಿದವನು.

ಅರ್ಧರಾತ್ರಿ = ನಡುರಾತ್ರಿ, ಮಧ್ಯರಾತ್ರಿ.

ಅಲಕ್ಷ = ಉದಾಸೀನ, ಅಸಡ್ಡೆ, ನಿರ್ಲಕ್ಷ.

ಅಲಗು = ೧.ಕೊಂಬು, ಏಡಿಯ ಕೊಂಬು, ೨.ಹರಿತವುಳ್ಳ ಬಾಕು ೩.ಅಲುಗು, ಅಲ್ಲಾಡು.

ಅಲಲಾ = ಆಶ್ಚರ್ಯ ಸೂಚಿಸುವ, ಉದ್ಗಾರ

ಅಲಸಂಡೆ = ಒಂದು ರೀತಿಯ ತರಕಾರಿ.

ಅಲ್ಲ = ಆಗಲ್ಲ, ಹಾಗಲ್ಲ.

ಅಲಾ = ಸರೀನಾ ? ಹೌದಾ? ಎಂದು ಹೇಳುವುದು.

ಅಲಾಯ್ದ = ಬೇರೆಯಾಗಿ, ಪ್ರತ್ಯೇಕವಾಗಿ.

ಅಲಾಲ್‌ಟೋಪಿ = ಜವಾಬ್ದಾರಿಯಿಲ್ಲದ ವ್ಯಕ್ತಿ, ಮೋಸ ಮಾಡುವವ.

ಅಲ್ಲಾಟ = ಅಲುಗಾಟ, ಕುಲಕಾಟ.

ಅಲ್ಲಾಡು = ಅಲುಗಾಡು, ಹರಿದಾಡು.

ಅಲ್ಲಾಡ್ಸು = ಅಲುಗುವಂತೆ ಮಾಡು.

ಅಲ್ಲಾಸಿ = ಆ ಕಡೆಯಿಂದ, ಆ ಮೂಲಕ, ಬಳಸಿಕೊಂಡು.

ಅಲ್ಲಿ = ಆಕಡೆ, ಆ ಸ್ಥಳದಲ್ಲಿ, ಆ ಜಾಗದಲ್ಲಿ.

ಅಲ್ಲೀತಂಕ = ಅಲ್ಲಿಯವರೆಗೆ.

ಅಲುಗಾಟ = ಅಲ್ಲಾಡುವಿಕೆ, ಕಂಪನ.

ಅಲುಗಾಡು = ಅಲ್ಲಾಡು, ಚಲಿಸು.

ಅಲುಗು = ಅಳ್ಳಾಡು, ಹರಿದಾಡು.

ಅಲುಬು = ಜಾಲಾಡಿಸು, ಜಾಲಿಸು, ಜಗ್ಗು.

ಅಲೆ = ೧. ತೆರೆ, ತರಂಗ, ೨. ಅಲೆತ, ತಿರುಗು, ತಿರುಗಾಟ.

ಅಲೆಮಾರಿ = ಸುತ್ತಾಡುವ ಸ್ವಭಾವ, ಸದಾ ನಿಂತಲ್ಲಿ ನೆಲೆನಿಲ್ಲದೆ ಸುತ್ತುವವರು.

ಅಲ್ದೆ = ಅಲ್ಲದೆ, ಅದರ ಜೊತೆ, ಕೂಡ, ಸಹ, ಇನ್ನೂ.

ಅಲೆಲೆಲೆಲೇ = ಆಶ್ಚರ್ಯದ ಉದ್ಗಾರ.

ಅಲೇಸು = ಆಲೈಸು, ಕಿವಿಗೊಟ್ಟು ಕೇಳು.

ಅಲೋಚ್ನೆ = ಯೋಚನೆ, ಆಲೋಚನೆ.

ಅವ್ನ = ಅವನು, ಆ ವ್ಯಕ್ತಿ.

ಅವಕಾಶ = ಸಂದರ್ಭ, ಪುರುಸೊತ್ತು, ಬಿಡುವು.

ಅವಗವಾಗ = ಆಗಾಗ, ಮತ್ತೆ ಮತ್ತೆ, ಆಗಿಂದಾಗ.

ಅವತಾರ = ವೇಷಭೂಷಣ.

ಅವತ್ತು = ಆದಿನ.

ಅವಧಿ = ಗಡುವು, ಅವಕಾಶ, ಪರಿಮಿತಿ.

ಅವ್ಮಾನ = ಅಪಮಾನ, ಅಗೌರವ.

ಅವರೆ = ಒಂದು ದ್ವಿದಳ ಧಾನ್ಯ, ಅವರೆಕಾಯಿ, ಹುರುಳಿಕಾಯಿ.

ಅವ್ಲಕ್ಕಿ = ಅರೆಬೇಯಿಸಿ ಹುರಿದ ಭತ್ತದ ಅಕ್ಕಿ, ಅವಲಕ್ಕಿ.

ಅವ್ಲಕ್ಷಣ = ಅಶುಭ, ಅಮಂಗಳ.

ಅವ್ಸ್ರ = ಅವಸರ, ಆತುರ, ಗಡಿಬಿಡಿ.

ಅವಸ್ಥೆ = ಸ್ಥಿತಿ, ತೊಂದರೆ, ಕಷ್ಟ.

ಅವ್ಳಿ ಜವ್ಳಿ = ಒಂದೇ ರೀತಿಯ ಜೋಡಿ, ಒಂದೇ ಹೆರಿಗೆಯಲ್ಲಿ ಹುಟ್ಟಿದ ಎರಡು ಮಕ್ಕಳು.

ಅವ್ವ = ಅಮ್ಮ, ತಾಯಿ, ಹೆತ್ತಾಕೆ.

ಅವಾಂತ್ರ = ಗಲಿಬಿಲಿ, ಅವ್ಯವಸ್ಥೆ, ಅಸ್ತವ್ಯಸ್ತ.

ಅವುಕು = ಅಮುಕು, ಅದುಮು.

ಅವುಗ = ಔಗ, ಸಣ್ಣ ತೂತುಗಳಿರುವ ಮಡಕೆಯನ್ನು ಒಲೆಯ ಮೇಲೆ ಕವುಚಿಯಿಟ್ಟು ಮಾಡುವ ಅಕ್ಕಿ, ಬೆಲ್ಲದ ಸಿಹಿತಿಂಡಿ.

ಅವುಚು = ಒತ್ತಿಹಿಡಿ, ಅಮುಕು, ತಬ್ಬು.

ಅವುಡು = ಹಲ್ಲು, ದವಡೆ, ಒಸಡು.

ಅವುಡುಗಚ್ಚು = ತುಟಿಯನ್ನು ಹಲ್ಲಿನಿಂದ ಕಚ್ಚು.

ಅವುಂತ್ಲ = ಔಂತ್ನ, ಔತಣ, ಹಬ್ಬದೂಟ.

ಅವ್ನು = ಅವನು, ಅವ್ನ

ಅವ್ರು = ಅವರು.

ಅವ್ಳು = ಅವಳು.

ಅವ್ಸು = ಅವಿತಿಡು, ಕದ್ದಿಡು.

ಅಶ್ವತ್ಥನ ಮರ = ಅರಳಿಮರ, ಈ ಮರದಲ್ಲಿ ದೈವತ್ವವಿದೆಯೆಂದು ಹಿಂದೂಗಳು ನಂಬುತ್ತಾರೆ.

ಅಶ್ವಿನಿ = ಒಂದು ಮಳೆ ನಕ್ಷತ್ರ.

ಅಷ್ಟು = ಆ ಅಳತೆ, ಆ ದೂರ.

ಅಸಡ್ಡೆ = ಅಲಕ್ಷ್ಯ.

ಅಸಂಬದ್ಧ = ಬಾಯಿಗೆ ಬಂದಂತೆ ಮಾತಾಡು, ಮನಸ್ಸಿಗೆ ತೋಚಿದಂತೆ ಮಾತಡು.

ಅಸಬಡಿ = ಒದ್ದಾಡು, ಅಲ್ಲಾಡಿಸು,

ತೊಟ್ಟಿಲನ್ನು ತೂಗದೇ ಸುಮ್ಮನೆ ಹಂದಾಡಿಸು.

ಅಸಬಳಿ = ಶಕ್ತಿಗುಂದು, ಸುಸ್ತಾಗು.

ಅಸಬಳಿಯಾದು = ಸೂಲೆ ಮರುಗು, ನಿಟ್ಟುಸಿರು ಬಿಡು.

ಅಸಂಬದ್ಧ = ಬಾಯಿಗೆ ಬಂದಂತೆ ಮಾತಾಡು ಮನಸ್ಸಿಗೆ ತೋಚಿ ದಂತೆ ನಡೆದು ಕೊಳ್ಳುವುದು, ವಿಪರೀತ.

ಅಸಿ ಅಸಿ = ಜಿಗುಪ್ಸೆಯಾದಾಗ ಹೊರಡುವ ಶಬ್ದ.

ಅಸ್ಥಿ = ಮೂಳೆ, ಎಲುಬು.

ಅಸ್ಥಿದಾನ = ಸುಟ್ಟ ಶವದ ಮೂಳೆ/ ಬೂದಿಯನ್ನು ನದಿಯಲ್ಲಿ ತೇಲಿ ಬಿಡುವ ಕ್ರಿಯೆ.

ಅಸ್ಲೆಮಳೆ = ಒಂದು ಮಳೆ ನಕ್ಷತ್ರ.

ಅಳತೆ = ತೂಕ, ಪರಿಮಾಣ.

ಅಳಬಿ = ಅಣಬೆ, ಶಿಲೀಂದ್ರ ಜಾತಿಗೆ ಸೇರಿದ್ದು.

ಅಳಲು = ದುಃಖ, ನೋವು.

ಅಳಲು ತೋಡಿಕೊಣಾದು = ದುಃಖವನ್ನು ಬೇರೆಯವರಲ್ಲಿ ಹೇಳಿ ಕೊಳ್ಳುವುದು.

ಅಳಲೆ ಕಾಯಿ = ಬೇಯಿಸಿ ತೆಗೆದ ಕಪ್ಪು ನೀರನ್ನು ಶಾಯಿ–ಯಂತೆ ಬಳಸಿ ಪಕ್ಷಿಗಳ ಗರಿಯಿಂದ ಬರೆಯು ತ್ತಿದ್ದರು. ಈ ಶಾಯಿ ಎಂದೂ ಮಾಸುತ್ತಿರಲಿಲ್ಲ.

ಅಳ್ಳಕ = ಸಡಿಲ.

ಅಳ್ಳಾಡು = ಅಲುಗಾಡು.

ಅಳಿಯ = ಮಗಳ ಗಂಡ.

ಅಳಿಯೂಟ = ಅಳಿಯನಿಗಾಗಿ ತಯಾರಿಸಿದ ಊಟ.

ಅಳಿಸು = ಅಳುವಂತೆ ಮಾಡು. ೨. ಹಾಳು ಮಾಡು, ೩. ಒರೆಸಿಹಾಕು.

ಅಳಿಲು = ಇಣಚಿ.

ಅಳೀತನ = ಅತ್ತೇ ಮನೆಯ ಆಸ್ತಿಗಾಗಿ ಅಲ್ಲಿಯೇ ನೆಲೆಸುವುದು.

ಅಳೀದಿಕ್ಕು = ಅಳಿಯಂದಿರು.

ಅಳು = ರೋಧನ, ರೋಧಿಸು, ಗೋಳಾಡು.

ಅಳುಕು = ಹೆದರಿಕೆ, ಅಂಜಿಕೆ, ಭಯ.

ಅಳುಗುಸ್ಗ = ಅಳುದನಿಯಲ್ಲಿ ಕೂಗುವ ಬೆಕ್ಕಿನಂತಹ ಪ್ರಾಣಿ, ಕಾಡುಪಾಪ, ಚಗಳಿ ಇರುವೆಯ ಕೊಟ್ಟೆಗೆ ಕಡ್ಡಿಚುಚ್ಚಿ ಇರುವೆಗಳು ಹೊರಬಂದಾಗ ಹೆಕ್ಕಿ ಹೆಕ್ಕಿ ತಿನ್ನುತ್ತದೆ. ೨.ಯಾವಾಗಲೂ ಅಳುಮೋರೆಯಂತಿರುವುದು.

ಅಳುಬುರ್ಕ = ಯಾವಾಗಲೂ ಅಳುವವನು (ಪು).

ಅಳುಬುರ್ಕಿ = ಯಾವಾಗಲೂ ಅಳುವವಳು. (ಸ್ತ್ರೀ).

ಅಳ್ಳು = ಅರಳು.

ಅಳ್ಳೆ = ಹೊಟ್ಟೆಯ ಒಂದು ಪಕ್ಕ, ಕಿಬ್ಬದಿ, ಹೊಳ್ಳೆ.

ಅಳ್ಳೆದೆ = ಹೆದರುವ ವ್ಯಕ್ತಿ, ಅಂಜುಬುರುಕ.

ಅಳ್ಳೆಮುರಿ = ಹೊಟ್ಟೆ ತುಂಬಾ, ಹೊಟ್ಟೆ ಬಿರಿಯುವಂತೆ (ಅಳ್ಳೆಮುರಿ ತಿನ್ನು)

ಅಕ್ಷತೆ = ಅಕ್ಷತೆ, ಮಂತ್ರಾಕ್ಷತೆಯ ಅಕ್ಕಿ.

ಆ

ಆ್ಞಂ = ಓಕೊಣದು, ಕರೆದಾಗ ಓ ಕೊಳ್ಳುವಿಕೆ.
ಆಂಕಾರ = ಅಹಂಕಾರ, ದುರಹಂಕಾರ.
ಆಂಬ್ರದ ಗಿಡ = ಹಿಪ್ಪುನೇರಳೆ.
ಆಂಬ್ರದಣ್ಣು = ಹಿಪ್ಪು ನೇರಳೆಯ ಹಣ್ಣು.
ಆಂಭಾವ = ಅಹಂಭಾವ, ಅಹಂಕಾರ.
ಆಕಳು = ಹಸು, ಗೋವು, ದನ.
ಆಕ್ರ = ಬಾಯಾರಿಕೆ, ದಾಹ.
ಆಕಾರ = ೧.ಇನ್ನೊಬ್ಬರ ಜಮೀನನ್ನು ತಾತ್ಕಾಲಿಕವಾಗಿ ವಹಿಸಿ ಕೊಳ್ಳುವುದು, ಗೇಣಿ, ವಾರ. ೨.ಆಕೃತಿ, ರೂಪ, ೩.ಆಕಾರಕ್ಕೆ ಕೊಡುವುದು.
ಆಕಾಸ = ಆಕಾಶ, ಅಂಬ್ರ, ಗಗನ.
ಆಗ = ಆ ಸಮಯದಲ್ಲಿ.
ಆಗಂಗೆ = ಆಗುವ ಹಾಗೆ.
ಆಗಣ = ಆಗಿನ, ಅಂದಿನ.
ಆಗಲ್ಲ = ಸಾಧ್ಯವಿಲ್ಲ, ಹೊಂದಲ್ಲ.
ಆಗಳ್ಕಿ = ಆಕಳಿಕೆ, ಬೇಜಾರಾದಾಗ/ನಿದ್ದೆ ಬರುವಾಗ ತಂತಾನೇ ಸಶಬ್ದವಾಗಿ ಬಾಯಿತೆರೆದು ಮುಚ್ಚುವುದು.
ಆಗಳೇ = ಆಗ್ಲೇ.
ಆಗಳ್ಸು = ಆಕಳಿಸು.
ಆಗ್ಬರು = ಆಗಿಬರು, ಕಷ್ಟ, ನೋವಿನ ಸಮಯದಲ್ಲಿ ನೆರವಾಗು.
ಆಗ್ಯಾನೆ = ಆಗಿದ್ದಾನೆ, ನೆರವಾಗಿದ್ದಾನೆ.
ಆಗ್ಯಾಳೆ = ಆಗಿದ್ದಾಳೆ, ನೆರವಾಗಿದ್ದಾಳೆ.
ಆಗಿವ್ನಿ = ಆಗಿದ್ದೇವೆ, ನೆರವಾಗಿದ್ದೇವೆ.
ಆಗು = ಆಗುವಿಕೆ, ನೆರವಾಗುವುದು.
ಆಗುಕ್ಕಾತದಾ ? = ಆಗಲು ಸಾಧ್ಯವೇ? ನೆರವಾಗಲು ಸಾಧ್ಯವೇ?.
ಆಗುಕಾಗ್ದು = ಆಗಬಾರದು, ಆಗಲು ಸಾಧ್ಯವಿಲ್ಲ.
ಆಗುಹಂಗೆ = ಆಗುವ ರೀತಿ.
ಆಗುಹೋಗು = ಸಾಧ್ಯಾಸಾಧ್ಯತೆ, (ಆಗುಹೋಗುಗಳಿಗೆ ನೀವೇ ಜವಾಬ್ದಾರರು).
ಆಗ್ಲೇ = ಆಗಲೇ, ಆಸಮಯದಲ್ಲೇ.
ಆಗೋತು = ಆಗಿಹೋಯ್ತು, ಮುಗಿದು ಹೋಯ್ತು.
ಆಗೋದ = ಆಗಿಹೋದ, ಮುಗಿದ.
ಆಜೂಬಾಜೂ = ಅಕ್ಕಪಕ್ಕ, ಅಂದಾಜಿನಂತೆ ಹತ್ತಿರದಲ್ಲಿ.
ಆಟಗ್ಲ = ಅಷ್ಟು ಅಗಲ.
ಆಟುದ್ದ = ಅಷ್ಟು ಉದ್ದ.
ಆಡಂಬ್ರ = ಆಡಂಬರ, ಡಂಭಾಚಾರ, ಮೆರೆತ.
ಆಡಾಡ್ತಾ = ಆಡುತ್ತಾಡುತ್ತಾ, ಆಡುತ್ತಿದ್ದಂತೆ.
ಆಡಿಸು = ಆಟವಾಡಿಸು, ಕುಣಿಸು, ೨. ಅಲ್ಲಾಡಿಸು, ೩. ನುಡಿಸು, ಹೇಳಿಸು.
ಆಡು = ೧.ಮೇಕೆ, ಗಂಡು ಕುರಿ ೨.ಆಟವಾಡು, ವಿಹರಿಸು, ಚಲಿಸು, ಅಲ್ಲಾಡು.
ಆಡುಮಾತು = ಜನರಾಡುವ ಮಾತು, ೨.ಬಾಯಿ ಮಾತಲ್ಲಿ ಆದ

ಒಪ್ಪಂದ.

ಆಡುಸ್ಪಾಗೆ = ೧.ಮಳೆಗಾಲದಲ್ಲಿ ಮಲೆನಾಡಲ್ಲಿ ಬೆಳೆಯುವ ಒಂದು ಸೊಪ್ಪು, ೨.ಜಾನುವಾರುಗಳಿಗೆ ಔಷಧವಾಗಿ ಉಪಯೋಗಿಸಬಹುದು. ಆಡುಗಳು ಇದರ ಸೊಪ್ಪನ್ನು ತಿನ್ನುವುದಿಲ್ಲ. ೩.ಜೈವಿಕ ಬೇಲಿಗೆ ಉಪಯೋಗ ೪ ಎಲೆಯ ರಸ ಬೇಧಿ ನಿಲ್ಲಲು. ೫.ಇದರ ಸೊನೆಯನ್ನು ಕೊಳವೆಯಂತಹ ಹುಲ್ಲುಕಡ್ಡಿಗೆ ಅದ್ದಿ ಊದಿದರೆ ಗುಳ್ಳೆಗಳು ಹಾರುತ್ತವೆ.

ಆಣಿ = ಕಲ್ಲು / ಮುಳ್ಳು ಚುಚ್ಚಿ ಕಾಲಿನಲ್ಲಾದ ಒತ್ತು, ಚರ್ಮಗಟ್ಟಿಯಾಗಿ ಬೆಳೆಯುವಿಕೆ.

ಆಣ್ತೆ = ಆಣತಿ , ಆಜ್ಞೆ, ಅಪ್ಪಣೆ.

ಆಣೆ = ೧. ಪ್ರಮಾಣ, ೨. ಹಿಂದಿನ ನಾಣ್ಯ ೩. ಹನ್ನೆರಡು ಕಾಸಿಗೆ ಒಂದಾಣೆ, ಈಗಿನ ಆರು ಪೈಸೆ.

ಆಣೆ ಹಾಕು = ಪ್ರಮಾಣ ಮಾಡು.

ಆತಂಕ = ೧.ಆ ತನಕ, ಅಲ್ಲಿವರೆಗೆ ೨.ಗಾಬರಿ.

ಆತದಂತ = ಆಗುತ್ತದೆಂದು.

ಆತದಾ = ಆಗುತ್ತದೆಯಾ?.

ಆತದೆ = ಆಗುತ್ತದೆ.

ಆತ್ರ = ಆತುರ, ತರಾತುರಿ.

ಆತ್ರಗೆಟ್ಟೋನು = ಆತುರಗಾರ, ಗೊತ್ತು ಗುರಿಯಿಲ್ಲದವನು.

ಆತಾ = ಆಯ್ತಾ, ಆಯಿತಾ, ಮುಗೀತಾ.

ಆತಾ ಅದೆ = ಆಗುತ್ತಾ ಇದೆ, ನಡೆಯುತ್ತಿದೆ.

ಆತಾರೆ = ಆಗುತ್ತಾರೆ, ನೆರವಾಗುತ್ತಾರೆ.

ಆತೀರಾ ? = ಆಗುತ್ತೀರ, ಸಹಾಯ ಮಾಡುತ್ತೀರಾ? ನೆರವಾಗುತ್ತೀರಾ? ಬೆಂಬಲಿಸುತ್ತೀರಾ?.

ಆತು = ಆಯ್ತು, ಆಯಿತು, ಆಗಿದೆ, ಮುಗಿದಿದೆ.

ಆತುಕೊಣಾದು = ಬೆಂಬಲಿಸು, ಸಮಯಕ್ಕೆ ಒದಗು, ನೆರವಾಗುವುದು.

ಆದಕ್ಕಿ = ಬೆಂದ ಹಕ್ಕಿ, ಅನ್ನ.

ಆದಂಗೆ = ಆದ ಹಾಗೆ, ಮುಗಿದ ಹಾಗೆ.

ಆದಂಗಾಗ್ಲಿ = ಆದ ಹಾಗೆ ಆಗಲಿ, ಹೇಗಾದರೂ ನಡೆಯಲಿ.

ಆದಂಗಾತು = ಮುಗಿದಂಗಾಯ್ತು, ಆದಂತೆ ಆಯ್ತು.

ಆದದ = ಆಗುತ್ತದಾ?.

ಆದಾಗ್ಯೂ = ಆದರೂ.

ಆದಾಯ = ವರಮಾನ, ಉತ್ಪತ್ತಿ.

ಆದಾರ = ೧. ಆಸರೆ, ೨. ದೀಡು, ಸಾಲ ಪಡೆದ ಹಣಕ್ಕೆ ಬದಲಾಗಿ ಹೊಲ-ಗದ್ದೆಗಳನ್ನು ಹೊಣೆಯಾಗಿಡುವುದು.

ಆದಿ ಮನೆ = ಪೂರ್ವಿಕರ ಮನೆ.

ಆದೀಯ = ಆಗುತ್ತೀಯ.

ಆದ್ರೆ ಮಳೆ = ಒಂದು ಮಳೆ ನಕ್ಷತ್ರ, ಆದ್ರಾ ಮಳೆ.

ಆನಿಗಲ್ಲು = ಆಲಿಕಲ್ಲು, ಗಟ್ಟಿಯಾದ ಮಳೆಹನಿ.

ಆನಿಸು = ಒರಗಿಸು, ಊರೆಕೊಡು.

ಆನೆ = ಗಜ, ಕರಿ, ಬಹುದೊಡ್ಡ ಆಕಾರದ ಕಾಡುಪ್ರಾಣಿ.

ಆನೆಕಾಲು = ಕಾಲು ಊದಿಕೊಂಡು ದಪ್ಪಗಾಗುವ ಒಂದು ರೋಗ,

ಸೊಳ್ಳೆಯಿಂದ ಬರುವ ರೋಗ.
೨. ಆನೆಯ ಕಾಲುಗಳು.

ಆಪತ್ತು = ವಿಪತ್ತು, ಕಷ್ಟ, ತೊಂದರೆ.

ಆಪೆ = ಅಕ್ಕಿಯಿಂದ ಮಾಡಿದ ತಿಂಡಿ.

ಆಪೆಕಾವ್ಲಿ = ಆಪೆ ಮಾಡುವ ಸಾಧನ.

ಆರ್ಭಟ = ಅಬ್ಬರ, ಕೂಗಾಟ, ಚೀರಾಟ.

ಆಮ = ಕರುಳಿನ ಸೋಂಕಿನಿಂದಾಗುವ ಬೇಧಿ, ದ್ರವರೂಪದ ಲೋಳೆಯಾದ ಮಲ.

ಆಮಶಂಕೆ = ಆಮ ರಕ್ತದಿಂದ ಕೂಡಿದ ಭೇದಿ.

ಆಮೆ = ಕೂರ್ಮ, ಒಂದು ಜಲಚರ, ಬೆನ್ನ ಮೇಲೆ ದೊಡ್ಡ ಚಿಪ್ಪಿನ ಕವಚವಿರುವ ಜಲಚರ.

ಆಮೇಲಾಮೇಲೆ = ತದನಂತರ, ಬರುಬರುತ್ತ.

ಆಮೇಲೆ = ಆನಂತರ, ತರುವಾಯ.

ಆಯ = ಗುರಿ, ಹೆಜ್ಜೆ, ೨.ಯಜಮಾನನ ನಕ್ಷತ್ರಕ್ಕೆ ತಕ್ಕಂತೆ ನಿರ್ದಿಷ್ಟ ಅಳತೆಯ ಮನೆಯ ವಾಸ್ತು,

ಆಯಕಟ್ಟು = ಸುಭದ್ರವಾದ ರಚನೆ/ ಜಾಗ.

ಆಯತಪ್ಪು = ಗುರಿತಪ್ಪು, ಸಮತೋಲನ ತಪ್ಪು.

ಆಯದ ಬಾಗಿಲು = ಒಂದೇ ಮರದಿಂದ ನಿಗಧಿತ ಅಳತೆಯಲ್ಲಿ ಮಾಡಿದ ಜಗಲಿಯಿಂದ ನಡುಮನೆಗೆ ದಾಟುವ ಬಾಗಿಲು, ಆಯ ನೋಡಿ ಇಟ್ಟ ಬಾಗಿಲು.

ಆಯಸ್ಸು = ಜೀವಿತದ ಅವಧಿ, ಬದುಕುವ ಕಾಲ.

ಆಯ್ಕಟ್ಟು = ಅತ್ಯುತ್ತಮವಾದುದನ್ನೇ ಬಯಸುವುದು, ಅತಿಯಾದ ಮಡಿವಂತಿಕೆ.

ಆಯಾರ = ಬಲಿ.

ಆಯು = ಆರಿಸಿಕೊಳ್ಳು, ಹೆಕ್ಕು.

ಆಯ್ಕೊಣದು = ಆಯ್ದುಕೊಳ್ಳು, ಆರಿಸಿಕೊಳ್ಳುವುದು.

ಆರಕ್ಹಾಕು = ಆರಲು ಹಾಕು, ಒಣಗಲು ಹಾಕು.

ಆರತಿ = ದೀಪ ಹತ್ತಿಸಿಕೊಂಡು ದೇವರು/ ಮದು ಮಕ್ಕಳಿಗೆ ಬೆಳಗುವುದು, ದೀಪಾರತಿ.

ಆರತಿ ಬೆಳಗು = ದೀಪದಿಂದ ಬೆಳಗುವ ಆಚರಣೆ.

ಆರಯಿಸು = ಗೌರವಿಸು, ಆಧರಿಸು.

ಆರಾರು = ಆರಕ್ಕೆ ಇನ್ನೂ ಆರು ಆರು ಕೂಡಿಸುವುದು.

ಆರಿಸು = ೧. ನಂದಿಸು, ಕೆಡಿಸು ೨.ಆಯು, ಸಂಗ್ರಹಿಸು.

ಆರು = ೧.ನಂದಿಹೋಗು, ೨. ಶಮನವಾಗು, ತಣ್ಣಗಾಗು, ಒಣಗು, ೩. ಆರನೇ ಸಂಖ್ಯೆ.

ಆರು ಕಟ್ಟುವುದು = ಸಕ್ಕುದಾರ ಕಟ್ಟುವುದು, ಉಳುಮೆಯ ಮೊದಲ ದಿನ.

ಆರುಸು = ಆರಿಸು.

ಆರ್ನೂರು = ಆರು ಮತ್ತು ನೂರರ ಗುಣಾಕಾರ.

ಆರ್ಲು = ನಕ್ಷತ್ರ, ತಾರೆ.

ಆಲ = ನ್ಯಗ್ರೋಧ, ವಟವೃಕ್ಷ, ದೊಡ್ಡಮರ.

ಆಲದ ಹಣ್ಣು = ಇದು ಆಲ ಅಲ್ಲ, ಇದರ ಹಣ್ಣು ತುಂಬಾ ರುಚಿ, ಸಪೋಟದಷ್ಟು ದೊಡ್ಡ ಮತ್ತು ಹಾಗೆ ಮೇಣವಿರುತ್ತದೆ.

ಆಲಿ = ಕಣ್ಣಾಲಿ, ಕಣ್ಣುಗುಡ್ಡೆ.

ಆಲಿಕಲ್ಲು = ಆನಿಗಲ್ಲು.
ಆಲುಗಡ್ಡೆ = ನೆಲದೊಳಗಿನ ಗೆಣಸಿನಂತಹ ಗಡ್ಡೆ, ಒಂದು ತರಕಾರಿ.
ಆಲೆಕಣೆ = ಕಬ್ಬಿನ ರಸ ತೆಗೆಯುವ ಕಬ್ಬಿಣದ ಯಂತ್ರ
ಆಲೆ ಮನೆ = ಗಾಣದಿಂದ ಕಬ್ಬಿನ ರಸವನ್ನು ತೆಗೆದು ಬೆಲ್ಲ ತಯಾರಿಸುವ ಸ್ಥಳ.
ಆವಿ = ನೀರಿನ ಹಬೆ, ಉಗಿ.
ಆವಿಗೆ = ಗಡಿಗೆ ಬೇಯಿಸುವ ಕುಂಬಾರನ ಒಲೆ.
ಆವುತಿ = ಆಹುತಿ, ಬಲಿ.
ಆಷಾಢ = ಒಂದು ಮಾಸದ/ ತಿಂಗಳಿನ ಹೆಸರು.
ಆಶಾಣ = ಗುದದ್ವಾರ, ಮಲದ್ವಾರ.
ಆಶ್ಲೇಷ = ಒಂದ ಮಳೆ ನಕ್ಷತ್ರ.
ಆ ಸಮಕ್ಕೆ = ಆ ಮಟ್ಟಕ್ಕೆ.
ಆಸರ್ಗಿನೂ = ಆ ಸಾರಿಯೂ, ಕಳೆದ ಬಾರಿ.
ಆಸಾಮಿ = ವ್ಯಕ್ತಿ, ಮನುಷ್ಯ.
ಆಸ್ತಿ = ಸ್ವತ್ತು, ಸ್ವಾಧೀನದಲ್ಲಿರುವ ವಸ್ತು.
ಆಸ್ತಿವಂತ = ಸಿರಿವಂತ, ಆಸ್ತಿಯನ್ನು ಹೊಂದಿರುವವನು.
ಆಸುರ್ವಾದ = ಆಶೀರ್ವಾದ.
ಆಸೆ = ಬಯಕೆ, ಅಪೇಕ್ಷೆ.
ಆಸೆಪಡು = ಬಯಸು, ಅಪೇಕ್ಷಿಸು.
ಆಸೆಬುರ್ಕ = ಆಸೆಪಡುವವನು. (ಪು)
ಆಸೆಬುರ್ಕಿ = ಆಸೆಪಡುವವಳು. (ಸ್ತ್ರೀ)
ಆಹಾಹಾ ! = ಸಂತೋಷ/ಅಸಡ್ಡೆಯನ್ನು ಸೂಚಿಸುವುದು.
ಆಳ = ೧. ಭೂಮಿಯ ಮೇಲಿಂದ ಕೆಳಗಿನ–ವರೆಗೆ ಅಳತೆ ೨. ಒಳಗುಟ್ಟು, ಮರ್ಮ (ಅಲಂ).
ಆಳು = ವ್ಯಕ್ತಿ, ಸೇವಕ, ಕೂಲಿಯಾಳು.

ಇ

ಇಂಕತಂಕ = ಇಲ್ಲಿಯ ತನಕ, ಇಲ್ಲಿವರೆಗೆ.
ಇಂಗ್ಡ = ವಿಂಗಡ, ಬೇರೆ ಬೇರೆ.
ಇಂಗ್ಲನ್ನ = ಮೆಂತ್ಯದ ಹಿಟ್ಟು, ಬೆಲ್ಲ ಸೇರಿಸಿ ಮಾಡಿದ ಅನ್ನ.
ಇಂಗ್ಳ = ಬೆಂಕಿ ಕೆಂಡ.
ಇಂಗಿಸು = ಬತ್ತಿಸು, ಇಂಗಿ ಹೋಗುವಂತೆ ಮಾಡು.
ಇಂಗು = ೧. ಹಿಂಗು. ೨. ಒಣಗು, ಬತ್ತು.
ಇಂಚು = ಅಂಗುಲ.
ಇಂಚುಪಟ್ಟಿ = ಇಂಚು ಗುರುತಿರುವ ಅಳತೆಪಟ್ಟಿ.
ಇಂತ = ಇಂತಹ, ಈ ರೀತಿಯ, ಈ ತರದ.
ಇಂತದಂತ = ಈ ತರದ್ದೆಂದು, ಈ ರೀತಿಯದೆಂದು.
ಇಂದು = ಈ ದಿನ, ಈ ಹೊತ್ತು.
ಇಂಬಳಿಕೆ = ಪದರ, ಮಡಿಕೆ.
ಇಂಬಳಿಸು = ಹಾಸಿಗೆ, ಬಟ್ಟೆ ಮುಂತಾದುವನ್ನು ಮಡಿಸಿಡು.
ಇಂಬ್ಳ = ಜಿಗಣೆ, ಜಾಸ್ತಿ ಮಳೆಯಿರುವ ಕಾಡಲ್ಲಿ ರಕ್ತ ಹೀರುವ ಹುಳ,

(ನವಿಲಿನ ಆಹಾರ).

ಇಂಬು = ಎಡೆ, ಜಾಗ ೨. ಆಶ್ರಯ.

ಇಂಬುಕೊಡು = ಆಶ್ರಯಕೊಡು, ಅವಕಾಶ ನೀಡು.

ಇಂಬುಳ್ಸು = ಇಂಬಳಿಸು.

ಇವ್ಣ= ಇವನು.

ಇಕ = ತಗೋ, ಹಿಡಿ .

ಇಕ್ಕಟ್ಟು = ೧. ಸ್ಥಳ ಸಾಲದಿರುವಿಕೆ. ೨.ಇಬ್ಬಂದಿ, ಸಂದಿಗ್ಧ.

ಇಕ್ಕಡಿಕಿ = ನೀರಡಿಕೆಂಯಾದಾಗ ಗಂಟಲಿಂದ ಹೊರಬರುವ ಶಬ್ದ, ಬಿಕ್ಕಳಿಕೆ.

ಇಕ್ಕಡಿಸು = ಗಂಟಲಿಂದ ಶಬ್ದ ಹೊರ ಹಾಕು.

ಇಕ್ಕಳ = ವಸ್ತುಗಳನ್ನು ಬಿಗಿಯಾಗಿ ಹಿಡಿದುಕೊಳ್ಳಲು ಬಳಸುವ ಹಿಡಿಕೆ, ಬಿಸಿ ಪಾತ್ರೆಯನ್ನು ಹಿಡಿಯುವ ಲೋಹದ ಹಿಡಿಕೆ.

ಇಕಾ = ತಗೋ, ಇಕ.

ಇಕ್ಕಾ = ಬಡಿಸಿಕೋ, ಬಡಿಸಿಕೊಂಡು ಊಟ ಮಾಡು.

ಇಕ್ಲಾ = ಬಡಿಸಲಾ.

ಇಕ್ಕು = ೧. ಇರಿಸು, ಮಡಗು ೨. ಊಟ ಬಡಿಸು.

ಇಗರ್ಜಿ = ಚರ್ಚು, ಕಿರಿಸ್ತಾನರ ದೇವಾಲಯ.

ಇಗಳಾ = ತಗೊಳ್ಳೋ (ಪು).

ಇಗಳೇ = ತಗೊಳ್ಳೇ (ಸ್ತ್ರೀ).

ಇಗಳಿ = ತಗೊಳ್ಳಿ, ತೆಗೆದುಕೊಳ್ಳಿ.

ಇಗ್ನ = ವಿಘ್ನ ತೊಂದರೆ, ಅಡಚಣೆ.

ಇಗಾ = ಇಕಾ.

ಇಚಾರ = ವಿಚಾರ, ವಿಶಯ.

ಇಚ್ಛಾನುಸಾರ = ಬೇಕಾದಷ್ಟು, ಮನ ಬಂದಷ್ಟು.

ಇಚಿಗೆ = ಈಕಡೆಗೆ, ಇತ್ತೀಚೆಗೆ, ಈಚಿನ ದಿನಗಳಲ್ಲಿ.

ಇಚಿಮನೆ = ಈ ಕಡೆಯ ಪಕ್ಕದ ಮನೆ.

ಇಚ್ಛೆ = ಅಪೇಕ್ಷೆ, ಬಯಕೆ.

ಇಜಾರ = ಒಂದು ಉಡುಗೆ, ಪೈಜಾಮ.

ಇಜ್ಜೋಡು = ಹೊಂದಿಕೆಯಿಲ್ಲದ ಜೋಡಿ.

ಇಟ್ಗ = ಇಟ್ಟುಕೋ, ತೆಗೆದಿರಿಸು.

ಇಟ್ಟನೆ = ಇಟ್ಟಿದ್ದಾನೆ (ಪು).

ಇಟ್ಟಳೆ = ಇಟ್ಟಿದ್ದಾಳೆ (ಸ್ತ್ರೀ).

ಇಟ್ಗಿ = ಮಣ್ಣನ್ನು ಕಲಸಿ, ಅಚ್ಚಿಗೆ ಹಾಕಿ ಬಿಸಿಲಲ್ಲಿ ಒಣಗಿಸಿ, ಕಟ್ಟಡ ಕಟ್ಟಲು ಉಪಯೋಗಿಸುವ ವಸ್ತು.

ಇಟ್ಗಿಗೂಡು = ಇಟ್ಟಿಗೆಗಳನ್ನು ಕ್ರಮವಾಗಿ ಜೋಡಿಸಿ ಒಲೆಗಳಂತೆ ಮಾಡಿ ಬೆಂಕಿ ಹಾಕಿ ಸುಡುವ ಗೂಡು.

ಇಟುಕು = ಎಟುಕು, ನಿಲುಕು.

ಇಟ್ಟೇ = ಇಷ್ಟೇ.

ಇಟ್ಟೊತ್ನಾಗೆ = ಇಷ್ಟು ಹೊತ್ತಿನಲ್ಲಿ, ಈ ಹೊತ್ತಿನಲ್ಲಿ.

ಇಟ್ಟೊತ್ತು = ಇಷ್ಟು ಹೊತ್ತು.

ಇಡಿ = ೧. ಹಾಯು, ತಿವಿ, ೨. ಪೂರ್ಣ, ಸಕಲ, ಸಮಗ್ರ.

ಇಡ್ಲಿ = ಹಬೆಯಲ್ಲಿ ಬೇಯಿಸಿದ ಅಕ್ಕಿ ಮತ್ತು ಉದ್ದಿನ ಉಪಾಹಾರ.

ಇಡಿಸು = ಇಡು, ಇಡುವಂತೆ ಮಾಡು.

ಇಡೀ ಅಕ್ಕಿ = ತುಂಡಾಗದ ಅಕ್ಕಿ, ನುಚ್ಚು ತೆಗೆದ ಅಕ್ಕಿ, ಕಡೀ ಅಕ್ಕಿ.

ಇಡೀಕ್ಕಡಿ = ಸಂಪೂರ್ಣ, ಏನೂ ಉಳಿಸದೆ.

ಇಡು = ಇರಿಸು, ಮಡಗು.

ಇಡುಕ್ಲು = ಇಕ್ಕಟ್ಟಿನ ಸ್ಥಳ.
ಇಡ್ಕು = ತುರುಕು, ಪೇರಿಸು, ಇಕ್ಕಟ್ಟಿನಲ್ಲಿ ಗಿಡ ನೆಡು.
ಇಡುಗಂಟು = ಇಟ್ಟ ಹಣ, ಠೇವಣಿ, ಕೂಡಿಟ್ಟ ನಿಧಿ.
ಇಡುಗು = ಎಡಗು, ಎಡವು.
ಇಡುವಳಿ ಜಮೀನು = ಇನಾಮು ಬಂದ ಜಮೀನು.
ಇಣಚಿ = ಅಳಿಲು.
ಇಣುಕು = ಹಣಿಕಿನೋಡು, ಮರೆಯಲ್ಲಿ ನಿಂತು ನೋಡು.
ಇತಿ = ಇಂತಿ, ಇಂತು, ಈ ರೀತಿಯಾಗಿ, ಹೀಗೆಂದು.
ಇತ್ತ = ಈ ಕಡೆ, ಈ ದಿಕ್ಕು.
ಇತ್ತಕಡೆ = ಇತ್ತ.
ಇತ್ಲಕಡೆ = ಇತ್ತ.
ಇತ್ಮಖಾ = ಇತ್ತ, ಈ ಮನೆಕಡೆ, ಈ ಊರಿನ ಕಡೆ.
ಇತ್ಲಗ = ಈಚೆಗೆ, ಈ ದಿನಗಳಲ್ಲಿ.
ಇತ್ಯರ್ಥ = ತೀರ್ಮಾನ.
ಇತ್ಲಾಗ = ಇತ್ಲಗ, ಇತ್ತಲಾಗಿ.
ಇತಿ ಮಿತಿ = ಮಿತಿ, ಕೊನೆ, ಎಷ್ಟು ಎಂಬ ಅಳತೆ.
ಇತಿತ್ತ = ಇತ್ಲಗ.
ಇತ್ತಿಂದತ್ತ = ಈ ಕಡೆಯಿಂದ ಆ ಕಡೆಗೆ.
ಇತ್ತು = ಇಡಲ್ಪಟ್ಟಿತ್ತು.
ಇದ = ವಿಧ, ನಮೂನೆ.
ಇದ್ದಟ್ಟು = ಇರುವಷ್ಟು.
ಇದಿರು = ಎದುರು, ಸಮ್ಮುಖ, ೨.ವಿರೋಧ.
ಇದಿರಾಗು = ಎದುರಾಗಿ ಬರುವುದು.
ಇದಿರಾಡು = ಪ್ರತಿಭಟಿಸಿ ಮಾತಾಡು, ವಾದಮಾಡು.
ಇದು = ಸಮೀಪದ, ಇಲ್ಲಿರುವ.
ಇದ್ರು ಬದ್ರು = ಎದಿರು-ಬದಿರು, ಮುಖಾಮುಖಿ.
ಇದ್ರು ಗಾಳಿ = ಎದುರಿಂದ ಬೀಸುವ ಗಾಳಿ.
ಇದ್ಲು = ಇದ್ದಿಲು, ಇದ್ದಲು, ಆರಿಸಿದ ಕೆಂಡ, ೨. ಇದ್ದಳು (ಸ್ತ್ರೀ).
ಇದೇ ಕೈ ಇದೇ ಕಾಲು = ಬಡಕಲು, ಅಸ್ಥಿಪಂಜರದಂತಾಗು. (ಅಲಂ)
ಇದೊಂದಪ = ಇದೊಂದು ಸಾರಿ.
ಇದ್ದೋಗಿ = ಈ ದಿನ ಉಳಿದುಕೊಳ್ಳಿ.
ಇನಾಮು = ಬಹುಮಾನ.
ಇನ್ನಾರ = ಇನ್ನಾದರೂ.
ಇನ್ನೋಟು = ಇನ್ನೊಂದಿಷ್ಟು, ಇನ್ನಷ್ಟು.
ಇಪರೀತ = ವಿಪರೀತ.
ಇಪ್ಪೆ ಮರ = ಹರೆಗಳು ಸಣ್ಣದಾಗಿ ತುಂಬಾ ಎಲೆಗಳಿರುವುದರಿಂದ ಸಮಾರಂಭಗಳಿಗೆ ಉಪಯೋಗಿಸುತ್ತಾರೆ.
ಇಬ್ಬಂದಿ = ಒಮ್ಮೆ ಈ ಕಡೆ, ಒಮ್ಮೆ ಆಕಡೆ ಅಥವಾ ಎರಡೂ ಕಡೆ, ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಾಗದಿರುವುದು, ಇಕ್ಕಟ್ಟಿನ ಪರಿಸ್ಥಿತಿ.
ಇಬ್ಬನಿ = ಹನಿ, ಹಿಮ, ಮಂಜು, ಬೆಳಗಿನ ಶೀತ ವಾತಾವರಣ.
ಇಬ್ಬಗೆ = ಎರಡು ಬಗೆ, ಎರಡು ರೀತಿ.
ಇಬ್ಬನಿಟ್ಟು = ಇಬ್ಬನಿಯಲ್ಲಿಟ್ಟು ತಿನ್ನುವ ಕಬ್ಬಿನ ಹಾಲಿನ ಸಿಹಿ ತಿಂಡಿ.
ಇಬ್ಬಾಯ್ಗತ್ತಿ = ಎರಡೂ ಕಡೆ ಅಲಗಿರುವ

ಕತ್ತಿ.

ಇಬ್ಬಿಬ್ಬರು = ಒಂದು ಬಾರಿಗೆ ಎರಡು ಮಂದಿಯಂತೆ.

ಇಬೂತಿ = ವಿಭೂತಿ, ಬಿಳಿಯನಾಮ.

ಇಬೂತಿ ಪೆಟ್ಗಿ = ಬಿಳಿನಾಮ, ಕುಂಕಮ, ಗಂಧದ ಪುಡಿ, ಹತ್ತಿಬತ್ತಿ ಮುಂತಾದುವನ್ನು ಇಡುವ ದೇವರ ಪಟ್ಟಿಗೆ, ತುಳಸಿಪೂಜೆಗೆ ಬೇಕಾದ ವಸ್ತುಗಳನ್ನಿಡುವ ಪೆಟ್ಟಿಗೆ.

ಇಬ್ರು = ಇಬ್ಬರು, ಎರಡು ಮಂದಿ.

ಇಮ್ಮಡಿ = ಎರಡು ಪಟ್ಟು, ಎರಡು ಸಲ.

ಇಮ್ಮಡಿಸು = ಎರಡು ಪದರದಂತೆ ಮಡಿಸು.

ಇಮ್ಮಂಡೆ ಹಾವು = ಎರಡು ತಲೆಯ ಹಾವು, ಬಾಲವಿಲ್ಲದ ಹಾವು.

ಇಮಾನ = ವಿಮಾನ.

ಇಯತ್ತೆ = ತರಗತಿ.

ಇರ = ಇರುವೆ.

ಇರಸಲು = ಎರಚಲು ಮಳೆ, ಹಾರುತ್ತಿರುವ ಮಳೆಹನಿ.

ಇರ್ಲ = ಇರಲಿಲ್ಲ, ೨. ಇರಲೇ, ನೆಲೆಸಲೇ

ಇರ್ಸಣ್ಗಿ = ಇರಸಲು.

ಇರಾದೆ = ಉದ್ದೇಶ, ಅಭಿಪ್ರಾಯ.

ಇರ್ಲಾ = ಇರಲೇ?, ಉಳಿದುಕೊಳ್ಳಲೇ? ಎಂದು ಕೇಳುವುದು.

ಇರಿ = ೧. ಚುಚ್ಚು, ಹೊಡೆ, ತಿವಿ, ೨.ಉಳಿದುಕೊಳ್ಳಿ.

ಇರಿಸು = ಇಡು, ೨. ಉಳಿಸು.

ಇರಿಕೆ = ಪಾತ್ರೆ ಜಜ್ಜಿ ಹೋಗದಂತೆ ತಳದಲ್ಲಿಡುವ ಸುರುಳಿ. ಸಿಂಬೆ.

ಇರುಚ್ಲು = ಇರಸಲು.

ಇರು = ನೆಲೆಸು, ಉಳಿ, ನಿಲ್ಲು, ತಾಳು, ೨.ಜೀವಿಸು.

ಇರುಕು = ತುಂಬು, ಬಿಗಿಯಾಗಿ ಹಿಡಿ.

ಇರುದು = ಇರುವುದು.

ಇರುವೆ = ಚೀಮೆ, ಪಪೀಲಿಕೆ, ಇರ.

ಇರುವೆಗೂಡು = ನೆಲವನ್ನು ಕೊರೆದು ಇರುವೆಗಳು ವಾಸಿಸಲು ಮಾಡಿಕೊಂಡಿರುವ ಗೂಡು/ಬಿಲ.

ಇರುಬೈದು = ಇರುಬಹುದು.

ಇರುಳು = ರಾತ್ರಿ, ಕಗ್ಗತ್ತಲು.

ಇರುಳು ಗಣ್ಣು = ರಾತ್ರಿ ಕಣ್ಣು ಕಾಣದಿರುವಿಕೆ.

ಇರ್ಸೇನು = ಇರಸಲು.

ಇರ್ಕೆ = ಇರಿಕೆ, ಪಾತ್ರೆಯ ಅಡಿಗೆ ಹಾಕುವ ಹುಲ್ಲು/ಬಿದಿರಿನ ಸಿಂಬೆ.

ಇರ್ತಿತ್ತು = ಇರುತ್ತಿತ್ತು.

ಇಲ್ಲ = ಗೊತ್ತಿಲ್ಲ, ಅಲ್ಲ.

ಇಲ್ಲಣ = ಹೊಗೆಯ ಕರಿ.

ಇಲ್ಲಲ್ಲ = ಇಲ್ಲವಲ್ಲ.

ಇಲ್ಲಲ್ಲೆ = ಇಲ್ಲವಲ್ಲೆ (ಸ್ತ್ರೀ)

ಇಲಾಜು = ಚಿಕಿತ್ಸೆ.

ಇಲಾತಿ = ಹೊರದೇಶ, ವಿದೇಶ.

ಇಲ್ಲಾಸಿ = ಇಲ್ಲಿಂದ, ಈ ಕಡೆಯಿಂದ.

ಇಲಿ = ಮೂಷಿಕ.

ಇಲಿಕಿವಿಸೊಪ್ಪು = ಬ್ರಾಹ್ಮೀ, ವಂದೆಲಗ.

ಇಲಿವಾರ = ಗಣೇಶ ಚತುರ್ಥಿಯ ಮರುದಿನ.

ಇಲ್ಲಿ = ಇಲ್ಲಿಯೇ, ನಿಂತಲ್ಲಿ, ಈ ಸ್ಥಳದಲ್ಲಿ.

ಇಲ್ಲಿಲ್ಲೇ = ಇರುವಲ್ಲಿಯೇ, ಹತ್ತಿರದಲ್ಲಿಯೇ.

ಇಲುಗು = ಎಲುಬು, ಮೂಳೆ.

ಇಲ್ಗು = ಇಲುಗು.

ಇಲ್ಲೊಂಚೂರು = ಇಲ್ಲಿ ಸ್ವಲ್ಪ, ಈ ಕಡೆ ಸ್ವಲ್ಪ.

ಇವ್ಣ = ಇವನು.
ಇವತ್ತು = ಈ ದಿನ, ಈ ದಿವಸ.
ಇವರೇ = ಗಂಡನನ್ನು ಕರೆಯುವ ಒಂದು ಬಗೆ.
ಇವಳೇ = ಹೆಂಡತಿಯನ್ನು ಕರೆಯುವ ಒಂದು ವಾಡಿಕೆ.
ಇಷ್ಟ = ಅಪೇಕ್ಷೆ, ಬಯಕೆ.
ಇಷ್ಟು = ಈ ಅಳತೆ, ಈ ಪರಿಮಾಣ.
ಇಸ = ವಿಷ, ಹಾಲಾಹಲ.
ಇಸ್ಕ = ತೆಗೆದುಕೊ, ಹಿಂದಕ್ಕೆ ಪಡೆ.
ಇಸ್ಕಂಬಾ = ಹಿಂದಕ್ಕೆ ತೆಗೆದುಕೊಂಡು ಬಾ
ಇಸ್ಕಣದು = ತೆಗೆದುಕೊಳ್ಳುವುದು.
ಇಸ್ಯ = ವಿಷಯ, ವಿಚಾರ, ಸಂಗತಿ.
ಇಸ್ಸಿ = ಗಲೀಜು, ಅಸಹ್ಯ.
ಇಸ್ತ್ರಿ = ಬಟ್ಟೆಗಳ ಮಡಿಕೆ ತೆಗೆಯುವುದು.
ಇಸ್ಬು = ಇಸುಬು, ವ್ರಣ, ಚರ್ಮರೋಗ, ಗಜಕರ್ಣ.
ಇಸ್ಮುಳ್ಳು = ಗೊಬ್ಬರ ತೆಗೆಯುವ ಕೊಕ್ಕೆ.
ಇಸ್ಕೊಡು = ಬೇರೆಯವರಿಂದ ಪಡೆದು-ಕೊಡು.
ಇಳಕ್ಲು = ಇಳಿಜಾರು ಪ್ರದೇಶ.
ಇಳಿ = ೧. ಕೆಳಗೆ ಬರುವುದು, ಕೆಳಗೆ ಹೋಗು ೨. ಸುರಿ, ಸೋರು.
ಇಳಿಗಾಲ = ಮುಪ್ಪಿನ ಕಾಲ, ಅವನತಿಯ ಕಾಲ.
ಇಳಿಜಾರು = ಎತ್ತರದಿಂದ ತಗ್ಗಾಗುತ್ತ ಬಂದ ಪ್ರದೇಶ.
ಇಳಿತೆಗೆ = ದೃಷ್ಟಿತೆಗೆ, ದೃಷ್ಟಿ ಪರಿಹಾರಕ್ಕಾಗಿ ನೀವಾಳಿಸುವುದು, ವೀಳ್ಯದೆಲೆಗೆ ಐದು ಕಣ್ಣು ಮಾಡಿ ನಿವಾಳಿ ಸುವುದು.
ಇಳಿಬಿಡು = ಮೇಲಿಂದ ಕೆಳಗೆ ನೇತಾಡುವಂತೆ ಮಾಡು.
ಇಳಿ ಬಿಸ್ಲು = ಮಧ್ಯಾಹ್ನದಿಂದ ಸಂಜೆ-ಯವರೆಗಿನ ಬಿಸಿಲು, ಪ್ರಖರ ವಾದ ಬಿಸಿಲು.
ಇಳಿಬೀಳು = ಜೋತುಬೀಳು, ಜೋಲಾಡು.
ಇಳಿಮುಖ = ಕಡಿಮೆಯಾಗುವುದು, ತಗ್ಗುವುದು.
ಇಳಿಮೋರೆ = ಜೋಲುಮುಖ, ಖಿನ್ನಮುಖ.
ಇಳಿವಯಸ್ಸು = ಮುಪ್ಪು.
ಇಳಿಸು = ಮೇಲಿಂದ ಕೆಳಕ್ಕಿಡು.
ಇಳಿಹೊತ್ತು = ಹೊತ್ತು ಮುಳುಗುವ ಸಮಯ, ಮಧ್ಯಾಹ್ನದ ನಂತರ ರಾತ್ರಿಯ ಒಳಗಿನ ಹೊತ್ತು, ಅಪರಾಹ್ನ.
ಇಳುವರಿ = ಫಸಲು, ನಿರ್ದಿಷ್ಟ ವರ್ಷದ ಫಸಲು, ಬೆಳೆ, ಪೈರು.
ಇಳ್ಳೆ = ವೀಳ್ಯ, ಎಲೆಯಡಿಕೆ.
ಇಳ್ಳೆಲೆ = ವೀಳ್ಯದೆಲೆ.

ಈ

ಈ ಕಡಿಗೆ = ಈ ಕಡೆ, ಇತ್ತ ಕಡೆ.
ಈಗ = ಈ ಕ್ಷಣ, ಈ ಕಾಲ.
ಈಗೇನಾರಾ = ಈಗ ಏನಾದರೂ.
ಈಗೆಲ್ಲಾರೂ = ಈಗ ಎಲ್ಲಾದ್ರೂ.
ಈ ಚಣ = ಈ ಕ್ಷಣ, ತಕ್ಷಣ.
ಈಜು = ಈಜಾಡು, ಈಸು, ನೀರಿನಲ್ಲಿ

ವ್ಯಾಯಾಮ ಮಾಡು, ನೀರನ್ನು (ಹೊಳೆ) ದಾಟುವ ಒಂದು ವಿಧಾನ.

ಈಟಿ – ಬರ್ಜಿ, (ಕಠಾರಿ ನೋಡಿ) ಉದ್ದನೆಯ ತುದಿಯಲ್ಲಿ ಸ್ವಲ್ಪ ಅಗಲ ಚೂಪಾಗಿರುವ ಪ್ರಾಣಿಗಳನ್ನು ಬೇಟೆಯಾಡುವ ಕಬ್ಬಿಣದ ಸಲಾಕೆ.

ಈಟು – ಇಷ್ಟು, ಸ್ವಲ್ಪ.

ಈಟೊತ್ತು = ಇಷ್ಟು ಹೊತ್ತು.

ಈಡು = ಸುಡುಗಾಡಿನಲ್ಲಿ ರಾಶಿ ಹಾಕಿದ ಕಟ್ಟಿಗೆ, ಚಟ್ಟ, ೨. ಬಂದೂಕಿಗೆ ತುಂಬುವ ಮದ್ದು, ಗುಂಡು, ೨. ಗುಂಡಿನ ಶಬ್ಧ.

ಈಡುಗಾಯಿ = ದೇವರ ಉತ್ಸವದಲ್ಲಿ ನೆಲಕ್ಕೆ ಅಪ್ಪಳಿಸಿ ಒಡೆಯುವ ತೆಂಗಿನಕಾಯಿ.

ಈಡುಹೊಡಿ = ಗುಂಡು ಹಾರಿಸು.

ಈಡೂ ಜೋಡು = ಸರಿಹೊಂದುವ ಜೋಡಿ, ಸರಿಸಮಾನವಾದ ಮದುವೆಯ ಹೆಣ್ಣು–ಗಂಡು.

ಈತರ = ಈ ರೀತಿ.

ಈಭೂತಿ = ವಿಭೂತಿ, ಬಿಳಿಯ ಬೂದಿ.

ಈಯು = ನೀಡು, ಕೊಡು.

ಈವತ್ತು = ಇವತ್ತು, ಈದಿನ.

ಈಸತಿ = ಈ ಸಲ.

ಈಸು = ೧. ಇಷ್ಟು, ಇನಿತು, ೨. ನೇಗಿಲು ಮತ್ತು ನೊಗವನ್ನು ಕೂಡಿಸುವ ಮರದ ಗಟ್ಟಿಕೋಲು, ಇದನ್ನು ಬೈನೆ ಮರದಿಂದ ಮಾಡುತ್ತಾರೆ.

ಈಸು ದಿನ = ಇಷ್ಟು ದಿನ.

ಈಸೊಂದು = ಇಷ್ಟೊಂದು.

ಈಳಿಗೆ ಮಣೆ = ತುರಿಮಣೆ, ಕಾಯಿ ತುರಿಯಲು ಮತ್ತು ತರಕಾರಿ ಹೆಚ್ಚಲು ಬಳಸುವ ಕತ್ತಿ.

ಉ

ಉಂಗ್ರ = ಉಂಗುರ, ಬೆರಳಿನ ಆಭರಣ.

ಉಂಡಡಿಕೆ = ಕತ್ತರಿಸದೆ ಬರಿದೇ ಸುಲಿದ ಅಡಿಕೆ.

ಉಂಡಾತಾ = ಊಟವಾಯಿತೇ.

ಉಂಡಾಡಿಗ = ಉಂಡು ತಿರುಗುವವ, ಸೋಮಾರಿ.

ಉಂಡ್ಯಾ = ಊಟ ಮಾಡಿದೆಯಾ?.

ಉಂಡುಗಡುಬು = ಗುಂಡಗೆ ಮಾಡಿದ ಕಡುಬು.

ಉಂಡೆ = ದುಂಡನೆಯ ವಸ್ತು, ಪೂರ್ಣವಾದುದು.

ಉಂಡೆಗಲ್ಲು = ಗುಂಡಗಿರುವ ಸಣ್ಣಕಲ್ಲುಗಳು.

ಉಂಟ = ಇದೆಯಾ.

ಉಂಟಿ = ಗಂಡಸರ ಒಂದೇ ಕಿವಿಯ ಆಭರಣ ೨. ಏಕ, ಏಕೈಕ, ಒಬ್ಬ, ಒಂಟಿ.

ಉಂಟು = ಇದೆ, ಅದೆ.

ಉಂಟ್‌ಗೇಡಿ = ಒಬ್ಬಂಟಿಗ, ಯಾರೊಂದಿಗೂ ಹೊಂದಿ

ಕೊಳ್ಳದ.

ಉಂಟ್ಕೋಳಿ = ನೆಲ ಮತ್ತು ನೀರಿನಲ್ಲೂ ವಾಸಿಸುವ ಕೋಳಿಯಂತಹ ಹಕ್ಕಿ.

ಉಂದ = ೧. ಉಚ್ಚೆ, ಮೂತ್ರ ೨. ಒಂದು ಎಂದು ಎಣಿಸುವ ಶಬ್ದ.

ಉಂದು = ಏಕ, ಒಂದು.

ಉಂಬಳಿ = ಕೊಡುಗೆ ಭೂಮಿ.

ಉಕ್ಕಡ = ಹರಿಗೋಲು.

ಉಕ್‌ತಿಳಿ = ಅನ್ನ ಬೇಯುವಾಗ ಮೇಲೆ ಬಂದು ಉಕ್ಕುವ ಮೊದಲ ತಿಳಿ.

ಉಕ್ಕರಿಸು = ಕುದಿಸು, ಬೇಯಿಸು, ಕುದಿಯುವ ನೀರಿಗೆ ಹಿಟ್ಟನ್ನು ಹಾಕಿ ಬೇಯಿಸು.

ಉಕಾನಂದಿಗೆ = ಅಡಿಗೆಮನೆಯಲ್ಲಿ ಎತ್ತರದಲ್ಲಿ ಪಾತ್ರೆಗಳನ್ನಿಡಲು ಹಾಕಿದ ಮರದ ಹಲಗೆ.

ಉಕಾನ್ಹಲಗೆ = ಉಕಾನಂದಿಗೆ.

ಉಕ್ಕು = ಹದಗೊಳಿಸಿದ ಕಬ್ಬಿಣ/ಲೋಹ.

ಉಗ್ಗಡಿಕೆ = ಉಗ್ಗು, ತೊದಲುವುವಿಕೆ, ಬಿಕ್ಕುವಿಕೆ.

ಉಗ್ರ = ೧. ತುಂಬಾ ಖಾರ ೨. ಕಠೋರ.

ಉಗಿ = ಉಗುಳು, ತುಪ್ಪು ೨. ಕೀಳುವುದು, ಕಳೆಕೀಳು, ಹುಲ್ಲುಕೀಳು.

ಉಗಿಬಂಡಿ = ರೈಲುಗಾಡಿ.

ಉಗುರು = ನಖ.

ಉಗುರು ಬೆಚ್ಚಗೆ = ಸ್ವಲ್ಪ ಬೆಚ್ಚಗೆ, ಸುಮಾರಾಗಿ ಬಿಸಿ.

ಉಗುರು ಮಡಚುವ ಶಾಸ್ತ್ರ = ಮದುವೆಯ ಹಿಂದಿನ ದಿನ ಕ್ಷೌರಿಕನಿಂದ ಮದು-ಮಗನ ಕೈಕಾಲಿನ ಉಗುರನ್ನು ಕತ್ತರಿಸಿ, ಮುಖಕ್ಷೌರ ಮಾಡಿಸುವುದು.

ಉಗುರು ಸುತ್ತು = ಉಗುರಿನ ಬಾವು.

ಉಗುಳು = ಎಂಜಲು.

ಉಗ್ಗು = ತೊದಲುವಿಕೆ, ಉಗ್ಗಡಿಕೆ.

ಉಗ್ನೆಬಳ್ಳಿ = ನೆಲದ ಮೇಲೆ ಹಬ್ಬುತ್ತದೆ, ನೇರಳೆ ಹೂವು, ಹಳದಿಹಣ್ಣು.

ಉಚ್ಚೆ = ಮೂತ್ರ, ಉಚ್ಚುಕೊಣಾದು.

ಉಚ್ಚೆಗ್ವಾತ = ದನಗಳ ಗಂಜಳ/ ಗೋಮೂತ್ರ.

ಉಚ್ಚೆಬೆಚ್ಚಗೆ = ಮೂತ್ರದಷ್ಟು ಬಿಸಿ, ಸುಮಾರಾಗಿ ಬಿಸಿ, ಉಗುರು ಬೆಚ್ಚಗೆ.

ಉಚ್ಚೆ ಚೀಲ = ಮೂತ್ರಕೋಶ, ಮೂತ್ರಪಿಂಡ.

ಉಚ್ಚುರ್ = ಬೇದಿಯಾಗು, ನೀರಾಗಿ ಸಗಣಿ ಹಾಕುವುದು.

ಉಚ್ಕೊಣದು = ಬೇದಿಯಾಗುವುದು.

ಉಟಗೊಣದು = ಧರಿಸುವುದು.

ಉಡ = ಉರಗ, ಸರೀಸೃಪ, ಹಲ್ಲಿ ಜಾತಿಯ ಪ್ರಾಣಿ.

ಉಡದಾರ =ಸೊಂಟಕ್ಕೆ ಕಟ್ಟುವ ದಾರ.

ಉಡ್ಕ = ಸುತ್ತಿಕೋ, ಬೆಸೆದುಕೋ, ನುಲಿದುಕೊಳ್ಳು.

ಉಡ್ಲಾ = ಉಟ್ಟುಕೊಳ್ಳಲಾ, ತೊಟ್ಟು ಕೊಳ್ಳಲೇ.

ಉಡಾಸು = ಬೇಕಾಬಿಟ್ಟಿ ಖರ್ಚು ಮಾಡು, ಹಾಳುಮಾಡು.

ಉಡಿ = ಪೊದೆ, ಮಟ್ಟು.

ಉಡಿ = ಮಡಿಲು.

ಉಡಿ = ಬೆಸೆಯುವುದು, ತಿರುಪುವುದು.

ಉಡಿಸು = ತೊಟ್ಟುಕೊಳ್ಳುವಂತೆ ಮಾಡು, ತೊಡಿಸು.

ಉಡ್ಕಿ ಮದುವೆ = ಹೆಣ್ಣಿನ ಮರುಮದುವೆ,

ಪುನರ್ವಿವಾಹ.

ಉಡ್ಲಿ = ಉಟ್ಟುಕೊಳ್ಳಲಿ, ತೊಟ್ಟುಕೊಳ್ಳಲಿ.

ಉಡೀಗ್ಹಾಕು = ರಕ್ಷಣೆಗಾಗಿ ಇನ್ನೊಬ್ಬರಿಗೆ ಒಪ್ಪಿಸುವುದು.

ಉಡು = ಧರಿಸು, ತೊಡು.

ಉಡುಕಿ = ಕೂಡಾವಳಿ.

ಉಡುಗು = ಕುಗ್ಗು, ಕಡಿಮೆಯಾಗು, ನಿರ್ನಾಮವಾಗು.

ಉಡ್ರು = ಛಳಿ, ನಡುಕ, ಥಂಡಿ.

ಉಡ್ಸು = ಉಡಿಸು, ತೊಡಿಸು.

ಉಣಗೋಲು = ದಾರಿಗೆ ಅಡ್ಡವಿರುವ ಬೇಲಿಗೆ ಹಾಕಿರುವ ಅಡ್ಡಕೋಲು.

ಉಣಿಸು = ಊಟ ಮಾಡುವ ಆಹಾರ, ೨. ತಿನ್ನಿಸು, ಊಟ ಮಾಡಿಸು.

ಉಣುಚು = ಕಳಚು, ಬಿಚ್ಚಿಡು, ಬಿಚ್ಚು.

ಉಣ್ಚು = ಉಣುಚು.

ಉಣ್ಣು = ೧. ಊಟ ಮಾಡು, ತಿನ್ನು, ೨.ಅನುಭವಿಸು.

ಉಣ್ಸು = ಉಣಿಸು, ತಿನ್ನಿಸು.

ಉಣ್ಣೆ = ತುಪ್ಪಟ, ಕುರಿಗಳ ಮೈಮೇಲಿನ ಕೂದಲು. ೨. ಒಣಸು, ಚಿಗಟ.

ಉತ್ತರಮುಖಿ = ದಿಕ್ಸೂಚಿ, ಉತ್ತರ ದಿಕ್ಕು ತೋರಿಸುವ ಯಂತ್ರ.

ಉತ್ತರಣೆ ಗಿಡ = ದೂರದೂರಕ್ಕೆ ಎಲೆಯಿರುವ ಸಣ್ಣಗಿಡ, ಕಡ್ಡಿಯಂತಹ ಮುಳ್ಳುಗಳನ್ನು ಹೊಂದಿದೆ, ಪೋಣಿಸಿದಂತಿರುವ ತೆನೆ ಬಟ್ಟೆ/ಜಾನುವಾರುಗಳ ಮೈಗೆ ಅಂಟಿಕೊಳ್ಳುತ್ತದೆ.

ಉತ್ಪತ್ತಿ = ಬೆಳೆ, ಹುಟ್ಟುವಳಿ, ವರಮಾನ.

ಉತ್ಮ = ಉತ್ತಮ.

ಉತ್ರಾಣಿ ಕಡ್ಡಿ = ಉತ್ತರಣೆಯ ತೆನೆ. ಗೋಪೂಜೆ, ಬಲೀಂದ್ರನ ಪೂಜೆಗೆ ಬಳಸುತ್ತಾರೆ.

ಉತ್ತುತ್ತೆ = ಒಣ ಖರ್ಜೂರ.

ಉತ್ರೆ = ಒಂದು ಮಳೆನಕ್ಷತ್ರದ ಹೆಸರು, ಉತ್ತರಾ ನಕ್ಷತ್ರ.

ಉತ್ಲೇಖ್ನ = ಉತ್ತಲೇಖನ, ಬಾಯಲ್ಲಿ ಹೇಳಿ ಬರೆಸುವುದು, ನೋಡದೇ ಬರೆಯುವುದು.

ಉತ್ಪ್ರೇಕ್ಷೆ = ಅಧಿಕವಾಗಿ ವರ್ಣಿಸುವುದು, ಇಲ್ಲದಿರುವುದನ್ನು ಸೇರಿಸಿ ಹೇಳುವುದು.

ಉದ್ದ = ದೀರ್ಘ, ನೀಳ, ಅಗಲದ ವಿರುದ್ಧ.

ಉದ್ದಕಾಲ್ಮಣೆ = ಉದ್ದಕಾಲುಗಳುಳ್ಳ ಕುಳಿತುಕೊಳ್ಳುವ ಮಣೆ, ಬೆಂಚು.

ಉದ್ದಪನ್ನ = ಬಟ್ಟೆಯ ಉದ್ದಳತೆ.

ಉದಾರ = ಧಾರಾಳ, ಧಾರಾಳ ಸ್ವಭಾವದ, ಕೊಡುಗೈಯ.

ಉದಾರಿ = ಧಾರಾಳವಾಗಿ ಕೊಡುವವನು, ದಾನಶೀಲ.

ಉದಾಸ್ನ = ಉದಾಸೀನತೆ, ಗಮನ-ಕೊಡದಿರುವಿಕೆ

ಉದ್ಧಾರ = ಸಂರಕ್ಷಣೆ, ಕಾಪಾಡುವುದು.

ಉದಿ = ಮಣ್ಣಿನ ಒಡ್ಡು, ಮಣ್ಣಿನ ಅಡ್ಡಗಟ್ಟೆ

ಉದ್ದಿಮಣೆ = ನೆಲಮಟ್ಟದಲ್ಲಿ ಕುಳಿತುಕೊಳ್ಳಲು ಉದ್ದನೆಯ ಹಲಗೆ/ಮಣೆ.

ಉದ್ದಿಮೆ = ಕೆಲಸ, ಉದ್ಯೋಗ.

ಉದುರಿಸು = ಬೀಳುವಂತೆ ಮಾಡು, ಕೆಡವು, ಚೆಲ್ಲು.

ಉದುರು = ಕೆಳಗೆ ಬೀಳು, ೨. ಒಂದಕ್ಕೊಂದು ಅಂಟದೆ

ಇರುವುದು, ೩. ಬಿಡಿಸಿದ ಅಡಿಕೆ ಕಾಯಿಗಳು, (ಉದುರನ್ನ).

ಉದುರ್ಸು = ಉದುರಿಸು.

ಉದ್ದು = ಒಂದು ದ್ವಿದಳ ಧಾನ್ಯ.

ಉದ್ಗುಂಟೆ = ದನಕರುಗಳ ಕೊರಳಿಗೆ ಕಟ್ಟುವ ಉದ್ದ ಮರದ ತುಂಡು.

ಉದ್ದೇಶ = ಗುರಿ ಧ್ಯೇಯ.

ಉದ್ಯೋಗ = ವೃತ್ತಿ, ಕಸಬು.

ಉಪಕಸುಬು = ಅಡ್ಡಕಸುಬು, ಉದ್ಯೋಗದ ಜೊತೆಗೆ ಬೇರೆ ಕೆಲಸ ಮಾಡುವುದು.

ಉಪಕಾರ = ಸಹಾಯ, ನೆರವು.

ಉಪಕಾರಿ = ಸಹಾಯ ಮಾಡುವವನು.

ಉಪಟಳ = ಕಿರುಕುಳ, ತೊಂದರೆ.

ಉಪದ್ರ = ಕಾಟ, ತೊಂದರೆ, ಕೇಡು, ಹಾವಳಿ.

ಉಪಯೋಗ = ಪ್ರಯೋಜನ.

ಉಪ್ಪರಿಗಿ = ಮಹಡಿ, ಸೌಧ.

ಉಪಾಯ = ಯುಕ್ತಿ, ಹೊಂಚು.

ಉಪ್ಚಾರ = ಉಪಚರಿಸುವುದು, ಉಪಚಾರ, ಆಚರಣೆ, ಸತ್ಕಾರ.

ಉಪ್ಪಾರ = ಗೋಡೆ/ಮನೆ ಕಟ್ಟುವವನು.

ಉಪಾಸ = ಉಪವಾಸ, ಹಸಿದಿರುವುದು, ಊಟ ಮಾಡದಿರುವುದು.

ಉಪ್ಪಾಳೆ ಮರ = ಒಂದು ಕಾಡಿನ ನಾಟದ ಮರ, ಬೇಗ ಗೆದ್ದಲು ಬರವುದರಿಂದ ಹೊಗೆತಾಗುವಲ್ಲಿ ಬಳಸುತ್ತಾರೆ.

ಉಪ್ಪಿನಂಡೆ = ಉಪ್ಪನ್ನು ತುಂಬಿಡುವ ಬಿದಿರಿನ ಅಂಡೆ.

ಉಪ್ಪಿನಣಿ = ಉಪ್ಪಿನ ಹಣಿ, ಉಪ್ಪಿನ ದ್ರಾವಣ.

ಉಪ್ಪಿನವಗರು = ತುಂಬಾ ಉಪ್ಪಾಗಿರುವುದು.

ಉಪ್ಪಿನವರಸಿಂಗೆ = ಪದಾರ್ಥಗಳು ವಿಪರೀತ ಉಪ್ಪಾಗಿರುವುದು (ಅಲಂ).

ಉಪ್ಪು = ಲವಣ.

ಉಪ್ಪುಕಾರ ಹಚ್ಚು = ಇಲ್ಲದ್ದನ್ನು ಸೇರಿಸಿ ಹೇಳು. (ಅಲಂ)

ಉಪ್ಪುಚಪ್ಪೆ ನೋಡು = ಮಾಡಿದ ಅಡಿಗೆಯ ರುಚಿನೋಡು.

ಉಪ್ತುಂಡು = ಉಪ್ಪು ಹಾಕಿ ಹುರಿದು ಬೇಯಿಸಿದ ಮಾಂಸದ ಚೂರುಗಳು.

ಉಪ್ತುಪ್ಪ = ಉಪ್ಪು ಹಾಕಿ ಕಾಯಿಸಿದ ಬೆಣ್ಣೆ, ಕಾಯಿಸಿದ ತುಪ್ಪದ ಗಸಿ.

ಉಫ್ = ಬಾಯಿಂದ ಗಾಳಿಯನ್ನು ಸಶಬ್ಧವಾಗಿ ಊದಿದಾಗ ಹೊರಡುವ ಶಬ್ದ.

ಉಬ್ಬರಿಸು = ಬಾತುಕೊಳ್ಳು, ಊದಿಕೊಳ್ಳು.

ಉಬ್ಬರ್ಸು = ಅಜೀರ್ಣದಿಂದ, ಹೊಟ್ಟೆ ಉಬ್ಬರಿಸುವುದು, ಹೊಟ್ಟೆಗೆ ಗಾಳಿ ಸೇರಿ ದಪ್ಪಗಾಗು.

ಉಬ್ಬಲ್ಲು = ತುಟಿ ಮೀರಿದ ಹಲ್ಲು, ಹಲ್ಲು ಮುಂದಕ್ಕೆ ಬೆಳೆದಿರುವುದು.

ಉಬ್ಬಳಿಕೆ = ವಾಕರಿಕೆ, ವಾಂತಿ ಬಂದಂತಾಗುವುದು.

ಉಬ್ಸ = ಉಬ್ಬಸ, ಅಸ್ತಮ, ಗೂರಲು.

ಉಬ್ಬಿ ಬರುವುದು = ಉಬ್ಬರಿಸು

ಉಬ್ಬಿಸು = ಹೊಗಳು, ಉತ್ತೇಜಿಸು.

ಉಬ್ಬು = ೧. ಎತ್ತರದ ದಿಬ್ಬ ೨. ಹೆಮ್ಮೆ

ಪಡು, ಗರ್ವ ಪಡು, ಬೀಗು.
ಉಬೆ = ಆವಿ, ಸೆಕೆ, ಶಾಖ.
ಉಬ್ಬೆಹಾಕು = ಬಲಿತ ಕಾಯಿಗಳನ್ನು ಬೇಗ ಹಣ್ಣು ಮಾಡಲು ಗಾಳಿ ತಾಗದಂತೆ ಅಡೆ ಹಾಕುವುದು.
ಉಮ್ಮಳ = ದುಃಖ.
ಉಮ್ಮಳಿಸು = ತಡೆಯಲಾಗದ ದುಃಖ, ದುಃಖ ಒತ್ತರಿಸಿಕೊಂಡು ಬರುವುದು, ಮರುಕಳಿಸು
ಉಮಿ = ಬತ್ತದ ಸಿಪ್ಪೆ, ಧಾನ್ಯದ ಹೊಟ್ಟು
ಉಮಿಕರಿ = ಬತ್ತದ ಹೊಟ್ಟಿನ ಬೂದಿ.
ಉಮೇದು = ೧. ಉತ್ಸಾಹ, ೨. ಉತ್ತೇಜನ.
ಉಯ್ಲಿ = ಉಮಿ.
ಉಯಿಲು = ಮೃತ್ಯುಪತ್ರ.
ಉಯ್ಯಾಲೆ = ಜೋಕಾಲಿ, ತೂಗುಮಣೆ.
ಉರ್ತ = ಉರಿತ.
ಉರ್ಸ = ವರ್ಷ.
ಉರಿ = ಬೆಂಕಿ, ಜ್ವಾಲೆ, ಬೆಂಕಿಯ ನಾಲಗೆ.
ಉರಿ = ನೋವು, ಗಾಯದ ಬೇನೆ.
ಉರಿ = ಸೊಕ್ಕು, ಗರ್ವ.
ಉರಿಗಜ್ಜಿ = ಕೆರೆದರೆ ನೀರು ಬಂದು ಉರಿಯಾಗುವ ತುರಿಕಜ್ಜಿ.
ಉರಿಗಡ್ಡೆ = ಮೂಲವ್ಯಾಧಿ, ಗೆಂಡೆರೋಗ.
ಉರಿಗಾರ = ತುಂಬಾ ಖಾರ.
ಉರಿಚಟ್ಲೆ = ಮೈಗೆ ತಾಗಿದರೆ ಉರಿ ಮತ್ತು ಕೆಂಪುಗುಳ್ಳೆಗಳನ್ನೇಳಿಸುವ ಗಿಡ/ ಅದರ ಎಲೆ.
ಉರಿಚಟ್ಲೆ = ಮಾತು ಮತ್ತು ಕೃತಿಗಳಿಂದ ಬೇರೆಯವರಿಗೆ ತೊಂದರೆ ಕೊಡುವವರು. (ಅಲಂ)
ಉರಿತ = ಉರ್ತ, ಉರಿಯುವಿಕೆ, ನೋವಾಗುವಿಕೆ.
ಉರಿಮೋರೆ = ಸಿಡುಕಿನ ಮುಖ, ಮುಖ ಗಂಟಿಕ್ಕಿಕೊಳ್ಳುವವರು.
ಉರಿಸೀತ = ಉಷ್ಣದಿಂದಾಗುವ ನೆಗಡಿ.
ಉರುಚಂಡೆ = ಉರಿಚಟ್ಲೆ.
ಉರುಟಂಡೆ = ಊದುಕೊಳವೆ.
ಉರುಟು = ೧. ಗುಂಡಗಿರುವುದು ೨. ಊದು, ಉಬ್ಬು.
ಉರ್ಡು = ಜಗಳವಾಡು, ಹೋರಾಡು, ಕುಸ್ತಿ ಮಾಡು. ೨. ಉರುಳು, ಹೊರಳು.
ಉರುಡಾಟ = ಜಗಳ.
ಉರುಡಾಡು = ಜಗಳವಾಡು, ಉರ್ಡು, ೨. ಹೊರಳಾಡು.
ಉರುಳು = ೧. ಹೊರಳಾಡು ೨. ಹಗ್ಗದ ಕುಣಿಕೆ.
ಉರುಹೊಡಿ = ಕಂಠಪಾಠಮಾಡು, ಹೇಳಿದ್ದೆ ಹೇಳು.
ಉರ್ಚು = ಬೇದಿಯಾಗು.
ಉರ್ಚುಕೊಣದು = ಜಾನುವಾರುಗಳು ನೀರಾಗಿ ಸಗಣಿ ಹಾಕುವುದು.
ಉರ್ದುಬೀಳು = ಸಿಟ್ಟಿಗೇಳು, ಕೋಪಗೊಳ್ಳು.
ಉರ್ಲು = ನೇಣು, ಹಗ್ಗ.
ಉರ್ಲುಹೊಡಿ = ಉಳುಮೆ ಮಾಡುವಾಗ/ ಗಾಡಿ ಹೊಡೆಯುವಾಗ ಹಾಡುವ ರಾಗ.
ಉರ್ಮೂತ್ರ = ಉರಿ ಮೂತ್ರ, ಮೂತ್ರ ವಿಸರ್ಜಿಸುವಾಗ ಉರಿ ಯಾಗುವುದು.

ಉರೇಕೊಳ್ಳಿ = ಬೆಂಕಿ ಉರಿಯುತ್ತಿರುವ ಸೌದೆ.

ಉಲ್ಡಾಕು = ಉರುಡು ಹಾಕು, ಮಗುವನ್ನು ಕೆಳಗೆ ಮಲಗಿಸು.

ಉಲ್ಡಾಸ್ಗಿ = ಉರುಡು ಹಾಸಿಗೆ, ಮಗುವನ್ನು ಉರುಳು ಹಾಕುವ ಹಾಸಿಗೆ.

ಉಲ್ಬು = ಊದು (ಬೆಂಕಿ ಊದು).

ಉಲ್ಡು = ಜಗಳವಾಡು, ಕುಸ್ತಿ ಮಾಡು, ಹೊಡೆದಾಡು.

ಉಷ್ಣ = ಶಾಖ, ಬಿಸಿ, ಶರೀರದ ಉಷ್ಣತೆ.

ಉಸ್ಸಪ್ಪ = ದಣಿವಾರಿಸಿಕೊಳ್ಳಲು ಕುಳಿತುಕೊಳ್ಳುವಾಗ ಹೇಳುವ ಉದ್ಗಾರ.

ಉಸಾಬರಿ = ೧. ಸಹವಾಸ, ೨. ಹಸ್ತಕ್ಷೇಪ.

ಉಸ್ರಾಡು = ಉಸಿರಾಡು, ಉಸಿರು ಬಿಟ್ಟು ತೆಗೆದುಕೊಳ್ಳುವುದು.

ಉಸ್ಲಿ = ಕಾಳುಗಳನ್ನು ಬೇಯಿಸಿ ಮಾಡಿದ ಪಲ್ಯ.

ಉಸುಕು = ಮರಳು.

ಉಸುಬು = ಕೆಸರು, ಕಂಪ, ಕಾಲಿಟ್ಟರೆ ಹೂತುಹೋಗುವಂತಹ ಹೂಳು.

ಉಸುರು = ೧.ಉಸಿರು, ಶ್ವಾಸ, ಪ್ರಾಣವಾಯು ೨.ಹೇಳು.

ಉಸುರೊಡಿ (ಅಲಂ)= ಗುಟ್ಟಿನ ವಿಚಾರವನ್ನು ಹೇಳು, ಗುಟ್ಟನ್ನು ಬಿಟ್ಟುಕೊಡು.

ಉಸ್ತುವಾರಿ = ಮೇಲ್ವಿಚಾರಣೆ.

ಉಸ್ಬು = ಉಸುಬು.

ಉಸ್ರು ಕಟ್ಟು = ಉಸಿರು ಬಿಗಿ ಹಿಡಿ, ಶ್ವಾಸ ಬಂದು ಮಾಡು.

ಉಸ್ಬೆ ಮಳೆ = ಪುಷ್ಯ ನಕ್ಷತ್ರದ ಮಳೆ.

ಉಳ = ಉಳಿ, ಕುಳ.

ಉಳಕ = ಉಳಿದುಕೋ, ತಂಗು.

ಉಳ್ಳ = ಹಗ್ಗ, ನೇಣು, ಉರುಳು.

ಉಳ್ಳಹಾಕು = ಹಗ್ಗವನ್ನು ಉರುಳು ಮಾಡಿ ಹಾಕು, ಕುಣಿಕೆ ಹಾಕು, ಸರಗುಣಿಕೆ ಹಾಕು, ಹಗ್ಗದಿಂದ ಉಳ್ಳ ಮಾಡಿ ಸಣ್ಣಪ್ರಾಣಿಗಳನ್ನು ಹಿಡಿಯುವುದು.

ಉಳ್ಳಾಕು = ಮಲಗಿಸು.

ಉಳ್ಳಾಡು = ಹೊರಳಾಡು.

ಉಳಿ = ಚಾಣ, ಟಂಕ.

ಉಳಿ = ೧.ಉಳಿವು, ೨. ತೊರೆ, ಬಿಡು.

ಉಳಿ = ಬಾಕಿ, ಹೊರತು.

ಉಳಿ = ತಂಗು, ನಿಲ್ಲು.

ಉಳಿಗಾಲ = ಜೀವಿಸುವ ಅವಕಾಶ.

ಉಳಿತಾಯ = ಮಿಗುವಿಕೆ, ಲಾಭ.

ಉಳಿಸು = ಬದುಕಿಸು, ೨. ಮಿಕ್ಕಿಸು.

ಉಳ್ಕಿ = ಲಾಭ, ಮಿಕ್ಕಿದ, ಉಳಿದ.

ಉಳು = ಉಳುಮೆ ಮಾಡು, ನೇಗಿಲು ಹೊಡೆ.

ಉಳುಕು = ನರ ಹೊರಳುವಿಕೆ.

ಉಳುಮೆ = ಉಳುವಿಕೆ, ಬೇಸಾಯ.

ಊ

ಊಟ = ಭೋಜನ, ಬೇಯಿಸಿದ ಆಹಾರ.

ಊಟ ಮಾಡು = ಆಹಾರ ಸೇವಿಸು.

ಊಡಿಸು = ತಿನ್ನಿಸು, ಉಣ್ಣಿಸು.

ಊಡು = ತಿನ್ನು, ಕುಡಿಸು, ಉಣ್ಣಿಸು.

ಊಡು = ಹಚ್ಚು, ಬಳಿ.
ಊತ = ಊದಿಕೊಳ್ಳುವಿಕೆ.
ಊದಿನ ಕಡ್ಡಿ = ಊದುಬತ್ತಿ.
ಊದು = ನುಡಿಸು, ಬಾರಿಸು.
ಊದುಬತ್ತಿ = ಗಂಧದ ಕಡ್ಡಿ, ಅಗರಬತ್ತಿ.
ಊದುಗೊಳವೆ = ಉರುಟಂಡೆ, ಬೆಂಕಿ ಹೊತ್ತಿಸಲು ಗಾಳಿ ಊದುವ ಕೊಳವೆ.
ಊನ = ಕುಂದು, ಕೊರತೆ, ಅಂಗಹೀನತೆ, ಅಂಗಹೀನ.
ಊನಿ = ಅಂಕವಿಕಲೆ. (ಸ್ತ್ರೀ)
ಊರ = ಗಾತ, ಆಳ.
ಊರು = ಹಳ್ಳಿ, ಪಟ್ಟಣ, ಮನೆ/ಜನರ ವಾಸಸ್ಥಳ.
ಊರು = ೧. ನೆಲಸು, ಸ್ಥಿರವಾಗು, ೨. ನಾಟು, ನೆಡು.
ಊರುದು = ಊರುವುದು, ನೆಡುವುದು.
ಊರ್ಜಿತ = ಸಿದ್ಧಿ, ಏಳಿಗೆಯನ್ನು ಪಡೆಯುವುದು.
ಊಸರೊಳ್ಳಿ = ಓತಿಕ್ಯಾತ, ಗೋಸುಂಬೆ.
ಊಹ್ಞು = ಇಲ್ಲ, ಆಗಲ್ಲ, ಆಗುವುದಿಲ್ಲ.
ಊಳು = ಕಿರುಚು, ಬೊಬ್ಬೆ, ಕೂಗು.
ಊಳಿಡು = ಗಟ್ಟಿಯಾಗಿ ಕೂಗು, ಅರಚು.
ಊಳಿಗ = ಕೆಲಸ, ಸೇವೆ.

ಋ

ಋಜು = ಸಹಿ.
ಋಜುವಾತು = ಸಾಕ್ಷಿ.
ಋಣ = ಹಂಗು, ಸಾಲ, ಕಡ.
ಋಣಾನುಬಂಧ = ಸ್ನೇಹ ಸಂಬಂಧ, ಪೂರ್ವ ಜನ್ಮದ ಬಾಂಧವ್ಯ.
ಋತು = ಕಾಲ, ಎರಡೆರಡು ತಿಂಗಳ ಅವಧಿ (ಗ್ರೀಷ್ಮ, ವಸಂತ, ಇತ್ಯಾದಿ ಋತುಗಳು).
ಋತು = ಮುಟ್ಟು, ರಜಸ್ವಲೆ, ಮೈನೆರೆ.
ಋತುವಾಗುವುದು=ರಜಸ್ವಲೆಯಾಗುವುದು, ಮೈನೆರೆಯುವುದು, ಮೊದಲ ಸರ್ತಿ ಮುಟ್ಟಾಗುವುದು (ರಕ್ತಸ್ರಾವವಾಗು).
ಋತುಮತಿ = ಮೈನೆರೆದವಳು.
ಋಷಿ = ತಪಸ್ಸು ಮಾಡುವವನು .

ಎ

ಎಂಜಲು = ಉಗುಳು, ತಿಂದ ನಂತರ ಕೈ, ಬಾಯಿ, ಎಲೆಗೆ ಮುಟ್ಟಿದ ಆಹಾರ.
ಎಂತ = ಏನು.
ಎಂತಕೆ = ಯಾಕೆ.
ಎಂತದಂತ = ಏನೆಂದು.
ಎಂತಾಭರ = ಎಷ್ಟು ಬಲವಾಗಿ, ಎಷ್ಟು ಜೋರಾಗಿ.
ಎಂತಾರೂ = ಏನಾದ್ರೂ, ಹೇಗಾದರೂ
ಎಂತು = ಹೇಗೆ, ಯಾವ ರೀತಿ.
ಎಂದು = ಯಾವ ದಿನ, ಯಾವಾಗ.
ಎಂಟು = ಎಂಟರ ಸಂಖ್ಯೆ.
ಎಂಟೆಂಟು = ಎಂಟಕ್ಕೆ ಎಂಟನ್ನು ಕೂಡಿಸುತ್ತಾ ಹೋಗು.

ಎಂಟ್ನೂರು = ಎಂಟನ್ನು ನೂರರಿಂದ ಗುಣಿಸಿದ್ದು.
ಎವ್ನೆ = ಎವೆ, ಕಣ್ಣಿನ ರೆಪ್ಪೆ.
ಎವ್ನೆಯಿಕ್ಕು = ಕಣ್ಣು ಮಿಟುಕಿಸದೆ ನೋಡು, ದೃಷ್ಟಿಯಿಡು.
ಎಕರೆ = ನಲವತ್ತು ಗುಂಟೆಗಳ ಭೂಮಿಯ ಅಳತೆ.
ಎಕ್ಕಡ = ಮೆಟ್ಟು, ಪಾದರಕ್ಷೆ, ಚಪ್ಪಲಿ.
ಎಕ್ಕು = ಎಟಕು.
ಎಕ್ಕೆಗಿಡ = ಅಗಲ ಎಲೆಯ ಪೊದೆ ಯಂತಹ ಗಿಡ, ಬಿಳಿ ಮತ್ತು ಬೂದು ಬಣ್ಣದ ಹೂವುಗಳು, ಔಷಧಿಯುಕ್ತ.
ಎಗರು = ನೆಗೆ, ಹಾರು.
ಎಗ್ಗ = ಒರಟ, ದಡ್ಡ.
ಎಗ್ಗುತಗ್ಗು = ನಾಚಿಕೆ, ಸಂಕೋಚ, ಮುಗ್ಧತೆ.
ಎಚ್ಚರ = ನಿದ್ರೆಯಿಂದ ಏಳುವುದು, ಜಾಗ್ರತೆ.
ಎಚ್ಚರ ತಪ್ಪು = ಮೂರ್ಛೆ ಹೋಗು, ಮೈ ಮರೆ.
ಎಚ್ಚರಿಕೆ = ಜಾಗರೂಕತೆ.
ಎಟಕು = ನಿಲುಕು, ಸಿಕ್ಕುವಿಕೆ.
ಎಡ = ವಾಮಭಾಗ.
ಎಡಕಲು = ಅಡಿಗೆ ಮಾಡಿದ ಮಡಕೆಗಳನ್ನು ಒಂದರ ಮೇಲೊಂದು ಜೋಡಿಸಿಡುವ ಸಿಕ್ಕ.
ಎಡಗಣ್ಣು ಹಾರು = ಎಡದ ಕಣ್ಣು ಅದುರು, ಅಶುಭ ಸೂಚಕ ಎಂಬ ನಂಬಿಕೆ. (ಅಲಂ)
ಎಡಗು = ಎಡವು, ತಪ್ಪು ನಡೆ, ನಡೆಯುವಾಗ ಕಾಲಿಗೆ ಅಡ್ಡಿ ಯುಂಟಾಗುವುದು.
ಎಡಚ = ಲೊಡ್ಡ, ಎಡಗೈ ಉಪಯೋಗಿಸಿ ಹೆಚ್ಚು ಕೆಲಸಮಾಡುವುದು.
ಎಡಬಿಡಂಗಿ = ಯಾವುದೂ ಸುಸೂತ್ರ ವಿಲ್ಲದ.
ಎಡಬಿಡ್ದೆ = ಸತತವಾಗಿ, ನಿಲ್ಲದೆ ಒಂದೇ ಸಮನೆ.
ಎಡವಟ್ಟು = ತೊಂದರೆ, ಕ್ರಮ ತಪ್ಪು.
ಎಡೆ = ಜಾಗ, ಸ್ಥಳ, ತಾವು.
ಎಡೆ = ದೆವ್ವ/ದೇವರಿಗಿಟ್ಟ ನೈವೇದ್ಯದ ಅಡಿಗೆ/ಎಲೆ.
ಎಡೆಹಾಕು = ದೆವ್ವ, ದೇವರು ಅಥವಾ ಹಿರಿಯರಿಗೆಂದು ಅಡಿಗೆ ಮಾಡಿ ಬಡಿಸುವುದು.
ಎಡ್ರುತೊಡ್ರು = ಅಡ್ಡಿ – ಆತಂಕ, ತೊಂದರೆ ತಾಪತ್ರಯ, ಕಷ್ಟ–ನಷ್ಟ.
ಎಡ್ದೆ ಕಡೆ = ಎಡಭಾಗ.
ಎಣಸು = ಎಣಿಸು, ಲೆಕ್ಕಹಾಕು, ಗುಣಿಸು.
ಎಣೆ = ಸಮ, ಸರಿ, ಸಾಟಿ.
ಎಣೆಯಾಟ = ಗಂಡು ಮತ್ತು ಹೆಣ್ಣು ಹಾವುಗಳ ಕೂಡುವಿಕೆ.
ಎಣ್ಣೆ = ತೈಲ.
ಎಣ್ಣೆ ಅರಿಸ್ನ = ಎಣ್ಣೆ ಮತ್ತು ಅರಿಸಿನ ಬೆರೆಸಿ ಮದುಮಕ್ಕಳಿಗೆ ಹಚ್ಚಿ ಸ್ನಾನ ಮಾಡಿಸುವ ಶಾಸ್ತ್ರ.
ಎಣ್ಣೆಗೆಂಪು = ಕಪ್ಪು ಮತ್ತು ಕೆಂಪುಮಿಶ್ರಿತ ಬಣ್ಣ.
ಎಣ್ಣೆಗಪ್ಪು = ಕಪ್ಪು ಮತ್ತು ಬಿಳಿ ಮಿಶ್ರಿತ ಬಣ್ಣ.
ಎಣ್ಣೆ ಚಟಿಗೆ = ಎಣ್ಣೆಯನ್ನು ಉಪಯೋಗಿಸಲು ಹಾಕಿಡುವ ಸಣ್ಣ ಕುಡಿಕೆ.

ಎಣ್ಣು = ಚಿಂತಿಸು, ನೆನಪು ಮಾಡಿಕೊಳ್ಳುವುದು, ಯೋಚಿಸುವುದು.

ಎತ್ತ = ಯಾವ ಕಡೆ, ಯಾವ ಸ್ಥಳ, ಯಾವ ದಿಕ್ಕು.

ಎತ್ಕಟ್ಟು = ಚಾಡಿ ಹೇಳು, ಒಬ್ಬರ ವಿರುದ್ಧ ಇನ್ನೊಬ್ಬರಿಗೆ ದ್ವೇಷ ಬೆಳೆಸು.

ಎತ್ಗ = ಎತ್ತಿಕೋ, ಹೊತ್ತುಕೋ.

ಎತ್ತಂಗ್ಡಿ = ಸ್ಥಳ ಖಾಲಿ ಮಾಡು, ಊರು ಬಿಡು.

ಎತ್ಲಾಗ = ಯಾವ ಕಡೆ.

ಎಂತಾರೂ = ಏನಾದ್ರೂ.

ಎತ್ತಿನ ಗಾಡಿ = ಎತ್ತಿನ ಬಂಡಿ.

ಎತ್ತಿನ ಗುಡ್ಡ = ಸಮವಯಸ್ಸಿನ/ಯೌವ್ವನದ ಎತ್ತು, ಗಂಡುಹಸು.

ಎತ್ತು = ಮೇಲಿರಿಸು, ಮೇಲಕ್ಕೆ ತೆಗಿ.

ಎತ್ತು = ಬಸವ, ಗೂಳಿ.

ಎದಿಗಾರ = ಧೈರ್ಯವಂತ.

ಎದಿರು = ಇದಿರಾಗು, ಸಮ್ಮುಖ.

ಎದಿರುಗೊಳ್ಳು = ಸ್ವಾಗತಿಸು.

ಎದುರಾಡು = ವಿರೋಧಿಸಿ ಮಾತಾಡು.

ಎದುರುಗಡೆ = ಮುಂದೆ, ಸಮ್ಮುಖದಲ್ಲಿ.

ಎದೆ = ಹೃದಯ, ವಕ್ಷ, ಸ್ತನಗಳು.

ಎದೆ ಒಣ್ಗದು = ಗಂಟಲೊಣಗು, ನೀರಡಿಕೆಯಾಗು.

ಎದೆ ಒಡೆಯುವುದು = ಹೃದಯಸ್ತಂಭನ.

ಎದೆಗಾರ್ಕೆ = ಧೈರ್ಯ, ದಿಟ್ಟತನ.

ಎದೆ ಚಕ್ಕೆ = ಪ್ರಾಣಿಗಳ ಎದೆಯ ಮುಂಭಾಗದ ಮೂಳೆ.

ಎದೆಬಡ್ಕಣದು = ಹೃದಯ ಜೋರಾಗಿ ಬಡಿದುಕೊಳ್ಳು, ಎದೆ ಬಿರಿಯೆ ಅಳು.

ಎದೆಹೊಡ್ಕೊಣಾದು = ಹೃದಯದ ಬಡಿತ ಜಾಸ್ತಿಯಾಗು.

ಎದ್ನೋ ಬಿದ್ನೋ ಅಂತ = ಅವಸರದಲ್ಲಿ ಎಂದು ಹೇಳುವುದು.

ಎನ್ನಿಸು = ಅನ್ನಿಸುವುದು.

ಎನ್ನು = ಹೇಳು, ನುಡಿ, ಮಾತಾಡು, ಅನ್ನು.

ಎಪ್ಪತ್ರ ಕೆಮ್ಮು = ನಾಯಿ ಕೆಮ್ಮು, ಎಡೆಬಿಡದೆ ಬರುವ ಕೆಮ್ಮು.

ಎಪ್ಪೆ = ಮೋಸ.

ಎಪ್ಪೆಯಿಡು = ಮೋಸಮಾಡು.

ಎಬ್ಬಕ್ಕೆ = ಓಡಿಸುವುದಕ್ಕೆ .

ಎಬ್ಬು = ಓಡಿಸು.

ಎಬ್ಸು = ಎಬ್ಬಿಸು, ಏಳುವಂತೆ ಮಾಡು.

ಎಮ್ಮೆ = ಮಹಿಷ, ಒಂದು ಜಾನುವಾರು.

ಎಮ್ಮೆ ತಮ್ಮಣ್ಣ = ಮೂರ್ಖ, ಹೆಡ್ಡ, ದಡ್ಡ.

ಎರಕ = ಕಾಯಿಸಿದ ಲೋಹವನ್ನು ಅಚ್ಚಿಗೆ ಹಾಕುವುದು.

ಎರಚಲು = ಎರಚುತ್ತಾ ಬೀಳುವ ಮಳೆ ನೀರು, ಇರುಸ್ಲು.

ಎರಗು = ಬಾಗು, ಅಡ್ಡಬೀಳು, ಮೇಲೆ ಬೀಳು, ನಮಸ್ಕಾರ ಮಾಡು.

ಎರಡೆರಡು = ಎರಡಕ್ಕೆ ಇನ್ನೆರಡನ್ನು ಸೇರಿಸುತ್ತಾ ಹೋಗು.

ಎರಲೆ = ಜಿಂಕೆ.

ಎರಿಯಪ್ಪ = ಅಕ್ಕಿ ಬೆಲ್ಲದ ತಿಂಡಿ.

ಎರೆ = ಎರೆಭೂಮಿ, ಕಪ್ಪು ಮಣ್ಣಿನ ಭೂಮಿ.

ಎರೆ = ಸುರಿ, ಹೊಯ್ಯು, ಸ್ನಾನ ಮಾಡಿಸು.

ಎರೆಡು = ಎರಡರ ಸಂಖ್ಯೆ.

ಎರೆಹುಳ = ಮಣ್ಣಿನಲ್ಲಿರುವ ಹುಳ, ರೈತನ

ಗೆಳೆಯ.

ಎಲಡಿಕೆ = ವೀಳ್ಯ, ತಾಂಬೂಲ.

ಎಲ್ಡ = ಎರಡ, ಮಲ, ಹೇಲು.

ಎಲ್ಲ = ಸಕಲ, ಸರ್ವ, ಸಮಸ್ತ.

ಎಲ್ಲದೂ = ಎಲ್ಲ.

ಎಲ್ಲಾ ತಾವು = ಎಲ್ಲಾ ಕಡೆ.

ಎಲ್ಲಿ = ಯಾವ ಸ್ಥಳ, ಯಾವ ಸನ್ನಿವೇಶ.

ಎಲುಗು = ಎಲುಬು.

ಎಲುಬು = ಮೂಳೆ, ಅಸ್ಥಿ, ಇಲುಗು.

ಎಲೆ = ವೀಳ್ಯದೆಲೆ, ಮರಗಿಡಗಳ ಎಲೆ, ಪತ್ರ, ಪರ್ಣ.

ಎಲೆ = ೧.ಇಸ್ಪೀಟು ೨. ಹಸುಗಳ ಯೋನಿ.

ಎಲೆಸಿರಿ = ವೀಳ್ಯದೆಲೆಯ ಹಿಂಬದಿ–ಯಲ್ಲಿರುವ ನರಗಳಂತಿರುವ ನಾರುಗಳು.

ಎಲೆಹಾಕು = ತಾಂಬೂಲ ಮೆಲ್ಲು.

ಎಲ್ಲೆಲ್ಲೊ = ಎಲ್ಲಾ ಕಡೆಯುಲ್ಲೂ, ಮನಬಂದಲ್ಲೆಲ್ಲಾ.

ಎಲೆ ಗುದ್ಲಿ = ಅಗಲಬಾಯಿಯ ಗುದ್ದಲಿ.

ಎಲ್ಡು ತಲೆ ಹಾವು = ಎರಡು ಕಡೆ ಮೋಸ ಮಾಡುವವನು. **(ಅಲಂ)**

ಎಲ್ಡು ನಾಲ್ಗಿ ಸರ್ಪ (ಅಲಂ)= ಒಬ್ಬೊ–ಬ್ಬರೊಂದಿಗೆ ಒಂದೊಂದು ರೀತಿಯ ಮಾತಾಡು.

ಎವ್ವೆ= ಎವೆ, ಕಣ್ಣು ರೆಪ್ಪೆ.

ಎಷ್ಟು= ಯಾವ ಅಳತೆ, ಯಾವ ಪ್ರಮಾಣ.

ಎಸಗು = ಮಾಡು, ಒದಗಿಸು, ಉಂಟು ಮಾಡು.

ಎಸರು = ಅಡಿಗೆ ಮಾಡಲು/ ಅನ್ನ ಮಾಡಲು ಕುದಿಯಲಿಟ್ಟ ನೀರು.

ಎಸಳು = ಹೂವಿನ ದಳ, ಪಕಳೆ.

ಎಸಳು = ಬೀಗದ ಕೈ.

ಎಸಳ ಸರಪ್ಣಿ = ಬೀಗದ ಗೊಂಚಲಿನ ಸರಪಣಿ.

ಎಸಿ = ಬಿಸಾಡು, ಬಿಸಾಕು.

ಎಳಕ = ಎಳೆದುಕೋ.

ಎಳತು = ಬಲಿಯದ, ಚಿಗುರು.

ಎಳವು = ಬಾಲಗ್ರಹ, ಸೆಳೆತ.

ಎಳ್ಳಮಾಸೆ = ಪುಷ್ಯಮಾಸದ ಅಮವಾಸ್ಯೆ.

ಎಳಿ = ಎಳೆದುಕೊಳ್ಳು.

ಎಳ್ನೀರು = ಎಳೆಯ ತೆಂಗಿನಕಾಯಿಯ ನೀರು.

ಎಳ್ಳು = ತಿಲ.

ಎಳೆ = ೧. ನೂಲಿನ ಎಳೆ, ದಾರ, ೨. ಸೆಳೆ.

ಎಳೆಗರ = ಎಳೆಯ ಕರು, ಸಣ್ಣ ಕರು.

ಎಳೆಗಂಜಿ = ಎಳೆಯ ತೆಂಗಿನ ಕಾಯೊಳಗಿನ ಗಂಜಿ.

ಎಳೆಗಬ್ಬ = ಜಾನುವಾರುಗಳು ಗರ್ಭಧರಿಸಿದ ಮೊದಮೊದಲ ದಿನಗಳು.

ಎಳೆತ = ಸೆಳೆತ, ಒಲವು, ಆಕರ್ಷಣೆ.

ಎಳೆದಾಟ = ಜಗ್ಗಾಟ, ತುಯ್ದಾಟ.

ಎಳೆಬಿಸ್ಲು = ಬೆಳಗಿನ ಬಿಸಿಲು, ಕಿರಣ.

ಏ

ಏ = ಹೆಂಡತಿಯನ್ನು ಹೆಸರು ಹಿಡಿಯದೆ ಕರೆಯುವ ರೀತಿ.

ಏಕ್‌ದಂ = ಒಮ್ಮೆಲೆ, ಇದ್ದಕ್ಕಿದ್ದಂತೆ, ತಕ್ಷಣ.

ಏಕಾಏಕಿ = ಏಕ್‌ದಂ, ಒಂದೇ ಸಮನಾಗಿ,

೨. ಇದ್ದಕ್ಕಿದ್ದಂತೆ.

ಏಕಾನಾ = ಯಾಕಾರಾ, ಯಾಕಾದ್ರೂ.

ಏಗು = ಬದುಕು ಸಾಗಿಸು, ನಿಭಾಯಿಸು, ಶ್ರಮಪಡು.

ಏಟು = ೧. ಎಷ್ಟು ೨. ಹೊಡೆತ, ಪೆಟ್ಟು.

ಏಡಿ = ನಳ್ಳಿ, ಒಂದು ಜಲಚರ ಪ್ರಾಣಿ.

ಏಡಿಸು = ಛೇಡಿಸು, ಹೀಯಾಳಿಸು, ನಿಂದಿಸು.

ಏಣ = ಜಿಂಕೆ, ಗಂಡು ಜಿಂಕೆ.

ಏಣಿ = ನಿಚ್ಚಳಿಕೆ.

ಏಣಿಕಾಲು = ಏಣಿಯ ಮೆಟ್ಟಿಲು, ಹಂತ.

ಏಣು = ಅಂಚು, ತುದಿ, ಮೊನೆ.

ಏದು = ತೇಗು, ಮೇಲುಸಿರು ಬಿಡು.

ಏದುಸಿರು = ಮೇಲುಸಿರು.

ಏನ್ಕತೆ = ವಿಚಾರವೇನು.

ಏನಾ = ಏನು (ಪುಲ್ಲಿಂಗ).

ಏನಾದ್ರಾಗ್ಲಿ = ಏನಾದರಾಗಲಿ, ಏನೇ ಸಂಭವಿಸಲಿ.

ಏನಾರ = ಏನಾದ್ರೂ.

ಏನು = ಯಾವುದು.

ಏನೇ (ಸ್ತ್ರೀ) = ಏನು.

ಏನೋ (ಪು) = ೧.ಏನು, ೨.ಯಾವುದೋ.

ಏನೋ ಎಂಥೋ = ಹೇಗೋ ಏನೋ.

ಏರಿ = ಎತ್ತರದ ಪ್ರದೇಶ, ದಂಡೆ, ದಿಣ್ಣೆ, ನೀರನ್ನು ನಿಲ್ಲಿಸಲು ಹಾಕಿದ ಕಟ್ಟೆ

ಏರ್ಕಿ = ಏರಿಕೆ, ಏಳಿಗೆ, ವರ್ಧನೆ.

ಏರಿಸು = ಮೇಲೇರಿಸು, ಮೇಲೆ ಹೋಗುವಂತೆ ಮಾಡು.

ಏರಿಳಿತ = ವ್ಯತ್ಯಾಸ, ಉನ್ನತಿ – ಅವನತಿ.

ಏರು = ೧. ಎತ್ತರದ ಭೂಮಿ ೨. ಮೇಲಕ್ಕೆ ಹೋಗು. ೩. ನೊಗ, ನೇಗಿಲಿಗೆ ಎತ್ತುಗಳನ್ನು ಕಟ್ಟುವುದು.

ಏರುಪೇರು = ಅಸಮ ತೂಕ/ಎತ್ತರ, ಹಳ್ಳ ತಿಟ್ಟು.

ಏರ್ಪಾಟು = ಏರ್ಪಾಡು, ವ್ಯವಸ್ಥೆ, ಸಿದ್ಧತೆ.

ಏಲಕ್ಕಿ = ಯಾಲಕ್ಕಿ, ಶುಂಠಿಯ ಗಿಡದಂತೆ ಬುಡದಲ್ಲೇ ಕವಲುಗಳು, ಬುಡದಲ್ಲಿ ಮಣ್ಣಿನ ಮೇಲೆ ಉದ್ದುದ್ದ ಕರೆಗಳು ಸರದಂತೆ ಬಂದು ಪೋಣಿಸಿದಂತೆ ಕಾಯಿ ಬಿಡುತ್ತದೆ, ಪರಿಮಳಯುಕ್ತ ಸಾಂಬಾರ ಪದಾರ್ಥ.

ಏಸು = ಎಷ್ಟು, ಯಾವ ಪ್ರಮಾಣ.

ಏಸ್ಮಂದಿ = ಎಷ್ಟು ಜನ.

ಏಸೊಂದು = ಎಷ್ಟೊಂದು.

ಏಳು = ಏಳರ ಸಂಖ್ಯೆ.

ಏಳ್ಗಿ = ಬೆಳವಣಿಗೆ, ಅಭಿವೃದ್ಧಿ, ಪ್ರಗತಿ.

ಏಳು = ನಿಲ್ಲು, ಎಚ್ಚರವಾಗು, ಮೇಲಕ್ಕೆ ಏಳು.

ಏಳುಬೀಳು = ಏರಿಳಿತ.

ಏಳ್ಸು = ಎಚ್ಚರಿಸು, ನಿದ್ದೆಯಿಂದ ಎದ್ದೇಳು–ವಂತೆ ಮಾಡು ೨.ಹೀಯಾಳಿಸು.

ಏಳೇಳು = ಏಳಕ್ಕೆ ಏಳು ಕೂಡಿಸುತ್ತಾ ಹೋಗು.

ಏಳ್ನೂರು = ಏಳನ್ನು ನೂರರಿಂದ ಗುಣಿಸು.

ಐ

ಐಗಳು = ಉಪಾಧ್ಯಾಯರು, ಮಾಸ್ತರು.

ಐಚೋಜ್ಗ = ಚೋಗ್ಗ, ಸೋಜಿಗ, ವಿಸ್ಮಯ, ಆಶ್ಚರ್ಯ.

ಐತರು = ಬರುವುದು, ತೆಗೆದುಕೊಂಡು

ಬರುವುದು.
ಐತ್ವಾರ = ಆದಿತ್ಯವಾರ, ಭಾನುವಾರ.
ಐತೆ = ಇದೆ, ಅದೆ.
ಐದವೆ = ಇವೆ, ಅವೆ, ಇದ್ದಾವೆ.
ಐದಾನೆ = ಇದ್ದಾನೆ. (ಪು)
ಐದಾಳಿ ಸರ = ಮಾಂಗಲ್ಯ.
ಐದಾಳೆ = ಇದ್ದಾಳೆ. (ಸ್ತ್ರೀ)
ಐದೆ = ಮುತ್ತೈದೆ, ಸುಮಂಗಲಿ.
ಐದು = ಐದರ ಸಂಖ್ಯೆ.
ಐನ್‌ಕ್ಸರಾಜಿ = ಶುದ್ಧ ಮೋಸಗಾರ.
ಐನಾತಿ = ಪಕ್ಕಾ, ಮುಖ್ಯ, ಚಾಲಾಕಿ (ಐನಾತಿ ಕಳ್ಳ/ ಸುಳ್ಳ).
ಐನೂರು = ಐದು ಮತ್ತು ನೂರರ ಗುಣಲಬ್ಧ.
ಐಬು = ಕುಂದು, ದೋಷ, ಊನ, ಲೋಪ.
ಐಭೋಗ = ವೈಭೋಗ, ಶ್ರೀಮಂತಿಕೆ.
ಐಲು = ಹುಚ್ಚು, ಮರುಳುತನ.
ಐಲುಪೈಲು = ತಿಕ್ಕಲು ಸ್ವಭಾವ.
ಐವತ್ತು = ಹತ್ತು ಪಟ್ಟು ಐದು.

ಒ

ಒಂಚೂರು = ಸ್ವಲ್ಪ, ಅತ್ಯಲ್ಪ, ಸ್ವಲ್ಪಭಾಗ.
ಒಂಜಿನ = ಒಂದು ದಿನ.
ಒಂಟಿ = ಒಬ್ಬ, ಏಕಾಕಿ, ೨. ಗಂಡಸರು ಒಂದೇ ಕಿವಿಗೆ ಹಾಕಿಕೊಳ್ಳುವ ಆಭರಣ.
ಒಂಟಿಗ = ಒಬ್ಬನೇ, ಒಂದೇ, ೨. ಒಂಟಿ ಗಂಡು ಹಂದಿ, ಸಲಗ.
ಒಂಟಿನಳಿಗೆ = ಒಂದು ನಳಿಗೆಯ ಕೇಪಿನ ಕೋವಿ.
ಒಂಟೆತ್ತಿನ ಗಾಡಿ = ಒಂದೇ ಎತ್ತು ಕಟ್ಟಿ ಎಳೆಸುವ ಗಾಡಿ.
ಒಂದ = ಒಂದರ ಸಂಖ್ಯೆ, ಒಂದು ೨. ಮೂತ್ರ, ಉಚ್ಚೆ.
ಒಂದಪ = ಒಂದು ಸಾರಿ, ಒಂದು ಸಲ, ಒಮ್ಮೆ.
ಒಂದ್ಗಳ್ಗಿ = ಒಂದು ಗಳಿಗೆ, ಒಂದು ಕ್ಷಣ.
ಒಂದ್ರ ಮೇಲೊಂದು = ಒಂದರ ಮೇಲೊಂದು, ಪದೇ ಪದೇ, ಬಿಡುವಿಲ್ಲದೆ.
ಒಂದ್ವಾರ್ಗೆ = ಸಮ ವಯಸ್ಸು.
ಒಂದಿಗ = ಜೊತೆಯಾಗಿರುವವನು, ಒಡಹುಟ್ಟಿದವನು.
ಒಂದಿಗೆ = ಜೊತೆಯಲ್ಲಿ, ಒಟ್ಟಿಗೆ.
ಒಂದಿಗುಟ್ಟೋರು = ಒಡಹುಟ್ಟಿದವರು.
ಒಂದಿಸ = ಒಂದು ದಿನ, ಒಂದು ದಿವಸ.
ಒಂದ್ಕಿತ = ಒಂದಪ.
ಒಂದೀಟು = ಒಂದಿಷ್ಟು, ಸ್ವಲ್ಪ, ತುಸು.
ಒಂದು = ಏಕ, ೨. ಕೂಡು, ಸೇರು, ಬೆರೆ.
ಒಂದೇ ಉಸ್ರು = ಅತಿ ಶೀಘ್ರ, ಅತ್ಯಂತ ವೇಗ, ೨. ಒಂದೇ ಗುಟುಕಿಗೆ.
ಒಂದೇ ಸಮ = ಬಿಡುವಿಲ್ಲದೆ, ಮೇಲಿಂದ ಮೇಲೆ.
ಒಂದೊಂಥರ = ಬೇರೆ ಬೇರೆ ನಮೂನೆ, ವಿವಿಧ ರೀತಿ, ಒಂದೊಂದು ಒಂದೊಂದು ಥರ.
ಒಂದೊಂದು = ಪ್ರತಿಯೊಂದು.
ಒಂಭತ್ತು = ಒಂಭತ್ತರ ಸಂಖ್ಯೆ.
ಒಂಬೈನೂರು = ಒಂಭತ್ತನ್ನು ನೂರರಿಂದ ಗುಣಿಸಿದ್ದು.

ಒಂಬೊಂಭತ್ತು = ಒಂಭತ್ತಕ್ಕೆ ಮತ್ತೆ ಮತ್ತೆ ಒಂಭತ್ತನ್ನು ಸೇರಿಸುವುದು.

ಒಕ್ಕ = ಒಗೆದುಕೋ, ಬಟ್ಟೆ ತೊಳೆದುಕೋ.

ಒಕ್ಕಟ್ಟು = ಒಗ್ಗಟ್ಟು, ಐಕ್ಯ, ಐಕಮತ್ಯ.

ಒಕ್ಕಲಿಗ = ವ್ಯವಸಾಯಗಾರ, ರೈತ.

ಒಕ್ಕಲಗಿತ್ತಿ = ಒಕ್ಕಲಿಗನ ಹೆಂಡತಿ, ವ್ಯವಸಾಯ ಮಾಡುವವಳು.

ಒಕ್ಕಲಾಟ = ಒಕ್ಕುವಿಕೆ, ಕಣಗೆಲಸ.

ಒಕ್ಕಲಿರು = ನೆಲೆಸಿರು, ವಾಸಿಸಿರು.

ಒಕ್ಕಲು = ೧. ಒಕ್ಕಲಾಟ, ೨. ರೈತ, ಒಕ್ಕಲಿಗ, ಗೇಣಿದಾರ, ೪. ಕೃಷಿಕಾರ್ಯಕ್ಕೆ ಸಹಕರಿಸುವ ಆಳು/ಅವನ ಸಂಸಾರ.

ಒಕ್ಕಲುತನ = ರೈತಾಪಿ ಕೆಲಸ, ೨.ಕುಟುಂಬ ಜೀವನ.

ಒಕ್ಕಲೆಬ್ಬಿಸು = ಊರು ಬಿಡಿಸು, ಊರಲ್ಲಿ ವಾಸವಿರದಂತೆ ಮಾಡಿಸು, ಜಾಗ ಖಾಲಿ ಮಾಡಿಸು.

ಒಕ್ಕಲೋಗು = ಸಂಸಾರಸಮೇತ ಊರು ಬಿಟ್ಟು ಹೋಗು.

ಒಕ್ಕು = ಒಕ್ಕುವಿಕೆ, ಕಣದ ಕೆಲಸ, ಪೈರಿನಿಂದ ಕಾಳನ್ನು ಬೇರ್ಪಡಿಸುವ ಕೆಲಸ.

ಒಗಟು = ಗಾದೆ ಮಾತು, ಅರ್ಥವತ್ತಾದ ಮಾತುಗಳನ್ನು ಬಳಸಿ ಹೇಳುವುದು, ಒಡಗತೆ.

ಒಗಡಿಕೆ = ವಾಕರಿಕೆ, ವಾಂತಿ ಬಂದಂತಾಗು.

ಒಗಡು = ವಾಕರಿಸು, ವಾಂತಿ ಮಾಡು.

ಒಗರಡಕೆ = ಚೊಗರು ಹಾಕದೇ ಇರುವ ಹಸಿಯಡಕೆ.

ಒಗರು = ಹುಳೀ ಮತ್ತು ಕಹಿಯ ಬೆರಕೆ, ಆರು ವಿಧದ ರಸಗಳಲ್ಲಿ ಒಂದು. (ಹುಳಿ, ಉಪ್ಪು, ಖಾರ, ಸಿಹಿ, ಕಹಿ, ಒಗರು).

ಒಗ್ತನ = ಒಗೆತನ, ಅಚ್ಚುಕಟ್ಟುತನ, ಅಚ್ಚುಕಟ್ಟಾಗಿ ಸಂಸಾರ ಮಾಡುವಿಕೆ.

ಒಗ್ಗರಣೆ = ಕೆಲವು ಸಾಂಬಾರ ಪದಾರ್ಥಗಳನ್ನು ಎಣ್ಣೆ/ತುಪ್ಪದಲ್ಲಿ ಹುರಿದು ಆಹಾರಕ್ಕೆ ಬೆರೆಸುವುದು, ಇದರಿಂದ ಪದಾರ್ಥದ ರುಚಿ ಮತ್ತು ಘಮ ಹೆಚ್ಚುತ್ತದೆ.

ಒಗಾಸು = ಬಿಸಾಡು, ಎಸೆ.

ಒಗಾಯ್ಸು = ಒಗಾಸು.

ಒಗ್ಗಾಲು = ಗಾಡಿ ಎಡ/ಬಲ ಪಕ್ಕದ ಹೊಂಡಕ್ಕೆ ಹೊರಳಿ ಭಾರವೆಲ್ಲ ಒಂದೇ ಕಡೆ ಸರಿಯುವುದು. ಇದಕ್ಕೆ ಗಾಡಿ ಒಗ್ಗಾಲಾಗಿದೆ ಎನ್ನುತ್ತಾರೆ.

ಒಗ್ಗಾಲೇಣಿ = ಒಂದು ಬಿದಿರಿನಿಂದ ಮಾಡಿದ ಏಣಿ.

ಒಗ್ಗು = ೧.ಒಟ್ಟುಗೂಡು, ಸೇರು ೨.ಹಿತವಾಗು, ಮೈಗೆ ಹಿಡಿ.

ಒಗ್ಗುರ್ಸು = ಒಗ್ಗರಿಸು, ಒಗ್ಗರಣೆ ಹಾಕು.

ಒಗ್ಗೂಡು = ಒಂದುಗೂಡು, ಜೊತೆ ಸೇರು.

ಒಗೆ = ೧.ಒಗಾಸು ೨.ಬಟ್ಟೆಯನ್ನು ತೊಳೆಯುವುದು.

ಒಗೆಕಲ್ಲು = ಬಟ್ಟೆ ಒಗೆಯುವ ಕಲ್ಲು.

ಒಟ್ಟಾರೆ = ಒಟ್ಟಿನಲ್ಲಿ, ಜೊತೆಯಾಗಿ, ಇಡಿಯಾಗಿ, ಪೂರ್ತಿಯಾಗಿ.

ಒಟ್ಮಾಡು = ಒಂದು ಗೂಡಿಸು.

ಒಟ್ರಾಶಿ = ಹೇಗಾಯ್ತೊ ಹಾಗೆ, ಅಸ್ತವ್ಯಸ್ತ.

ಒಟ್ಟಿಗೆ = ಜೊತೆಯಲ್ಲಿ, ಗುಂಪಾಗಿ.

ಒಟ್ಟು = ಎಲ್ಲಾ ಸೇರಿ, ಗುಂಪು, ರಾಶಿ, ಗುಡ್ಡೆ.

ಒಟ್ಲು = ರಾಶಿ, ಗುಂಪು, ತುರುಕು, ತುಂಬು.

ಒಟ್ಟೆ = ತೂತ, ಕಂಡಿ.

ಒಡಕು = ೧.ಬಿರುಕು, ಸೀಳು ೨.ಮನಸ್ತಾಪ, ಅಸಮಾಧಾನ.

ಒಡಕು ಬಾಯಿ = ಗುಟ್ಟು ನಿಲ್ಲದ ಬಾಯಿ, ಗುಟ್ಟನ್ನು ರಟ್ಟು ಮಾಡುವವರು.

ಒಡಕ್ಲು = ಒಡಕಲು, ನುಚ್ಚು, ತರಿ, ರವೆ.

ಒಡಗತೆ = ಒಗಟು.

ಒಡದು ಮೂಡು = ನೆಲದಿಂದ ಉದ್ಭವವಾಗು.

ಒಡದ್ಹೇಳು = ಬಿಡಿಸಿ ಹೇಳು, ಅರ್ಥ–ವಾಗುವಂತೆ ಹೇಳು, ಒಗಟು ಬಿಡಿಸು.

ಒಡವೆ = ಆಭರಣ.

ಒಡಲು = ಮೈ, ಶರೀರ, ದೇಹ.

ಒಡಹುಟ್ಟು = ಒಡಹುಟ್ಟಿದವರು, ಸಹೋದರ, ಸಹೋದರಿಯರು.

ಒಡ್ಡ = ೧.ಒರಟ ೨.ಕಲ್ಲು ಮಣ್ಣಿನ ಕೆಲಸ ಮಾಡುವವನು.

ಒಡಾಳ್‌ದೊಪ್ಪೆ = ಅಡಿಕೆ ಹಾಳೆಯಿಂದ ಮಾಡಿದ ದೊಡ್ಡ ಟೊಪ್ಪಿ.

ಒಡ್ಡಾಣ = ಕತ್ತಿಯನ್ನು ಸೊಂಟಕ್ಕೆ ಸಿಕ್ಕಿಸಿಕೊಳ್ಳುವ ಕೊಕ್ಕೆಯಿರುವ ಸೊಂಟದ ಪಟ್ಟಿ.

ಒಡ್ಯಾಣ = ಸೊಂಟದ ಪಟ್ಟಿ, ಬೆಳ್ಳಿ/ಚಿನ್ನದ ನಡುಪಟ್ಟಿ, ೨. ಕತ್ತಿಯನ್ನು ಸೊಂಟಕ್ಕೆ ಸಿಕ್ಕಿಸಿಕೊಳ್ಳುವ ಪಟ್ಟಿ.

ಒಡ್ಡಿ = ಹಂದಿ, ಕೋಳಿ ಮುಂತಾದುವನ್ನು ಕೂಡಿ ಹಾಕುವ ಗೂಡು.

ಒಡುಬೀಳದು = ನೀರು ಜಾಸ್ತಿಯಾಗಿ ಗದ್ದೆಯು ಅಂಚು ಒಡೆದು ಹೋಗುವುದು, ಒಡು.

ಒಡ್ಡು = ೧.ರಾಶಿ, ಗುಂಪು ೨.ತಡೆ ಬೇಲಿ, ಅಡ್ಡ ಬೇಲಿ ೩.ಹಿಡಿ, ತಡೆಹಿಡಿ, ೪. ತಡಬೆ.

ಒಡ್ಲುಜರ = ಒಡಲ ಜ್ವರ, ಹೊರಗೆ ಮೈ ಹೆಚ್ಚು ಬಿಸಿಯಾಗದೆ, ಒಳಗೊಳಗೇ ಸುಡುವ ಜ್ವರ.

ಒಡ್ಡೋಲ್ಗ = ಸಭೆ, ಅರಮನೆಯ ದರ್ಬಾರು.

ಒಣಕಲು = ಒಣಗಿದ, ಶುಷ್ಕವಾದ.

ಒಣಕು = ಒಣಗಿದ್ದು, ಬಡಕಲು.

ಒಣಗಿಸು = ಒಣಗುವಂತೆ ಮಾಡು.

ಒಣಗು = ೧.ಉಣ್ಣೆ, ಚಿಗಟ ೨.ಒಣಗುವಿಕೆ, ಆರಿಹೋಗುವಿಕೆ.

ಒಣಜಂಬ = ಅಹಂಕಾರ, ವ್ಯರ್ಥಪ್ರತಿಷ್ಠೆ.

ಒಣಮೀನು = ಒಣಗಿಸಿದ ಮೀನು.

ಒತ್ತಡ = ೧.ಬಲವಂತ, ಒತ್ತಾಯ ೨.ಒತ್ತುವಿಕೆ, ಭಾರ.

ಒತ್ತಾಗಿ ದಟ್ಟವಾಗಿ, ತುಂಬ ಪಕ್ಕದಲ್ಲಿ.

ಒತ್ತಾಯ = ಬಲವಂತ, ನಿರ್ಬಂಧ, ಬಲಾತ್ಕಾರ.

ಒತ್ತಾಸೆ = ನೆರವು, ಬೆಂಬಲ, ಸಹಾಯ.

ಒತ್ತು = ಹಿಸುಕು, ಅದುಮು, ಒತ್ತಡ ಪಡಿಸು.

ಒತ್ತುಮಣೆ = ಶಾವಿಗೆ ಮಾಡುವ ಮರದ ಒರಳು.

ಒತ್ತುವರಿ = ಗದ್ದೆ/ಜಮೀನನ್ನು

ಆಕ್ರಮಿಸಿಕೊಳ್ಳುವುದು, ಜಾಗ ವನ್ನು ಆಕ್ರಮಿಸುವುದು.

ಒತ್ತೆ = ಅಡ, ಅಡವು, ಆಧಾರವಾಗಿ ಕೊಡುವ ವಸ್ತು.

ಒತ್ತೆಯಿಡು = ಗಿರವಿ ಹಾಕು, ಅಡವಾಗಿಡು.

ಒತ್ತೆ ಹಾಕು = ಬಲಿತ ಕಾಯಿಗಳು ಬೇಗ ಹಣ್ಣಾಗಲು ಗಾಳಿಯಾಡದಂತೆ ಮಾಡಿ ಶಾಖಬರಿಸುವುದು.

ಒದಗು = ಲಭ್ಯ, ಹೆಚ್ಚಾಗು, ಹಿಟ್ಟು ಬರುವಿಕೆ, ಸಮಯಕ್ಕೆ ಸಿಗುವ ಸಹಾಯ.

ಒದರಾಟ = ಒದ್ದಾಡು, ಕಿರುಚಾಡುವಿಕೆ, ಕೊಡಹುವಿಕೆ.

ಒದರಾಡು = ಒದ್ದಾಡು, ಕಿರುಚಾಡು, ಕೊಡವು.

ಒದರು = ೧.ಕೊಡವು ೨.ಬಡಬಡಿಸು ೩.ಕಿರುಚು.

ಒದ್ಕಲು = ಹಾಲು ಕರೆಯುವಾಗ ಒದೆಯುವ ದನ ಅಥವಾ ಎಮ್ಮೆ.

ಒದ್ದಾಡು = ಪೇಚಾಡು, ಪರದಾಡು.

ಒದ್ದಾಟ = ಪೇಚಾಟ, ಪರದಾಟ.

ಒದೆ = ಕಾಲಿನಿಂದ ಒದೆ/ಹೊಡೆ/ನೂಕು, ಏಟು ಕೊಡು.

ಒದೆತ = ಕಾಲಿನಿಂದ ಬಲವಾಗಿ ತುಳಿಯುವುದು, ಹೊಡೆಯು ವುದು.

ಒದ್ದೆ = ವದ್ದೆ, ನೆನೆದ, ಚಂಡಿ.

ಒನಕಿಮುಂಡಿ = ನೂರಾರು ಕಾಲುಗಳಿರುವ, ಮುಟ್ಟಿದರೆ ಸುರುಳಿಯಾಗುವ ಹುಳ.

ಒನಕೆ = ಒರಳಿನಲ್ಲಿ ಕುಟ್ಟಲು ಬಳಸುವ ಮರದ ಉದ್ದ ಕೋಲಿನಂತಹ ಸಲಕರಣೆ.

ಒನಿ = ಕೇರು, ಆಡಿಸು, ಸಾಣಿಸು.

ಒನೆಯೋದು = ಮೊರದಲ್ಲಿ ಅಕ್ಕಿ ಆಡಿಸು, ಕೇರು.

ಒನ್ಕೆ ಬಳೆ = ಒನಕೆಯ ತುದಿಗೆ ಹಾಕುವ ಕಬ್ಬಿಣದ ಪಟ್ಟಿ.

ಒಪ್ಪ = ಓರಣ, ಅಚ್ಚುಕಟ್ಟು, ೨.ಶವ ಸಂಸ್ಕಾರ.

ಒಪ್ಪತ್ತು = ದೇವರ ಹೆಸರಲ್ಲಿ ಒಂದು ಹೊತ್ತು ಊಟು ಬಿಡುವುದು, ಒಂದು ಹೊತ್ತು.

ಒಪ್ಪಂದ = ಒಪ್ಪಿಗೆ, ಒಡಂಬಡಿಕೆ.

ಒಪ್ಪಹಾಕು = ಬಣ್ಣ ಹಾಕು,ಆಭರಣ ಗಳನ್ನು ಮೆರಗುಮಾಡು ಚಿನ್ನ/ ಬೆಳ್ಳಿಯ ನೀರಿಗೆ ಅದ್ದುವುದು.

ಒಪ್ಗಿ = ಒಪ್ಪಿಗೆ, ಸಮ್ಮತಿ.

ಒಪ್ಪಿಸು = ಒಪ್ಪುವಂತೆ ಮಾಡು.

ಒಪ್ಪು = ಒಪ್ಪಿಗೆ ಸೂಚಿಸು, ಸಮ್ಮತಿ, ಮೆಚ್ಚು.

ಒಪ್ಪೊತ್ತು = ಒಂದು ಹೊತ್ತು, ಒಪ್ಪತ್ತು

ಒಬ್ಬ = ಒಬ್ಬನೇ, ಏಕಾಂಗಿ, ಒಬ್ಬಂಟಿ.

ಒಬ್ಬೊಬ್ಬ = ಪ್ರತಿಯೊಬ್ಬ.

ಒಮ್ಮನ = ಎಲ್ಲರ ಮನಸ್ಸೂ ಒಂದಾಗುವುದು.

ಒಮ್ಮಿಗೆ = ಒಂದೇ ಬಾರಿಗೆ, ಒಟ್ಟಿಗೆ.

ಒಮ್ಮಿಂದೊಮ್ಮೆ = ಇದ್ದಕ್ಕಿದ್ದಂತೆ.

ಒಯ್ಯನೆ = ನೆಟ್ಟಗೆ, ನೇರವಾಗಿ.

ಒಯ್ಯಾರ = ವಯ್ಯಾರ, ತಳಕು, ಬಿನ್ನಾಣ, ಬೆಡಗು.

ಒಯ್ಲಿನ = ಅಂದ, ಚಂದ.

ಒಯ್ಲಿನಾಗದೆ = ಚೆನ್ನಾಗಿದೆ, ೨.ಸುಂದರ–

ವಾಗಿದ್ದಾಳೆ.

ಒಯ್ಯು = ತೆಗೆದುಕೊಂಡು ಹೋಗು.

ಒರಕು = ತೆವಳು, ನೆಲದ ಮೇಲೆ ಹೊರಳಾಡು, ಕೂತಲ್ಲಿಂದಲೇ ಸರಿದಾಡು.

ಒರಗು = ಆತುಕೊಳ್ಳು, ಬೆನ್ನು ಹಿಂದಕ್ಕೆ ಮಾಡಿ ಒರಗು.

ಒರಟು = ಕಠಿಣ, ಬಲ, ಮೊಂಡು.

ಒರಲು = ನರಳಾಡು, ಕಿರುಚು, ಕೂಗು.

ಒರಳು = ಕುಟ್ಟುವ ಗುಳಿ, ರುಬ್ಬವ ಕಲ್ಲು.

ಒರಳು ಕಲ್ಲು = ಕುಟ್ಟುವ / ಕಡೆಯುವ ಕಲ್ಲು, ರುಬ್ಬುಗುಂಡು.

ಒರ್ಕ = ಹಿಂದಕ್ಕೆ ಬೆನ್ನು ಆನಿಸಿಕುಳಿತುಕೋ.

ಒರ್ಕು = ಒರಕು.

ಒರ್ಟು = ಒರಟು.

ಒರ್ಕುತ್ಗ = ಒರಗಿ ಕುಳಿತುಕೋ.

ಒರ್ಲು = ಒರಲು.

ಒರೆ = ಬಳಿ, ಸವರು, ಹಚ್ಚು.

ಒರೆಗಲ್ಲು = ಚಿನ್ನ, ಬೆಳ್ಳಿ ಪರೀಕ್ಷಿಸಿ ನೋಡುವ ಕಲ್ಲು.

ಒರೆಹಚ್ಚು = ಒರೆಗಲ್ಲಿಗೆ ಉಜ್ಜಿ ಚಿನ್ನ/ ಬೆಳ್ಳಿಯ ಶುದ್ಧತೆ ನೋಡುವುದು ೨.ಪರೀಕ್ಷಿಸು.

ಒರ್ಲೆ = ವರಲೆ, ಗೆದ್ದಲು.

ಒಲಿ = ಒಪ್ಪು, ಪ್ರೀತಿಸು.

ಒಲ್ಲಿ = ಹೆಂಗಸರು ಹೊದೆಯುವ ಚೌಕಳಿ ವಸ್ತ್ರ. ಗೊಬ್ಬೆಸೀರೆಯ ಮೇಲೆ ಹೊದೆ–ಯುವ ವಸ್ತ್ರ.

ಒಲುಹಿಡಿ = ಬಂಡಿ/ಗಾಡಿಗೆ ಆಧಾರವಾಗಿ ಬಲವಾಗಿ ಕೈ ಹಿಡಿಯುವುದು.

ಒಲುಕೊಡು = ಒಲುಹಿಡಿ.

ಒಲೆ = ಅಡಿಗೆ ಮಾಡಲು ಬೆಂಕಿ ಹೊತ್ತಿಸುವ ಸ್ಥಳ.

ಒಲೆ = ತೂಗಾಡುವುದು, ತೊನೆಯುವುದು.

ಒಲೆಗುಂಡು = ಒಲೆಗಾಗಿ ಇಟ್ಟ ಮೂರು ಕಲ್ಲುಗುಂಡುಗಳು.

ಒಲೆಸರ = ಒಲೆಯ ಹತ್ತಿರ, ಸಾಲಾಗಿ ಇರುವ ಒಲೆಗಳು.

ಒಲೆ ಬೇರೆ ಮಾಡು = ಹಿಸ್ಸೆಯಾಗು, ಅಣ್ಣತಮ್ಮಂದಿರು ಪಾಲಾಗಿ ಬೇರೆ ಬೇರೆ ಅಡಿಗೆ ಮಾಡುವುದು.

ಒಸಗೆ = ಋತುಮತಿಯಾಗು.

ಒಸಡು = ಹಲ್ಲಿಗೆ ಆಧಾರವಾದ ಮಾಂಸಖಂಡ, ದಂತಪೀಠ, ಅವುಡು.

ಒಸರು = ಜಿನುಗು, ಸೋರು.

ಒಸ್ಗೆ ಮನೆ = ಋತುಮತಿಯಾದಾಗ ಮಾಡುವ ಕೆಲವು ಶಾಸ್ತ್ರಗಳು.

ಒಳ್‌ಕಲ್ಲು = ಒರಳು, ರುಬ್ಬುವ ಕಲ್ಲು ಮತ್ತು ಗುಂಡು.

ಒಳಕಡೆ = ವಳ್ಕಡೆ, ಬ್ಯಾಣ, ಜಾನು–ವಾರುಗಳು ಮೇಯುವ ಜಾಗ.

ಒಳಗಡೆ = ಒಳಗಿನ ಭಾಗ, ಅಂತರಂಗ.

ಒಳಂಗ್ಳ = ಚೌಕಿ ಮನೆಯ ಮಧ್ಯದ ಅಂಗಳ.

ಒಳಂಗಿ = ಒಳಅಂಗಿ, ನಟ್ಟನೀನು.

ಒಳಗುಟ್ಟು = ರಹಸ್ಯ.

ಒಳಗುದಿ = ಬೇಗೆ, ತಳಮಳ.

ಒಳಗೆ = ಒಳಗಡೆ, ಅಂತರಂಗದಲ್ಲಿ.

ಒಳಜಗಳ = ಅಂತಃಕಲಹ.

ಒಳದಾರಿ = ಸೀಳುದಾರಿ, ಹತ್ತಿರದ ದಾರಿ.

ಒಳಭಾಗ = ಒಳಗಡೆಯ ಸ್ಥಳ.

ಒಳಮುಯ್ = ಗಂಡು/ಹೆಣ್ಣಿಗೆ ಅವರ ಬಂಧುಗಳು ನೇರವಾಗಿ ಕೊಡುವ ಉಡುಗೊರೆ ಹಣ.

ಒಳಲು ಹೊಡೆಯದು = ಗಾಡಿ ಹೊಡೆ–ಯುವಾಗ ಅಥವಾ ಹೂಟಿ ಮಾಡುವಾಗ ಅಥವಾ ಒಕ್ಕುವಾಗ ಹಾಡುವಂತ ಧ್ವನಿ.

ಒಳಲೆ = ವಳಾಲೆ, ಗಿಂಡಿ, ಮಗುವಿಗೆ ಹಾಲು ಕುಡಿಸುವ ಬೆಳ್ಳಿ/ ಹಿತ್ತಾಳೆಯ ಪಾತ್ರೆ.

ಒಳಶುಂಠಿ = ತೊಡೆಯ ಸಂದಿಗೆ ಚಿವುಟುವುದು, ಒಂದು ಶಿಕ್ಷೆ.

ಒಳಸಂಚು = ಪಿತೂರಿ, ಗುಪ್ತ ದ್ರೋಹ.

ಒಳ್ಮಖ = ಒಳಮ್ಮೈ, ಮನೆಯ ಒಳಗೆ ಹೋಗುವುದು.

ಒಳಾದಿ = ಒಳಹಾದಿ, ಅಡ್ಡದಾರಿ, ಹತ್ತಿರದ ದಾರಿ.

ಒಳಾಯ = ಒಳಭಾಗ, ಮನೆಯ ಒಳಭಾಗದ ಉದ್ದಗಲ.

ಒಳ್ತು = ಒಳ್ಳೆಯದು, ಒಳ್ಳೆಯದಾಗಲಿ ಎನ್ನುವುದು, ತಪ್ಪಾಯ್ತು ಒಳ್ಳೆಯದಾಗಲಿ ಎನ್ನುವುದು.

ಒಳ್ಳು = ಒರಳು, ಗುಳಿ.

ಒಳ್ಳೆಕುಡಿ = ಗೂರಲು ಉಬ್ಬಸಕ್ಕೆ ವಾಂತಿ ಮಾಡಿಸಿ ಕಫ ತೆಗೆಯಲು ಕೊಡುವ ಒಂದು ಔಷಧಿಯ ಸಸ್ಯ.

ಒಳ್ಳೆಗಿಡ = ತುಂಬಾ ಕಹಿ ಎಲೆಯನ್ನು ಹೊಂದಿರುವ ಪೊದೆಯಂತಹ ಗಿಡ, ಇದರ ಕುಡಿ, ಗೂರಲು, ಉಬ್ಬಸ, ಅಗ್ನಿಸರ್ಪಕ್ಕೆ ಒಳ್ಳೆಯದು.

ಒಳ್ಳೆತನ = ಒಳ್ಳೆಯ ಸ್ವಭಾವ, ಸನ್ನಡತೆ.

ಒಳ್ಳೆದು = ೧.ನಾಗರಹಾವು, ೨. ಒಳ್ಳೆಯದು.

ಒಳ್ಳೆಣ್ಣೆ = ನೆಲಗಡಲೆ/ ಎಳ್ಳಿನ ಶುದ್ಧ ಎಣ್ಣೆ, ಕಡ್ಲೆಕಾಯೆಣ್ಣೆ.

ಒಳ್ಳೆ ಹಾವು = ವಿಷವಿಲ್ಲದ ಹಾವು, ನೀರುಳ್ಳೆ ಹಾವು.

ಒಳೊಳ್ಗೆ = ಒಳ್ಳೊಳಗೆ, ಬೇರೆಯವರಿಗೆ ಗೊತ್ತಾಗದಂತೆ.

ಒಳ್ಳೊಳಗೆ = ಒಳಗೊಳಗೆ, ಮನಸ್ಸಿನಲ್ಲಿ.

ಒಳ್ತೊಳ್ತು = ಒಳ್ತುನ ದ್ವಿರುಕ್ತಿ.

ಒಷ್ಟು = ಅಷ್ಟು, ಅಷ್ಟನ್ನೂ.

ಓ

ಓಂಟ್ರಕಪ್ಪೆ = ಓಂಟ್ರುಕ.

ಓಂಟ್ರುಕ = ನೀರಿನಲ್ಲಿರುವ ಸಣ್ಣ ಜಾತಿಯ ಆಮೆ, ಶತ್ರುಗಳಿಂದ ತಪ್ಪಿಸಿ ಕೊಳ್ಳಲು ವಾಸನೆಯ ಗಾಳಿ ಬಿಡುತ್ತದೆ.

ಓಕುಳಿ = ಬಣ್ಣದ ನೀರು, ದೃಷ್ಟಿ ತೆಗೆಯಲು ಬಳಸುವ ಅರಿಸಿನ + ಸುಣ್ಣ + ನೀರು.

ಓಕೊಣದು = ಓಕೊಳು.

ಓಕೊಳು = ಕರೆಗೆ ಉತ್ತರ ಕೊಡು, ಪ್ರತಿಯಾಗಿ ಕೂಗು.

ಓಗುಟ್ಟು = ಓಕೊಳು.

ಓಗೊಡು = ಓಕೊಳು.

ಓಟ = ಓಡುವಿಕೆ, ಪಲಾಯನ.

ಓಟು = ೧.ಮತ, ೨.ಸ್ವಲ್ಪ, ಚೂರು (ನಂಗೋಟು ಕೊಡು = ನಂಗೆ ಸ್ವಲ್ಪ ಕೊಡು).

ಓಟೂ = ಅಷ್ಟೂ, ಅಷ್ಟನ್ನೂ.

ಓಟೂ ಜನ = ಅಷ್ಟು ಜನರೂ, ಎಲ್ಲರೂ.

ಓಟೆ = ಹಣ್ಣಿನ ಒಳಗಿರುವ ಬೀಜದ ಮೇಲಿರುವ ಗಟ್ಟಿ ಕವಚ.

ಓಟೋಟು = ಸ್ವಲ್ಪ ಸ್ವಲ್ಪ.

ಓಡಂಚು = ಓಡುಹೆಂಚು, ಅರ್ಧ ವೃತ್ತಾಕಾರದ ಹೆಂಚು.

ಓಡಾಟ =ಸುತ್ತಾಟ, ಅಲೆತ.

ಓಡಾಡು = ಸುತ್ತಾಡು, ಅಲೆದಾಡು.

ಓಡಿಸು = ಹೊಡೆದಟ್ಟು, ಓಡುವಂತೆ ಮಾಡು.

ಓಡು = ಪಲಾಯನ ಮಾಡು, ವೇಗವಾಗಿ ಹೋಗು.

ಓಡು = ೧.ಮಡಕೆಯ ಚೂರು, ಒಡೆದ ಹೆಂಚು ೨.ತಲೆಬುರುಡೆ ೩.ಪ್ರಾಣಿ/ಕೀಟಗಳ ಮೈ ಮೇಲಿನ ಗಟ್ಟಿಹೊದಿಕೆ, ೪. ಮೊಟ್ಟೆಯ ಸಿಪ್ಪೆ.

ಓಡ್ಹುಳ = ಗಟ್ಟಿಯಾದ ಹೊದಿಕೆಯಿರುವ ಕೀಟ, ಸಗಣಿಹುಳ.

ಓಣಿ = ಗಲ್ಲಿ, ಕೇರಿ, ಬೀದಿ, ಸಂದಿ, ಚಿಕ್ಕದಾರಿ.

ಓತಿ = ಓತಿಕ್ಯಾತ, ಹೆಂಟೆಗೊದ್ದ, ಹಲ್ಲಿ ಜಾತಿಗೆ ಸೇರಿದ ಪ್ರಾಣಿ.

ಓತಿಕ್ಯಾತ = ಹೆಂಟೆಗೊದ್ದ, ಓತಿ.

ಓದು = ಓದುವಿಕೆ, ವಿದ್ಯೆ, ಜ್ಞಾನ.

ಓನಾಮ = ಯಾವುದೇ ವಿಷಯದ ಪ್ರಾಥಮಿಕ ಜ್ಞಾನ.

ಓಮ = ಅಜವಾನ.

ಓರಗಿತ್ತಿ = ಗಂಡನ ಸೋದರನ ಹೆಂಡತಿ.

ಓರೆಗೆ = ಸಮವಯಸ್ಕ.

ಓಲಿ = ಕಬ್ಬಿನ ಎಲೆ.

ಓಲೆ = ವಾಲೆ, ಕಿವಿಯ ಆಭರಣ.

ಓಲೆ = ತಾಳೆಮರದ ಗರಿ ೨.ಕಾಗದ, ಪತ್ರ.

ಓಲೆಗರಿ = ತಾಳೆಮರದ ಗರಿ.

ಓಲೆ ಭಾಗ್ಯ = ಮುತ್ತೈದೆತನ.

ಓಲೆಬೆಲ್ಲ = ವಾಲೆಗರಿಯಲ್ಲಿ ಸುತ್ತಿದ ಒಂದು ರೀತಿಯ ಬೆಲ್ಲ, ತಾಳೆಮರದ ರಸದಿಂದ ಮಾಡಿದ ಬೆಲ್ಲ.

ಓಸು = ಅಷ್ಟು.

ಓಸೋಸು = ಓಟೋಟು, ಅಷ್ಟಷ್ಟು, ಸ್ವಲ್ಪ ಸ್ವಲ್ಪ.

ಔ

ಔಂಕಿನ ಹಿಟ್ಟು = ಮೊಳಕೆ ಬಂದ ಭತ್ತವನ್ನು ಕುಟ್ಟಿ ಪುಡಿ ಮಾಡಿಡುವುದು (ಹೆಂಡ ತಯಾರಿಸಲು ಈ ಪುಡಿಯನ್ನು ಬಳಸುತ್ತಾರೆ).

ಔಂಕು = ಅಮುಕು, ಒತ್ತಿಹಿಡಿ.

ಔಂತ್ಲ = ಔತಣ, ಹಬ್ಬದೂಟ.

ಔಂಸ್ತಿ = ಔಷಧಿ.

ಔತ್ನ = ಔಂತ್ಲ.

ಔತಾರ = ಅವತಾರ, ವೇಶ.

ಔನ್ಸ್ತಿ = ಔಷಧಿ, ಮದ್ದು.

ಔಡು = ಅವುಡು, ಒಸಡು, ದವಡೆ.
ಔಡ್ಲುಹಣ್ಣು = ಫರಂಗಿ ಹಣ್ಣು.
ಔಷಧಿ = ಮದ್ದು.
ಔಷಧಿ ನೇರುವುದು = ಅಡಿಕೆ ತೋಟಕ್ಕೆ ಔಷಧಿ ಸಿಂಪಡಿಸುವ ಕೆಲಸ.
ಔಗ = ಅವುಗ, ಅಕ್ಕಿಬೆಲ್ಲದ ಸಿಹಿ ತಿಂಡಿ.
ಔಗಿನ ಮಡಕೆ = ಅವುಗ ಮಾಡಲು ಬಳಸುವ ತೂತಿರುವ ಮಡಕೆ.
ಔಚಿ = ಅವುಚಿ, ತಬ್ಬಿ.
ಔಮಾನ = ಅವಮಾನ.
ಔಲಕ್ಕಿ = ಅವಲಕ್ಕಿ.
ಔಲು = ಒಂದು ಜಾತಿಯ ಮೀನು.
ಔಸ್ರ = ಅವಸರ.
ಔಸಿಡು = ಔಸು.
ಔಸು = ಮುಚ್ಚಿಡು, ಕದ್ದಿಡು.

ಕ

ಕಂಕಣ = ಮದುವೆಯಲ್ಲಿ ವಧೂವರರಿಗೆ ಕೈಗೆ ಕಟ್ಟುವ ಅರಿಸಿನ ದಾರ.
ಕಂಕಳು = ಬಗಲು.
ಕಂಕ್ಳು = ಕಂಕಳು.
ಕಂಗಾಲು = ಗಾಬರಿ, ಹೆದರಿಕೆ, ದಿಕ್ಕೆಟ್ಟ ಸ್ಥಿತಿ.
ಕಂಗೆಡು = ಗಾಬರಿಯಾಗು, ದಿಕ್ಕುತಪ್ಪು.
ಕಂಚಿಕಾಯಿ = ಹೇರಳೆಕಾಯಿ, ಉಪ್ಪಿನ–ಕಾಯಿ ಹಾಕುವ ಒಂದು ಹುಳಿಕಾಯಿ.
ಕಂಚಿನಗಿಂಡಿ = ಕಂಚಿನಿಂದ ಮಾಡಿದ ನೀರು ಕುಡಿಯುವ ಲೋಟ.
ಕಂಚು = ತಾಮ್ರವೂ ತವರವೂ ಸೇರಿ ಆದ ಮಿಶ್ರಲೋಹ.
ಕಂಚು ಎಡಗದು = ಮದುಮಗಳು ಗಂಡನ ಮನೆಯ ಹೊಸಿಲು ದಾಟುವಾಗ ಮಾಡುವ ಶಾಸ್ತ್ರ.
ಕಂಚುಗಾರ = ತಾಮ್ರ, ಹಿತ್ತಾಳೆಯ ಕೆಲಸಗಳನ್ನು ಮಾಡುವವರು.
ಕಂಟ = ಪಾತ್ರೆಗಳ ಮೇಲಂಚು/ಬಾಯಿ/ಕೊರಳು.
ಕಂಟಕ = ವಿಘ್ನ, ತೊಂದರೆ.
ಕಂಟ್ಗಿ = ಒಂದೆಳೆಸರ.
ಕಂಡ = ಖಂಡ, ತುಂಡು, ಮೂಳೆಯಿಲ್ಲದ ಮಾಂಸ.
ಕಂಡದೆ = ಕಾಣಿಸಿದೆ.
ಕಂಡ್‌ಕಂಡಲ್ಲಿ = ಸಿಕ್ಕ ಸಿಕ್ಕಿದಲ್ಲಿ, ನೋಡಿದಲ್ಲೆಲ್ಲಾ.
ಕಂಡಮಟ್ಟಿಗೆ = ಹೊರನೋಟಕ್ಕೆ ಕಂಡಂತೆ.
ಕಂಡಾಪಟ್ಟೆ = ಸಿಕ್ಕಾಪಟ್ಟೆ, ಬಹಳಷ್ಟು.
ಕಂಡ್ರಾ = ನೋಡಿದಿರಾ, ಕಂಡಿರಾ.
ಕಂಡಿ = ಕಿಂಡಿ, ರಂದ್ರ.
ಕಂಡಿ ಅಡಕದು = ಬೇಲಿಯ ಕಂಡಿಯನ್ನು ಮುಚ್ಚುವುದು.
ಕಂಡಿದ್ದು ಕೇಳಿದ್ದು = ಮೊದಲೆ ಗೊತ್ತಿದ್ದಿದ್ದು, ಮೊದಲೇ ತಿಳಿದಿದ್ದು.
ಕಂಡು =ಗದ್ದೆ, ಅಡಿಕೆ ತೋಟದ ಒಂದು ಭಾಗ, ೨. ಕಂಡೆಲೆ, ಕುಡಿಯಿಲ್ಲದ ಬಾಳೆಯೆಲೆ.
ಕಂಡುಗ = ಇಪ್ಪತ್ತು ಕೊಳಗದ ಒಂದು ಅಳತೆ.
ಕಂಡ್ರು = ಕಮರು, ಸುಟ್ಟವಾಸನೆ.

ಕಂಡೆಲೆ = ಕುಡಿತೆಗೆದ ಬಾಳೆಯ ಎಲೆ.
ಕಂಡೇಟ್ಗೆ = ಕಂಡಕೂಡಲೇ.
ಕಂತ್ರಾಟು = ಗುತ್ತಿಗೆ.
ಕಂತ್ರಾಟುದಾರ = ಗುತ್ತಿಗೆ ದಾರ.
ಕಂತ್ರಿ = ಮೋಸಗಾರ, ಕಪಟಿ, ನಯ ನಾಜೂಕಿಲ್ಲದ.
ಕಂತು = ೧.ಮುಳುಗು, ಅಡಗು ೨.ನಿಯಮಿತ ಅವಧಿಗೆ ಕೊಡ ಬೇಕಾದ ಹಣ.
ಕಂತೆ = ಹೊರೆ, ಕಟ್ಟು, ಪಿಂಡಿ.
ಕಂತೆ ಬಿಚ್ಚು = ಹೇಳಿದ್ದನ್ನೇ ವಿಸ್ತಾರವಾಗಿ ಮತ್ತೆ ಮತ್ತೆ ಹೇಳುವುದು.
ಕಂದ = ಮಗು, ಹಸುಳೆ, ಕೂಸು.
ಕಂದಕ = ಅಗಳು, ಕುಣಿ, ಗುಂಡಿ.
ಕಂದಾಯ = ತೆರಿಗೆ, ತೆರ.
ಕಂದಾಯ ಮಿಗ್ತೆ = ದೇವಸ್ಥಾನಕ್ಕೆ ಸೇರಿದ ಜಮೀನನ್ನು ಸಾಗುವಳಿ ಮಾಡುವುದು. ಸರ್ಕಾರಕ್ಕೆ ಕೊಡುತ್ತಿದ್ದ ಭೂಕಂದಾಯ ಮತ್ತು ಗೇಣಿಕಂದಾಯ.
ಕಂದ್ಲಾರತಿ = ದೃಷ್ಟಿ ತೆಗೆಯಲು ಬೆಳಗುವ ಆರತಿ.
ಕಂದ್ಹಾಕು = ಪ್ರಾಣಿಗಳ ಭ್ರೂಣ ಸಂಪೂರ್ಣ ಬೆಳೆಯುವ ಮೊದಲೇ ಗರ್ಭಪಾತವಾಗು ವುದು.
ಕಂದಿಸು = ಮಸುಕಾಗಿಸು, ಬಾಡುವಂತೆ ಮಾಡು.
ಕಂದೀಲು = ಲಾಟೀನು, ತೂಗುದೀಪ.
ಕಂದು = ೧.ಮಾಸು, ಬಾಡು, ಕಪ್ಪಾಗು ೨.ಎಳೆಯ ಬಾಳೆಯ ಗಿಡ ೩.ಜಾನುವಾರುಗಳ ಮಾಸು.
ಕಂದು = ಸೀದುಹೋಗು, ತಳಹಿಡಿ.
ಕಂದು ಬಣ್ಣ = ಕೆಂಪು ಮಿಶ್ರಿತ ಕಪ್ಪು ಬಣ್ಣ, ಮಾಸಲು ಬಣ್ಣ.
ಕಂಪ = ಮಣ್ಣಿನ ಆಳದವರೆಗೂ ನೀರು ನಿಂತು ಉಸುಬಾಗಿರುವುದು, ಉಸುಬು.
ಕಂಪದಗದ್ದೆ = ಕೆಸರು ಗದ್ದೆ, ಉಸುಬಿನ ಗದ್ದೆ.
ಕಂಪು = ಸುಗಂಧ, ವಾಸನೆ, ಪರಿಮಳ.
ಕಂಬ = ಆಧಾರಕ್ಕೆ ನಿಲ್ಲಿಸಿದ ಮರ/ ಕಲ್ಲು, ಸ್ತಂಭ.
ಕಂಬಿ = ಸೀರೆ/ಪಂಚೆಯ ಅಂಚು ೨.ಲೋಹದ ತಂತಿ, ಕಬ್ಬಿಣದ ಸರಳು.
ಕಂಬಿಕೀಳು = (ಅಲಂ)ಓಡಿಹೋಗು.
ಕಂಬಿಯೆಣಿಸು = ಜೈಲುಶಿಕ್ಷೆಯನ್ನು ಅನುಭವಿಸು.
ಕಂಬ್ಳಿ = ಕುರಿಯ ತುಪ್ಪಟದ ಹೊದಿಕೆ, ಜಾಡಿ.
ಕಂಬ್ಳಿಕರೆಕಟ್ಟು = ಕಂಬಳಿ ಹರಿದು ಹೋಗದಂತೆ ಅಂಚಲ್ಲಿ ಗಂಟು ಹಾಕುವುದು.
ಕಂಬ್ಳಿ ಕೊಪ್ಪೆ = ಮಳೆಗಾಲದಲ್ಲಿ ತಲೆಯ ರಕ್ಷಣೆಗೆ ಹಾಕಿಕೊಳ್ಳುವ ಕಂಬಳಿಯ ಸೂಡು.
ಕಂಬ್ಳಿ ಚೊಪ್ಪು = ಹರಿದ ಕಂಬಳಿ.
ಕಂಬ್ಳಿ ಹುಳ = ಮೈಯೆಲ್ಲಾ ಕೂದಲಿರುವ ಹುಳ, ಚುಂಗುಳ.
ಕಂಬ್ರು = ಕರಿದ ಎಣ್ಣೆಯ ಘಾಟು, ಉರಿದ/ನಂದಿಹೋದ ದೀಪದ ಸುಟ್ಟವಾಸನೆ.

ಕಂಯ್ಯ = ಕಹಿ.

ಕಂಯ್ಯಹುಳಿ = ಹೇರಳೆಕಾಯಿ, ಕಂಚಿ ಕಾಯಿ.

ಕಂಯ್ಕ =ಕಹಿಯಿರುವ, ಒಗರಾಗಿರುವ.

ಕಂಸ = ಆವರಣ (ಕಂಸ).

ಕಕ್ಕಟೆಕಾಯಿ = ತುಂಬಾಕಾಯಿ, ಗಟ್ಟಿಕಾಯಿ.

ಕಕ್ಕಟ್ಟೆಕಾರ = ವಿಪರೀತಕಾರ .

ಕಕ್ಕಟ್ಟೆ ಕೈಂಯ್ಯ= ತುಂಬಾ ಕಹಿ, ಬಹಳ ಕಹಿ.

ಕಕ್ಕಡ = ಪಂಜು, ದೀವಟಿಗೆ, ಬಟ್ಟೆಯನ್ನು ಎಣ್ಣೆಗೆ ಅದ್ದಿ, ಕೋಲಿಗೆಸುತ್ತಿ ಬೆಂಕಿ ಉರಿಸುವುದು.

ಕಕ್ಕಯ್ಯ =ಚಿಕ್ಕಪ್ಪ.

ಕಕ್ಕಾಬಿಕ್ಕಿ = ದಿಗ್ಭ್ರಮೆ, ಗಾಬರಿ, ದಿಕ್ಕು ತೋಚದಿರುವುದು.

ಕಕ್ಲಾತಿ = ಕಕ್ಕುಲತೆ, ಕನಿಕರ, ದಯೆ.

ಕಕ್ಕಿಸು = ವಾಂತಿ ಮಾಡಿಸು, ಬಲಾತ್ಕಾರವಾಗಿ ಹಣ ವಸೂಲು ಮಾಡು, ಕೊಟ್ಟ ಹಣವನ್ನು ವಾಪಾಸು ಪಡೆಯುವುದು

ಕಕ್ಕು = ವಾಂತಿ, ವಾಂತಿಮಾಡು, ಕಾರು, ಮುಚ್ಚಿಟ್ಟ ವಿಚಾರಗಳನ್ನು ಬಲಾತ್ಕಾರವಾಗಿ ಹೊರಹಾಕು.

ಕಕ್ಕೆಮರ = ತುಂಬಾಗಟ್ಟಿಯಾದ ಕಾಡಿನ ಮರ, ದಾವಣಿಗೆ ಮಧ್ಯದ ಬೇಟಿಗೆ ಬಳಸುತ್ತಾರೆ. (ಬೇಟಿ = ಮಧ್ಯದ ಕಂಬ).

ಕಗ್ಗಂಟು = ಬಿಡಿಸಲಾಗದ ಗಂಟು.

ಕಗ್ಗತ್ಲು = ಕಪ್ಪುಕತ್ತಲು, ದಟ್ಟವಾದ ಕತ್ತಲೆ.

ಕಗ್ಗಲ್ಲು= ಕಾಡುಕಲ್ಲು, ಕಪ್ಪುಕಲ್ಲು.

ಕಚಡ = ಗಲೀಜು, ಕೊಳಕು, ಸೊಪ್ಪು, ಸದೆ, ಕಸ, ಕಡ್ಡಿ.

ಕಚಪಚ = ಚೆನ್ನಾಗಿ ಜಗಿಯುವುದು, ಸಶಬ್ಧವಾಗಿ ತಿನ್ನುವುದು.

ಕಚ್ಚ = ಕಚ್ಚೆ, ಕೌಪೀನ, ಒಳವಸ್ತ್ರ.

ಕಚ್ಚಿನ್ ಕೆಲ್ಸ = ಕುಸುರಿ ಕೆಲಸ.

ಕಚ್ಚಾಡು = ಜಗಳವಾಡು (ಅಲಂ).

ಕಚ್ಚು = ೧.ಹಲ್ಲಿನಿಂದ ಕಡಿ, ೨.ಮರ ಅಥವಾ ಕಲ್ಲಿನ ಮೇಲೆ ಉಳಿಯಿಂದ ಮಾಡುವ ಗುರುತು.

ಕಚ್ಚೆ = ಕಾಚ, ಒಳಉಡುಪು, ಕಚ್ಚ.

ಕಚ್ಚೆಹರ್ಕ = ಕಾಮುಕ, ಜಾರ (ಅಲಂ).

ಕಜ್ಜಾಯ = ಎಣ್ಣೆಯಲ್ಲಿ ಕರಿದ ಅಕ್ಕಿ ಬೆಲ್ಲದ ಸಿಹಿ ತಿಂಡಿ.

ಕಜ್ಜಿ = ಮೈಮೇಲೆ ಏಳುವ ಗುಳ್ಳೆಗಳು, ಚರ್ಮರೋಗ, ತುರಿಗಜ್ಜಿ

ಕಜ್ಜಿಬುರ್ಕ = ಯಾವಾಗಲೂ ಕಜ್ಜಿ ಮೈಯವನು.

ಕಟಕಟ = ೧.ಚಳಿಯಿಂದ ನಡುಗುವಾಗ ಹಲ್ಲಿನ ಶಬ್ಧ ೨.ಕೋಪದಿಂದ ಹಲ್ಲು ಕಡಿಯುವುದು.

ಕಟಕ್ಲು = ಒಣಗಿ ಗಟ್ಟಿಯಾಗಿರುವುದು (ಕಟಕ್ಲು ರೊಟ್ಟಿ).

ಕಟಗ = ೧.ಕಟ್ಟಿಕೊ, ಮದುವೆ ಮಾಡಿಕೊ ೨.ಕಟಕ್ಲು.

ಕಟಪಟಿ = ಜಗಳ, ವೈಮನಸ್ಸು.

ಕಟಬಾಯಿ = ಬಾಯಿಯ ತುದಿ, ಬಾಯಿಯ ಎರಡು ಅಂಚು, ತುಟಿಗಳ ಎಡಬಲದ ಅಂಚು.

ಕಟ್ಟಗೆಕಾಯು = ಚೆನ್ನಾಗಿ ಬಿಸಿಯಾಗು,

೨. ನೊಚ್ಚಗಿನ ಬಿಸಿಲು ಕಾಯಿಸಿ ಕೊಳ್ಳುವುದು.
ಕಟ್ಟಳೆ = ಕಟ್ಟುಪಾಡು, ನಿರ್ಬಂಧ.
ಕಟ್ಮಸ್ತು = ಕಟ್ಟುಮಸ್ತು, ಗಟ್ಟಿಮುಟ್ಟು, ತುಂಬಿದ ಮೈಕಟ್ಟು.
ಕಟಾಪಟಿ = ಜಗಳ, ಮೈಮನಸ್ಸು.
ಕಟಾವು = ಕೊಯ್ಲು, ಪೈರುಕೊಯ್ಯವುದು.
ಕಟ್ಟಾಣಿ ಗುಂಡು = ಸಣ್ಣಗುಂಡಿನ ಸರ, ಸರದಗುಂಡು.
ಕಟ್ಟಾಣಿಸರ = ಚಿನ್ನದ ಸರ, ಸಣ್ಣಸಣ್ಣ ಚಿನ್ನದ ಗುಂಡುಗಳಿರುವ ಮೂರು /ಐದು ಎಳೆಯ ಸರ.
ಕಟ್ಗಿ =ಕಟ್ಟಿಗೆ, ಸೌದೆ, ಒಣಗಿದ ಮರ.
ಕಟ್ಟಿಗೆ ಕಡಿಸೋ ಕಂಬಳ = ಊರಿನ ೨೦ – ೩೦ ಜನ ಸೇರಿಕೊಂಡು ಎಲ್ಲರಿಗು ಬೇಕಾಗುವಷ್ಟು ಸೌದೆಯನ್ನು ಕಾಡಿಗೆ ಹೋಗಿ ಕಡಿಯುವುದು.
ಕಟ್ಗಿಹೊರೆ = ಸೌದೆಗಳನ್ನು ಒಟ್ಟು ಮಾಡಿ ಕಟ್ಟಿರುವುದು.
ಕಟ್ಟಿರ = ಕಪ್ಪು ಇರುವೆ, ಕಚ್ಚುವ ಗೊದ್ದ.
ಕಟ್ಟಿರುವೆ = ಕಟ್ಟಿರ.
ಕಟ್ಟಿಸು = ಬಂಧಿಸು, ಕಟ್ಟುವಂತೆ ಮಾಡು.
ಕಟ್ತಿವ್ನಿ = ಕಟ್ಟುತ್ತೇವೆ.
ಕಟ್ಟಿನ್ಹಾವು = ಚಿಕ್ಕ ಚಿಕ್ಕ ಪಟ್ಟೆಗಳಿರುವ ಹಾವು, ಒಂದು ಜಾತಿಯ ಹಾವು.
ಕಟ್ನಿಟ್ಟು = ಕಟ್ಟುನಿಟ್ಟು, ನಿರ್ಬಂಧ, ಕಟ್ಟಳೆ, ಆಹಾರ–ವಿಹಾರ, ಆಚಾರ–ವಿಚಾರದಲ್ಲಿ ಶಿಸ್ತು.
ಕಟು = ಕಹಿ, ತಿಕ್ತ.
ಕಟುಸತ್ಯ = ನೋವಿನ ವಿಚಾರವಾದರೂ ಸತ್ಯ/ನಿಜ.
ಕಟ್ಟು = ೧.ತಡೆ, ಅಡ್ಡಗಟ್ಟು, ಬಂಧಿಸು ೨.ಬಂಧನ, ೩.ಕಾಳು/ಬೇಳೆಯನ್ನು ಬೇಯಿಸಿ ಬಸಿದ ಸಾರು/ರಸ ೪.ಸೇರಿಸು, ಕೂಡಿಸು ೫.ಅಣೆಕಟ್ಟು.
ಕಟ್ಟುಕತೆ = ವಾಸ್ತವಿಕವಲ್ಲದ ಮಾತು, ನಿಜವಲ್ಲದ ವಿಚಾರ.
ಕಟ್ಟುಗೂಣಿ = ಮೀನು ಹಿಡಿಯಲೆಂದು ನೀರು ಬೀಳುವ ಸ್ಥಳದಲ್ಲಿ ಇಡುವ ಕೂಣಿ.
ಕಟ್ಟುನಿಟ್ಟು = ಕಟ್ನಿಟ್ಟು.
ಕಟ್ಟುಪಾಡು = ವ್ಯವಸ್ಥೆ, ಕ್ರಮ.
ಕಟ್ಟುಬೀಳು = ನಿರ್ಬಂಧಕ್ಕೆ ಒಳಗಾಗು.
ಕಟ್ಟುಮಸ್ತು = ಕಟ್ಮಸ್ತು.
ಕಟ್ಟುಮಾಡಿಸು = ಬೇರೆಯವರು ಅವನತಿ ಹೊಂದಲೆಂದು ಮಾಡಿಸಿದ ಮಾಟ.
ಕಟ್ಟೆ = ೧.ಜಗಲಿ ೨.ವೇದಿಕೆ ೩.ಒಡ್ಡು, ಅಣೆಕಟ್ಟೆ ೪ ಗಿಡ ಮರಗಳು ಸಾಯುವ ಒಂದು ರೋಗ.
ಕಟ್ಟೆಹಂದಿ = ಬತ್ತದ ಪೈರಿಗೆ ರೋಗ ಬಂದಾಗ ಬಲಿ ಕೊಡುವ ಹಂದಿ.
ಕಟ್ಲೇರಿ ಸಾಮಾನು = ಕಟ್ಲೇರಿ.
ಕಟ್ಣೆ = ಕಲ್ಲಿನಿಂದ ಕಟ್ಟಿದ ಪಾಯ, ಕಲ್ಲಿನ ವೇದಿಕೆ, ೨. ಬಾವಿಯ ಒಳರಚನೆ.
ಕಟ್ಲೆ = ತಿಥಿ, ಉತ್ತರ ಕ್ರಿಯೆ, ಸತ್ತವರಿಗೆ ಸತ್ತ ಹನ್ನೆರಡನೇ ದಿನಕ್ಕೆ ಮಾಡುವ ಕಾರ್ಯ ೨.ಮೊಕದ್ದಮೆ.
ಕಠಾರಿ = ೧.ಉದ್ದನೆಯ ಮುಂದೆ ಚೂಪಾಗಿರುವ ಪ್ರಾಣಿ ಬೇಟೆ

ಮಾಡುವ ಕಬ್ಬಿಣದ ಸಾಧನ ೨. ಅಲಗು ಮತ್ತು ಈಟಿಯನ್ನು ಹೊಂದಿರುವ ಆಯುಧ.

ಕಡ = ೧.ಸಾಲ, ಎರವು ೨.ಕಡವೆ, ಕಾಡುಕೋಣ, ಕಾಡೆಮ್ಮೆ.

ಕಡಕ್ = ೧.ಕರಾರು ವಾಕ್ಕು, ನಿಷ್ಟುರದ ನಡೆ ೨.ಖಾರ, ತೀಕ್ಷ್ಣ.

ಕಡಕು = ಕಿವಿಯ ಆಭರಣ.

ಕಡಗ = ಕೈ ಕಾಲಿಗೆ ಧರಿಸುವ ಚಿನ್ನ/ ಬೆಳ್ಳಿಯ ಬಳೆ, ಗೊಲಸು.

ಕಡಗಲು = ಮೊಸರು ಕಡೆದು ಮಜ್ಜಿಗೆ ಮಾಡುವ ಸಾಧನ, ಕಡೆಗೋಲು, ಮಂತು.

ಕಡಗಟ್ಲು = ಕಣದ ಕೆಲಸದ ಮುಕ್ತಾಯದ ದಿನ ಆಚರಿಸುವ ಹಬ್ಬ, ಒಕ್ಕಲು ಮುಗಿದ ದಿನದ ಊಟ.

ಕಡಗತ್ತಿ = ಕಡಿಯುವ ಕತ್ತಿ, ಮಂಡ್ಗತ್ತಿ.

ಕಡಗೂಟ = ನೊಗದಿಂದ ಎತ್ತುಗಳು ಜಾರಿಕೊಳ್ಳದಿರಲೆಂದು ಜೊತ್ಗೆ ಹಗ್ಗದಿಂದ ಕಟ್ಟುವ ಮರದ ಗೂಟ.

ಕಡಗೋಲು = ಕಡಗಲು.

ಕಡಜ = ಜೇನುಹುಳದಂತಹ ಒಂದು ಕೀಟ.

ಕಡಜಗ = ಕಡಜ.

ಕಡಜಲ = ಕಡಜ.

ಕಡಜಲ ಹಣ್ಣು = ಕವಳಿಹಣ್ಣು.

ಕಡತ = ಲೆಖ್ಖದ ಪುಸ್ತಕ, ಪುಸ್ತಕಗಳ ರಾಶಿ.

ಕಡ್ತ = ಕಡಿತ, ತುರಿಕೆ.

ಕಡಬು = ಅಕ್ಕಿ ತರಿಯನ್ನು ಬೇಯಿಸಿ, ಆವಿಯಲ್ಲಿಟ್ಟು ಮತ್ತೆ ಬೇಯಿಸಿದ ತಿಂಡಿ.

ಕಡಮುರ್ಗಿ = ಕನ್ನಡಿ ಹಾವು.

ಕಡವೆ = ಸಾರಂಗ, ಜಿಂಕೆ ಜಾತಿಗೆ ಸೇರಿದ ಪ್ರಾಣಿ.

ಕಡಹಾಕುವುದು = ಮತ್ತು ಬರಿಸಿ ದೊಡ್ಡಪ್ರಮಾಣದಲ್ಲಿ ಮೀನು ಹಿಡಿಯುವ ವಿಧಾನ.

ಕಡಲೆ = ದ್ವಿದಳ ಧಾನ್ಯ (ಹಸಿಕಡ್ಲೆ, ಹುರಿಗಡ್ಲೆ, ನೆಲಗಡಲೆ).

ಕಡಾಣಿ = ಕಡಗುಣಿ, ಗಾಡಿಯ ಕೀಲು, ಚಕ್ರಗಳು ಬೀಳದಂತೆ ತಡೆಯುವ ಕಬ್ಬಿಣದ ಕೀಲು.

ಕಡಾಯ = ಅಗಲ ಮತ್ತು ಎತ್ತರದ ದೊಡ್ಡ ಬೋಗುಣಿ.

ಕಡಾಯಿ = ಕಡಾಯ.

ಕಡ್ತಾಳೆ = ಕತ್ತಾಳೆ, ಗುಡಮಂಜ್ರಿಗಿಡ, ನಾರಿರುವ ಗಿಡ.

ಕಡಿ = ಹಲ್ಲಿಂದ ಕಚ್ಚು, ಹೋಳು/ತುಂಡು/ ಚೂರುಮಾಡು, ೨. ಕಟಕಟ ಹಲ್ಲುಕಡಿ.

ಕಡಿ = ನವೆ, ತುರಿಕೆ ೨. ರುಬ್ಬು, ತಿರುವು.

ಕಡಿ ಅಕ್ಕಿ = ನುಚ್ಚಕ್ಕಿ .

ಕಡಿದುಗುಡ್ಡೆಹಾಕು = ಅಸಾಧ್ಯವಾದ ಕೆಲಸ ಮಾಡು .

ಕಡಿಮಾಡು = ಮನೆಯ ಮಾಡಿಗೆ ಹೊಂದಿಕೊಂಡಂತೆ ಇನ್ನೊಂದು ಇಳಿಜಾರಾದ ಮಾಡು.

ಕಡ್ಡಿ = ಚಿಕ್ಕಕೋಲು, ಬಳಪ, ಬೆಂಕಿಕಡ್ಡಿ.

ಕಡ್ಡಿಅಂಚು =ಸೀರೆಯ ಒಡಲು/ ಅಂಚಿನಲ್ಲಿರುವ ಸಣ್ಣ ಜರಿಯ ಎಳೆ.

ಕಡ್ಡಿಕೀಸುವುದು = ತೆಂಗಿನ ಗರಿಗಳಿಂದ

ಕಡ್ಡಿಯನ್ನು ಸೀಳಿ ತೆಗೆಯುವುದು.

ಕಡ್ಡಿಚಾಪೆ = ಕಡ್ಡಿಯಂತಿರುವ ಗಟ್ಟಿಹುಲ್ಲಿನಿಂದ ಮಾಡಿದ ಚಾಪೆ.

ಕಡ್ಡಿತುಂಡಾದಂಗೆ = ಖಚಿತ ಮಾತು, ನೇರನುಡಿ (ಹೋಲಿಕೆ).

ಕಡ್ಡಿಪುಡಿ = ತಂಬಾಕು/ಹೊಗೆಸೊಪ್ಪಿನ ಪುಡಿ.

ಕಡ್ಡಿಹಿಡಿ = ತೆಂಗಿನ ಕಡ್ಡಿಯ ಪೊರಕೆ, ಬರ್ಲು.

ಕಡೀಗೆ = ಕೊನೆಗೆ, ನಂತರ, ಆನಂತರ.

ಕಡೀನುಚ್ಚು = ದಪ್ಪನುಚ್ಚು.

ಕಡುಗುಂಡಿ = ನೀರು ಕಪ್ಪಾಗಿ ಕಾಣುವ ಆಳದ ಗುಂಡಿ.

ಕಡುಬಿನ ಮಡ್ಕೆ = ಕಡುಬು ಮಾಡಿ ಬೇಯಿಸುವ ಮಣ್ಣಿನ ಸರಗೋಲು.

ಕಡುಬು = ಕಡಬು.

ಕಡುವೆ = ಗದ್ದೆಯಲ್ಲಿ ತೂತಾಗಿ ಕೊಳವೆಯಂತೆ ನೀರು ಹೋಗುವ ಜಾಗ.

ಕಡ್ದುದಬ್ಬಾಕು = ಕೆಲಸ ಮಾಡು (ಕಡೆದು ದಬ್ಬಾಕದು ಅಷ್ಟರಲ್ಲೇ ಅದೆ).

ಕಡೆ = ೧.ಕೊನೆ, ಅಂತ್ಯ, ತುದಿ, ೨.ಅಂಚು.

ಕಡೆಕಲ್ಲು = ರುಬ್ಬುವ ಕಲ್ಲು.

ಕಡೆಗಾಲ = ಅಂತ್ಯಕಾಲ.

ಕಡೆಗುಂಡು = ರುಬ್ಬುವ ಗುಂಡುಕಲ್ಲು.

ಕಡೆಗೋಲು = ಕಡಗೋಲು.

ಕಡೆಗೋಲು ಕಂಬ = ಕಡೆಗೋಲನ್ನು ಕಟ್ಟಲು ನೆಟ್ಟಿರುವ ಮರದ ಗೂಟ.

ಕಡೆತಾಲಿ = ಕೈಯಿರುವ/ ಕಡೆಯಿರುವ ಪಾತ್ರೆ.

ಕಡೆತಂಬಾಳೆ = ಕಡೆತಾಲಿ.

ಕಡ್ಲೆಕಾಯಿ = ನೆಲಗಡಲೆ ಕಾಯಿ.

ಕಡ್ಲೆಗಂಟಿನ ಸರ = ಒಂದು ಕೊರಳ ಆಭರಣ.

ಕಡ್ಲೆಬೀಜ = ನೆಲಗಡಲೆ ಬೀಜ.

ಕಡ್ಲೆಬೇಳೆ ಹೋಳಿಗೆ = ಕಡ್ಲೆಬೇಳೆ, ಬೆಲ್ಲದ ಹೂರಣ ಹಾಕಿ ಮಾಡಿದ ತಿಂಡಿ.

ಕಣ್‌ಕಟ್ಟು = ಮೋಡಿ, ವಂಚನೆ ೨. ನಿಷ್ಠೆಯಿಲ್ಲದ/ಬೇಜವಾಬ್ದಾರಿಯ ಕೆಲಸ.

ಕಣ್‌ಕಪ್ಪು = ಕಾಡಿಗೆ, ಅಂಜನ.

ಕಣ್‌ಚಿಪ್ಪು = ಎಣ್ಣೆಯಲ್ಲಿ ತಿಂಡಿ ಕರಿಯಲು ಸಣ್ಣ ಸಣ್ಣ ರಂಧ್ರಗಳಿರುವ ಚಮಚ.

ಕಣ್‌ಬಿಡು = ೧.ಕಣ್ಣನ್ನು ತೆರೆ ೨.ಎಚ್ಚರಗೊಳ್ಳು ೩.ಏನೂ ಅರ್ಥ–ವಾಗದೆ ಬೆಪ್ಪಾಗಿ ನೋಡು.

ಕಣ = ೧.ಕಣ್ಣ, ಧಾನ್ಯ ಒಕ್ಕುವ ಸ್ಥಳ ೨.ಖಣ, ರವಿಕೆ ಬಟ್ಟೆ.

ಕಣಕ = ನಾದಿದ ಹಿಟ್ಟು, ಗೋದಿ/ಮೈದಾ ಹಿಟ್ಟನ್ನು ನೀರಲ್ಲಿ ಕಲಸಿ ನಾದಿರುವುದು.

ಕಣಕಣ = ಬಳೆಯ ಸದ್ದು.

ಕಣಕು = ಕದಡಿದ ನೀರು, ರಾಡಿ ನೀರು, ಬಗ್ಗಡದ ನೀರು.

ಕಣಚು = ಕಳಚು, ಬಿಚ್ಚು.

ಕಣಜ = ಧಾನ್ಯವನ್ನು ಸಂಗ್ರಹಿಸಲು ರಚಿಸಿದ ನೇಯ್ದ ಬಿದಿರಿನ ತಡಿಕೆ.

ಕಣಂದಿ = ಕಣೆಯಿರುವ ಹಂದಿ, ಮುಳ್ಳುಹಂದಿ.

ಕಣಂದಿ ಕರ್ಸೆ = ಮುಳ್ಳುಹಂದಿಯ

ಆಹಾರ ಚೀಲವನ್ನು ತೆಗೆದು ಒಣಗಿಸಿ ಔಷಧಿಯಾಗಿ ಬಳಸುವುದು.

ಕಣಂದಿ ಗುದ್ದು = ಮುಳ್ಳುಹಂದಿಯ ಬಿಲ.

ಕಣಲೆ = ಕಳಲೆ, ಬಿದಿರಿನ ಮೊಳಕೆ.

ಕಣ್ಸನ್ನೆ = ಕಣ್ಣಿಂದ ಸನ್ನೆ ಮಾಡು.

ಕಣ್ಣ = ಕಣ.

ಕಣ್ಣಳತೆ = ಕಣ್ಣಿಗೆ ಸುಲಭವಾಗಿ ಕಾಣಿಸುವಷ್ಟು ದೂರ.

ಕಣಾ = ಗಂಡಸರೊಂದಿಗೆ ಮಾತಾಡು- ವಾಗ ಮಾತಿಗೆ ಸೇರಿಸುವ ಶಬ್ಧ (ಹೌದು ಕಣಾ, ಅಲ್ಲ ಕಣಾ).

ಕಣ್ಣಾಗು = ದೃಷ್ಟಿತಾಗು.

ಕಣ್ಣಾಡಿಸು = ಆಗಾಗ ನೋಡುತ್ತಿರು.

ಕಣ್ಣಾರೆ = ಪ್ರತ್ಯಕ್ಷವಾಗಿ ನೋಡುವುದು.

ಕಣ್ಣಾಲಿ = ಕಣ್ಣಿನ ಪಾಪೆ.

ಕಣಿ = ಶಕುನ, ಗಾದೆ, ಒಗಟು.

ಕಣಿಗಲೆ = ಒಂದು ಜಾತಿ ಹೂಬಿಡುವ ಗಿಡ.

ಕಣ್ಣಿ = ಹಗ್ಗ, ಬೀಳು .

ಕಣ್ಣೀರು = ಕಂಬನಿ, ಅಶ್ರು.

ಕಣ್ಣು = ನೇತ್ರ ೨. ತೂತು, ರಂಧ್ರ ೩.ಗೆಣ್ಣಿನಲ್ಲಿರುವ ಮೊಳಕೆ.

ಕಣ್ಣು ಕಡಿ = ಗಾಜಿನ ಬಳೆಗಳು ಸಂಪೂರ್ಣ ಒಡೆಯದೆ ಒಂದು ಕಡೆ ಮಾತ್ರ ಒಡೆಯುವುದು.

ಕಣ್ಣುಕಣ್‌ಬಿಡು = ಕಂಗಾಲಾಗು, ದಿಕ್ಕುಕಾಣದಾಗು.

ಕಣ್ಣುಕತ್ಲು = ತಲೆಸುತ್ತಿ ಕಣ್ಣು ಕಾಣ- ದಂತಾಗುವುದು.

ಕಣ್ಣುಕುಟಿಕೆ = ಕಣ್ಣುರೆಪ್ಪೆಯ ಮೇಲೆ- ಯೇಳುವ ಸಣ್ಣಕುರ.

ಕಣ್ಣುಕುಟ್ಲು = ಕಣ್ಣುಕುಟಿಕೆ.

ಕಣ್ಣುಗುಡ್ಡೆ = ಕಣ್ಣುಸುತ್ತ ಇರುವ ಪ್ರದೇಶ, ಕಣ್ಣುಹುಬ್ಬು.

ಕಣ್ಣುಬಿಡು = ೧.ಕಣ್ಣುತೆರೆ, ನಿದ್ದೆಯಿಂದ ಏಳು ೨.ಜಾಗೃತನಾಗು ೩.ದೊಡ್ಡ ಕಣ್ಣುಬಿಟ್ಟುಗದರಿಸು.

ಕಣ್ಣುಮಿಟುಕಿಸು = ಕಣ್ಣನ್ನು ಮುಚ್ಚಿ ತೆರೆಯುವುದು.

ಕಣ್ಣುಮುಚ್ಚಿ ಬಿಡುವುದರಲ್ಲಿ = ಅತಿ ಶೀಘ್ರದಲ್ಲಿ.

ಕಣ್ಣುಮುಚ್ಚಾಲೆ = ೧.ಒಂದು ಆಟ ೨.ಬಂದೂ ಬಾರದಂತೆ (ಮಳೆ ಇತ್ಯಾದಿ), ಕೆಲಸಮಾಡಿಯೂ ಮಾಡದಂತೆ.

ಕಣ್ಣುಸಟುಗ = ಕಣ್ ಚಿಪ್ಪು, ಜಾಲರಿ, ಎಣ್ಣೆಯ ತಿಂಡಿಗಳನ್ನು ಕರಿಯಲು ಬಳಸುವ ಸಟ್ಟುಗ.

ಕಣ್ಣು ಹಾರುವುದು = ಕಣ್ಣುರೆಪ್ಪೆ ಇದ್ದಕ್ಕಿದಂತೆ ಅದುರುವುದು.

ಕಣ್ಣುಹೊಡೆ = ಬೇಕೆಂದೇ ಒಂದು ಕಣ್ಣನ್ನು ಮಿಟುಕಿಸುವುದು.

ಕಣೆ = ೧.ದೊಡ್ಡ ಮುಳ್ಳು, ೨.ಹೆಣ್ಣನ್ನು ಸಂಭೋದಿಸು/ಕರೆಯುವುದು. (ಹೌದು ಕಣೆ, ಅಲ್ಲ ಕಣೆ) (ಅಲಂ)

ಕಣೆ ಹಂದಿ = ಮುಳ್ಳುಹಂದಿ.

ಕಣ್ಣೆಲೆ = ವೀಳ್ಯದೆಲೆಗೆ ಎಣ್ಣೆ ಸವರಿ ಒಂಭತ್ತು ತೂತ ಮಾಡಿ ಮಕ್ಕಳ ದೃಷ್ಟಿ ತೆಗೆಯುವುದು.

ಕತ್ತ = ೧.ಹದ ಮಾಡಿದ ಕತ್ತಾಳೆ/ತೆಂಗಿನ ನಾರು ೨.ನಾರಿನಿಂದ ನೆಯ್ದ ಹಗ್ಗ.

ಕತ್ತರಿ = ಅಡ್ಡಕತ್ತರಿ, ಕತ್ತರಿಸುವ ಸಾಧನ ೨.ಗಾಡಿನಡೆಸುವವನು ಕೂರುವ ಮೂಕಿನ ಹಿಂದಿನ ಮರ.

ಕತ್ತರಿಸು = ತುಂಡರಿಸು, ಕುಯ್ಯು.

ಕತ್ತಲೆ = ಕತ್ಲೆ, ಅಂಧಕಾರ, ರಾತ್ರಿ, ಮಬ್ಬು.

ಕತ್ತಾಳೆ = ಭೂತಾಳೆ, ಜಮೀನಿನ ಜೈವಿಕಬೇಲಿಯಾಗಿ ಉಪಯೋಗ, ನಾರಿನಿಂದ ಚಾಪೆ ನೆಯ್ಯಲು ಉಪಯೋಗಿಸುತ್ತಾರೆ.

ಕತ್ತಿ = ಕುಡ್ಲು, ಖಡ್ಗ.

ಕತ್ತಿಬಾಯಿ = ಕತ್ತಿಯ ಅಲಗು.

ಕತ್ತಿಮಸಿ = ಕತ್ತಿಯನ್ನು ಹರಿತಮಾಡು, ೨. ವಿರೋಧಿಸು, ಹಗೆ ಸಾಧಿಸು.

ಕತ್ರಿಒಡ್ಡು = ಒಂದು ರೀತಿಯ ಕತ್ತರಿಯನ್ನು ಬಳಸಿ ಇಲಿ, ಹೆಗ್ಗಣ ಅಳಿಲು ಮುಂತಾದುವನ್ನು ಹಿಡಿಯುವುದು.

ಕತ್ತು = ಕೊರಳು, ಕುತ್ತಿಗೆ.

ಕತ್ತು = ಬೆಂಕಿ ಹತ್ತಿಕೊಳ್ಳುವುದು.

ಕತ್ಲುಗೌದದೆ = ಕತ್ತಲು ದಟ್ಟವಾಗುತ್ತಿದೆ, ರಾತ್ರಿಯಾಗುತ್ತಿದೆ.

ಕತೆ ಕಂಡಾಪಟ್ಟೆ = ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳುವುದು (ನನ್ನ ಕತೆ ಕಂಡಾಪಟ್ಟೆ).

ಕತ್ತೆ = ಭಾರ ಹೊರುವ ಪ್ರಾಣಿ.

ಕತ್ತೆ ಮಲ = ಕತ್ತೆಯಂತೆ ಉದ್ದಕಿವಿಯಿರುವ ಮೊಲ.

ಕತ್ತೆಲೌಡಿ = ಒಂದು ಬೈಗುಳ.

ಕತ್ಲೆಗಟ್ಟು = ಮಳೆ ಬರುವ ಮೊದಲು ಮೋಡಗಳು ದಟ್ಟವಾಗಿ ಕತ್ತಲಾದಂತೆ ಕಾಣುವುದು.

ಕದ = ತಾಳ, ಅಗಣಿ, ಬಾಗಿಲಪಡಿ.

ಕದರಡಕೆ = ಆರಿಸಿ ತಂದು ಹಸನು ಮಾಡಿದ ಬಿದ್ದ ಅಡಿಕೆ ಕಾಯಿಗಳು (ಉದುರಿಬಿದ್ದ ಅಡಿಕೆ ಕಾಯಿಗಳು).

ಕದರು = ಕಲಕು, ಬೆರೆಸು.

ಕದಿ = ಕಳ್ಳತನ ಮಾಡು, ಅಪಹರಿಸು.

ಕದಿಯದು = ಕದಿಯುವುದು, ಕಳ್ಳತನ ಮಾಡುವುದು.

ಕದಿರು = ಕದ್ರು, ಹೊಡೆ, ಜೋಳ/ಬತ್ತದ ತೆನೆ.

ಕದ್ದಿಡು = ಅವುಸಿಡು, ಮುಚ್ಚಿಡು, ಯಾರಿಗೂ ಕಣದಂತೆ ತೆಗೆದಿಡು.

ಕದ್ನಿ = ಸಿಡಿಮದ್ದು, ಗಂಧಕ ತುಂಬಿಸಿ ಸ್ಫೋಟಿಸುವ ಸಾಧನ, ಸ್ಫೋಟಕ, ಕೇವಲ ಶಬ್ದಕ್ಕಾಗಿ ಬಳಸುತ್ತಿದ್ದರು. (ಒಂದು ಕಡೆಯಿಂದ ಗಂಧಕ ಹಾಕಿ ಇನ್ನೊಂದು ಕಡೆಯಿಂದ ಬೆಂಕಿ ಕೊಡುವುದು).

ಕದ್ದಿಂಗ್ಳು = ಕತ್ತಲ ರಾತ್ರಿ, ಬೆಳದಿಂಗಳಿಲ್ಲದ ರಾತ್ರಿ

ಕದೀಮ = ಪ್ರಚಂಡ, ನುರಿತವ, ಕಳ್ಳ.

ಕದುರೊಡೆ = ಹೊಡೆ ಬರುವ ಸಮಯ, ಎಳೆಯ ಬತ್ತದ ತೆನೆಗಳು ಹೊರಬೀಳುವ ಕಾಲ.

ಕದ್ದುಮುಚ್ಚಿ = ಕಣ್ಣುತಪ್ಪಿಸಿ, ಕಳ್ಳತನದಲ್ಲಿ.

ಕದ್ರುಬತ್ತ = ಕೊಯ್ಲು ಆದ ನಂತರ ಆಯುವ ಉದುರಿರುವ ಬತ್ತದ ತೆನೆ.

ಕನಗರ್ಕಿ = ೧. ಕನಸು, ನಿದ್ದೆಯಲ್ಲಿ ಮಾತಾಡು, ೨. ಬಡಬಡಿಸು.

ಕನಗರ್ರು = ಕನಸು ಕಾಣುವುದು, ಕನಗರ್ಕಿ.

ಕನಡಿ = ಕನ್ನಡಿ, ದರ್ಪಣ, ಮುಕುರ.

ಕನಡಿ ಪೆಟ್ಗಿ = ಪೆಟ್ಟಿಗೆಯೊಳಗೆ ಕನ್ನಡಿ ಅಳವಡಿಸಿರುವುದು.

ಕನ್ನ = ೧. ಕಳ್ಳತನ ೨. ಗೋಡೆಯಲ್ಲಿ ಕೊರೆಯುವ ಕಂಡಿ/ರಂಧ್ರ.

ಕನ್ನಡಕ = ಚಾಳೀಸು, ಸುಲೋಚನ.

ಕನ್ನಡಿಹಾವು = ಉರಿಮಂಡಲದ ಹಾವು.

ಕನಿಕರ = ಮರುಕ, ದಯೆ.

ಕನಿಷ್ಟ = ಅಲ್ಪ, ಅತಿಹೀನ, ಕೆಳಮಟ್ಟದ.

ಕನ್ರು = ಎಣ್ಣೆಯಲ್ಲಿ ಕರಿಯುವಾಗ ಬರುವ ಕಮರು ವಾಸನೆ, ಒಗರು.

ಕನ್ಸು = ಕನಸು.

ಕನ್ನೆ = ಕನ್ಯೆ, ವಧು.

ಕಪ = ಕಫ, ಕೆಮ್ಮಿದಾಗ ಹೊರಬರುವ ಶ್ಲೇಷ್ಮ.

ಕಪಟ = ವಂಚನೆ, ಮೋಸ.

ಕಪ್ಪ = ಸುಂಕ.

ಕಪಾಟು, ಗೋಡೆಯೊಳಗಿನ ಗೂಡು, ಬೀರು.

ಕಪಾಲು = ಕೆನ್ನೆ, ಕಪಾಳ.

ಕಪಾಲ್ಜುರ = ಕೆಪಟೆ, ಕೆನ್ನೆಯಲ್ಲಾಗುವ ಜುರ.

ಕಪಿ = ಮಂಗ, ಕೋತಿ.

ಕಪಿಮುಷ್ಟಿ = ಮಂಗನ ಹಿಡಿತ ೨. ಬಿಗಿಯಾಗಿ ಹಿಡಿಯುವುದು ೩. ಜಿಪುಣತನ.

ಕಪಿಚೇಷ್ಟೆ = ವಿಪರೀತ ತಂಟೆ, ಕಿಲಾಡಿತನ.

ಕಪ್ಪು = ೧. ಕತ್ತಲೆ ೨. ಕರಿಯಬಣ್ಣ ೩.ಕಾಡಿಗೆ ೪.ತೋಟದಲ್ಲಿ ನೀರು ಹೋಗಲು ಮಾಡಿದ ಕಾಲುವೆ.

ಕಪ್ಪುಹಲಗೆ = ಬಳಪದಿಂದ ಬರೆಯುವ ಸಾಧನ.

ಕಪ್ಪೆ = ಮಂಡೂಕ.

ಕಪ್ಪೆಚಿಪ್ಪು = ಜಲಜಂತುಗಳ ಇಬ್ಭಾಗವಾದ ಚಿಪ್ಪು/ಹೊರಕವಚ.

ಕಪ್ಪೆರೋಗ = ಜಾನುವಾರುಗಳಿಗೆ ಬರುವ ಒಂದು ರೋಗ, ಗಂಟಲು ಕಟ್ಟುವುದು ನಾಲಿಗೆ ದಪ್ಪವಾಗುವುದು.

ಕಪೋತ = ಪಾರಿವಾಳ.

ಕಬಚ = ಅರ್ಧ ತೋಳಿನ ಅಂಗಿ, ಉಡುಪು, ಮೇಲಂಗಿ.

ಕಬಳಿಸು = ೧. ನುಂಗು, ಮುಕ್ಕು, (ಅಲಂ)೨. ಲಪಟಾಯಿಸು.

ಕಬಳೆ = ಒಂದು ಜಾತಿಯ ಮುಳ್ಳಿನ ಗಿಡ.

ಕಬಳೆಹಣ್ಣು = ಕಬಳೆಗಿಡದಲ್ಲಿ ಬಿಡುವ ಕಪ್ಪುಹಣ್ಣು, ವಟ್‌ಮಡಕೆ ಹಣ್ಣು.

ಕಬ್ಬಕ್ಕಿ = ಕಪ್ಪುಹಕ್ಕಿ, ಕೊಕ್ಕರೆ, ಮೀನು ತಿನ್ನುವ ಒಂದು ಜಾತಿಯ ಹಕ್ಕಿ.

ಕಬ್ಬಿಣ = ಅದಿರಿನಿಂದ ತಯಾರಿಸಿದ ಕಪ್ಪು ಬಣ್ಣದ ಲೋಹ.

ಕಬ್ಬಿನ ಬ್ಯಾಳೆ = ಕಾಕಂಬಿ.

ಕಬ್ಬಿನಾಲೆ = ಕಬ್ಬನ್ನು ಅರೆದು ಬೆಲ್ಲ ಮಾಡುವ ಸ್ಥಳ.

ಕಬ್ಬೆಕ್ಕು = ಕಪ್ಪಗಿರುವ ಕಾಡಿನ ಬೆಕ್ಕು, ಮರದಿಂದ ಮರಕ್ಕೆ ನೆಗೆಯುತ್ತದೆ, ೨. ಹಾರ್ಬೆಕ್ಕು.

ಕಬ್ಬೆಹಣ್ಣು = ಒಂದು ಜಾತಿಯ ಕಾಡಿನ ಹಣ್ಣು.

ಕಮರು = ಕಮಟು, ಸೀಕಲುವಾಸನೆ,

ತಳಹಿಡಿದ ವಾಸನೆ.

ಕಮಲ = ತಾವರೆ.

ಕಮರತೇಗು = ಹುಳಿತೇಗು, ಆಹಾರದ ವ್ಯತ್ಯಾಸದಿಂದ ಬರುವ ತೇಗು.

ಕಮ್ಮಗೆ = ಘಮಘಮಿಸುವಂತೆ, ಬೆಚ್ಚಗೆ, ಗರಿಗರಿಯಾಗಿ, ಹಿತವಾಗಿ.

ಕಮಾನು = ಬಿಲ್ಲಿನ ಆಕಾರದ, ಅರ್ಧಚಂದ್ರಾಕೃತಿಯ.

ಕಮಾನುಗಾಡಿ = ಗಾಡಿಯ ತಡಿಕೆಗೆ ಕಮಾನು ಕಟ್ಟಿದ ಗಾಡಿ.

ಕಮಾಯಿಸು = ೧. ಗಳಿಸು, ಸಂಪಾದಿಸು ೨. ಮೋಸ/ವಂಚನೆಯಿಂದ ಗಳಿಸು.

ಕಮ್ಮಾರ = ಕಮ್ಮಟಿ, ಕಬ್ಬಿಣದ ಕೆಲಸ ಮಾಡುವವನು

ಕಮ್ಮಿ = ಕಡಿಮೆ, ಕೊರತೆ, ನ್ಯೂನತೆ.

ಕಮ್ರು = ಸುಟ್ಟವಾಸನೆ.

ಕಯ್ಯ್ಯ = ಕಹಿ, ಷಡ್ರಸಗಳಲ್ಲೊಂದು.

ಕಯ್ಯಾರ = ಸ್ವಂತ ಕೈಯಿಂದ ೨. (ಅಲಂ)ಸ್ವ ಇಚ್ಛೆಯಿಂದ.

ಕಯ್ಸಾಲೆ = ಅಂಗಳ.

ಕಯ್ಯಿ = ಕೈ, ಕರ, ಹಸ್ತ.

ಕಯ್ದು = ಮುಕ್ತಾಯ.

ಕಯ್ದು ಮಾಡು = ಮುಗಿಸು, ನಿಲ್ಲಿಸು, ಸಾಕುಮಾಡು.

ಕರ = ಕರು, ಹಸು/ಎಮ್ಮೆಯ ಮರಿ.

ಕರಕರ = ಗಂಟಲಿನಲ್ಲಾಗುವ ಕಿರಿಕಿರಿ.

ಕರಕಾಗು = ಬೆಂದು ಕಪ್ಪಾಗು, ಕರಟು, ಹೊತ್ತಿಹೋಗು.

ಕರಗಡುಬು = ಒಂದು ರೀತಿಯ ಸಿಹಿ ತಿಂಡಿ.

ಕರಗು = ಬೆರೆ, ಜೀರ್ಣವಾಗು, ದ್ರವವಾಗು.

ಕರಜಿಕಾಯಿ = ಕಣಕದೊಳಗೆ ಹೂರಣವಿಟ್ಟು ಮಡಚಿ, ಎಣ್ಣೆಯಲ್ಲಿ ಕರಿದ ಸಿಹಿತಿಂಡಿ.

ಕರಟು = ಕರಕಾಗು.

ಕರಡ = ಸಾಮಾನ್ಯವಾಗಿ ಗದ್ದೆ ಅಂಚು, ಬ್ಯಾಣದಲ್ಲಿ, ಮನೆಯ ಹೆಂಚಿನ ಮೇಲೆ ಬೆಳೆದು ಒಣಗಿದ ಸಣ್ಣ ಹುಲ್ಲು.

ಕರಡಿ = ಮೈತುಂಬಾ ಉದ್ದ ಕೂದಲಿರುವ ಪ್ರಾಣಿ.

ಕರಡು = ನೀರಿಗೆ/ದ್ರವಪದಾರ್ಥಕ್ಕೆ ಬೆರಸು, ದ್ರವವಾಗಿಸು.

ಕರಣಿ = ಗಾರೆಕತ್ತಿ.

ಕರಬಿಡದು = ಹಾಲು ಕರೆಯುವುದು.

ಕರಾಬು = ವ್ಯವಸಾಯಕ್ಕೆ ಯೋಗ್ಯವಲ್ಲದ ಭೂಮಿ.

ಕರಾರು = ಒಪ್ಪಂದ, ಷರತ್ತು.

ಕರಾರು ವಾಕ್ಯ = ನಿಖರವಾದ, ಸರಿಯಾದ.

ಕರವೀರ = ಒಂದು ಬಗೆಯ ಹೂ ಗಿಡ,

ಕರಾವು = ಹಾಲು, ಹಯನು, ಜಾನು–ವಾರುಗಳು ಕೊಡುವ ಹಾಲು.

ಕರಿ = ಮಸಿ, ಕಿಟ್ಟ.

ಕರಿ = ಕಪ್ಪು, ಕಪ್ಪನೆಯ.

ಕರಿ = ಕರೆ, ಕೂಗು, ಬರಹೇಳು.

ಕರಿ = ಹುರಿ, ಎಣ್ಣೆಯಲ್ಲಿ ಹುರಿ, ಬಾಡಿಸು.

ಕರಿ = ಹಾಲುಕರೆ, ಹಾಲು ಹಿಂಡು.

ಕರಿ = ಹಬ್ಬದ ಮರುದಿನ, ಹಬ್ಬದ ಕರಿ, ದೀಪಾವಳಿಯ ಮರುದಿನ ಆಚರಿಸವ ಹಬ್ಬ.

ಕರಿಕಂಬ್ಳಿ = ಕೇವಲ ಕಪ್ಪಗಿರುವ ಉಣ್ಣೆಯಿಂದ ಮಾಡಿದ ಕಂಬ್ಳಿ.

ಕರಿಕಾಪಿ = ಹಾಲು ಬೆರೆಸದ ಕಾಫಿ.

ಕರಿಗಿ = ಅತಿ ಕಪ್ಪು ಬಣ್ಣದವಳು (ಸ್ತ್ರೀ)

ಕರಿಜೀರಿಗೆ = ಯಾವುದೇ ರುಚಿಯಿಲ್ಲದ ಔಷಧಿ, ಕಷಾಯಕ್ಕೆ ಬಳಸುವ ಜೀರಿಗೆ, ಆದರೆ ಜೀರಿಗೆಗೂ ಇದಕ್ಕೂ ಹೋಲಿಕೆಯೇ ಇಲ್ಲ.

ಕರಿದಿನ = ಹಬ್ಬದ ಮರುದಿನ.

ಕರಿದು = ಕಪ್ಪಾಗಿದ್ದು.

ಕರಿಬಲೆ ಹೊಡೆಯದು = ಹಬ್ಬಕ್ಕೆ ಮೊದಲು ಮನೆಯನ್ನು ಶುಚಿಗೊಳಿಸುವುದು.

ಕರಿಬೇವು = ಸಣ್ಣಜಾತಿಯ ಮರ, ಪರಿಮಳಯುಕ್ತ ಸಾಂಬಾರ ಪದಾರ್ಥ.

ಕರಿಮೀನು = ಕರ್ಮೀನು, ಒಣಗಿಸಿದ ಮೀನು.

ಕರಿಯ = ಕಪ್ಪಗಿರುವವನು (ಪು)

ಕರು = ಕರ.

ಕರುಕ್ಲು = ಸೀದ, ಕಪ್ಪಾದ, ತಳಹಿಡಿದ.

ಕರುಬಿಡು = ಹಾಲುಕರೆ.

ಕರುಬು = ೧.ಹೊಟ್ಟೆಕಿಚ್ಚು, ಅಸೂಯೆ, ೨. ಅಸೂಯೆ ಪಡು.

ಕರುಳು = ೧.ಕಳ್ಳು, ಪಚನಾಂಗ ೨.ಮಮತೆ, ಹೆತ್ತೊಡಲು.

ಕರೆ = ೧.ಆಮಂತ್ರಣ ೨.ಸೀರೆಯ ಸೆರಗಿನ ಭಾಗದ ಅಂಚು ೩.ಕಲೆ, ಗುರುತು.

ಕರೆ = ಕಾಳುಮೆಣಸಿನ ಗೊಂಚಲು.

ಕರೆಕಟ್ಟು = ಸೀರೆ/ಕಂಬಳಿ ಕೊನೆಯ ದಾರ/ ಜುಂಗನ್ನು ಹೆಣೆದು ಬಿಚ್ಚಿ ಹೋಗದಂತೆ ಕಟ್ಟುವುದು.

ಕರೆಹಟ್ಟಿ = ಹಾಲು ಕರೆಯುವ ಕೊಟ್ಟಿಗೆ.

ಕರೆ ಹೈಗನಳಬಿ = ಹೈಗನ ಮರದ ಬುಡದಲ್ಲಿ ಏಳುವ ಕಪ್ಪು ಅಳಬಿ.

ಕರ್ಕ = ಎತ್ತಿಕೋ, ಮಕ್ಕಳನ್ನು ಸೊಂಟದ ಮೇಲೆ ಕೂರಿಸಿಕೋ.

ಕರ್ಕಟ್ಟೆ = ಕಿರಿಕಿರಿ ಮಾಡು, ಕಿರುಕುಳಕೊಡು. ಚಿಂತೆಯಾಗು.

ಕರ್ಕರೆ = ಬೇಜಾರು, ಕರ್ಕಟ್ಟೆ.

ಕರ್ಕಿಹುಲ್ಲು = ದರ್ಬೆ, ಸಣ್ಣಹುಲ್ಲು.

ಕರ್ಚು = ವೆಚ್ಚ, ವ್ಯಯ.

ಕರ್ಣಕುಂಡಲ = ಹೂಬಿಡುವ ಒಂದು ಗಿಡ.

ಕರ್ಣೆ = ಕರಣಿ, ಗಾರೆಕತ್ತಿ.

ಕರ್ತವ್ಯ = ಮಾಡಲೇ ಬೇಕಾದ ಕಾರ್ಯಗಳು.

ಕರ್ದಲ್ಲಿಗೆ = ಕರೆದಲ್ಲಿಗೆ, ಎಲ್ಲಿಗೆ ಕರೆದರೆ ಅಲ್ಲಿಗೆ.

ಕರ್ಪೂರ = ದೂಪ.

ಕರ್ಮ = ಕೆಲಸ, ದುರಾದೃಷ್ಟ, ೨.ಪೂರ್ವ ಜನ್ಮದ ಪಾಪ.

ಕರ್ಮಾಂತರ = ಉತ್ತರಕ್ರಿಯೆ.

ಕರ್ಲು = ೧.ಸಣ್ಣಸಣ್ಣ ಕಲ್ಲುಗಳು ತುಂಬಿರುವ ಗಟ್ಟಿ ಭೂಮಿ ೨.ಹಣ್ಣುಗಳು, ತರಕಾರಿಗಳ ಮಧ್ಯದಲ್ಲಿ ಕೆಟ್ಟು ಹೋಗಿ ಗಟ್ಟಿಗಟ್ಟಿಯಾ ಗಂಟುಗಳಾಗಿರುವಿಕೆ.

ಕಲಕು = ಕದಡು, ಬೆರೆಸು, ಅಲ್ಲೋಲ ಕಲ್ಲೋಲಮಾಡು.

ಕಲಗಚ್ಚು = ಅಕ್ಕಿತೊಳೆದ ನೀರಿನ ಜೊತೆಗೆ ಅಡಿಗೆ ಮಾಡುವಾಗ ಅಳಿದುಳಿದ ತರಕಾರಿ ಮತ್ತು ಮುಸುರೆಯ ನೀರು.

ಕಲಬಿ = ಒಂದು ದೊಡ್ಡ ಇಡೀ ಮರವನ್ನು ಕೊರೆದು ಮಾಡಿದ ದೊಡ್ಡ ಪೆಟ್ಟಿಗೆ, ಅಕ್ಕಿ, ತೌಡು ಸಂಗ್ರಹಿಸಿಟ್ಟು ಕೊಳ್ಳುವ ಮರದ ಪೆಟ್ಟಿಗೆ, ದೋಣಿ.

ಕಲಶ = ೧.ಪೂಜೆಯಲ್ಲಿ ನೀರು ತುಂಬಿಡುವ ಚೆಂಬು, ೨.ದೇವಾಲಯದ ಶಿಖರ, ಕಳಸ.

ಕಲಸು = ಬೆರೆಸು, ಮಿಶ್ರಣಮಾಡು, ಮಿಲಾಕತ್ಮಾಡು.

ಕಲಾಪತ್ತು = ಜರಿ, ಜರತಾರಿ.

ಕಲಾಪತ್ತಿನ ಸೀರೆ = ಚಿನ್ನ ಬೆಳ್ಳಿಯಿಂದ ನೆಯ್ದ ಜರತಾರಿ ಸೀರೆ.

ಕಲಾಯಿ = ತಾಮ್ರ, ಹಿತ್ತಾಳೆ ಪಾತ್ರೆಗಳು ಕಿಲುಬು ಬಾರದಂತೆ ಸತುವಿನಿಂದ ಹಾಕುವ ಲೇಪ/ ತವರದ ಲೇಪ.

ಕಲಾಸು = ಮುಕ್ತಾಯ, ಸಾವು, ಕೊನೆ, ಅಂತ್ಯ.

ಕಲಿ = ತಿಳಿ, ಅಭ್ಯಾಸಮಾಡು, ಅನುಭವ ಪಡೆ.

ಕಲಿಗಾಲ = ೧.ಕೆಟ್ಟಕಾಲ, ಮೋಸದ ಕಾಲ, ೨. ಕಲಿಯುಗ.

ಕಲಿಸು = ಹೇಳಿಕೊಡು, ಕಲಿಯುವಂತೆ ಮಾಡು, ಅಭ್ಯಾಸಮಾಡಿಸು.

ಕಲ್ಲಿ = ಜಲ್ಲೆ.

ಕಲೀಜ = ಆಡು, ಕುರಿಯ ಶ್ವಾಸಕೋಶ.

ಕಲೆ = ೧.ಹಳೆಯ ಗಾಯದ ಗುರುತು, ಕೊಳೆಯಿಂದುಂಟಾದ ಗುರುತು, ೨.ಕಳಂಕ ೩.ಹುಟ್ಟಿನಿಂದಲೇ ಬಂದ ಉತ್ತಮ ಅಭ್ಯಾಸ.

ಕಲ್ಕಟ್ಟೆ = ಕಲ್ಲಿನ ಕಟ್ಟೆ, ಕಟ್ಟಣೆ.

ಕಲ್ಗಚ್ಚು = ಕಲಗಚ್ಚು.

ಕಲ್ಗರ್ಗಿ = ಭಾರೀ ಗಟ್ಟಿಯ ಮರ, ಗೆದ್ದಲು ಹಿಡಿಯುವುದಿಲ್ಲ.

ಕಲ್ಗಂಬ = ಕಲ್ಲಿನ ಕಂಬ.

ಕಲ್ಗಡ್ಗಿ = ಕಲ್ಲಿನ ಗಡಿಗೆ, ಕಲ್ಲು ಮಡಕೆ.

ಕಲ್ಲರೆ = ಅರೆಕಲ್ಲು, ದೊಡ್ಡಕಲ್ಲು.

ಕಲ್ಪತ್ತು = ಔಷಧಿ/ನಾರು/ಬೇರುಗಳನ್ನು ಅರೆಯಲೆಂದೇ ಮಾಡಿದ ಕಲ್ಲಿನ ಸಾಧನ.

ಕಲ್ಮರ್ಗಿ = ಬಳಪದ ಕಲ್ಲಿನಿಂದ ಮಾಡಿದ ಅಗಲ ಬಾಯುಳ್ಳ ಪಾತ್ರೆ.

ಕಲ್‌ಹೂವು = ಒಂದು ಸಾಂಬಾರ ಪದಾರ್ಥ, ಕಲ್ಲಿನ ಮೇಲೆ ಬೆಳೆಯುವ ಬಿಳಿ ಪಾಚಿ.

ಕಲ್ಲನ್ನ = ಬೆಣಚು ಕಲ್ಲನ್ನು ಒಲೆಯ ಕೆಂಡದಲ್ಲಿ ಕಾಯಿಸಿ ಮೊಸರನ್ನಕ್ಕೆ ಹಾಕುವುದು (ಬಾಣಂತಿಗೆ ಶೀತ, ನಂಜಾಗಬಾರದೆಂದು ಈ ಪದ್ಧತಿ).

ಕಲ್ನಾರು = ನಾರು ಇರುವ ಒಂದು ಸಸ್ಯ.

ಕಲ್ಬಾಳೆ = ಕಾಡಿನಲ್ಲಿನ ಬಾಳೆ ಹಣ್ಣಿನಲ್ಲಿ ಬೀಜವೇ ತುಂಬಿರುವ ಬಾಳೆ, ಬೆಟ್‌ಬಾಳೆ.

ಕಲ್ಬೀರು = ಕಲ್ಲನ್ನು ಎಸೆಯುವುದು.

ಕಲ್ಮುಳ್ಳು = ಬಚ್ಚಲು ಕಲ್ಲು / ಬೀಸೇಕಲ್ಲು/ ಕಡೇಕಲ್ಲು/ ಕಡೇಗುಂಡುಗಳನ್ನು ಚಾಣದಿಂದ ಹೊಡೆದು ಒರಟು ಮಾಡುವಿಕೆ.

ಕಲ್ಲುಗರಿಗೆ = ಒಂದು ಬಗೆಯ ಗಟ್ಟಿಮರ, ಕಲ್ಗರ್ರಿ.

ಕಲ್ಲುಚಡಿ = ಕಲ್ಲಿನ ಮೆಟ್ಲು, ಕಲ್ಲಿನಿಂದ ಮಾಡಿದ ಕುಳಿತುಕೊಳ್ಳುವ ಜಾಗ.

ಕಲ್ಲು ಸಂಪ್ಗೆ ಹಣ್ಣು = ಹುಳಿ ಮಿಶ್ರಿತ ಸಿಹಿಯ ಕೆಂಪು ಹಣ್ಣು, ಇದರ ಮರ ಗಟ್ಟಿ ಆದರೆ ನೇರವಾಗಿ ಬೆಳೆಯಲ್ಲವಾದ್ದರಿಂದ ನಾಟಕ್ಕೆ ಉಪಯೋಗಿಸುವುದಿಲ್ಲ.

ಕಲ್ಲು ಹಾಕು = (ಅಲಂ)ಹಾಳುಮಾಡು.

ಕಲ್ಕುಟಿಗ = ೧.ಒಂದು ಭೂತದ ಹೆಸರು ೨.ಕಲ್ಲಿನ ಕೆಲಸ ಮಾಡುವವನು.

ಕಲ್ಗುಂಡು = ಕಲ್ಲುಗುಂಡು, ಒರಳಿನ ಗುಂಡು.

ಕಲ್ಗುತ್ತು = ಕೋಳಿಯ ತುತ್ತಿನ ಚೀಲ/ಜಠರ.

ಕಲ್ಲೆದೆ = ಕಲ್ಲಿನಂತೆ ಕರಗದಿರುವ ಮನಸ್ಸು/ಹೃದಯ.

ಕಲ್ಚೆಡೆ ಮರ = ಸುಬಾಬುಲ್ ಮರ.

ಕಲ್ಲೊಡ್ಡ = ಕಲ್ಲು ಕೆಲಸ ಮಾಡುವವನು.

ಕಲ್ಲೊತ್ತು = ಅಂಗಾಲಿಗೆ ಕಲ್ಲು ಒತ್ತಿ ಉಂಟಾಗುವ ಗಂಟು, ಅಂಗಾಲಲ್ಲಿ ಬೆಳೆಯುವ ನೋವಿನ ದುರ್ಮಾಂಸ.

ಕಲ್ಲೊಲೆ = ಬಳಪದ ಕಲ್ಲಿನಿಂದ ಮಾಡಿದ ಒಲೆ.

ಕಲ್ಲೊಳ್ಳು = ಕಲ್ಲಿನ ಒರಳು.

ಕ್ವಡಪಾನ = ಬಿಂದಿಗೆ, ನೀರು ತುಂಬಿ ತರುವ ಪಾತ್ರೆ.

ಕ್ವಂಪೆ = ೧.ವಮೂಲೆ, ಸಂದಿ, ೨.ಕಾಡಿನೊಳಗಿರುವ ಊರು.

ಕ್ವಲೆ = ಕೊಲೆ, ಬೇರೆಯವರಿಂದಾದ ಮರಣ, ಅಸಹಜ ಸಾವು.

ಕ್ವಲೆ = ಜಕ್ಕಣಿ, ಸತ್ತ ಹಿರಿಯರು.

ಕ್ವಲೆಗಿಡು = ಜಕ್ಕಣಿಯಿಡು, ಸತ್ತಹಿರಿಯರಿಗಾಗಿ ಎಡೆಹಾಕಿ, ಊಟ ಬಡಿಸುವುದು.

ಕ್ವಲೆಗಿಂಡಿ = ಕ್ವಲೆಗಿಡುವಾಗ ಒಂದೊಂದು ಮಣೆಯ ಮೇಲೂ ನೀರನ್ನು ಹಾಕಿಡುವ ಲೋಟ.

ಕ್ವಲೆ ಮಿಳ್ಳೆ = ಕ್ವಲೆ ಗಿಂಡಿ, ಕ್ವಲೆಗಿಡಲೆಂದೇ ವಿಶಿಷ್ಟವಾಗಿ ಮಾಡಿದ ಲೋಟ.

ಕ್ವಳೆ = ಕೊಳೆ, ಬಡ್ಡು, ಗಲೀಜು.

ಕ್ವಳೆರೋಗ = ಮಳೆ ಜಾಸ್ತಿಯಾದಾಗ ಅಡಿಕೆ ಕಾಯಿಗಳು ಕೊಳೆತು ಉದುರುವ ರೋಗ.

ಕವಚು = ಕೌಂಚು, ಬೋರಲಾಗು, ಬೋರಲಾಗಿಡು, ಮಗುಚು.

ಕವಟು = ಕೌಂಟು, ಜಿಡ್ಡಿನ ವಾಸನೆ, ಹಳೆಯ ಜಿಡ್ಡು, ಎಣ್ಣೆಯ ಜಿಡ್ಡು.

ಕವಣ = ಇಬ್ಬನಿ, ಮಂಜು, ಹಿಮ.

ಕವಣೆ = ಹಕ್ಕಿಗಳನ್ನು ಓಡಿಸಲು ಹಗ್ಗದಿಂದ ಮಾಡಿದ ಚಾಟರಿ ಬಿಲ್ಲು.

ಕವಲಿ = ಕೌಲಿ, ಕೌಲಿ ದನ, ಕೆಂಬರು ಬಣ್ಣದ ಹಸು.

ಕವಲು = ಕವೆ, ಎರಡು ಭಾಗದ ರೆಂಬೆ, ಸೀಳಿದ ರೆಂಬೆ, ಕವಲುದಾರಿ.

ಕವಲುದಾರಿ = ಅಡ್ಡದಾರಿ, ಅಡ್ಡರಸ್ತೆ.

ಕವಲೊಡೆ = ಭಾಗವಾಗು, ಟಿಸಿಲೊಡೆ, ಕೊಂಬೆಹುಟ್ಟು, ಪಸರಿಸು.

ಕವಳ = ೧.ಊಟ, ಭಿಕ್ಷೆ ೨.ತಾಂಬೂಲ, ಎಲೆಯಡಿಕೆ ೩. ಇಬ್ಬನಿ, ಕವಣ.

ಕವಣ = ಇಬ್ಬನಿ, ಮಂಜು, ಹಿಮ.

ಕವಳಿಹಣ್ಣು = ಒಂದು ಜಾತಿಯ ಕಾಡು ಗಿಡ ಮತ್ತು ಅದರ ಕಪ್ಪನೆಯ ಹಣ್ಣು.

ಕವಳಿಗೆ = ಕೌಳಿಗೆ, ಇಪತ್ತು. ಐವತ್ತರ ವೀಳ್ಯದೆಲೆ ಕಟ್ಟು .

ಕವಾಟ = ಕಪಾಟು, ಕಬಿಣದ ಪೆಟ್ಟಿಗೆ, ಬೀರು.

ಕವುಚು = ಕವಚು.

ಕವೆ = ಹರೆ, ರೆಂಬೆ.

ಕವೆಕೋಲು = ಮುಳ್ಳುಗಿಡಗಳನ್ನು ಕಡಿಯಲು ಮಾಡಿಕೊಂಡ ಕವಲಿರುವ ಕೋಲು.

ಕಷ್ಟ = ತೊಂದರೆ, ಕ್ಲೇಶ, ದುಃಖ, ನೋವು.

ಕಷ್ಟಕೊಡು = ಇನ್ನೊಬ್ಬರಿಗೆ ತೊಂದರೆ ಕೊಡು, ನೋವುಂಟು ಮಾಡು, ಹಿಂಸಿಸು.

ಕಷ್ಟಪಡು = ತೊಂದರೆಯನ್ನು ಅನುಭವಿಸು, ಶ್ರಮವಹಿಸು.

ಕಷ್ಟವಾನಿ = ಶ್ರಮವಹಿಸುವವನು, ಶ್ರದ್ಧಾವಂತ, ದುಡಿಮೆಗಾರ.

ಕಸ = ೧. ಕಳೆ, ಕೆಲಸಕ್ಕೆ ಬಾರದ ವಸ್ತುಗಳು, ೨. ಹೆರಿಗೆಯ ನಂತರ ಬೀಳುವ ಮಾಸು, ಕೂಸಿನ ಚೀಲ, ೩. ಕಾಲಿನಲ್ಲಿ ರಕ್ತನಾಳಗಳು ಗಂಟಾಗಿ ನೋವಾಗುವ ಒಂದು ರೋಗ, ವಾತ ರೋಗ.

ಕಸಕು = ಹೊಸಕು, ಉಜ್ಜು, ತೀಡು, ಕುಕ್ಕು.

ಕಸಕಲು = ಪೊರಕೆ, ಹಿಡಿ, ಬರ್ಲು, ಕಸಕಿಲು.

ಕಸ್ಗ = ಕಿತ್ತುಕೋ.

ಕಸಗಾಯಿ = ದೋರಗಾಯಿ, ಎಳೆಯ ಕಾಯಿ, ಹೀಚು, ಹಣ್ಣಾಗದಿರುವ ಕಾಯಿ.

ಕಸಗು = ಕಸಕು.

ಕಸದ್‌ಬರ್ಲು = ಕಸಬರಿಕೆ, ಹಿಡಿ.

ಕಸಬು = ಕೆಲಸ, ವೃತ್ತಿ, ಉದ್ಯೋಗ.

ಕಸಬುಗಾರ = ಕೆಲಸಗಾರ, ಅನುಭವಿ ಕೆಲಸಗಾರ.

ಕಸರತ್ತು = ವ್ಯಾಯಾಮ, ಕೆಲಸ.

ಕಸರು = ೧.ಒಗರು, ಮೊಸರು ಮೊಸರಿನಂತೆ ಇರುವುದು, ಗರಣೆ ೨.ಕೆಸರು, ಕೊಳೆ, ಕಸ್ರು.

ಕಸಾಯ = ಕಷಾಯ, ಔಷಧಿಯುಕ್ತ ವಸ್ತುಗಳನ್ನು ಕುದಿಸಿ ಇಂಗಿಸಿದ್ದು, ಒಗರು ರಸ.

ಕಸ್ಗಾಳು = ಒಣಗಿಸಿದ ಮೆಣಸಿನ ಕಾಳು.

ಕಸ್ಗಾಯಿ = ಕಸಗಾಯಿ.

ಕಸಮಾವಿನ ಹಣ್ಣು = ಮಾವಿನ ಹಣ್ಣಿನ ಒಂದು ತಳಿ, ರಸಪೂರಿ.

ಕಸು = ಕಸುವು, ಶಕ್ತಿ, ದೇಹಬಲ.

ಕಸುಗ = ಕಿತ್ತುಕೊ, ಕಸಿದುಕೋ, ಕಸ್ಗ.

ಕಸ್ಗಂಡ = ಕಸಿದುಕೊಂಡ, ಕಿತ್ತುಕೊಂಡ.

ಕಸ್ತು = ಕಸಿದು, ಕಸಿದುಕೊಂಡು.

ಕಸ್ರು = ಕಸರು.

ಕಸೆ = ಒಳಲಂಗದ ದಾರ, ಚಡ್ಡಿ ಕಟ್ಟುವ ದಾರ.

ಕಸೆ ಅಂಗಿ = ಗುಂಡಿಯಿಲ್ಲದ ದಾರದಿಂದ ಕಟ್ಟುವ ಅರ್ಧ ತೋಳಿನ ಅಂಗಿ.

ಕಹಳೆ = ಉದ್ದವಾಗಿ ಬಾಗಿರುವ ಕೊಂಬು/ವಾದ್ಯ.

ಕಹಿ ಹಿಂಡ್ಲೆಕಾಯಿ = ಹಿಂಡ್ಲೆಕಾಯಿ, ದೀಪಾವಳಿಯಲ್ಲಿ ಬಲೀಂದ್ರನ್ನ ಬರ ಮಾಡಿಕೊಳ್ಳಲು ಇದರ

ಬಳ್ಳಿ ಮತ್ತು ಕಾಯಿಗಳನ್ನು ಉಪಯೋಗಿಸುತ್ತಾರೆ, ಹಿಂಡ್ಲ ಚ್ಚಿಕಾಯಿ.

ಕಳಕಿ = ಎಳೆಯ ಹಲಸಿನ ಕಾಯಿ, ಬಿದಿರಿನ ಬಲಿತ ಮೊಳಕೆ.

ಕಳಚು = ಬಿಚ್ಚು, ತೆಗೆ.

ಕಳದು = ಕಳೆದು, ವ್ಯವಕಲಿಸಿ.

ಕಳಲೆ = ಬಿದಿರಿನ ಎಳೆಯ ಮೊಳಕೆ, ಎಳೆ ಬಿದಿರು.

ಕಳಸ = ೧.ಕಲಶ, ೨.ಮದುವೆಯಲ್ಲಿ ಉಪಯೋಗಿಸುವ ಗಿಂಡಿ ಮತ್ತು ಬಟ್ಟಲು.

ಕಲಸಗಿತ್ತಿ = ಮದುವೆಯಲ್ಲಿ ಕಳಸ ಹಿಡಿಯುವವಳು.

ಕಳಸದ ಬಟ್ಲು = ಮದುವೆಯಲ್ಲಿ ಅಕ್ಕಿ, ಅರಸಿನ+ಕುಂಕುಮ, ಕಳಸ, ಮುಂತಾದ ಮಂಗಳ ದ್ರವ್ಯಗಳನ್ನಿಡುವ ಬಟ್ಟಲು.

ಕಳ್ಗಂಟು = ಕಳ್ಳಗಂಟು, ಕಪ್ಪುಹಣ, ಬೇರೆಯವರಿಗೆ ತಿಳಿಯದಂತೆ ಬಚ್ಚಿಟ್ಟ ಹಣ/ನಿಧಿ.

ಕಳ್ತನ = ಕದಿಯುವುದು, ಕಳ್ಳತನ.

ಕಳ್ಳ = ಕದಿಯುವವನು, ಚೋರ.

ಕಳಿ = ೧. ವ್ಯವಕಲಿಸು, ಕಳೆ, ತೆಗೆ ೨. ಬಾಯಿಬಿಡು, ಬಾಯಿ ಆ್ಣ ಎಂದು ತೆರೆ ೩. ಚೆನ್ನಾಗಿ ಹಣ್ಣಾಗು.

ಕಳಿತ = ಮಾಗಿದ, ಚೆನ್ನಾಗಿ ಹಣ್ಣಾದ.

ಕಳಿಸು = ಕಳಹು, ಹೋಗುವಂತೆ ಮಾಡು.

ಕಳ್ಳಿ = ಕದಿಯುವವಳು.

ಕಳ್ಳಿಬೇಲಿ = ಒಂದು ಬಗೆಯ ಕಳ್ಳಿ ಜಾತಿಯ ಸಸ್ಯಗಳನ್ನು ಬೇಲಿಯಂತೆ ಸಾಲಾಗಿ ನೆಟ್ಟು ಬೆಳೆಸುವುದು.

ಕಳ್ಕಿ = ಕಳಕಿ.

ಕಳೆ = ಮುಖ್ಯ ಬೆಳೆಯ ನಡುವೆ ಬೆಳೆಯುವ ಹುಲ್ಲು, ಸದೆ ೨. ಕಾಂತಿ, ತೇಜಸ್ಸು, ಸೌಂದರ್ಯ, ಚೆಲುವು.

ಕಳೆ = ತೊರೆ, ಬಿಡು, ತ್ಯಜಿಸು, ವ್ಯವಕಲಿಸು.

ಕಳೆಗಟ್ಟು = ಸೊಗಸು/ಕಾಂತಿ ಹೆಚ್ಚಾಗು.

ಕಳೆಗುಂದು = ಕಾಂತಿಹೀನವಾಗು.

ಕಳೇಬರ = ಶವ, ಹೆಣ, ನಿರ್ಜೀವ ದೇಹ.

ಕಳೆಯೇರು = ಕಳೆಗಟ್ಟು.

ಕಳೆಹೊಡಿ = ಕಳೆಯನ್ನು ನಾಶಮಾಡು, ಸತ್ತೆ ತೆಗಿ.

ಕಳ್ಳನೆವ = ಸುಳ್ಳು ನೆಪ ಹೇಳುವುದು

ಕಳ್ಳಬಟ್ಟಿ = ಕಳ್ಳತನದಿಂದ ತಯಾರಿಸಿದ ಹೆಂಡ, ಕಳ್ಳತನದಲ್ಲಿ ಬಟ್ಟಿ ಇಳಿಸುವುದು/ಸಾರಾಯಿ ತಯಾರಿಕೆ.

ಕಳ್ಳಬಡ್ಡಿಮಗ = ಒಂದು ಸಾಮಾನ್ಯ ಬೈಗುಳ.

ಕಳ್ಳ ಮಾಲು = ಕದ್ದ ವಸ್ತು.

ಕಳ್ಳಿನ ಬುರುಡೆ = ಕಳ್ಳನ್ನು ಹಾಕಿಡುವ ಸೋರೆಕಾಯಿ ಬುರುಡೆ.

ಕಳ್ಳು = ೧. ಕರುಳು, ಪಚ್ಚಿ ೨. ಬೈನೆ/ತೆಂಗಿನ ಮರದ ರಸ, ಸುರೆ, ಹೆಂಡ.

ಕಳ್ಳು ಗೊತ್ತು = ಕಳ್ಳು ಶೇಖರಿಸಿಡುವ ಕಳ್ಳ ಜಾಗ.

ಕಾಂಚಾಣ = ದುಡ್ಡು, ಹಣ.

ಕಾಂಡ = ಮರದ ದಪ್ಪ ಭಾಗ / ಕೆಳಭಾಗ, ಗಿಡಗಳ ದಂಟು, ಬುಡ.

ಕಾಂಡಕೊರ್ಕ = ಬತ್ತದ ಸಸಿಯ ಬುಡವನ್ನು ಕೊರೆದು ಸಾಯಿಸುವ ಒಂದು ರೋಗ.

ಕಾಂತಿ = ಒಂದು ಜಾತಿಯ ಮೀನು.

ಕಾಕ = ಕಾಗೆಯನ್ನು ಮಕ್ಕಳು ಕರೆಯುವ ರೀತಿ.

ಕಾಕಂಬಿ = ಸಾರಾಯಿ ಮಾಡಲು ಉಪಯೋಗಿಸುವ ಬೆಲ್ಲದ ಪಾಕ.

ಕಾಕಾಕು = ಕೂಗಿಕೋ, ಕಿರುಚಿಕೋ, ವಿಕಾರವಾಗಿ ಕಿರುಚು, ಕಾಕು ಹಾಕು.

ಕಾಕ್ದಾಳಿ ಮಣ್ಣು = ಬಣ್ಣಬಣ್ಣವಿರುವ ಹುಡಿ/ಅಂಟು ಮಣ್ಣು.

ಕಾಕಿಸೊಪ್ಪು = ಗಣಿಕೆ ಸೊಪ್ಪು, ಗಣಿಕೆ ಗಿಡದ ಸೊಪ್ಪು.

ಕಾಕಿ ಹಣ್ಣು = ಗಣಿಕೆ ಹಣ್ಣು.

ಕಾಕು = ಏರಿದ ಧ್ವನಿಯಲ್ಲಿ ಕೂಗು, ಜೋರಾಗಿ ಕಿರುಚುವುದು.

ಕಾಕೊಡಿ = ಕಾಕಾಕು, ಕಾಕು ಹೊಡಿ.

ಕಾಕ್ದೊಂಡೆ ಕಾಯಿ = ತೊಂಡೆಯ ಕಾಯನ್ನು ಹೋಲುವ ಕಾಡಿನ ತೊಂಡೆಕಾಯಿ.

ಕಾಗದ = ಪತ್ರ, ಓಲೆ, ಬರೆಯುವ ಹಾಳೆ.

ಕಾಗ್ದ = ಕಾಗದ.

ಕಾಗ್ದ ಪತ್ರ = ಪತ್ರವ್ಯವಹಾರ.

ಕಾಗಿ = ಕಾಗೆ, ಕೋಗಿಲೆಯ ಸಾಕುತಾಯಿ.

ಕಾಗಿಕಾಲು = ^ ಗುರುತು, ನಿತ್ಯ ಹರಿದ್ವರ್ಣದ ಕಾಡುಗಳಲ್ಲಿ ಬೆಳೆಯುವ ಹೂವು ಬಿಡದಿರುವ ಗಿಡಗಳು.

ಕಾಗಿನ ಸೀರೆ = ಕಪ್ಪು ಸೀರೆ.

ಕಾಗಿಬಂಗಾರ = ಅಭ್ರಕ, ಒಂದು ಬಗೆಯ ಖನಿಜ, ಮರಳಿನಲ್ಲಿರುವ ಮುತ್ತಿನ ಬಣ್ಣದ ಹೊಳೆಯುವ ವಸ್ತು.

ಕಾಗುಣಿತ = ಕನ್ನಡದ ಬೀಜಾಕ್ಷರ, ವ್ಯಂಜನಕ್ಕೆ ಸ್ವರವನ್ನು ಸೇರಿಸಿ ಬರೆಯುವುದು.

ಕಾಗೆ = ಕಾಗಿ.

ಕಾಗೆ ಕಾಲು ಗುಬ್ಬಿಕಾಲು = ಮಳೆಗಾಲದಲ್ಲಿ /ಥಂಡಿಯಿರುವ ಜಾಗದಲ್ಲಿ ಹುಟ್ಟಿಕೊಳ್ಳುವ ಒಂದು ಕಳೆ ಸಸ್ಯಗಳು, ಕಾಗಿ ಕಾಲು.

ಕಾಚ = ಚಡ್ಡಿ , ಒಳ ಉಡುಪು, ಕಚ್ಚೆ.

ಕಾಚ್ಹರ್ಕ = ಕಾಚಹರುಕ, ಕಚ್ಚೆ ಬದ್ರ ಇಲ್ಲದವನು, ವಿಟ (ಅಲಂ).

ಕಾಜ್ಗ = ಕಾಗದ, ಪತ್ರ.

ಕಾಜಾಣ = ಕಾಗೆಯನ್ನು ಹೋಲುವ ಆದರೆ ಎರಡು ಬಾಲದಂತ ಪುಕ್ಕವಿರುವ ಹಕ್ಕಿ. ಸುತ್ತಮುತ್ತಲಿನ ಶಬ್ದಗಳನ್ನು ಅನುಕರಿಸುತ್ತದೆ.

ಕಾಟ = ತೊಂದರೆ, ಪೀಡೆ, ಉಪದ್ರ.

ಕಾಟ್ಲ = ಒಂದು ಜಾತಿಯ ಸಿಹಿನೀರ ಮೀನು.

ಕಾಟಾಚಾರ = ಶ್ರದ್ಧೆಯಿಲ್ಲದೆ/ಬೇಕಾಬಿಟ್ಟಿ/ ತೋರಿಕೆಗಾಗಿ ಮಾಡುವ ಕೆಲಸ.

ಕಾಡ್ಗಿಚ್ಚು = ಕಾಡಿನ ಬೆಂಕಿ, ದಾವಾನಲ.

ಕಾಡು = ೧. ಕಾನನ, ಅರಣ್ಯ, ಅಡವಿ ೨. ಪೀಡಿಸು, ಹಿಂಸಿಸು.

ಕಾಡುಕಡಲೆ = ಸಣ್ಣ ಹಳದಿ ಹೂ ಬಿಡುವ ಔಷಧಿ ಸಸ್ಯ.

ಕಾಡುಕಿತ್ಲೆ = ಕಾಡಿನಲ್ಲಿರುವ ಸಣ್ಣ ಹುಳಿ ಕಿತ್ತಳೆ.

ಕಾಡುಕೋಣ = ಕಾಡಿನಲ್ಲಿರುವ ಕೋಣ, ಗಂಡು ಕಾಡೆಮ್ಮೆ.

ಕಾಡುಕೋಳಿ = ಕಾಡಿನಲ್ಲಿರುವ ಕೋಳಿ.

ಕಾಡು ಜೇರ್ಗಿ = ಕರಿ ಜೀರಿಗೆ, ಬೀಜದಿಂದ ಔಷಧ ಮಾಡುತ್ತಾರೆ.

ಕಾಡು ಮೆಣಸು = ಕಾಳು ಮೆಣಸಿನಂತೆಯೇ ಸಣ್ಣಕಡ್ಡಿಯಂತಹ ತೊಟ್ಟು, ಕಾರವಿಲ್ಲ.

ಕಾಡು ಶುಂಠಿ = ಶುಂಠಿಯಷ್ಟು ಪರಿಮಳವಿಲ್ಲ, ಸಣ್ಣ ಗಡ್ಡೆ, ಔಷಧಿಗೆ ಬರುತ್ತದೆ.

ಕಾಡುಸೀಗೆ = ಕಾಯಿ ಬಿಡದೆ ಕಾಡಿನಲ್ಲಿ ಬೆಳೆಯುವ ಸೀಗೆ ಮಟ್ಟು/ಪೊದೆ.

ಕಾಡ್ಕೋಳಿ = ಕಾಡುಕೋಳಿ.

ಕಾಡ್ಮಾವು = ಕಾಡಿನ ಮಾವಿನ ಹಣ್ಣು.

ಕಾಡ್ಸು = ಪೀಡಿಸು, ಕಾಡಿಸು, ತೊಂದರೆ ಕೊಡು.

ಕಾಡು ಮನುಷ್ಯ = ಚಿಂಪಾಂಜಿ, ಗೊರಿಲ್ಲಾ.

ಕಾಡ್ಹತ್ತಿ ಹೋಗು = ಕಾಡಿನ ಪಾಲಾಗು, ನಾಶವಾಗಿ ಹೋಗುವುದು, ಕಲಿತಿದ್ದೆಲ್ಲಾ ಮರೆತು ಹೋಗಿರುವುದು (ಅಲಂ).

ಕಾಣ್‌ಕಾಣ್ತಿದ್ದಂಗೆ = ನೋಡು ನೋಡುತ್ತಿದ್ದಂತೆ.

ಕಾಣೆ ಮೀನು = ಸಮುದ್ರಕ್ಕೆ ನದಿ ಕೂಡುವಲ್ಲಿ ಮಾತ್ರ ಸಿಗುವ ಮೀನು.

ಕಾಣು = ನೋಡು, ಭೇಟಿಯಾಗು.

ಕಾಣ್ಕೆ = ದೇವರ ಹುಂಡಿಗೆ ಹಾಕುವ ದುಡ್ಡು/ ವಸ್ತು.

ಕಾದಾಟ = ಹೊಡೆದಾಟ, ಹೋರಾಟ, ಜಗಳ.

ಕಾದಾರದ್ನೀರು = ಕುದಿಸಿ ಆರಿಸಿದ ಕುಡಿಯುವ ನೀರು.

ಕಾದ್ನೀರು = ಕಾಯಿಸಿದ ಸ್ನಾನದ ನೀರು, ಬಿಸಿನೀರು.

ಕಾನು = ಕಾನನ, ಅಡವಿ, ಕಾಡು, ಮಲೆ.

ಕಾನೂನು = ಕಟ್ಟಳೆ, ನಿಯಮ, ಕಾಯಿದೆ.

ಕಾಪಾಡು = ಸಾಕು, ಸಲಹು, ಜೋಪಾನ ಮಾಡು.

ಕಾಪಿ = ಕಾಫಿ, ಕೆಂಪುಹಣ್ಣುಗಳ ಬೀಜತೆಗೆದು ಹುರಿದು ಪುಡಿಮಾಡಿ, ಕಷಾಯ ತೆಗೆದು ಕುಡಿಯುವ ಒಂದು ಪಾನೀಯ.

ಕಾಮಕಸ್ತೂರಿ = ಒಂದು ಜಾತಿಯ ಸುವಾಸನೆಯುಳ್ಳ ಸಸ್ಯ, ಇದರ ಎಲೆ, ತೆನೆ, ಬೀಜ ಎಲ್ಲವೂ ಪರಿಮಳ.

ಕಾಮಾಲೆ = ಅರಿಶಿನ ಮುಂಡಿಗೆ ರೋಗ.

ಕಾಮ್ಗಾರಿ = ಕೆಲಸ, ಕಾರ್ಯ.

ಕಾಯಂ = ನಿರಂತರ, ಸತತ, ಸ್ಥಿರ, ಖಚಿತ.

ಕಾಯಸ್ಸು = ಆಸೆ, ಹಂಬಲ, ಇಚ್ಛೆ.

ಕಾಯಾಲು = ೧. ತೆಂಗಿನ ಕಾಯನ್ನು ರುಬ್ಬಿ, ಹಿಂಡಿ ತೆಗೆದ ರಸ ೨. ಕಾಯಿ ರಸಕ್ಕೆ ಬೆಲ್ಲ ಸೇರಿಸಿದ ಸಿಹಿ ಹಾಲು.

ಕಾಯಿ = ೧.ತೆಂಗಿನ ಕಾಯಿ, ೨.ಹಣ್ಣಾಗದಿರುವ ಫಲ.

ಕಾಯಿಕಡುಬು = ಅಕ್ಕಿ ತರಿಗೆ, ಬೆಲ್ಲ ಮತ್ತು ತೆಂಗಿನ ಕಾಯ ತುರಿ ಹಾಕಿ ಮಾಡಿದ ಕಡುಬು.

ಕಾಯಿಕತ್ತ = ಕಾಯಿಗೆ ಅಂಟಿಕೊಂಡಿರುವ, ಸಿಪ್ಪೆಯ ಒಳಗಿರುವ ತೆಂಗಿನ

ನಾರು.

ಕಾಯಿಗೋಟು = ಚೆನ್ನಾಗಿ ಬಲಿತ ಹಸಿರು ಬಣ್ಣದ ಅಡಿಕೆ ಕಾಯಿ.

ಕಾಯಿ ಜೂಜು = ಗೌರಿ ಹಬ್ಬದಲ್ಲಿ ತೆಂಗಿನ ಕಾಯಿಂದ ಆಡುವ ಆಟ.

ಕಾಯಿ ಮುಟ್ಟು = ನಾವು ಕದ್ದಿಲ್ಲವೆಂದು ತೆಂಗಿನಕಾಯಿ ಮುಟ್ಟಿ ಪ್ರಮಾಣ ಮಾಡುವುದು.

ಕಾಯು = ನಿರೀಕ್ಷಿಸು ೨. ರಕ್ಷಿಸು, ಕಾಪಾಡು, ಸಲಹು ೩. ಬಿಸಿಯಾಗು.

ಕಾಯ್ದೆ = ಕಾನೂನು, ನಿಯಮ.

ಕಾಯ್ಲೆ = ಕಾಯಿಲೆ, ಜಡ, ರೋಗರುಜಿನ.

ಕಾರ = ಕಟು/ ತೀಕ್ಷ್ಣ ರುಚಿಯನ್ನು ಹೊಂದಿರುವ ಆರುರುಚಿ ಗಳಲ್ಲೊಂದು.

ಕಾರಕಡಿ = ಮಸಾಲೆ ರುಬ್ಬು.

ಕಾರದಡಿಗಿ = ಮಾಂಸಾಹಾರದ ಅಡಿಗೆ.

ಕಾರಬಾರು = ಕೆಲಸ, ಆಡಳಿತ, ವ್ಯವಹಾರ.

ಕಾರಾಮಾಸೆ = ಕೊಡೆ ಅಮಾಸೆ, ಭೀಮನ ಅಮವಾಸ್ಯೆ, ಹಲಸಿನ ಹಣ್ಣಿನ ಕೊಟ್ಟೆಕಡುಬು, ಅಕ್ಕಿ ಕಡಬು ಮೀನು ಸಾರು/ಕೋಳಿಸಾರು ಮಾಡುವ ಒಂದು ಹಬ್ಬ.

ಕಾರೆಕಾಯಿ = ಮುಳ್ಳುಗಳಿರುವ ಪೊದೆಯಂತಹ ಮರದಲ್ಲಿ ಬಿಡುವ ಕಾಯಿ, ಜಜ್ಜಿ ಮೀನಿಗೆ ಹಾಕಿದರೆ ಅವು ತಲೆ ತಿರುಗಿ ಬೇಗ ಬಲೆಗೆ ಬೀಳುತ್ತವೆ.

ಕಾರೇಡಿ = ಕಪ್ಪನೆಯ ದೊಡ್ಡ ಏಡಿ, ನಳ್ಳಿ

ಕಾಲ್‌ಕಸ = ಕೀಳಾಗಿ ಕಾಣುವುದು (ಅಲಂ).

ಕಾಲ್ ಕೆದರು = (ಅಲಂ)ಜಗಳ ತೆಗೆ.

ಕಾಲ್‌ಒಡ್ಕ = ಕಾಲಿನ ಹಿಮ್ಮಡಿ ಒಡೆಯುವುದು, ೨. ದನಗಳಿಗೆ ಬರುವ ಒಂದು ಕಾಲಗೊರಸಿನ ರೋಗ.

ಕಾಲ್ದಾರಿ = ನಡೆದು ಸವೆದಿರುವ ದಾರಿ.

ಕಾಲ್‌ಧೂಳು = ೧.ಓಡಾಡುವ ದಾರಿಯಲ್ಲಿರುವ ಧೂಳು, ೨.ದಾರಿಯಲ್ಲಿ ಕುಳಿತರೆ/ತಿಂದರೆ ಕಾಲಧೂಳಿನಿಂದ ಆರೋಗ್ಯ. ಕೆಡುವುದೆಂಬ ನಂಬಿಕೆ, ಬೇಧಿಯಾಗು, ಅಜೀರ್ಣವಾಗು, ಹೊಟ್ಟೆ ಉಬ್ಬರ.

ಕಾಲ್ನಡೆ = ಜಾನುವಾರುಗಳು.

ಕಾಲ = ಅವಧಿ, ಸಮಯ, ಸಾವು, ಮರಣ.

ಕಾಲಡಿಕಸ = ಕಾಲಕೆಳಗಿರುವ ಕಸ ಕಡ್ಡಿ. ೨. ಅತಿಸಾಮಾನ್ಯ ೨. ತುಚ್ಛ, ನಿಕೃಷ್ಟ (ಅಲಂ).

ಕಾಲಹಾಕು = ೧. ಕಾಲಕಳೆ, ೨. ಜೀವನ ಸಾಗಿಸು.

ಕಾಲಾವಧಿ = ಯಾವಾಗಲೂ, ಗೊತ್ತು ಪಡಿಸಿದ ಸಮಯ.

ಕಾಲಿಗ್ಬೀಳು = ಕಾಲು ಮುಟ್ಟಿ ನಮಸ್ಕರಿಸು, ಶಿರಸಾಷ್ಟಾಂಗ ನಮಸ್ಕಾರ ಮಾಡು.

ಕಾಲಿಗೆ ಬುದ್ಧಿ ಹೇಳು = ಓಡಿಹೋಗು, ಹೇಳದೆ ಕೇಳದೆ ಓಡು (ಅಲಂ).

ಕಾಲು = ಪಿರ್ರೆಯಿಂದ ಪಾದದವರೆಗಿನ ದೇಹದ ಭಾಗ.

ಕಾಲುಕಟ್ಟು = ಅಂಗಲಾಚು, ಬೇಡಿ–ಕೊಳ್ಳುವುದು (ಅಲಂ).

ಕಾಲುಕಿಸಿ = ಕಾಲನ್ನು ಅಗಲಿಸು.

ಕಾಲು ಕೀಳು = ಸ್ಥಳ ಬಿಟ್ಟುಹೋಗು, ಕಾಲಿಗೆ ಬುದ್ಧಿ ಹೇಳು.

ಕಾಲುಂಗುರ = ಕಾಲು ಬೆರಳಿಗೆ ತೊಡುವ ಉಂಗುರ.

ಕಾಲುವೆ = ತೋಡು, ನೀರು ಹರಿಯಲು ಮಾಡಿದ ತಗ್ಗು.

ಕಾಲು ಹಾದಿ = ಕಾಲ್ದಾರಿ, ಕಾಲು ನಡಿಗೆಯಿಂದ ಹೋಗುವ ದಾರಿ, ನಡೆದು ನಡೆದೂ ರೂಪುಗೊಂಡ ದಾರಿ.

ಕಾಲು ಹೇಸುವುದು = ಮಳೆಗಾಲದಲ್ಲಿ ಬೆರಳಸಂದಿ ಕರಗುವುದು.

ಕಾಲೂರು = ಕಾಲನ್ನು ಊರು, ನೆಲೆಗೊಳ್ಳು, ಪ್ರವೇಶಿಸು ೨. ಸ್ಥಿರವಾಗಿ ನಿಲ್ಲು, ನೆಲೆಸು.

ಕಾಲೆತ್ತು = ದಿವಾಳಿಯಾಗು (ಅಲಂ).

ಕಾಲೆಳಿ = ೧.ಇನ್ನೊಬ್ಬರ ಕೆಲಸ ಕಾರ್ಯಕ್ಕೆ ಅಡ್ಡಿಪಡಿಸು ೨.ಪಾದವನ್ನು ನೆಲಕ್ಕೆ ಉಜ್ಜಿಕೊಂಡು ನಡೆಯುವುದು.

ಕಾಲೇಣಿ = ಬಿದಿರಿನಲ್ಲಿ ಎರಡೂ ಕಡೆ ಬಿಟ್ಟಗಣ್ಣುಗಳ ಏಣಿ, ಬಿದಿರೇಣಿ.

ಕಾಲೊರ್ಸು = ಕಾಲೊರೆಸು, ಕಾಲೊರೆಸುವ ಬಟ್ಟೆ.

ಕಾಲೋದಿ = ಕಾಲಾವಧಿ, ಯಾವಾಗಲೂ, ಸದಾ.

ಕಾಲ್ಕಡಗ = ಬೆಳ್ಳಿ/ ತಾಮ್ರದ ಕಾಲು ಬಳೆ.

ಕಾಲ್ಗಂಟು = ಮಂಡಿ, ಕಾಲಿನ ಮಂಡಿ.

ಕಾಲ್ನಡಿಗೆ = ವಾಹನವೇರದೆ ನಡೆದೇ ಹೋಗುವುದು.

ಕಾಲ್ಮಣೆ = ಕಾಲುಗಳುಳ್ಳ ಮಣೆ, ಪಾದಪೀಠ, ಸ್ಟೂಲು.

ಕಾಲ್ಸರಿಗಿ = ಕಾಲುಗಳು ನೋವಾದಾಗ ದೇವರ ಹೆಸರಲ್ಲಿ ತೊಡುವ ಬೆಳ್ಳಿ ಸರಿಗೆ.

ಕಾಲ್ಜಾರು =೧. ಕಾಲು ಜಾರುವುದು, ಹೆಜ್ಜೆ ತಪ್ಪುವುದು ೨. ತಪ್ಪು ಹೆಜ್ಜೆ, ಅಡ್ಡದಾರಿಗೆ ಬೀಳು, ಕೆಟ್ಟದಾರಿ ಹಿಡಿ (ಅಲಂ).

ಕಾಲ್ದಾರಿ = ಕಾಲು ಹಾದಿ.

ಕಾಲ್ಕಿಸಿ = ಕಾಲನ್ನು ಅಗಲಿಸು.

ಕಾಲ್ದಿಸಿ = ಕಾಲಿನ ಹತ್ತಿರದಲ್ಲಿ, ಪಾದದ ಪಕ್ಕದಲ್ಲೆ.

ಕಾವಣ = ಕವಣ, ಮಂಜು, ಇಬ್ಬನಿ.

ಕಾವಲು = ಕಾಯುವಿಕೆ, ಕಾಪಾಡುವಿಕೆ.

ಕಾವಿ = ನೆಲಕ್ಕೆ ಹಾಕುವ ಒಂದು ಕೆಂಪು ಬಣ್ಣ ೨. ಕಾಷಾಯ ವಸ್ತ್ರ.

ಕಾವ್ಲಿ = ದೋಸೆ ರೊಟ್ಟಿ ಮುಂತಾದುವನ್ನು ಬೇಯಿಸಲು ಬಳಸುವ ಸಾಧನ, (ದ್ವಾಸೆ ಕಾವ್ಲಿ, ರೊಟ್ಟಿಹಂಚು).

ಕಾವು = ೧.ತಾಪ, ಸೆಖೆ, ಉಷ್ಣ ೨.ಕತ್ತಿ ಕೊಡಲಿಗಳ/ ಹಾರೆಯ ಹಿಡಿಕೆ.

ಕಾವು ಕೂರುವುದು = ಪಕ್ಷಿಗಳು ಶಾಖ ಕೊಟ್ಟು ಮರಿ ಮಾಡಲು ಮೊಟ್ಟೆಯ ಮೇಲೆ ಕೂರುವುದು.

ಕಾವೇರು = ಬಿಸಿಯೇರು, ಉಷ್ಣತೆ ಹೆಚ್ಚಾಗು.

ಕಾಶಿ ತುಂಬೆ = ತುಂಬೆ ಹೂವಿನಲ್ಲಿ ಒಂದು ಜಾತಿಯ ದೊಡ್ಡ ತುಂಬೆ.

ಕಾಶೀದಾರ = ಕೊರಳಲ್ಲಿ ಹಾಕಿಕೊಳ್ಳುವ ಪವಿತ್ರವಾದ ಕಪ್ಪುದಾರ.

ಕಾಸರಕ = ಒಂದು ಜಾತಿಯ ಮರ. ಇದರ ಕಾಯಿ ತುಂಬಾ ಕಹಿ, ಆದರೂ ಜಾನುವಾರುಗಳು

ತಿನ್ನುತ್ತವೆ.

ಕಾಸಿದ್ನೀರು = ಕಾಯಿಸಿದ/ ಕುದಿಸಿದ ನೀರು.

ಕಾಸು = ೧.ದುಡ್ಡು, ಚಿಲ್ಲರೆ ಹಣ, ತಾಮ್ರದ ನಾಣ್ಯ, ಬಂಗಾರದ ನಾಣ್ಯ ೨.ಕಾಯಿಸು, ಬಿಸಿಮಾಡು, ಶಾಖಕೊಡು.

ಕಾಸಿದ ಕಳ್ಳು = ಮತ್ತು ಬರಲೆಂದು ಕಳ್ಳನ್ನು ಬಿಸಿಯಾಗಿ ಕಾಯಿಸುವುದು.

ಕಾಸೆ = ಕಚ್ಚೆ ಹಾಕಿ ಉಟ್ಟುಕೊಳ್ಳುವ ಪಂಚೆ.

ಕಾಳಿಂಗ್ನ ಹಾವು = ದೊಡ್ಡ ಜಾತಿಯ, ನೆಲದಿಂದ ಮೂರ್‍ನಾಲ್ಕು ಅಡಿ ಎತ್ತರಕ್ಕೆ ತಲೆ ಎತ್ತಿಕೊಂಡೇ ಅತಿ ವೇಗವಾಗಿ ಚಲಿಸುವ ಹಾವು. ಸಾಮಾನ್ಯವಾಗಿ ಕಚ್ಚುವುದಿಲ್ಲ. ಮರವನ್ನು ಹತ್ತುತ್ತದೆ. ಇಳಿಯ ಲಾಗುವುದಿಲ್ಲ. ಮೇಲಿಂದ ಕೆಳಗೆ ಹಾರುತ್ತದೆ. ಹಾರುಂಬೆ ಹಾವು ಎಂದೂ ಕರೆಯುತ್ತಾರೆ. ಹೆಣ್ಣು ಹಾವು ಮೊಟ್ಟೆಯಿಡುವ ಮೊದಲು ಗಂಡು ಹಾವನ್ನು ನುಂಗುತ್ತದೆ.

ಕಾಳು = ಬೀಜ, ದಿನಸಿ, ಧಾನ್ಯ.

ಕಾಳು ಮೆಣಸು = ಮೆಣಸಿನ ಕಾಳು, ತುಂಬಾ ಖಾರ, ಉತ್ತಮ ಸಾಂಬಾರ ಪದಾರ್ಥ, ಬಳ್ಳಿಯಲ್ಲಿ ಕಾಳುಗಳು ತೆನೆಯಂತೆ ಬಿಡುತ್ತದೆ.

ಕಿಂಚಿತ್ತು = ಕೊಂಚ, ಸ್ವಲ್ಪ.

ಕಿಂದರಿ = ಒಂದೇ ತಂತಿಯ ವಾದ್ಯ, ಕಿನ್ನರಿ, ಏಕತಾರಿ.

ಕಿಂದ್ರಿ ಜೋಗಿ = ಕಿಂದರಿ ಬಾರಿಸುವವನು.

ಕಿಂವ್ಚಿ = ಕಿವಿ, ಕರ್ಣ.

ಕಿಂವ್ಚಿ ಆಲೆ = ಕಿವಿಯ ಕೆಳಭಾಗ.

ಕಿಂವ್ಚಿ ಚಟ್ಟೆ = ಕಿವಿಯ ಮೇಲ್ಭಾಗ.

ಕಿಕ್ಕಿರಿ = ಒಟ್ಟಾಗಿ, ದಟ್ಟವಾಗಿ.

ಕಿಚಗುಡು = ಕಿಚಕಿಚ ಶಬ್ಧ ಮಾಡು, ಮಾತಾಡು.

ಕಿಚಾಯ್ಸು = ರೇಗಿಸು.

ಕಿಚ್ಚು = ಬೆಂಕಿ, ಹೊಟ್ಟೆಯುರಿ.

ಕಿಟ್ಟ = ತುಕ್ಕು, ಮಸಿ, ಕರಿ, ೨. ದೀಪದ ಕುಡಿಯ ಮೇಲೆ ಕಟ್ಟಿಕೊಳ್ಳುವ ಕರುಕುಲು.

ಕಿಡಿ = ಬೆಂಕಿಯ ಚೂರು.

ಕಿಡಿಗೇಡಿ = ತುಂಟ, ಕೇಡುಕನ್ನುಂಟು ಮಾಡುವವನು

ಕಿಡಿಸಿಡಿಯುವುದು = ಕಿಡಿ ಹಾರುವುದು.

ಕಿಣಿ ಕಿಣಿ = ಕಿರುಗಂಟೆಯ ಶಬ್ಧ.

ಕಿತ = ಸಲ, ಸಾರಿ, ಬಾರಿ.

ಕಿತಾಪತಿ = ಸಲ್ಲದ ವ್ಯವಹಾರ, ತಂಟೆ.

ಕಿತ್ತಳೆ = ಒಂದು ಬಗೆಯ ಹಣ್ಣು.

ಕಿತ್ಗ = ಚೇಷ್ಟೆ ತಡೆಯುಂಟು ಮಾಡುವುದು.

ಕಿತ್ಗತೆಗಿ = ಅಪಸ್ವರ ತೆಗೆ, ಇಲ್ಲದ ಸಬೂಬು ಹೇಳು.

ಕಿತ್ತಾಟ = ಜಗಳ.

ಕಿದ್ರು = ಕೆದರು, ಕೆದಕು, ಚಲ್ಲಾಪಿಲ್ಲಿ ಮಾಡು.

ಕಿದ್ಕು = ಕಿದ್ರು.

ಕಿನಸಿಗೆ = ಮುಜುಗರ, ಸಿಟ್ಟು.

ಕಿಬ್ಬದಿ = ಪಕ್ಕೆಲುಬು.

ಕಿಬ್ಬಿ = ಬೆಟ್ಟದ ಇಳಿಜಾರು.

ಕಿಬ್ಬೊಟ್ಟೆ = ಹೊಟ್ಟೆಯ ಕೆಳಭಾಗ, ಕೆಳಹೊಟ್ಟೆ.

ಕಿಮ್ಮತ್ತು = ಬೆಲೆ, ಮೌಲ್ಯ, ಗೌರವ ಕೊಡುವುದು.

ಕಿರಕಟ್ಟೆ = ಕಿರಿಕಿರಿ, ಸಣ್ಣ ಸಣ್ಣ ತೊಂದರೆ

ಕೊಡುವುದು.

ಕಿರಗಣೆ = ಲಂಗ.

ಕಿರಗೊಡಸು = ಒಂದು ರೀತಿಯ ಕಹಿ ಔಷಧೀಯ ಗಿಡ. ನೆಲದ ಮಟ್ಟಕ್ಕೆ ಸ್ವಲ್ಪ ಉದ್ದದ ಎಲೆ ಬೆಳೆಯುತ್ತದೆ. ಜಾನುವಾರಿಗೆ ಹಾಲು ಜಾಸ್ತಿಯಾಗುತ್ತದೆ.

ಕಿರಬೆಟ್ಟು = ಕಿರು ಬೆರಳು, ಸಣ್ಣ ಬೆರಳು.

ಕಿರಿಕಿರಿ = ಕಿರಕಟ್ಟೆ, ತೊಂದರೆ, ಜಿಗುಪ್ಸೆ.

ಕಿರಿಗೆ = ಸಣ್ಣ ಸೀರೆ, ಹುಡುಗಿಯರ ಸೀರೆ.

ಕಿರಿದು = ಚಿಕ್ಕದು, ಸಣ್ಣದು.

ಕಿರಿಬೆಳ್ಳು = ಕಿರಬೆಟ್ಟು.

ಕಿರಿಮಗ = ಗಂಡುಮಕ್ಕಳಲ್ಲಿ ಚಿಕ್ಕವನು.

ಕಿರೀಟ = ಮಕುಟ, ರತ್ನಖಚಿತ ಟೊಪ್ಪಿ.

ಕಿರುಕುಳ = ತೊಂದರೆ, ಕಾಟ, ಪೀಡೆ.

ಕಿರುಗಂಟೆ = ಸಣ್ಣ ಗೆಜ್ಜೆ.

ಕಿರುಗೋಶ್ಣ = ಒಂದು ಔಷಧಿ ಬೇರು/ಕಾಯಿ.

ಕಿರುಚಾಟ = ಕೂಗಾಟ, ಅರಚುವಿಕೆ.

ಕಿರುಚಾಡು = ಕೂಗಾಡು, ಅರಚು.

ಕಿರುಚು = ಕಿರುಚಾಡು.

ಕಿರುಜಗ್ಲಿ = ಜಗಲಿಯ ಮುಂದಿರುವ ಸಣ್ಣ ಜಗಲಿ.

ಕಿರು ದಿಬ್ಣ = ಮದುವೆಯಾಗಿ ಮೊದಲ ಸಾರಿ ವರ ವಧು ಮತ್ತು ಇತರರೊಂದಿಗೆ ವಧುವಿನ ಮನೆಗೆ ಬರುವುದು.

ಕಿರುನಾಲ್ಗಿ = ಗಂಟಲಲ್ಲಿರುವ ಸಣ್ಣ ನಾಲಿಗೆ.

ಕಿರುಬ = ತೋಳ, ತೋಳನಂತಿರುವ ಪ್ರಾಣಿ, ಕುರ್ಕ.

ಕಿರ್ಗಣ್ಣು = ಓರೆಕಣ್ಣಿನಿಂದ, ಕುಡಿನೋಟ.

ಕಿರ್ದಾರಿ = ಸಣ್ಣದಾರಿ, ಅಡ್ಡದಾರಿ, ಒಳಹಾದಿ.

ಕಿರ್ದು = ಚಿಕ್ಕದು, ಸಣ್ಣದು, ವಯಸ್ಸಿನಲ್ಲಿ ಸಣ್ಣವರು.

ಕಿಲಾಡಿ = ತುಂಟ, ಕಿಡಿಗೇಡಿ.

ಕಿಲಾಡಿತನ = ಚೇಷ್ಟೆ, ತುಂಟಾಟ.

ಕಿವ್ಣಿ = ಕಿವಿ, ಶ್ರವಣೇಂದ್ರಿಯ.

ಕಿವ್ಣಿ ಆಲೆ = ಕಿವಿಯ ಕೆಳಭಾಗದ ಹಲ್ಲೆ.

ಕಿವ್ಣಿಕಚ್ಚು = (ಅಲಂ) ಗುಟ್ಟಾಗಿ ಕಿವಿಯಲ್ಲಿ ಹೇಳು.

ಕಿವಿಗೂಡು = ಕಿವಿಯ ಒಳಭಾಗ.

ಕಿವ್ಣಿಗೊಡು = ಆಲಿಸು, ಮನಸ್ಸಿಟ್ಟು ಕೇಳು.

ಕಿವ್ಣಿಚಟ್ಟೆ = ಕಿವಿಯ ಹೊರಭಾಗ, ಇಡೀ ಹೊರಕಿವಿಯ ಭಾಗ.

ಕಿವ್ಣಿಚುಚ್ಚು = ಆಭರಣ ಹಾಕಲು ಕಿವಿ ಚುಚ್ಚಿ ತೂತು ಮಾಡು.

ಕಿವ್ಣಿತಿರ್ಪು = ಕಿವ್ಣಿಹಿಂಡು.

ಕಿವ್ಣಿನೂವು = ಕಿವಿಯಲ್ಲಿ ನೋವು/ಬೇನೆ.

ಕಿವ್ಣಿಮಂದ = ಕಿವಿಕೇಳದಿರುವುದು, ಅರೆ ಕಿವುಡು.

ಕಿವ್ಣಿಯಾರ = ತನ್ನ ಕಿವಿಯಿಂದಲೇ ಕೇಳಿಕೊಳ್ಳುವುದು (ಅಲಂ).

ಕಿವ್ಣಿಸುರಿ = ಆಭರಣವನ್ನು ಹಾಕಲು ಕಿವಿ ಆಲೆಯನ್ನು ಚುಚ್ಚಿ ತೂತು ಮಾಡುವುದು.

ಕಿವ್ಣಿಸೋರು = ಕಿವಿಯಲ್ಲಿ ರಸಿಕೆ, ಕೀವು ಬರುವುದು.

ಕಿವ್ಣೀಲಿ ಎದ್ದು ಒಡೆಯಾದು = ಕಿವಿಯ ಒಳಗೆ ಕುರ, ಬಾವು ಎದ್ದು ಒಡೆದು ಕೀವು ಸುರಿಯುವುದು.

ಕಿವ್ಣಿಹಿಂಡಸು = ಬಗ್ಗಿ ಎರಡು ಕಾಲುಗಳ

ನಡುವೆ ಕೈ ತೂರಿಸಿ ಕಾಲುಗಳ ಸಂದಿಯಿಂದ ಕೈ ತಂದು ಕಿವಿ ಹಿಡಿದುಕೊಳ್ಳುವ ಒಂದು ಶಿಕ್ಷೆ.

ಕಿವ್ಹಿಹಿಂಡು = ಕಿವ್ಹಿ ಚಟ್ಟೆಯನ್ನು ಹಿಂಡಿ ನೋಯಿಸು, ಮಕ್ಕಳಿಗೆ ಕೊಡುವ ಶಿಕ್ಷೆ.

ಕಿವಿ ಹೊಟ್ಟೆಹೋಗ = ಕರೆದಾಗ ಕೇಳಿಸಿಕೊಳ್ಳದಿದ್ದರೆ ಬೈಯುವ ಒಂದು ಬೈಗುಳ.

ಕಿವಿ ಹೊಟ್ಟು ಹೋಗ್ಯದೆ = ಕಿವಿ ಕೇಳಿಸುತ್ತಿಲ್ಲ, ಕಿವಿ ಕೇಳಿಸ ದಂತಾಗಿದೆ.

ಕಿವುಚು = ಹಿಸುಕು, ಹಿಂಡು.

ಕಿವುಡು = ಕಿವಿ ಕೇಳದೇ ಇರುವುದು, ಕೆಪ್ಪು.

ಕಿಸಬಾಯಿದಾಸ = ಹೇಳಿದ ದಾಸರ ಪದಗಳನ್ನೇ ಮತ್ತೆ ಮತ್ತೆ ಹೇಳುವವ, ೨.ಹೇಳಿದ್ದನ್ನೇ ಹೇಳುವ ಚಪಲದವನು, ಬಾಯಿಬಡುಕ.(ಅಲಂ)

ಕಿಸಿ = ೧.ಅಗಲವಾಗಿಸು, ಹಿಗ್ಗಿಸು, ೨.ನಗುವುದನ್ನು/ಕೆಲಸ ಮಾಡುವುದನ್ನು ವ್ಯಂಗ್ಯವಾಗಿ ಹೇಳುವುದು. (ಅಲಂ) ೩.ಸಾಧ್ಯವಾಗು, ಕೈಲಾಗು, ೪. ಹಲ್ಲು ಚೆಲಿ, ಕಿಸಿಕಿಸಿ ನಗುವುದು.

ಕಿಸಿಗುಡು = ರೇಗು, ಗೊಣಗು.

ಕಿಸೆ = ಜೇಬು.

ಕಿಳ್ಳೇಕ್ಯಾತರು = ಹಚ್ಚೆ ಚುಚ್ಚುವವರು.

ಕೀತು = ಬಟ್ಟೆ / ಬಾಳೆಎಲೆಯನ್ನು ಹರಿದು ಸಣ್ಣ ಭಾಗ ಮಾಡುವುದು.

ಕೀಲು = ಬಾಗಿಲು/ಪೆಟ್ಟಿಗೆ ಮುಂತಾದುದಕ್ಕೆ ಹಾಕುವ ಬೀಗ, ೨. ಮೊಳೆ, ಗಂಟು, ೩. ಬೆಣೆ.

ಕೀಲೆಣ್ಣೆ = ಗಾಡಿ/ಯಂತ್ರದ ಕೀಲುಗಳು ಸರಾಗವಾಗಿ ತಿರುಗಲು ಹಾಕುವ ಎಣ್ಣೆ, ಟಾರೆಣ್ಣೆ.

ಕೀವು = ರಸಿಕೆ, ರಸ್ಗಿ.

ಕೀವುಗಟ್ಟು = ಕೀವಾಗು, ಕೀತುಕೊಳ್ಳು.

ಕೀಸದು = ಸಿಪ್ಪೆ ಹೆರೆದು ತೆಗೆಯುವುದು.

ಕೀಸಾಕು = ಅಳತೆಯ ಪಾತ್ರೆಗಿಂತ ಮೇಲೆ ಇರುವ ಪದಾರ್ಥಗಳನ್ನು ಜಾರಿಸಿ ಪಾತ್ರೆ ಮಟ್ಟಕ್ಕೆ ತರುವುದು.

ಕೀಸು = ೧.ಕೆತ್ತಿ ನಯವಾಡು, ತೆಳುಮಾಡು, ಉಜ್ಜು, ೨. ತಲೆ ತಪ್ಪಿಸಿ ಕೊಂಡು ಓಡು.

ಕೀಸುಳಿ = ಮರವನ್ನು ನಯಗೊಳಿಸುವ ಉಳಿ, ಹತ್ತರಿ.

ಕೀಳು = ೧.ಹೀನಸ್ಥಿತಿ, ಕೆಳಮಟ್ಟ, ಹೀನಕುಲ, ೨. ಕಿತ್ತು ಹಾಕು, ತೆಗೆದುಹಾಕು, ನಿರ್ಮೂಲ ಮಾಡು.

ಕೀಳ್ದೆಸೆ = ಹೀನಾವಸ್ಥೆ, ದುರವಸ್ಥೆ, ದುರಾದೃಷ್ಟ.

ಕುಂಕುಮ = ತಿಲಕ, ಕೆಂಪು ಬಣ್ಣದ ಪುಡಿ.

ಕುಂಕುಮದ ಭರಣಿ = ಕುಂಕುಮ ತುಂಬಿಸಿಡುವ ಡಬ್ಬಿ.

ಕುಂಕುಮ ಸಾಲೆ = ಒಂದು ಬತ್ತದ ತಳಿ.

ಕುಂಚ = ಕುಂಚದ ಮೀನು, ಒಂದು ಬಗೆಯ ಮೀನು.

ಕುಂಚಟ್ಟು ಹೊಡಿ = ಲಾಗ ಹಾಕು, ಕುಣಿದಾಡು, ಸಂತೋಷದಿಂದ

ಕುಣಿದಾಡು, ನೆಗೆನೆಗೆದು ಹಾರು.

ಕುಂಚಿಟ್ಟು = ಲಾಗ ಹಾಕು, ನೆಗೆ, ಕುಣಿ.

ಕುಂಟ = ಕಾಲಿಲ್ಲದವ, ಕಾಲು ಊನವಾದವ, ಒಂಟಿ ಕಾಲಿರುವವ.

ಕುಂಟನ್ಹುಣ್ಣು = ಕಾಲಿನಲ್ಲಾದ ವ್ರಣ, ವಾಸಿಯಾಗದ ಕಾಲಿನ ಗಾಯ.

ಕುಂಟಲಿಪಿ = ಕುಂಟಾಪಿಲ್ಲೆ ಎಂಬ ಕುಂಟಿಕೊಂಡು ಆಡುವ ಹೆಣ್ಣು ಮಕ್ಕಳ ಆಟ.

ಕುಂಟಾಟ = ಕುಂಟಿಕೊಂಡು ಒಬ್ಬರ ನ್ನೊಬ್ಬರು ಹಿಡಿಯುವ ಆಟ..

ಕುಂಟಾಣಿ = ಸಣ್ಣ ಹಾರೆ, ಸಣ್ಣ ಗುದ್ದಲಿ.

ಕುಂಟಾಪಿಲ್ಲೆ = ಕುಂಟಲಿಪಿ.

ಕುಂಟ್ಗಾಲು = ದನಗಳ ಕಾಲಿಗೂ, ಕುತ್ತಿಗೆಗೂ ಒಂದೇ ಹಗ್ಗದಿಂದ ಕಟ್ಟಿ ಅವುಗಳು ಬೇಲಿ ಹಾರದಂತೆ ತಾತ್ಕಾಲಿಕ ಕುಂಟು ಮಾಡುವುದು.

ಕುಂಟು = ಕಾಲು ಊನ, ಒಂದೇ ಕಾಲಲ್ಲಿ/ ಸರಿಯಾಗಿ ಕಾಲೂರದೆ ನಡೆಯುವುದು.

ಕುಂಟು ನೆಪ = ಸಮರ್ಪಕವಲ್ಲದ ಕಾರಣ.

ಕುಂಟೆ = ೧.ದಪ್ಪಮರದ ತುಂಡು ೨.ವ್ಯವಸಾಯದ ಒಂದು ಉಪಕರಣ.

ಕುಂಟೆ ಒಡಿ = ಕುಂಟೆಯನ್ನು ಕೊಡಲಿಯಿಂದ ಒಡೆದು ಸಣ್ಣ ಸಣ್ಣ ಸೌದೆ (ಚಕ್ಕೆ)ಗಳನ್ನಾಗಿ ಮಾಡು.

ಕುಂಟೆ ಹೊಡಿ = ಕುಂಟೆಯ ಸಹಾಯದಿಂದ ಮಣ್ಣನ್ನು ಸಡಿಲಗೊಳಿಸುವುದು.

ಕುಂಡ = ಗಿಡಗಳನ್ನು ಬೆಳೆಸುವ ಮಣ್ಣಿನ ಸಣ್ಣ ಬಾನಿ.

ಕುಂಡೆ = ತಿಕ, ಪಿರ್ರೆ, ಅಂಡು.

ಕುಂಡೆಕುಸ್ಕ = ಅಂಡುಕುಸ್ಕನ ಹಕ್ಕಿ, ಗುಬ್ಬಿಗಾತ್ರದ ಒಂದು ಹಕ್ಕಿ.

ಕುಂಡೆಸುಟ್ಬೆಕ್ಕು = ೧.ಅಂಡುಸುಟ್ಟ ಬೆಕ್ಕು ೨.ಕೂತಲ್ಲಿ ಕೂರದೆ ನಿಂತಲ್ಲಿ ನಿಲ್ಲದೆ ತಿರುಗುತ್ತಿರುವವ. (ಅಲಂ)

ಕುಂಡ್ಲ = ಕುಂಡಲ, ಉಂಗುರದಂತಹ ಕಿವಿಯ ಆಭರಣ.

ಕುಂದು = ೧. ಬಾಡು, ಒಣಗು, ೨.ಕೊರತೆ, ಕಡಿಮೆಯಾಗು, ೩ .ದೋಷ, ಅವಗುಣ.

ಕುಂಬ = ಮಡಕೆ, ನೀರು ತುಂಬುವ ಮಣ್ಣಿನ ಕೊಡ.

ಕುಂಬರ ಸೌತೆ = ಕಾಯಿಯ ಮೇಲೆ ಮುಳ್ಳಿರುವ ಒಂದು ಜಾತಿಯ ಉದ್ದ ಸೌತೆಕಾಯಿ.

ಕುಂಬಾರ = ಮಣ್ಣಿನಿಂದ ಮಡಕೆ ಮಾಡುವವನು.

ಕುಂಬಾರ್ತಿಹುಳ = ಮಣ್ಣಿನಿಂದ ಗೂಡು ಕಟ್ಟುವ ಜೇನುಹುಳಕ್ಕಿಂತ ಸ್ವಲ್ಪ ದೊಡ್ಡ ಹುಳ.

ಕುಂಬು = ಲಡ್ಡು, ಶಿಥಿಲ, ಟೊಳ್ಳು.

ಕುಂಬು ಸೌದೆ = ಲಡ್ಡಾದ/ಗಟ್ಟಿಯಿಲ್ಲದ ಸೌದೆ.

ಕುಂಭ = ನೀರು ತುಂಬುವ ಮಣ್ಣಿನ ಕೊಡ, ಕುಂಬ

ಕುಂಭ ನೀರು = ಮದುವೆಯಲ್ಲಿ ಗಂಗೆ ಪೂಜೆ ಮಾಡಿ ನಂತರ ವಧು ಕುಂಭಗಳಿಗೆ ತುಂಬಿಸಿಕೊಂಡು

ತಲೆಯ ಮೇಲಿಟ್ಟುಕೊಂಡು ಹೊರುವ ನೀರು.

ಕುಂಯ್ಕ = ಕುಹಕದ ಮಾತಾಡುವವ, ಮನಸ್ಸಲ್ಲೇ ಕೆಟ್ಟದ್ದನ್ನು ಬಯಸುವವ. (ಪು)

ಕುಂಯ್ಗುಡು = ಅಳುವಂತೆ ನಟಿಸು, ಕಿರಿಕಿರಿಯಾಗುವಂತೆ ಮಾತಾಡು.

ಕುಂಯ್ಕಿ = ಹೆಚ್ಚು ಮಾತಾಡದೇ ಮನಸ್ಸಲ್ಲೇ ಕೆಟ್ಟದ್ದನ್ನು ಯೋಚನೆ ಮಾಡುವವಳು. (ಸ್ತ್ರೀ)

ಕುಕ್ಕರಿಸು = ಕುಳಿತುಕೊಳ್ಳಲು ಅಸಡ್ಡೆಯಿಂದ ಹೇಳುವ ಮಾತು.

ಕುಕ್ಕು = ಕುಟ್ಟು, ಚಚ್ಚು, ಕುಟುಕು, ಎತ್ತಿಬಡಿ, ಚುಚ್ಚು, ೨. ಕಣ್ಣು ಕೋರೈಸು.

ಕುಕ್ರುಗಾಲು = ತುದಿಗಾಲಿನಲ್ಲಿ ಕುಳಿತು–ಕೊಳ್ಳುವುದು.

ಕುಕ್ರುಬಡಿ = ಕುಕ್ಕರಿಸು.

ಕುಕ್ಕೆ = ೧.ಬಿದಿರಿನಿಂದ ಹೆಣೆದ ಬುಟ್ಟಿ, ಗೂಡೆ ೨.ಮದುವೆಯಲ್ಲಿ ಗಂಡಿನ ಮನೆಯಿಂದ ಹೆಣ್ಣಿಗೆ ಮಂಗಳ ದ್ರವ್ಯಗಳನ್ನು ತೆಗೆದುಕೊಂಡು ಹೋಗುವ ಅಲಂಕರಿಸಿದ ಬುಟ್ಟಿ.

ಕುಗ್ಗಿಸು = ೧.ಚಿಕ್ಕದು ಮಾಡು, ಕಡಿಮೆ ಮಾಡು ೨.ವ್ಯಥೆಗೊಳಿಸು, ಅಲ್ಪ–ನನ್ನಾಗಿಸು.

ಕುಗುರು = ತೂಕಡಿಸು, ನಿದ್ದೆಯ ಮಂಪರಿನಲ್ಲಿರು.

ಕುಗುರ್ಕಿ = ತೂಕಡಿಕೆ, ನಿದ್ದೆಗಣ್ಣು, ಮಂಪರು.

ಕುಗ್ಗು = ಖಿನ್ನನಾಗು, ೨. ಕಡಿಮೆಯಾಗು, ತಗ್ಗು.

ಕುಗ್ಗೆ = ಕಿವಿಯೊಳಗಿನ ಅಂಟು ದ್ರವ.

ಕುಗ್ಗೆ ಕಡ್ಡಿ = ಕುಗ್ಗೆಯನ್ನು ತೆಗೆಯುವ ಸೌಟಿನಂತಿರುವ ಲೋಹದ ಕಡ್ಡಿ.

ಕುಚ್ಲಕ್ಕಿ = ಭತ್ತವನ್ನು ಬೇಯಿಸಿ ಒಣಗಿಸಿದ ಅಕ್ಕಿ, ಕುಸುಬಲಕ್ಕಿ, ಕುಚ್ಗಿ ಅಕ್ಕಿ.

ಕುಚಾಷ್ಟೆ = ಕೆಟ್ಟಚೇಷ್ಟೆ, ಕುತಂತ್ರ, ಗೊತ್ತಾಗದಂತೆ ಕಿತಾಪತಿ ಮಾಡುವುದು.

ಕುಚ್ಗಿ ಅಕ್ಕಿ = ಕುಚ್ಲಕ್ಕಿ , ಭತ್ತವನ್ನು ಬೇಯಿಸಿ ಒಣಗಿಸಿ ಮಾಡಿದ ಅಕ್ಕಿ.

ಕುಚ್ಕು = ಕುಟುಕು, ಚುಚ್ಚು ೨. ಚುಚ್ಚು ಮಾತು, ನೇರವಾಗಿಲ್ಲದೆ ಸುತ್ತಿ ಬಳಸಿ ಮಾತಾಡಿ ಮನ ನೋಯಿಸುವುದು.

ಕುಚ್ಚು = ಕುದಿಸು, ಬೇಯಿಸು, ೨. ಹೂವಿನ ದಂಡೆ ೨. ಜಡೆಯ ತುದಿಗೆ ಹಾಕುವ ಗೊಂಡೆ. ೪. ಗೊಂಚಲು.

ಕುಚ್ಲು = ಗದ್ದೆಯಲ್ಲಿ ಸಿಗುತ್ತಿದ್ದ ಸಣ್ಣ ಮೀನು.

ಕುಟ್ಟಾಣಿ = ಎಲೆ ಅಡಿಕೆ ಕುಟ್ಟುವ ಕಲ್ಲು/ ಲೋಹದ ಸಣ್ಣ ಒರಳು.

ಕುಟ್ಕಿ = ಕಣ್ಣಿನ ರೆಪ್ಪೆಯಲ್ಲಿ ಏಳುವ ಕುರ.

ಕುಟುಕು = ಕುಕ್ಕು, ಕಚ್ಚು.

ಕುಟುಕು ಜೀವ = ಎಳೆ ಜೀವ, ಅರೆ ಜೀವ, ಸಣ್ಣ ಜೀವ, ಜೀವ ಹೋಗುವ ಸಮಯ.

ಕುಟುಂಬ = ಮನೆತನ, ವಂಶ, ಸಂಬಂಧಿಕರ ಸಮುದಾಯ.

ಕುಟ್ಟು = ಬಡಿ, ಚಚ್ಚು, ಗುದ್ದು, ಒನಕೆಯಿಂದ ಏಟು ಹಾಕು.

ಕುಟ್ಟುಂಡೆ = ಹುರಿದ ಅಕ್ಕಿ ಮತ್ತು ಉದ್ದಿಗೆ,

ಮೆಣಸಿನಕಾಯಿ ಉಪ್ಪು ಸೇರಿಸಿದ ಚಟ್ನಿಪುಡಿ.

ಕುಟ್ಟೆ = ೧.ಅಕ್ಕಿಯಲ್ಲಿರುವ, ಧಾನ್ಯ-ಗಳಲ್ಲಿರುವ ಸಣ್ಣ ಕೀಟ, ೨. ಮರವನ್ನು ಕೊರೆವ ಹುಳ.

ಕುಟ್ಟೊಳ್ಳು = ಕುಟ್ಟಲೆಂದೇ ನೆಲದಲ್ಲಿ ಹುಗಿದಿರುವ ವರಳು/ಒರಳು.

ಕುಟ್ರುಮಳೆ = ಎಡಬಿಡದೆ ನಿಧಾನವಾಗಿ ಹನಿಯುವ ಮಳೆ (ತುಂತ್ರು ಮಳೆ).

ಕುಡಿ = ತುದಿ, ಕೊನೆ ೨. ಚಿಗುರು, ಮೊಳಕೆ ೩. ಸೇವಿಸು, ಪಾನ ಮಾಡು.

ಕುಡ್ಕಿ = ಕುಡಿಕೆ, ಮಣ್ಣು/ಲೋಹದ ಚಿಕ್ಕಪಾತ್ರೆ, ಗಿಂಡಿ.

ಕುಡಿತ = ಮಧ್ಯಪಾನ.

ಕುಡಿಯೆಲೆ = ಬಾಳೆ ಎಲೆಯ ತುದಿಯ ಭಾಗ.

ಕುಡಿಸು = ಪಾನ ಮಾಡಿಸು, ಕುಡಿಯು ವಂತೆ ಮಾಡು.

ಕುಡುಗೋಲು = ಡೊಂಕಾಗಿರುವ/ ಬಾಗಿರುವ ಕತ್ತಿ.

ಕುಡ್ಲು = ಸಣ್ಣ ಕತ್ತಿ.

ಕುಣಿ = ನೆಗೆದಾಡು, ಕುಣಿದಾಡು, ನರ್ತಿಸು ೨. ಗುಂಡಿ, ಕುಳಿ, ಗುಳಿ, ಹಳ್ಳ.

ಕುಣಿಕೆ = ೧.ನೇಣು, ಜೀರುಗುಣಿಕೆ, ಸರಗಂಟು, ಕೊಂಡಿ ೨. ಮರದ ತುಂಡು.

ಕುಣಿಗೋಲು = ಜಾಗಟೆ ಬಡಿಯುವ ಕೋಲು.

ಕುಣಿತ = ಕುಣಿಯುವಿಕೆ, ನರ್ತನ, ನಾಟ್ಯ.

ಕುಣುಜ = ಮರ, ಕಾಫಿಗಿಡದಲ್ಲಿರುವ ಕಚ್ಚುವ ಕಪ್ಪಿರುವೆ.

ಕುತಂತ್ರ = ಸಂಚು, ಮೋಸದ ತಂತ್ರ.

ಕುತ್ಗ = ಕುಳಿತುಕೋ.

ಕುತ್ಗಳಾ = ಕುಳಿತುಕೊಳ್ಳೊ (ಪು).

ಕುತ್ಗಳೇ = ಕುಳಿತುಕೊಳ್ಳೇ (ಸ್ತ್ರೀ).

ಕುತ್ಗಳಿ = ಕುಳಿತುಕೊಳ್ಳಿ. (ಬ.ವ)

ಕುತ್ಗಿ = ಕುತ್ತಿಗೆ, ಕತ್ತು, ಕೊರಳು.

ಕುತ್ಗಿ ಚಂಡು = ಕುತ್ತಿಗೆಯ ಹಿಂಭಾಗ.

ಕುತ್ಗಿ ಮೇಲೆ ಕೂರು = ಹೆಗಲೇರು ೨.ಒತ್ತಡ ಹೇರು, ಒತ್ತಾಯಿಸು. (ಅಲಂ)

ಕುತ್ತು = ಕಂಟಕ, ಅಪಾಯ, ಆಪತ್ತು.

ಕುತ್ರೆ = ಗೊಣಬೆ, ಹುಲ್ಲಿನ ಬಣವೆ.

ಕುದ್ಕ = ನರಿ.

ಕುದಿ = ಬಿಸಿ, ಮರಳು, ಬೇಯು ೨.ಬೇಗೆ, ತಳಮಳ, ಕೋಪದಿಂದ ಕೆರಳು.(ಅಲಂ)

ಕುದಿಸು = ಬಿಸಿಮಾಡು, ಕಾಯಿಸು, ಬೇಯಿಸು.

ಕುದ್ದಾರ್ದ ನೀರು = ಕಾಯಿಸಿ, ಕುದಿಸಿ ಆರಿಸಿದ ನೀರು.

ಕುದುರಿಸು = ಹೊಂದಿಸು, ಏರ್ಪಡಿಸು.

ಕುದುರು = ದೊರಕು, ವ್ಯವಸ್ಥೆಗೊಳ್ಳು, ಸರಿಹೊಂದು.

ಕುದುರೆ = ೧.ಅಶ್ವ, ತುರುಗ, ೨. ಬಂದೂಕಿನಲ್ಲಿ ಗುಂಡು ಹಾರಿಸುವ ಕೀಲು ಮೊಳೆ/ ಬಿಲ್ಲಿನ ಮೇಲ್ಭಾಗ.

ಕುನ್ನಿ = ೧.ನಾಯಿ, ನಾಯಮರಿ ೨. ಹೀನ, ಕೀಳು (ಅಲಂ)

ಕುನ್ನೇರ್ಲು = ಸಣ್ಣ ಜಾತಿಯ ನೇರಳೆ, ಕಾಡು ನೇರಳೆ, ಸಣ್ಣ ಸಣ್ಣ ಎಲೆ,

ಸಣ್ಣ ಕಾಯಿಗಳು.

ಕುನ್ನೇರ್ಲು ಕುಡಿ = ಔಷಧಿ/ಕಷಾಯ ಮಾಡುವ ಕುನ್ನೇರ್ಲು ಮರದ ಚಿಗುರು (ಒಡಲು ಜ್ವರಕ್ಕೆ ಮದ್ದು).

ಕುಪ್ಪಲು ಮಣ್ಣು = ಫಲವತ್ತಾದ ಮಣ್ಣು.

ಕುಪ್ಪಸ = ರವಿಕೆ, ಕಣ.

ಕುಪ್ಪಳಿಸು = ಹಾರು, ನೆಗೆ, ಎರಡು ಕಾಲು ಜೋಡಿಸಿಟ್ಟುಕೊಂಡು ಹಾರುವುದು/ನಡೆಯುವುದು.

ಕುಪ್ಪಳಿ = ಗುಳ್ಳೆ, ಬಕ್ಕೆ, ಕಜ್ಜಿಯ ಮೇಲಿನ ಗಟ್ಟಿ ಚರ್ಮ.

ಕುಪ್ಪಿ = ಭರಣಿ, ಗಾಜು, ಜಾಡಿ, ಕುಡಿಕೆ, ಸೀಸೆ.

ಕುಪ್ಪೆ = ಗುಪ್ಪೆ, ಗುಡ್ಡೆ, ರಾಶಿ.

ಕುಮ್ಮಕ್ಕು = ನೆರವು, ಸಹಾಯ, ಪ್ರೋತ್ಸಾಹ, ಉತ್ತೇಜನ.

ಕುಮ್ಚಟ್ಟು = ಕುಂಚಿಟ್ಟು.

ಕುವಾರಿ ಗುಜ್ಜು = ಉದ್ದಬೆಂಗ್ಟೆಗೆ ಆಧಾರವಾಗಿ ತೊಲೆಯ ಮೇಲೆ ನಿಲ್ಲಿಸುವ ಕಂಬ.

ಕುಮ್ಚಿಟ್ಟು = ಕುಂಚಿಟ್ಟು.

ಕುಮ್ಚಿಬೀಳು = ಕುಮುಟು, ಕುಮ್ಟು.

ಕುಮುಟು = ಬೆಚ್ಚಿಬೀಳು, ಇದ್ದಕ್ಕಿದ್ದಂತೆ ಹೆದರು.

ಕುಯ್ಯರ್ಚೆ = ಚಿವುಟಿದಷ್ಟೂ ಚಿಗುರುವ ಒಂದು ತರಕಾರಿ ಸೊಪ್ಪು, ಕಿರಿಕಿರೆ ಸೊಪ್ಪು.

ಕುಯ್ಕಟ್ಟೆ = ಸದಾ ಸಣ್ಣ ಧ್ವನಿಯಲ್ಲಿ ಅಳು.

ಕುಯ್ಗತ್ತಿ = ಗದ್ದೆಕೊಯ್ಲು ಮಾಡಲು ಉಪಯೋಗಿಸುವ ಕತ್ತಿ.

ಕುಯ್ಗುಡು = ಮರುಗು, ನಿಧಾನವಾಗಿ ಅಳು, ಗೋಣಗಾಡು.

ಕುಯ್ಯು = ಕೊಯ್ಯು, ಕತ್ತರಿಸು, ಕೀಳು.

ಕುಯ್ಲು = ಕೊಯಿಲು, ಕೊಯ್ಲು, ಕಟಾವು.

ಕುಯ್ಯೋ ಮರ್ರೋ = ಜೋರಾಗಿ ಅಳು, ಅತ್ತಂತೆ ಮಾಡು. (ಅಲಂ)

ಕುರ = ಕುರು, ಹುಣ್ಣು, ಕೀವು ರಕ್ತಗಳಿಂದ ಕೂಡಿದ ಮೈಮೇಲಿನ ಗುಳ್ಳೆ.

ಕುರ್ಕ = ಚಿರತೆಯ ಜಾತಿಗೆ ಸೇರಿದ ಪ್ರಾಣಿ, ಕಿರುಬ.

ಕುರ್ಮಾಮ = ಭವಿಷ್ಯ ನುಡಿಯುವವ, ಹಕ್ಕಿ ಪಿಕ್ಕ ಎಂಬ ಒಂದು ಜನಾಂಗ.

ಕುರ್ಚಿ = ಎತ್ತರದಲ್ಲಿ ಕೂರಲು ಉಪಯೋಗಿಸುವ ನಾಲ್ಕು ಕಾಲಿನ ಆಸನ ೨.ಒಂದು ಜಾತಿಯ ಮೀನು.

ಕುರಿ = ಮೇಷ, ಮೈತುಂಬ ಉಣ್ಣೆಯುಳ್ಳ ಪ್ರಾಣಿ.

ಕುರಿಕ್ವಾಣಾ ಬೀಳು = ಸಾಕಾಗಿ ಹೋಗು, ಸುಸ್ತಾಗು (ಅಲಂ).

ಕುರಿಮರಿ = ಕುರಿಯ ಕರು, ಎಳೆಯ ಕುರಿ.

ಕುರುಚ್ಲು = ಕುರುಚಲು, ಪೊದೆ, ಚಿಕ್ಕ ಗಿಡ.

ಕುರ್ದುತನ = ಕುರುಡು.

ಕುರುಬ = ೧.ಕುರಿ ಕಾಯುವವ, ೨. ದಡ್ಡ, ಮೂಢ (ಅಲಂ) ಗೋವಳ, ಪಶುಪಾಲಕ.

ಕುರುವು = ಕುರುಹು, ಚಿಹ್ನೆ, ಗುರುತು.

ಕುರು = ಕುರುಹು, ಸುಳಿವು.

ಕುರ್ಳು = ೧.ಕುರುಳು, ಮುಂಗುರುಳು, ಕೂದಲು ೨. ಬೆರಣಿ.

ಕುರೂಪ = ಅಂದಗೇಡಿತನ.

ಕುರೂಪಿ = ಅಂದಗೇಡಿ, ರೂಪಹೀನ ವ್ಯಕ್ತಿ.

ಕುರೂಪು = ಅಂದ ಗೇಡಿಯಾಗಿರುವುದು.

ಕುರ್ದೆ = ಹೊಲೆಯ ಮಾದಿಗರ ಮಕ್ಕಳು, ಜೀತದಾಳಿನ ಮಕ್ಕಳು.

ಕುರ್ಲು = ಒಣಗಿದ ಕಡ್ಡಿ.

ಕುಲ = ಗುಂಪು, ವಂಶ, ಜಾತಿ, ಮನೆತನ.

ಕುಲಕಸ್ಬು = ಮನೆತನದ ಉದ್ಯೋಗ, ಪರಂಪರಾಗತ ವೃತ್ತಿ.

ಕುಲಗೆಡಿಸು = ಹಾಳುಮಾಡು, ನಾಶಮಾಡು.

ಕುಲಗೆಡು = ಭ್ರಷ್ಟನಾಗು.

ಕುಲಗೇಡಿ = ಕುಲನಾಶಕ, ಕುಲಕ್ಕೆ ಕೆಟ್ಟ ಹೆಸರು ತರುವವನು.

ಕುಲನಾಸ್ನ = ನಿರ್ವಂಶ, ವಂಶನಾಶ.

ಕುಲಮಾರೆ = ಜೀತದಾಳಿನ ಮದುವೆ.

ಕುಲಾವಿ = ತಲೆಯ ಉಡುಗೆ, ಟೋಪಿ.

ಕುಲ್ಡ = ಕುರುಡ, ಕಣ್ಣಿಲ್ಲದವನು (ಪು).

ಕುಲ್ಡಿ = ಕುರುಡಿ, ಕಣ್ಣಿಲ್ಲದವಳು (ಸ್ತ್ರೀ).

ಕುಲುಕಾಟ = ಅಲುಗಾಟ, ತೂಗಾಟ.

ಕುಲುಕಾಡಿಸು = ಅಲುಗಾಡಿಸು.

ಕುಲುಕಿಸು = ಅಲ್ಲಾಡಿಸು.

ಕುಲುಕು = ಅಲ್ಲಾಡಿಸು, ಮೇಲೆ ಕೆಳಗೆ ಮಾಡು, ಅಲ್ಲಾಡು.

ಕುಲು ಕಲು = ಕುಣಿಯುವುದು.

ಕುಲ್ಮೆ = ಕುಲುಮೆ, ಅಕ್ಕಸಾಲಿ/ಕಮ್ಮಾರನ ಒಲೆ, ತಿದಿಯ ಒಲೆ.

ಕುಲ್ಲಕಟ್ಟಡ = ಹರಳುಗಳ ಸುತ್ತಲೂ ಚಿನ್ನ ಕಟ್ಟಿ ಹಿಂದೆ ಹಾಗೇ ಬಿಡುವುದು, ಬಂದ್ ಕಟ್ಟಡ ಮಾಡದಿರುವುದು.

ಕುಶೇಗಾರ = ತಾಮ್ರದ ಪಾತ್ರೆ ಮಾಡುವವನು, ತಾಮ್ರದ ಪಾತ್ರೆಗೆ ಕಲಾಯಿ ಹಾಕುವವನು.

ಕುಷ್ಠ = ಒಂದು ಬಗೆಯ ಚರ್ಮರೋಗ.

ಕುಷ್ಕಿ = ಮಳೆ ಆಧಾರಿತ ಬೆಳೆಯ ಭೂಮಿ.

ಕುಸಾಲು = ಕುಶಾಲು, ತಮಾಷೆ, ವಿನೋದ.

ಕುಸಿ = ೧.ತಗ್ಗು, ಕುಗ್ಗು, ೨. ಕುಳ್ಳು, ಗಿಡ್ಡ ೩.ಶಕ್ತಿಗುಂದು ೪. ಕೆಳಗೆ ಬೀಳು, ಜರಿದು ಬೀಳು.

ಕುಸಿತ = ಕೆಳಕ್ಕೆ ಬೀಳುವುದು, ಜರಿಯುವಿಕೆ.

ಕುಸ್ತಿ = ಜಗಳ, ಹೊಡೆದಾಟ, ಕಾಳಗ.

ಕುಸುಕು = ನಯವಾಗಿ ಕುಕ್ಕು, ಕುಲುಕು.

ಕುಸುಗುಡು = ಸಣ್ಣದಾಗಿ ಅಳು, ನಿಧಾನದಲ್ಲಿ ಅಳುವುದು, ಸಣ್ಣದನಿಯಲ್ಲಿ ಅತ್ತಂತೆ ಮಾಡು.

ಕುಸುಮ = ಹೂವಿನ ದಳ, ಎಸಳು, ಮಕರಂದ.

ಕುಸುರಿ ಕೆಲಸ = ನಾಜೂಕಿನ ಕೆಲಸ, ಕೆತ್ತನೆಯ ಕೆಲಸ.

ಕುಸುಲಕ್ಕಿ = ೧.ಕುಚ್ಚಕ್ಕಿ, ಕುಚ್ಗಿ ಅಕ್ಕಿ, ಕುಸುಳಕ್ಕಿ.

ಕುಳ = ೧.ನೇಗಿಲಿಗೆ ಸಿಕ್ಕಿಸುವ ಚೂಪಾದ ಕಬ್ಬಿಣ, ೨.ಸಂಸಾರ, ಒಕ್ಕಲು ೩.ಶ್ರೀಮಂತ.

ಕುಳವಾಡಿ = ಗ್ರಾಮದ ಸೇವಕ, ಆಳು, ಮಾದಾರ, ಸಾವಿನ ಸುದ್ದಿ ಹೇಳಿ, ಹೆಣ ಸುಡಲು ಸೌದೆ ಪೇರಿಸುವವನು (ಊರವರೆಲ್ಲ ಬದಲಿಗೆ ಅಕ್ಕಿ, ಬತ್ತ, ತೆಂಗಿನ ಕಾಯಿ ಕೊಡ್ತಿದ್ರು).

ಕುಳಿ = ತಗ್ಗು, ಹಳ್ಳ, ಅಗೆದ ಗುಳಿ.

ಕುಳ್ಳ = ಗಿಡ್ಡ, ಕುಬ್ಜ, ಎತ್ತರವಿಲ್ಲದವನು.

(ಪು)

ಕುಳ್ಳಿ = ಕುಬ್ಜೆ. (ಸ್ತ್ರೀ)

ಕುಳ್ಳು = ಗಿಡ್ಡ ಆಳ್ತನ.

ಕುಳ್ಳೆ = ಮಲ, ಹೇಲು.

ಕೂಊ = ದೂರದಲ್ಲಿರುವವರನ್ನು ಕರೆಯಲು ಕೂಗು ಹಾಕುವುದು.

ಕೂಗಳತೆ = ಗಟ್ಟಿಯಾಗಿ ಕೂಗಿದರೆ ಕೇಳುವಷ್ಟು ದೂರ.

ಕೂಗಾಟ = ಕೂಗುವಿಕೆ, ಕಿರುಚುವುದು.

ಕೂಗಾಡು = ಗಟ್ಟಿಯಾಗಿ ಕೂಗು, ರೇಗಾಡು.

ಕೂಗು – ಕಿರುಚು, ಅರಚು, ಅಳು.

ಕೂಟ = ಸೇರುವಿಕೆ, ಬೆರೆಯುವಿಕೆ.

ಕೂಡ = ಸಹ, ಸಂಗಡ, ಜೊತೆ.

ಕೂಡಾಕೂಡ = ೧.ಜೊತೆಜೊತೆಯಾಗಿ ೨.ಒಂದರ ಹಿಂದೆ ಇನ್ನೊಂದು.

ಕೂಡಾವಳಿ = ಮರುಮದುವೆ, ವಿಧವೆ ವಿಧುರರ ಮದುವೆ.

ಕೂಡಿಕೆ = ಕೂಡಾವಳಿ.

ಕೂಡುಕುಟುಂಬ = ಅವಿಭಕ್ತ ಕುಟುಂಬ.

ಕೂಡು ಕೊಟ್ಟಿಗೆ = ಜಾನುವಾರುಗಳನ್ನು ಕಟ್ಟದೆ ಸುಮ್ಮನೆ ಕೂಡಿಡುವ ಹಟ್ಟಿ

ಕೂಡು ಬೇಟೆ = ದೊಡ್ಡ ಬೇಟೆ, ಹೆಚ್ಚು ಜನ ಸೇರಿ ಶಿಕಾರಿ ಮಾಡುವುದು.

ಕೂಡ್ಲೆ = ತಕ್ಷಣ, ತತ್‌ಕ್ಷಣ, ಒಡನೆ.

ಕೂಡೋ ಕೂಡ್ = ಕೊಟ್ಟಿಗೆಗೆ ದನಗಳನ್ನು ಕೂಡುವಾಗ ಹೇಳುವುದು

ಕೂಣಿ = ಬಿದಿರಿನಿಂದ ಮಾಡಿದ ಮೀನು ಹಿಡಿಯುವ ಒಂದು ರೀತಿಯ ಬುಟ್ಟಿ/ಬೋನು.

ಕೂತಗ = ಕುಳಿತುಕೋ, ಕುತ್ಗ.

ಕೂತ್ಗಣದು = ಕುಳಿತುಕೊಳ್ಳುವುದು.

ಕೂದ್ಲು = ಕುರುಳು, ಕೇಶ, ರೋಮ.

ಕೂರದು = ಕುಳಿತುಕೊಳ್ಳುವುದು.

ಕೂರಾ (ಪು) = ಕುಳಿತುಕೋ.

ಕೂರಿ (ಬ.ವ) = ಕುಳಿತುಕೊಳ್ಳಿ.

ಕೂರ್ಗಿ = ಕೂರಿಗೆ, ಹೊಲಗದ್ದೆಗಳಲ್ಲಿ ಬೀಜ ಬಿತ್ತುವ ಉಪಕರಣ.

ಕೂರು = ಕುಳಿತುಕೊಳ್ಳು, ಆಸೀನನಾಗು.

ಕೂರೆ = ಕೊಳಕು ವಸ್ತ್ರದಲ್ಲಿ ಹುಟ್ಟುವ ಬಿಳಿ ಹೇನು.

ಕೂರೇ (ಸ್ತ್ರೀ) = ಕುಳಿತುಕೋ.

ಕೂಲಿ = ೧.ಹಣಕ್ಕಾಗಿ ದುಡಿಯುವವನು ೨.ಗಳಿಕೆ, ಸಂಪಾದನೆ.

ಕೂಲಿಮಠ = ಉಪಾಧ್ಯಾಯರಿಗೆ ಪೋಷಕರೇ ಕೂಲಿ/ಸಂಭಾವನೆ ಕೊಟ್ಟು ಮಕ್ಕಳಿಗೆ ಪಾಠ ಹೇಳಿಸುತ್ತಿದ್ದ ಶಾಲೆ.

ಕೂಸು = ಮಗು, ಶಿಶು, ಹಸುಳೆ, ಬಾಲೆ.

ಕೂಸುಮರಿ = ಮಕ್ಕಳನ್ನು ಬೆನ್ನ ಮೇಲೆ ಕೂರಿಸಿಕೊಂಡು ಆಡುವ ಆಟ.

ಕೂವೆ = ಗೆಣಸಿನಂತಹ ಬಳ್ಳಿ, ಆರಾರೂಟು.

ಕೂಳಿ = ಕೂಣಿ, ಮೀನು ಹಿಡಿಯುವ ಬುಟ್ಟಿ

ಕೂಳು = ಅನ್ನ, ಸತ್ತವರಿಗೆ ಸ್ಮಶಾನಕ್ಕೆ ಒಯ್ಯುವ ಗಂಜಿ.

ಕೂಳೆ = ಕೊಯ್ದು ಪೈರಿನ ಅಥವಾ ಗಿಡದ ಉಳಿದ ಭಾಗ/ಬುಡ, ಗುತ್ತಿ.

ಕೂಳೆ ಅಳಬಿ = ಕೂಳೆ ಬಳ್ಳಿಯ ಬುಡದಲ್ಲಿ ಏಳುವ ತಿನ್ನಲು ಬಲುರುಚಿ ಯಾದ ಹಳದಿ ಅಣಬೆ.

ಕೂಳೆಕಬ್ಬು = ಒಂದು ಫಸಲು ಕೊಯ್ದ ಮೇಲೆ ಉಳಿದ ಬುಡದಿಂದ ಮತ್ತೆ ಬೆಳೆಯುವ ಕಬ್ಬಿನ ಕೋಲು.

ಕೂಳೆಬೀಳು = ಕೂಳೆ ಬಳ್ಳಿ. ಅತಿ ಎತ್ತರಕ್ಕೆ ಬೆಳೆಯುವ ತುಂಬಾ ಗಟ್ಟಿಯಾದ ಬಳ್ಳಿ, ಇದರ ಹಣ್ಣು ಕಬ್ಬೆಕ್ಕು, ಗುಮ್ಮಾಡ್ಲ ಹಕ್ಕಿ ಮುಂತಾದ ಪ್ರಾಣಿ ಪಕ್ಷಿಗಳ ಆಹಾರ, ಬಳ್ಳಿಯ ರಸ ಕಣ್ಣಿಗೆ ತಂಪು.

ಕೃತಿಕ = ಒಂದು ಮಳೆ ನಕ್ಷತ್ರ.

ಕೃಶ – ತೆಳ್ಳಗಿರುವಿಕೆ, ಬಡಕಲು, ಬಡಕಟ್ಟೆ.

ಕೃಷಿ = ಸಾಗುವಳಿ, ಬೇಸಾಯ.

ಕೃಷಿಕ = ಬೇಸಾಯಗಾರ, ಒಕ್ಕಲಿಗ.

ಕ್ರೂಕ್ರೂ = ನಾಯಿಯನ್ನು ಕರೆಯುವುದು.

ಕೆಂಗಣ್ಣು = ೧.ಕೆಂಪುಕಣ್ಣು ೨. ಕೋಪದ ಕಣ್ಣು, ರೇಗಿದ ಕಣ್ಣು.

ಕೆಂಚ = ಕೆಂಪಗಿರುವುದು, ನಸುಗೆಂಪು ಬಣ್ಣದ್ದು.

ಕೆಂಚು = ನಸುಗೆಂಪು ಬಣ್ಣ.

ಕೆಂಜಗ = ಚಗಳಿ ಜಾತಿಗೆ ಸೇರಿದ ರೆಂಬೆಗಳಲ್ಲಿ ಗೂಡು ಕಟ್ಟುವ ಇರುವೆ.

ಕೆಂಜ್ಗಿ = ಸೀಗೆ ಜಾತಿಗೆ ಸೇರಿದ ಮುಳ್ಳಿನ ಪೊದೆ.

ಕೆಂಜ್ಗಿ ಉಡಿ = ಕೆಂಜ್ಗಿ ಪೊದೆ.

ಕೆಂಜ್ಗಿಹಿಂಡ್ಲು = ಒತ್ತಾಗಿ ಬೆಳೆದ ಕೆಂಜ್ಗಿ ಪೊದೆ.

ಕೆಂಡ = ಉರಿಯುತ್ತಿರುವ ಇದ್ದಿಲು, ಇಂಗಳ, ಉರಿದುಹೋದ ಕೊಳ್ಳಿ.

ಕೆಂಡಕಾರು = ೧. ಕೆಂಡವನ್ನು ಉಗುಳು, ಕೆಂಡದಂತೆ ಸುರಿಸು, ೨. ಕೋಪಗೊಳ್ಳು, ರೇಗು. (ಅಲಂ)

ಕೆಂಡಕಾಸು = ಚಳಿ ಕಾಸುವುದು, ಒಲೆಯ ಮುಂದೆ ಕುಳಿತು ಮೈ ಬಿಸಿ ಮಾಡಿಕೊಳ್ಳುವುದು.

ಕೆಂಡಸಂಪ್ಗೆ = ಕೆಂಬಣ್ಣದ ಸಂಪಿಗೆ.

ಕೆಂದಾಳ = ಕಾಡಿನ ಮರ, ತೇಯ್ದರೆ ಕೆಂಪು ಬಣ್ಣ, ಔಷಧಿಯುಕ್ತ, ನೆರಳಿಗೆ ಉಪಯೋಗ, ಒಣಗಿದರೂ ಎಲೆಗಳು ಉದುರುವುದಿಲ್ಲ.

ಕೆಂದಾಳಿ = ಕೆಂಪು ತೆಂಗು.

ಕೆಂಪು = ರಕ್ತವರ್ಣ, ತಾಮ್ರವರ್ಣ, ಮಾಣಿಕ್ಯ.

ಕೆಂಪುಗೋಟು = ಹಣ್ಣಾದ ಅಡಿಕೆ ಸುಲಿದಿದ್ದು.

ಕೆಂಪುಸೆರಗು = ರಕ್ತಸ್ರಾವ, ಮುಟ್ಟಿನಿಂದಾಗುವ ರಕ್ತಸ್ರಾವ.

ಕೆಂಪು ಹರಿವೆ = ಕೆಂಪು ಬಣ್ಣದ ದಂಟು ಮತ್ತು ಎಲೆಗಳನ್ನುಳ್ಳ ಒಂದು ತರಕಾರಿ ಸೊಪ್ಪು.

ಕೆಂಬತ್ಗ = ಕೆಂಬೋತ, ಭಾರದ್ವಾಜ ಪಕ್ಷಿ, ಕೆಂಬತಗ, ಎರಡು ಮೂರು ರೀತಿಯಲ್ಲಿ ಕೂಗುತ್ತದೆ. ೨. ಅಡಿಕೆಯ ಕಾಯಿಯಲ್ಲಿ ಅಡಿಕೆಯ ಬದಲು ನೀರು ತುಂಬಿರುವುದು.

ಕೆಂಬಾರ = ಆಗ ತಾನೆ ಹುಟ್ಟಿದ ಎಳೆ ಮಗುವಿಗೆ ಮೈಮೇಲೆ ಏಳುವ ಕೆಂಪುಗಂದೆ.

ಕೆಂಬ್ರು = ಕೆಂಚು, ನಸುಗೆಂಪು.

ಕೆಮ್ಮಣ್ಣು = ಕೆಂಪಗಿರುವ ಮಣ್ಣು.

ಕೆಕ್ಕರಿಸು = ಕೋಪದ ದೃಷ್ಟಿ, ಕೋಪಕಾರುವ ಕಣ್ಣಿನಿಂದ ನೋಡು.

ಕೆಕ್ಕರಿಸಿ ನೋಡು = ದುರುಗುಟ್ಟಿ ನೊಡು.
ಕೆಚ್ಚಲು = ಪ್ರಾಣಿಗಳ ಮೊಲೆಗಳು.
ಕೆಚ್ಚು = ಧೈರ್ಯ, ಸಾಹಸ.
ಕೆಚ್ಚೆದೆ = ಕೆಚ್ಚು.
ಕೆಟ್ಟ = ಒಳ್ಳೆಯದಲ್ಲದ, ಕೆಡುಕಿನ, ಅನಿಷ್ಟ
ಕೆಟ್ಕಣ್ಣು = ಕೆಡುಕಾಗುವಂತೆ ಹಾರೈಸು, ಕೆಟ್ಟದೃಷ್ಟಿ
ಕೆಟ್ಟಕೇಡ್ಗ = ಕೇಡಿಗ, ಕೆಟ್ಟದನ್ನು ಮಾಡುವವನು.
ಕೆಟ್ಚಾಳಿ = ದುರಭ್ಯಾಸ, ಕೆಟ್ಟಬುದ್ಧಿ.
ಕೆಡಿಸು = ೧.ಹಾಳು ಮಾಡು, ನಾಶ ಮಾಡು, ೨.ನಂದಿಸು, ಆರಿಸು ೩.ಶೀಲಭಂಗ ಮಾಡು.
ಕೆಡು = ಹಾಳಾಗು, ನಾಶವಾಗು, ನೀಚನಾಗು.
ಕೆಡುಕ = ಕೇಡು ಮಾಡುವವ, ದುಷ್ಟ.
ಕೆಡುಕ್ತನ = ಕೆಟ್ಟತನ, ದುಷ್ಟತನ.
ಕೆಡುಕು = ಕೇಡು, ನಾಶ.
ಕೆಡ್ಗು = ಕೆಳಗೆ ಬೀಳಿಸು, ನೂಕು, ತಳ್ಳು.
ಕೆಣಕು = ಕೆರಳಿಸು, ರೇಗಿಸು, ಪೀಡಿಸು.
ಕೆತ್ಗಿ ಬಳೆ = ಸಾದಾಬಳೆಯ ಮೇಲೆ ಕೆತ್ತಿದಂತಹ ಆಕಾರವಿರುವುದು.
ಕೆತ್ನೆ = ಕೆತ್ತನೆ, ಕುಸುರಿ ಕೆಲಸ.
ಕೆತ್ತು = ಹೆರೆಯುವುದು, ಸುಲಿಯುವುದು, ಕೆತ್ತಿ ತೆಳ್ಳಗೆ ಮಾಡುವುದು.
ಕೆದಕು = ಬೆದಕು, ಕೆದರು, ೨. ಆಹಾರ ಸೀಯುದಂತೆ ತಿರುವು, ೩. ನೆಲವನ್ನು ಸಾಧಾರಣ ಅಗೆ.
ಕೆದುರು = ಹರಡು, ಚಲ್ಲಾಪಿಲ್ಲಿ ಮಾಡು.
ಕೆನೆ = ೧.ಹಾಲಿನ ಮೇಲ್ಪದರ, ಹಾಲಿನ ಮೇಲಿನ ಸಾರವತ್ತಾದ ಭಾಗ, ೨.ಕುದುರೆಯ ಕೂಗು.
ಕೆನ್ನೆ = ಕಪೋಲ, ಕದಪು.
ಕೆನ್ನೆಸರ = ಓಲೆಗೆ ಸೇರಿಸಿ ಹಾಕುವ ಬಂಗಾರದ ಸರಪಳಿ, ಹೆಂಗಸರ ಕಿವಿಯ ಆಭರಣ.
ಕೆನ್ನೆ ಸರಪಣಿ = ಕೆನ್ನಸರ.
ಕೆಪಟ = ಕೆಪರೆ ಊದಿಕೊಳ್ಳುವ ಒಂದು ರೋಗ.
ಕೆಪರೆ = ಕಿವಿ ಮತ್ತು ಕೆನ್ನೆಯ ಮಧ್ಯಭಾಗ, ಕಪಾಲ.
ಕೆಪಟರಾಯ = ಕೆಪಟ.
ಕೆಪ್ಪ = ಕಿವುಡ, ಕಿವಿ ಕೇಳಿಸದವನು (ಪು)
ಕೆಪ್ಪಟೆ = ಕೆಪಟ.
ಕೆಪ್ಪಿ = ಕಿವುಡಿ, ಕಿವಿ ಕೇಳಿಸದವಳು (ಸ್ತ್ರೀ).
ಕೆಪ್ಪು = ಕಿವುಡು, ಕಿವಿ ಕೇಳಿಸದಿರುವುದು.
ಕೆಪ್ಪೆ = ಕೆಪಟ.
ಕೆಮ್ಮಣ್ಣು = ಕೆಂಪು ಮಣ್ಣು.
ಕೆಮ್ಮು = ಕೆಮ್ಮಲು, ಕಾಸ.
ಕೆರ = ಚಪ್ಪಲಿ, ಪಾದರಕ್ಷೆ.
ಕೆರಕ = ಸಗಣಿಯ ಗಣೇಶ ೨. ಭೂಮಿ ಹುಣ್ಣಿಮೆಯಿಂದ ದೀಪಾವಳಿಯವರೆಗೆ ಕೆರಕ ಎಂದು ಹೇಳುವ ಒಂದು ತಮಾಷೆಯ ಪದ್ಧತಿ.
ಕೆರಕಲು ಹೂಡು = ಬಲಿಪಾಡ್ಯಮಿಯ ದಿನ ಎಲ್ಲ ಬಾಗಿಲುಗಳ ಇಕ್ಕೆಲದಲ್ಲೂ ಕೆಮ್ಮಣ್ಣುಪಟ್ಟೆ, ಜೇಡಿಪಟ್ಟೆ ಹಾಕಿ, ಮಧ್ಯದಲ್ಲಿ ಸಗಣಿಯಿಟ್ಟು ಅದಕ್ಕೆ ಚೆಂಡು ಹೂ, ಹಿಂಡ್ಲೆಕಾಯಿ, ಅಡಕೆ ಕಾಯಿ, ಪಚ್ಚೆ ತೆನೆ ಇಟ್ಟು ಬಲೀಂದ್ರನನ್ನು ಬರ ಮಾಡಿ

ಕೊಳ್ಳುವ ಪದ್ಧತಿ.

ಕೆರಳು = ರೇಗು, ಕೋಪಗೊಳ್ಳು.

ಕೆರೆ = ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ, ಜಲಾಶಯ.

ಕೆರೆಗೋಡು = ಮಳೆನೀರಿನ ಜೊತೆಯಲ್ಲಿ ಕೆರೆಗೆ ಬಂದು ಸೇರಿ ತಳದಲ್ಲಿರುವ ಗೋಡದ ಮಣ್ಣು.

ಕೆರೆತ = ತುರಿಕೆ, ನವೆ.

ಕೆರೆದಡ = ೧.ಕೆರೆಯ ದಡ, ೨.ಒಂದು ಮಕ್ಕಳ ಆಟ ೩. ಕೆರೆಯ ಏರಿ.

ಕೆರೆಮೀನು = ಕೆರೆಯಲ್ಲಿ ಸಾಕಿದ ಮೀನು.

ಕೆಲ = ಪಕ್ಕ, ಬದಿ, ನೆರೆ.

ಕೆಲಸ = ಕಾರ್ಯ, ಕರ್ತವ್ಯ, ಉದ್ಯೋಗ, ಕಸುಬು.

ಕೆಲಸಗಳ್ಳ = ಸೋಮಾರಿ, ಮೈಗಳ್ಳ.

ಕೆಲಸಗಾರ = ದಕ್ಷ, ಅನುಭವಿ, ಕೆಲಸವನ್ನು ನಿಯತ್ತಿನಿಂದ ಮಾಡುವವನು. (ಪು)

ಕೆಲಸಗಿತ್ತಿ = ಕೆಲಸ ಮಾಡುವವಳು, ಚಾಕರಿಯವಳು. (ಸ್ತ್ರೀ)

ಕೆಲೋವು = ಕೆಲವು, ಕೊಂಚ, ಸ್ವಲ್ಪ.

ಕೆವಿ = ಬತ್ತದ ತೆನೆ, ಹುಲ್ಲಿನ ಸಮೇತ ಬತ್ತದ ತೆನೆ.

ಕೆವಿ ಕಟ್ಟು ಹಗ್ಗ = ಬತ್ತದ ಹೊರೆಯನ್ನು ಕಟ್ಟಲೆಂದೇ ಇರುವ ನಿರ್ದಿಷ್ಟ ಹಗ್ಗ.

ಕೆವಿಕುತ್ರೆ = ಬತ್ತದ ಹೊರೆಯ ಗೊಣಬೆ. ಬಣವೆ.

ಕೆವಿ ಹೊರೆ = ಕೆವಿಯನ್ನು ಹುಲ್ಲಿನ ಸಮೇತ ಹೊರೆ ಮಾಡಿರುವುದು.

ಕೆಸ = ಕೆಸುವು, ಅಗಲವಾದ ಎಲೆ ಮತ್ತು ಉದ್ದ ದಂಟುಳ್ಳ ಸಸ್ಯ.

ಕೆಸರ್ಹಲಗೆ = ತೆಣೆಯ ತುದಿಯಲ್ಲಿ ಹಾಸಿದ ಹಲಗೆ.

ಕೆಸರು = ರಾಡಿ, ಪಂಕ, ನೀರಾಗಿ ಕಲಸಿದ ಮಣ್ಣು.

ಕೆಸರುಗದ್ದೆ = ಬತ್ತದ ಸಸಿಯನ್ನು ನಾಟಿ ಮಾಡಲು ಹದಮಾಡಿದ ಗದ್ದೆ.

ಕೆಸರು ಹುಣ್ಣು = ಕಾಲು ಹೇಸುವುದು, ಮಳೆಗಾಲದಲ್ಲಿ ಕಾಲ್ಬೆರಳ ಸಂದಿ ಹುಣ್ಣಾಗುವುದು.

ಕೆಸಿನೆಲೆ = ಕೆಸುವಿನ ಎಲೆ.

ಕೆಸೀನ ಗೆಡ್ಡೆ = ಕೆಸುವಿನ ಗಡ್ಡೆ, ಒಂದು ತರಕಾರಿ.

ಕೆಸೀನ ಚೇಪು = ಕೆಸುವಿನ ಬೇರು.

ಕೆಳಗಿಳಿ = ಇಳಿ, ಕೆಳಕ್ಕೆ ಇಳಿ.

ಕೆಳ್ಗಡೆ = ಕೆಳಗೆ.

ಕೇಂಡ್ಯಾ = ಕೇಳಿದೆಯಾ.

ಕೇಕೆ = ಸಂತೋಷದ ಕೂಗು, ನವಿಲಿನ ಕೂಗು.

ಕೇಡ್ಗಾಲ = ವಿನಾಶಕಾಲ.

ಕೇಡಿ = ಕೇಡಿಗ, ಕೆಡುಕನ್ನು ಮಾಡುವುದೇ ಸ್ವಭಾವ.

ಕೇಡಿಗ = ಕೇಡಿ.

ಕೇಡು = ಕೆಡುಕು, ಆಪತ್ತು, ಅಪಾಯ, ಹಾನಿ.

ಕೇಣ್ಸ್ಗ = ಕೇಳಿಸಿಕೋ, ಕಿವಿಗೊಟ್ಟು ಕೇಳು.

ಕೇಣ್ಲ = ಕೇಳಲಿಲ್ಲ, ಆಲಿಸಲಿಲ್ಲ.

ಕೇಣ್ಲಾ = ಕೇಳಲಿಲ್ಲವೇ? ಆಲಿಸಲಿಲ್ಲವೇ?.

ಕೇಣ್ತಾರೆ = ಕೇಳುತ್ತಾರೆ.

ಕೇಣು = ಕಿವಿಗೊಡು, ಆಲಿಸು, ಪ್ರಶ್ನೆ

ಮಾಡು.

ಕೇಪಿನ ಕೋವಿ = ಕೇಪು ಹಾಕಿ ಹೊಡೆಯುವ ಬಂದೂಕು.

ಕೇಪು = ಬಂದೂಕಿನ ಗುಂಡಿನ ಟೋಪಿ.

ಕೇರಿ = ಮನೆಗಳ ಸಾಲು, ಓಣಿ.

ಕೇರು = ಅಕ್ಕಿ ಧಾನ್ಯ ಕಾಳು ಕಡ್ಡಿಗಳನ್ನು ತೂರು, ಕಾಳನ್ನೂ ಕಸವನ್ನೂ ಬೇರ್ಪಡಿಸು, ಅಕ್ಕಿ ಹಸನು ಮಾಡು.

ಕೇಲ್ಗಡಿಗೆ = ಪವಿತ್ರ ಗಂಗೆಯನ್ನು ಪೂಜಿಸುವ ಮಡಕೆ.

ಕೇಲ್ನೀರು = ಮಡಕೆಯಲ್ಲಿರುವ ಪವಿತ್ರ ನೀರು.

ಕೇಲುಶಾಸ್ತ್ರ = ಮದುವೆಯಲ್ಲಿ ಪವಿತ್ರ ಗಂಗೆಯನ್ನು ಪೂಜಿಸುವ ಶಾಸ್ತ್ರ.

ಕೇವಲ = ಅಷ್ಟು ಮಾತ್ರದ, ಬರಿಯ ಸಾಮಾನ್ಯ, ಮಾತ್ರ.

ಕೇಶ = ಕೂದಲು, ತಲೆಗೂದಲು.

ಕೇಸರಿ = ಕೇಸರಿ ಬಣ್ಣ, ಕೇಸರಿ ಎಸಳು.

ಕೇಸಕ್ಕಿ = ಕೆಂಪಕ್ಕಿ, ಪಾಲಿಶ್ ಮಾಡಿಸದ ಅಕ್ಕಿ.

ಕೇಸು = ಅಕ್ಕಿಯ ಮೇಲಿನ ಸಿಪ್ಪೆ, ತೌಡು.

ಕೇಳ್ಕಳಿ = ಕೇಳಿಕೊಳ್ಳಿ, ವಿಚಾರಿಸಿ.

ಕೇಳಿ = ಕೇಳ್ಕಳಿ.

ಕೇಳಿಕೆ = ಕೇಳುವಿಕೆ, ಪ್ರಾರ್ಥನೆ.

ಕೇಳು = ಕೇಣು.

ಕೈಂಕ = ಪ್ರಾಣಿಗಳ ಪಿತ್ತಕೋಶ.

ಕೈಂಕ = ಒಂದು ಜಾತಿಯ ಕಾಡುಮರ, ಗಟ್ಟಿಮರ, ನೇರವಿಲ್ಲ ಆದ್ದರಿಂದ ನಾಟಕ್ಕೆ ಆಗುವುದಿಲ್ಲ. ಒಲೆಗೂ ಹಾಕಲ್ಲ, 'ಜಗಳ-ಗಂಟ' ಮರ ಎಂದು ಪ್ರತೀತಿ.

ಕೈಂಕಲು = ಕೈಂಕ, ಕಹಿಯಾದ ರುಚಿ.

ಕೈ = ಕರ, ಹಸ್ತ.

ಕೈಎತ್ತು = ಇಲ್ಲವೆನ್ನು, ೨. ದಿವಾಳಿ ಆಗು, ೩. ಮೋಸ ಮಾಡು. (ಅಲಂ)

ಕೈಕಸುಬು = ಉಪವೃತ್ತಿ, ಸಣ್ಣಪುಟ್ಟ ಕೆಲಸ.

ಕೈಕಡಗ = ಕೈಯ ಆಭರಣ.

ಕೈಕಾಲು ಬಿದ್ದು ಹೋಗು = ಸುಸ್ತಾಗು, ನಡೆಯಲಾಗದಷ್ಟು ಸುಸ್ತಾಗು. (ಅಲಂ)

ಕೈಕೆಳಗೆ = ಅಧೀನ, ವಶ.

ಕೈ ಕೈ ಮಿಲಾಯ್ಸು = ಜಗಳವಾಡು, ಕುಸ್ತಿಮಾಡು, ಪರಸ್ಪರ ಹೊಡೆದಾಡು.

ಕೈಕೊಡು = ಕೈ ಎತ್ತು.

ಕೈಕೋಳ = ಬೇಡಿ, ಸಂಕೋಲೆ.

ಕೈಗಂಬ = ಕೈಮರ, ದಾರಿಸೂಚಿಸುವ ಫಲಕವನ್ನು ಜೋಡಿಸಿರುವ ಕಂಬ.

ಕೈಗಂಟು = ಕೈಮೂಳೆಯ ಸಂದು.

ಕೈಗಡ = ಕೈಸಾಲ, ಎರವಲು ಹಣ.

ಕೈಗಡಿಯಾರ = ಕೈಗೆ ಕಟ್ಟುವ ಸಣ್ಣ ಗಡಿಯಾರ.

ಕೈಗಾಡಿ = ಕೈಯಿಂದ ಎಳೆದುಕೊಂಡು ಹೋಗುವ ಗಾಡಿ.

ಕೈಗಾವಲು = ಅಂಗರಕ್ಷಕ, ರಕ್ಷಣೆಗಾಗಿ ಬಳಿಯಲ್ಲಿರುವ ವಸ್ತು.

ಕೈಗುಂದು = ಶಕ್ತಿಗುಂದು, ಬಲಹೀನವಾಗು.

ಕೈಗುಡ್ಡ = ಕೈಯಲ್ಲಿ ದುಡ್ಡಿಲ್ಲ, ಅಸಹಾಯಕತೆ (ಅಲಂ).

ಕೈಗುಣ = ಕೈಚಳಕ, ಶುಭಲಕ್ಷಣ.
ಕೈಗುದ್ಲಿ = ಸಣ್ಣ ಹಾರೆ.
ಕೈಗುರುತು = ಸಹಿ, ರುಜು, ದಸ್ಕತ್ತು, ಹೆಬ್ಬೆರಳ ಸಹಿ.
ಕೈಗೂ ಇಲ್ಲ ಬಾಯ್ಗೂ ಇಲ್ಲ = ಏನೂ ಪ್ರಯೋಜವಿಲ್ಲದಿರುವುದು, ಶ್ರಮಕ್ಕೆ ತಕ್ಕ ಫಲ ಸಿಗದಿರುವುದು. (ಅಲಂ)
ಕೈಗೂಡು = ಕಾರ್ಯನೆರವೇರು, ಕೆಲಸ ಈಡೇರು, ಅಂದುಕೊಂಡಿದ್ದು ನೆರವೇರು.
ಕೈಗೂ ಸಿಕ್ಕಲ್ಲ ಬಾಯ್ಗೂ ಇಲ್ಲ = ನುಣಚಿ ಕೊಳ್ಳುವಿಕೆ, ಹಂಗಿಗೊಳಗಾಗ ದಿರುವಿಕೆ. (ಅಲಂ)
ಕೈಗೊಂಬೆ = ಅಧೀನ, ಹೇಳಿದಂತೆ ಕೇಳುವವನು, ಗೊಂಬೆಯಂತೆ ಆಡುವವನು, ತನಗೆ ಬೇಕಾದಂತೆ ನಡೆಸಿಕೊಳ್ಳುವವನು.
ಕೈಗೆ ಬರು = ಫಲ ದೊರೆಯುವುದು.
ಕೈಗೆ ಕೈ ಹತ್ತು = ಜಗಳ ಪ್ರಾರಂಭವಾಗು.
ಕೈಗೊಡಲಿ = ಚಿಕ್ಕ ಕೊಡಲಿ, ಸಣ್ಣ ಗುದ್ದಲಿ.
ಕೈಗೊಳ್ಳು = ತೊಡಗು, ಆರಂಭಿಸು.
ಕೈಚಳಕ = ಕೈಗುಣ, ಕೈಯ ಚಮತ್ಕಾರ, ಚಾತುರ್ಯ, ಕಲೆಗಾರಿಕೆ.
ಕೈಚಾಚು = ೧.ಕೈಯನ್ನು ನೀಡು, ಕೈಯನ್ನು ನೆಟ್ಟಗೆ ಮಾಡು ೨. ಕೈಯೊಡ್ಡು, ಬೇಡು.
ಕೈ ಚೀಲ = ಕೈಯಲ್ಲಿ ಹಿಡಿಯುವ ಸಣ್ಣ ಚೀಲ.
ಕೈ ಚೆಲ್ಲು = ಅಸಹಾಯಕತೆಯಿಂದ ಕೆಲಸದಿಂದ ವಿಮುಖನಾಗು, ಸೋತ ಮನೋಭಾವ. (ಅಲಂ)
ಕೈಜೋಡ್ಸು = ನೆರವಾಗು.
ಕೈತಡೆ = ಅಡ್ಡಿಪಡಿಸು, ಮತ್ತೊಬ್ಬರನ್ನು ತಡೆ.
ಕೈತಪ್ಪು = ೧.ಕೈಯಿಂದ ಆಗುವ ತಪ್ಪು, ಅಜಾಗರೂಕತೆಯಿಂದ ಆದ ತಪ್ಪು, ಅಪರಾಧ ೨. ಕೈಯಿಂದ ತಪ್ಪಿ ಹೋಗು, ನುಣುಚಿಕೊಳ್ಳು.
ಕೈತೊಳ್ದು ಮುಟ್ಬು = ತುಂಬಾ ಸುಂದರವಾಗಿದ್ದಾರೆಂದು ವರ್ಣಿಸುವುದು.
ಕೈತೋಟ = ಮನೆಗೆ ಹೊಂದಿ-ಕೊಂಡಂತಿರುವ ಸಣ್ಣತೋಟ.
ಕೈದಂಬೆ = ಮೇಲೆ ಉಕ್ಕಿಬರುವ ಅಡಿಕೆ ಚೊಗರನ್ನು (ಅಡಿಕೆ ಬೇಯಿಸುವಾಗ) ಮಗೆಯುವ ತಾಮ್ರದ ಪಾತ್ರೆ, ಹೊಂಡದಿಂದ ನೀರನ್ನು ತೋಡುವ ಹಿಡಿಯಿರುವ ಪಾತ್ರೆ.
ಕೈದಾಯ್ತು = ಮುಗಿಯಿತು, ಮುಗಿದು ಹೋಯಿತು.
ಕೈಧಾರೆ = ವಧುವರರ ಕೈಮೇಲೆ ಹಾಲೆರೆದು ಧಾರೆಯೆರೆಯುವುದು.
ಕೈದಿಸಿ = ಕೈಗೆ ಸಿಗುವಂತೆ, ಕೈಯ ಪಕ್ಕದಲ್ಲಿ.
ಕೈದೀಪ = ದಾರಿದೀಪ, ಹಿಡಿದುಕೊಳ್ಳಲು ಹಿಡಿಯಿರುವ ದೀಪ, ಲಾಟೀನು.
ಕೈದು = ೧.ಮುಕ್ತಾಯ, ೨. ಬಹಿಷ್ಕಾರ, ೩. ಜೈಲುಶಿಕ್ಷೆ, ಬಂಧನ.
ಕೈದೋಟಿ = ಹೂಹಣ್ಣು ಕೀಳಲು ಬಳಸುವ ಕೊಕ್ಕೆಯಿರುವ ಕೋಲು.
ಕೈನಟಗಿ = ಕೈಬೆರಳುಗಳನ್ನು ಮಡಚಿ

ಕಟ್ ಎಂದು ಶಬ್ದ ಮಾಡುವುದು.

ಕೈಪಿಡಿ = ಮನೆಯ ಮೇಲೆ ಸುತ್ತಲೂ ಕಟ್ಟುವ ಗೋಡೆ, ಬಾವಿಗೆ ಸುತ್ತಲೂ ಕಟ್ಟುವ ಕಟ್ಟೆ.

ಕೈಬಟ್ಲು = ಅನ್ನ ಬಡಿಸುವ ಪಾತ್ರೆ.

ಕೈಬರ = ಬರವಣಿಗೆ, ಹಸ್ತಾಕ್ಷರ.

ಕೈಬರಲ್ಲ = ಕೊಡಲು ಮನಸ್ಸಿಲ್ಲದಿರುವುದು.

ಕೈಬರು = ಕೊಡಲು ಮನಸ್ಸಾಗುವುದು (ಕೊಡಲು ಕೈಬರಲ್ಲ).

ಕೈಬಾಚಿ = ಸಣ್ಣ ಬಾಚಿ, ಸಣ್ಣ ಹಾರೆ.

ಕೈಬಿಗಿ = ಜಿಪುಣತನ. (ಅಲಂ)

ಕೈಬಿಗಿ ಹಿಡಿ = ಹಿಡಿತದಿಂದ ಖರ್ಚು ಮಾಡು. (ಅಲಂ)

ಕೈಬಿಚ್ಚು = ಉದಾರಿಯಾಗು, ಧಾರಾಳಿಯಾಗು. (ಅಲಂ)

ಕೈಬೆತ್ತ = ಊರುಗೋಲು, ಕೈಯಲ್ಲಿ ಹಿಡಿಯುವ ಬೆತ್ತ.

ಕೈಬೇಡಿ = ಕೈಗೆ ಹಾಕುವ ಕೋಳ, ಸಂಕೋಲೆ.

ಕೈಬೇವು = ಔಷಧಿಗೆ ಬಳಸುವ ಕಹಿಬೇವು, ಗಟ್ಟಿಯಾದ ದೊಡ್ಡಮರ.

ಕೈಮ = ಮಸಾಲೆ ಸೇರಿಸಿ ಬೇಯಿಸಿದ ಮಾಂಸದ ಉಂಡೆ.

ಕೈಮಗ್ಗ = ಕೈಯಲ್ಲಿ ನೇಯ್ದ ಹತ್ತಿ ಬಟ್ಟೆ.

ಕೈಮದ್ದು = ಆಹಾರದಲ್ಲಿ ಗುಪ್ತವಾಗಿ ಬೆರೆಸಿ ತಿನ್ನಿಸುವ ವಿಷ.

ಕೈಮರ = ಕೈ ಆಕಾರದ ದಾರಿ ತೋರುವ ಮರ.

ಕೈಮರ್ಗಿ = ಮರದ ಕೈ ಬಟ್ಲು, ಮರದ ಅನ್ನ ಬಡಿಸುವ ಸಾಧನ.

ಕೈಮಸಗು = ವಿಷ ಹಾಕುವುದು, ಕೈಮದ್ದು.

ಕೈಮಾಟ = ಕೈಯಿಂದ ಮಾಡುವ ಕುಶಲಕಾರ್ಯ.

ಕೈಮಿಂಚು = ಕೈತಪ್ಪು, ಅಧೀನತಪ್ಪು.

ಕೈಮಿಲಾಯಿಸು = ಕೈಜೋಡಿಸು, ಕೈಸೇರಿಸು, ಕೆಲಸಕ್ಕೆ ಸಹಕರಿಸು.

ಕೈಮೀರು = ಕೈಮಿಂಚು, ಅಂಕೆ ತಪ್ಪು, ಎಣಿಕೆ ಮೀರು.

ಕೈಮುಗಿ = ಕೈಜೋಡಿಸಿ ನಮಸ್ಕರಿಸು, ಗೌರವ ತೋರಿಸು ೨. ಬೇಡಿಕೊಳ್ಳು.

ಕೈಯುಟ್ಲು = ಅಡಿಗೆ ಮಾಡಿದ್ದನ್ನು ಬಡಿಸುವ ಪಾತ್ರೆ, ಕೈಬಟ್ಲು.

ಕೈಯಾಳು = ಸಹಾಯಕ, ಕೆಲಸದವ.

ಕೈರೊಟ್ಟಿ = ಅಂಗೈ ಬಳಸಿ ತಟ್ಟಿದ ರೊಟ್ಟಿ.

ಕೈಲಾದಷ್ಟು = ಸಾಧ್ಯವಾದಷ್ಟು, ಶಕ್ತಿಮೀರಿ.

ಕೈವಶ = ಸ್ವಾಧೀನ, ಕರಗತ.

ಕೈವಸ್ತ್ರ = ಕರವಸ್ತ್ರ, ಕೈಯಲ್ಲಿ ಹಿಡಿಯುವ ಸಣ್ಣ ಚೌಕ.

ಕೈವಾಡದವರು = ಕೈಕೆಲಸ/ಉಪಕೆಲಸವನ್ನು ಮಾಡಿಕೊಡುವವರು.

ಕೈವಾರ = ಗಣಿತದಲ್ಲಿ ಮತ್ತು ಲೋಹದ ಕೆಲಸದಲ್ಲಿ ವರ್ತುಲ ವಿನ್ಯಾಸಕ್ಕಾಗಿ ಬಳಸುವ ಉಪಕರಣ.

ಕೈಸನ್ನೆ = ಸಂಜ್ಞೆ, ಕೈಯಿಂದ ಮಾಡುವ ಸೂಚನೆ.

ಕೈಸಾಲೆ = ಮನೆಯ ಮುಂದಿನ ವಿಶಾಲ ಸ್ಥಳ, ಕಿರುಜಗಲಿ.

ಕೈಸೆರೆ = ಒಂದು ಹಿಡಿ, ಒಂದು ಮುಷ್ಟಿ ೨. ಬಂಧನ, ಕೈದು.

ಕೈಹಚ್ಚು = ಪ್ರಾರಂಭಿಸು, ಕೆಲಸಕ್ಕೆ ಸಹಕರಿಸು.

ಕೊಂಕ = ಹೀಯಾಳಿಸಿ ಮಾತಾಡುವವನು. (ಪು)

ಕೊಂಕಣ = ಪಶ್ಚಿಮ ತೀರ ಪ್ರದೇಶ.

ಕೊಂಕಣಿ = ಕೊಂಕಣ ದೇಶದವನು, ಕೊಂಕಣ ಭಾಷೆ ಮಾತಾಡುವವನು.

ಕೊಂಕಿ = ವಕ್ರ ಮಾತಾಡುವವಳು. (ಸ್ತ್ರೀ)

ಕೊಂಕು = ಚುಚ್ಚು ಮಾತು, ವಕ್ರ, ಡೊಂಕು, ೨. ಕುಂದು, ದೋಷ, ೩. ವ್ಯಂಗ್ಯ.

ಕೊಂಕು ನಗಿ = ವ್ಯಂಗ್ಯದ ನಗು, ಅಪಹಾಸ್ಯದ ನಗು.

ಕೊಂಕುನುಡಿ = ಚುಚ್ಚುಮಾತು, ಕಟಕಿ.

ಕೊಂಕ್ಸು = ಓರೆಮಾಡು, ವಕ್ರಮಾಡು, ಬಾಗಿಸು.

ಕೊಂಗ = ಮಂಗ, ಕಪಿ, ೨. ಅನಾಗರಿಕ, ಮಂಗ ಚೇಷ್ಟೆ ಮಾಡುವವನು.

ಕೊಂಡ = ಅಂಗ್ನಿಕುಂಡ, ದೇವಸ್ಥಾನದ ಎದರು ಬೆಂಕಿ ಹಾಯಲು ತೋಡಿದ ಗುಂಡಿ.

ಕೊಂಡಾಟ = ಹೊಗಳಿಕೆ, ಪ್ರೀತಿಯ ಪ್ರದರ್ಶನ.

ಕೊಂಡಾಡು = ಹೊಗಳು.

ಕೊಂಡಿ = ಒಂದಕ್ಕೊಂದು ಎಳೆಗಳನ್ನು ಸೇರಿಸುವ ಮಧ್ಯದ ಎಳೆ, ಕೊಕ್ಕೆ, ಬಾಗಿದ ತುದಿ.

ಕೊಂಡ್ಲಿ = ಕಿವಿ/ಮೂಗಿಗೆ ನೇತು ಹಾಕಿಕೊಳ್ಳುವ ಆಭರಣ.

ಕೊಂಡ್ಲು = ಮಕ್ಕಳ ಕಿವಿಯ ಆಭರಣ.

ಕೊಂಡೆ = ತುರುಬು, ಕಟ್ಟಿದ ಕೂದಲು.

ಕೊಂತ = ಶಾವಿಗೆ ತಯಾರಿಸಲು ಮಾಡಿದ ದಪ್ಪ ಹಿಟ್ಟಿನ ಮುದ್ದೆ, ದೊಡ್ಡ ಉಂಡೆ.

ಕೊಂತಕಟ್ಟು = ಶಾವಿಗೆ ಮಾಡಲು ಹಿಟ್ಟನ್ನು ಉಂಡೆ ಕಟ್ಟು.

ಕೊಂತಿ = ಒಂದು ಬಗೆಯ ಮೀನು.

ಕೊಂಪೆ = ಚಿಕ್ಕಹಳ್ಳಿ, ಕೊಪ್ಪ.

ಕೊಂಬು = ೧.ಪ್ರಾಣಿಗಳ ಕೋಡು, ಶೃಂಗ, ೨.ಆನೆಯ ದಂತ ೩.ಕೊಂಬಿನ ಆಕಾರದಲ್ಲಿ ಮಾಡಿದ ಊದುವ ವಾದ್ಯ, ಏಡಿಯ ೪. ದಪ್ಪ ಕಾಲುಗಳು, ೫. ಅರಿಸಿನ/ಶುಂಠಿ ಗಡ್ಡೆಯ ಶಾಖೆ.

ಕೊಂಬುಲಿ = ಕಿತಾಪತಿ, ಚೇಷ್ಟೆ, ಆಕಸ್ಮಿಕ, ಪುಕಾರು.

ಕೊಂಬುಯ್ಲು = ಕೊಂಬುಲಿ.

ಕೊಂಬೆ = ಮರದ ಟೊಂಗೆ, ಶಾಖೆ, ಗೆಲ್ಲು, ಹರೆ.

ಕೊಕ್ಕನ್ಹಕ್ಕಿ = ಬೆಳ್ಳಕ್ಕಿ, ಕೊಕ್ಕರೆ.

ಕೊಕ್ಕರೆ = ಬೆಳ್ಳಕ್ಕಿ, ಬಕಪಕ್ಷಿ, ನೀರುಹಕ್ಕಿ.

ಕೊಕ್ಕು = ಹಕ್ಕಿಯ ಮೂತಿ, ಚುಂಚು, ಹಕ್ಕಿಯ ಬಾಯಿ, ಮೂತಿ.

ಕೊಕ್ಕೆ = ಚೂಪಾದ ತುದಿ, ತುದಿಯಲ್ಲಿ ಬಾಗಿರುವುದು, ಕೊಂಡಿ. ೨. ದೋಟಿ, ಉದ್ದಕೋಲು, ೩. ಅಡ್ಡಿ ತಡೆ, ಆಕ್ಷೇಪಣೆ. (ಅಲಂ)

ಕೊಕ್ಕೆ ಕತ್ತಿ = ಸ್ವಲ್ಪ ಮುಂದೆ ಬಾಗಿರುವ ಕತ್ತಿ.

ಕೊಕ್ಕೆ ಮಾತು = ಅಡ್ಡಿಮಾತು,

ವ್ಯಂಗ್ಯೋಕ್ತಿ.

ಕೊಕ್ಕೆ ಹಾಕು = ಅಡ್ಡಿಪಡಿಸು (ಅಲಂ).

ಕೊಕ್ಕೆ ಹುಳ = ಕೊಕ್ಕೆಯಂತೆ ಬಾಯಿರುವ ಹುಳ, ಹೊಟ್ಟೆ ಹುಳ.

ಕೊಚ್ಚಕ್ಕಿ = ಮರದಲ್ಲಿ ಅಕ್ಕಿಯ ನುಚ್ಚನ್ನು ಹಾರಿಸಿ ಕೆಳಗೆ ಹಾಕುವುದು.

ಕೊಚ್ಚಡಿಕೆ = ಸಣ್ಣದಾಗಿ ಕತ್ತರಿಸಿದ ಅಡಕೆ.

ಕೊಚ್ಚಿನ ಬಳೆ = ಗಚ್ಚಿರುವ/ಸಾದಾ ಅಲ್ಲದ ಬಳೆ.

ಕೊಚ್ಚು = ಅಕ್ಕಿ/ಧಾನ್ಯವನ್ನು ಮರದಿಂದ ಶುದ್ಧೀಕರಿಸು ೨. ಕತ್ತರಿಸು, ತುಂಡು ಮಾಡು ೩. ಜಂಬದ ಮಾತಾಡು, ತನ್ನನ್ನು ತಾನೇ ಹೊಗಳಿಕೊಳ್ಳು, ಬಡಾಯಿ ಮಾತಾಡು ೪ ಬಾಯಿಂದ ಕಡಿಯುವುದು.

ಕೊಚ್ಚುಗೊಲ್ಲಿ =ಕೊಚ್ಚುಕೊರಟಿ, ಮಾಂಸ/ಹುಲ್ಲು ಕತ್ತರಿಸಲು ಆಧಾರವಾಗಿ ಬಳಸುವ ಮರದ ತುಂಡು.

ಕೊಚ್ಚುಪ್ಪಿನ ಕಾಯಿ = ಎಲ್ಲಾ ತರದ ಹುಳಿಕಾಯಿಗಳ ಉಪ್ಪಿನಕಾಯಿ, ಮದುವೆಯಲ್ಲಿ ವಿಶೇಷವಾಗಿ ಬಳಸುವ ಸಣ್ಣಗೆ ಹೆಚ್ಚಿದ ಬೆರಕೆ ಕಾಯಿಗಳ ಉಪ್ಪಿನಕಾಯಿ.

ಕೊಟ್ತರು = ಒಂದೇ ಮನೆಯಿಂದ ಒಂದೇ ಮನೆಗೆ ಹೆಣ್ಣುಕೊಟ್ಟು ಹೆಣ್ಣು ತರುವುದು.

ಕೊಟ್ಗಿ = ಹಟ್ಟಿ, ಹಕ್ಕೆ, ದನಕರುಗಳನ್ನು ಕಟ್ಟುವ ಜಾಗ.

ಕೊಟ್ಟೆ = ಪೊಟ್ಟಣ ೨. ಏಡಿ/ಮೀನು ಗಳನ್ನು ಹಿಡಿದು ಹಾಕಿಕೊಳ್ಳಲು ಬಳಸುವ ಅಡಿಕೆ ಹಾಳೆಯ ಚೀಲ, ೩. ಸೀಗೆಪುಡಿ/ಅಂಟುವಾಳಪುಡಿ ಗಳನ್ನು ಹಾಕಿಡುವ ಅಡಿಕೆ ಹಾಳೆಯ ಚೀಲ ೪ ಗಿಡ ಮರಗಳ ಮೇಲಿರುವ ಇರುವೆಯ ಗೂಡು.

ಕೊಟ್ಟೆ ಕಟ್ಟುವುದು = ಅಡಿಕೆಗೆ ಕೊಳೆರೋಗ ಬರದಂತೆ ಅಡಿಕೆಹಾಳೆಯನ್ನು ಕಟ್ಟುವ ಕ್ರಮ.

ಕೊಟ್ಟೆಕಡುಬು = ಅಕ್ಕಿಯೊಂದಿಗೆ ಹಲಸಿನ ಹಣ್ಣನ್ನು ಬೆರೆಸಿ ಮಾಡಿದ ಸಿಹಿ ತಿಂಡಿ.

ಕೊಟ್ಟೆಕಡ್ಡಿ = ಕೊಟ್ಟೆ ಮಾಡಲು ಉಪಯೋಗಿಸುವ ಅಡಿಕೆ ಮರದ ಕಡ್ಡಿಗಳು.

ಕೊಟ್ಟೆಮಣೆ = ಹುಣಿಸೆಮರದ ಬೇರಿನಿಂದ ಮಾಡಿದ ಒಂದು ಗಟ್ಟಿ ಮಣೆಗೆ ಮಧ್ಯದಲ್ಲಿ ಹಗ್ಗ ಹಾಕಿ ಕಟ್ಟಿ ಅದರ ಮೇಲೆ ಆ ಕಡೆ ಈ ಕಡೆ ಒಂದೊಂದು ಕಾಲು ಹಾಕಿ ಕುಳಿತುಕೊಂಡು ಮರದಿಂದ ಮರಕ್ಕೆ ಜಿಗಿಯುತ್ತ ಅಡಿಕೆ ಕೊನೆ ತೆಗೆಯುವ ಮಣೆ.

ಕೊಟ್ಟೇಹಿಟ್ಟು = ಕೊಟ್ಟೆ ಕಡುಬು.

ಕೊಡ = ೧.ಮಣ್ಣಿನ ಗಡಿಗೆ, ಕುಂಭ ೨.ಕೊಡುವುದಿಲ್ಲ.

ಕೊಡಪಾನ = ತಾಮ್ರ/ಹಿತ್ತಾಳೆಯ ನೀರು ತುಂಬುವ ಬಿಂದಿಗೆ.

ಕೊಡಲ್ಲ = ಕೊಡುವುದಿಲ್ಲ, ನಿರಾಕರಿ–ಸುವುದು.

ಕೊಡಕು = ಒದರು, ಜಾಡಿಸು, ಅಲ್ಲಾಡಿಸು.
ಕೊಡಲಿ = ಮಚ್ಚು, ಪರಶು, ಮರವನ್ನು ಕಡಿಯಲು ಬಳಸುವ ಸಾಧನ.
ಕೊಡು = ನೀಡು, ಈಯು.
ಕೊಡುಕು = ಕೊಡಕು, ಕೊಡ್ಕು.
ಕೊಡುಕೊಳು = ಕೊಟ್ಟು ತರುವ ವ್ಯವಹಾರ.
ಕೊಡುಗೈ = ಕೊಡುವ ಕೈ, ದಾನ ಮಾಡುವ ಕೈ.
ಕೊಡುವಳಿ = ಇನ್ನೊಂದು ಮನೆತನಕ್ಕೆ ಹೆಣ್ಣು ಕೊಡುವುದು.
ಕೊಡೆ = ಛತ್ರಿ
ಕೊಡೆ ಅಮಾಸೆ = ಭೀಮನ ಅಮಾವಾಸ್ಯೆ.
ಕೊಡೆಸೂಡು = ಛತ್ರಿಯನ್ನು ಬಿಚ್ಚಿ ಹಿಡಿಯುವುದು.
ಕೊತಕೊತ = ಕುದಿಯುವುದು.
ಕೊತವಾಲ = ಕೋಟೆಯ ಕಾವಲುಗಾರ.
ಕೊತ್ತಳಿಗೆ = ತೆಂಗು/ಅಡಕೆ ಸೋಗೆಯ ದಿಂಡು, ಗುದ್ಮ, ಕೊನೆಮಟ್ಟೆ.
ಕೊತ್ತುಂಬ್ರಿ = ಕೊತ್ತುಂಬರಿ, ದನಿಯಾ, ಸಾಂಬಾರ ಪದಾರ್ಥ.
ಕೊನೆ ಮಟ್ಟೆ = ತೆಂಗು/ಅಡಿಕೆ ಕಾಯಿ ಉದುರಿದ ಮೇಲೆ ಉಳಿಯುವ ಗೊನೆ.
ಕೊನೆ = ೧.ಗೊನೆ, ಅಡಿಕೆ/ ತೆಂಗು/ ಬಾಳೆಯ ಫಲಭರಿತ ಭಾಗ ೨.ತುದಿ, ೩.ಮುಕ್ತಾಯ.
ಕೊನೆಗಾಣ್ಸು = ೧.ಮುಗಿಸು, ತೀರಿಸು, ೨.ಕೊಲ್ಲು ೩.ಹಿಡಿದ ಕೆಲಸವನ್ನು ಮುಗಿಸು, ಜವಾಬ್ದಾರಿಯನ್ನು ನಿರ್ವಹಿಸು.
ಕೊನೆಗಾರ = ಅಡಿಕೆ ಕೊನೆ ತೆಗೆಯುವವನು.
ಕೊನೆಗೊಳ್ಳು = ಅಂತ್ಯವಾಗು, ಮುಗಿ.
ಕೊನೆಯುಸಿರು = ಜೀವನದ ಕೊನೆಯ ಶ್ವಾಸ.
ಕೊನ್ನೇಣು = ಅಡಿಕೆಕೊನೆ ತೆಗೆಯಲು ಉಪಯೋಗಿಸುವ ದಪ್ಪನೇಣು (ಒಂದು ನೇಣು = ಸುಮಾರು ೮೦ ಅಡಿ) ಬಲವಾದ ಹಗ್ಗ.
ಕೊಪ್ಪ = ಚಿಕ್ಕೂರು, ಹಳ್ಳಿ.
ಕೊಪ್ಪರಿಗಿ = ಕಬ್ಬಿನ ಹಾಲು ಕುದಿಸಿ ಬೆಲ್ಲ ತಯಾರಿಸುವ ಅಗಲಬಾಯಿಯ ಲೋಹದ ಪಾತ್ರೆ, ಕಡಾಯಿ.
ಕೊಪ್ಪರಿಗಿ ಒಲೆ = ಕೊಪ್ಪರಗಿಯನ್ನಿಡುವ ದೊಡ್ಡ ಒಲೆ.
ಕೊಪ್ಪೆ = ಮಳೆಯಿಂದ ರಕ್ಷಣೆ ಪಡೆಯಲು ಕಂಬಳಿಯನ್ನು ಮಡಿಸಿ ಬಿಚ್ಚಿ ಹೋಗದಂತೆ ಮಾಡುವುದು, ವಿಶಿಷ್ಟ ರೀತಿಯಲ್ಲಿ ಮಡಿಸಿದ ಕಂಬಳಿ.
ಕೊಪ್ಪೆಸೂಡು = ಕಂಬಳಿಕಡ್ಡಿಯನ್ನು ಮಡಿಸಿದ ಕಂಬಳಿಗೆ ಚುಚ್ಚಿ ಕೊಪ್ಪೆ ಮಾಡಿಟ್ಟುಕೊಳ್ಳುವುದು, ಮಳೆ ಬಂದಾಗ ಕಂಬಳಿ ಕೊಪ್ಪೆಯನ್ನು ತಲೆಗೆ ಹಾಕಿಕೊಳ್ಳುವುದು.
ಕೊಬ್ರಿ = ಒಣಗಿದ ತೆಂಗಿನಕಾಯಿ.
ಕೊಬ್ರಿ ಬೆಲ್ಲ = ಕೊಬ್ಬರಿ ಮತ್ತು ಬೆಲ್ಲವನ್ನು ಸೇರಿಸಿ ತಿನ್ನಲು ಉಪಯೋಗಿಸುವುದು.

ಕೊಯ್ಗತ್ತಿ = ಭತ್ತದ ಕೊಯ್ಲು ಮಾಡಲು ಬಳಸುವ ಹಲ್ಲಿರುವ ಕತ್ತಿ, ಹಲ್ಗತ್ತಿ ೨. ಉದ್ದಗಳದ ತುದಿಗೆ ಸಿಕ್ಕಿಸಿರುವ ಕತ್ತಿ.

ಕೊಯ್ಯು = ಕುಯ್ಯು, ಕತ್ತರಿಸು, ಸೀಳು, ಹೋಳುಮಾಡು, ಗಿಡದಿಂದ ಕೀಳು.

ಕೊಯ್ಸು = ಕೀಳಿಸು, ಕತ್ತರಿಸು.

ಕೊಯ್ಲು = ಬೆಳೆಯುನ್ನು ಕಟಾವು ಮಾಡುವುದು.

ಕೊರಕಟ್ಟೆ = ಸದಾ ಕಿರಿಕಿರಿ ಮಾಡುವುದು, ರೇಗುವುದು, ಅಳುವುದು.

ಕೊರಕ್ಲು = ನೀರು ಹರಿದು ಕೊರೆದು ಹೋದ ಭೂಮಿ, ತಗ್ಗು ಭೂಮಿ.

ಕೊರಗು = ಕಳವಳ, ವ್ಯಥೆ, ಚಿಂತೆ, ೨. ಪರಿತಪಿಸು, ಕಳವಳಪಡು.

ಕೊರಗುಡಿ =ಹೇಳಿದ್ದೆ ಹೇಳುತ್ತಾ ರೇಗಿಸು.

ಕೊರಗಿಸು = ದುಃಖ ಪಡುವಂತೆ ಮಾಡು.

ಕೊರಡು = ಒಣಗಿದ ಮರ, ೨. ಗಂಧದ ತುಂಡು ೨. ಬೇಸಿಗೆಯಲ್ಲಿ ಗದ್ದೆಯಲ್ಲಿ ಮಣ್ಣು ಪುಡಿಮಾಡಲು ಬಳಸುವ ಮರದ ಸಾಧನ.

ಕೊರಡು = ನಿರ್ಜೀವ, ಶವ.

ಕೊರವಂಜಿ = ಕಣಿ ಹೇಳುವವಳು, ಕೊರವಿ.

ಕೊರಳು = ಕತ್ತು, ಕುತ್ತಿಗೆ ೨. ಧ್ವನಿ, ಕಂಠ.

ಕೊರಟಿ ತುಂಡು = ಕೊಚ್ಚುಗೊಲ್ಲಿ.

ಕೊರಾಜಿ = ಸುಳ್ಳನ್ನು ಸತ್ಯವೆಂದು ನಿರೂಪಿಸುವವನು.

ಕೊರ್ಲು = ದೊಡ್ಡಮುಳ್ಳು ೨. ಕತ್ತರಿಸಿ ಒಣಗಿದ ಗಿಡಗಳ ಕಾಂಡ.

ಕೊರ್ರು = ಕೊರವರು ಎಂಬ ಜಾತಿ.

ಕೊರ್ಳುಪಟ್ಟಿ = ಕತ್ತಿಗೆ ಹೊಂದಿಕೊಳ್ಳುವ ಅಂಗಿಯ ಭಾಗ, ೨. ಪ್ರಾಣಿಗಳ ಕತ್ತಿಗೆ ತೊಡಿಸುವ ತೊಗಲಿನ ಪಟ್ಟಿ.

ಕೊರೆ = ಅರ್ಧ, ಅಪೂರ್ಣ (ಕೊರೆ ಚೇಲ), ೨. ವಿಪರೀತ ಚಳಿ ೩. ಕಮ್ಮಿ, ಕೊರತೆ, ನ್ಯೂನತೆ ೪. ತೂತ ಮಾಡು ೫. ಬೇಜಾರು ಬರುವಂತೆ ಒಂದೇ ಸಮನೆ ಮಾತಾಡು. (ಅಲಂ).

ಕೊರೆಬೀಳು = ಕಡಿಮೆಯಾಗು, ಕೊರತೆಯಾಗು.

ಕೊಲ್ಲು = ಸಾಯಿಸು, ಜೀವತೆಗೆ.

ಕೊಲೆ = ವಧೆ, ಕೊಲ್ಲುವಿಕೆ ೨. ಹಿರಿಯರಿಗಿಡುವ ಎಡೆ ೩. ಸತ್ತ ಹಿರಿಯರು.

ಕೊಲೆಗಡುಕ = ಕೊಲೆ ಮಾಡುವವನು.

ಕೊಲೆಗಡುಕತನ = ಕೊಲೆ ಮಾಡುವಂತಹ ಬುದ್ಧಿ.

ಕೊಲೆಗಾರ = ಕೊಲೆಗಡುಕ.

ಕೊಲೆಗಿಂಡಿ = ಎಡೆಯಿಡುವಾಗ ನೀರಿಡುವ ಸಣ್ಣ ಕೌಳಿಗೆ/ ಲೋಟ.

ಕೊಲೆಗಿಡು = ಸತ್ತ ಹಿರಿಯರಿಗಾಗಿ ಎಡೆಯಿಡುವ ಕ್ರಮ, ಜಕ್ಕಣಿಗಿಡು.

ಕೊಲೆಗೂಡ್ಸು = ಹಿಂದೆ ಸತ್ತವರ ಪ್ರೇತದೊಂದಿಗೆ ಇತ್ತೀಚೆಗೆ ಸತ್ತವರನ್ನು ಸೇರಿಸಲು ಎಡೆಯಿಡುವುದು.

ಕೊಲೆಹಲಗೆ = ನಡುಮನೆಯಲ್ಲಿ ಹಣತೆ ದೀಪವಿಡುವ ಕಂಬದ ಹಲಗೆ.

ಕೊಲ್ಟಿ = ಏನನ್ನಾದರು ಕಡಿಯಲು / ಕೊಚ್ಚಲು ಉಪಯೋಗಿಸುವ ಮರದ ತುಂಡು.

ಕೊಲ್ಟಿ ತುಂಡು = ಕೊಚ್ಚುಗೊಲ್ಟಿ.

ಕೊಸರಾಡು = ಒದರಾಡು, ಹಿಡಿತದಿಂದ ತಪ್ಪಿಸಿಕೊಳ್ಳಲು ಪ್ರಯತ್ನಪಡು.

ಕೊಸರು = ಒದರು, ಜಗ್ಗು.

ಕೊಳ = ಸ್ನಾನ ಮಾಡುವ ಜಾಗ, ಬಾದಾಳ.

ಕೊಳಕು = ಕೊಳೆ, ಹೊಲಸು.

ಕೊಳಗ = ಎರಡೂವರೆ ಸೇರಿನ ಒಂದು ಅಳತೆ.

ಕೊಳಗೇರಿ = ಕೊಳಕಾಗಿರುವ ಕೇರಿ, ಕೊಳಕು ತುಂಬಿರುವ ಜನ ವಸತಿ ಪ್ರದೇಶ.

ಕೊಳಲು = ಬಿದಿರು ಕೊಳವೆಗೆ ತೂತ ಕೊರೆದು ರಾಗವಾಗಿ ಊದುವ ಸಾಧನ.

ಕೊಳವೆ = ಬಿದಿರು ಅಥವಾ ಕಬ್ಬಿಣದ ನಾಳ, ೨. ನಲ್ಲಿ.

ಕೊಳ್ಳ = ತಗ್ಗು ಪ್ರದೇಶ.

ಕೊಳ್ಳಿ = ಉರಿವ ಕಟ್ಟಿಗೆಯ ತುಂಡು.

ಕೊಳ್ಳಿಯಿಡು = ಸತ್ತವರಿಗೆ ಬೆಂಕಿಯಿಡು.

ಕೊಳೆ = ಕಸ, ಹೊಲಸು, ಗಲೀಜು, ಮಲಿನ.

ಕೊಳೆರೋಗ = ಹೆಚ್ಚಿನ ಮಳೆಯಿಂದಾಗಿ ಅಡಿಕೆ ಕೊಳೆಯುವ ರೋಗ.

ಕೊಳ್ಳೆ = ಸುಲಿಗೆ, ಲೂಟಿ, ಸೂರೆ.

ಕೊಳ್ಳೆಹೊಡಿ = ಸುಲಿಗೆಮಾಡು, ಲೂಟಿಮಾಡು.

ಕೊಳ್ಳು = ೧. ಕೊರಳು, ಕುತ್ತಿಗೆ ೨. ಸ್ವೀಕರಿಸು.

ಕೊಳ್ಳುಕುಯ್ಯು = ನಂಬಿಸಿ ಮೋಸಮಾಡು, ವಿಶ್ವಾಸಘಾತ ಮಾಡು. (ಅಲಂ)

ಕೋಗಿಲೆ = ಇಂಪಾಗಿ ಹಾಡುವ ಪಕ್ಷಿ, ಕಾಗೆಯ ಮರಿ, ೨. ಮಾವಿನ ಮಿಡಿಯ ಒಳಗಿರುವ ಬೀಜ, ಎಳೆಯ ಗೊರಟು.

ಕೋಗು = ಸಾಲು ಸಾಲುಗದ್ದೆ/ ತೋಟವಿರುವ ಜಾಗ.

ಕೋಚು = ಓರೆಕೋರೆಯಾದ, ಚಚ್ಚೌಕವಾಗಿರದೆ ಒಂದು ಕಡೆ ಉದ್ದವಾಗಿರುವುದು.

ಕೋಟಿ = ನೂರು ಲಕ್ಷ.

ಕೋಟಿಗಟ್ಲೆ = ಕೋಟಿಯ ಗುಣಾಕಾರ.

ಕೋಟು = ಮೇಲಂಗಿ, ದಪ್ಪನೆಯ ಉಡುಪು.

ಕೋಟೆ = ರಕ್ಷಣಾ ಗೋಡೆ

ಕೋಡಂಗಿ = ಹಾಸ್ಯಗಾರ, ಅವಿವೇಕಿ, ಮೂರ್ಖ.

ಕೋಡಿಂಗ = ಕೋಡಗ, ಮಂಗ, ಕಪಿ.

ಕೋಡಿ = ಕೆರೆಕಟ್ಟೆಯಿಂದ ನೀರು ಉಕ್ಕಿ ಹರಿದು ಹೋಗಲು ಮಾಡಿರುವ ಕಾಲುವೆ.

ಕೋಡು = ಕೊಂಬು, ೨. ಶಿಖರ ೩. ಹೆಮ್ಮೆ, ಅಭಿಮಾನ.

ಕೋಣ = ಎಮ್ಮೆ ಜಾತಿಯಲ್ಲಿ ಗಂಡು, ಮಹಿಷ ೨. ದಡ್ಡ, ಪೆದ್ದ.

ಕೋಣೆ = ಕೊಠಡಿ.

ಕೋತಿ = ಮಂಗ, ಕಪಿ.

ಕೋಪ = ಸಿಟ್ಟು, ಕ್ರೋಧ.

ಕೋಪಿಷ್ಠ = ಮುಂಗೋಪಿ.

ಕೋಮಟಿ = ವೈಶ್ಯ ವ್ಯಾಪಾರಿ ೨. ಲೋಭಿ, ಜಿಪುಣ. (ಅಲಂ)

ಕೋಮಟಿಗ = ಕೋಮಟಿ.

ಕೋಮಾನೆ = ಒಳವಸ್ತ್ರ, ಕಚ್ಚೆ.

ಕೋರೆ = ಓರೆ, ವಕ್ರತೆ, ಡೊಂಕು.

ಕೋರೇಸು = ಕೋರ‍್ರೈಸು, ಕಣ್ಣುಕುಕ್ಕು, ಹೊಳೆಯುವುದು.

ಕೋರ್ಟು = ನ್ಯಾಯಾಲಯ.

ಕೋರೂಟ = ಮದುಮಕ್ಕಳಿಗೆ ಬಂಧುಗಳು ಹಾಕುವ ಸಿಹಿಂಯುೂಟ, ಹೊಸಲೂಟ.

ಕೋಲ = ಭೂತವೇಷದ ಕುಣಿತ.

ಕೋಲಾಟ = ಕೋಲು ಹಿಡಿದು ಹಾಡಿ ಕುಣಿಯುವ ಆಟ.

ಕೋಲು = ದೊಣ್ಣೆ, ಬಡಿಗೆ.

ಕೋಲ್ಜೇನು = ಗಿಡ, ಬೇಲಿ, ಪೊದೆಯಲ್ಲಿರುವ ಸಣ್ಣ ಜಾತಿಯ ಜೇನು.

ಕೋಲ್ಮಿಂಚು = ಕೋಲಿನಂತೆ ಹೊಳೆಯುವ ಮಿಂಚು.

ಕೋಲುಮುಖ = ಉದ್ದನೆಯ ಮುಖ.

ಕೋವಿ = ಬಂದೂಕು, ತುಪಾಕಿ.

ಕೋವಿ ಕಟ್ಟುದು = ಪ್ರಾಣಿಗಳು ಬರುವ ದಾರಿಗೆ ಕೋವಿಯನ್ನು ಕಟ್ಟಿ ಶಿಕಾರಿ ಮಾಡುವ ಒಂದು ವಿಧಾನ.

ಕೋವಿಚೀಲ = ಮದ್ದು ಗುಂಡುಗಳನ್ನು ತುಂಬಿಸಿ ತಂಡಿಯಾಗದಂತೆ ಒಲೆಸರ ನೇತುಹಾಕುವ ಚರ್ಮದ ಚೀಲ.

ಕೋವಿಪಾಲು = ಶಿಕಾರಿಯಾದಾಗ ಪ್ರಾಣಿ ಹೊಡೆದ ಕೋವಿಯುವರಿಗೆ ಕೊಡುವ ಮಾಂಸದ ಪಾಲು.

ಕೋವೆರೋಗ = ಸ್ಕರ್ವಿ, ಚಿಕ್ಕಮಕ್ಕಳಿಗೆ ಕೈಕಾಲು ಸಣ್ಣಗಾಗಿ ಹೊಟ್ಟೆ ಉಬ್ಬರಿಸುವುದು.

ಕೋಶ = ಅಮರಕೋಶವೆಂಬ ಪುಸ್ತಕದ ಓದು, ೨. ಕಣಜ, ಉಗ್ರಾಣ.

ಕೋಸು = ಎಲೆಕೋಸು, ಒಂದು ತರಕಾರಿ.

ಕೋಸುಗಡ್ಡೆ = ಗಡ್ಡೆಕೋಸು, ಒಂದು ತರಕಾರಿ.

ಕೋಳ = ಕೈ/ಕಾಲಿಗೆ ತೊಡಿಸುವ ಬೇಡಿ.

ಕೋಳಿ = ಸಾಕು ಪಕ್ಷಿ, ಒಂದು ಮಾಂಸಾಹಾರ.

ಕೋಳಿಅಂಕ = ಹುಂಜ/ಗಂಡು ಕೋಳಿಗಳ ಜಗಳ, ಕೋಳಿ ಪಂದ್ಯ.

ಕೋಳಿಅವರೆ = ತುದಿಯಲ್ಲಿ ಬಾಗಿರುವ ಅವರೆಕಾಯಿ.

ಕೋಳಿ ಕಣ್ಣು = ೧. ಕಣ್ಣಿನ ಒಂದು ಖಾಯಿಲೆ, ಕೋಳಿಗಳ ಕಣ್ಣಿಗೆ ಬರುವ ಕಾಯಿಲೆ ೨. ಮದ್ರಾಸು ಕಣ್ಣು.

ಕೋಳಿಕುಕ್ಕ = ಕೋಳಿಗಳನ್ನು ಕಚ್ಚುವ ಒಂದು ಜಾತಿಯ ಕೆಂಪು ಮಿಶ್ರಿತ ಕಪ್ಪು ಇರುವೆ.

ಕೋಳಿ ಕೂಗೋ ಹೊತ್ತು = ಬೆಳಗಿನ ಜಾವ, ಬೆಳಕುಹರಿಯುವ ಮೊದಲು.

ಕೋಳಿಗೊಬ್ರ = ಕೋಳಿ ಹೇಲಿನ ಜೊತೆ, ಬೂದಿ, ಕಸ–ಕಡ್ಡಿಗಳನ್ನು ಸೇರಿಸಿ

ಮಾಡಿದ ಗೊಬ್ಬರ.

ಕೋಳಿಜುಟ್ಟು = ಒಂದು ಬಗೆಯ ಬಣ್ಣ ಬಣ್ಣದ ಹೂವು.

ಕೋಳಿನಿದ್ದೆ = ಕಿರುನಿದ್ದೆ, ಒಂದುಗಳಿಗೆಯ ನಿದ್ರೆ.

ಕೋಳಿಯೊಡ್ಡಿ = ಕೋಳಿಗಳನ್ನು ಕೂಡಿ ಹಾಕುವ ಗೂಡು.

ಕೌಂಚು = ಬೋರಲಾಗಿಡು, ಮುಚ್ಚು (ಕೋಳಿಕೌಂಚು),

ಕೌಂಚಿಡು = ಕೌಂಚು, ಬೋರಲಾಗಿಡು.

ಕೌಂಟು = ಗವುಟು, ಪಾತ್ರೆಗೆ ಅಂಟಿಕೊಂಡಿರುವ ಎಣ್ಣೆಯ ಜಿಡ್ಡು.

ಕೌಚು = ಕೌಂಚು, ಬೋರಲಾಗು.

ಕೌಜುಗನ ಹಕ್ಕಿ = ಸಣ್ಣ ಹಕ್ಕಿ.

ಕೌಟಿಕಾಯಿ = ಹಿಂಡ್ಲೆಕಾಯಿ.

ಕೌಡ್‌ಬಳಿ = ಒಕ್ಕಲಿಗರ ಒಂದು ಕುಲದ ಹೆಸರು, ಕೌಡ್ಜಿಬಳಿ.

ಕೌದಿ = ತುಂಡು ಬಟ್ಟೆಗಳನ್ನು ಸೇರಿಸಿ ಹೊಲಿದ ಹೊದಿಕೆ.

ಕೌಲ್ನಾರು = ಕೌಲು ಮರದ ತೊಗಟೆಯನ್ನು ನೀರಿನಲ್ಲಿ ನೆನೆಹಾಕಿ ತೆಗೆದು ಮರದ ಸುತ್ತಿಗೆಯಿಂದ ಬಡಿದು ಒಣಗಿಸಿ, ಒಂದು ಕಡೆ ಕಾಲಿನಲ್ಲಿ ಹಿಡಿದುಕೊಂಡು ಇನ್ನೊಂದು ಕಡೆಯಿಂದ ಚಿಕ್ಕದಾರದ ಎಳೆಯಂತಹ ನಾರನ್ನು ತೆಗೆದು ಒಣಗಿಸಿ ಕೃಷಿ ಕೆಲಸಗಳಿಗೆ ಬೇಕಾಗುವ ಹಗ್ಗ ಇತ್ಯಾದಿಗಳನ್ನು ಮಾಡುವ ನಾರು/ದಾರ.

ಕೌಲು = ಒಪ್ಪಂದ, ಕರಾರು, ೨. ಮಾಸಲು ಕೆಂಪು ಬಣ್ಣ.

ಕೌಲುಮರ = ದಪ್ಪ ತೊಗಟೆಯ ಸಾಧಾರಣ ಎತ್ತರದ ಕಾಡುಮರ.

ಕೌಲಿ = ಕಪಿಲೆ, ಕಪ್ಪು ಮಿಶ್ರಿತ ಕಂದು ಬಣ್ಣದ ಹಸು.

ಕೌಲೆತ್ತು = ಕಂದು ಬಣ್ಣದ ಎತ್ತು.

ಕೌಲೆ ಬಸವ = ಮನರಂಜನೆಗೆಂದು ಆಡಿಸಿದಂತೆ ಆಡುವ ಎತ್ತು.

ಕೌಳಿಕಾಯಿ = ಕಾಯಿ ಹುಳಿ ಹಣ್ಣು ಸಿಹಿ ಮೇಣವಿರುವ ಕಾಡಿನ ಹಣ್ಣು.

ಕೌಳ್ಗಿ = ನೀರು ತುಂಬುವ ಕಡಾಯ, ಸಣ್ಣಗೆ ಉದ್ದವಿರುವ ಪಾತ್ರೆ ಮಿಳ್ಳೆ.

ಕೌಳಿಗಿ = ಕವಳಿಗೆ, ವೀಳ್ಯದೆಲೆ/ ಬಾಳೆಯೆಲೆಯ ಇಪ್ಪತ್ತು/ ಐವತ್ತರ ಕಟ್ಟು.

ಕ್ಯಪಟ = ಕೆಪಟ, ಕಪೋಲದಲ್ಲಿ ಏಳುವ ಬಾವು.

ಕ್ಯಪಟ್ರಾಯ = ಕ್ಯಪಟ.

ಕ್ಯಪ್ಪ = ಕೆಪ್ಪ, ಕಿವುಡ.

ಕ್ಯರ = ಚರ್ಮದ ಚಪ್ಪಲಿ.

ಕ್ಯಳೊಟ್ಟೆ = ಹೊಟ್ಟೆಯ ಕೆಳಭಾಗ, ಕಿಬ್ಬೊಟ್ಟೆ

ಕ್ಯಾಕರಿಕೆ = ಗಂಟಲಿನಲ್ಲಾಗುವ ಕಿರಿಕಿರಿ.

ಕ್ಯಾಕರಿಸು = ಕ್ಯಾ ಎಂದು ಗಂಟಲು ಸರಿಮಾಡಿಕೊಳ್ಳುವುದು, ಸಶಬ್ಧವಾಗಿ ಉಗುಳುವುದು.

ಕ್ಯಾದಿಗೆ = ಮುಂಡುಗನ ಜಾತಿಗೆ ಸೇರಿದ ಹೂ, ಕೇಶ ಶೃಂಗಾರದ ಚಿನ್ನದ ಹೂ.

ಕ್ಯಾವಿಗೆ = ಕೇದಿಗೆ, ಪರಿಮಳದ ಎಲೆಯಂತಿರುವ ಹೂ.

ಕ್ಯಾರೆಹಾವು = ಕೆರೆಹಾವು, ಕಚ್ಚದಿರುವ ಹಾವು.

ಕ್ರಮ = ಪದ್ಧತಿ, ನಿಯಮ, ಕಾರ್ಯ ವಿಧಾನ.

ಕ್ರಮಬದ್ಧ = ನಿಯಮಕ್ಕೆ ಒಳಪಟ್ಟ, ವಿಧಿವತ್ತಾದ.

ಕ್ರಮೇಣ = ಕ್ರಮವಾಗಿ, ಹಂತಹಂತವಾಗಿ.

ಕ್ರಯ = ಬೆಲೆ, ಕಿಮ್ಮತ್ತು.

ಕ್ರಯಪತ್ರ = ಬೆಲೆಕೊಟ್ಟು ಕೊಂಡುಕೊಂಡಾಗ ಬರೆಸಿ ಕೊಂಡ ಕಾಗದ.

ಕ್ರಿಮಿ = ಹುಳ, ಜಂತು.

ಕ್ರಿಯೆ = ಕೆಲಸ, ಕಾರ್ಯ, ಕರ್ಮ.

ಕ್ರೂರಿ = ದುಷ್ಟ, ನೀಚ.

ಕ್ವಡಪಾನ = ಕೊಡಪಾನ.

ಕ್ವಡೆ = ಕೊಡೆ, ಛತ್ರಿ.

ಕ್ವರುಕ್ಲು = ಕೊರಕಲು, ಹಳ್ಳ.

ಕ್ವಲ್ಡು = ಕೊರಡು.

ಕ್ವಳೆ = ಕೊಳೆ.

ಕ್ವಳೆರೋಗ = ಅಡಿಕೆ ಕಾಯಿಗಳು ಉದುರುವ ರೋಗ.

ಕ್ವಾ = ಕೋ, ತೆಗೆದುಕೋ.

ಕ್ವಾಡಿಂಗ = ಕೋಡಂಗಿ, ಮಂಗ.

ಕ್ವಾಣ = ಕೋಣ.

ಕ್ವಾಣೆ = ಕೋಣೆ.

ಕ್ವಾಮಟಿ = ಕೋಮಟಿಗ.

ಕ್ವಾಮಾನೆ = ಕೋಮಾನೆ, ಕಚ್ಚೆ.

ಕ್ವಾರೆ ಹಲ್ಲು = ಕೋರೆ ಹಲ್ಲು, ಮೇಲ್ದವಡೆಯ ಮಧ್ಯದ ನಾಲ್ಕು ಹಲ್ಲುಗಳ ಎರಡು ಪಕ್ಕಕ್ಕಿರುವ ಹಲ್ಲುಗಳು.

ಕ್ಷಮೆ = ಸಹನೆ, ಇತರರನ್ನು ಮನ್ನಿಸುವ ಗುಣ.

ಕ್ಷಯ = ನಾಶ, ಕುಗ್ಗು, ಹಾಳಾಗುವಿಕೆ.

ಕ್ಷಯರೋಗ = ಕ್ಷಯವನ್ನು ತರುವ ಒಂದು ರೋಗ.

ಕ್ಷಯಿಸು = ಸೊರಗು, ಕೃಶವಾಗು.

ಕ್ಷೀಣ = ಕುಗ್ಗಿದ, ಕೃಶವಾದ, ಸವೆದ.

ಕ್ಷುದ್ರ = ದರಿದ್ರ, ನೀಚ, ಅಲ್ಪ.

ಕ್ಷುದ್ರತನ = ಸಣ್ಣತನ, ಅಲ್ಪತೆ.

ಕ್ಷೇಮ = ನೆಮ್ಮದಿ, ಆರೋಗ್ಯ, ಸುಖ.

ಕ್ಷೇಮ ಸಮಾಚಾರ = ಆರೊಗ್ಯದ ವರ್ತಮಾನ.

ಖ

ಖಂಡ = ಮೂಳೆಯಿಲ್ಲದ ಮಾಂಸ.

ಖಂಡ ತುಂಡ = ನಿರ್ದಾಕ್ಷಿಣ್ಯವಾಗಿ, ಮುಲಾಜಿಲ್ಲದೆ.

ಖಂಡನೆ = ಇನ್ನೊಬ್ಬರ ಅಭಿಪ್ರಾಯವನ್ನು ತಪ್ಪೆಂದು ವಾದಿಸುವುದು.

ಖಂಡಾಪಟ್ಟೆ = ಬಾಯಿಗೆ ಬಂದಂತೆ, ಅಧಿಕ.

ಖಂಡಿತ = ಖಚಿತವಾದ, ಅನುಮಾನಕ್ಕೆಡೆಯಿಲ್ಲದ.

ಖಂಡಿತವಾದಿ = ಖಂಡ ತುಂಡಾಗಿ ಮಾತಾಡುವವನು.

ಖಂಡ್ಸು = ನಿಂದಿಸು, ವಿರೋಧವಾಗಿ ಮಾತಾಡು.

ಖಂಡು = ಒಂದು ಭಾಗ (ಭೂಮಿಯ/

ಜಮೀನಿನ ಒಂದು ಭಾಗ) ೨. ಬಾಳೆಯೆಲೆಯ ಕುಡಿಯಿಲ್ಲದ ಭಾಗ, ಕಂಡು.

ಖಂಡುಗ = ಒಂದು ನೂರು ಸೇರು, ಇಪ್ಪತ್ತು ಕೊಳಗ, ಧಾನ್ಯಗಳ ಒಂದು ಅಳತೆ.

ಖಚಿತ =ಖಂಡಿತ, ನಿಶ್ಚಿತವಾದ.

ಖಚಿತಪಡಿಸು = ಧೃಢಪಡಿಸು, ನಿಶ್ಚಿತ ಪಡಿಸು.

ಖಜಾನೆ = ತಿಜೋರಿ, ಬೊಕ್ಕಸ.

ಖಟಬಾಕಿ = ಹಿಂದಕ್ಕೆ ಬರದೆಯಿರುವ ಸಾಲ.

ಖಟ್ಲೆ = ವ್ಯಾಜ್ಯ, ದಾವಾ.

ಖಡ್ಗ = ಕರವಾಳ, ಕತ್ತಿ.

ಖಡಕ್ = ದೃಢ, ಗಟ್ಟಿ, ಗಾಢ.

ಖಡಾಖಂಡಿತ = ನಿರ್ಧಾರವಾಗಿ, ಅತಿಸ್ಪಷ್ಟ, ನಿಷ್ಟುರಮಾತು.

ಖನಿ = ಗಣಿ.

ಖಣ = ರವಿಕೆಬಟ್ಟೆ.

ಖದ್ದರ್ = ಖಾದಿ ಬಟ್ಟೆ.

ಖಬರು = ಅರಿವು, ಎಚ್ಚರಿಕೆ, ಪ್ರಜ್ಞೆ.

ಖಯಮ್ಮು = ಕಾಯಂ, ಯಾವಾಗಲೂ, ನಿರಂತರ, ಪ್ರತಿದಿನ.

ಖಯಾಲಿ = ಗೀಳು, ವಿಲಾಸಪ್ರಿಯತೆ, ರಸಿಕತೆ.

ಖರೀದಿ = ಬೆಲೆಕೊಟ್ಟು ಕೊಂಡು ಕೊಳ್ಳುವುದು.

ಖರೀದಿ ಪತ್ರ = ಕೊಂಡುಕೊಂಡಿದ್ದು ಖಾತ್ರಿಪಡಿಸುವ ಪತ್ರ, ಕ್ರಯಪತ್ರ

ಖರೀದಿಸು = ಕೊಳ್ಳು, ಕೊಂಡುಕೊಳ್ಳು.

ಖರ್ಚು = ವ್ಯಯ.

ಖರ್ಜೂರ = ತಾಳೆ ಜಾತಿಗೆ ಸೇರಿದ ಮರದ ಹಣ್ಣು.

ಖಾತರಿ = ನಿಶ್ಚಯ, ನಿರ್ಧಾರ.

ಖಾತಾದಾರ = ಭೂಮಿಯ ಮೇಲೆ ಅಧಿಕಾರವನ್ನು ಪಡೆದವನು.

ಖಾತೆ = ಜಮಾ ಖರ್ಚಿನ ಲೆಕ್ಕದ ಪುಸ್ತಕ.

ಖಾದ್ಯ = ಫಳಾದ್ಯ, ತಿನಿಸು.

ಖಾದಿ = ಖದ್ದರ್, ಅಪ್ಪಟ ಹತ್ತಿಯ ಬಟ್ಟೆ.

ಖಾಯಂಗುತ್ತಾ = ನಿಗದಿಯಾದ ಗೇಣಿ/ ಕಂದಾಯ.

ಖಾಯಾಸ್ಸು = ಬಯಕೆ, ಅಭಿಲಾಷೆ, ಖಾಯಿಷ್.

ಖಾಲಿ = ಬರಿದಾದುದು, ಹುರುಳಿಲ್ಲದ, ನಿರರ್ಥಕ.

ಖಾಸಗಿ = ೧.ಸರಕಾರದ ಅಧೀನಕ್ಕೆ ಸೇರದ ೨.ವೈಯುಕ್ತಿಕ, ಸ್ವಂತದ, ಸಾರ್ವಜನಿಕವಲ್ಲದ.

ಖಾಸಾ = ಸ್ವಂತ, ತನ್ನದೇ ಆದ.

ಖುದ್ದು = ಸ್ವಯಂ, ತಾನೇ.

ಖುಲಾಸೆ = ಬಿಡುಗಡೆ, ಮುಕ್ತಿ.

ಖುಷ್ಕಿ = ಒಣಬೇಸಾಯದ ಭೂಮಿ.

ಖುಸಿ = ಹಿಗ್ಗು, ಸಂತೋಷ, ಹಾಸ್ಯ.

ಖೂನಿ = ಕೊಲ್ಲುವಿಕೆ, ವಧೆ, ಕೊಲೆ.

ಖೆಡ್ಡ = ಆನೆಯನ್ನು ಹಿಡಿಯಲು ಮಾಡಿದ ಹೊಂಡ.

ಖೋಟಾ = ನಿಜವಲ್ಲದ, ಕೆಟ್ಟ, ಸಲ್ಲದ.

ಖೋತಾ = ಕಡಿತ, ಕಡಿಮೆಮಾಡು.

ಗ

ಗಂಗಳ = ಊಟದ ತಟ್ಟೆ, ತಣಿಗೆ.

ಗಂಗ್ರಬಳಿ = ಮಲೆನಾಡು ಒಕ್ಕಲಿಗರ

ಒಂದು ಸಮುದಾಯ/ಗೋತ್ರ.

ಗಂಗೆ = ಪವಿತ್ರ ನೀರು.

ಗಂಗೆದೊಗಲು = ಪ್ರಾಣಿಗಳ ಕೊರಳ ಕೆಳಗೆ ಇಳಿಬಿದ್ದಿರುವ ಚರ್ಮ.

ಗಂಗೆ ಮಾಗೆಯಾಡು = ನೀರನ್ನು ಪೂಜಿಸುವುದು.

ಗಂಜಳ = ಗೋಮೂತ್ರ.

ಗಂಜಿ = ಅಕ್ಕಿ ಬೇಯಿಸಿ ತೆಗೆದ ಸಾರ, ೨. ಹೆಚ್ಚು ನೀರು ಹಾಕಿ ಮೆತ್ತಗೆ ಬೇಯಿಸಿದ ಅಕ್ಕಿ, ೩. ಹತ್ತಿ ಬಟ್ಟೆ ಗರಿಯಾಗಲು ಬಳಸುವ ಮೈದಾಹಿಟ್ಟಿನ ತಿಳಿ ಳಿ ಎಳನೀರಿನೊಳಗಿರುವ ತೆಳು ಕಾಯಿ.

ಗಂಟಾಕು = ಎರಡು ವಸ್ತು (ದಾರ)ಗಳನ್ನು ಸೇರಿಸಿಕಟ್ಟು, ೨. ಕೂಡಿಸು ೩. ಮದುವೆ ಮಾಡು. (ಅಲಂ)

ಗಂಟಾಗು = ಸಿಕ್ಕಾಗು, ತೊಡಕಾಗು, ಉಡಿದುಕೋ.

ಗಂಟಿಕ್ಕು = ೧.ಮುಖ ಸಿಂಡರಿಸು, ಹುಬ್ಬುಗಂಟಿಕ್ಕು.

ಗಂಟು = ೧.ಎರಡು ವಸ್ತುಗಳನ್ನು ಸೇರಿಸಿ ಕಟ್ಟಿದ ಭಾಗ, ಕಬ್ಬು, ಬಿದಿರು ಮುಂತಾದವುಗಳ ಗೆಣ್ಣು ೨. ಹಣ, ನಿಧಿ, ಐಶ್ವರ್ಯ ೩. ಮೂಳೆಗಳ ಸಂದು, ಊತ, ಗೆಡ್ಡೆ.

ಗಂಟುಗಳ್ಳ = ಗಂಟು/ಹಣ ಲಪಟಾಯಿಸುವವನು, ಮೋಸಗಾರ.

ಗಂಟುಬಿಚ್ಚು = ಕೂಡಿಟ್ಟಹಣವನ್ನು ಹೊರತೆಗೆ.

ಗಂಟುಬೀಳು = ದುಂಬಾಲು ಬೀಳು ೨.ಗಂಟುಗಂಟಾದಂತಾಗು, ಬಿಡಿಸ-ಲಾಗದಂತಾಗು, ಅಂಟಿಕೊಳ್ಳು.

ಗಂಟುಮುಖ = ಬಿಗುವಾದ ಮುಖ, ಸಿಟ್ಟು/ಕೋಪಗೊಂಡ ಮುಖ.

ಗಂಟು ಮೂಟೆ ಕಟ್ಟು = ಊರುಬಿಡು, ಹೊರಡು.

ಗಂಟುಹಾಕು = ಶೇಖರಿಸು, ಕೂಡಿಡು.

ಗಂಟ್ಲು = ಕೊರಳು, ಕುತ್ತಿಗೆ, ಕಂಠ.

ಗಂಟ್ಲು ಕಟ್ಟಿಹೋಗು = ಮಾತು ನಿಂತುಹೋಗುವುದು, ಸಾವುಂಟಾಗು ಎಂಬ ಬೈಗುಳ. (ಅಲಂ).

ಗಂಟ್ಲು ದೊಡ್ಡ =ಜೋರಾಗಿ ಮಾತಾಡುವವರಿಗೆ ಹೇಳುವ ಮಾತು (ಅಲಂ).

ಗಂಟೆ = ಘಂಟೆ, ಲೋಲಕದಿಂದ ಬಾರಿಸಿದರೆ ಮೊಳಗುವ ಶಬ್ಧಬರುವ ಕಂಚಿನ ಸಾಧನ, ಅರವತ್ತು ನಿಮಿಷಗಳ ಅವಧಿ.

ಗಂಟೆಗಟ್ಲೆ = ಎಷ್ಟು ಗಂಟೆಯಾದರೂ ಸರಾಗವಾಗಿ, ಗಂಟೆಗಟ್ಟಲೆ.

ಗಂಟೆಸರ = ಎತ್ತುಗಳ ಕೊರಳಿಗೆ ಕಟ್ಟುವ ಸಣ್ಣಗಂಟೆಗಳ ಸರ, ಗಗ್ರದ ಸರ.

ಗಂಟೆ ಹೂ = ಗಂಟೆಯಾಕಾರದ ಹೂವು.

ಗಂಡ = ಗಂಡುತನವುಳ್ಳವನು, ಶೂರ, ಪತಿ.

ಗಂಡಮಾಲೆ = ಹುಟ್ಟುವಾಗ ಮಗುವಿನ ಕೊರಳಿಗೆ ಹೊಕ್ಕಳ ಬಳ್ಳಿ ಸುತ್ತಿ-ಕೊಂಡಿರುವಿಕೆ .

ಗಂಡಸು = ಪುರುಷ, ಶೂರ, ವೀರ.

ಗಂಡಸ್ತನ = ಪೌರುಷ, ಶೌರ್ಯ.

ಗಂಡಾಂತರ = ಹೆಚ್ಚಿನ ವಿಪತ್ತು, ತೊಂದರೆ, ಗಂಡಾಂತ್ರ, ಅತಿಯಾದ ಕಷ್ಟ, ಕಂಟಕ.

ಗಂಡ್‌ಗಂಟು = ಬಿಚ್ಚಲು ಸಾಧ್ಯವಾಗ ದಂತಹ ಗಟ್ಟಿಗಂಟು.

ಗಂಡಾಗುಂಡಿ = ದುಂಡಾವರ್ತಿ, ನೀಚತನ, ಬಲಾತ್ಕಾರ, ಆಪತ್ತು, ಕಂಟಕ.

ಗಂಡಾಳು = ಗಂಡುಕೂಲಿ ಆಳು, ಕೂಲಿ ಮಾಡುವ ಗಂಡಸು.

ಗಂಡ್‌ಗತ್ತಿ = ಇಬ್ಬಾಯ್ ಕತ್ತಿ, ಎರಡು ಮಗ್ಗುಲಲ್ಲೂ ಅಲಗು ಇರುವ ಕತ್ತಿ.

ಗಂಡಿ = ಕಂಡಿ, ಸಂದು, ರಂದ್ರ, ನುಸುಳಲು ಸಾಧ್ಯವಾಗುವಂತಹ ಜಾಗ.

ಗಂಡಿ ಅಡ್ಕು = ಜಾನುವಾರುಗಳ ಬೇಲಿಯ ಕಂಡಿಯನ್ನು ನುಗ್ಗದಂತೆ ಅಡ್ಡಕಟ್ಟುಹಾಕು ೨. ಕಂಡಿಯು ಮುಚ್ಚುವಂತೆ ಮುಳ್ಳಿನ ಗಿಡಗಂಟಿಗಳಿಂದ ಅಡಕುವುದು.

ಗಂಡು = ಪುರುಷ, ಗಂಡಸು, ಮದುವೆಯ ವರ.

ಗಂಡುತನ = ಗಂಡಸ್ತನ.

ಗಂಡುಬೀರಿ = ಗಂಡುತನವನ್ನು ತೋರುವವಳು, ಹೆಣ್ಣುತನವನ್ನು ಬಿಟ್ಟು ವ್ಯವಹರಿಸುವವಳು.

ಗಂಡುಬೀರ್ತನ = ಅತಿ ದಿಟ್ಟತನ, ಗಂಡುಬೀರಿ.

ಗಂಡೆದೆ = ಎದೆಗಾರಿಕೆ, ಧೈರ್ಯ ತೋರುವಿಕೆ.

ಗಂದೆ = ಚರ್ಮದ ಮೇಲೆ ಏಳುವ ಸಣ್ಣ ಸಣ್ಣ ಗುಳ್ಳೆ, ಪಿತ್ಥದ ದಂದೆ.

ಗಂಧ = ಶ್ರೀಗಂಧ, ಚಂದನ ೨. ಸುಳಿವು, ವಾಸನೆ ೩. ಗಂಧದ ಮರದಿಂದ ತೇಯ್ದ ಲೇಪ.

ಗಂಧದ ಕಲ್ಲು = ಗಂಧ ತೇಯುವ ಸಾಣೆ–ಕಲ್ಲು.

ಗಂಧಗರಿಗೆ = ಪೀಠೋಪಕರಣಕ್ಕೆ ಬಳಸುವ ಮರ, ಮನೆಯ ಮುಚ್ಚಿಗೆಗೆ ಬಳಸುತ್ತಾರೆ.

ಗಂಧಸಾಲೆ = ಪರಿಮಳದ ಬತ್ತ.

ಗಂಧತೇಯು = ಶ್ರೀಗಂಧದ ಕೊರಡನ್ನು ನೀರು ಹಾಕಿ ಉಜ್ಜಿ ಲೇಪವನ್ನು ಮಾಡು.

ಗಗನಾಂತ್ರ = ಭಾರಿ ಎತ್ತರ (ಎಂಥಾಮರ ಗಗನಾಂತ್ರ).

ಗಗ್ಗರದನಿ = ಒಡಕು ಧ್ವನಿ.

ಗಗ್ರ = ಎತ್ತಿನ ಕೊರಳಿಗೆ ಕಟ್ಟುವ ಸಣ್ಣ ಗಂಟೆಗಳು.

ಗಗದ್ರ ಸರ = ಗಗ್ರವನ್ನು ದಪ್ಪ ಕಪ್ಪುದಾರಕ್ಕೆ ಪೋಣಿಸಿದ ಸರ.

ಗಚ್ಚು = ನೆಲ, ಗೋಡೆಗಳಿಗೆ ಹಾಕುವ ಲೇಪ, ೨. ಗಟ್ಟಿ ಪದಾರ್ಥವನ್ನ ಕುಟ್ಟಿದಾಗ ಬೀಳುವ ಗುರುತು.

ಗಜ = ಒಂದು ಅಳತೆ, ಮೂರಡಿ ಉದ್ದ ೨. ಪೆಟ್ಟು ಹೊಡೆಯಲು ಉಪ ಯೋಗಿಸುವ ಒಂದು ಕಡ್ಡಿ.

ಗಜಕಡ್ಡಿ = ಅಳತೆಗಾಗಿ ಮಾಡಿದ ಒಂದು ಗಜದ ಕೋಲು, ಮೂರಡಿಯ ಕೋಲು.

ಗಜನಿಂಬೆ = ದೊಡ್ಡ ನಿಂಬೆಕಾಯಿ.

ಗಜಿಬಿಜಿ = ಗೊಂದಲ, ಅವ್ಯವಸ್ಥೆ, ಗಡಿಬಿಡಿ.

ಗಜ್ಜುಗ = ಔಷಧೀಯ ಬೀಜ ೨. ಆಟವಾಡಲು ಬಳಸುವ ಬೀಜ, ಒಂದು ಬಳ್ಳಿಯ ಕಾಯಿ.

ಗಟವಾಣಿ = ಗಟ್ಟಿಗಿತ್ತಿ, ಧೈರ್ಯವಂತೆ, ಬಜಾರಿ, ಜಗಳಗಂಟಿ. ಬಾಯ್ಬಡುಕಿ.

ಗಟ್ಟ = ಘಟ್ಟ, ಪರ್ವತ, ಬೆಟ್ಟ ೨. ಹಂತ.

ಗಟ್ಟಿಕುಳ = ಹಣವಂತ, ಶ್ರೀಮಂತ ಕುಲ, ಹುಟ್ಟಿನಿಂದಲೇ ಸಿರಿವಂತರು.

ಗಟ್ಟಿಗ = ಶೂರ, ಸಮರ್ಥ, ಚತುರ, ಅನುಭವಸ್ಥ, ನಿಪುಣ.

ಗಟ್ಟಿಗತನ = ಶೂರತನ, ಎದೆಗಾರಿಕೆ.

ಗಟ್ಟಿಗಿತ್ತಿ = ಗಟವಾಣಿ, ಶೂರೆ, ಶಕ್ತೆ.

ಗಟ್ಟಿಬರುವುದು = ಬಾಳಿಕೆ ಬರುವುದು, ತಡೆತ ಬರುವುದು.

ಗಟ್ಟಿಮಾಡು = ೧.ಕಂಠಪಾಟ ಮಾಡು, ಭದ್ರಗೊಳಿಸು ೨. ನಿಶ್ಚಯ ಮಾಡು.

ಗಟ್ರತೇಗು = ಸಶಬ್ಧವಾಗಿ ತೇಗುವುದು.

ಗಡಗಡ = ಚಳಿಯಿಂದ ನಡುಗುವಿಕೆ (ಅಲಂ) ಭೂಮಿ ನಡುಗುವಿಕೆ (ಅಲಂ).

ಗಡಗಡೆ = ಬಾವಿಯಿಂದ ನೀರು ಸೇಯುವ ಮರದ ರಾಟೆ, ತಿರುಗಣೆ.

ಗಡಗಿ = ಮಡಕೆ, ಮಣ್ಣಿನ ಪಾತ್ರೆ, ಮಣ್ಣಿನ ಕೊಡ.

ಗಡಗುಟ್ಟು = ಗಡಗಡ ನಡುಗು, ಹೆದರು.

ಗಡಚಿಕ್ಕು = ಕಿವಿಗೆ ಕರ್ಕಶವಾಗಿ ಕೇಳು.

ಗಡಬಡ = ಅವಸರ, ಆತುರ, ಗದ್ದಲ.

ಗಡಬಡಿಸು = ಅವಸರವಾಡು, ಗದ್ದಲಮಾಡು.

ಗಡವ = ಕೊಬ್ಬಿದ, ಕಟ್ಟುಮಸ್ತಾದ.

ಗಡಾರಿ = ದೊಡ್ಡ ಸಬ್ಬಲ್ಲು, ಹಾರೆ.

ಗಡಿ = ಎಲ್ಲೆ, ಮಿತಿ, ಮೇರೆ, ಸೀಮೆ.

ಗಡಿಕಲ್ಲು = ಸೀಮೆಯನ್ನು ಗುರುತಿಸಲು ಹಾಕಿರುವ ಗುರುತಿನ ಕಲ್ಲು.

ಗಡಿಗಿ = ಗಡಗಿ, ಮಡಕೆ, ಮಣ್ಣಿನ ಪಾತ್ರೆ

ಗಡಿಬಿಡಿ = ಅವಸರ, ಆತುರ, ತ್ವರೆ, ಗೊಂದಲ.

ಗಡಿಯಾರ = ಸಮಯವನ್ನು ತಿಳಿಸುವ ಯಂತ್ರ

ಗಡೀಮಿತಿ = ಎಲ್ಲೆ, ಇತಿಮಿತಿ, ಪುರುಸೊತ್ತು.

ಗಡು = ಗಡುವು, ವಾಯಿದೆ, ಅವಧಿ, ೨. ಹೊಳೆದಾಟುವ ಸ್ಥಳ, ಹೊಳೇಕಂಡಿ.

ಗಡುವಿಲ್ಲ = ಲೆಕ್ಕವಿಲ್ಲ.

ಗಡುಸು = ಬಿರುಸು, ಒರಟು, ಗಟ್ಟಿ

ಗಡ್ಡ = ದಾಡಿ, ಗದ್ದದ ಮೇಲಿನ ಕೂದಲು.

ಗಡ್ಗಿ = ಗಡಗಿ, ಮಡಕೆ.

ಗಡ್ದು = ಗಮ್ಮತ್ತು, ವಿಶೇಷವಾಗಿ, ಹೊಟ್ಟೆತುಂಬ, ತೃಪ್ತಿಕರವಾಗಿ, ಭರ್ಜರಿ.

ಗಡ್ದುನಿದ್ರೆ = ಗಾಢನಿದ್ದೆ, ಸಂಪೂರ್ಣನಿದ್ದೆ.

ಗಡ್ಗುಡಿತ = ಗಡಗಡನೆ, ತರತರನೆ ನಡುಗು.

ಗಡ್ಡೆ = ದುಂಡಗಿರುವ ಬೇರು, ಕಂದ, ಗಂಟು ೨. ನಡುಗಡ್ಡೆ ೩. ಶರೀರದಲ್ಲಿ ಬೆಳೆಯುವ ಗ್ರಂಥಿ.

ಗಡ್ಡೆಗಟ್ಟು = ಗಟ್ಟಿಯಾಗು, ಹೆಪ್ಪುಗಟ್ಟು.

ಗಣಪೆಕಾಯಿ = ಒಂದು ಔಷಧೀಯ ಕಾಯಿ. ಬಳ್ಳಿಯಲ್ಲಿ ಬಿಡುತ್ತದೆ.

ಗಣಬರು = ದೇವರು ಮೈಮೇಲೆ ಬರು, ಆವೇಶಕ್ಕೊಳಗಾಗು.

ಗಣಮಗ = ಗಣಬರಿಸಿಕೊಳ್ಳುವ ವ್ಯಕ್ತಿ.

ಗಣಲೆ = ತೊಡೆ ಅಥವಾ ತೋಳಿನ ಸಂಧಿ ಏಳುವ ನೋವಿನ ಗಡ್ಡೆ, ಉಡುಚು.

ಗಣಿಕೆ = ಗಂಟು, ಗುಣಿಕೆ, ಕುಣಿಕೆ.

ಗಣ್ಸು = ಗಂಡಸು, ಪುರುಷ.

ಗಣೆ = ಬಟ್ಟೆ ನೇತುಹಾಕಲು ಬಳಸುವ ಬಿದಿರಿನ ಗಳ.

ಗಣೇಶನ ಹಬ್ಬ = ಪಾಯಸ, ಶಾವಿಗೆ, ಕಾಯಿಹಾಲು ಮಾಡಿ ಎಡೆಯಿಡುವ ಹಬ್ಬ.

ಗತಕಾಲ = ಹಿಂದಿನ ಕಾಲ, ಕಳೆದಕಾಲ.

ಗತಿ = ಸ್ಥಿತಿ, ಅವಸ್ಥೆ.

ಗತಿಕಾಣ್ಸು = ಬುದ್ಧಿಕಲಿಸು, ಸರಿದಾರಿಗೆ ತರು, ಹಿಡಿತಕ್ಕೆ ತರು, ಉತ್ತರ ಕ್ರಿಯೆ ಮಾಡು (ನಿಂಗೊಂದು ಗತಿ ಕಾಣ್ಸದಿದ್ರೆ ನೋಡು).

ಗತಿಗೆಡು = ಹಾಳಾಗು, ಸ್ಥಿತಿಗೆಡು.

ಗತ್ತು = ಠೀವಿ, ದರ್ಪ, ವೈಕರಿ, ಗಾಂಭೀರ್ಯ.

ಗತ್ತುಗಾರ್‍ಕಿ = ಗತ್ತು ಮಾಡುವುದು, ಅಹಂಕಾರ ಪಡುವುದು.

ಗತ್ಯಂತ್ರವಿಲ್ಲ = ಅನ್ಯಮಾರ್ಗವಿಲ್ಲ, ಬೇರೆ ಉಪಾಯವಿಲ್ಲ.

ಗದಗುಟ್ಟು = ಗಡಗಡನಡುಗು, ಕಂಪಿಸು, ಹೆದರು.

ಗದರು = ಗದರಿಸು, ಬೆದರಿಸು.

ಗದುರ್‍ಸು = ಗದರು.

ಗದ್ದೆ = ತರಿ ಜಮೀನು, ಬತ್ತ ಬೆಳೆಯುವ ಭೂಮಿ.

ಗದ್ದೆಕೋಗು = ನೀರಾವರಿ ಭೂ ಪ್ರದೇಶ, ಬತ್ತ ಬೆಳೆಯುವ ವಿಶಾಲ ಭೂಪ್ರದೇಶ.

ಗದ್ದೆಬಯಲು = ಗದ್ದೆಕೋಗು.

ಗದ್ದೆಹೂಟಿ = ಗದ್ದೆಯಲ್ಲಿ ಉಳುಮೆ.

ಗದ್ದೆಹೂಡು = ಉಳುಮೆಮಾಡು.

ಗದ್ದೆ ಸೌತೆಕಾಯಿ = ಕೊಯಿಲಿನ ನಂತರ ಗದ್ದೆಯಲ್ಲಿ ಬೆಳೆಸುವ ಒಂದು ಬಳ್ಳಿ ತರಕಾರಿ, ಬಣ್ಣದ ಸೌತೆಕಾಯಿ, ಮಂಗಳೂರು ಸೌತೆಕಾಯಿ.

ಗನ = ಘನ, ಶ್ರೇಷ್ಠ, ಮಿಗಿಲಾದುದು.

ಗನಂದಾರಿ = ಶ್ರೇಷ್ಠ ಕೆಲಸವೆಂದು ವ್ಯಂಗ್ಯಾರ್ಥದಲ್ಲಿ ಹೇಳುವುದು.

ಗನ್ವಾದೂಟ = ಸೊಗಸಾದ ಊಟ, ಭರ್ಜರಿ ಊಟ.

ಗಬಗಬ = ಬೇಗ ಬೇಗ, ಚುರುಕಾಗಿ ತಿನ್ನುವುದು (ಅಲಂ).

ಗಬ್ಬ = ದನದ ಬಸಿರು, ಗರ್ಭ.

ಗಬ್ಬಿ = ಸ್ವಚ್ಛವಿಲ್ಲದವಳು.

ಗಬ್ಬು = ಹೊಲಸು, ಕೆಟ್ಟವಾಸನೆ, ಕೊಳಕು.

ಗಬ್ಬುನಾತ = ಗಬ್ಬು, ಹೊಲಸುವಾಸನೆ.

ಗಮಗಮ = ಸುವಾಸನೆ, ಪರಿಮಳ.

ಗಮಗುಡಿ = ಸುವಾಸನೆಯಿಂದ ಕೂಡಿರು.

ಗಮನ = ೧.ಲಕ್ಷ್ಯ, ಮನಸ್ಸು ಕೊಡುವುದು ೨. ಸುವಾಸನೆ, ಪರಿಮಳ.

ಗಮನಸೆಳೆ = ಆಕರ್ಷಿಸು, ಮನಸ್ಸನ್ನು

ಸೆಳೆ.

ಗಮನ್ಸು = ಗಮನಿಸು, ಲಕ್ಷ್ಯಕೊಡು, ಮನಸ್ಸಿಗೆ ತಂದುಕೋ.

ಗಮಾರ = ಒರಟ, ಅನಾಗರಿಕ.

ಗಮ್ಮತ್ತು = ಮೋಜು, ವಿನೋದ, ತಮಾಷೆ

ಗಮುಲು = ಘಮಘಮ, ಸುವಾಸನೆ.

ಗಯ್ಯಾಳಿ = ಜಗಳಗಂಟಿ, ದೂರ್ತೆ.

ಗಯ್ಯಾಳ್ತನ = ಜಗಳದ ಬುದ್ದಿ, ಹೊಂದಿ–ಕೊಳ್ಳದಿರುವಿಕೆ.

ಗರ = ೧.ದೆವ್ವ, ಪಿಶಾಚಿ, ೨. ದಾಳ ೩.ಬೆಪ್ಪು, ಬ್ರಾಂತು.

ಗರ್ಗನಮರ = ಎಲೆಗಳು ಮರಳು ಕಾಗದದಂತೆ ಇದ್ದು, ಮರದ ಸಾಮಾನುಗಳನ್ನು ಉಜ್ಜಿ ನಯ ಮಾಡಲು. ಪಾಚಿ ಕಟ್ಟಿದ್ದನ್ನು ತೊಳೆಯಲು ಉಪಯೋಗ. ಕರು ಹಾಕಿದ ದನಗಳ ಮಾಸು ಬೀಳದಿದ್ದರೆ ಈ ಎಲೆಗಳನ್ನು ತಿನ್ನಿಸುತ್ತಿದ್ದರು.

ಗರಗಸ = ಹಲ್ಲುಗಳಿರುವ ಮರ ಕೊಯ್ಯುವ ಆಯುಧ.

ಗರಂ = ಕೋಪ, ಉದ್ರೇಕ.

ಗರಟ = ಕರಟ, ಚಿಪ್ಪು, ತೆಂಗಿನಕಾಯಿಯ ಮೇಲಿನ ಗಟ್ಟಿಯಾದ ಕವಚ.

ಗರ್ನಾಲು = ಸಿಡಿಮದ್ದು, ಬೆಂಕಿಯ ಉಂಡೆ, ಉತ್ಸವಗಳಲ್ಲಿ ಸಿಡಿಸುವ ಸ್ಫೋಟಕ.

ಗರಗನ ಹಕ್ಕಿ = ಗುಬ್ಬಚ್ಚಿಯಂತೆ ಸಣ್ಣಗಿರುವ ನೇತು ಬೀಳುವಂತೆ ಗೂಡುಕಟ್ಟುವ ಹಕ್ಕಿ, ಗೀಜುಗ, ಗೀಜುಗಾರನ ಹಕ್ಕಿ.

ಗರಬಡಿ = ತಬ್ಬಿಬ್ಬಾಗು, ದೆವ್ವಹಿಡಿ, ಆವೇಶಕ್ಕೊಳಗಾಗು.

ಗರತಿ = ಮುತ್ತೈದೆ, ಗೃಹಿಣಿ.

ಗರಿ = ರೆಕ್ಕೆ, ಪುಕ್ಕ, ೨. ಮರಗಳ ದೊಡ್ಡ ದೊಡ್ಡ ಎಲೆ, ತೆಂಗಿನಗರಿ, ಅಡಿಕೆಗರಿ, ಸೋಗೆ.

ಗರಿಗರಿ = ಗಟ್ಟಿಯಾಗಿರುವುದು, ಬೆಂದು/ ಒಣಗಿ ಗಟ್ಟಿಯಾಗುವುದು.

ಗರುಡ = ಹದ್ದಿನ ಜಾತಿಯ ಪಕ್ಷಿ, ಗುಂಡಾಳ ಪಕ್ಷಿ.

ಗರುವ =ಗರ್ವ, ಶ್ರೇಷ್ಠ, ಜಂಬ, ಅಹಂಕಾರ.

ಗರ್ಮಿ = ಉಷ್ಣ, ಉಷ್ಣಕ್ಕೆ ಸಂಬಂಧಪಟ್ಟ ರೋಗ.

ಗರ್ತ = ನೀರಿನ ಸುಳಿ.

ಗರ್ತಿ = ಗರತಿ, ಗೃಹಿಣಿ.

ಗರ್ಭ = ಬಸಿರು, ಪಿಂಡ, ಭ್ರೂಣ, ಉದರ.

ಗರ್ಭಕೋಶ = ಹೊಟ್ಟೆಯಲ್ಲಿರುವ ಭ್ರೂಣದ ಚೀಲ.

ಗರ್ಭಗುಡಿ = ದೇವರ ಮೂಲ ವಿಗ್ರಹವಿರುವ ಭಾಗ, ದೇವಸ್ಥಾನದ ಒಳಗಿನ ಪ್ರಾಂಗಣ.

ಗರ್ಭಪಾತ = ಗರ್ಭವು ನಷ್ಟವಾಗುವುದು, ಮೈಯಿಳಿಯುವುದು.

ಗರ್ಭಿಣಿ = ಬಸುರಿ, ಬಸಿರಾದ ಹೆಂಗಸು, ಗರ್ಭವತಿ.

ಗರ್ಭೋತಿ = ಗರ್ಭಿಣಿ.

ಗಲಗಲ = ಅಲ್ಲಾಡುವ ಶಬ್ಧ, ಗೆಜ್ಜೆಯ ಸದ್ದು.

ಗಲಬರಿಸು = ಪಾತ್ರೆಗಳನ್ನು ನೀರು ಹಾಕಿ

ತೊಳೆ, ಬಟ್ಟೆ ಜಾಲಿಸು.

ಗಲಾಟೆ = ಗಲಾಟೆ, ಗದ್ದಲ, ಗಡಿಬಿಡಿ, ತಂಟೆ, ಜನಜಂಗುಳಿ.

ಗಲಿಬಿಲಿ = ಗೊಂದಲ, ಕಕ್ಕಾಬಿಕ್ಕಿ.

ಗಲೀಜು = ಕೊಳಕು, ಹೊಲಸು.

ಗಲ್ಟ = ಗರಟ, ಕರಟ.

ಗಲ್ಲ = ಗದ್ದ, ತುಟಿಯ ಕೆಳಭಾಗ.

ಗಲ್ಲು = ಕುತ್ತಿಗೆಗೆ ನೇಣುಹಾಕಿ ಕೊಲ್ಲುವ ಶಿಕ್ಷೆ.

ಗವಟೆಕಾಯಿ = ಕಾಡಿನಲ್ಲಿ ಬಳ್ಳಿಯಲ್ಲಿ ಸಿಗುವ ಸಣ್ಣ ತೊಂಡೆಕಾಯಿ ಯಂತಿರುವ ಸಿಹಿ ರುಚಿಯ ತರಕಾರಿ.

ಗವಿ = ಗುಹೆ, ಬೆಳಕೇ ಬೀಳದ ಕತ್ತಲ ಜಾಗ.

ಗವ್ಚಿ = ಕತ್ತಲು ಆವರಿಸು ೨. ಒಳಗೊಳಗೇ ಹೊಗೆಯಾಡು, ೩. ದ್ವೇಷ (ತುಂಬಾ ದಿನದಿಂದ ಒಳಗೊಳಗೇ ಗವ್ಚಿತ್ತು).

ಗವ್ಲು = ಗೌಲು, ಮೀನು/ಮಾಂಸಾಹಾರದ ಹಸಿವಾಸನೆ.

ಗಸ್‌ಗಸೆ = ಒಂದು ರೀತಿಯ ಸಣ್ಣಕಾಳು, ಮಸಾಲೆ ಪದಾರ್ಥ, ಪಾಯಸ ಮಾಡ–ಬಹುದಾದ ಕಾಳು.

ಗಸಿ = ಸಾರು, ಸಾಂಬಾರಿನಲ್ಲಿ ಹೋಳು ಗಳೆಲ್ಲ ಮುಗಿದು ಉಳಿಯುವ ಭಾಗ, ೨. ಚಾ/ಕಾಫಿ ಸೋಸಿದ ಮೇಲೆ ಉಳಿಯುವ ಚರಟ.

ಗಳ = ಬಿದಿರು ಕೋಲು.

ಗಳಗಳನೆ = ಒಂದೇಸಮನೆ ಕಣ್ಣೀರು ಸುರಿಸಿ ಅಳುವುದು.

ಗಳಲೆ = ಗಣಲೆ.

ಗಳಿ = ಮಾಗು, ಹಣ್ಣಾಗು.

ಗಳಿಕೆ = ಆದಾಯ, ಸಂಪಾದನೆ.

ಗಳಿಗಿ = ೧.ಬಟ್ಟೆಯ ಮಡಿಕೆ, ಪದರ ೨.ವೀಳ್ಯದೆಲೆಯ ಇಪ್ಪತ್ತರ ಕಟ್ಟು, ೩.ನಿಮಿಷ, ಮುಹೂರ್ತ, ಕ್ಷಣ ೪.ನಾಗರಹಾವಿನ ಕುತ್ತಿಗೆ ಯಲ್ಲಿರುವ ಗೆರೆ/ಪಟ್ಟಿ.

ಗಳಿಗ್ಗಂಡಾಂತ್ರ = ಪದೇ ಪದೇ ಬರುವ ತೊಂದರೆ ೨. ನಿಮಿಷಕ್ಕೊಂದು ಸಾರಿ ಮನಸ್ಸು ಬದಲಾಯಿಸುವುದು.

ಗಳಿಗ್ಗೊಮ್ಮೆ = ಪದೇಪದೇ, ಆಗಾಗ.

ಗಳು = ಗಳ, ೨. ಪಕ್ವವಾದ, ಹಣ್ಣಾದ, ಕಳಿತ, ಮಾಗಿದ.

ಗಳ್ತು = ಗಳು ಹಣ್ಣಾಗಿದ್ದು.

ಗಾಚಾರ = ಗ್ರಹಚಾರ, ಹಣೆಬರಹ, ದುರದೃಷ್ಟ.

ಗಾಜು = ೧.ಪಾರದರ್ಶಕ ಕನ್ನಡಿ ೨.ಜಾಡಿ, ಭರಣಿ.

ಗಾಟಿ = ಘಾಟಿ, ಬುದ್ಧಿವಂತ, ಬುದ್ಧಿವಂತಿಕೆ.

ಗಾಡ = ಹೆಚ್ಚಾದ, ದಪ್ಪ, ಕಡು.

ಗಾಡಿ = ಬಂಡಿ, ವಾಹನ, ಎರಡು ಎತ್ತುಗಳ ಸಹಾಯದಿಂದ ಎಳೆಯುವ ಬಂಡಿ.

ಗಾಡಿ ಅಟ್ಟು = ಗಾಡಿಯ ಮೇಲ್ಭಾಗದಲ್ಲಿ ಹಾಸಿರುವ ಹಲಗೆಗಳು.

ಗಾಡಿ ಕತ್ರಿ = ಗಾಡಿ ಹೊಡೆಯುವವನು ಕುಳಿತುಕೊಳ್ಳುವ ಮೂಕಿನ ಹಿಂಭಾಗದ ಉದ್ದಮರ.

ಗಾಡಿಕೀಲು = ಚಕ್ರಗಳು ಬೀಳದಂತೆ

ಹಾಕುವ ಕಬ್ಬಿಣದ ಕೀಲು.

ಗಾಡಿಚಕ್ರ = ಗಾಡಿಯ ಎರಡುಕಡೆಯ ಗಾಲಿಗಳು.

ಗಾಡಿತಳಿ = ಗಾಡಿ ಅಟ್ಟಿಗೆ ಎರಡೂ ಬದಿಗಳಲ್ಲಿ ಮಾಡಿರುವ ತೂತಕ್ಕೆ ಕೋಲುಗಳನ್ನು ಹಾಕಿ ಮಾಡಿರುವ ತಡಿಕೆ.

ಗಾಡಿ ಪಟ್ಟೆ = ಗಾಡಿಯ ಚಕ್ರಕ್ಕೆ ಹಾಕಲಾದ ಕಬ್ಬಿಣದ ಬಳೆ.

ಗಾಡಿಮೂಕು = ಗಾಡಿಯ ಮುಂಭಾಗದಲ್ಲಿ ನೊಗದ ಮಧ್ಯ ಮುಂದಕ್ಕೆ ಬಾಗಿರುವ ಮರ.

ಗಾಣ = ಎತ್ತು ಅಥವಾ ಕೋಣಗಳನ್ನು ಕಟ್ಟಿ ಗಾಣವನ್ನು ತಿರುಗಿಸಿ, ಎಣ್ಣೆ/ಕಬ್ಬಿನ ರಸ ತೆಗೆಯುವ ಸಾಧನ.

ಗಾಣಿಗ = ಗಾಣವನ್ನಿಟ್ಟುಕೊಂಡು ಎಣ್ಣೆ ತೆಗೆಯುವವನು.

ಗಾತ = ಆಳ, ಊರ.

ಗಾತ್ರ = ಸುತ್ತಳತೆ, ದಪ್ಪ/ಸಣ್ಣ ಎಂಬ ಅಳತೆ.

ಗಾದಿ = ಸಿಂಹಾಸನ, ಮೆತ್ತೆ, ಹಾಸಿಗೆ.

ಗಾದೆ = ನಾಣ್ಣುಡಿ, ಲೋಕೋಕ್ತಿ.

ಗಾಬರಿ = ಹೆದರಿಕೆ, ಭಯ, ಅಂಜಿಕೆ.

ಗಾಯ = ರಕ್ತ ಬರುವಂತೆ ಹೊಡೆತ, ಹೊಡೆತದಿಂದಾದ ಪೆಟ್ಟು, ಚರ್ಮ/ಮಾಂಸ ಕಿತ್ತು ಹೋಗಿರುವುದು.

ಗಾಯಮಾಡು = ಗಾಯಗೊಳಿಸು.

ಗಾರು = ಒಣಗು, ತೇವವಿಲ್ಲದಿರುವಿಕೆ.

ಗಾರೆ = ಕಟ್ಟಡಕ್ಕೆ ಬಳಸುವ ಸುಣ್ಣ, ಮರಳಿನ ಮಿಶ್ರಣ.

ಗಾರೆ ಕೆಲಸ = ಗಾರೆ ಮಾಡುವುದು.

ಗಾಲಿ = ಚಕ್ರ.

ಗಾಲಿಕುರ್ಚಿ = ಚಕ್ರವಿರುವ ಕುರ್ಚಿ, ತಳ್ಳಿಕೊಂಡು ಹೋಗಬಹುದಾದಂತ ಕುರ್ಚಿ.

ಗಾಸಿ = ಗಾಯ, ತೊಂದರೆ, ಹಿಂಸೆ, ನೋವು.

ಗಾಳ = ಮೀನು ಹಿಡಿಯುವ ಕೊಕ್ಕೆ.

ಗಾಳ್‌ಅಂತದೆ = ಮನೆಯೆಲ್ಲ ಖಾಲಿಖಾಲಿ ಅನ್ನಿಸುವುದು.

ಗಾಳಹಾಕು = ೧.ಮೀನು ಹಿಡಿಯಲು ಗಾಳವನ್ನು ನೀರಿಗೆ ಬಿಡು ೨.ಆಸೆ ತೋರಿಸಿ ಮೋಸ ಮಾಡು.

ಗಾಳಿ = ೧.ವಾಯು, ಎಲರು ೨.ದೆವ್ವ, ಪಿಶಾಚಿ.

ಗಾಳಿಗ್ಹಾಕು = ಗಾಳಿಯಲ್ಲಿ ಒಣಗಿಸಲು ಹರಡು.

ಗಾಳಿರ = ಗಾಳಿ ಬೀಸಿದರೆ ಹಾರುವ ಕಚ್ಚದೇ ಇರುವ ಕಪ್ಪು ಇರುವೆ.

ಗಾಳಿವರ್ತ್ಮಾನ = ಕೇಳಿಕೆಯ ಮಾತು/ಸುದ್ದಿ, ಗಾಳಿಸುದ್ದಿ, ಗಾಳಿ ಸಮಾಚಾರ.

ಗಾಳಿಸಮಾಚಾರ = ಗಾಳಿವರ್ತ್ಮಾನ.

ಗಾಳಿಸುದ್ದಿ = ಗಾಳಿವರ್ತ್ಮಾನ.

ಗಾಳಿಸೋಕು = ೧.ಗಾಳಿಯ ಧೂಳಿನಿಂದಾದ ಸಣ್ಣಪುಟ್ಟ ಚರ್ಮರೋಗ ೨.ದೆವ್ವ ಪಿಶಾಚಿಗಳ ಗಾಳಿ ತಾಗುವುದೆಂಬ ನಂಬಿಕೆ.

ಗಾಳಿಹಾಕು = ೧.ಗಾಳಿಬೀಸು, ೨.ಉಬ್ಬಿಸು, ಹುರಿದುಂಬಿಸು, ಪುಸಲಾಯಿಸು.(ಅಲಂ)

ಗ್ವಾಂಚಲು = ಗೊಂಚಲು.

ಗ್ವರಟೆಹೂ = ಗೊರಟೆಹೂವು, ಒಂದು ಜಾತಿಯ ಬಣ್ಣಬಣ್ಣದ ಹೂಗಳು.

ಗ್ಯಾಪ್ಕ = ನೆನಪು, ಪರಿಚಯ.

ಗ್ಯಾನ = ನೆನಪು, ಪರಿಚಯ, ಪ್ರಜ್ಞೆ.

ಗ್ರಾಚಾರ =ಗ್ರಹಚಾರ, ಸರಿಯಿಲ್ಲದ ಗ್ರಹಗತಿ.

ಗ್ರಾಪ್ರವೇಶ = ಗೃಹಪ್ರವೇಶ, ಹೊಸಮನೆಗೆ ಒಕ್ಕಲಾಗುವುದು.

ಗ್ವಾಗರಿ = ಒಂದೇ ಸಮನೆ ಅಳವುದು/ ಕೇಳುವುದು. (ಏನಾಗಿದೆ ನಿಂಗೆ ಆತರ ಗ್ವಾಗರಿಯಕ್ಕೆ).

ಗ್ವಾಡ = ಬಗ್ಗಡ, ಕೆಸರು.

ಗ್ವಾಡೆ = ಗೋಡೆ.

ಗ್ವಾಡ್ಸಾಲ್ ಮುಂಡ್ಗಿ = ಒಂದೇ ಅಳತೆಯ ದೂರಕ್ಕೆ ನಿಲ್ಲಿಸಿದ ಗೋಡೆಗೆ ಆಧಾರಕಂಬ.

ಗ್ವಾತ = ಕೊಳೆತ ಹಣ್ಣು ೨. ಕೊಳೆತ ಪದಾರ್ಥ, ೩. ಕೊಳೆತ ವಾಸನೆ.

ಗ್ವಾದಲಿಗೆ = ದನಗಳಿಗೆ ಹುಲ್ಲುಹಾಕಲು ಮಾಡಿದ ಅಡ್ಡಹಲಗೆ/ತಡಿಕೆ.

ಗ್ವಾರೆ = ಒಂದು ಚರ್ಮರೋಗ, ಬೆವರು ಸಾಲೆಯಂತಿರುವ ಅಮ್ಮ.

ಗ್ವಾವೇಕಾಯಿ = ದಪ್ಪ, ಉದ್ದವಿರುವ ಸಿಹಿ ಕುಂಬಳ.

ಗ್ವಾಳಗಣ್ಣು = ದೊಡ್ಡಕ್ಕೆ ಉಬ್ಬಿಬಂದಿರುವ ಕಣ್ಣು, ಕಪ್ಪೆಕಣ್ಣು.

ಗಿಂಜು =ಹಲ್ಲುಕಿರಿ, ಯಾಚಿಸು, ಅಗಲವಾಗಿ ಬಾಯಿಕಳಿ.

ಗಿಂಡಿ = ನೀರನ್ನು ತುಂಬಿಸಿ ಕುಡಿಯುವ ಸಣ್ಣ ಬಾಯುಳ್ಳ ಸಣ್ಣಪಾತ್ರೆ, ಕೌಳಿಗಿ, ಎಡೆಯಿಡುವಾಗ ನೀರಿಡುವ ಪಾತ್ರೆ.

ಗಿಂಬ್ಳ = ಮೇಲು ಸಂಪಾದನೆ, ಲಂಚ.

ಗಿಂವ್ಚು = ಕಿವುಚು, ಹಿಂಡು.

ಗಿಚ್ಚಿ = ಆಣೆಕಲ್ಲಾಟ ಆಡುವಾಗ ಒಂದೊಂದು ಹಂತವನ್ನು ಗೆದ್ದಾಗ ಹೇಳುವ ಮಾತು (ಒಂದು ಗಿಚ್ಚಿ, ಎರಡು ಗಿಚ್ಚಿ).

ಗಿಜಿಗಿಜಿ = ಜನದಟ್ಟಣೆ, ನಿಬಿಡತೆ (ಅಲಂ) (ಮಾರುಕಟ್ಟೆ ಗಿಜಿಗಿಜಿ ಅಂತಿತ್ತು).

ಗಿಟ್ಟ = ಕಿಟ್ಟ, ಮುಚ್ಚಳ.

ಗಿಟ್ಟುಗರಿ = ಬಲವಾಗಿ, ಒತ್ತೊತ್ತಾಗಿ ತುಂಬಿರು, ನಿಬಿಡವಾಗಿರು.

ಗಿಟ್ಕು = ಗಿಟುಕು, ಕೊಬ್ಬರಿ, ಒಣಗಿದ ತೆಂಗಿನ ಕಾಯಿ.

ಗಿಟ್ಟು = ದೊರಕು, ಗಳಿಕೆಯಾಗು.

ಗಿಟ್ಸು = ಸಂಪಾದಿಸು, ಗಳಿಸು.

ಗಿಡ = ಸಣ್ಣಮರ, ಸಸಿ, ಸಸ್ಯ.

ಗಿಡಗ = ಡೇಗೆ, ಪಾರಿವಾಳ ತಿನ್ನುವ ಹಕ್ಕಿ.

ಗಿಡ ಮುಟ್ಟಿಸುವುದು = ಹುಡುಗಿ ಮೈನೆರೆದಾಗ ಹಲಸಿನ ಮರದಡಿ ನಿಲ್ಲಿಸಿ ಮಾಡುವ ಶಾಸ್ತ್ರ.

ಗಿಡಬುಡಿಕೆ = ಢಮರುಗ, ಕೈಯಲ್ಲಿ ಹಿಡಿದು ನುಡಿಸುವ ಒಂದು ತಾಳ, ಬುಡಬುಡಿಕೆಯವನು, ಹಾಲಕ್ಕಿ ಎಂಬ ಒಂದು ಜನಾಂಗ.

ಗಿಡ್ಡ = ಕುಳ್ಳ, ಕುಬ್ಜ. (ಪು)

ಗಿಡಿ = ತುರುಕು, ತುಂಬು, ಒಳಸೇರಿಸು.

ಗಿಡಿನ ದೆಯ್ಯ = ಗಿಡಮರಗಳಲ್ಲಿ ನೆಲೆಸಿರುವ ದೈವ.

ಗಿಡ್ಡಿ = ಕುಳ್ಳಿ, ಕುಬ್ಜೆ. (ಸ್ತ್ರೀ)
ಗಿಣ್ಣಾಲು = ಗೀಬುಹಾಲು, ಎಳಗಂದಿಯ ಹಾಲು.
ಗಿಣಿ = ಗಿಳಿ, ಶುಕ, ಕೆಂಪು ಕೊಕ್ಕಿನ ಹಸಿರು ಪಕ್ಷಿ.
ಗಿಣಿಬಳೆ = ಕೈಗೆ ಹಾಕುತ್ತಿದ್ದ ಆಭರಣ.
ಗಿಣಿ ಮೂತಿ ಮಾವಿನಕಾಯಿ = ತೋತಾಪುರಿ ಮಾವಿನಕಾಯಿ.
ಗಿಣ್ಣು = ೧.ಕರುಹಾಕಿದ ಮೂರು ನಾಲ್ಕು ದಿನದೊಳಗೆ ಹಾಲು ಕರೆದು ತಯಾರಿಸಿದ ಸಿಹಿ ತಿಂಡಿ ೨. ಕಬ್ಬು/ಬಿದಿರಿನ ಗಂಟು.
ಗಿಬರು = ತರಚು, ಕೆರೆ, ಗೀರು.
ಗಿರ = ಹಂಬಲ, ಹುಚ್ಚು.
ಗಿರಕನ ಹುಳಿ = ದೀರ್ಕನ ಹುಳಿ, ಜೀರಿಗೆ ಮರದ ಹಣ್ಣು, ಮೂತಿ ಮುರ್ಕನ ಕಾಯಿ.
ಗಿರಕಿ = ಲಾಗ, ಚಕ್ರದಂತೆ ಸುತ್ತು, ನಿರ್ದಿಷ್ಟ ಪರಿಧಿಯಲ್ಲಿ ತಿರುಗುವುದು.
ಗಿರಕಿಹೊಡೆ = ಲಾಗಹಾಕು, ಸುತ್ತಲೂ ಸುತ್ತು, ತಿರುಗು, ಗಿರ್ಕಿ.
ಗಿರ್‌ಗಿಟ್ಲೆ = ಇಬ್ಬರು ಕೈ ಹಿಡಿದುಕೊಂಡು ನಿರಂತರ ಸುತ್ತುವುದು.
ಗಿರ್‌ಮಿಟ್ಟು = ಉಪಾಯ, ತಂತ್ರ.
ಗಿರಸ್ತ = ಗೃಹಸ್ಥ, ಗಂಡಸು.
ಗಿರಾಕಿ = ಆಸಾಮಿ, ವ್ಯಕ್ತಿ.
ಗಿರಾಚಾರ = ಗ್ರಹಚಾರ, ಗ್ರಾಚಾರ, ಸರಿಯಿಲ್ಲದ ಗ್ರಹಗತಿ.
ಗಿರಾಣ =ಗ್ರಹಣ.
ಗಿರಾಸ್ತ = ಗೃಹಸ್ಥ, ಗಿರಸ್ತ.
ಗಿರಿ = ೧.ಬೆಟ್ಟ, ಪರ್ವತ, ೨.ಬಿಗಿಮಾಡು, ಭದ್ರಗೊಳಿಸು.
ಗಿರ್ಲು =ಒಂದು ಬಗೆಯ ಮೀನು.
ಗಿರೇಸ್ತಿ = ಗೃಹಿಣಿ, ಮನೆಯ ಯಜಮಾನಿ.
ಗಿರೇಸು = ತಿಳಿದುಕೊಳ್ಳು, ಊಹಿಸಿಕೊಳ್ಳು, ಗ್ರಹಿಸು.
ಗಿಲಾಯ = ಗೋಡೆಯನ್ನು ಮಟ್ಟಮಾಡಿ ಮಣ್ಣು/ಸಿಮೆಂಟು/ಬಣ್ಣ/ಸುಣ್ಣ ಹಚ್ಚುವುದು/ನಯಗೊಳಿಸುವುದು.
ಗಿಲಾವು = ಗಿಲಾಯ.
ಗಿಲ್ಕಿ = ಗಿಲಿಗಿಚ್ಚಿ, ಗಿಲಿಕೆ, ಗಿಲಿಗಿಲಿ ಶಬ್ಧ ಮಾಡುವ ಮಕ್ಕಳ ಆಟಿಕೆ.
ಗಿಲಿಗಿಚ್ಚಿ = ಗಿಲ್ಕಿ.
ಗಿಲಿಗಿಲಿ = ಮಕ್ಕಳ ಗಿಲಿಗಿಚ್ಚಿಯ ಶಬ್ಧ,
ಗಿಲೀಟು = ಹೊಳಪಿನ ಲೇಪನ ೨.ನಯವಾದ ಮಾತುಗಾರಿಕೆ (ಅಲಂ), ೩. ನಕಲಿ.
ಗಿಲೀಟು ಮಾಲು = ಥಳುಕಿನ ಸರಕು/ಪದಾರ್ಥ, ನಕಲಿ ವಸ್ತುಗಳು.
ಗಿಲುಬು = ಕೆಣಕು, ಗಿಟ್ಟಿಸು.
ಗಿವುಚು = ಕಿವುಚು, ಹಿಂಡು, ಕಲಸು.
ಗಿಳಿ = ಗಿಣಿ, ೨. ಕೋಟು, ಅಂಗಿಗಳನ್ನು ನೇತು ಹಾಕಲು ಮಾಡಿರುವ ಹಲವಾರು ಗೂಟಗಳು.
ಗಿಳಿ ಪಾಠ = ಅರ್ಥಮಾಡಿಕೊಳ್ಳದೆ ಸುಮ್ಮನೇ ಓದುವುದು.
ಗೀಕು = ಒಂದು ಜಾತಿಯ ಗಟ್ಟಿಹುಲ್ಲು.
ಗೀಕಿನ ಚಾಪೆ = ಗೀಕಿನ ಕಡ್ಡಿಯ ಚಾಪೆ.
ಗೀಚು = ಗೆರೆ, ಗೀಟು, ಗೀರು, ಅವಸರದಲ್ಲಿ ಬರೆ.
ಗೀಜುಗ = ಒಂದು ಕಾಡು ಹಕ್ಕಿ, ಖಂಜನ.
ಗೀಟಲ್ಲ = ಲಾಭದಾಯಕವಲ್ಲ.
ಗೀಟು = ೧.ಲಾಭವಾಗು ೨. ಗೆರೆ, ರೇಖೆ

ಗೀರು.

ಗೀಬು = ಎಮ್ಮೆ/ದನಗಳು ಕರು ಹಾಕಿದ ನಂತರ ಕರೆಯುವ ಹಳದಿ ಬಣ್ಣದ ಹಾಲು, ಗಿಣ್ಣು ಹಾಲು.

ಗೀಬ್ಹಾಲು = ಗೀಬು, ಗಿಣ್ಣುಹಾಲು, ಈ ಹಾಲಿನಿಂದ ಗಿಣ್ಣು ಎಂಬ ಸಿಹಿ ಪದಾರ್ಥ ಮಾಡುತ್ತಾರೆ.

ಗೀರು = ೧.ಗೀಟು ೨. ತರಚು, ಗಿಬರು, ಗಾಯಮಾಡು.

ಗೀಳು = ಚಟ, ಹಂಬಲ, ಬಯಕೆ, ಪ್ರಬಲ ಇಚ್ಛೆ.

ಗುಂಗ್ರ = ಒಂದು ಜಾತಿಯ ಸಣ್ಣ ಸೊಳ್ಳೆ, ಕಣ್ಣಿನ ಮುಂದೆ ಹಾರಾಡುವ ಕೀಟ.

ಗುಂಗ್ರಾಡು = ಹಣ್ಣು/ತರಕಾರಿ ಮುಂತಾದುವಕ್ಕೆ ಮುತ್ತುವ ಗುಂಗ್ರ.

ಗುಂಗ್ರಿಹುಳ = ದೊಡ್ಡದುಂಬಿ.

ಗುಂಗು = ತನ್ಮಯತೆ, ಪರವಶತೆ, ಗೀಳು.

ಗುಂಗುರು = ಸುರುಳಿ, ವಕ್ರ, ಕೊಂಕು, ಸುರುಳಿಯಾದ ಕೂದಲು.

ಗುಂಗ್ರು = ೧.ಗುಂಗುರು ೨. ಗುಂಗ್ರ.

ಗುಂಟೆ = ಭೂಮಿಯ ಒಂದು ಅಳತೆ, ಒಂದು ಎಕರೆಯ ನಲವತ್ತನೇ ಒಂದು ಭಾಗ.

ಗುಂಡ = ಗಟ್ಟಿಮುಟ್ಟಾದ, ಮೈಕೈ ತುಂಬಿ ಕೊಂಡಿರುವ.

ಗುಂಡ್‌ಕಲ್ಲು = ಒರಳಿನಲ್ಲಿ ರುಬ್ಬುವ ಕಲ್ಲು.

ಗುಂಡ್‌ಕಲ್ಲಿನಂಗೆ = ಗಟ್ಟಿಮುಟ್ಟಾಗಿ, ಆರೋಗ್ಯವಾಗಿ (ಅಲಂ).

ಗುಂಡಾಲ = ೧.ಗುಂಡಗಿರುವ ಮಣ್ಣಿನ ಪಾತ್ರೆ

ಗುಂಡಿ = ಗುಬ್ಬಿ, ಅಂಗಿ ಮೇಲೆ ಹಾಕುವ ಸಾಧನ ೨. ಆಳ, ಕೊಳ್ಳ.

ಗುಂಡಿನ ಸರ = ಕಂಠಾಭರಣ.

ಗುಂಡ್ಗಿ = ಎದೆ, ಹೃದಯ ೨. ಧೈರ್ಯ.

ಗುಂಡು = ೧.ತಾಳಿಯ ಜೊತೆ ಧರಿಸುವ ಬಂಗಾರದ ಸಣ್ಣ ಉಂಡೆ, ೨.ಗೋಳಾಕಾರ, ರುಬ್ಬುವ ಗುಂಡು, ಬಂದೂಕಿನ ಗೋಲಿ.

ಗುಂಡುಗೆ = ಗುಂಡಗಿರುವ, ದುಂಡಗಿರುವ.

ಗುಂಡುಗೋವಿ = ಮದುವೆಯಿಲ್ಲದವನು, ಯಾವ ವಿಧದ ಕಟ್ಟುಪಾಡು ಇಲ್ಲದವನು.

ಗುಂಡು ಹೊಡೆ = ಬಂದೂಕಿನಿಂದ ಈಡು ಹೊಡೆಯುವುದು.

ಗುಂಡು ಹೊಡೆದಂತೆ ಮಾತು = ಎದೆಗೆ/ ಮನಸ್ಸಿಗೆ ನಾಟುವಂತೆ ಮಾತಾಡುವುದು.

ಗುಂಡ್ಸೂಜಿ = ಗುಂಡನೆಯ ತಲೆಯುಳ್ಳ ಒಂದು ರೀತಿಯ ಸೂಜಿ.

ಗುಂಪು = ರಾಶಿ, ಸಮೂಹ.

ಗುಂಪುಕಟ್ಟು = ಒಟ್ಟಿಗೆ ಸೇರು, ಬಣಕಟ್ಟು.

ಗುಂಪುಗಾರ್ಕಿ = ಗುಂಪುಕಟ್ಟು.

ಗುಂಪುಗುಳಿತನ = ಗುಂಪು ಕಟ್ಟುವ ಚಾಳಿ.

ಗುಂಮ್ಮಿ = ಸಣ್ಣಬಾವಿ.

ಗುಂಯ್ಯ = ಗೊತ್ತಾಗದಂತೆ ಮೋಸ ಮಾಡುವವನು, ವಂಚಕ.

ಗುಂಯ್ಗುಡು = ಗೊಣಗುಡು, ಪಿಸು ಗುಡು, ಸಣ್ಣಗೆ ಶಬ್ಧಮಾಡು.

ಗುಗ್ಗು = ದಡ್ಡ, ಮೂರ್ಖ.

ಗುಚ್ಛ = ಕುಚ್ಚು, ಗೊಂಚಲು, ಹೂದಂಡೆ.

ಗುಜುಗುಜು = ಜನರು ಗುಂಪಾಗಿ ಒಳಗೊಳಗೇ ಮಾತಾಡುವುದು, ಶಬ್ದ.

ಗುಜ್ಜು = ೧.ಆಧಾರದ ಕಂಬ, ೨.ಗುಡ್ಡ, ಕುಳ್ಳು.

ಗುಜ್ಜುಕೊಡು = ಮಾಳಿಗೆಗೆ ಆಧಾರ–ವಾಗಿರುವ ಕಂಬ, ಆಸರೆಗಾಗಿ ಕೊಟ್ಟ ಮರ.

ಗುಜ್ಜುನೆಡು = ಜಮೀನು ಅಳತೆ ಮಾಡಿದ ಮೇಲೆ ಗುರುತಿಗಾಗಿ ನೆಡುವ ಕಲ್ಲು.

ಗುಜ್ಜುಬಾಳೆ = ಪಚ್ಚಬಾಳೆ.

ಗುಜ್ಜೆ = ಹಲಸಿನ ಎಳೆಯ ಕಾಯಿ.

ಗುಟ್ರಿಕಿ = ಗುಟುರು, ಗೂಳಿಯ ಕೂಗು.

ಗುಟ್ರಿಕಿ ಹಾಕು = ಗೂಳಿಯಂತೆ ಜೋರಾಗಿ ಕೂಗು, ಗರ್ಜಿಸು, ಹೂಂಕಾರ ಮಾಡು. (ಅಲಂ)

ಗುಟುಕು = ೧.ಹನಿ, ಒಂದು ತೊಟ್ಟು, ತುತ್ತು ೨.ಒಮ್ಮೆ ನುಂಗುವಷ್ಟು ದ್ರವ ಪದಾರ್ಥ.

ಗುಟುಕು ಜೀವ = ಈಗಲೋ ಆಗಲೋ ಹೋಗುವ ಜೀವ.

ಗುಟುರು = ಗೂಳಿಯು ಕೂಗು, ಪಾರಿವಾಳದ ಕೂಗು.

ಗುಟ್ಟು = ಗೋಪ್ಯ, ರಹಸ್ಯ, ಅಂತರಂಗದ ವಿಚಾರ.

ಗುಡ್‌ಗುಡ್ನೆ = ಬೇಗಬೇಗನೆ.

ಗುಡ್ಡ = ೧.ಸಣ್ಣ ಪರ್ವತ, ೨.ಗಿಡ್ಡ, ಕುಬ್ಜ, ೩.ವಯಸ್ಸಿಗೆ ಬಂದ ಗಂಡು ಕರು, ಹೋರಿ, ೪.ಬೆಟ್ಟ.

ಗುಡ್ಡಕ್ಕೆ ಹೋಗು = ಮಲ ವಿಸರ್ಜನೆಗೆ ಹೋಗುವುದು.

ಗುಡ್ಡಗಾಡು = ಕಾಡುಗಳಿಂದ ಕೂಡಿದ ಬೆಟ್ಟ.

ಗುಡ್ಡದ ದಾಸವಾಳ = ಸಣ್ಣ ಪೊದೆ ಯಂತಹ ಗಿಡ, ಹೂವಿನ ರಸ ಕಣ್ಣಿಗೆ ತಂಪು, ಹಣ್ಣು ತುಂಬಾ ರುಚಿ

ಗುಡಾಣ = ದೊಡ್ಡ ಮಣ್ಣಿನ ಮಡಕೆ.

ಗುಡಾರ = ತಾತ್ಕಾಲಿಕ ಆಶ್ರಯಕ್ಕೆ ಸಣ್ಣ ಗುಡಿಸಲು, ತಾತ್ಕಾಲಿಕ ವಸತಿ, ಬಿಡಾರ, ಡೇರೆ.

ಗುಡಾರಹಾಕು = ನೆಲೆಯಾಗು, ತಳವೂರು.

ಗುಡಿಗಾರ = ಮರದಿಂದ ಸಾಂಪ್ರದಾಯಿಕ ಕೆತ್ತನೆ ಮಾಡುವವರು.

ಗುಡಿಸ್ಲು = ಗುಡಿಸಲು, ಹಟ್ಟಿ, ಹುಲ್ಲಿನ ಹೊದಿಕೆಯ ಪುಟ್ಟಮನೆ.

ಗುಡಿಸು = ಕಸಪೊರಕೆಯಿಂದ ಗುಡಿಸಿ ಕಸತೆಗೆ.

ಗುಡುಗಾಟ = ಮೋಡಗಳು ಒಂದಕ್ಕೊಂದು ತಾಗಿ ಉಂಟಾಗುವ ಶಬ್ದ, ಮೇಘಧ್ವನಿ.

ಗುಡುಗಾಡು = ಗಟ್ಟಿಯಾಗಿ ಮಾತಾಡು, ಕೂಗು.

ಗುಡುಗು = ಗುಡುಗಾಟ.

ಗುಡುಗುಡಿಸು = ಆರ್ಭಟಿಸು, ಘರ್ಜಿಸು.

ಗುಡ್ಗುಡಿ = ಭಂಗಿ, ಚುಟ್ಟಾ, ಹುಕ್ಕ.

ಗುಡ್ಡೆ = ೧.ರಾಶಿ, ಸಮೂಹ, ಗುಂಪು ೨.ಕಣ್ಣಿನ ಅಕ್ಷಿ ಪಟಲ ೩.ಒಗ್ಗೂಡಿಸಿದ್ದು.

ಗುಣ = ೧.ನಡತೆ, ಸ್ವಭಾವ, ಸಜ್ಜನಿಕೆ ೨.ರೋಗ ಕಡಿಮೆಯಾಗುವುದು,

ವಾಸಿಯಾಗುವುದು, ಮಾಯು ವುದು.

ಗುಣಗಾನ = ಹೊಗಳುವಿಕೆ.

ಗುಣಮಟ್ಟ = ಬೆಲೆ, ಯೋಗ್ಯತೆ, ಮೌಲ್ಯ.

ಗುಣಮಾಡು = ವಾಸಿಮಾಡು, ಗುಣಪಡಿಸು.

ಗುಣಮುಖ = ರೋಗವು ವಾಸಿಯಾಗುವ ಸ್ಥಿತಿ.

ಗುಣವಂತ = ಸದ್ಗುಣಿ, ಒಳ್ಳೆಯವನು.

ಗುಣವಂತೆ = ಗುಣವತಿ, ಸದ್ಗುಣವುಳ್ಳವಳು.

ಗುಣವಾಗು = ವಾಸಿಯಾಗು.

ಗುಣಾಕಾರ = ಒಂದು ಸಂಖ್ಯೆಯನ್ನು ಇನ್ನೊಂದು ಸಂಖ್ಯೆಯಿಂದ ಗುಣಿಸುವುದು, ಲೆಕ್ಕ ಹಾಕುವುದು.

ಗುತ್ತಮ್ಮ = ದನಕರುಗಳಿಗೆ ಸಾಂಕ್ರಾಮಿಕ ರೋಗ ಬಂದಾಗ ಒಕ್ಕಲಿಗರು ಪೂಜಿಸುವ ಒಂದು ದೇವತೆ.

ಗುತ್ತಿ = ೧.ಗುತ್ತಮ್ಮ, ಒಂದು ದೈವ ೨.ಪೊದರು ೩. ಕಡಿದುಳಿದ ಗಿಡದ ಬುಡ, ಕೂಳೆ.

ಗುತ್ತಿ ದೇಸ್ಥಾನ = ಗುತ್ತಮ್ಮನ ದೇವಸ್ಥಾನ, ಜಾನುವಾರುಗಳಿಗೆ ಒಳ್ಳೆಯ ದಾಗಲೆಂದು ಮೊರೆ ಹೋಗುವ ದೇವರು.

ಗುತ್ತಿಗ = ಒಡಂಬಡಿಕೆ, ಒಪ್ಪಂದ, ದವಸ ಅಥವಾ ಹಣಕೊಡಬೇಕೆಂದು ಮಾಲೀಕನೊಂದಿಗೆ ಮಾಡಿ ಕೊಂಡ ಕರಾರು ೨. ಬಾಗಾಯ್ತು ಸಾಗುವಳಿ ಮಾಡಿ ಬದಲಿಗೆ ಕೊಡುತ್ತಿದ್ದ ಅಡಿಕೆ.

ಗುತ್ತಿಗ ಹಿಡಿ = ಒಪ್ಪಂದ ಮಾಡಿಕೊಂಡು ಜಮೀನು ಮುಂತಾದುವನ್ನು ವಶಕ್ಕೆ ತೆಗೆದುಕೊಳ್ಳುವುದು.

ಗುತ್ತು = ಪೊಟರೆ, ಗೂಡು, ಕಳ್ಳಜಾಗ (ಕಳ್ಳುಗುತ್ತು).

ಗುತ್ತೇದಾರ = ಜಮೀನನ್ನು ಗುತ್ತಿಗೆಗೆ ಹಿಡಿದವನು.

ಗುತ್ತೇದಾರ್ಕಿ = ಜಮೀನನ್ನು ಗುತ್ತಿಗೆಗೆ ಪಡೆಯುವಿಕೆ.

ಗುದಮುರಿಗೆ = ಗುದ್ದು, ಬೆನ್ನು ಮುರಿಯುವಂತೆ ಗುದ್ದುವುದು, ಜಗಳ, ಕಾದಾಟ.

ಗುದ್ದಾಟ = ಜಗಳ, ಕಲಹ, ಹೊಡೆದಾಟ.

ಗುದ್ದಾಡು = ಜಗಳವಾಡು, ಸೆಣಸಾಡು.

ಗುದಿ = ಅಡಿಕೆ ಮರ, ತೆಂಗಿನಮರ ಹತ್ತಲು ಕಾಲಿಗೆ ಬಳಸುವ ಹಗ್ಗ.

ಗುದ್ಲಿ = ನೆಲವನ್ನು ಅಗೆಯುವ ಕಬ್ಬಿಣದ ಸಾಧನ, ಗುದ್ದಲಿ.

ಗುದ್ದು = ಮುಷ್ಟಿಯಿಂದ ಹೊಡೆಯುವಿಕೆ, ಹೊಡಿ ೨. ಪ್ರಾಣಿಗಳು ವಾಸಿಸುವ ಸುರಂಗದಂತಹ ಬಿಲ, ದೊಡ್ಡಬಿಲ.

ಗುದ್ದುಗಣ್ಣು = ಗುಳಿಬಿದ್ದ ಕಣ್ಣು, ದೇಹ ಸೊರಗಿ ಒಳಸರಿದ ಕಣ್ಣುಗಳು.

ಗುನ್ನ = ಮೊನಚಾದ ವಸ್ತುವಿನಿಂದಾದ ಗಾಯ ೨. ಬುಗುರಿಯಾಟದಲ್ಲಿ ಒಂದು ಬುಗುರಿಯಿಂದ ಮತ್ತೊಂದು ಬುಗುರಿಗೆ ಹೊಡೆ ಯುವುದು.

ಗುನ್ನಹಾಕು = ಗುರುತು ಮಾಡು, ಹೊಡೆದು ಗರುತುಮಾಡು.

ಗುನುಗು = ಮನಸ್ಸಿನಲ್ಲೆ ಮಾತಾಡು,

ಒಳಗೊಳಗೇ ಬೈಯುವುದು, ಹಾಡುವುದು.

ಗುನುಗುಡು = ತನ್ನಷ್ಟಕ್ಕೆ ತಾನೇ ಹಾಡುವುದು.

ಗುಪ್ಪೆ = ರಾಶಿ, ಗುಡ್ಡೆ.

ಗುಪ್ಪೆಮಾಡು = ಮೇಲೆ ಚೂಪಾಗಿರುವಂತೆ ರಾಶಿ ಮಾಡು.

ಗುಬ್ಬಚ್ಚಿ = ಗುಬ್ಬಿ, ಸಣ್ಣಪಕ್ಷಿ, ಚಟಕ.

ಗುಬ್ಬಿ = ೧.ಗುಬ್ಬಚ್ಚಿ ೨. ಅಂಗಿಯ ಗುಂಡಿ.

ಗುಬ್ಬಿಗೂಡು = ೧.ಗುಬ್ಬಚ್ಚಿಯ ಗೂಡು, ೨. ಮಕ್ಕಳು ಹಸಿಮಣ್ಣು/ಮರಳನ್ನು ಪಾದಕ್ಕೆ ಒತ್ತಿ ಒತ್ತಿ ಮಾಡಿದ ಗೂಡು, ಕಪ್ಪೆ ಗೂಡು.

ಗುಮ್ಮ = ಗೂಬೆ, ಒಂದುಪಕ್ಷಿ (ಕಣ್ಣು ದೊಡ್ಡದಿರುವುದರಿಂದ ಮಕ್ಕಳಿಗೆ 'ಗುಮ್ಮಬಂತು' ಅಂತ ಹೆದರಿಸುವುದು).

ಗುಮ್ಮನ್‌ಕಟ್ಟು = ಗಾಡಿ ಚಕ್ರಗಳ ಮಧ್ಯದ ಗುಂಬದ ಮರ ಸವೆಯದಿರಲು ಹಾಕುವ ಕಬ್ಬಿಣದ ಬಳೆ/ಪಟ್ಟಿ.

ಗುಮ್ಮನ್‌ಗುಸ್ಕ = ಏನೂ ತಿಳಿಯದೆ ಸೋಮಾರಿಯಂತೆ ಸುಮ್ಮನಿರುವವರು.

ಗುಮ್ಮನ ಹಕ್ಕಿ = ಗುಮ್ಮ.

ಗುಮಾನಿ = ಅನುಮಾನ, ಸಂಶಯ.

ಗುಮ್ಮಾಡಲು = ಗುಮ್ಮ, ಗುಮ್ಮನ ಹಕ್ಕಿ, ಕೋಳಿಯಂತೆ ಗಾತ್ರ, ಗುಕ್ ಗುಕ್ ಎಂದು ಕೂಗುತ್ತದೆ. ದೂಪದ ಕಾಯಿ ಕೂಳೆಕಾಯಿ. ಬಿಟ್ಟಾಗ ವಲಸೆ ಬರುತ್ತದೆ. ಶಿಕಾರಿ ಮಾಡಿ ಇದರ ಮಾಂಸವನ್ನು ತಿನ್ನುತ್ತಾರೆ.

ಗುಮ್ಮಿ = ಒರತೆ ನೀರು ತುಂಬಿಕೊಳ್ಳಲು ಮಾಡಿದ ಸಣ್ಣ ಗುಂಡಿ, ಹೊಂಡ, ಸಣ್ಣ ಬಾವಿ.

ಗುರಿ = ಲಕ್ಷ್ಯ, ಉದ್ವೇಗ, ಈಡು.

ಗುರಿಮುಟ್ಟು = ೧.ಸ್ಥಳವನ್ನು ತಲುಪು ೨.ಉದ್ದೇಶವನ್ನು ಸಾಧಿಸು.

ಗುರಿಯಿಡು = ಏಟು ಸರಿಯಾಗಿ ಬೀಳುವಂತೆ ಲಕ್ಷ್ಯವಿಡು.

ಗುರ್ತಿಡು = ಲಕ್ಷ್ಯವಿಡು, ಗೊತ್ತುಮಾಡು.

ಗುರುತು = ಕುರುಹು, ಲಕ್ಷಣ, ಚಿಹ್ನೆ ೨. ಪರಿಚಯ.

ಗುರುತು ಚೀಟಿ = ಬಸ್ಸು/ರೈಲುಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಗುರುತಿಗಾಗಿ ಕೊಡುವ ಕಾಗದ/ಪತ್ರ

ಗುರುತು ಹಿಡಿ = ಗುರುತಿಸು, ಗೊತ್ತು ಮಾಡು.

ಗುರುಮುದ್ರೆ = ಹಿಂದೆ ಮಠಕ್ಕೆ ತಮ್ಮ ದರ್ಶನಕ್ಕೆ ಬಂದವರಿಗೆ ಗುರುಗಳು ತಾಮ್ರದ ಉಂಗುರವನ್ನು ಕಾಯಿಸಿ ಮುದ್ರೆ ಒತ್ತುವುದು.

ಗುರ್ವಾರ = ಗುರುವಾರ, ಬೃಹಸ್ಪತಿವಾರ.

ಗುಲಗಂಜಿ = ಅರ್ಧಕಪ್ಪಾಗಿಯೂ, ಅರ್ಧಕೆಂಪಾಗಿಯೂ ಇರುವ ಸಣ್ಣ ಬೀಜ, ಅತಿಸಣ್ಣ ಪ್ರಮಾಣದಲ್ಲಿ ಚಿನ್ನವನ್ನು ತೂಗಲು ಉಪಯೋಗಿಸುವ ಒಂದು ಅಳತೆಯ ಬೀಜ.

ಗುಲಗಂಜಿ ಗಾತ್ರ = ಅತಿಸಣ್ಣದೆಂಬ

ಹೋಲಿಕೆ.

ಗುಲಾಬಿ = ಮುಳ್ಳುಗಳಿರುವ ಗಿಡ, ನಸಗೆಂಪು ಬಣ್ಣದ ಹೂವು ೨. ಕೇಶ ಶೃಂಗಾರದ ಆಭರಣ.

ಗುಲಾಮ್ಗಿರಿ = ದಾಸ್ಯ, ಅಡಿಯಾಳುತನ.

ಗುಲಾಲು = ಗುಲಾಬಿ ಬಣ್ಣ.

ಗುಲ್ಲು = ಗಲಾಟೆ, ಗದ್ದಲ.

ಗುಸುಗುಸು = ಗುಟ್ಟಿನ ವಿಚಾರ, ಗುಟ್ಟಿನ ವಿಚಾರವನ್ನು ಒಳಗೊಳಗೆ ಎಲ್ಲರೂ ಮಾತಾಡಿಕೊಳ್ಳುವುದು.

ಗುಹೆ = ಗವಿ, ದೊಡ್ಡ ಕಲ್ಲಿನ ಪೊಟರೆ

ಗುಳ = ಲೋಳಿಯಾದ ದ್ರವ, ಹಣ್ಣಿನ ತಿರುಳು, ಅಂಟು, ಸೀಗೇಪುಡಿಯೊಂದಿಗೆ ಅನ್ನದ ಗಂಜಿ, ಅಥವಾ ಕಾಡು ಕಡಲೆ ಸೊಪ್ಪು ಬೆರೆಸಿ ನೀರಿನಿಂದ ಮಾಡಿದ ಲೋಳಿ.

ಗುಳಕ್ಕೆನ್ನಿಸು = ನುಂಗಿಹಾಕು. (ಅಲಂ)

ಗುಳವಮಾವು = ಮರ. ಅಂಥ ಗಟ್ಟಿಯೇನಿಲ್ಲ ಹೆಚ್ಚು ಲಡ್ಡು ಅಲ್ಲ, ಸೊಪ್ಪು ಜಾಸ್ತಿ.

ಗುಳಮುಳಕ = ಗುಂಡುಮುಳುಕನ ಹಕ್ಕಿ, ನೀರಿನಲ್ಲಿ ಮುಳುಗಿ ಏಳುವ ಪಕ್ಷಿ.

ಗುಳ್ಳ = ಗುಂಡಗಿರುವ ಬದನೆಕಾಯಿ, ಬದನೆಕಾಯಿಯ ಒಂದು ವಿಶೇಷತೆ.

ಗುಳಿ = ಅಗೆದು ಮಾಡಿದ ಕುಣಿ, ಹಳ್ಳ, ತಗ್ಗು ೨. ಕೆನ್ನೆಯ ಕುಳಿ.

ಗುಳಿಗೆ = ಮಾತ್ರೆ, ಸಣ್ಣ ಉಂಡೆ, ಸುರುಳಿ.

ಗುಳೆ = ವಲಸೆ, ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದು.

ಗುಳೆಯೇಳು = ಸಾಮೂಹಿಕ ವಲಸೆ ಹೋಗು.

ಗುಳ್ಳೆ = ನೀರಮೇಲಿನ ಅಥವಾ ಚರ್ಮದ ಮೇಲಿನ ಬೊಬ್ಬೆ.

ಗುಳ್ಳೆನರಿ = ಸಣ್ಣ ಜಾತಿಯ ನರಿ ೨. ಕಪಟಿ, ಮೋಸಗಾರ ಪ್ರಾಣಿ.

ಗೂಟ = ಕೋಲು.

ಗೂಡೆ = ಬಿದಿರ ಸಲಕಿನ ಸಣ್ಣ ಬಾಯುಳ್ಳ ದೊಡ್ಡ ಬುಟ್ಟಿ.

ಗೂಢಾರ್ಥ = ಒಳಅರ್ಥ, ಗೋಪ್ಯವಾದ ಅರ್ಥ, ಭಿನ್ನವಾದ ಅರ್ಥ.

ಗೂಡು = ಹಕ್ಕಿಗಳ ವಾಸಸ್ಥಳ, ಪ್ರಾಣಿಗಳಿಗಾಗಿ ನಿರ್ಮಿಸಿದ ಮನೆ (ನಾಯಿಗೂಡು, ಇರುವೆಗೂಡು, ಜೇನುಗೂಡು) ೨. ಗೋಡೆಯಲ್ಲಿನ ಸಣ್ಣ ಬೀರು.

ಗೂನ = ಬಾಗಿದ ಬೆನ್ನಿನವನು. (ಪು)

ಗೂನಿ = ಬಾಗಿದ ಬೆನ್ನಿನವಳು. (ಸ್ತ್ರೀ)

ಗೂನು = ಬಾಗಿದ ಬೆನ್ನು, ಉಬ್ಬಿದ ಬೆನ್ನು.

ಗೂನುಬೆನ್ನು = ಗೂನು.

ಗೂಬೆ = ಗುಮ್ಮ, ಗೂಗೆ, ನಿಶಾಚರ ಪಕ್ಷಿ.

ಗೂಬೆ ಕೂರ್ಸು = ಅಪವಾದ ಹೊರಿಸು. (ಅಲಂ)

ಗೂರು = ಉಬ್ಬಸ, ದಮ್ಮು, ಗೂರಲು.

ಗೂಳೆ = ತಲೆಯಲ್ಲಿರುವ ಕಪ್ಪು ದಪ್ಪ ಹೇನು.

ಗೆಂಚ್ಲು = ಗೊಂಚಲು.

ಗೆಂಟು = ಗಂಟು ೨. ನಿಧಿ.

ಗೆಂಡೆ = ಗಡ್ಡೆ.

ಗೆಂಡೆ ರೋಗ = ಮೂಲವ್ಯಾದಿ,

ಮೊಳೆರೋಗ.

ಗೆಜ್ಜಡಿಕೆ = ಗೆಜ್ಜೆಗಳಿರುವ ಕಂಠಾಭರಣ.

ಗೆಜ್ಜಲು = ಗೆದ್ದಲು, ವರ್ಲೆ.

ಗೆಜ್ಜೆ = ಕಿರುಗಂಟೆ, ಚಿಕ್ಕಗಂಟೆ, ಸಣ್ಣ ಮಣಿಗಳಿರುವ ಕಾಲಿನ ಬೆಳ್ಳಿಗೆಜ್ಜೆ.

ಗೆಜ್ಜೆಕಾಳು = ಬೀಜ, ವೃಷಣ, ತೊರಡು ೨. ಒಣಗಿದ ಕಾಯಿಗಳ ಒಳಗಿರುವ ಬೀಜ.

ಗೆಜ್ಜೆಪಟ್ಟಿ = ಗೆಜ್ಜೆಗಳಿರುವ ಸೊಂಟದ ಪಟ್ಟಿ.

ಗೆಜ್ಜೆಸರ = ಸಣ್ಣಸಣ್ಣ ಗೆಜ್ಜೆಗಳನ್ನು ಚರ್ಮದ ಪಟ್ಟಿ ಅಥವಾ ಸರಪಣಿಗೆ ಸೇರಿಸಿ ಮಾಡಿದ ಎತ್ತುಗಳ ಸರ, ಗಗ್ರ.

ಗೆಡ್ಡೆ = ೧.ಗಡ್ಡೆ, ಕಂದ ಮೂಲ ೨.ಹೆಚ್ಚು ಎತ್ತರವಿಲ್ಲದೆ, ಮೊಂಡು ಮೊಂಡಾ–ಗಿರುವ ವ್ಯಕ್ತಿ.

ಗೆಣತಿ = ಗೆಳತಿ, ಸ್ನೇಹಿತೆ.

ಗೆಣಸು = ಒಂದು ರೀತಿಯ ತಿನ್ನುವ ಗಡ್ಡೆ, ಕಂದಮೂಲ.

ಗೆಣ್ಣು = ಕಬ್ಬು, ಬಿದಿರುಗಳ ಗಂಟು, ದನಕರುಗಳ ಗೊರಸಿನ ಹಿಂಭಾಗದ ಚಿಕ್ಕ ಉಗುರು.

ಗೆಣ್ಣುಅವರೆ = ಪ್ರತಿಗಂಟಿನಲ್ಲೂ ಕಾಯಿ ಬಿಡುವ ಒಂದು ತರಕಾರಿ. ಒಂದು ಜಾತಿಯ ಅವರೆಕಾಯಿ.

ಗೆಣೆಯ = ಗೆಳೆಯ, ಸ್ನೇಹಿತ.

ಗೆದ್‌ಲು = ವರ್ಲೆ, ಗೆದ್ದಲು.

ಗೆಪ್ಪು = ನೆನಪು, ಜ್ಞಾಪಕ.

ಗೆಯ್ಯು = ದುಡಿ, ಕೆಲಸಮಾಡು, ಕಷ್ಟಪಡು.

ಗೆಯ್ತ = ಕೆಲಸ, ಉದ್ಯೋಗ, ದುಡಿಮೆ.

ಗೆಯ್ಮೆ = ಗೆಯ್ತ.

ಗೆರಚು = ಹರಡು, ಚಲ್ಲಾಪಿಲ್ಲಿ ಮಾಡು.

ಗೆರಟ = ಕರಟ, ತೆಂಗಿನ ಚಿಪ್ಪು.

ಗೆರಟದ ಚಿಪ್ಪು = ಕರಟದ ಸೌಟು.

ಗೆರ್ಸಿ = ಅಕ್ಕಿ ಬೀಸಲು ಅಗಲವಾದ ಚಚ್ಚೌಕದ ಬಿದಿರಿನ ತಟ್ಟೆ, ಚೌಕಾಕೃತಿಯ ಮೊರ.

ಗೆರೆ = ಗೀಟು, ರೇಖೆ, ಎಳೆ.

ಗೆರೆಹಾಕು = ೧.ಗೀಟು ಎಳಿ, ೨.ಮಿತಿ ಹಾಕು, ಮೇರೆಹಾಕು.

ಗೆಲ್ಟ = ಗ್ಯೆಲ್ಟ, ಗೆರಟ.

ಗೆಲ್ಲಿಸು = ಗೆಲ್ಲುವಂತೆ ಮಾಡು, ಜಯಿಸುವಂತೆ ಮಾಡು.

ಗೆಲು = ಗೆಲುವು, ಸಂತೋಷ.

ಗೆಲ್ಲು = ೧.ಗೆಲುವು, ಜಯ ೨.ಮರದ ಕೊಂಬೆ, ರೆಂಬೆ, ಟೊಂಗೆ.

ಗೇಣಿ = ಗುತ್ತಿಗೆ, ಒಪ್ಪಂದ, ಭೂಮಿಗುತ್ತಿಗೆ ಹಿಡಿಯುವುದು.

ಗೇಣಿದಾರ = ಗೇಣಿ ಮಾಡುವವನು, ಒಪ್ಪಂದಕ್ಕೊಳಪಟ್ಟವನು.

ಗೇಣು = ಕಿರುಬೆರಳಿನಿಂದ ಹೆಬ್ಬೆರಳಿನ ತುದಿಯವರೆಗಿನ ಅಳತೆ, ಹೆಚ್ಚು ಕಡಿಮೆ ಒಂಭತ್ತು ಅಂಗುಲ.

ಗೇಣುಹಾಕು = ಎರಡು ಕೈ ಹೆಬ್ಬೆರಳಿನ ತುದಿಯನ್ನು ಸೇರಿಸಿ ಉಳಿದ ಬೆರಳುಗಳನ್ನು ಮುಷ್ಟಿಕಟ್ಟಿ ಅಳೆಯುವ ಒಂದು ಅಳತೆ, ಹೆಚ್ಚುಕಡಿಮೆ ಒಂದು ಅಡಿ.

ಗೇರ್‌ಪೀಠ = ಗೇರು ಹಣ್ಣಿನ ತುದಿಯಲ್ಲಿರುವ ಹಸಿ ಬೀಜ.

ಗೇರು = ಗೋಡಂಬಿ, ಗೋಡಂಬಿಯ ಮರ.

ಗೇರ್ಹಣ್ಣು = ಗೋಡಂಬಿಯ ಹಣ್ಣು.

ಗೇರಿಡಾದು = ಯುಗಾದಿ ಹಬ್ಬದಂದು ಕಾಡುಗೇರು ಕಾಯಿಂಯು ಎಣ್ಣೆಂಯುನ್ನು ಹಣೆಗೆ ಇಟ್ಟುಕೊಳ್ಳುವ ಒಂದು ಆಚರಣೆ.

ಗೇರ್ಬೀಜ = ಗೋಡಂಬಿಯ ಬೀಜ.

ಗೇರೆಣ್ಣೆ = ಬೀಜ ತೆಗೆದ ಗೇರು ಪೀಠದ ಸಿಪ್ಪೆ ಕಾಯಿಸಿ ತೆಗೆದ ಎಣ್ಣೆ, ಮನೆಯ ಛಾವಣಿಯ ಮರದ ತೊಲೆ ರೀಪುಗಳಿಗೆ ವರ್ಲೆ ಬರದಂತೆ ಹಚ್ಚುವ ಎಣ್ಣೆ, ದನಗಳಿಗೆ ಮಳೆಗಾಲದಲ್ಲಿ ಕಾಲೊಡಕ ಆದಾಗ ಹಾಕುವ ಎಣ್ಣೆ.

ಗೇಲಿ = ತಮಾಷೆ ೨. ಅವಹೇಳನ.

ಗೈಮೆ = ದುಡಿಮೆ, ಕೆಲಸ.

ಗೈರತ್ತು = ತಾಕತ್ತು, ಶಕ್ತಿ, ಅಹಂಭಾವ.

ಗೈಸು = ಕೆಲಸ ಮಾಡಿಸು, ದುಡಿಸು.

ಗೊಂಕ್ರುಕಪ್ಪೆ = ದೊಡ್ಡ ಜಾತಿಯ ಕಪ್ಪೆ, ಕರ್ಕಶವಾಗಿ ಕೂಗುವ ಕಪ್ಪೆ.

ಗೊಂಚ್ಲು = ಗೊಂಚಲು, ಗುಚ್ಛ.

ಗೊಂಡೆ = ಕುಚ್ಚು, ಜಡೆಯ ತುದಿಗೆ ಹಾಕುವ ಕುಚ್ಚು, ಎತ್ತುಗಳ ಕೋಡಿನ ತುದಿಗೆ ಕಟ್ಟುವ ಬಣ್ಣದ ಕುಚ್ಚು.

ಗೊಂದ್ಲ = ಗಲಿಬಿಲಿ, ಗೊಂದಲ.

ಗೊಂದಿ = ಸಂದಿ, ಇಕ್ಕಟ್ಟು.

ಗೊಂಪು = ಲೋಳಿ, ಅಂಟು, ಕೊಳೆ.

ಗೊಂಯ್ಕ್ ಅಂದ = ಸತ್ತುಹೋದ, ತೀರಿಕೊಂಡ(ಅಲಂ), ಇನ್ನೊಬ್ಬರ ಸಾವನ್ನು ತಾತ್ಸಾರವಾಗಿ ಹೇಳುವುದು.

ಗೊಗ್ರದನಿ = ಕರ್ಕಶ ಧ್ವನಿ, ಒರಟುಧ್ವನಿ.

ಗೊಚ್ಚೆ = ಕೆಸರು, ಉಸುಬು.

ಗೊಜ್ಜು = ಅನ್ನಕ್ಕೆ ಕಲಸಿಕೊಳ್ಳಲು ಮಾಡಿದ ಪದಾರ್ಥ, ಗಟ್ಟಿಸಾರು.

ಗೊಟಕ್ಕನ್ನು = ಸಾಯು, ಪ್ರಾಣಬಿಡು (ಅಲಂ), ಗೊಂಯ್ಕ್ಅಂದ.

ಗೊಟ್ಟ = ದನಕರುಗಳಿಗೆ ಔಷಧವನ್ನು ಕುಡಿಸುವ ಬಿದಿರಿನ ನಳಿಕೆ.

ಗೊಟ್ಗೆ = ವಿಶ್ವಾಸ, ನಂಬಿಕೆ.

ಗೊಡವೆ = ತಂಟೆ, ಉಸಾಬರಿ, ಗೋಜು.

ಗೊಡ್ಡಮಟೆ = ಗೊಡ್ಡು ಅಮಟೆಮರ, ಕಾಯಿ ಬಿಡದ ಅಮಟೆ ಮರ, ಗೊದ್ದಂಟೆ.

ಗೊಡ್ಡನ = ಈಯದ ಹಸು, ಬಂಜೆ ಹಸು.

ಗೊಡ್ಡರಸಿನ = ಕಾಡಿನಲ್ಲಿ ಬೆಳೆಯುವ ಪರಿಮಳ ಹೆಚ್ಚಿಲ್ಲದ ಸಣ್ಣ ಕೊಂಬಿನ ಔಷದೀಯುಕ್ತ ಅರಿಸಿನದ ಗಡ್ಡೆ.

ಗೊಡ್ಡಿ = ಬಂಜೆ, ಮಕ್ಕಳನ್ನು ಹೆರ–ಲಾರದವಳು.

ಗೊಣಗಾಟ = ಅಸಮಾಧಾನದಿಂದ ನಿಧಾನವಾಗಿ ಅಸ್ಪಷ್ಟವಾಗಿ ಮಾತಾಡುವುದು.

ಗೊಣಗಾಡು = ಗೊಣಗಾಟ.

ಗೊಣಗು = ಗೊಣಗಾಟ.

ಗೊಣಪು = ಗೊಂಪು, ಲೋಳೆಯಾದ ಕೊಳೆ, ಅಂಟುಕೊಳೆ.

ಗೊಣಬೆ = ಕುತ್ರೆ, ಬಣವೆ, ಮೆದೆಯ ರಾಶಿ, ಹುಲ್ಲಿನ ರಾಶಿ, ೨.

ಒಣಗಿದ ತರಗೆಲೆಗಳನ್ನು ಹಾಕಿ ಮಾಡಿದ ರಾಶಿ.

ಗೊಣಸು = ಕೊಂಡಿ, ಚಿಲಕ ೨. ಪ್ರಾಣಿಗಳ ಗೊರಸು.

ಗೊಣೆ = ತುದಿ, ಅಂಚು, ಮೊನೆ.

ಗೊಣ್ಸು = ಗೊಣಸು, ಗೊಲಸು, ದಪ್ಪ ಚಿನ್ನದ ಬಳೆ.

ಗೊತ್ತು = ೧.ತಿಳಿದಿದೆ ೨. ಗುರುತು ೩.ನಿಶ್ಚಿತ ಸ್ಥಳ.

ಗೊತ್ತುಗುರಿ = ನಿಶ್ಚಿತ ಉದ್ದೇಶ, ಸ್ಥಿರವಾದ ಉದ್ದೇಶ.

ಗೊತ್ತುಪಡಿಸು = ನಿರ್ಧರಿಸು, ನಿಗಧಿ ಮಾಡು.

ಗೊತ್ತುವಳಿ = ನಿರ್ಣಯ, ಠರಾವು.

ಗೊದಮಟ್ಟೆ = ಕಪ್ಪೆಯ ಮರಿ, ಕಪ್ಪೆಯ ಜೀವನ ಚಕ್ರದಲ್ಲಿ ಒಂದು ಹಂತ, ಬಾಲದ ಕಪ್ಪೆ.

ಗೊದ್ದ = ಕರಿಯ ಬಣ್ಣದ ದೊಡ್ಡ ಇರುವೆ, ಬೆಲ್ಲಕ್ಕೆ ಮುತ್ತುವ ಈ ಇರುವೆ ಸಾಮಾನ್ಯವಾಗಿ ಕಚ್ಚಲ್ಲ.

ಗೊದ್ದಮ್ಮಟೆ = ಗೊಡ್ಡು ಅಮಟೆ, ಕಾಯಿ ಬಿಡದ ಅಮಟೆಮರ, ಗೊದ್ದಂಟೆ.

ಗೊನೆ = ಕೊನೆ, ಹೂವು/ಕಾಯಿ/ಹಣ್ಣು ಇತ್ಯಾದಿಗಳ ಗೊಂಚಲು.

ಗೊನೆ ಕಡಿಯುವುದು = ಹಬ್ಬ ಅಥವಾ ಮದುವೆಗೆಂದು ಬಾಳೆ ಗೊನೆ ಕಡಿದು ಹಣ್ಣು ಮಾಡಲು ಹಾಕುವುದು.

ಗೊಬ್ರ = ಜಾನುವಾರುಗಳ ಸಗಣಿ, ಗಂಜಳ ಮತ್ತು ಕಸಕಡ್ಡಿ, ತಣಬುಲ್ಲುಗಳನ್ನು ಕೊಳೆಸಿದ್ದು.

ಗೊಬ್ರಕೊಕ್ಕೆ = ಗೊಬ್ಬರವನ್ನು ಎಳೆಯುವ/ ಸಡಿಲಗೊಳಿಸುವ ಕುಣಿಕೆ.

ಗೊಬ್ರಗುಂಡಿ = ಗೊಬ್ಬರವನ್ನು ಕೊಳೆಸಲು ಹಾಕಿದ ಗುಂಡಿ.

ಗೊಬ್ರದ ಗಿಡ = ಮೀನು ಶಿಕಾರಿಗೆ ಬಳಸುವ ಒಂದು ಸಸ್ಯ, ಉತ್ತಮ ಜೈವಿಕ ಗೊಬ್ಬರವಾಗುತ್ತದೆ.

ಗೊಬ್ಬೆ = ೧.ನೆರಿಗೆಯನ್ನು ಬಾಳೆ-ಕಾಯಿಯಂತೆ ಮಾಡಿ ಹೊಟ್ಟೆ ಹತ್ತಿರ ಸಿಕ್ಕಿಸಿ ಸೆರಗನ್ನು ಎಡತೋಳಿ-ನಡಿಯಿಂದ ಬಲಹೆಗಲ ಮೇಲೆ ತಂದು ಗಂಟು ಹಾಕಿ ಉಡುವ ಒಂದು ರೀತಿ. ೨.ಗೌಡಿಕೆ ಸೀರೆ, ಮಲೆ ನಾಡಿನ ಸಾಂಪ್ರದಾಯಿಕ ಸೀರೆ ಉಡುವುದು.

ಗೊಬ್ಬೆಕಟ್ಟೋದು = ಗೊಬ್ಬೆ ಹಾಕಿ ಸೀರೆ ಉಡುವುದು.

ಗೊಬ್ಬೆಸೀರೆ = ಗೊಬ್ಬೆ.

ಗೊಬ್ಬೆಸೆರಗು = ಗೊಬ್ಬೆ, ಕುತ್ತಿಗೆ ಬಳಿ ಗಂಟುಕಟ್ಟಿ ಸೆರಗು ಹಾಕುವ ಗೊಬ್ಬೆಸೀರೆ.

ಗೊರಬಿ = ಗೊರವಿ, ಬಸವಿಯಾದವಳು, ಜೀತದ ಹೆಣ್ಣು.

ಗೊರಸು = ಗೊಣಸು, ಪ್ರಾಣಿಗಳ ಕಾಲಿನ ಕೊಳಗು.

ಗೊರೆಹಕ್ಕಿ = ಟ್ರಾಂಟ್ರೆ ಹಕ್ಕಿ.

ಗೊರ್ಕೆ = ನಿದ್ರಿಸುವಾಗ ಮೂಗು/ ಗಂಟಲಿನಿಂದ ಹೊರಡುವ ಧ್ವನಿ.

ಗೊರ್ಟೆ = ಬೀಜ, ಮಾವಿನ ಹಣ್ಣಿನ ಓಟೆ,

ಗೊರಟು.

ಗೊರ್ಬು = ಗೊರಬು, ಮಳೆಯಿಂದ ರಕ್ಷಣೆ ಪಡೆಯಲು ತಾಳೆ ಮರದ ಎಲೆಯಿಂದ ಮಾಡಿದ ಗೋಲಾಕಾರದ ಛತ್ರಿ.

ಗೊಲಸು = ೧.ಗೊರಸು ೨.ದಪ್ಪ ಚಿನ್ನದ ಬಳೆ.

ಗೊಲ್ಲ = ದನಗಾಹಿ, ಒಂದು ಸಮುದಾಯ, ಗೊಲ್ಲರವನು.

ಗೊಲ್ಬು = ಗೊರ್ಬು.

ಗೊಲ್ಬುಹಾಕು = ಕೈ ಚೋಟು ಹಾಕುವುದು, ಕೈಬೆರಳನ್ನು ಮುಷ್ಟಿಕಟ್ಟಿ ಮೇಲೆಕೆಳಗೆ ಅಲ್ಲಾಡಿಸಿ ಬೇರೆಯವರನ್ನು ಹೀಯಾಳಿಸು ವುದು.

ಗೊಲ್ಟೆ ಹೂ = ಗೊರಟೆ ಹೂ, ಒಂದು ಜಾತಿಯ ಹೂವು.

ಗೊಳಕ್‌ಅನ್ಸು = ೧.ನುಂಗಿಹಾಕು ೨.ಮೋಸಮಾಡು, ಲಪ ಟಾಯಿಸು (ಅಲಂ).

ಗೋಂಕ್ರಕಪ್ಪೆ = ದೊಡ್ಡ ಗಾತ್ರದ ಕಪ್ಪೆ.

ಗೋಂದು = ಅಂಟು.

ಗೋ = ಗೋವು, ಜಾನುವಾರು.

ಗೋಗರಿ = ಅಳು, ದೈನ್ಯದಿಂದ ಬೇಡಿಕೊ.

ಗೋಗಲ್ಲು = ದನಗಳು ಮೈ ಉಜ್ಜಿಕೊಳ್ಳಲು ನೆಟ್ಟಿರುವ ಕಲ್ಲು, ಗೋವುಕಲ್ಲು.

ಗೋಚು = ಗೋರು, ಬಾಚು, ಕಸಿದು-ಕೊಳ್ಳು, ದೋಚು.

ಗೋಜಿಗೆ = ಗೊಡವೆಗೆ, ಸುದ್ದಿಗೆ, ಸಹವಾಸಕ್ಕೆ.

ಗೋಜು = ೧.ಸಹವಾಸ, ಗೊಡವೆ ೨.ಗೊಂದಲ, ಗೋಜಲು.

ಗೋಜ್ಲು = ತೊಡಕು, ಗಂಟು.

ಗೋಟಡಕೆ = ಹಣ್ಣಾದ ಬಲಿತ ಗಟ್ಟಿ ಅಡಕೆ.

ಗೋಟಾಗು = ಬಲಿತು ಹಣ್ಣಾಗಿ ಗಟ್ಟಿಯಾಗು.

ಗೋಟು = ೧.ಗೊರಟು, ೨.ಮೊರದ ಮೂಲೆ, ೩. ಗೋಟಡಕೆ.

ಗೋಡ್ಸಾಲು ಮುಂಡಿಗೆ = ಗೋಡೆಗೆ ಅಂಟಿಕೊಂಡಂತೆ/ಗೋಡೆಯ ಮೇಲೆ ಅರ್ಧಕಾಣುವ ಮುಂಡಿಗೆ ಕಂಬ.

ಗೋಡುಮಣ್ಣು = ನೀರಿನಿಂದ ತೆಗೆದ ಹೂಳುಮಣ್ಣು.

ಗೋಡೆ = ಕಲ್ಲು, ಮಣ್ಣು, ಇಟ್ಟಿಗೆಗಳಿಂದ ಕಟ್ಟಿದ ರಚನೆ.

ಗೋಣಗುಟ್ಟು = ಮನಸ್ಸಲ್ಲೇ ಬೈದುಕೊಳ್ಳು ಗುಜುಗುಜು ಮಾತಾಡು.

ಗೋಣಿ = ಸೆಣಬಿನ ನಾರಿನಿಂದ ಮಾಡಿದ ಚೀಲ.

ಗೋಣಿಚೀಲ = ಗೋಣಿ.

ಗೋಣಿತಾಟು = ಹರಿದ ಗೋಣಿ, ಗೋಣಿತುಂಡು, ಗೋಣಿಯ ಹಾಸು.

ಗೋಣಿ ತುಂಡು =ಕಾಲೊರೆಸಲು ಹಾಕುವ ತುಂಡುಗೋಣಿ.

ಗೋಣಿಪಟ್ಟೆ = ಗೋಣಿ ಮಾಡುವ ಹಗ್ಗ/ ದಾರ, ಸುತ್ತಲಿದಾರಕ್ಕಿಂತ ತೆಳುವಾದುದು.

ಗೋಣು = ೧. ಕತ್ತು, ಕೊರಳು, ೨. ಗ್ವಣೆ, ಅಂಚು.

ಗೋಣುಮುರಿ = ೧. ಕೊರಳು

ತುಂಡಾಗು, ೨. ಸತ್ತುಹೋಗು, ಎಚ್ಚರ ತಪ್ಪು.

ಗೋತಾ = ಪಲ್ಟಿ, ಲಾಗ, ೨. ಸೋಲು.

ಗೊತಾಹೊಡಿ =ಸೋಲು ಅನುಭವಿಸು, ಪಲ್ಟಿಹೊಡಿ, ಪರೀಕ್ಷೆಯಲ್ಲಿ ನಪಾಸಾಗುವುದು. (ಅಲಂ)

ಗೋತ್ರ = ವಂಶ, ಕುಲ, ಬಳಿ.

ಗೋದಣ = ಕೊಟ್ಟಿಗೆಯಲ್ಲಿ ದನಗಳಿಗೆ ಮೇವು ಹಾಕುವ ಸ್ಥಳ, ಗೋದಳಿಗಿ

ಗೋದಳ್ಗಿ = ಗೋದಣ, ದನಗಳ ಮೇವು ಸಗಣಿ/ಗಂಜಲದೊಂದಿಗೆ ಬೆರೆಯದಂತೆ ಅಡ್ಡ ಕಟ್ಟಿದ ಮರದ ಹಲಗೆ.

ಗೋಧಿ = ಒಂದು ಬಗೆಯ ಆಹಾರ ಧಾನ್ಯ, ಕಾಳು, ಪಿಷ್ಟಪದಾರ್ಥ.

ಗೋಧೂಳಿ = ಸಂಜೆಯ ಹೊತ್ತು, ಸಂಧ್ಯಾಕಾಲ.

ಗೋಧೂಳಿ ಲಗ್ನ = ಹಸುಗಳು ಕೊಟ್ಟಿಗೆಗೆ ಬರುವ ಹೊತ್ತಿನಲ್ಲಿ ಮಾಡುವ ಮದುವೆ.

ಗೋಪಾಳ = ಭಿಕ್ಷಾವೃತ್ತಿ, ಭಿಕ್ಷಾಟನೆ.

ಗೋಪಿ = ಒಂದು ಬಗೆಯ ಬಣ್ಣ.

ಗೋಪುರ = ದೇವಸ್ಥಾನದ ಹೆಬ್ಬಾಗಿಲ ಮೇಲಿರುವ ಅಂತಸ್ತುಗಳ ಶಿಖರ.

ಗೋಪೂಜೆ = ದೀಪಾವಳಿಯಲ್ಲಿ ಗೋವು-ಗಳನ್ನು ಪೂಜಿಸುವ ಕ್ರಮ.

ಗೋಮಯ = ಹಸುವಿನ ಸಗಣಿ.

ಗೋಮಯ ಹಾಕು = ಹಸುವಿನ ಸಗಣಿ ನೀರಿನಿಂದ ಶುದ್ಧೀಕರಿಸುವುದು.

ಗೋಮಾಳ = ದನಕರುಗಳು ಮೇಯುವ ಹುಲ್ಲುಗಾವಲು.

ಗೋಮಾಳೆ = ಮನುಷ್ಯರ ಗಂಟಲಿನ ಮಧ್ಯದ ಮೂಳೆ.

ಗೋಮುಖ = ೧. ಜಾನುವಾರಗಳ ಮುಖ. ೨. ಚೂಪಾದ ಮೂತಿ ಮತ್ತು ಮೇಲೆ ಹಿಡಿಕೆಯಿರುವ ದ್ರವ ಪದಾರ್ಥಗಳನ್ನು ಬಡಿಸುವ ಪಾತ್ರೆ

ಗೋಮೂತ್ರ = ಹಸುವಿನ ಮೂತ್ರ.

ಗೋಮೇದಿಕ = ನವರತ್ನಗಳಲ್ಲಿ ಒಂದು, ಒಂದು ಬಗೆಯ ರತ್ನ.

ಗೋರಿ = ಸಾಬರು ಹೆಣವನ್ನು ಹೂಳುವ ಸ್ಥಳ, ಮುಸಲ್ಮಾನರ ಸಮಾಧಿ.

ಗೋರಿಕಲ್ಲು = ಚೂಪಾದ ಕಲ್ಲು.

ಗೋರು = ಕೆರೆದು ತೆಗೆ, ಮಣ್ಣುಗೋರು, ಕಸಗೋರು.

ಗೋರುಮಣೆ = ಗೋರ್ಮಣೆ, ಕಣವನ್ನು ಮಟ್ಟಮಾಡಲು ಮತ್ತು ಕಣದಲ್ಲಿರುವ ಬತ್ತವನ್ನು ಗೋರಲು/ಒಟ್ಟು ಮಾಡಲು ಬಳಸುವ ಮರದ ಹಲಗೆ.

ಗೋಲಕ = ಕಾಣಿಕೆ ಹುಂಡಿ, ಮುಚ್ಚಳದಲ್ಲಿ ರಂಧ್ರವಿರುವ ಡಬ್ಬಿ.

ಗೋಲಿ = ೧.ದುಂಡಗಿರುವ ವಸ್ತು, ೨.ಮಕ್ಕಳು ಆಡುವ ಗಾಜಿನ ಆಟಿಕೆ.

ಗೋವಿಂದ = ತಿರುಪತಿ ತಿಮ್ಮಪ್ಪ, ಶ್ರೀ ಕೃಷ್ಣ, ಹಿಂದೂ ದೇವರು, ನಾಮಧಾರಿ ಒಕ್ಕಲಿಗರ

ಕುಲದೇವರು.

ಗೋವಿಂದಮಾಡು = ಮಕ್ಕಳಿಗೆ ಸ್ನಾನ ಮಾಡಲು ಹೇಳುವುದು ೨. ಭಜನೆ ಮಾಡಲು ಹೇಳುವುದು.

ಗೋವಿಂದ್ನ ಪಾದ ಸೇರುದ್ರು = ಇಲ್ಲ-ವಾದರು, ಮರಣ ಹೊಂದಿದರು.(ಅಲಂ)

ಗೋವು = ಗೋ, ಹಸು, ದನ.

ಗೋಷ = ಬುರುಕಿ, ಮುಸುಕು, ಮುಸಲ್ಮಾನ ಹೆಂಗಸರು ಹಾಕಿಕೊಳ್ಳುವ ಬುರ್ಕಾ.

ಗೋಸುಂಬೆ = ಹಾವುರಾಣಿ, ಊಸರವಳ್ಳಿ, ಓತಿಕ್ಯಾತ ೨. ಮನಬಂದಂತೆ ಮಾತು ಬದಲಾಯಿಸುವುದು. (ಅಲಂ)

ಗೋಳಾಟ = ಅಳುವುದು, ದುಃಖಿಸುವುದು, ತೊಂದರೆ ಅನುಭವಿಸುವುದು.

ಗೋಳಾಡ್ಸು = ಕಾಡು, ಪೀಡಿಸು, ತೊಂದರೆ ಕೊಡು.

ಗೋಳಾಡು = ದುಃಖಿಸು, ಸಂಕಟಪಡು.

ಗೋಳಿಮರ = ಗೊಬ್ಬಳಿ ಮರ, ಬಸರಿ ಮರದಂತೆ ಬೇರೆ ಮರದ ಆಶ್ರಯದಲ್ಲಿ ಬೆಳೆದು ಆ ಮರವನ್ನೇ ಸಾಯಿಸುತ್ತದೆ.

ಗೋಳು = ಅಳು, ದುಃಖ, ತೊಂದರೆ, ಶೋಕ, ರೋಧನ.

ಗೋಳುಗುಟ್ಸು = ಗೋಳಾಡ್ಸು.

ಗೋಳುಹುಯ್ಯು = ಗೋಳಾಡ್ಸು.

ಗೌಜು = ಗವುಜು, ಗದ್ದಲ, ಗಲಾಟೆ.

ಗೌಡ = ಊರಿನ ಮುಖ್ಯಸ್ಥ, ಒಕ್ಕಲಿಗ.

ಗೌಡತಿ = ಗೌಡನ ಹೆಂಡತಿ, ಹೆಗ್ಗಡತಿ.

ಗೌಡಿಕೆ = ಗ್ರಾಮಾಧಿಪತ್ಯ.

ಗೌಣ = ಅಮುಖ್ಯ, ಪ್ರಧಾನವಲ್ಲದ.

ಗೌರಿ = ಶಿವನ ಮಡದಿ, ಪಾರ್ವತಿ, ದೇವತೆ.

ಗೌರಿಮಗೆಯದು = ನೀರನ್ನು ಪೂಜಿಸುವುದು.

ಗೌರಿ ಸಣ್ಣ = ಒಂದು ಜಾತಿಯ ಅಕ್ಕಿ.

ಗೌಲು = ಮೀನು/ಮಾಂಸಾಹಾರಗಳ ಹಸಿವಾಸನೆ.

ಗೌಳಿಗ = ದನ ಕಾಯುವವನು.

ಗ್ವಲ್ಟ = ಗೆರಟ.

ಗ್ರಹ = ಗರ, ಭೂತ, ಪಿಶಾಚಿ.

ಗ್ವಣೆ = ತುದಿ, ಚೂಪಾದ ಅಂಚು.

ಗ್ವಂಬೆ = ಗೊಂಬೆ, ವಿಗ್ರಹ.

ಗ್ವಂಬೆ ಆಟ = ಸೂತ್ರದ ಗೊಂಬೆಯನ್ನು ಆಡಿಸುವುದು.

ಗ್ರಾಚಾರ = ದುರಾದೃಷ್ಟ, ವಿಧಿ, ಗ್ರಹಚಾರ.

ಗ್ರಾಣ = ಸೂರ್ಯ/ ಚಂದ್ರನಿಗೆ ಕತ್ತಲು ಅವರಿಸುವುದು, ಗ್ರಹಣ.

ಗ್ರಾಮ = ಹಳ್ಳಿ, ಸಣ್ಣ ಊರು.

ಗ್ವಾಗರಿ = ಗೋಗರಿ, ಅಂಗಲಾಚು, ಬೇಡಿಕೊಳ್ಳು.

ಗ್ವಾಡ = ನೀರಿನ ಬುಡದಲ್ಲಿರುವ ಮಣ್ಣು, ದ್ರವಪದಾರ್ಥದ ಅಡಿಯಿರುವ ಚರಟ.

ಗ್ವಾಡೆ = ಗೋಡೆ.

ಗ್ವಾತ = ಹಣ್ಣಾಗಿ ಕೊಳೆತು ನಾರುವುದು.

ಗ್ವಾರೆ = ದಡಾರ, ಮೈತುಂಬಾ ಏಳುವ ಬೆವರು ಸಾಲೆಯಂತ ಗುಳ್ಳೆ, ಒಂದು ಅಂಟುವ ಚರ್ಮರೋಗ.

ಘ

ಘಂಟೆ = ಗಂಟೆ, ಸಮಯ.

ಘಟನೆ = ಸಂಭವ, ಸಂಭವಿಸು.

ಘಟಾನುಘಟಿ = ತುಂಬಾ ಗಟ್ಟಿಗ.

ಘಟ್ಟ = ಬೆಟ್ಟದ ಇಳಿಜಾರು ಪ್ರದೇಶ, ಕಣಿವೆ ೨. ಹಂತ, ಮಜಲು.

ಘಟ್ಟದವ್ಞ = ಬೆಟ್ಟ/ ಪರ್ವತದ ಕೆಳಗೆ ವಾಸಿಸುವವರು.

ಘಟ್ಟಿ = ಗಟ್ಟಿ, ಘನ.

ಘಟ್ಟಿಗ = ಗಟ್ಟಿಗ, ಶೂರ.

ಘನ = ಶ್ರೇಷ್ಠ, ಉತ್ತಮ, ಚೆನ್ನಾದ.

ಘನಮಾಡು = ಹಸನುಮಾಡು, ಅಕ್ಕಿ ಘನಮಾಡು

ಘನಂದಾರಿ = ಘನವಾದ, ಶ್ರೇಷ್ಠವಾದ, ೨.ದೊಡ್ಡ ಕೆಲಸವೆಂದು ವ್ಯಂಗ್ಯಾರ್ಥದಲ್ಲಿ ಹೇಳುವುದು. (ಅಲಂ)

ಘಮಗುಡು = ಬಹಳವಾಗಿ ಸುವಾಸನೆ ಬೀರು.

ಘಾಟಿ = ಕಿಲಾಡಿ, ಪಟಿಂಗ ೨. ಕಣಿವೆ, ಘಟ್ಟ, ಬೆಟ್ಟ ೩. ತಿರುವುದಾರಿ.

ಘಾಟು = ತೀಕ್ಷ್ಣವಾದ ವಾಸನೆ.

ಘಾತ = ಮೋಸ, ಅಪಘಾತ, ಅನಾಹುತ ೨. ಆಳ, ಆಳವಾಗಿ.

ಘಾತ್ಕ = ಆಕಸ್ಮಿಕ, ಘಾತಕ.

ಘೀಳಿಡು = ಕಿರುಚು, ಅರಚು, ಚೀರು.

ಘೋರ = ಉಗ್ರವಾದ, ಭಯಂಕರವಾದ.

ಘೋರ = ಭಯಂಕರ, ಭಯಾನಕ.

ಘೋಷ = ಸಾರುವಿಕೆ, ಕೂಗಿ ಹೇಳುವುದು, ಘೋಷಣೆ.

ಚ

ಚಂಗನೆ = ಪಕ್ಕನೆ, ಇದ್ದಕ್ಕಿದ್ದಂತೆ, ತಕ್ಷಣ.

ಚಂಗು = ಹಾರು, ನೆಗೆ.

ಚಂಗೂಲಿ = ದಿನಗೂಲಿ, ದಿನಗೂಲಿ ಆಳು.

ಚಂಚಕಾರ = ಸಂಚಕಾರ, ಕೊಟ್ಟಿದ್ದನ್ನು ವಾಪಸು ಕೊಡದಿರುವುದು.

ಚಂಚಲ = ಚಲಿಸುವ, ಚಪಲ ಸ್ವಭಾವದ, ಅಚಲವಲ್ಲದ.

ಚಂಡಾಳ = ಚಾಳಿಗೆಟ್ಟವನು, ಅವಿವೇಕಿ, ಕ್ರೂರಿ.

ಚಂಡಿ = ಹಟವಾರಿ, ಮೊಂಡಿ, ಹಟಮಾರಿ ಹೆಣ್ಣು.

ಚಂಡಿಹಿಡಿ = ಹಟಮಾಡು, ಮೊಂಡುತನಮಾಡು.

ಚಂಡು = ಸಿಂಬೆ, ಮುದ್ದೆಮಾಡಿದ ಬಟ್ಟೆ

ಚಂಡೆ = ಕೋಲಿನಿಂದ ಬಾರಿಸುವ ಚರ್ಮವಾದ್ಯ, ಯಕ್ಷಗಾನದಲ್ಲಿ ಬಳಸುತ್ತಾರೆ.

ಚಂದ = ಅಂದ, ಚೆಲುವು.

ಚಂದಾ = ವಂತಿಗೆ, ಶುಲ್ಕ.

ಚಂದಾಮಾಮ = ಚಂದ್ರ, ಶಶಿ, ಚಂದಿರ, ಮಕ್ಕಳಮಾತಿನಲ್ಲಿ ಚಂದ್ರ (ಅಲಂ).

ಚಂದ್ರ = ೧.ಚಂದಾಮಾಮ ೨. ಕುಂಕುಮ.

ಚಂದ್ರಪ್ಯಾರ್ಲೆ = ಕೆಂಪು ತಿರುಳಿರುವ ಸೀಬೆಹಣ್ಣು, ಕೆಂಪು ಪೇರಲೆಹಣ್ಣು.

ಚಂದ್ರಬಕ್ಕೆ = ಕೆಂಪು ಮಿಶ್ರಿತ ಹಳದಿ ಬಣ್ಣದ ಹಲಸು /ಹಲಸಿನ ಸೋಳೆ.

ಚಂದ್ರಬಾಳೆ = ಕೆಂಪು ಸಿಪ್ಪೆಯ ಬಾಳೆ.

ಚಂದ್ರಮುರ್ಗು = ಅರ್ಧಚಂದ್ರಾಕಾರದ ಕಿವಿಯ ಆಭರಣ.

ಚಂದ್ರಸಾಲೆ = ದೇವಸ್ಥಾನದ ಸುತ್ತಲಿನ ಆವರಣ.

ಚಂದ್ರಿಕನ ಕೊರಡು = ಕೆಂಪು ಗಂಧದ ತುಂಡು, ರಕ್ತವರ್ಣದ ಗಂಧದ ಕಟ್ಟಿಗೆ.

ಚಂಬ್ಗಿ = ತಂಬಿಗೆ, ಒಂದು ಪಾತ್ರೆ.

ಚಂಬು = ಚಂಬ್ಗಿ.

ಚಕಮಕಿ = ಬೆಂಕಿ ಹೊತ್ತಿಸಲು ಬೇಕಾಗುವ ಬೆಣಚುಕಲ್ಲು ೨. ಸಣ್ಣ ಪುಟ್ಟ ಜಗಳ (ಅಲಂ).

ಚಕ್‌ಬೊಳ್ಳು = ಏಡಿಯ ಸಣ್ಣ ಕಾಲುಗಳು (ಎಂಟು), ಚಕ್ಕೊಂಬು.

ಚಕ್ಕಂತ = ಇದ್ದಕ್ಕಿದ್ದಂತೆ.

ಚಕ್ಕಂದ = ವಿನೋದ, ವಿಲಾಸ, ಉಲ್ಲಾಸ.

ಚಕ್ಕಳ = ಚಮ್ಮಡ, ಚರ್ಮ, ತೊಗಲು, ಹೊಪ್ಪಳೆ.

ಚಕಾರ = ಮರುಮಾತು.

ಚಕ್ಕಾಲು ಪಕ್ಕಾಲು = ಚಕ್ಕಳಮಟ್ಟೆ.

ಚಕ್ಕಳ ಮಕ್ಕಳ = ಚಕ್ಕಳಮಟ್ಟೆ.

ಚಕ್ಕಾಲ್ಮಂಡಿ = ಚಕ್ಕಳಮಟ್ಟೆ.

ಚಕಿತ = ಆಶ್ಚರ್ಯ, ಚಕಿತ, ವಿಸ್ಮಯ.

ಚಕ್ಕು = ಚಕ್ಕಾಗು.

ಚಕ್ಕುಬಂದಿ = ಕ್ಷೇತ್ರಗಳ ಸೀಮಾ ವಿವರ.

ಚಕ್ಕಾಗು = ಮುಕ್ಕಾಗು, ಪಾತ್ರೆಗಳು ತಗ್ಗಿ ಹೋಗುವುದು.

ಚಕ್ಕುಲಿ = ಒಂದು ಬಗೆಯ ತಿಂಡಿ.

ಚಕ್ಕುಲಿ ಒರಳು = ಚಕ್ಕುಲಿ ಮಾಡುವ ಲೋಹ/ಮರದಸಾಧನ.

ಚಕ್ಕೆ = ೧.ದಾಲ್ಚಿನ್ನಿ ೨.ಮರದ ಚೂರು ೩.ಸಪೂರ, ನೀಳ ೪.ಒಡೆದ ಸೌದೆ.

ಚಕ್ಕೊಂಬು = ಏಡಿಯ ಕಾಲಿನ ಸಣ್ಣ ಕೊಂಬುಗಳು, ಚಕ್‌ಬೊಳ್ಳು, ಚಿಕ್ಕ ಬೆರಳು.

ಚಕ್ಕೋತ = ಕಿತ್ತಳೆ ಜಾತಿಯ, ಮೂಸುಂಬಿಯಂತಹ ದೊಡ್ಡ ಹಣ್ಣು.

ಚಕ್ರ = ಗಾಲಿ, ವಿಷ್ಣುವಿನ ಕೈಯ ಆಯುಧ.

ಚಕ್ರದ ಪಟ್ಟೆ = ಗಾಡಿಯ ಗುಂಬ ಸವೆಯದಿರಲೆಂದು ಹಾಕುವ ಕಬ್ಬಿಣದ ಬಳೆ.

ಚಕ್ರಬಡ್ಡಿ = ಬಡ್ಡಿಯ ಮೇಲಿನ ಬಡ್ಡಿ.

ಚಕ್ರಮೊಗ್ಗು = ಒಂದು ಮಸಾಲೆ ಪದಾರ್ಥ, ಪರಿಮಳಯುಕ್ತ.

ಚಕ್ರಮುನಿ = ಒಂದು ಬಗೆಯ ಔಷಧಿಯ ಸೊಪ್ಪು, ತರಕಾರಿಯಾಗಿಯೂ ಬಳಕೆ.

ಚಕ್ಲು ಬಕ್ಲು = ಚಕ್ಕಳಮಟ್ಟೆ.

ಚಕ್ಳ = ಚಕ್ಕಳ.

ಚಗಟೆ = ಒಂದು ಬಗೆಯ ಸೊಪ್ಪು, ತರಕಾರಿಯಾಗಿ ಬಳಕೆ.

ಚಗಳಿ = ಗಿಡಮರಗಳ ಮೇಲೆ ಗೂಡು ಕಟ್ಟುವ ಕೆಂಜಿರುವೆ.

ಚಗಳಿಕೊಟ್ಟೆ = ಚಗಳಿಯ ಗೂಡು.

ಚಗಳಿ ಚಟ್ನಿ = ಮೊರಕ್ಕೆ ಉಪ್ಪು ಹಾಕಿ ಕೆಂಜಿರುವೆ (ಚಗಳಿ) ಗೂಡನ್ನು ಅದರ ಮೇಲೆ ಹಾಕಿ ಇರುವೆಗಳನ್ನು ಸಾಯಿಸಿ, ಉಪ್ಪು ಖಾರ ಹಾಕಿ ಮಾಡಿದ ಚಟ್ನಿ.

ಚಚ್ಚು = ಹೊಡೆ, ಬಡಿ, ಕುಟ್ಟು.

ಚಜ್ಜ = ಕಿಟಕಿ ಬಾಗಿಲುಗಳಿಂದ ಹೊರಚಾಚಿಕೊಂಡಿರುವ ಛಾವಣಿ.

ಚಟ = ಗೀಳು, ತೆವಲು, ತೀವ್ರಾಸಕ್ತಿ, ಚಾಳಿ.

ಚಟಗಿ = ಮಣ್ಣಿನ ಕುಡಿಕೆ (ಎಣ್ಣೆಚಟಗಿ, ಕಾಪಿ ಚಟಗಿ).

ಚಟಗುಟ್ಟು = ಚಟಚಟ ಎಂದು ಶಬ್ಧವಾಗು.

ಚಟಾಕು = ಒಂದು ಅಳತೆ, ಒಂದು ಪಾವಿನ ಕಾಲುಭಾಗ.

ಚಟ್ಟ = ಹೆಣ ಹೊರಲು ಉಪಯೋಗಿಸುವ ಬಿದಿರಿನ ಏಣಿಯಂತಹ ಹಾಸಿಗೆ, ಸಿದಿಗೆ.

ಚಟ್ಟಕ್ಕಿ = ಸಾರವಿಲ್ಲದ ಅಕ್ಕಿ.

ಚಟ್ಬತ್ತ = ಅಕ್ಕಿಯಿಲ್ಲದ ಬತ್ತ.

ಚಟ್ನಿ = ನಂಚಿಕೊಳ್ಳುವ ವ್ಯಂಜನ/ಪದಾರ್ಥ.

ಚಟ್ಟು = ಹುರುಳಿಲ್ಲದ್ದು, ಬರಿಯ ಸಿಪ್ಪೆ.

ಚಡಪಡ್ಸು = ಚಡಪಡಿಸು, ಒದ್ದಾಡು.

ಚಡಾವು = ಮರದ ಪಾದರಕ್ಷೆ, ಚಪ್ಪಲಿ, ಮೆಟ್ಟು.

ಚಡಿ = ತೆಳ್ಳಗೆ ನೀಳವಾದ ಕೋಲು, ಬೆತ್ತ ೨. ತೆಣೆ, ಕಿರುಜಗಲಿ ೩. ಪದರ.

ಚಡ್ಡಿ = ಮಂಡಿಯತನಕದ ಉಡುಗೆ, ಅರೆ ಚಲ್ಲಣ.

ಚಣ = ಕ್ಷಣ, ಸೆಕೆಂಡಿನ ಐದನೆಯ ನಾಲ್ಕು ಭಾಗ.

ಚತುರ = ಕುಶಲ, ದಕ್ಷ, ಜಾಣ.

ಚತುರ್ಥಿ = ನಾಲ್ಕನೆಯ ದಿನ, ಚೌತಿ.

ಚತುರೆ = ಕುಶಲೆ, ಬುದ್ಧಿವಂತೆ, ಜಾಣೆ.

ಚನ್ನೆಮಣೆ = ಹದಿನಾಲ್ಕು ಗುಳಿಗಳಿರುವ ಮರದ ಆಟದ ವಸ್ತು, ಅಳಿಗುಳಿ ಮಣೆ.

ಚಪಲ = ತೀವ್ರ ಆಸೆ, ವಿಶೇಷಾಸಕ್ತಿ.

ಚಪ್ಪಟೆ = ಸಮತಲ, ಸಪಾಟು, ಸಮತಟ್ಟು.

ಚಪ್ಪಡಿ = ಅಗಲ ಮಟ್ಟವಾಗಿರುವ ಕಲ್ಲು, ಹಾಸುಗಲ್ಲು.

ಚಪ್ಪನ್‌ಚೂರು = ಚೂರುಚೂರು, ಚಿಂದಿ–ಚಿಂದಿ.

ಚಪ್ಪರದ ಹಣ = ಪಾಲು ಮುಖಂಡರು (ಹಳ್ಳಿ ಮುಖಂಡರು) ಅವರವರ ಗ್ರಾಮದಲ್ಲಿ ಎಲ್ಲಿ ಮದುವೆ ನಡೆದರೂ ಅಲ್ಲಿಗೆ ಹೋಗಿ ವಸೂಲಿ ಮಾಡುತ್ತಿದ್ದ ನಾಲ್ಕು ರೂಪಾಯಿಗಳು.

ಚಪ್ಪರ = ಹಂದರ, ಛಾವಣಿ, ಮೇಲಿನ ಚೌಕಟ್ಟು.

ಚಪ್ರ = ಚಪ್ಪರ.

ಚಪ್ಪರಿಸು = ಸಶಬ್ಧವಾಗಿ ಸವಿ, ತಿನ್ನು, ಚೀಪು.

ಚಪ್ಪಾಳೆ = ಕರತಾಡನ, ಕೈತಟ್ಟುವಿಕೆ.

ಚಪ್ಪೆ = ಸಪ್ಪೆ, ಉಪ್ಪಿಲ್ಲದಿರುವುದು, ರುಚಿ–ಯಿಲ್ಲದಿರುವುದು.

ಚಪ್ಪೆಚಾಳು = ಉಪ್ಪನ್ನು ಹಾಕಿಲ್ಲವೆಂದು ಹೇಳುವುದು. ಉಪ್ಪಿಲ್ಲದಿರುವ ಅಡಿಗೆ.

ಚಪ್ಪೆದಾರ = ಹಸಿನೂಲು.

ಚಪ್ಪೆ ನೀರು = ಆವಿಯಿಂದ ಪದಾರ್ಥ ಬೇಯಿಸಿದ ನಂತರ ಅಡಿಯಲ್ಲಿ ಉಳಿದ ನೀರು.

ಚಪ್ಪು = ಹರಿದ, ಚೂರಾದ.

ಚಪ್ಪು ಚಪ್ಪು = ಚೂರು ಚೂರಾದ.

ಚಪ್ಪುಪ್ಪ = ಬೆಣ್ಣೆಗೆ ಉಪ್ಪು ಅಥವಾ ಇನ್ನೇನನ್ನೂ ಹಾಕದೆ ಕಾಯಿಸಿದ ತುಪ್ಪ.

ಚಮಕು = ಹೊಳಪು, ಹೊಳೆತ.

ಚಮಚ = ಕಿರುಸೌಟು, ೨. ಚೇಲ, ಬಾಲಬಡುಕ. (ಅಲಂ)

ಚಮ್ಡ = ಚರ್ಮ, ತೊಗಲು, ಚಮಡ.

ಚಮ್ಮಟಿಕೆ = ವಸ್ತುಗಳನ್ನು ಹಿಡಿದುಕೊಳ್ಳಲು ಬಳಸುವ ಇಕ್ಕಳ ೨. ಕಮ್ಮಾರನ ದೊಡ್ಡ ಸುತ್ತಿಗೆ.

ಚಮ್ಮಾರ = ಸಮಗಾರ, ಚರ್ಮದ ಕೆಲಸದವನು.

ಚಯ = ಸುಳಿವು, ೨. ರೂಪು, ಮೈಬಣ್ಣ (೧. ಮಳೆಯ ಚಯ, ೨. ಬಿಳಿಚಯ)

ಚಯರೋಗ = ಕ್ಷಯರೋಗ, ಶ್ವಾಸ ಕೋಶದ ಸೋಂಕು.

ಚರಕ = ನೂಲುವ ರಾಟೆ.

ಚರಟ = ಗಸಿ, ತದಿ, ರಸ ತೆಗೆದ ನಂತರ ಉಳಿದ ತೊಗಟೆ.

ಚರಂಡಿ = ಗಟಾರ, ನೀರು ಹರಿಯುವ ಮೋರಿ.

ಚರಸಾಲ = ಚರಾಸ್ತಿ ಆಧಾರಿತ ಸಾಲ.

ಚರಾಸ್ತಿ = ಸ್ಥಳದಿಂದ ಸ್ಥಳಕ್ಕೆ ಸಾಗಿಸ ಬಹುದಾದ ಆಸ್ತಿ.

ಚರಿ = ಸಣ್ಣ ಹಗ್ಗ.

ಚರಿಹೊಸಿ = ಸಣ್ಣ ಹಗ್ಗ ತಯಾರಿಸು.

ಚರ್ಟಿ = ಚರಟ.

ಚರ್ಬಿ = ಕೊಬ್ಬು, ನೆಣ.

ಚರ್ಗಿ = ತಪ್ಪಲೆಯಂತಹ ಪಾತ್ರೆ.

ಚರು = ದೇವರಿಗೆ ನೈವೇದ್ಯದ/ಆಹುತಿಯ ಅನ್ನ.

ಚರುಕ್ಲು = ಗುಂಡಗಿರುವ ಪಾತ್ರೆ.

ಚರೆ = ಬಂದೂಕಿಗೆ ಹಾಕುವ ಸೀಸದ ಗುಂಡು, ೨. ಚಹರೆ, ರೂಪು, ಲಕ್ಷಣ, ಚಯ.

ಚರ್ಮ = ಚಮ್ಡ, ತೊಗಲು.

ಚರ್ಚೆ = ವಾದ, ವಿವಾದ, ತರ್ಕ, ವಾಗ್ವಾದ.

ಚರ್ಯೆ = ನಡೆ, ವರ್ತನೆ, ನಡವಳಿಕೆ.

ಚಲ = ಹಟ, ಮೊಂಡುತನ.

ಚಲಾವಣೆ = ಚಾಲ್ತಿ, ಉಪಯೋಗ–ದಲ್ಲಿರುವಿಕೆ.

ಚಲ್ಲಂಡೆ = ಚೆಲ್ಲುಚೆಲ್ಲಾಗಿ ವರ್ತಿಸುವುದು, ಗಾಂಭೀರ್ಯವಿಲ್ಲದಿರುವುದು.

ಚಲ್ಲಣ = ಚಡ್ಡಿ, ಷರಾಯಿ, ಪಾಯಿಜಾಮ.

ಚಲ್ಲಾಟ = ವಿನೋದವಾಗಿ ವರ್ತಿಸುವುದು.

ಚಲ್ಲಾಪಿಲ್ಲಿ = ಅಸ್ತವ್ಯಸ್ತತೆ, ಕೆದರಿದ ಸ್ಥಿತಿ, ಗಲಿಬಿಲಿ, ಅವ್ಯವಸ್ಥೆ.

ಚಲ್ಲು = ೧.ಚೆಲ್ಲು, ಎರಚು, ಬಿತ್ತನೆ ಮಾಡು

೨. ಚಲ್ಲಂಡೆ ೩. ಚಪ್ಪು, ಹರಿದ ಅರಿವೆ.

ಚಲ್ಲುತನ =ಘನತೆಯಿಲ್ಲದಿರುವುದು, ಲಲ್ಲೆಗಾರಿಕೆ.

ಚವನು = ಹೂವಿನ ತೋಟ, ವನ.

ಚವರಿ = ಬೀಸಣಿಗೆ, ಚಾಮರ.

ಚವಲ = ಕೂದಲು ತೆಗೆಯುವ ಸಂಸ್ಕಾರ.

ಚವಳಿಕಾಯಿ = ಗೋರಿಕಾಯಿ, ಒಂದು ಬಗೆಯ ತರಕಾರಿ.

ಚವಿ = ಮಕ್ಕಳಿಗೆ ಬರುವ ಚರ್ಮದ ಕಾಯಿಲೆ, ಅಲ್ಪಪ್ರಮಾಣದಲ್ಲಿ ದೇಹಕ್ಕೆ ನಂಜಾಗುವುದು.

ಚಷ್ಮ = ಕನ್ನಡಕ, ಚಾಳೀಸು.

ಚಳಕ = ವೇಗ, ರಭಸ ೨. ಚಾತುರ್ಯ, ಜಾಣ್ಮೆ ೩. ಕೈಚಳಕ.

ಚಳುಕು = ನರ ಹೊರಳುವಿಕೆ, ನರ ಹಿಡಿಯಿವುದು, ಮಾಂಸ ಖಂಡದ ಬಿಗಿತ.

ಚಳಕೆ = ಒಡೆದ/ ಸಿಗಿದ ಸೌದೆ, ಚಳಕೆ ಒಡೆಯುವುದು, ಚಕ್ಕೆ ಮಾಡುವುದು.

ಚಳಿ = ಕೊರೆತ, ತಂಡಿ, ಮೈ ನಡುಕ.

ಚಳಿಗಾಲ = ಮಾಗಿಕಾಲ.

ಚಳೆ = ಸುತ್ತಲಿ ದಾರ, ೨. ನೀರು ಚಿಮುಕಿಸುವುದು, ಸಿಂಪಡಿಸು ವುದು.

ಚಳೆಕೊಡು = ನೀರು ಚಿಮುಕಿಸು, ಸಿಂಪಡಿಸು.

ಚಳ್ಳೆ ಪಿಳ್ಳೆ = ಸಣ್ಣಸಣ್ಣವರು, ತುಂಬಾ ಸಣ್ಣಮಕ್ಕಳು.

ಚಳ್ಳೆಹಣ್ಣು ತಿನ್ನಿಸು = ವಂಚನೆ ಮಾಡು.

ಚಳ್ಳೆಹುರಿ = ಚಳೆ, ಸುತ್ತಲಿ ದಾರ.

ಚಾ = ಚಹಾ, ಚಹಾದ ಗಿಡ, ಚಹಾದ ಎಲೆ, ಚಹಾ ಎಲೆಯ ಕಷಾಯ, ಟೀ.

ಚಾಕಣ = ಉಪ್ಪು, ಕಾರ ಹಾಕಿ ಹುರಿದ ಯಾವುದೇ ಮಾಂಸದ ತುಂಡು (ಸಾರಾಯಿ ಕುಡಿಯುವಾಗ ನಂಜಿಕೊಳ್ಳಲು).

ಚಾಕರಿ = ಸೇವೆ, ಊಳಿಗ.

ಚಾಕು = ಚಿಕ್ಕ ಚೂರಿ.

ಚಾಚು = ಕೈ ನೀಡು, ಕೈ ಮುಂದಕ್ಕೆ ಮಾಡು, ಕಾಲು ನೀಡು, ನೇರಮಾಡು.

ಚಾಜ = ಮದುವೆಯಲ್ಲಿ ಮಾಡುವ ಶಾಸ್ತ್ರ

ಚಾಟಿ = ಚಾವಟಿ, ಹುರಿ, ಬಾರುಕೋಲು, ಚರ್ಮ ಅಥವಾ ಹಗ್ಗದ ಹೊಡೆಯುವ ಸಾಧನ.

ಚಾಟ್ರಬಿಲ್ಲು = ಕವಲುಕೋಲಿನ ತುದಿಗೆ ಚರ್ಮವನ್ನು ಕಟ್ಟಿ ಕಲ್ಲಿನಿಂದ ಬೀಸಿ ಹೊಡೆಯುವ ಸಾಧನ.

ಚಾಡಿ = ಇನ್ನೊಬ್ಬರನ್ನು ಕುರಿತು ದೋಶಾರೋಪಣೆ ಮಾಡು ವುದು.

ಚಾಡಿಕೋರ = ಚಾಡಿ ಹೇಳುವವನು.

ಚಾಣ = ಉಳಿ, ಕಬ್ಬಿಣ ಕತ್ತರಿಸುವ/ ಲೋಹವನ್ನು ಕತ್ತರಿಸುವ/ಕಲ್ಲನ್ನು ನಯವಾಗಿ ಕೆತ್ತುವ ದೊಡ್ಡ ಉಳಿ.

ಚಾಣಕ್ಕಿ = ಮೈನಾ, ಉಣ್ಣೆಗೊರವ, ಹಾರುವಾಗ ರೆಕ್ಕೆಯಲ್ಲಿ ಬಿಳಿ ಬಣ್ಣ ಕಾಣುವ ಹಕ್ಕಿ.

ಚಾಣಾಕ್ಷ = ಬುದ್ಧಿವಂತ, ಕುಶಲಿ,

ಅನುಭವಿ.

ಚಾಣಾಕ್ಷತನ = ಬುದ್ಧಿವಂತಿಕೆ, ಸೂಕ್ಷ್ಮದೃಷ್ಟಿ, ವ್ಯವಹಾರ ಕುಶಲತೆ.

ಚಾತಿ = ಬುದ್ಧಿವಂತಿಕೆ, ಶಕ್ತಿ, ಬಲ.

ಚಾಪೆ = ಮಂದಲಿಗೆ, ಈಚಲಗರಿ/ಹುಲ್ಲಿನ ಕಡ್ಡಿಯಿಂದ ಹೆಣೆದ ನೆಲಹಾಸು.

ಚಾಪು = ಪ್ರಭಾವ ೨. ಕೋವಿಯ ಕುದುರೆ.

ಚಾರೆ = ಬೈನೆ ಮರದ ಹಗ್ಗ.

ಚಾಲತಿ = ರೂಢಿ, ಬಳಕೆಯಲ್ಲಿರುವ.

ಚಾಲಾಕಿ = ಚತುರ, ಎಚ್ಚರಿಕೆಯುಳ್ಳ, ಚರುಕಾದ, ಚಟುವಟಿಕೆಯುಳ್ಳ.

ಚಾಲಾಕು = ಚುರುಕು, ಚಾತುರ್ಯ.

ಚಾಲಿ = ಸಿಪ್ಪೆಸಹಿತ ಒಣಗಿಸಿದ ಅಡಕೆ.

ಚಾಲ್ತಿ = ಚಾಲನೆ, ಅಭ್ಯಾಸ, ಚಲಾವಣೆ, ನಡವಳಿಕೆ, ೨. ರೂಢಿ.

ಚಾವಟಿ = ಚಾಟಿ, ಹುರಿ.

ಚಾವಡಿ = ಮನೆಯ ಮುಂದಿನ ಜಗಲಿ.

ಚಾವಣಿ = ಛಾವಣಿ, ಮನೆಯ ಮೇಲಿನ ಮಾಡು.

ಚಾಷ್ಟೆ = ಚೆಲ್ಲುತನ, ವಿನೋದ, ಹಾಸ್ಯ.

ಚಾಳಸು = ಹೀಯ್ಯಾಳಿಸು, ಹೀಗಳಿಸು, ಬೇರೆಯವರು ಮಾತಾಡಿದ್ದನ್ನು ಪುನರುಚ್ಚರಿಸು.

ಚಾಳಿ = ಚಟ, ಅಭ್ಯಾಸ, ಗೀಳು ೨. ಜೊತೆ, ಮಾತುಕತೆ (ಚಾಳಿ ಬಿಡುವುದು).

ಚಾಳಿಬಿಡು = ಬೇರೆಯವರೊಡನೆ ಮಾತುಕತೆ ಬಿಡು, ಸಂಪರ್ಕ ಬಿಡು, ಜೊತೆ ಬಿಡು.

ಚಾಳೀಸು = ಕನ್ನಡಕ, ಚಷ್ಮಾ, ಉಪನೇತ್ರ.

ಚಾಳ್ಸು = ಚಾಳಸು.

ಚಿಂತಾಲು = ದೊಡ್ಡ ತಕ್ಕಡಿ, ಸೇರು, ದಡಿಯ, ಮಣ ಮುಂತಾದ ಕಬ್ಬಿಣದ ಕಲ್ಲುಗಳನ್ನು ಇಟ್ಟು ದೊಡ್ಡ ದೊಡ್ಡ ತೂಕವನ್ನು ಮಾಡುವ ಸಾಧನ.

ಚಿಂತಿಸು = ಯೋಚಿಸು, ಭಾವಿಸು, ವ್ಯಥೆಗೊಳ್ಳು, ಧ್ಯಾನಮಾಡು.

ಚಿಂತೆ = ಯೋಚನೆ, ದುಃಖ, ದುಮ್ಮಾನ.

ಚಿಂದಿ = ಹರಕು ಬಟ್ಟೆ, ತುಂಡುಬಟ್ಟೆ.

ಚಿಂಪಿಗ = ಬಟ್ಟೆ ಹೊಲಿಯುವವನು.

ಚಿಕ್ಕ = ಸಣ್ಣ, ಕಿರಿಯ ೨. ಚಿಕ್ಕಪ್ಪ.

ಚಿಕ್ಕಪ್ಪ = ತಂದೆಯ ತಮ್ಮ, ತಾಯಿಯ ತಂಗಿಯ ಗಂಡ.

ಚಿಕ್ಕಮ್ಮ = ತಾಯಿಯ ತಂಗಿ, ತಂದೆಯ ತಮ್ಮನ ಹೆಂಡತಿ.

ಚಿಕ್‌ಮ್ಯಾಳ = ಮನೆಮನೆಗೆ ಬಂದು ಮನರಂಜನೆ ನೀಡುತ್ತಿದ್ದ ಯಕ್ಷಗಾನದ ಸಣ್ಣಮೇಳ.

ಚಿಕ್ಕಯ್ಯ = ಚಿಕ್ಕಪ್ಪ.

ಚಿಕಳಿ =ಅಂಗಾಂಗಗಳನ್ನು ಮುಟ್ಟಿದಾಗ ಆಗುವ ಕಿನಸಿಗೆ, ಬರುವ ನಗು, ಚಿಕ್ಲಿ, ಕಚಗುಳಿ.

ಚಿಕಳಿಗುಡಿಸು =ಅಂಗಾಂಗಗಳನ್ನು ಮುಟ್ಟಿ ನಗಿಸುವುದು, ಕಚಗುಳಿಯಿಡು.

ಚಿಕ್ಕಳಗುಳಿ = ಚಿಕಳಿ.

ಚಿಕ್ಕಾಸು = ಬಿಡಿಗಾಡು, ಸ್ವಲ್ಪಹಣ.

ಚಿಕ್ಕಾಲು ಬಕ್ಕಾಲು = ಚಕ್ಕಳಮಟ್ಟೆ.

ಚಿಕ್ಕಿ = ೧. ಚಿಕ್ಕಮ್ಮ, ೨. ಹುರಿದ ಕಡಲೆ ಕಾಯಿ ಬೀಜಕ್ಕೆ ಬೆಲ್ಲ ಹಾಕಿ ಮಾಡಿದ ತಿಂಡಿ.

ಚಿಕ್ಕಿಲಿ = ಸಣ್ಣ ಜಾತಿಯ ಇಲಿ.

ಚಿಕ್ಲಿ = ಚಿಕಳಿ.

ಚಿಕ್ಕು = ಸಪೋಟ.

ಚಿಕ್ಕೆ = ೧. ಚುಕ್ಕೆ, ಬಟ್ಟು, ಸಣ್ಣಗುರುತು, ೨. ತಾರೆ, ನಕ್ಷತ್ರ.

ಚಿಗಟ = ಪ್ರಾಣಿಗಳ ಮೈಮೇಲಿರುವ ಒಂದು ರೀತಿಯ ಹೇನು, ಒಣ ಹುಲ್ಲಿನಲ್ಲಿರುವ ಉಣ್ಣೆ/ಕೀಟ, ರಕ್ತ ಹೀರುವ ಕೀಟ.

ಚಿಗಪಯ್ಯ = ಚಿಕ್ಕಪ್ಪ.

ಚಿಗವ್ವ = ಚಿಕ್ಕಮ್ಮ.

ಚಿಗರೆ = ಜಿಂಕೆ, ಹರಿಣ, ಎರಳೆ .

ಚಿಗಳಿ = ಚಗಳಿ, ಎಲೆಮೂಡೆ ಇರುವೆ.

ಚಿಗುಟು = ಚಿವುಟು, ಜಿಗುಟು, ಚೂಟು, ಉಗುರಿನಿಂದ ಚರ್ಮವನ್ನು ಹಿಂಡು, ಗಿಂಡು.

ಚಿಗ್ರು = ಚಿಗುರು, ಕುಡಿ, ತಳಿರು, ಪಲ್ಲವ.

ಚಿಟಕಿ = ಚಿಟಿಕೆ, ಸ್ವಲ್ಪ ೨. ಹೆಬ್ಬೆರಳು ಮತ್ತು ತೋರುಬೆರಳ ತುದಿಯಲ್ಲಿ ಹಿಡಸಬಹುದಾದಷ್ಟು ಪ್ರಮಾಣ.

ಚಿಟಕಿಹೊಡಿ = ಹೆಬ್ಬೆರಳು ಮತ್ತು ಉಂಗುರದ ಬೆರಳಿನಿಂದ ಮಾಡುವ ಶಬ್ಧ.

ಚಿಟಕಿ ಹೊಡಿಯೂದ್ರಲ್ಲಿ = ಅತಿ ಶೀಘ್ರದಲ್ಲಿ, ಕಣ್ಣುಮುಚ್ಚಿ ಬಿಡುವುದರಲ್ಲಿ. (ಅಲಂ)

ಚಿಟಗುಂಡಿ = ಉಡುಪಿಗೆ ಸೇರಿಸಿ ಹೊಲಿಯುವ 'ಚಿಟ್' ಎಂದು ಶಬ್ಧ ಬರುವ ಗುಂಡಿ.

ಚಿಟಗುಬ್ಬಿ = ಚಿಟಗುಂಡಿ.

ಚಿಟಚಿಟ = ಮಳೆ ಬರುವ ಶಬ್ಧವನ್ನು ಹೇಳುವ ಮಾತು. (ಅಲಂ)

ಚಿಟಬಿಲ್ಲು = ಚಾಟ್ರಬಿಲ್ಲು, ಸಣ್ಣ ಬಿಲ್ಲು.

ಚಿಟ್ಟಳಿಲು = ಸಣ್ಣಳಿಲು, ಇಣಚಿ .

ಚಿಟ್ಟಬದ್ನೆ = ಸಣ್ಣ ಗಾತ್ರದ ಗಿಡ, ಗಿಡದ ತುಂಬಾ ಮುಳ್ಳು, ಗುಂಡಗೆ ಬದನೆ-ಕಾಯಿಯಂತಹ ಸಣ್ಣಕಾಯಿಗಳು.

ಚಿಟ್‌ಕೊಳಗು = ಏಡಿಯ ಚಕ್‌ಬೊಳ್ಳು.

ಚಿಟಿ ಚಿಟಿ ಮಳೆ = ತುಂತುರು ಮಳೆ.

ಚಿಟ್ಟೆ = ಪತಂಗ, ಹಾರಾಡುವ ಅಗಲ ರೆಕ್ಕೆಯ ಬಣ್ಣಬಣ್ಣದ ಕೀಟ, ಪಾತರಗಿತ್ತಿ.

ಚಿಟ್ಟೆಹುಲಿ = ಮೈಮೇಲೆ ಚುಕ್ಕೆಗಳಿರುವ ಹುಲಿ.

ಚಿಟ್ಟು = ಬೇಸರ, ಜಿಗುಪ್ಸೆ.

ಚಿಟ್ಟುಂಬೆ = ಬಿಲ್ವಾರ, ಬೆಳಾಲೆಗಳಿಗಿಂತ ಅತಿಸಣ್ಣಮರ, ಭಾರೀಮೃದು.

ಚಿಟ್ಟು ಹಿಡಿ = ತಲೆಚಿಟ್ಟುಹಿಡಿ, ಕಿರಿ-ಕಿರಿಯಾಗು, ಬೇಜಾರಾಗು.

ಚಿಟ್ಟುಹಿಡಿಸು = ಬೇರೆಯವರಿಗೆ ಬೇಜಾರಾಗುವಂತೆ ಮಾಡು.

ಚಿಟ್ಕುಡಿಕೆ = ಸಣ್ಣಕುಡಿಕೆ, ಸಣ್ಣ ಮಡಕೆ.

ಚಿಟ್ಟೆಕಾಯಿ, = ಮಧ್ಯಮಗಾತ್ರದ ಗಿಡ, ಗಿಡದ ತುಂಬಾ ಮುಳ್ಳು, ಸಣ್ಣಕ್ಕೆ ಗುಂಡಗಿರುವ ಕಾಯಿಗಳು, ತೊಟ್ಟು-ಸಹಿತ ಕಿತ್ತು ಬುಗುರಿ ಯಂತೆ ತಿರುಗಿಸಬಹುದು, ಹೂವು ಔಷಧಿಯುಕ್ತ.

ಚಿಟ್ಟೆಗಿಡ = ಚಿಟ್ಟೆ ಕಾಯಿಯ ಗಿಡ.

ಚಿಟ್ಕೋಳಿ = ಕಾಡು ಕೋಳಿಗಿಂತ ಸಣ್ಣಗಿರುವ ಕೋಳಿ.

ಚಿಣ್ಣೆದಾಂಡು = ಒಂದು ಉದ್ದಕೋಲು (ದಾಂಡು) ಇನ್ನೊಂದು ಸಣ್ಣಕೋಲು (ಚಿಣ್ಣೆ)ನಿಂದ ಆಡುವ ಆಟ.

ಚಿತಾವಣೆ = ಸಂಚು, ಹೊಂಚು, ದುರ್ಬೋಧನೆ.

ಚಿತ್ತ = ಮನಸ್ಸು, ಬುದ್ಧಿ.

ಚಿತ್ರ್‌ಹಿಂಸೆ = ಅತಿಯಾದ ಹಿಂಸೆ, ನೋವು, ಸಂಕಟ.

ಚಿತ್ತಾರ = ಚಿತ್ರ, ಸುಂದರ ರಚನೆ, ಬರೆದ ಆಕೃತಿ.

ಚಿತ್ತು = ಕಲೆ, ಕಪ್ಪು ಗುರುತು, ಬರೆಯುವಾಗ ಮಸಿ/ಶಾಯಿಯಿಂದಾದ ಕಲೆ, ಬರೆಯುವಾಗ ಹೊಡೆದುಹಾಕು.

ಚಿತ್ತೆ = ಚಿತ್ತಾ, ಒಂದು ಮಳೆ ನಕ್ಷತ್ರ.

ಚಿನಿವಾರ = ಅಕ್ಕಸಾಲಿಗ, ಚಿನ್ನದ ಆಭರಣ ಮಾಡುವವನು.

ಚಿನ್ನ = ಹೊನ್ನು, ಬಂಗಾರ, ೨. ಪ್ರೀತಿಯ, ಮುದ್ದಿನ.

ಚಿನ್ನೆ = ಚಿಹ್ನೆ, ಗುರುತು, ಲಕ್ಷಣ.

ಚಿಪ್ಪಂದಿ = ಚಿಪ್ಪಿನ ಹಂದಿ, ಮೈಮೇಲೆ ಗಟ್ಟಿಯಾದ ಮೀನು ಹೊರಜಲಿನಂತೆ ಚಿಪ್ಪುಗಳಿರುವ ಹಂದಿಯಂತಹ ಪ್ರಾಣಿ. ಕೀಟಾಹಾರಿ, ನೆಲದ ಗುದ್ದುಗಳಲ್ಲಿ ವಾಸಿಸುತ್ತದೆ. ಅಪಾಯ ಬಂದಾಗ ಅದರ ತಲೆ ಮುಖವನ್ನು ಎದುರು ಕಾಲಿನ ಸಂದಿಯಲ್ಲಿ ತೂರಿಸಿ ಇಡೀ ದೇಹವನ್ನು ಚೆಂಡಿನಂತೆ ಮಾಡಿಕೊಳ್ಳುತ್ತದೆ. ಇಡೀ ದಿನವೆಲ್ಲಾ ಉರುಳಾಡಿಸಿದರೂ ಅದರ ಮೂತಿಯ ನ್ನಂತೂ ಹೊರತೆಗೆಯುವುದಿಲ್ಲ. ಮೈಗೆ ಗುಂಡೂ ತಗಲುವುದಿಲ್ಲ.

ಚಿಪ್ಪಿಗ = ದರ್ಜಿ, ಬಟ್ಟೆ ಹೊಲಿಯುವವನು.

ಚಿಪ್ಪು = ೧. ತಲೆಬುರುಡೆ, ೨. ಬಾಳೆಗೊನೆಯ ಒಂದು ಗೊಂಚಲು, ೩. ಗರಟ, ೪ ಮರದ ಸೌಟು.

ಚಿಪ್ಪೆತ್ತು = ಬಾಳೆಗೊನೆಯ ಹಂತಗಳನ್ನು ತೆಗೆ.

ಚಿಬ್ಲ = ಸಿಬ್ಲು, ಅನ್ನದ ಗಂಜಿ ಬಸಿಯಲು ಬಳಸುವ ಬಿದಿರಿನ ಸಣ್ಣ ತಟ್ಟೆ/ಬೀಳಿನ ತಟ್ಟೆ.

ಚಿಬ್ಬು = ಒಂದು ಚರ್ಮರೋಗ, ಬಿಳಿಮಚ್ಚೆ.

ಚಿಬ್ಬೆ = ಒದ್ದೆ ಬಟ್ಟೆಯಲ್ಲಿ ಬೆಳೆಯುವ ಕಪ್ಪು ಪಾಚಿ.

ಚಿಮಟ = ಇಕ್ಕಳ, ಬಿಸಿ ಪಾತ್ರೆಗಳನ್ನು ಹಿಡಿದುಕೊಳ್ಳುವ ಹಿಡಿಕೆ.

ಚಿಮಟಗಿ = ಚಿಮಟ.

ಚಿಮಣಿ = ಹೊಗೆಗೂಡು, ಹೊಗೆ ಹೊರ-ಹೋಗಲು ಇಟ್ಟಿರುವ ಕೊಳವೆ.

ಚಿಮ್ಣಿ = ಸೀಮೆಎಣ್ಣೆ ಹಾಕಿ ಉರಿಸುವ ದೀಪ.

ಚಿಮ್ಣಿಗೂಡು = ಚಿಮ್ಣಿ ದೀಪದ ಡಬ್ಬಿಯಂತಹ ಸಾಧನ, ಚಿಮಣಿ ಬುಡ್ಡಿ.

ಚಿಮ್ಣಿದೀಪ = ಚಿಮ್ಣಿ.

ಚಿಮ್ಣಿಎಣ್ಣೆ = ಚಿಮಣಿ ಎಣ್ಣೆ, ಸೀಮೆಎಣ್ಣೆ.

ಚಿಮುಕಿಸು = ಸಿಂಪಡಿಸು, ಹನಿಹನಿಯಾಗಿ

ಎರಚು, ತಳಿ.

ಚಿಮುಕ್ಲು = ಚರ್ಮದ ಮೇಲೇಳುವ ನೀರು/ ಕೀವು/ರಕ್ತ ಏನೂ ಯಿಲ್ಲದ ಗುಳ್ಳೆ, ಚುಮುಕ್ಲು, ನರಹುಲಿ.

ಚಿಮ್ಕು = ಹಾರು, ನೆಗೆ, ಬೆರಳಿನಿಂದ ಮಿಡಿ.

ಚಿರುಗುಟ್ಟು = ತುಂಬಾ ಉರಿ/ ನೋವಾಗು, ೨. ಚಿರ್‌ಎಂಬಶಬ್ಧ, ನೀರು/ರಕ್ತ ಹಾರುವ ಚಿರ್ ಎಂಬ ಶಬ್ಧ.

ಚಿರ್ತೆ = ದೇಹದ ಮೇಲೆ ಚುಕ್ಕೆಗಳಿರುವ ಹುಲಿಯಂತಹ ವೇಗವಾಗಿ ಓಡುವ ಪ್ರಾಣಿ.

ಚಿಲಕ = ಬಾಗಿಲನ್ನು ಭದ್ರಪಡಿಸಲು ಉಪಯೋಗಿಸುವ ಕಬ್ಬಿಣದ ಸರಪಣಿ, ಅಗುಣಿ, ಕೀಲು.

ಚಿಲ್ಲಂತ = ಕಾರಂಜಿಯಂತೆ, ರಭಸವಾಗಿ.

ಚಿಲ್ಲರೆ = ನಾಣ್ಯಗಳು, ಒಂದು ಪೂರ್ಣ–ನಾಣ್ಯದ ಅಂಶ ೨. ಅಲ್ಪ, ಕ್ಷುದ್ರ (ಅಲಂ).

ಚಿಲಿ = ಅಗಲಿಸು, ಕಿಸಿ, ೨. ಅನವಶ್ಯಕ ನಗು, ನಗುಬರದಿದ್ದರೂ ಹಲ್ಲು ಕಿರಿ.

ಚಿಲಿಪಿಲಿಗುಟ್ಟು = ಹಕ್ಕಿಗಳು ಗುಂಪಾಗಿ ಧ್ವನಿ ಮಾಡುವುದು, ಕಲರವ.

ಚಿಲುಮೆ = ಬುಗ್ಗೆ, ನೀರು ಶೇಖರಿಸುವ ಸಣ್ಣಹೊಂಡ, ಕಾರಂಜಿ.

ಚಿವ್ಚು = ಹಿಂಡು, ಗಿಂಡು, ಚಿಗುಟು, ಚೂಟು.

ಚೀಕು = ಅಡಿಕೆ ಮರದ ಸಿಬರು, ಸಣ್ಣ ಮುಳ್ಳಿನಂತಹ ಕಡ್ಡಿ ೨. ಗೀಚು ಹೀಚು, ಎಳೆಯಕಾಯಿ.

ಚೀಟಿ = ಕಾಗದದ ತುಂಡು, ಬರಹವಿರುವ ಸಣ್ಣಕಾಗದ.

ಚೀಟಿಬಟ್ಟೆ = ಹತ್ತಿಯ ಬಟ್ಟೆ.

ಚೀಚಿ = ಚಿಚ್ಚಿ, ಮಕ್ಕಳ ಭಾಷೆಯಲ್ಲಿ ಮಾಂಸಾಹಾರ.

ಚೀನಾಂಬ್ರ = ರೇಷ್ಮೆ ಬಟ್ಟೆ/ಸೀರೆ.

ಚೀನೀಕಾಯಿ = ಸಿಹಿಗುಂಬಳಕಾಯಿ.

ಚೀಪು = ತುಟಿಗಳ ನಡುವೆ ಸಿಕ್ಕಿಸಿಕೊಂಡು ರಸಹೀರು ೨. ಕೆಸುವಿನ ಬೇರು, ಕೆಸಿನ ಚೀಪು.

ಚೀಮಾರಿ = ಎದುರಿಗೇ ಮಾಡುವ ನಿಂದೆ.

ಚೀರಾಟ = ಕಿರುಚಾಟ, ಕೂಗಾಟ, ಗಟ್ಟಿಯಾಗಿ ಕೂಗು.

ಚೀರು = ಕೂಗು, ಕಿರುಚು ೨. ಹೇನಿನ ಮೊಟ್ಟೆ, ಎಮ್ಮೆಬಾಲದಲ್ಲಿರುವ ಮೊಟ್ಟೆ.

ಚೀರುಣಿಗೆ = ಕೂದಲಿನಲ್ಲಿರುವ ಚೀರುತೆಗೆಯುವ ಬಾಚಣಿಗೆ.

ಚೀಲ = ಪದಾರ್ಥಗಳನ್ನು ತುಂಬಲು ಹೊಲಿದ ಬಟ್ಟೆ ಅಥವಾ ಸೆಣಬಿನ ಚೀಲ.

ಚುಂಗು = ಮುಳ್ಳಿನಂತಿರುವ ವಸ್ತುಗಳು ಬಟ್ಟೆಗೆ ಅಂಟಿಕೊಳ್ಳುವ ಒಂದು ಜಾತಿಯ ಮುಳ್ಳು/ಬೀಜ.

ಚುಂಗುಳ = ಕಂಬಳಿ ಹುಳ, ಕಂಬ್ಳಿಹುಳ.

ಚುಕ್ತ = ಬಾಕಿಯಿಲ್ಲದಂತೆ ಸಾಲ ತೀರಿಸುವಿಕೆ.

ಚುಕ್ಕಾಣಿ = ದೋಣಿ ನಡೆಸುವ ಹುಟ್ಟು, ೨. ಬಿಡಿಗಾಸು.

ಚುಕ್ಕಿ = ನಕ್ಷತ್ರ, ತಾರೆ ೨. ಪೂರ್ಣವಿರಾಮ.

ಚುಕ್ಕೆ = ಚುಕ್ಕಿ, ಗುರುತು, ಚಿಹ್ನೆ ೨. ನಕ್ಷತ್ರ, ಆರ್ದ್ರ.

ಚುಚೂರು = ಚೂರು ಚೂರು, ಸ್ವಲ್ಪ ಸ್ವಲ್ಪ

ಚುಚ್ಚುಮಾತು = ನೋವನ್ನುಂಟು ಮಾಡುವಂತಹ ಮಾತು, ಕಟಕಿ.

ಚುಚ್ಚು = ಇರಿ, ತಿವಿ, ಮುಳ್ಳು ಚುಚ್ಚು ಹೊಕ್ಕು, ೨. ವುೂಗು ಸುರಿಯುವುದು.

ಚುಚ್ಚುಮದ್ದು = ಸೂಜಿಮದ್ದು.

ಚುಟ್ಟಾ = ಒಂದು ಬಗೆಯ ಹೊಗೆ ಬತ್ತಿ.

ಚುಡಾಯಿಸು = ಛೇಡಿಸು, ಕೆರಳಿಸು, ರೇಗುವಂತೆ ಮಾಡು.

ಚುತಿ = ಚ್ಯುತಿ, ಲೋಪ, ತಪ್ಪು.

ಚುಯ್ಗುಡು = ಕಾದ ಲೋಹದ ಮೇಲೆ ನೀರು ಬಿದ್ದಾಗ ಹೊರಡುವ ಶಬ್ಧ ೨. ನೋವಾಗುವಿಕೆ (ಗಾಯ ಚುಯ್ಗುಡು).

ಚುರುಕು = ವೇಗ, ಲಗುಬಗೆ, ಲವಲವಿಕೆ, ತ್ವರಿತ, ೨. ಉಗ್ರ, ಖಾರವುಳ್ಳ.

ಚುರುಕಿ = ದೂರಕ್ಕೆ ನೀರು ಹಾರಿಸುವ ಕೊಳವೆ, ಅಡಿಕೆ ಮರಕ್ಕೆ ಔಷಧಿ ಹೊಡೆಯುವ ಸಾಧನ.

ಚುರುಕ್ಕನ್ನು = ನೋವುಂಟಾಗು ತಕ್ಷಣ ಮನಸ್ಸಿಗೆ ನಾಟು.

ಚುರುಕ್ತನ = ಬುದ್ಧಿವಂತಿಕೆ, ಚಾಣಾಕ್ಷತೆ.

ಚುರುಗುಟ್ಟು = ಹಸಿವಾಗು, ಹೊಟ್ಟೆ ಚುರ್ಗುಡು.

ಚುರ್ಗುಡು = ನೋಯು, ಸಂಕಟವಾಗು.

ಚುರ್ಚಿ = ಕಾಡುಮರ, ಕಾಯಿಗಳನ್ನು ಜಜ್ಜಿದರೆ ಮೈತುರಿಕೆ ಬರುತ್ತದೆ, ಮರದ ಕಾಂಡದಿಂದ ಅಗಲ ವಾದ ಹರಿವಾಣ-ದಂತಹ ಮರ್ಗಿ ಮಾಡುತ್ತಾರೆ.

ಚುಳ್ಳಿಬ್ಬಿ = ಹುಲ್ಲಿನಲ್ಲಿ ಏಳುವ ಅಳಬಿ, ಹುಲ್ಲು ಅಣಬೆ, ಮಳೆಗಾಲದಲ್ಲಿ ಹುಲ್ಲು ಬೆಳೆದಿರುವ ಜಾಗದ ಅಳಬಿ.

ಚುಳುಕಿ = ಹಲಸಿನ ಸೋಳೆಯ ಜೊತೆಯಲ್ಲಿರುವ ನಾರುಗಳು.

ಚುಳುಕಿ ಹಾಕುವುದು = ಹಲಸಿನ ಕಾಯಿ ಬಲಿತಿದೆಯೋ ಎಂದು ಗಾಯಗೊಳಿಸಿ/ತೂತುಮಾಡಿ ನೋಡುವುದು.

ಚೂಟಿ = ಚುರುಕುತನ, ಜಾಣ್ಮೆ.

ಚೂಟು = ಜಿಗುಟು, ಹಿಂಡು, ಚಿವುಟು, ಚಿಗುಟು, ಚಿವ್ಟು.

ಚೂಪ = ಹರಿತ, ಮೊನಚು.

ಚೂಪಮೂಗು = ನೇರ, ಉದ್ದಮೂಗು.

ಚೂಪು = ಚೂಪ.

ಚೂಪುಗಾರ್ಕಿ = ಚಾಲಾಕುತನ, ಬೂಟಾಟಿಕೆ.

ಚೂಪುಮಾಡು = ಹರಿತಗೊಳಿಸು, ಮೊನೆಮಾಡು.

ಚೂಬಿಡು = ಎತ್ತಿಕಟ್ಟು.

ಚೂರಿ = ಚಾಕು, ಸಣ್ಣಕತ್ತಿ.

ಚೂರು = ತುಸು, ಸ್ವಲ್ಪ, ಕೊಂಚ ೨. ತುಂಡು, ಹೋಳು, ಭಾಗ.

ಚೂರುಪಾರು = ಅಲ್ಪಸ್ವಲ್ಪ, ಅಳಿದುಳಿದದ್ದು.

ಚೆಂಗನೆ = ಚಂಗನೆ, ನೆಗೆ, ಕುಪ್ಪಳಿಸು.

ಚೆಂಗೂಲಿ = ದಿನಗೂಲಿ, ಕೈಗೂಲಿ, ಖಾಯಮ್ಮಾಗಿ ಕೆಲಸಕ್ಕೆ ಬರದೆ

ಬೇಕಾದಲ್ಲಿಗೆ ಕೆಲಸಕ್ಕೆ ಹೋಗುವುದು.

ಚೆಂಡಾಳಿ = ಕೆಟ್ಟವಳು, ದುಷ್ಟೆ.

ಚೆಂಡಿ = ಹಸಿ, ವದ್ದೆ, ತಮಡಿ ೨. ಹಠಮಾರಿತನವುಳ್ಳವಳು.

ಚೆಂಡಿನಗಿಡ = ಸಣ್ಣಹಸಿರುಗಿಡ, ಸಣ್ಣ ಬಿಳಿಯ ಚೆಂಡಿನಂತಹ ಗಟ್ಟಿ ಹೂವು. ಈ ಹೂವನ್ನು ಪೆಟ್ಲಿಗೆ ಹಾಕಿ ಹೊಡೆಯುತ್ತಿದ್ದರು.

ಚೆಂಡು = ಗುಂಡಗಿರುವ ಆಟದ ವಸ್ತು.

ಚೆಂಡು ಹೂ = ಗೊಂಡೆ ಹೂ.

ಚೆಂಡೆ = ಚಂಡೆ, ಮದ್ದಲೆ.

ಚೆಂದು = ಚಂದ.

ಚೆಂಬು = ತಂಬಿಗೆ, ಚಂಬು.

ಚೆನ್ನು = ಚೆಲುವು, ಸೊಗಸು.

ಚೆಟ್ಟಕ್ಕಿ = ಹುರುಳಿಲ್ಲದ, ಕಪ್ಪಾದ ಅಕ್ಕಿ, ಸಾರವಿಲ್ಲದ ಅಕ್ಕಿ.

ಚೆಟ್ಟಬತ್ತ = ಕಾಳಿಲ್ಲದ ಬತ್ತ, ಹೊಟ್ಟು.

ಚೆಕ್ಕುಬಂದಿ = ಜಮೀನಿನ ಸರಹದ್ದನ್ನು ದಾಖಲಿಸುವುದು.

ಚೆಕ್ಕು = ಕೆನ್ನೆ, ಕದಪು.

ಚೆಟಗಿ = ಮಣ್ಣಿನ ಕುಡಿಕೆ.

ಚೆನ್ನೆಮರ = ಹಾಲುವಾಣದ ಮರ.

ಚೆನ್ನೆಬೀಜ = ಚೆನ್ನೆಕಾಳು, ಹಾಲುವಾಣದ ಬೀಜ.

ಚೆಪ್ಪು = ಹರಿದ ಬಟ್ಟೆ, ಚಿಂದಿ.

ಚೆಪ್ಪುಕೊನೆ = ಕಾಯಿಕಡಿಮೆಯಿರುವ ಅಡಿಕೆ ಕೊನೆ.

ಚೆರಿಗೆ = ದೊಡ್ಡ ಬಾಯಿಯ ಕೊಡ, ದೊಡ್ಡ ತಂಬಿಗೆ.

ಚೆರು = ದೇವರಿಗೆ/ ದೈವಕ್ಕಿಡುವ ನೈವೇದ್ಯದ ಅನ್ನ.

ಚೆಲು = ಚೆಲುವು, ಅಂದ, ಚಂದ.

ಚೆಲುವ = ಸುಂದರ, ಸ್ಫುರದ್ರೂಪಿ.

ಚೆಲುವಿ = ಸುಂದರಿ, ರೂಪವತಿ

ಚೆಲ್ಲು = ೧.ತುಂಟ, ತುಂಟತನ ೨.ಹರಿದ ಅರಿವೆ ೩. ಸುರಿ, ಸುರಿಸು, ಬೀಳಿಸು, ಬಿಕ್ಕು.

ಚೇಣಿ = ಗುತ್ತಿಗೆ, ಕರಾರು.

ಚೇತರಿಕೆ = ಚೈತನ್ಯ ಪಡೆಯುವುದು ೨.ಎಚ್ಚೆತ್ತುಕೊಳ್ಳುವುದು.

ಚೇಷ್ಟೆ = ತುಂಟತನ, ಕೀಟಲೆ, ಸರಸ.

ಚೇಳು = ಬಾಲದ ಕೊಂಡಿಯಲ್ಲಿ ವಿಷವಿರುವ ಜಂತು.

ಚೊಂಬು = ಚಂಬು, ತಂಬಿಗೆ.

ಚೊಕ್ಕ = ಶುದ್ಧವಾದ, ಉತ್ತಮ.

ಚೊಕ್ಕಟ = ಅಚ್ಚುಕಟ್ಟು, ಒಪ್ಪ.

ಚೊಕ್ಕವಮಾಡು = ಶುದ್ಧೀಕರಿಸು, ಕಸಗುಡಿಸು.

ಚೊಗಟೆ = ಚರಟ, ತದಿ.

ಚೊಗರು = ೧.ಒಗರು ೨.ಅಡಿಕೆ ಬೇಯಿಸುವಾಗ ಹಾಕುವ ನೇರಳೆ ಸಿಪ್ಪೆ ಮತ್ತು ಮಂಜಟ್ಟೆಬೇರಿನ ಬಣ್ಣ .

ಚೊಗ್ರು = ಚೊಗರು.

ಚೊಚ್ಚು = ೧.ಚೊಚ್ಚಲು ೨.ಮೊದಲ ಹೆರಿಗೆ, ೩.ಮೊದಲ ಮಗು ೪.ಮೊದಲು ಗರ್ಭಿಣಿಯಾಗಿದ್ದು ೫.ಮೊದಲ ಕರು, ಮೊದಲ ಮರಿ.

ಚೊಟ್ಟ = ಅಂಗಹೀನ, ಕುಳ್ಳ.

ಚೋಜ್ಗ = ಸೋಜಿಗ, ಆಶ್ಚರ್ಯ.

ಚೋಟು = ಚಾಚಿದ ತೋರು ಬೆರಳು ಮತ್ತು ಹೆಬ್ಬೆರಳಿನ ನಡುವಿನ ಅಂತರ, ಚೋಟುದ್ದ.

ಚೋಟುಹಾಕು = ಬೆಕ್ಕು ತನ್ನ ಕೈಯಿಂದ ಹೊಡೆಯುವುದು ೨. ಕೈಯನ್ನು ಮುಷ್ಠಿ ಕಟ್ಟಿ ಹೊಡೆದಂತೆ ಮಾಡುವುದು.

ಚೊತೇಕಾಯಿ = ಸೌತೇಕಾಯಿ, ಒಂದು ತರಕಾರಿ.

ಚೋದ್ಯ = ಸೋಜಿಗ, ಆಶ್ಚರ್ಯ, ವಿಸ್ಮಯ.

ಚೌಕ = ವಸ್ತ್ರ, ಕರವಸ್ತ್ರ, ೨. ನಾಲ್ಕು ದಾರಿ ಕೂಡುವ ಜಾಗ.

ಚೌಕಟ್ಟು = ನಾಲ್ಕು ಮೂಲೆಯಿರುವ ಮರದ /ಲೋಹದ ಕಟ್ಟು.

ಚೌಕಳಿ = ಚೌಕಾಕಾರವಾಗಿ ಹಾಕಿರುವ ಗೆರೆಗಳು, ಸಣ್ಣ ಸಣ್ಣ ಚಚ್ಚೌಕ ೨. ನಾಲ್ಕು ಮೊಳದ ತಲೆಗೆ ಸುತ್ತಿ ಕೊಳ್ಳುತ್ತಿದ್ದ ವಸ್ತ್ರ

ಚೌಕಾಬಾರ = ಗಟ್ಟಮನೆ ಆಟ, ನೆಲದ ಮೇಲೆ ಮನೆಗಳನ್ನು ಬರೆದು ಆಡುವ ಆಟ.

ಚೌಕಾಶಿ = ಚರ್ಚೆ ಮಾಡುವುದು, ವ್ಯವಹಾರ ಕುದುರಿಸಲು ನಡೆಸುವ ಚರ್ಚೆ.

ಚೌಕಿ = ಮನೆಯ ಒಳ ಅಂಗಳದ ಸುತ್ತಯಿರುವ ಚಚ್ಚೌಕದ ಮನೆಯ ಭಾಗ.

ಚೌಕಿಮನೆ = ಒಳಂಗಳವಿದ್ದು ಸುತ್ತಲೂ ಚೌಕಿಯಿರುವ ಮನೆ.

ಚೌಡಿ = ಮಲೆನಾಡಿಗರು ಪೂಜಿಸುವ ಒಂದು ದೈವ/ ಭೂತ.

ಚೌತಿ = ಚತುರ್ಥಿ, ನಾಲ್ಕನೆಯ ದಿನ/ ತಿಥಿ, ಗಣಪತಿ ಹಬ್ಬ.

ಚೌತೆಕಾಯಿ = ಸೌತೆಕಾಯಿ, ಬಳ್ಳಿಯ ತರಕಾರಿ.

ಚೌರ = ಕ್ಷೌರ, ಹಜಾಮತಿ ೨. ನಷ್ಟ, ಪೋಲು. (ಅಲಂ)

ಚೌರದವ್ನ= ಹಜಾಮ, ಕ್ಷೌರಿಕ.

ಚೌರಿ = ಉದುರಿದ ಕೂದಲನ್ನು ನೆಯ್ದು ಮಾಡಿದ ಚೌರಿ, ಹೆಂಗಸರು ಧರಿಸುವ ಕೂದಲಿನ ಚೌರಿ.

ಚೌಲ = ಚವಲ, ಮೊದಲ ಬಾರಿಗೆ ಕೂದಲು ಕತ್ತರಿಸುವುದು.

ಛ

ಛಡಿ = ತೆಣೆ, ಮೆಟ್ಟಿಲು, ಗೋಡೆಯಿಂದ ಮುಂದಕ್ಕೆ ಚಾಚಿಕೊಂಡಿರುವ ಭಾಗ. ೨. ತೆಳ್ಳನೆ ನೀಳವಾದ ಬೆತ್ತ, ಕೋಲು, ಬೆತ್ತದ ಕೋಲು.

ಛತ್ರ = ಧರ್ಮಚತ್ರ, ಬಿಟ್ಟಿ ಊಟ/ವಸತಿ ಸಿಗುವ ಸ್ಥಳ.

ಛತ್ರಿ = ಕೊಡೆ, ಬಿಸಿಲು – ಮಳೆಯಲ್ಲಿ ರಕ್ಷಣೆ ಪಡೆಯುವ ಸೂಡು.

ಛಲ = ಹಟ, ಸ್ಥಿರಸಂಕಲ್ಪ.

ಛವಿ = ನಂಜು, ನಂಜಾಗುವಿಕೆ.

ಛಳಿ = ಶೀತದ ಕಾಲ, ಮಾಗಿಕಾಲ, ಚಳಿ, ಶೀತ, ತಂಡಿ.

ಛಳಿಜ್ವರ = ಮಲೇರಿಯಾ.

ಛಳಿಗಾಲ = ಛಳಿಗಾಲ, ಶೀತದ ಕಾಲ, ಮಾಗಿಕಾಲ.

ಛಳುಕು = ಚಳುಕು, ನರವಾಯು, ಒಮ್ಮಿಂದೊಮ್ಮೆಲೇ ನರ ಮಿಡಿದು ಉಂಟಾಗುವ ನೋವು.

ಭಾತಿ = ಬಳಕೆ, ಧೈರ್ಯ, ಕೆಚ್ಚು ೨.ಅಭ್ಯಾಸ.
ಭಾಯೆ = ನೆರಳು, ನೆಳಲು, ಪ್ರತಿಬಿಂಬ ೨.ಸುಳಿವು, ಸೂಚನೆ.
ಭಾವಣಿ = ಮನೆಯ ಸೂರು, ಮುಚ್ಚಿಗೆ.
ಭಿದ್ರ = ಚೂರು, ಒಡೆದ.
ಭೀಮಾರಿ = ಖಂಡಿಸುವುದು.
ಭೂಬಿಡು = ನಾಯಿಯನ್ನು ಇತರರ ಮೇಲೆ ನುಗ್ಗುವಂತೆ ಮಾಡು ೨. ಚುಚ್ಚಿಕೊಡು, ವಿರುದ್ಧ ನಿಲ್ಲಿಸು.
ಭೋಕ್ರ = ಹುಡುಗ, ಬಾಲಕ, ಪೋರ, ಪೋಕರಿ.

ಜ

ಜಂಗೀಕುಸ್ತಿ = ಭಾರೀಕುಸ್ತಿ, ದೊಡ್ಡ ಜಗಳ.
ಜಂಗು = ತುಕ್ಕು, ಕಿಲುಬು, ಕಿಟ್ಟ.
ಜಂಗುಳಿ = ಗುಂಪು, ಸಮೂಹ, ರಾಶಿ.
ಜಂಘಾಬಲ = ನಡೆಯುವ ಶಕ್ತಿ, ಮೀನ ಖಂಡದ ಶಕ್ತಿ.
ಜಂಜಡ = ತೊಂದರೆ, ಕಷ್ಟ.
ಜಂಜನಿತ = ಜನಜನಿತ, ಪ್ರಸಿದ್ಧ, ಎಲ್ಲರಿಗೂ ತಿಳಿದಿರುವ.
ಜಂಜಾಟ = ಜಂಜಡ.
ಜಂಜಿರ್ಗಿ = ಒಂದೇ ಕಾಂಡದ ಚಿಕ್ಕ ಗಿಡ, ಸಣ್ಣ ಹರೆಗಳು, ಹರೆಗಳಿಗೆಲ್ಲಾ ಗೆಲ್ಲುಗಳು. ಒಣಗಿಸಿ ಕಾಳುಕಡ್ಡಿ ಗುಡಿಸಿ ಒಂದು ಮಾಡಲು ಪೊರಕೆ ಯಂತೆ ಬಳಕೆ.
ಜಂಜಿರಿಗೆ = ಮೀನಿನ ಕೂಣಿ ಮಾಡುವ ಸಲಕು.
ಜಂತ = ದಂತ, ಹಲ್ಲು, ಆನೆಯ ಕೋರೆ.
ಜಂತಿ = ಜಂತೆ, ಮೇಲ್ಛಾವಣಿಗೆ ಆಧಾರವಾದ ತೊಲೆಗಳ ಮೇಲಿನ ಅಡ್ಡಪಟ್ಟಿ, ಸಣ್ಣ ಅಡ್ಡ ತೊಲೆ.
ಜಂತೆ = ಜಂತಿ.
ಜಂತಿ ಎಣಸು = ಬೇರೆಯವರ ಮನೆಗೆ ಕೇಡು ಬಗೆ, ದ್ರೋಹ ಮಾಡು. (ಅಲಂ)
ಜಂತು = ಜೀವಿ, ಪ್ರಾಣಿ.
ಜಂತುಳ = ಹೊಟ್ಟೆಹುಳ, ಕರುಳಿನಲ್ಲಿ ಹುಟ್ಟುವ ಹುಳ.
ಜಂಪು = ತೂಕಡಿಕೆ, ಮಬ್ಬು, ಅರೆನಿದ್ದೆ, ನಿದ್ದೆ ಹತ್ತುವ ಹಂತ.
ಜಂಬ = ಹೆಮ್ಮೆ, ಬಿಂಕ, ಸೊಕ್ಕು.
ಜಂಬರ = ಗುಟ್ಟು, ಗುಟ್ಟಿನ ವಿಚಾರ, ಜಂಬ್ರ
ಜಂಬಕೊಚ್ಚು = ತನ್ನನ್ನು ತಾನು ಹೊಗಳಿಕೊಳ್ಳು, ಆಡಂಬರದ ಮಾತಾಡು, ಅಹಂಕಾರ ಪಡು.
ಜಂಬಿರ್ವೆ = ಒಂದು ಜಾತಿಯ ವಾಸನೆ ಯಿರುವ ಇರುವೆ.
ಜಂಬು = ವಾಸನೆ, ನಾತ.
ಜಂಬು ನೇರ್ಳೆ = ಉತ್ತಮ ಜಾತಿಯ, ಔಷಧಿ ಗುಣವುಳ್ಳ ನೇರಳೆ ಮರದ ಸಣ್ಣ ಜಾತಿಯ ಹಣ್ಣು.
ಜಂಬುಹಣ್ಣು = ಕಾಡಿನಲ್ಲಿ ಸಿಗುವ ಬಿಳಿಯ ಪರಿಮಳದ ರುಚಿಯಾದ ಹಣ್ಣು.
ಜಂಬೆ ಮಂಗಪ್ಪೆ = ಕಾಡಿನ ಮರ, ಗಾಡಿ ಚಕ್ರಕ್ಕೆ ಉಪಯೋಗ.
ಜಕ್ಣಿ = ಜಕಣಿ, ದೈವ ಸ್ವರೂಪವೆಂದು ಸತ್ತ ಹಿರಿಯರನ್ನು

ಪೂಜಿಸುವುದು.

ಜಕ್ಣಿ ಗೂಡ್ಸಾವುನೆ = ತಿಥಿ, ಸತ್ತ ಹನ್ನೊಂದನೇ ದಿನದ ಕಾರ್ಯ, ಹೊಸದಾಗಿ ಸತ್ತವರನ್ನು ಎಡೆಯಿಟ್ಟು ಜಕ್ಕಣಿಗಳ ಜೊತೆ ಕೂಡಿಸುವ ಒಂದು ನಂಬಿಕೆ.

ಜಖಂ = ಮುರಿದು ಹೋದ, ಹಾಳಾದ, ಶಿಥಿಲ ೨. ನಿಶ್ಯಕ್ತರಾಗುವುದು, ವಯಸ್ಸಾಗಿ ಜರುಗಿ ಹೋಗುವುದು.

ಜಗಲಿ = ಮನೆಯ ಪಡಸಾಲೆ, ಮನೆಯ ಮುಂದಿನ ವೇದಿಕೆ, ಕಟ್ಟೆ.

ಜಗಳ = ಮಾತಿಗೆ ಮಾತು ಬೆಳೆಸು, ಎಳೆದಾಡು, ಕಿತ್ತಾಡು, ಕಾದಾಡು.

ಜಗಳಗಂಟ = ಜಗಳ ಮಾಡುವ ಸ್ವಭಾವದವನು.

ಜಗಳಗಂಟಿ = ಜಗಳ ಮಾಡುವ ಸೌಭಾವದವಳು.

ಜಗಳೆ = ದೊಡ್ಡ ಜಾತಿಯ ಜಿಗಣೆ, ಮಳೆಗಾಲದಲ್ಲಿ ಪ್ರಾಣಿಗಳ ರಕ್ತ ಹೀರುವ ಜಂತು.

ಜಗಿ = ಅಗಿ, ತಿನ್ನು, ಕಚ್ಚು, ಮೆಲುಕು ಹಾಕು.

ಜಗ್ಗಾಟ = ಎಳೆದಾಟ, ಎಳೆದಾಡುವಿಕೆ.

ಜಗ್ಗಾಡು = ಎಳೆದಾಡು, ಚೌಕಾಸಿಮಾಡು.

ಜಗ್ಗಿಹೋಗು = ಜಖಂ ಆಗು.

ಜಗ್ತ = ಜಗಿತ, ಸೆಳೆತ, ನೋವು (ಕಾಲು ಜಗ್ತ, ಮೈಕೈ ಜಗ್ತ).

ಜಗ್ಲಿ = ಜಗಲಿ.

ಜಗ್ಗು = ಎಳೆ, ಕುಗ್ಗು, ಬಾಗು, ಕುಸಿ.

ಜಜ್ಜು = ಚಚ್ಚು, ಕುಟ್ಟು, ಪುಡಿಮಾಡು, ಚೂರುಮಾಡು.

ಜಟಗ = ಒಂದು ದೈವ.

ಜಟಾಪಟಿ = ಒಳಜಗಳ, ಜಗಳ, ಕುಸ್ತಿ.

ಜಟ್ಟಿ = ೧.ಕುಸ್ತಿ ಮಾಡುವವನು, ಗರಡಿಯುವನು ೨.ಜಗಳದ ಸ್ವಭಾವದವಳು.

ಜಟೆ = ಸಿಕ್ಕುಗಟ್ಟಿದ ಕೂದಲು.

ಜಡ = ಜ್ವರ, ಕಾಯಿಲೆ, ಸೋಮಾರಿತನ.

ಜಡತಿ = ತಪಾಸಣೆ.

ಜಡಿ = ಹೊಡೆ, ಬಡಿ, ಕುಟ್ಟು, ೨.ಮಳೆ ಬೀಳುವುದು, ಜಡಿಮಳೆ.

ಜಡಿತ = ಹೊಡೆತ, ಬಡಿತ.

ಜಡಿಮಳೆ = ಎಡೆಬಿಡದೆ ಸುರಿಯುವ ಮಳೆ, ಸೋನೆಮಳೆ.

ಜಡೆ = ಹೆಣೆದ ತಲೆಗೂದಲು, ಹೆರಳು.

ಜಡೆಗಟ್ಟು = ಸಿಕ್ಕು ಸಿಕ್ಕಾಗು, ಜಡೆನೆಯ್ದಂತೆ ಗಂಟಾಗಿರುವುದು.

ಜಡೆ ಗೊಲ್ಟೆ = ಕನಕಾಂಬರ, ಅಬ್ಬಲಿಗೆ, ಒಂದು ಜಾತಿಯ ಹೂ.

ಜಡೆಬಿಲ್ಲೆ = ಜಡೆಗೆ ಹಾಕುವ ಆಭರಣ, ಜಡೆ ಹೂವು.

ಜಡೆಹೆಣಿ = ಸುಂದರವಾಗಿ ಕೂದಲನ್ನು ಬಾಚಿ ಹೆಣೆಯುವುದು.

ಜಡ್ಡು = ೧. ಕಾಯಿಲೆ, ೨. ಜಡತೆ, ಸೋಮಾರಿತನ, ೩. ಗಿಡಮರಗಳಿಲ್ಲದೇ ಬರಿ ನೆಲಮಟ್ಟದಲ್ಲಿ ಹುಲ್ಲು ಬೆಳೆವ ಭೂಮಿ, ಹುಲ್ಲುಗಾವಲು ೪ ಗಟ್ಟಿಯಾದ ಚರ್ಮ, ಚರ್ಮದ ಗಟ್ಟಿಯಾದ ಭಾಗ.

ಜಡ್ಡುಗಟ್ಟು = ಮೃದುತ್ವ ಕಳೆದುಕೊಳ್ಳು,

ಗಡುಸಾಗು, ಬಿರುಸಾಗು ಮರಗಡು.

ಜಡ್ಡುಸೀರೆ = ಮನೆಯಲ್ಲಿ ಉಟ್ಟುಕೊಳ್ಳುವ ಹದಿನೆಂಟು ಮಳದ ಸೀರೆ.

ಜತನ = ಜೋಪಾನ, ರಕ್ಷಣೆ.

ಜತಿಗಾರ = ಜೊತೆಯಲ್ಲಿರುವವನು, ಸಂಗಾತಿ, ಸ್ನೇಹಿತ, ಗೆಣೆಯ.

ಜತೆಕಟ್ಟು = ಬಿಟ್ಟ ಸ್ನೇಹವನ್ನು ಮತ್ತೆಮಾಡು, ಒಟ್ಟುಗೂಡು.

ಜತೆಗಾತಿ = ಸಂಗಾತಿ, ಒಡನಾಡಿ, ಸ್ನೇಹಿತೆ.

ಜತೆಬಿಡು = ಸ್ನೇಹವನ್ನು ಬಿಡು, ಗೆಳೆತನವನ್ನು ತೊರೆ.

ಜನ = ವ್ಯಕ್ತಿ, ಮನುಷ್ಯ.

ಜನಜಂಗುಳಿ = ಜನಜಂಗ್ಳಿ, ಜನಸಮುದಾಯ, ಜನರಗುಂಪು.

ಜನನ = ಹುಟ್ಟು, ಜನ್ಮ.

ಜನ್‌ಬಲ = ಜನರ ಬೆಂಬಲ/ಸಹಾಯ.

ಜನಾಂಗ = ಬುಡಕಟ್ಟು, ತಲೆಮಾರು, ಪೀಳಿಗೆ.

ಜನಿ = ಜಿನುಗು, ಒಸರು, ನೀರು ಜನಿತಾಯಿರುವುದು.

ಜನುಮ = ಜನ್ಮ, ಜೀವಮಾನ, ಬಾಳ್ವೆ.

ಜನ್ಮತಃ = ಹುಟ್ಟಿನಿಂದ, ಈ ಜನ್ಮದಿಂದ ಹುಟ್ಟಿದಾರಭ್ಯ (ಜನ್ಮತಃ ಇರುವುದೇ ಹಾಗೆ).

ಜನ್ಮಜಾಲಾಡು = ಹಿಂದಿನ ದೊಷಗಳನ್ನೆಲ್ಲಾ ಎತ್ತಿ ಬಾಯಿಗೆ ಬಂದಂತೆ ಬೈಯುವುದು.

ಜನ್ಮ ಹೊರಿಯುದು = ಜೀವನ ಸಾಗಿಸುವುದು.

ಜನ್ನೇರ್ಲು = ನಾಯಿನೇರಳೆ

ಜಪ್ಪಯ್ಯ = ಏನು ಮಾಡಿದರೂ, ಅಂಗಲಾಚಿದರೂ, ಎಷ್ಟೇ ಕೇಳಿ ಕೊಂಡರು (ಜಪ್ಪಯ್ಯ ಅಂದ್ರೂ ಕೊಡುವುದಿಲ್ಲ).

ಜಪ್ತಿ = ತಪಾಸಣೆ, ಮುಟ್ಟುಗೋಲು, ನ್ಯಾಯದ ಬೆಂಬಲದಿಂದ ವಸ್ತು ಗಳನ್ನು ವಶಪಡಿಸಿಕೊಳ್ಳುವುದು.

ಜಪ್ಪು = ಹೊಡಿ, ಚಚ್ಚು, ಕುಟ್ಟು, ಬಡಿ, ಅಪ್ಪಳಿಸು.

ಜಬರ್ದಸ್ತಿ = ದರ್ಪ, ವೈಭವ ೨. ಒತ್ತಾಯ, ಬಲಾತ್ಕಾರ, ಬೆದರಿಕೆ

ಜಬರ್ದಸ್ತು = ಜಬರ್ದಸ್ತಿ.

ಜಬ್ಬ = ಮುದುಕ.

ಜಬ್‌ಮೀನು = ಗದ್ದೆಗಳಲ್ಲಿರುವ ಸಣ್ಣ ಮರಿ ಮೀನು, ಕೊಚ್ಚೆಗಿಂತ ದೊಡ್ಡ ಮೀನು.

ಜಬ್ಬಟ್ಟು = ಜಬ್ಬಟ್ಟೆ.

ಜಬ್ಬಟ್ಟೆ = ಜಬ್ಬು, ಹಳೆಯದಾದ, ಶಿಥಿಲವಾದ.

ಜಬ್ಬಿ = ಮುದುಕಿ.

ಜಬ್ಬು = ಬಲಹೀನತೆ, ಮೆತ್ತಗೆ, ಮುಪ್ಪಿನ ವ್ಯಕ್ತಿ ೨. ಬಾಡಿದ ಹೂ ೩. ಸಣ್ಣ ಮೀನು (ಜಬ್‌ಮೀನು).

ಜಮಖಾನ = ನೂಲುಗಂಬಳಿ, ದಪ್ಪ ನೂಲಿನ ಹಾಸು.

ಜಮ್ಮ = ಸೇವೆಗಾಗಿ ಬಂದ ಉಂಬಳಿ ಭೂಮಿ.

ಜಮಾ = ಆಯ, ಆದಾಯ, ಸಂಗ್ರಹ, ಶೇಕರಣೆ.

ಜಮಾ ಖರ್ಚು = ಆಯವ್ಯಯ, ಆದಾಯ ಮತ್ತು ವೆಚ್ಚ.

ಜಮಾದಾರ = ಪೊಲೀಸು, ಅಧಿಕಾರಿ, ಸೈನ್ಯದ ಅಧಿಕಾರಿ.

ಜಮಾಬಂದಿ = ಕಂದಾಯ ನಿಗದಿಪಡಿಸುವ ವ್ಯವಸ್ಥೆ.

ಜಮಾಯ್ಸು = ಒಟ್ಟುಗೂಡಿಸು, ಸೇರಿಸು.

ಜಮಾವಣೆ = ಶೇಖರಣೆ, ಸಂಗ್ರಹ.

ಜಮೀನು = ನೆಲ, ಕೃಷಿಭೂಮಿ.

ಜಮೀನ್ದಾರ = ವಂಶ ಪರಂಪರೆಯಿಂದ ಅಧಿಕ ಭೂಮಿಯನ್ನು ಹೊಂದಿರುವವನು.

ಜಯ = ಗೆಲುವು, ಗೆಲ್ಲುವುದು, ವಿಜಯ ೨. ಒಂದು ಜಾತಿಯ ಭತ್ತದ ತಳಿ.

ಜರ = ಜ್ವರ, ಮೈ ಬಿಸಿಯಾಗುವುದು.

ಜರಗು = ಗಟ್ಟಿಯಿಲ್ಲದುದು, ಭಾರ-ವಿಲ್ಲದುದು, ಜಾಳು. ೨. ಕೃಶವಾಗು.

ಜರಡಿ = ವಂದರಿ, ಸಾರಣೆ, ಕಣ್ಣಿರುವ ಗೆರ್ಸಿ.

ಜರಡಿಹಿಡಿ = ಸಾಣಿಸು, ಚಿಕ್ಕವು ದೊಡ್ಡವನ್ನು ಬೇರ್ಪಡಿಸು, ಕಸಕಡ್ಡಿಯನ್ನು ಬೇರೆಮಾಡು.

ಜರತಾರಿ = ಕಲಾಬತ್ತಿನ, ಜರಿ ಕೆಲಸ ಮಾಡಿದ ಬಟ್ಟೆ.

ಜರಿ = ಜರತಾರಿ ೨. ಬಯ್ಯು, ನಿಂದಿಸು, ಹೀಯಾಳಿಸು ೩. ಸಾವಿರ ಕಾಲಿನ ಹುಳ.

ಜರುಗು = ಪಕ್ಕಕ್ಕೆ ಸರಿ.

ಜರ್ದುಬೀಳು = ಜಾರು, ಕುಸಿದು ಬೀಳು.

ಜರ್ಸು = ದೆರ್ಸು, ಉದುರಿಸು, ಕೆಡವು, ಬೀಳಿಸು.

ಜರುಗ್ಸು = ಪಕ್ಕಕ್ಕೆ ತಳ್ಳು, ನೂಕು, ಸರಿಸು.

ಜರ್ಬು = ಗರ್ವ, ಜಂಭ.

ಜರೂರು = ಅವಶ್ಯ, ಕೂಡಲೇ ಆಗಬೇಕಾಗಿರುವುದು.

ಜಲ = ನೀರು.

ಜಲ ಒಡೆಯದು = ಮಳೆಗಾಲದಲ್ಲಿ ನೆಲದಿಂದ ನೀರು ಚಿಮ್ಮುವುದು, ಮಳೆಗಾಲದ ಸಹಜ ನೀರಿನ ಬುಗ್ಗೆ.

ಜಲಗಾರ = ಜಾಡಮಾಲಿ.

ಜಲ್‌ಜಲ್ದಿ = ಬೇಗಬೇಗನೆ, ಅತಿ ಶೀಘ್ರವಾಗಿ, ಅವಸರಿಸುವುದು.

ಜಲ್‌ತಾರಾ = ನೀರಿನಲ್ಲಿ ಆಡುವಾಗ ಹರಡಿಕೊಳ್ಳುವ ಉಡುಗೆ (ಅಲಂ).

ಜಲದ್‌ಕಣ್ಣು = ನೀರಿನ ಸೆಲೆಯಿರುವ ಜಾಗ ೨. ನೀರು ಭೂಮಿಯಿಂದ ಚಿಮ್ಮುವ ಸ್ಥಳ.

ಜಲ್‌ಪಾತ = ಜಲಪಾತ, ನೀರು ಬೀಳುವ /ಧುಮುಕುವ ಸ್ಥಳ.

ಜಲ್‌ಬಾಧೆ = ಮೂತ್ರ ವಿಸರ್ಜನೆ/ಮಲ ವಿಸರ್ಜನೆ.

ಜಲ್‌ಸಮಾಧಿ = ನೀರಿನಲ್ಲಿ ಮುಳುಗಿ ಹೋಗುವುದು, ನೀರಿನಲ್ಲಿ ಮುಳುಗಿ ಸಾಯುವುದು.

ಜಲ್ಮ = ಜನ್ಮ, ಹುಟ್ಟು.

ಜಲ್ದಿ = ಬೇಗನೆ, ಶೀಘ್ರವಾಗಿ.

ಜಲ್ಲಿ = ಕಲ್ಲಿನ ಚೂರು, ತುಂಡು ಮಾಡಿದಕಲ್ಲು ೨. ಚೂರು, ತುಣುಕು, ತುಂಡು.

ಜಲ್ಲು = ಊರುಗೋಲು.

ಜಲ್ಲೆ = ಕಲ್ಲಿ, ದರಗು ತುಂಬಿಸುವ ಜಾಳು ಚೀಲ ೨. ಗಳ, ಕೋಲು ೩. ಗರಿ ಸಮೇತದ ಕಬ್ಬು.

ಜವರಾಯ = ಯಮ, ಸತ್ತವರನ್ನು ಕರೆದುಕೊಂಡು ಹೋಗುವ ದೇವರು ಎಂಬ ನಂಬಿಕೆ.

ಜವಳಿ = ಬಟ್ಟೆ, ಅರಿವೆ, ವಸ್ತ್ರ.

ಜವಳಿ ತೆಗೆಯಾದು = ಮದುವೆಗಾಗಿಯೇ ಬಟ್ಟೆಬರೆಗಳನ್ನು ಖರೀದಿಸುವುದು.

ಜವಾಬು = ಉತ್ತರ, ಮರುಮಾತಾಡು, ಉತ್ತರಿಸುವುದು.

ಜವಾಬುದಾರ = ಹೊಣೆಗಾರ.

ಜಬಾಬುದಾರಿ = ಹೊಣೆ, ಹೊಣೆಗಾರಿಕೆ.

ಜವಾಬ್ದಾರ್ಕಿ = ಜವಾಬುದಾರಿ, ಜವಾಬ್ದಾರಿ ತೆಗೆದುಕೊಳ್ಳುವ ಕೆಲಸ.

ಜವ್ಣಿ= ೧.ಬತ್ತದ ಸಿಪ್ಪೆ, ಬತ್ತದ ಹೊಟ್ಟು ೨. ಸ್ನಾನಕ್ಕೆ ಮೈ ಉಜ್ಜಲು ಬಳಸುವ ಜುಂಗು

ಜವುಗು = ಜೌಗು, ಯಾವಾಗಲೂ ನೀರು ಒಸರುವ ಪ್ರದೇಶ.

ಜಲಕ = ಸ್ನಾನ, ಎಣ್ಣೆ ನೀರು ಹಾಕಿ–ಕೊಳ್ಳುವುದು, ಹೆಚ್ಚುನೀರು ಬಳಸಿ ಮೀಯುವುದು.

ಜಳ್ಳು = ೧.ಹುರುಳಿಲ್ಲದುದು, ಪೊಳ್ಳಾದುದು, ಪ್ರಯೋಜನವಿಲ್ಲದ್ದು ೨.ತಿರುಳಿಲ್ಲದ ಕಾಳು, ಜಟ್ಟು.

ಜ್ವರ = ಮೈ ಬಿಸಿಯಾಗುವ ಒಂದು ಖಾಯಿಲೆ.

ಜ್ವರ ಬಕ್ಕೆ = ಜ್ವರದ ತಾಪದಿಂದಾಗಿ ತುಟಿ, ಬಾಯಲ್ಲಿ ಆಗುವ ಹುಣ್ಣು.

ಜಾಗ = ೧. ಸ್ಥಳ, ನೆಲ, ೨. ಎಡೆ, ಅವಕಾಶ.

ಜಾಗಂಟೆ = ಗುಂಡಗಿರುವ ಗಂಟೆ, ಕೋಲಿನಿಂದ ಬಡಿಯುವ ಕಂಚಿನ ತಾಳ.

ಜಾಗಂಟೆ ಸುಣ್ಣ = ಸುಣ್ಣವನ್ನು ಬೇಯಿಸಿ, ಶೋಧಿಸಿ, ಸ್ವಲ್ಪ ಬೆಣ್ಣೆಯನ್ನು ಸೇರಿಸಿ ತಿನ್ನಲು ಯೋಗ್ಯವಾಗಿಸಿ ಮಡಿಕೆಯಲ್ಲಿ ಸಂಗ್ರಹಿಸಿಡುವುದು.

ಜಾಗಟೆ = ಜಾಗಂಟೆ.

ಜಾಗರಣೆ = ಎಚ್ಚರವಿರುವುದು, ನಿದ್ದೆ ಮಾಡದಿರುವಿಕೆ.

ಜಾಡಿ = ೧.ಹೊದೆಯುವ ದಪ್ಪ ಕಂಬಳಿ ೨.ಉಪ್ಪಿನ ಕಾಯಿ/ಉಪ್ಪುಪ್ಪ/ತುಪ್ಪ ಮುಂತಾದುವನ್ನು ಹಾಕಿಡುವ ಗಾಜಿನ ಭರಣಿ.

ಜಾಡಿಸು = ೧.ಒದರು, ಕೊಡವು, ೨. ಕಸಗುಡಿಸು ೩. ನಿಂದಿಸು.

ಜಾಡು = ಸವೆದ ದಾರಿ, ಸುಳಿವು, ಗುರುತು.

ಜಾಡುಹಿಡಿ = ಸುಳಿವು ತಿಳಿ, ದಾರಿ ಹಿಡಿ, ೨.ಪ್ರಾಣಿಗಳ ಹೆಜ್ಜೆ ಗುರುತನ್ನು ಅನುಸರಿಸಿ ಹೋಗುವುದು (ಶಿಕಾರಿ ಮಾಡಲು).

ಜಾಣ = ಬುದ್ಧಿವಂತ, ಕುಶಲ.

ಜಾಣತನ = ಬುದ್ಧಿವಂತಿಕೆ, ಕುಶಲತೆ.

ಜಾಣೆ = ಬುದ್ಧಿವಂತೆ, ಕುಶಲೆ.

ಜಾಣ್ಮೆ = ಜಾಣತನ.

ಜಾತಕ = ಜನ್ಮಪತ್ರಿಕೆ, ಜನ್ಮಕಾಲದ ಗ್ರಹಗತಿಯನ್ನು ತಿಳಿಸುವ ಪತ್ರಿಕೆ.

ಜಾತಬಾಕಿ = ಹಳೆಯ ಸಾಲವನ್ನು ಕಳೆದು

ಉಳಿದ ಬಡ್ಡಿಯನ್ನು ಮುಂದಿನ ಸಾಲಕ್ಕೆ ಸೇರಿಸಿ ಅದನ್ನು ಅಸಲೆಂದು ಪರಿಗಣಿಸಿ ಮತ್ತೆ ಬಡ್ಡಿಯನ್ನು ಹಾಕುವುದು.

ಜಾತಿ = ಕುಲ, ವಂಶ ೨. ಸ್ವಭಾವ.

ಜಾತ್ರೆ = ಉತ್ಸವ, ಉತ್ಸವದಲ್ಲಿ ಸೇರಿದ ಜನರ ಗುಂಪು.

ಜಾದು = ಇಂದ್ರಜಾಲ, ಮೋಡಿ.

ಜಾನುವಾರು = ದನಕರುಗಳು, ಕಾಲ್ನಡೆ, ಎಮ್ಮೆ ಕೋಣಗಳು.

ಜಾಬ = ದನಕರುಗಳನ್ನು ಕಟ್ಟುವ ನೆಯ್ದುಹಗ್ಗ/ಕಣ್ಣಿ.

ಜಾಬೋಜಾಬ್ = ದನಕರುಗಳು ಜಾಬದ ಹತ್ತಿರ ಹೋಗಲು ಸೂಚನೆಕೊಡುವ ಪದ.

ಜಾಮೀನು = ಹೊಣೆ, ಈಡು.

ಜಾಮೀನುದಾರ = ಮತ್ತೊಬ್ಬನ ಸಾಲಕ್ಕೆ ಅಥವಾ ವರ್ತನೆಗೆ ಹೊಣೆ ನಿಂತ ವ್ಯಕ್ತಿ.

ಜಾಮೀನು ಪತ್ರ = ಜಾಮೀನಾಗಿರುವುದಾಗಿ ಬರೆದುಕೊಟ್ಟ ಪತ್ರ.

ಜಾಯಮಾನ = ಸ್ವಭಾವ, ಹುಟ್ಟುಗುಣ, ಜೀವಮಾನ.

ಜಾಯಿಕಾಯಿ = ಔಷಧೀಯಯುಕ್ತ, ಸಾಂಬಾರ ಪದಾರ್ಥ. ಸಣ್ಣ ಮರದಲ್ಲಿ ಬಿಡುವ ಕಾಯಿ ನಿಂಬೆಹಣ್ಣಿನಂತಹ ಹಣ್ಣಿನ ಒಳಗೆ ಓಟೆ ಓಟೆಯ ಮೇಲೆ ಪತ್ರೆ, ಓಟೆಯ ಒಳಗೆ ಬೀಜ/ಕಾಯಿ ಇರುತ್ತದೆ. ಪತ್ರೆಗೆ ರಕ್ತನಾಳದಂತಹ ರಚನೆ.

ಜಾಯಿಕಾಯಿ ಪೆಟ್ಗಿ = ಜಾಯಿಕಾಯಿ ಮರದಿಂದ ಮಾಡಿದ ಸಣ್ಣ ಪೆಟ್ಟಿಗೆ ಹೆಚ್ಚು ಗಟ್ಟಿಯಿಲ್ಲ.

ಜಾರ್ಗಲ್ಲು = ಜಾರುಬಂಡೆ, ಜಾರುವ ಕಲ್ಲು.

ಜಾರಿ = ಆಚರಣೆ, ಕಾರ್ಯರೂಪ, ಚಾಲ್ತಿಗೆ ತರುವುದು.

ಜಾರು = ಕಾಲುಜಾರು, ಆಯತಪ್ಪು ೨.ತಪ್ಪಿಸಿಕೊಳ್ಳು, ಹಿಂಜರಿ, ಪಾರಾಗು. (ಅಲಂ)

ಜಾಲ = ನಾಟದ ಮರ.

ಜಾಲರಿ = ಕಣ್ಣು ಸೌಟು, ಕಣ್ಚೆಪ್ಪು.

ಜಾಲಾಡು = ಅಲುಬು, ಕಲುಕು, ಹುಡುಕಾಡು.

ಜಾಲಿಗಿಡ = ದೊಡ್ಡ ಪೊದೆ, ತುಂಬಾ ಮುಳ್ಳು.

ಜಾಲಿಮರ = ಅಕೇಶಿಯಾ, ಸಾಮಾನ್ಯ ಎತ್ತರದ ಈ ಮರವನ್ನು ಉರುವಲಿಗಾಗಿ ಬೆಳೆಸುತ್ತಾರೆ.

ಜಾಲಿಸು = ಸೋಸು, ಶೋಧಿಸು, ಅಲುಬು.

ಜಾವ್ಣ= ಬೆಳಕು ಬಿಡುವ ಹೊತ್ತು, ಒಂದು ದಿನದ ಎಂಟನೇ ಒಂದು ಭಾಗ, ಯಾಮ.

ಜಾಳು = ೧.ಹುರುಳಿಲ್ಲದುದು, ಪೊಳ್ಳಾದುದು ೨. ನೇಯ್ಗೆಯ ಎಳೆಗಳು ದೂರಾಗಿರುವುದು.

ಜಿಂಕೆ = ಚಿಗರೆ, ಎರಲೆ, ಹರಿಣ.

ಜಿಂಪುಳಿ = ಈ ಕಾಡುಮರದಲ್ಲಿ ಬುಡದಿಂದ ತಲೆವರೆಗೆ ಕೊಂಬೆ ಕೊಂಬೆಯಲ್ಲು ತೊಂಡೆಕಾಯಿ ಯಂತೆ ಬಿಡುವ ರುಚಿಯಾದ ಹುಳಿಕಾಯಿ.

ಜಿಗಣೆ = ಇಂಬಳ, ರಕ್ತಹೀರುವ ಜಂತು.
ಜಿಗಟು = ಅಂಟು, ನಾರು, ಬಿಡಿಸಲು ಕಷ್ಟವಾದುದು.
ಜಿಗಿ = ನೆಗೆ, ಹಾರು.
ಜಿಗಿತ = ನೆಗೆಯುವುದು, ಹಾರುವುದು.
ಜಿಗುಟು = ಜಿಗಟು.
ಜಿಗುಳು = ಗದ್ದೆಯಲ್ಲಿ ನೀರು ನಿಲ್ಲದಂತೆ ಹರಿದು ಹೋಗಲು ಮಾಡಿರುವ ಚಿಕ್ಕ ಕಾಲುವೆ.
ಜಿಗ್ಗು = ಸಣ್ಣ ಉದ್ದನೆಯ ಬಲವಿಲ್ಲದ ಸೌದೆ, ಪುರಲು ಕಟ್ಟಿಗೆ.
ಜಿಡುಕು = ಸಿಕ್ಕುಗಟ್ಟಿದ ಕೂದಲು.
ಜಿಡ್ಡು = ಎಣ್ಣೆಯ ಜಿಗುಟು, ಅಂಟಿದ ಎಣ್ಣೆ, ಎಣ್ಣೆಯ ಪಸೆ.
ಜಿದ್ದಾಜಿದ್ದಿ = ಒಬ್ಬರಿಗೊಬ್ಬರು ಮತ್ಸರ ಸಾಧಿಸುವುದು.
ಜಿದ್ದು = ಮತ್ಸರ, ಪೈಪೋಟಿ, ಪಣ.
ಜಿನಸಿ = ಸಾಮಾನು, ದಿನಸಿ, ಅಂಗಡಿ ಸಾಮಾನು, ಕಾಳು – ಧಾನ್ಯ.
ಜಿನುಗು = ಹನಿಯಾಗಿ ಮಳೆನೀರು ಬೀಳು, ದ್ರವಿಸು, ತೊಟ್ಟಿಕ್ಕು.
ಜಿಪುಣ = ಲೋಭಿ, ಕೃಪಣ.
ಜಿಪುಣ್ತನ = ಲೋಭಿತನ.
ಜಿರಲೆ = ಹಾತೆಹುಳ, ಹಕ್ಕಳೆ.
ಜಿರಳೆ = ಜಿರಲೆ.
ಜಿಲ್ಲೆ = ಪರಗಣ, ಸೇರ್ಪಡೆಗೊಂಡ ಹಲವು ತಾಲ್ಲೂಕುಗಳು.
ಜೀಕು = ಉಯ್ಯಾಲೆ ೨. ತೊಟ್ಟಿಲು ತೂಗು.
ಜೀತ = ಕೆಲಸ, ಊಳಿಗ, ಗುಲಾಮಗಿರಿ.
ಜೀತದಾಳು = ಜೀತಗಾರ.
ಜೀತಗಾರ = ಜೀತದಾಳು, ಗುಲಾಮ.
ಜೀರ್ಣ = ಅರಗಿದ, ಮುಪ್ಪಾದ, ಶಿಥಿಲ.
ಜೀರ್ಣೋದ್ಧಾರ = ಹಳೆಯದನ್ನು ದುರಸ್ತಿ ಮಾಡುವುದು.
ಜೀರಟ್ಲೆ = ಜೀರುಂಡೆ.
ಜೀರಿಗಿ ಸಣ್ಣ = ಬತ್ತ, ಸೂಜಿಯಂತಹ ಸಣ್ಣಕ್ಕಿ.
ಜೀರ್ಗಿ ಮೆಣಸಿಕಾಯಿ = ಅತಿಸಣ್ಣ ಮೆಣಸಿನಕಾಯಿ.
ಜೀರ್ಗಿ ಮೆಣಸಿನ ಕಾಯಿ ನುರಿಯುವುದು= ಹೆಂಗಸರು ಮಕ್ಕಳಿಗೆ ಮೆಣಸಿನ–ಕಾಯನ್ನು ಜಜ್ಜಿ, ಗುದದೊಳಗೆ ನುರಿದು, ಕೊಡುತ್ತಿದ್ದ ಶಿಕ್ಷೆ.
ಜೀರ್ಗಿ ಮೆಣಸು = ಸಣ್ಣ ಮೆಣಸಿನಕಾಯಿ, ತುಂಬಾ ಖಾರ.
ಜೀರುಂಡೆ = ಹೆಚ್ಚು ಮಳೆ ಬೀಳುವ ಕಾಡುಗಳಲ್ಲಿ 'ಜೀ' ಎಂದು ಸದಾ ಸದ್ದು ಮಾಡುವ ಕೀಟ, ಜೀರಟ್ಲೆ.
ಜೀವ್ನ= ಜೀವ, ಪ್ರಾಣ.
ಜೀವಂತ = ಬದುಕಿರುವ, ಜೀವಿಸಿರುವ.
ಜೀವಕೊಡು = ಬಲಿದಾನ ಮಾಡು, ಪ್ರಾಣಕೊಡು.
ಜೀವನ = ಬದುಕು, ಬಾಳು.
ಜೀವನಮಟ್ಟ = ಬದುಕಿನ ಅಂತಸ್ತು.
ಜೀವನಾಂಶ = ಜೀವನಕ್ಕೆಂದು ಕೊಡುವ ಹಣ.
ಜೀವಮಾನ = ಜೀವಿತದ ಕಾಲ, ಬದುಕಿನ ಕಾಲ.
ಜೀವಹಿಂಡು = ಬಹಳ ತೊಂದರೆ ಕೊಡು.
ಜೀವಾವಧಿ = ಇಡಿಯ ಜೀವಮಾನ.
ಜೀವಾಳ = ಸತ್ವ, ಸಾರ, ಹುರುಳು ೨.

ರಹಸ್ಯ.

ಜುಂಗು = ತೆಂಗಿನ ಕಾಯಿಯ ನಾರು, ಕತ್ತ.

ಜುಗಾರಿ = ಜೂಜು, ಒಂದು ಮೋಜಿನ ಆಟ.

ಜುಗ್ಗ = ಜಿಪುಣ.

ಜುಜುಬಿ = ಕ್ಷುದ್ರವಾದ, ಅಲ್ಪವಾದ, ಸಣ್ಣದಾದ, ಯಃಕಶ್ಚಿತ್.

ಜುಟ್ಟಿಕಾಳಿಂಗ = ಕಾಳಿಂಗ ಸರ್ಪ.

ಜುಟ್ಟು = ಕಟ್ಟಿದ ಕೂದಲು, ಚಂಡಿಕೆ, ಶಿಖೆ.

ಜುಮ್ಮನ್ನ ಮರ = ಮರದ ಕಾಂಡದಲ್ಲಿ ದಪ್ಪ ಗಿಡ್ಡ ಅಗಲವಾದ ಮುಳ್ಳು-ಗಳಿರುತ್ತವೆ. ಮಕ್ಕಳು ಆ ಮುಳ್ಳನ್ನು ಕಿತ್ತು ಹಿಂದೆ. ಅಕ್ಷರವನ್ನು ಕೊರೆದು ಠಸ್ಸೆಯಂತೆ ಉಪಯೋಗಿಸುತ್ತಿದ್ದರು.

ಜುಮ್ಲಾ = ಒಟ್ಟು, ಮೊತ್ತ.

ಜುಮುಕಿ = ಕಿವಿಯ ಆಭರಣ, ಮುತ್ತಿನ ಕುಚ್ಚು.

ಜುಲಾಬು = ಬೇದಿ, ವಿರೇಚನ.

ಜುಲ್ಮಾನೆ = ದಂಡ, ಶಿಕ್ಷೆ.

ಜುಲುಮೆ = ಒತ್ತಾಯ, ಬಲವಂತ.

ಜುಳುಜುಳು = ನೀರು ಹರಿಯುವ ಶಬ್ಧ.

ಜೂಜು = ಹಣವನ್ನು ಪಣಕಟ್ಟಿ ಆಟ ಆಡುವುದು.

ಜೂಜಾಟ = ಜೂಜು.

ಜೂರತ್ತು = ಜರೂರು, ಅವಶ್ಯಕತೆ.

ಜೂಲು = ಪ್ರಾಣಿಗಳ ಮೈಮೇಲಿರುವ ಉದ್ದ ಕೂದಲು.

ಜೆಂಬ್ರ = ಗುಟ್ಟು, ರಹಸ್ಯ.

ಜೆಂಬು = ಹಳತಾಗಿ ವಾಸನೆ ಬರು, ಜಂಬು.

ಜೆಡೆ = ಜಡೆ.

ಜೆಪ್ಪು = ಬಡಿ, ಚಚ್ಚು.

ಜೆಲ್ಲು = ಊರುಗೋಲು, ಆಧಾರ.

ಜೇಡ = ಸಾಲಗ, ಬಲೆನೆಯ್ಯುವ ಕೀಟ.

ಜೇಡಿ = ಬಿಳಿಯ ಮಣ್ಣು.

ಜೇಡಿಮಣ್ಣು = ಬಿಳಿಮಿಶ್ರಿತ ಕೆಂಪುಮಣ್ಣು, ಕುಂಬಾರರು ಮಡಿಕೆ ಮಾಡಲು ಉಪಯೋಗಿಸುತ್ತಾರೆ.

ಜೇನು = ಜೇನುಹುಳದಿಂದಾಗುವ ಸಿಹಿ-ರಸ, ಮಧು.

ಜೇನುತುಪ್ಪ = ಜೇನು, ಮಧು ೨.ಮಕರಂದ.

ಜೇನುಮ್ಯಾಣ = ಜೇನುಹುಟ್ಟಿನಿಂದಾದ ಮೇಣ, ರಸ ಹಿಂಡಿದ ನಂತರದ ಅಂಟುವಸ್ತು.

ಜೇನುಹಲ್ಲೆ = ಜೇನುಗಳು ಮೊಟ್ಟೆಯಿಡುವ, ಮಧುವನ್ನು ಸಂಗ್ರಹಿಸುವ, ಅವುಗಳೇ ನಿರ್ಮಿಸಿದ ಗೂಡು.

ಜೇನುಹುಟ್ಟು = ಜೇನುಗೂಡು.

ಜೇನುಹುಳ = ಮಧುವನ್ನು ಸಂಗ್ರಹಿಸುವ ಕೀಟ.

ಜೇಬು = ಉಡುಪಿನಲ್ಲಿ ಅಳವಡಿಸಿ ಹೊಲಿದಿರುವ ಸಣ್ಣ ಚೀಲ.

ಜೇಸು = ಜಯಿಸು, ಗೆಲ್ಲು, ಜೈಸು.

ಜೇಷ್ಠ = ಜೇಷ್ಠಮಾಸ, ೨. ಹಿರಿಯ, ದೊಡ್ಡವನು, ೩. ಪ್ರಥಮ.

ಜೈನಡಿಗೆ = ಸಸ್ಯಾಹಾರದ ಅಡಿಗೆ,

ಸೀಯಡಿಗೆ.

ಜೈನೆಡೆ = ಸಸ್ಯಾಹಾರದ ಅಡಿಗೆಯನ್ನು ಮಾತ್ರ ಎಡೆಗಿಡುವುದು.

ಜೈಲು = ಕಾರಾಗೃಹ, ಬಂದೀಖಾನೆ, ಸೆರೆಮನೆ.

ಜೊಂಕ್ಲು = ಜೊಂಪಲು, ಗುಚ್ಛ, ಸಮೂಹ.

ಜೊಂಡು = ನೀರಿನಲ್ಲಿ ಬೆಳೆಯುವ ಗಟ್ಟಿಹುಲ್ಲು.

ಜೊಂಪು = ೧. ಮತ್ತು, ಅಮಲು, ಮೈಮರೆವು ೨. ತೂಕಡಿಕೆ, ಮಂಪರು, ಜಂಪು.

ಜೊತಕ = ಎತ್ತಿನ ಕೊರಳಿಗೆ ನೊಗ ಕಟ್ಟುವ ಹಗ್ಗ, ಜೊತಗ.

ಜೊತೆ = ಎರಡರ ಜೋಡಿ ೨. ಸಹವಾಸ ೩. ಜೋಡಣೆ.

ಜೊತ್ಗೆ = ಹಗ್ಗ, ಜೊತಕ.

ಜೊಲ್ಲು = ಲಾಲಾರಸ, ಬಾಯಿಂದ ಊರುವ ನೀರು, ಮಕ್ಕಳು/ ಪ್ರಾಣಿಗಳ ಬಾಯಿಂದ ಸುರಿಯುವ ಎಂಜಲು.

ಜೊಳ್ಳು = ಜಳ್ಳು.

ಜೋಕಾಲಿ = ಉಯ್ಯಾಲೆ.

ಜೋಗಿ = ನಿಂತಲ್ಲಿ ನಿಲ್ಲದೆ ಅಲೆಯುವ ಭಿಕ್ಷು, ಬೈರಾಗಿ.

ಜೋಗ್ತಿ = ಜೋಗಿಯ ಹೆಂಡತಿ.

ಜೋಗುಳ = ಲಾಲಿಪದ, ತೊಟ್ಟಿಲಹಾಡು, ಮಕ್ಕಳನ್ನು ಮಲಗಿಸುವಾಗ 'ಜೋ' ಎಂದು ಹಾಡುವುದು.

ಜೋಡಿ = ಜೊತೆ.

ಜೋಡು = ಮೆಟ್ಟು, ಪಾದರಕ್ಷೆ, ಚಪ್ಪಲಿ.

ಜೋಡ್ಸು = ಸೇರಿಸು, ಕೂಡಿಸು.

ಜೋತಿ = ಬೆಳಕು, ನಂದಾದೀಪ, ಜ್ಯೋತಿ.

ಜೋನಿಬೆಲ್ಲ = ಗಟ್ಟಿಯಿರದ, ಜೇನು–ತುಪ್ಪಕ್ಕಿಂತ ಸ್ವಲ್ಪ ಗಟ್ಟಿಯಿರುವ ಬೆಲ್ಲ.

ಜೋಬದ್ರ = ಸೋಮಾರಿ, ಆಲಸಿ, ಲವಲವಿಕೆಯಿಲ್ಲದಿರುವಿಕೆ.

ಜೋ ಬದ್ರತನ = ಸೋಮಾರಿತನ, ಆಲಸ್ಯದಿಂದಿರುವುದು.

ಜೋಬದ್ರಮುಖ = ಯಾವಾಗಲೂ ಸೋಮಾರಿಯಾಗಿ ಜೋಲು ಮುಖ ಮಾಡಿಕೊಂಡಿರುವುದು.

ಜೋಬು = ಜೇಬು.

ಜೊಯಿಸ = ಜೋತಿಷ್ಯ ಬಲ್ಲವನು.

ಜೋರು = ದರ್ಪ, ಒತ್ತಾಯ, ರಭಸ.

ಜೋಲಾಡು = ನೇತಾಡು, ತೂಗಾಡು.

ಜೋಲಿ = ೧. ಉಯ್ಯಾಲೆ, ೨.ಮಕ್ಕಳನ್ನು ಮಲಗಿಸಲು ಕಟ್ಟುವ ಬಟ್ಟೆಯ ಜೋಕಾಲಿ, ೩.ಕೆಳಗೆ ಬಾಗಿರುವ ಮರದ ರೆಂಬೆ, ೪.ಮರದ ರೆಂಬೆಯನ್ನೇ ಉಯ್ಯಾಲೆಯಂತೆ ಬಳಸುವುದು.

ಜೋಲು = ನೇತುಬೀಳು, ಇಳಿಬೀಳು.

ಜೋಲುಮುಖ = ಬಾಡಿದ ಮುಖ, ಇಳಿಬಿದ್ದ ಮುಖ.

ಜೋಳ್ಗನ ಅಕ್ಕಿ = ಕೆಂಪಗಿರುವ ಅಕ್ಕಿ.

ಜೋಳಿಗಿ = ಚಚ್ಚೌಕವಾದ ವಸ್ತ್ರದ ನಾಲ್ಕು ಮೂಲೆಗಳನ್ನು ಸೇರಿಸಿ ಮಾಡಿದ ಚೀಲ.

ಜೋಪಾಲೆ = ಜೋಲುವ ಸರ, ಗುಂಡಿನ ಸರ.

ಜೌಗು = ಯಾವಾಗಲು ನೀರು ಒಸರುವ ಭೂಮಿ.

ಝ

ಝುಂಡಾಊರು = ತಳವೂರು, ಹೋದಲ್ಲಿಯೇ ಕುಳಿತುಕೊಳ್ಳುವ ಚಾಳಿ.

ಝುಗಝುಗ = ಹೊಳೆಯುತ್ತದೆ ಎಂದು ಹೇಳುವ ಶಬ್ಧ.

ಝುಡತಿ = ತನಿಖೆ.

ಝುಳ = ತಾಪ, ಬಿಸಿಲು, ಶಾಖ.

ಝಾಡಿಸು = ಜೋರಾಗಿ ಒದರು, ಜೋರಾಗಿ ಒದೆಯುವುದು.

ಞ

ಞಾಪಕ = ಜ್ಞಾಪಕ, ನೆನೆಪು, ಸ್ಮರಣೆ.

ಞಾಪಕ ಶಕ್ತಿ = ನೆನಪಿನ ಶಕ್ತಿ, ಸ್ಮರಣಶಕ್ತಿ.

ಞಾಪಿಸು = ನೆನಪಿಸು, ನೆನಪು ಮಾಡು.

ಞಾಯ = ನ್ಯಾಯ.

ಟ

ಟಂಟ = ತಂಬಿಟ್ಟು, ಹುರಿದ ಅಕ್ಕಿ ಹಿಟ್ಟಿಗೆ ಬೆಲ್ಲ ಸೇರಿಸಿ ಮಾಡಿದ ಉಂಡೆ.

ಟಕ್ಕ = ಕಳ್ಳ, ಮೋಸಗಾರ.

ಟಕ್ಕು = ಕಳ್ಳತನ, ಮೋಸ, ವಂಚನೆ.

ಟಪಾಲು = ಅಂಚೆ.

ಟಾಕುಟೀಕು = ವೇಷಭೂಷಣ ಮತ್ತು ಮಾತುಕತೆಯಲ್ಲಿ ಅಚ್ಚುಕಟ್ಟು.

ಟಾಂಟಾಂ = ಗುಟ್ಟುರಟ್ಟು ಮಾಡು, ಬಹಿರಂಗಗೊಳಿಸು, ಸುದ್ದಿ ಹರಡು.

ಟ್ರಾಂಟ್ರೆಹಕ್ಕಿ = ಹಾರುವಾಗೆಲ್ಲಾ ಟ್ರೇಂ ಟ್ರೇಂ ಎಂದು ಕೂಗುವ ಗೊರೆಹಕ್ಕಿ.

ಟಾರೆಣ್ಣೆ = ಡಾಂಬರು.

ಟಿಕಾಣಿ = ಠಿಕಾಣಿ, ನೆಲೆ, ಜಾಗ.

ಟಿಕ್ಕಿ = ಕಿವಿಗೆ ಧರಿಸುವ ಚಿಕ್ಕ ಆಭರಣ.

ಟಿಸಿಲು = ಕವಲು, ರೆಂಬೆ.

ಟುರ್‌ಟುರ್ = ಮಂಗಗಳನ್ನು ಗದರಿಸಿ ಓಡಿಸುವ/ಅಣಕಿಸುವ ಶಬ್ಧ.

ಟೂ ಬಿಡು = ಜೊತೆಬಿಡು, ಚಾಳಿಬಿಡು, ಮಾತು ನಿಲ್ಲಿಸು.

ಟೊಂಕ = ಸೊಂಟ, ಕಟಿ.

ಟೊಂಗೆ = ಹರೆ, ಗೆಲ್ಲು, ಕೊಂಬೆ.

ಟೊಣೆಯ = ದಪ್ಪನೆಯ ವ್ಯಕ್ತಿ, ದಡಿಯ.

ಟೊಪ್ಪಿ = ತಲೆಯುಡುಗೆ, ಟೋಪಿ.

ಟೋಪಿ = ಟೊಪ್ಪಿ.

ಟೋಪಿ ಹಾಕು = ಮೋಸಮಾಡು, ವಂಚಿಸು (ಅಲಂ).

ಠ

ಠರಾವು = ನಿರ್ಣಯ, ತೀರ್ಪು.
ಠಾಣೆ = ನೆಲೆ, ಬೀಡು, ಸ್ಥಳ.
ಠಾವು = ಸ್ಥಳ, ಮನೆ, ತಾಣ.
ಠಿಕಾಣಿ = ವಸತಿ, ಉಳಿದುಕೊಳ್ಳುವುದು, ನೆಲ, ಜಾಗ.
ಠೀವಿ = ಗತ್ತು, ಬೆಡಗು.
ಠೇವಣಿ = ಇಡುಗಂಟು, ಇರಿಸಿದ ಹಣ.

ಡ

ಡಂಗುರ = ಡಂಗುರವೆಂಬ ತಮಟೆ, ಕೋಲಿನಿಂದ ಬಡಿದರೆ ಶಬ್ಧವಾಗುವ ಚರ್ಮವಾದ್ಯ.
ಡಂಗುರ ಸಾರು = ಪ್ರಚಾರ ಮಾಡು, ಬಹಿರಂಗ ಪಡಿಸು, ಸಾರಿಹೇಳು, ಡಂಗುರ ಬಾರಿಸಿಕೊಂಡು ಪ್ರಚಾರ ಮಾಡುವುದು.
ಡಂಬಾಚಾರ = ಆಡಂಬರ, ಬೂಟಾಟಿಕೆ, ತೋರಿಕೆಯ ನಡೆ.
ಡಕಾಯತಿ = ದರೋಡೆ, ಕೊಳ್ಳೆ, ಲೂಟಿ.
ಡಕಾಯಿತ = ದರೊಡೆಕೋರ, ದೊಡ್ಡ ಕಳ್ಳ.
ಡಣಡಣ = ಗಂಟೆ/ಜಾಗಟೆಯ ಶಬ್ಧ.
ಡಬ್ಬ = ಡಬರಿ, ಲೋಹದ/ತಗಡಿನಿಂದ ಮಾಡಿದ ಮುಚ್ಚಳವಿರುವ ಕರಂಡ, ಡಬ್ಬಿ.
ಡಬ್ಬಿ = ಡಬ್ಬ.
ಡವಗುಟ್ಟು = ಎದೆಯಲ್ಲಿ ಡವಡವ ಎಂಬ ಶಬ್ಧವಾಗು, ಎದೆ ಬಡಿತ.
ಡವಡವ = ಎದೆಯಲ್ಲಿ ರಕ್ತ ಚಲನೆಯ ಶಬ್ಧ
ಡಾಂಬರು = ಟಾರು, ಟಾರೆಣ್ಣೆ.
ಡಾಕು = ೧.ಕಳ್ಳ ೨.ಚುಚ್ಚುಮದ್ದು ೩.ಮುದ್ರೆ
ಡಾಕುಹಾಕು = ಚುಚ್ಚುಮದ್ದು ಹಾಕು ೨.ಮುದ್ರೆಯೊತ್ತು, ಅಚ್ಚೊತ್ತು.
ಡಾಣಾ ಡಂಗುರ = ಬಹಿರಂಗವಾದ ವಿಷಯ, ಗುಟ್ಟು ರಟ್ಟಾಗುವುದು.
ಡಾಬು = ಒಡ್ಯಾಣ, ಸೊಂಟದ ಆಭರಣ.
ಡಿಕಾವು = ಸೊಗಸು, ಸೊಗಸಾಗಿ ಕಾಣು
ಡಿಕ್ಕಿ = ಒಂದಕ್ಕೊಂದು ಹೊಡೆ, ತಾಗು.
ಡುಬ್ಬ = ಬಾಗಿದ, ಉಬ್ಬಿದ, ೨. ದನಗಳ ಕುತ್ತಿಗೆ ಮತ್ತು ಬೆನ್ನಿನ ನಡುವಿನ ಉಬ್ಬಿದ ಭಾಗ, ಒಂಟೆಯ ಬೆನ್ನಿನ ಉಬ್ಬಿದ ಭಾಗ, ಹೆಗಲು.
ಡುಮ್ಮ = ಹೊಟ್ಟೆ ದಪ್ಪಗಿರುವವನು.
ಡುಮ್ಕಿ ಹೊಡಿ = ಅನುತ್ತೀರ್ಣನಾಗು, ಸೋಲು ಅನುಭವಿಸು.
ಡುರುಕಿ ಹೊಡೆ = ೧.ತೇಗು ೨. ಗರ್ಜಿಸು, ಗುಟುರು ಹಾಕು.
ಡೊಂಕ = ವಕ್ರ, ಬಾಗಿರುವ, ಬಗ್ಗಿದ.
ಡೊಂಕು = ಡೊಂಕ.
ಡೊಳ್ಳು = ೧.ದಪ್ಪ ಹೊಟ್ಟೆ, ೨. ಒಂದು

ಚರ್ಮವಾದ್ಯ.

ಡ್ರೊಯ್ಕಲು ಕಪ್ಪೆ = ದೊಡ್ಡ ಕಪ್ಪೆ, ಡೊಂಗರ ಕಪ್ಪೆ, ವಂಡ್ರಗಪ್ಪೆ.

ಡೋಂಗಿ = ಸುಳ್ಳು, ಕಪಟ.

ಡೋಲಿ = ಮನುಷ್ಯರನ್ನು ಕೂಡಿಸಿ ಹೊರುವ ಪಲ್ಲಕ್ಕಿ.

ಡೋಲು = ಒಂದು ಬಗೆಯ ಚರ್ಮ–ವಾದ್ಯ.

ಡೌಲು = ಒಣಹೆಮ್ಮೆ, ದೌಲತ್ತು, ಜಂಬ, ದೊಡ್ಡಸ್ಥಿಕೆ, ತಳುಕುಬಳುಕು.

ತ

ತಂಕ = ತನಕ, ವರೆಗೆ.

ತಂಗಳು = ತಣ್ಣಗಾದ ಅನ್ನ, ಹಳೆಯದು, ಹಳಸಲಾದುದು, ಹಿಂದಿನ ದಿನದ ಅಡಿಗೆ.

ತಂಗಿ = ಕಿರಿಯ ಸಹೋದರಿ.

ತಂಗು = ಇರು, ಉಳಿ, ನಿಲ್ಲು, ಇಳಿದುಕೊಳ್ಳು.

ತಂಗ್ಳು = ತಂಗಳು.

ತಂಟೆ = ೧.ತರಲೆ, ತಕರಾರು, ಜಗಳ ೨.ಗೊಡವೆ, ಗೋಜು.

ತಂಟೆಕೋರ = ಮಹಾತಂಟೆ ಮಾಡುವವನು, ಜಗಳಗಂಟ.

ತಂಡ = ಗುಂಪು, ಹಿಂಡು.

ತಂಡ್‌ಹೊಡಿ = ದಂಗುಬಡಿ, ತೆಪ್ಪಗಾಗು, ದಿಗ್ಭ್ರಮೆಗೊಳ್ಳು.

ತಂತ್ರ = ಉಪಾಯ, ಸಂಚು.

ತಂತಿ = ೧.ಲೋಹಗಳ ತೆಳುವಾದ ಎಳೆ, ಸರಿಗೆ, ಕಂಬಿ ೨.ತಾರು, ತಂತಿ ಮೂಲಕ ಕಳಿಸುವ ಸುದ್ಧಿ.

ತಂತಿಕಂಬ = ತಂತಿಯನ್ನು ಎಳೆದ ವಿದ್ಯುತ್ ಕಂಬ.

ತಂದಂಗೆ = ತಂದಹಾಗೆ, ತಂದಂತೆ.

ತಂದಾಕು = ಸಂಸಾರ ಜವಾಬ್ದಾರಿ ನಿರ್ವಹಿಸು, ೨. ಜಗಳಕ್ಕೆ ಕಾರಣನಾಗು (ಅಲಂ).

ತಂದಿನಿ = ತಂದಿದ್ದೀನಿ.

ತಂದೀಯಾ = ತಂದಿದ್ದೀಯ.

ತಂದೆ = ೧.ಅಪ್ಪ, ಜನಕ, ೨.ಹಿರಿಯರಿಗೆ ತೋರಿಸುವ ಭಕ್ತಿ, ಗೌರವ.

ತಂಪು = ೧.ತಣಿವು, ಶೈತ್ಯ ೨.ತೃಪ್ತಿ, ಸಂತುಷ್ಟಿ, ೩.ನೆರಳಿನ ತಂಪಾದ ಪ್ರದೇಶ.

ತಂಬಾಕು = ಹೊಗೆಸೊಪ್ಪು.

ತಂಬಾಲು = ಹಸಿಹಾಲು, ಆಗತಾನೆ ಕರೆದ ಹಾಲು.

ತಂಬಾಳೆ = ಅಗಲವಾದ ಪಾತ್ರೆ.

ತಂಬಾಳ್ಗಿ = ತಂಬಾಳೆ, ಅಗಲ ಮತ್ತು ಎತ್ತರದ ಪಾತ್ರೆ.

ತಂಬಿಗಿ = ತಂಬಿಗೆ, ಚಂಬು.

ತಂಬಿಟ್ಟು = ಅಕ್ಕಿಬೆಲ್ಲ ಸೇರಿಸಿ ಮಾಡಿದ ಉಂಡೆ, ಟಂಟ.

ತಂಬುಳಿ = ಚಗಟೆ ಸೊಪ್ಪಿನ ಸಾರು, ಹುಳಿ ಜಾಸ್ತಿಹಾಕಿ ಮಾಡುವ ತೆಳ್ಳಗಿನ ಸಾರು.

ತಂಮ್ಮ = ಕಿರಿಯ ಸಹೋದರ.

ತಕತಕ = ಕುಣಿಯುವುದು/ನೀರು

ಕುದಿಯುವುದು ಎಂದು ಹೇಳುವ ಶಬ್ಧ.

ತಕರಾರು = ಅಡ್ಡಿ, ಆಕ್ಷೇಪ, ವಿರೋಧ, ತಗಾದೆ.

ತಕಾ = ತಗಾ, ಇಕೋ, ಹಿಡಿ.

ತಕಾವಿ ಸಾಲ = ವ್ಯವಸಾಯದ ಸೌಕರ್ಯಗಳಿಗೆ ಸರ್ಕಾರ ರೈತರಿಗೆ ಕೊಡುವ ಸಾಲ.

ತಕ್ಕ = ಯೋಗ್ಯ, ತಕ್ಕುದಾದ, ಅರ್ಹ, ಸರಿಹೊಂದುವ, ಅನುರೂಪ, ಸಮಂಜಸ.

ತಕ್ಕಡಿ = ಕೈಯಲ್ಲಿ ಹಿಡಿದು ತೂಕ ಮಾಡುವ ಸಾಧನ.

ತಕ್ಮಟ್ಟಿಗೆ = ಅಲ್ಪಸ್ವಲ್ಪ, ಸುಮಾರಾಗಿ, ಸಾಮಾನ್ಯ ತೃಪ್ತಿಕರವಾಗಿ.

ತಕ್ಷಣ = ಆಕ್ಷಣ, ಆಕೂಡಲೇ.

ತಕ್ನಾಗಿ = ತಕ್ಕಂತೆ.

ತಗಡು = ಲೋಹದ ತೆಳುವಾದ ಹಾಳೆ/ಹಲಗೆ.

ತಗಣ್‌ಬ್ಯಾಡ = ತೆಗೆದುಕೊಳ್ಳಬೇಡ.

ತಗಣಕ್ಕೆ = ತೆಗೆದುಕೊಳ್ಳುವುದಕ್ಕೆ.

ತಗಣೆ = ತಿಗಣೆ, ಮನುಷ್ಯನ ರಕ್ತಹೀರುವ ಹಾಸಿಗೆಯಲ್ಲಿರುವ ಕೀಟ.

ತಗಲಿಮೀನು = ಆಮೆ, ಕೂರ್ಮ.

ತಗಲಿಸು = ಸೇರಿಸು, ಕೂಡಿಸು.

ತಗಲು = ಸೇರು, ಹೊಂದಿಕೊಳ್ಳು, ಅಂಟಿಕೊಳ್ಳು.

ತಗಾ = ತಕಾ.

ತಗಾದೆ = ತಕರಾರು, ಆಗ್ರಹ, ಬಲವಂತ, ಒತ್ತಾಯ.

ತಗ್ಗಿಗಿಡ = ಒಂದು ಅಗಲ ಎಲೆ, ಚೆಂಡು ಹೂವಿನಂತೆ ಮಳೆಗಾಲದಲ್ಲಿ ಹೂ ಬಿಡುವ ಗಿಡ.

ತಗ್ಗಿನ ಗದ್ದೆ = ಗದ್ದೆಯ ಕೋಗಿನಲ್ಲಿ ಕೆಳಗಿರುವ ಗದ್ದೆ.

ತಗ್ಗಿಬಗ್ಗಿ = ಗೌರವದಿಂದ, ಮರ್ಯಾದೆ ಕೊಟ್ಟು, ತಲೆತಗ್ಗಿಸಿ.

ತಗು = ಪುರುಸೊತ್ತು, ೨. ಸಂಕೋಚ.

ತಗ್ಗು = ಇಳಿಜಾರು, ಕೆಳಗಿರುವ ಪ್ರದೇಶ, ಹಳ್ಳ, ಕುಳಿ, ಗುಂಡಿ.

ತಟಕ್ಕನೆ = ಕೂಡಲೆ, ಒಮ್ಮೆಲೆ, ತಕ್ಷಣ.

ತಟಕು = ಹನಿಯುವುದು, ತೊಟ್ಟು, ಸ್ವಲ್ಪ.

ತಟಗುಡು = ತೊಟ್ಟಿಕ್ಕು.

ತಟಸ್ತ = ಯಾವ ತೀರ್ಮಾನಕ್ಕೂ ಬರದೆ ಸುಮ್ಮನಿರುವುದು.

ತಟ್ಟನೆ = ತಟಕ್ಕನೆ.

ತಟಾರ್ನೆ = ತಟಕ್ಕನೆ.

ತಟ್ಹಾರ್ಸು = ತಟ್ಟಿಹಾರಿಸು, ದಬಾಯಿಸು, ತಳ್ಳು, ಬದಿಗೆ ಸರಿಸು, ದೂರಕ್ಕೆ ತಳ್ಳು.

ತಟ್ಟಿ = ಬಿದಿರು/ವಾಟೆ/ಬಳ್ಳಿಯ ತಡಿಕೆ.

ತಟ್ಟು = ಬಡಿ, ಕುಟ್ಟು ೨. ನಿಧಾನವಾಗಿ ಬೆನ್ನು ತಟ್ಟಿ ಹುರಿದುಂಬಿಸು, ಪ್ರೋತ್ಸಾಹಿಸು (ರೊಟ್ಟಿತಟ್ಟು, ಹೋಳಿಗೆ ತಟ್ಟು).

ತಟ್ಟೆ = ಬಟ್ಟಲು, ಹರಿವಾಣ, ತಳಿಗೆ ೨. ವಾಟೆ ಸಲಕಿನಿಂದ ಮಾಡಿದ ಬುಟ್ಟಿ/ಹೆಡಿಗೆ.

ತಟ್ಟೆ ಕಡುಬು = ಗುಂಡಗೆ ಕಡಬುಮಾಡಿ ಸ್ವಲ್ಪ ಒತ್ತಿ ಅಗಲವಾಡಿದ ಕಡುಬು.

ತಟ್ನೆ = ತಟಕ್ಕನೆ, ಪಕ್ಕನೆ, ತಟ್ಟನೆ.

ತಡ = ನಿಧಾನ, ವಿಳಂಬ.

ತಡಕಾ = ಸೈರಿಸಿಕೋ, ನಿಧಾನ ಮಾಡು.

ತಡಕಾಟ = ಹುಡುಕಾಟ, ಅರಸುವಿಕೆ.

ತಡಕಾಡು = ಹುಡುಕು, ಅರಸು.

ತಡಕು = ಹುಡುಕು, ಅರಸು.

ತಡಗು = ಹುಡುಕು, ತಡಕಾಡು.

ತಡತ = ಬಾಳಿಕೆ, ತಡೆತ.

ತಡಬಡ = ತಬ್ಬಿಬ್ಬು, ಗೊಂದಲ, ವಿಳಂಬ.

ತಡಬಡ್ಸು = ತಬ್ಬಿಬ್ಬಾಗು, ಗೊಂದಲಕ್ಕೆ ಬೀಳು.

ತಡಬೆ = ದನಕರುಗಳು ದಾಟದಂತೆ ಮನುಷ್ಯರು ಓಡಾಡುವ ದಾರಿಗೆ ಕಟ್ಟಿದ ಅಡ್ಡಗಟ್ಟೆ.

ತಡವರ್ಸ = ಮಾತಲ್ಲಿ ನಿರರ್ಗಳವಿಲ್ಲದಿರುವುದು, ತೊದಲು.

ತಡಾತು = ಹೊತ್ತಾಯ್ತು, ತಡವಾಯ್ತು.

ತಡಿ = ನಿಲ್ಲು, ನಿಧಾನಿಸು, ತಾಳು ೨. ಮೆತ್ತನೆಯ ಹಾಸಿಗೆ, ಥಡಿ.

ತಡಿಕೆ = ಗೋಡೆ ಅಥವಾ ಬಾಗಿಲಿಗಾಗಿ ಬಿದಿರಿನಿಂದ ಮಾಡಿದ್ದು, ಬಿದಿರಿನ ಅಡ್ಡಗೋಡೆ.

ತಡೆ = ಅಡ್ಡಿ, ಅಡ್ಡಗಟ್ಟು, ನಿಲ್ಲಿಸು.

ತಡೆಒಡ್ದು = ತಡೆಗಟ್ಟು.

ತಡೆಗಟ್ಟು = ಅಡ್ಡಗಟ್ಟು, ಅಡ್ಡಿಪಡಿಸು.

ತಡೆತ = ಬಾಳಿಕೆ, ತಡತ.

ತಡೆಬೇಲಿ = ತಡಬೆ.

ತಡೆಹಿಡಿ = ಹತ್ತಿಕ್ಕು, ಸೈರಿಸಿಕೊ.

ತಣ್ಣಗಾದ = ಸುಮ್ಮನಾದ, ಸೋತುಹೋದ. ೨. ಆರಿದ, ತಂಪಾದ.

ತಣ್ಣಗಿರು = ಸುಖವಾಗಿರು.

ತಣ್ಣಗೆ = ತಂಪಾಗಿ, ಹಾಯಾಗಿ, ಸುಖವಾಗಿ (ನಗರದಿಂದ ದೂರ ಹೋಗಿ ತಣ್ಣಗೆ ಎಲ್ಲಾದ್ರೂ ಇರಬೇಕೆನ್ನಿಸುತ್ತದೆ).

ತಣಬುಲ್ಲು = ಮೆದೆಕಟ್ಟಿದ ನಂತರ ಉಳಿದ ಪುಡಿ ಹುಲ್ಲು.

ತಣಿ = ತಣ್ಣಗಿರುವ , ಆರಿಸಿದ (ಕಾಫಿ ತಣಿದ ಮೇಲೆ ಕುಡಿಯುವುದು).

ತಣಿಸು = ತಣ್ಣಗೆ ಮಾಡು, ಬಿಸಿ ಆರಿಸು.

ತಣಿಗೆ = ತಟ್ಟೆ, ಹರಿವಾಣ.

ತಣ್ಣೀರು = ತಂಪಾದ ನೀರು, ಕಾಯಿಸದ ನೀರು.

ತಣ್ಣೀರೆರಚು = ನಿರುತ್ಸಾಹಗೊಳಿಸು, ಆಶಾಭಂಗಮಾಡು.

ತತ್ತರಿಕೆ = ನಿರುತ್ಸಾಹ ಅಥವಾ ಅಸಡ್ಡೆ ತೋರಿಸುವ ಒಂದು ಪದ.

ತತ್ತರ್ಸು = ನಡುಗು, ಕಂಪಿಸು.

ತತ್ತಿ = ಮೊಟ್ಟೆ, ಅಂಡ.

ತದಕು = ಹೊಡೆ, ಬಡಿ.

ತದ್ವಿರುದ್ದ = ವಿರುದ್ಧವಾದುದು.

ತದ್ರೂಪ = ಯಥಾವತ್ತಾದ ರೂಪ.

ತದಿ = ಗ್ವಾಡ, ಚರಟ, ಗಸಿ.

ತನಕ = ವರೆಗೆ, ಪರ್ಯಂತ.

ತನಿಎರೆಯುವುದು = ನಾಗರ ಹುತ್ತಕ್ಕೆ ಹಾಲು ಹಾಕುವುದು.

ತನಿಕೆ = ವಿಚಾರಣೆ, ಶೋಧನೆ, ತನಿಖೆ.

ತನ್ನಿ = ತೆಗೆದುಕೊಂಡು ಬನ್ನಿ.

ತನ್ಮೊಲ್ಕ = ತನ್ಮೂಲಕ, ಈ ರೀತಿಯಾಗಿ.

ತಪರಕ್ಕಿ = ಕಪಾಲ ಮೋಕ್ಷ, ಕೈಯಿಂದ ಕೆನ್ನೆಗೆ ಹೊಡೆಯುವ ಏಟು.

ತಪಸೀಲು = ವಿವರ, ವಿವರಣೆಯ ಪಟ್ಟಿ.

ತಪ್ಪಲು = ಬೆಟ್ಟದ ಮಗ್ಗುಲು, ಬೆಟ್ಟದ ಮೇಲೆ, ಕಿಬ್ಬಿ.

ತಪ್ಪಲೆ = ಅಗಲಬಾಯಿಯ ಪಾತ್ರೆ.

ತಪ್ಪಿಸು = ತಪ್ಪುವಂತೆ ಮಾಡು, ನೆರವೇರದಂತೆ ಮಾಡು.

ತಪ್ಪಿತಸ್ಥ = ಅಪರಾಧಿ, ತಪ್ಪು ಮಾಡಿದವನು.

ತಪ್ಪು ತಿಳ್ಕಣದು = ತಪ್ಪುಭಾವನೆ, ತಪ್ಪು ಅಭಿಪ್ರಾಯ, ತಪ್ಪು ಕಲ್ಪನೆ.

ತಪ್ಪು ಹೆಜ್ಜೆ = ೧.ತಪ್ಪು ಮಾಡುವುದು ೨.ಕ್ರಮ ತಪ್ಪುವಿಕೆ.

ತಪ್ಪು ಹೊರ್ಸು = ದೋಷಾರೋಪಣೆ ಮಾಡು.

ತಪ್ಪುಹೊರು = ತಾನೇ ತಪ್ಪಿತಸ್ಥನೆಂದು ಹೇಳುವುದು, ಮಾಡದಿರುವ ಅಪರಾಧಕ್ಕೆ ಹೊಣೆಯಾಗುವುದು.

ತಪ್ಲೆ = ತಪ್ಪಲೆ.

ತಪ್ಪೊಪ್ಗಿ = ತನ್ನ ತಪ್ಪನ್ನು ತಾನೇ ಒಪ್ಪಿಕೊಳ್ಳುವುದು.

ತಬ್ಬಲಿ = ಅನಾಥ, ದಿಕ್ಕಿಲ್ಲದ.

ತಬಾ = ತಾ, ತೆಗೆದುಕೊಂಡು ಬಾ.

ತಬ್ಬಿಬ್ಬು = ಕಕ್ಕಾಬಿಕ್ಕಿ, ದಿಗ್ಭ್ರಮೆ, ಗಾಬರಿ.

ತಬ್ಬು = ಅಪ್ಪು, ಆಲಂಗಿಸು, ಬಿಗಿದು ಹಿಡಿ, ೨. ಕಬ್ಬಿಣ ಅಥವಾ ಕಲ್ಲಿನ ಕಾವಲಿ (ತವ) ಯನ್ನು ಎಣ್ಣೆ ಹಚ್ಚಿ ಚೆನ್ನಾಗಿ ಬೇಯಿಸಿ ಹದಕ್ಕೆ ತರುವುದು. ೩. ಮರದ ನಾಟಾ (ಹಲಗೆ ಇತ್ಯಾದಿ) ಓರೆಕೋರೆ–ಯಾಗದಂತೆ ಜಾಗ್ರತೆ ವಹಿಸಿ ಒಣಗಿಸುವುದು.

ತಮಟೆ = ಡಂಗುರ, ಒಂದು ರೀತಿಯ ಚರ್ಮವಾದ್ಯ.

ತಮಾಸ್ಗಿ = ತಮಾಷೆ, ವಿನೋದ, ಹಾಸ್ಯ.

ತಮಾಷೆ = ತಮಾಸ್ಗಿ.

ತಮ್ಮ = ಕಿರಿಯ ಸಹೋದರ, ತಂಮ್ಮ.

ತಮ್ಮವರು = ನಮ್ಮವರು, ಸ್ವಂತದವರು.

ತಯಾರು = ಸಿದ್ಧ, ಏರ್ಪಾಡು, ಅಣಿ.

ತರ = ರೀತಿ, ೨. ಪ್ರಕಾರ.

ತರಕಲು = ನಯವಿಲ್ಲದಿರುವಿಕೆ, ಒರಟು ಒರಟಾಗಿರುವುದು.

ತರಕಾರಿ = ಕಾಯಿಪಲ್ಲೆ, ಸಸ್ಯಾಹಾರ.

ತರಕು = ತರಕಲು, ನಯವಿಲ್ಲದುದು, ಒರಟಾದುದು.

ತರಗೆಲೆ = ದರಗು, ಒಣಗಿದ ಎಲೆ.

ತರಗುಟ್ಟು = ಕೋಪ ಅಥವಾ ಚಳಿಯಿಂದ ನಡುಗು, ಕಂಪಿಸು, ತತ್ತರ್ಸು.

ತರಂತರ = ವಿವಿಧ ರೀತಿ, ಬಗೆ ಬಗೆ.

ತರಲೆ = ತಂಟೆ, ಕೀಟಲೆ, ಕಾಟ ೨.ತಂಟೆಕೋರ.

ತರಹೇವಾರಿ = ಬಗೆಬಗೆಯ, ವಿವಿಧ ರೀತಿಯ.

ತರಾತುರಿ = ಅವಸರ, ಗಡಿಬಿಡಿ, ತ್ವರೆ.

ತರಾನ = ತರೋಣ, ತೆಗೆದುಕೊಂಡು ಬರೋಣ.

ತರಾವರಿ = ತರಂತರ, ನಾನಾತರ.

ತರಿ = ಗದ್ದೆ, ನೀರಾವರಿ ಭೂಮಿ, ಖುಷ್ಕಿ, ೨. ಹಲ್ಲಿಂದ ಕೆರೆ, ಕಚ್ಚು, ಕತ್ತರಿಸು (ಹಣ್ಣನ್ನು ತರಿದು ತಿನ್ನು).

ತರಿಸು = ತರುವಂತೆ ಮಾಡು, ಹತ್ತಿರಕ್ಕೆ ಬರಿಸು.

ತರ್ದುತಿನ್ನು = ಹಲ್ಲಿಂದ ಕೆರೆದು ತಿನ್ನು, ಕಚ್ಚಿತಿನ್ನು ೨. ಲಪಟಾಯಿಸು, ಕಿತ್ತುಕೊಳ್ಳು (ಅಲಂ) .

ತರ್ಕ = ಚರ್ಚೆ, ವಾದ.

ತರ್ಗುಡಿ = ನಿಶ್ಯಕ್ತಿಯಿಂದ ಕಾಲು/ಜೀವ ನಡುಗುವುದು.

ತರ್ಗುಡು = ತರಗುಟ್ಟು.

ತಲಾಸು = ಹುಡುಕುವಿಕೆ, ಶೋಧನೆ, ತಪಾಸಣೆ.

ತಲಾಂತ್ರ = ವಂಶಪಾರಂಪರ್ಯ.

ತಲ್ತಲಾಂತರ = ತಲೆ ತಲಾಂತರ, ಹಲವು ಪೀಳಿಗೆ, ಬಹಳ ಹಿಂದಿನವರು.

ತಲ್ದಿಸಿ = ತಲೆಯ ಹತ್ತಿರ, ತಲೆಯ ಸಮೀಪ, ತಲೆಯ ಪಕ್ಕ.

ತಲ್ನೀರು = ಹೆರಿಗೆಗೆ ಸ್ವಲ್ಪ ಮೊದಲು ಸ್ರವಿಸುವ ಗರ್ಭಕೋಶದ ನೀರು, ತಲೆನೀರು, ನೆತ್ತಿನೀರು.

ತಲ್ಲಿ = ತನ್ನಿ, ತೆಗೆದುಕೊಂಡು ಬನ್ನಿ.

ತಲೆ = ೧.ಮಂಡೆ, ರುಂಡ, ಶಿರಸ್ಸು ೨.ವಂಶ, ಪೀಳಿಗೆ ೩. ಬುದ್ಧಿ, ತಿಳುವಳಿಕೆ.

ತಲೆ ಅಕ್ಕಿ = ಶವದ ತಲೆಯ ಹತ್ತಿರ ಇಡುವ ಅಕ್ಕಿ.

ತಲೆಒಡಿ = ೧.ತಲೆಸೀಳು ೨.ಬಗ್ಗುಬಡಿ, ದೋಚು.

ತಲೆಒಡ್ಡು = ೧.ತಲೆಯನ್ನು ಅಡ್ಡಹಿಡಿ, ೨.ಹೊಣೆಹೊರು, ಜವಾಬ್ದಾರಿ ವಹಿಸಿಕೊ, ೩.ತಲೆಯ ಮೇಲೆ ಹೊತ್ತುಕೊ.

ತಲೆಓಡಿಸು = ವಿಚಾರ ಮಾಡು, ಯೋಚಿಸು, ಬುದ್ಧಿ ಉಪಯೋಗಿಸು.

ತಲೆಕೀಸು = ಸೇರು, ಪಾವು ಮುಂತಾದ ಅಳತೆಗೆ ತುಂಬ ತುಂಬಿಸಿ ಮೇಲಿನದನ್ನು ಕತ್ತರಿಸಿಹಾಕು.

ತಲೆಕೆಡು = ಬುದ್ಧಿಕೆಡು, ಬುದ್ಧಿ-ಭ್ರಮಣೆಯಾಗು, ಭ್ರಾಂತಿ ಯುಂಟಾಗು.

ತಲೆಕೊಡು = ೧.ತಲೆಒಡ್ಡು, ತಲೆಯೊಡ್ಡು.

ತಲೆಗಟ್ಟು = ಅಕ್ಷರಗಳ ಮೇಲ್ಭಾಗದ ಕಟ್ಟು, ೨.ಪ್ರತಿಯೊಬ್ಬ ವ್ಯಕ್ತಿಗೂ ಕೊಡಬೇಕಾಗಿದ್ದ ಕಂದಾಯ/ದಂಡ. ದಂಡ ತೆರುವುದು.

ತಲೆಗೆಕಟ್ಟು = ಅಪವಾದ ಹೊರಿಸು, ಹೊಣೆ ಮಾಡು (ಅಲಂ).

ತಲೆಗೊಂದು = ಒಬ್ಬೊಬ್ಬರು ಒಂದೊಂದು.

ತಲೆಗೊಂದೊಂದು = ಒಬ್ಬೊಬ್ಬರು ಒಂದೊಂದು ರೀತಿಯಾಗಿ, ಬಗೆ-ಬಗೆಯಾಗಿ.

ತಲೆಚಿಟ್ಟು = ತಲೆಗೆ ಕಿರಿಕಿರಿಯಾಗು, ಯೋಚನೆ, ಚಿಂತೆ.

ತಲೆತಪ್ಪಿಸಿಕೊಣ್ಣದು = ತಲೆಮರೆಸಿಕೊಳ್ಳು, ಯಾರಿಗೂ ಕಾಣಿಸಿಕೊಳ್ಳದಿರು.

ತಲೆತಿಕ್ಕು = ತಲೆಯನ್ನು ಉಜ್ಜು, ತಲೆಗೆ ನೀರು ಹಾಕಿ ಸ್ನಾನ ಮಾಡಿಸು.

ತಲೆತಿನ್ನು = ಮಾತಾಡಿ ಬೇರೆಯವರಿಗೆ ಕಿರಿಕಿರಿಯುಂಟು ಮಾಡು. (ಅಲಂ)

ತಲೆತಿರ್ಕ = ತಲೆಸುತ್ತುವಿಕೆ, ೨.ಬುದ್ಧಿ-ಗೆಟ್ಟವನು, ಹುಚ್ಚ.

ತಲೆತಿರುಗು = ತಲೆಸುತ್ತಿಬರು, ಬವಳಿ ಬರು, ೨. ಉನ್ಮತ್ತತೆಯುಂಟಾಗು.

ತಲೆತೂಗು = ಒಪ್ಪಿಕೊಳ್ಳು, ಸಂತೋಷ ವನ್ನು ವ್ಯಕ್ತಪಡಿಸು, ತಲೆ ಅಲ್ಲಾಡಿಸು.

ತಲೆತೆಪ್ಪಗೆ = ತಲೆಕೀಸಿ.

ತಲೆದಿಂಬು = ತಲೆಗೆ ಆಸರೆಯಾಗಿ ಇಟ್ಟುಕೊಳ್ಳುವ ದಿಂಬು.

ತಲೆನೋವು = ತಲೆಯೊಳಗೆ ಬೇನೆ, ನೋವು.

ತಲೆಬ್ಯಾನೆ = ತಲೆನೋವು.

ತಲೆಬುಲ್ಡೆ = ಬುರುಡೆ, ತಲೆಯ ಚಿಪ್ಪು, ತಲೆ ಓಡು, ಕಪಾಲ.

ತಲೆಬೋಳಿಸು = ೧.ಕ್ಷೌರ ಮಾಡು, ಕೂದಲು ತೆಗೆಸು ೨.ನಷ್ಟ ವನ್ನುಂಟು ಮಾಡು. (ಅಲಂ)

ತಲೆಭಾರ = ೧.ಸೀತದಿಂದ/ಯೋಚನೆಯಿಂದ ತಲೆ ಭಾರ–ವೆನಿಸುವುದು, ೨.ಅಧಿಕ ಜವಾಬ್ದಾರಿ, ಹೊಣೆ (**ಅಲಂ**)

ತಲೆಮಂಜ = ಶಿಕಾರಿ ಮಾಡಿದ ಪ್ರಾಣಿಯ ತಲೆಕಡಿದು ಕೊಚ್ಚಿ ಅಲ್ಲೆ ಹುರಿದು, ಆ ಕಾಡಿನ ದೈವಕ್ಕೆಂದು ಎಡೆಯಿಡುವುದು.

ತಲೆಮರೆಸು = ಕಾಣೆಯಾಗು, ಅಡಗು.

ತಲೆಮಾರು = ಪೀಳಿಗೆ, ವಂಶ, ಕುಲ, ತಲಾಂತರ.

ತಲೆಯಾಡ್ಸು = ತಲೆಯನ್ನು ಅಲ್ಲಾಡಿಸು, ಇಲ್ಲವೆಂದು/ಅಲ್ಲವೆಂದು ಸೂಚಿಸು.

ತಲೆಯೆತ್ತು = ೧.ತಲೆ/ಮುಖವನ್ನು ಮೇಲೆತ್ತು, ಸೆಟೆದು ನಿಲ್ಲು, ೨.ಹುಟ್ಟು, ಉದ್ಭವವಾಗು ೩.ಚೇತರಿಸಿಕೊಳ್ಳು, ಏಳಿಗೆ ಹೊಂದು

ತಲೆಸವ್ರು = ೧.ಪ್ರೀತಿಯಿಂದ ತಲೆಯನ್ನು ನೇವರಿಸು. ೨. ಕೃತಕ ಕನಿಕರ ತೋರಿಸು, ತೋರಿಕೆಯ ಸಮಾಧಾನ ಹೇಳು ೩.ಗಿಡ ಮರಗಳ ಮೇಲ್ಭಾಗವನ್ನು ಕತ್ತರಿಸು, ಮಟ್ಟಮಾಡು.

ತಲೆಸಿಡ್ತ = ತಲೆನೋವು.

ತಲೆಸುತ್ತು = ೧.ತಲೆತಿರುಗು, ೨. ತಲೆಗೆ ಸುತ್ತುವ ವಸ್ತ್ರ.

ತಲೆಸೂಲೆ = ತಲೆನೋವು.

ತಲೆಹಾಕು = ೧.ಇನ್ನೊಬ್ಬರ ವಿಚಾರದಲ್ಲಿ ಅನವಶ್ಯಕ ಸೇರಿಕೊಳ್ಳು, ೨.ನಡುವೆ ಬಾಯಿಹಾಕು.

ತವಕ = ಕಾತರ, ಅತಿ ಉತ್ಸುಕತೆ.

ತವರ = ಕಲಾಯಿ ಹಾಕುವ ಲೋಹ.

ತವರು = ಹುಟ್ಟಿದ ಮನೆ, ತಂದೆ–ತಾಯಿಯ ಮನೆ.

ತವುಡು = ತೌಡು, ಬತ್ತದ ಒಳಗಿನ ಧೂಳು.

ತಹಬಂದಿ = ಹತೋಟಿ, ಹಿಡಿತ.

ತಹಸೀಲ್ದಾರ = ತಾಲ್ಲೂಕಿನ ಮುಖ್ಯ ಅಧಿಕಾರಿ, ಮಾಮಲೆದಾರ.

ತಳ = ೧.ಅಡಿ, ಅಡಿಪಾಯ, ೨.ನೆಲೆ, ಆಧಾರ, ೩.ಸ್ಥಳ.

ತಳಕಾಬಳಕಾ = ತಿರುಗು ಮುರುಗು, ಉಲ್ಟಾಪಲ್ಟ, ಅಡಿಮೇಲೆ, ತಲೆಕೆಳಗೆ.

ತಳಕು = ಒನಪು, ವಯ್ಯಾರ, ಬೆಡಗು ೨. ಹೊಳಪು, ಕಾಂತಿ.

ತಳಕುಹಾಕು = ಸೇರಿಸು, ಕೂಡಿಸು ೨.ಒಂದು ವಿಚಾರದೊಂದಿಗೆ ಇನ್ನೊಂದು ಸೇರಿಸು.

ತಳಗಡೆ = ಕೆಳಗಡೆ, ತಳದಲ್ಲಿ, ಅಡಿಯಲ್ಲಿ.

ತಳತಳ = ಹೆಚ್ಚಾಗಿ ಹೊಳೆಯುವುದು.

ತಳಪಾಯ = ಅಡಿಪಾಯ, ತಳಹದಿ,

ಬುನಾದಿ.

ತಳಮಳ = ದಿಗಿಲು, ಕಳವಳ, ಸಂಕಟ.

ತಳಮುಟ್ಟ = ತಳದವರೆಗೂ, ಬುಡ ದವರೆಗು.

ತಳಮೇಲು = ತಲೆಕೆಳಗೆ, ಅಡಿಮೇಲೆ.

ತಳವಾರ = ಕಾವಲುಗಾರ, ಗ್ರಾಮರಕ್ಷಕ.

ತಳವೂರು = ನೆಲೆಯಾಗಿ ನಿಲ್ಲು, ನೆಲೆಸು, ತಂಗು.

ತಳಸೋಸು = ತಳದವರೆಗೂ ಬೆದಕು, ೨. ಶೋಧನೆ ಮಾಡು.

ತಳಹತ್ತು = ತಳಹಿಡಿ, ಸೀದುಹೋಗು, ಕರಟು.

ತಳಹದಿ = ಬುನಾದಿ, ಅಡಿಪಾಯ, ನೆಲಗಟ್ಟು.

ತಳಹಿಡಿ = ತಳಹತ್ತು.

ತಳಾಲೆ = ಮಂಡೆಹಾಳೆ, ಗಂಡಸರು ಧರಿಸುವ ಅಡಿಕೆಹಾಳೆಯ ತಲೆಯುಡುಗೆ.

ತಳಿ = ವಂಶ, ಮನೆತನ, ೨. ಪ್ರಾಣಿ ಅಥವಾ ಸಸ್ಯಗಳ ಪೀಳಿಗೆ.

ತಳಿಗಿದೀಪ = ತಳ್ಗಿ ಬಟ್ಟಲಿನಲ್ಲಿರುವ ತುಂಬುದೀಪವನ್ನು ವಧುವಿನ ಮನೆಗೆ ಹೋದಾಗ ವರನ ಮನೆಯವರು ಹೊತ್ತಿಸಿ ಕೊಳ್ಳುವುದು.

ತಳ್ಗಿ ಬಟ್ಲು = ಮದುವೆಯಲ್ಲಿ ಉಪಯೋಗಿಸುವ ಕಳಸದ ಬಟ್ಟಲು.

ತಳಿಗೆ = ತಟ್ಟೆ, ಹರಿವಾಣ, ತಣಿಗೆ.

ತಳಿಯುವುದು = ಹರಡುವುದು, ಎರಚುವುದು.

ತ್ಯಗಣೆ = ತಿಗಣೆ, ತಗಣೆ, ರಕ್ತ ಹೀರುವ ಕೀಟ.

ತಾ = ಕೊಡು.

ತಾಂಡಾ = ಲಂಬಾಣಿಗರ ವಾಸಸ್ಥಾನ.

ತಾಂಬ = ತೆಗೆದುಕೊಂಡು ಬಾ.

ತಾಂಬ ಇಲ್ಲಿ = ಇಲ್ಲಿಗೆ ತೆಗೆದುಕೊಂಡು ಬಾ.

ತಾಂಬ್ರ = ತಾಮ್ರ, ಒಂದು ಲೋಹ.

ತಾಂಬ್ರದ ಮುರುಗು = ಹುಟ್ಟುಮುರುಗು, ಮೊದಲ ಬಾರಿ ಕಿವಿ ಚುಚ್ಚಿಸಿದಾಗ ಹಾಕುವ ತಾಮ್ರದ ಕಿವಿಯ ಆಭರಣ.

ತಾಕತ್ತು = ಶಕ್ತಿ, ಬಲ.

ತಾಕೀತು = ಹೊಗಳಿ/ಉಬ್ಬಿಸಿ ಕೆಲಸ– ವಹಿಸುವುದು.

ತಾಕ್ಸು = ತಾಗಿಸು, ತಗಲುವಂತೆ ಮಾಡು.

ತಾಗು = ತಗಲು.

ತಾಟಗಿತ್ತಿ = ಜಗಳ ಹಚ್ಚುವವಳು, ಜಗಳಗಂಟಿ.

ತಾಟ್ಗಿತ್ತಿ = ತಾಟಗಿತ್ತಿ.

ತಾಟು = ಗೋಣಿ ತುಂಡು.

ತಾಣ = ಜಾಗ, ಸ್ಥಳ, ನೆಲೆ.

ತಾತಾ = ಅಜ್ಜ, ತಂದೆ/ತಾಯಿಯ ತಂದೆ.

ತಾತಿ = ತಾಯಿತ, ತಾಮ್ರದ ತಗಡು, ಮಂತ್ರಿಸಿದ ತಾಮ್ರದ ತಗಡಿನ ಸುರುಳಿ.

ತಾನಾಮಿ = ಒಪ್ಪಿಗೆ ಪತ್ರ.

ತಾಪ = ಬಿಸಿಲ ಝಳ, ಸೆಖೆ.

ತಾಬಂದಿ = ತಹಬಂದಿ, ಹದ್ದು ಬಸ್ತು.

ತಾಯಿತ = ತಾತಿ.

ತಾಯ್ಗಂಡ = ಮಾತೃದ್ರೋಹಿ, ಒಂದು

ಬೈಗುಳ.

ತಾಯುಡಿಕೆ ಸೀರೆ = ವಧು/ವರನ ತಾಯಿಗೆ ಕೊಡುವ ಸೀರೆ.

ತಾರಿಮರ = ದೊಡ್ಡಮರ, ಇದರ ಕಾಯಿಗಳು ಕಬ್ಬೆಕ್ಕು ಮತ್ತು ಕಣಂದಿಗೆ (ಮುಳ್ಳುಹಂದಿ) ಪ್ರಿಯ.

ತಾರೀಕು = ದಿನಾಂಕ, ದಿನ.

ತಾರೀಪು = ವೇಶ, ವಯ್ಯಾರ.

ತಾರ್ಸಿ = ಮಹಡಿ, ಸಿಮೆಂಟು ಗಾರೆಯ ಮುಚ್ಚಿಗೆ.

ತಾಲಿ = ಲೋಟಕ್ಕಿಂತ ಸ್ವಲ್ಪ ಅಗಲವಿರುವ ಪಾತ್ರೆ.

ತಾವರೆ = ಕಮಲದ ಹೂ.

ತಾವಿಲ್ಲ = ಸ್ಥಳವಿಲ್ಲ, ಜಾಗವಿಲ್ಲ.

ತಾವು = ಸ್ಥಳ, ಜಾಗ.

ತಾಳ = ಅಗುಣಿ, ಮರದ ಅಗುಣಿ, ಬಾಗಿಲ ಚಿಲಕ ೨. ದೇವರ ಭಜನೆ ಮಾಡುವಾಗ ಅದಕ್ಕೆ ತಕ್ಕಂತೆ ಶಬ್ಧವನ್ನು ಮಾಡಲು ಉಪಯೋಗಿಸುತ್ತಿದ್ದ ಹಿತ್ತಾಳೆಯ ಎರಡು ತಟ್ಟೆಯಂತಹ ವಸ್ತು, ಕೈತಾಳ.

ತಾಳಕ್ಕೆ ತಕ್ಕಂತೆ ಕುಣಿ = ತಾಳಹಾಕು (ಅಲಂ), ಇನ್ನೊಬ್ಬರು ಹೇಳಿದಂತೆಯೇ ಮಾಡು.

ತಾಳತಪ್ಪು = ೧.ವಿರಸವುಂಟಾಗು, ೨.ಅಂದುಕೊಂಡಂತೆ ಆಗದಿರುವುದು.

ತಾಳಮ್ಯಾಳ = ಹೊಂದಾಣಿಕೆ, ಹೊಂದಿಕೆ.

ತಾಳಹಾಕು = ತಾಳಕ್ಕೆ ತಕ್ಕಂತೆಕುಣಿ.

ತಾಳಿಹಾಕು = ಹೋಲಿಕೆ ಮಾಡಿನೋಡು.

ತ್ವಾಟ = ತೋಟ.

ತ್ಯಾಪೆ = ಹರಿದ ಬಟ್ಟೆಗೆ ಮೇಲೆ ಚೂರುಬಟ್ಟೆಯಿಟ್ಟು ಹೊಲಿಯುವುದು.

ತ್ಯಾಪೇದಾರಿ = ಜೀತ, ಕೆಲಸ, ಹಾಳಾಗಿದ್ದನ್ನ ಸರಿಪಡಿಸುವ ಕೆಲಸ (ಅಲಂ).

ತಿಂಗಳವ್ರೆ = ಒಂದು ತರಕಾರಿ, ಹುರುಳಿಕಾಯಿ.

ತಿಂಗಳ ಬಿದಿಗೆ = ಮದುವೆಯಾಗಿ ಒಂದು ತಿಂಗಳಿಗೆ ಹೆಣ್ಣಿನ ಮನೆಯಲ್ಲಿ ಮಾಡುವ ಹಬ್ಬ.

ತಿಂಗ್ಳಬೆಳ್ಕು = ತಿಂಗಳ ಬೆಳಕು, ಬೆಳದಿಂಗಳು.

ತಿಂಗ್ಳು = ತಿಂಗಳು, ಮಾಸ, ಚಂದ್ರ, ಬೆಳದಿಂಗಳು.

ತಿಂಗ್ನೆಣ್ಣೆ = ತೆಂಗಿನ ಎಣ್ಣೆ, ಕೊಬ್ಬರಿ ಎಣ್ಣೆ.

ತಿಂಗ್ಳೊಪ್ಪತ್ತು = ಇಡೀ ತಿಂಗಳು.

ತಿಂಡಿ = ತಿನಿಸು, ನಾಷ್ಟ, ಬೆಳಿಗ್ಗೆಯ ಉಪಾಹಾರ.

ತಿಂಡಿಪೋತ = ಹೊಟ್ಟೆಬಾಕ.

ತಿಂದನ್ನ ಮೈಗೆ ಹತ್ತು = ರಕ್ತಗತವಾಗು, ಪುಷ್ಟಿಯಾಗು (ಬೇರೆಯವರನ್ನು ಆಡಿಕೊಳ್ದಿದ್ರೆ ನಿಂಗೆ ತಿಂದನ್ನ ಮೈಗೆ ಹತ್ತಲ್ವಾ?) (ಅಲಂ).

ತಿಂದಿದ್ದು ಕಕ್ಸು = ಮೋಸದಿಂದ ಸಂಪಾದಿಸಿದ್ದನ್ನು ಹಿಂದಿರುಗಿಸುವಂತೆ ಮಾಡು (ಅಲಂ).

ತಿಕಾಣೆಲ್ಲ = ಗತಿಯಿಲ್ಲ.

ತಿಕಾಣು = ಗತಿ.

ತಿಕ್ಕಾಟ = ಘರ್ಷಣೆ, ಮಸೆದಾಟ.

ತಿಕ್ಕು = ಉಜ್ಜು, ಬೆಳಗು.

ತಿಥಿ = ಉತ್ತರಕ್ರಿಯೆ, ವೈಕುಂಠ ಸಮಾರಾಧನೆ, ಸತ್ತ ಹನ್ನೊಂದನೇ ದಿನದ ಕ್ರಿಯೆ.

ತಿದಿ = ಅಕ್ಕಸಾಲಿಗರು ಬಂಗಾರ ಕಾಯಿಸಲು ಮಾಡಿಕೊಂಡ ಸಾಧನ.

ತಿದಿ ಒತ್ತು = ಗಾಳಿ ಹಾಕಿ ಬೆಂಕಿಯನ್ನು ಉರಿಸುವ ಸಾಧನ.

ತಿದ್ದು = ೧.ಬರೆದಿದ್ದರ ಮೇಲೆ ಮತ್ತೆ ಬರೆಯುವುದು, ೨.ತರಬೇತು ೩.ಪಳಗಿಸು.

ತಿನ್ನು = ಊಟಮಾಡು, ನುಂಗು.

ತಿಪ್ಪರಲಾಗ = ತಲೆಕೆಳಗೆ ಕಾಲು ಮೇಲಾಗಿ ಲಾಗ ಹೊಡೆಯುವುದು ೨. ಎಷ್ಟೇ ಶ್ರಮಪಟ್ಟರೂ, ಬಹಳಪ್ರಯತ್ನ.

ತಿಪ್ಪಳ = ಹೂವಿನ ಎಸಳು, ಕೋಳಿ ಪುಕ್ಕ.

ತಿಪ್ಪುಳ್ಸು = ಹೂವಿನ ಎಸಳನ್ನು ಕೀಳು, ಕೋಳಿಪುಕ್ಕ ಕೀಳು.

ತಿರ್ಗ್ಗಾ = ಪುನಃ, ಮತ್ತೆ.

ತಿರಿ = ಬೇಡು, ಯಾಚಿಸು.

ತಿರುಕ = ಭಿಕ್ಷೆ ಬೇಡುವವ.

ತಿರುಕಾಸು = ರಸ್ತೆಯ ತಿರುವು.

ತಿರುಗ = ತಿರ್ಗ್ಗಾ.

ತಿರುಗಣೆ = ೧.ಬಾಗಿಲು ಕದದ ಆಸರೆ. ೨.ಸಣ್ಣಲಂಗ.

ತಿರುಗಣೆ = ಕುಂಟೆ ಕಟ್ಟುವುದು, ಎತ್ತಿನ ಗಾಡಿ ಇಳಿಜಾರಿನಲ್ಲಿ ನಿಧಾನವಾಗಿ ಹೋಗಲೆಂದು ಚಕ್ರಗಳಿಗೆ ಎರಡು ಬಡಿಗೆ ಕಟ್ಟಿ ಅದಕ್ಕೆ ಹಗ್ಗವನ್ನು ಹಾಕಿ ಎರಡು ಕಡೆಯಿಂದ ನೊಗಕ್ಕೆ ಕಟ್ಟುತ್ತಾರೆ. ಇಳಿಜಾರು ಬಂದಾಗ ಗಾಡಿ ಹೊಡೆ-ಯುವವರು ಆ ಹಗ್ಗದ ಮೇಲೆ ಹತ್ತಿ ನಿಂತಾಗ ಬಡಿಗೆ ಬಿಗಿಯಾಗಿ ಚಕ್ರ ನಿಧಾನವಾಗಿ ತಿರುಗುತ್ತದೆ. (ಬ್ರೇಕ್)

ತಿರುಗಾ ಮರುಗಾ = ಹಿಂದೆ ಮುಂದೆ, ತಲೆಕೆಳಗೆ ಕಾಲು ಮೇಲೆ, ಉಲ್ಟಾಪಲ್ಟಾ.

ತಿರುಗಿ = ತಿರ್ಗ್ಗಾ, ಮತ್ತೆ, ಪುನಃ.

ತಿರುಗಿನ ಬಡಿಗೆ = ತಿರುಗಣೆ.

ತಿರುಗು = ಅಡ್ಡಾಡು.

ತಿರ್ಪು = ೧.ತಿರುಗಿಸು, ೨.ಹೊಟ್ಟೆ ತೊಳಸು ೩.ಹಗ್ಗ ಹುರಿಮಾಡು ೪.ಓಲೆಯ ಪಾಣಿ.

ತಿರುಪಣೆ = ಓಲೆಯ ಪಾಣಿ, ೨.ಕೀಲು, ಸಣ್ಣಕೀಲು.

ತಿರುಪಿನ ಹೂವು = ಕೇಶ ಶೃಂಗಾರಕ್ಕೆ ಬಳಸುತ್ತಿದ್ದ ಬಂಗಾರದ ಹೂವು.

ತಿಳ್ಳ = ತಿರುಳು.

ತಿಳಿ = ಅನ್ನ ಬಸಿದ ಗಂಜಿ, ಹಣಿತ ನೀರು.

ತಿಳಿದೂ ತಿಳಿದು = ಬೇಕೆಂತಲೇ, ಉದ್ದೇಶಪೂರ್ವಕವಾಗಿ.

ತಿಳ್ಳೇಕ್ಯಾತರು = ಬೆಸ್ತರು.

ತೀಟೆ = ಚೇಷ್ಟೆ, ತಂಟೆ.

ತೀಡು = ೧.ಉಜ್ಜು, ಎಣ್ಣೆ ತೀಡು, ಬಳಿ, ಲೇಪಿಸು ೨.ಒಪ್ಪವಾಗಿಸು (ತೀಡಿ ಬಾಚು), ೩.ತಿನ್ನಿಸು.

ತೀರ್ಥ = ತೀರ್ತ, ಪ್ರಸಾದದ ನೀರು.

ತೀರಿಹೋಗು = ಸಾಯುವುದು.

ತುಂಗಾ = ತುಂಗಾನದಿ.

ತುಂಡು = ಚೂರು, ಹುರಿದ ಮಾಂಸ.

ತುಂಡೆ = ಮರದ ಹರೆ, ಗೆಲ್ಲು, ಗಿಡಗಳ ಚಿಗುರು.

ತುಂತ್ರು = ತುಂತುರು, ಹನಿಹನಿಯಾದ.

ತುಂಬಿದ ಬಸರಿ = ದಿನ ತುಂಬಿದ ಗರ್ಭಿಣಿ.

ತುಂಬಿ ನಿಲ್ಲುವುದು = ದೇವರ ವಿಗ್ರಹಕ್ಕೆ ತುಂಬಾ ಹೂ ಮುಡಿಸಿ ಪ್ರಸಾದ ನೋಡುವುದು. ಬಲಕ್ಕೆ ಹೂ ಬಿದ್ದರೆ ಒಳ್ಳೆಯದು, ಎಡಕ್ಕೆ ಬಿದ್ದರೆ ವಿಘ್ನ, ಹೂವು ಬೀಳದಿದ್ದರೆ ತುಂಬಿ ನಿಂತಿದೆ ಎನ್ನುತ್ತಾರೆ.

ತುಂಬೆ ಗಿಡ = ಸಣ್ಣಗಿಡ, ಹಸಿರು ಎಲೆಗಳ ರಸ ಗಂಟಲು ನೋವಿಗೆ ಬಳಕೆ, ಸೊಪ್ಪಿನ ರಸ ಕಿರುನಾಲಿಗೆಗೆ ಹಚ್ಚಿದರೆ ಸ್ವರ ಭಂಗ ಹೋಗುತ್ತದೆ, ಚಿಕ್ಕಮಕ್ಕಳಿಗೆ ಇದರ ಹೂವನ್ನು ಹಾಲಿಗೆ ಹಾಕಿ ಕಾಯಿಸಿ ಕೊಟ್ಟರೆ ಶೀತ ಕಡಿಮೆ ಯಾಗುತ್ತದೆ.

ತುಂಬೆ ಹೂ = ಔಷಧಿಗೂ, ದೇವರ ಪೂಜೆಗೂ ಬಳಸುವ ಹೂವು.

ತುಂಬು = ತುಂಬಿಸು, ಭರ್ತಿಮಾಡು.

ತುಂಬುಗಬ್ಬ = ಗರ್ಭಧರಿಸಿ, ದಿನ ತುಂಬಿದ ದನ/ಎಮ್ಮೆ.

ತುಂಬು ದೀಪ = ಹೊತ್ತಿಸದಿರುವ ದೀಪ.

ತುಕ್ಕು = ಜಂಗು, ಕಿಲುಬು.

ತುಟಿ = ಬಾಯಿ , ಬಾಯಿ ಮುಚ್ಚಲು ತೆರೆಯಲು ಅನುಕೂಲ ವಾಗುವಂತಿರುವ ಹೊರಭಾಗ.

ತುಟಿಕಚ್ಚು = ಆಡಿದ ಮಾತಿಗೆ ಪಶ್ಚಾತ್ತಾಪ ವ್ಯಕ್ತ ಪಡಿಸುವ ರೀತಿ, ೨. ತುಟಿಯನ್ನು ಹಲ್ಲಿನಿಂದ ಕಚ್ಚು.

ತುಟಿಪಿಟಕ್ಕೆನ್ನದೆ = ಮಾತಾಡದೆ ಬಾಯಿ ಬಿಡದೆ (ತುಟಿ ಪಿಟಕೆನ್ನಲಿಲ್ಲ).

ತುಟಿಬಾರ್ಸು = ಕೈ ಬೆರಳಿನಿಂದ ಕೆಳ–ತುಟಿಯನ್ನು ಬಾರಿಸಿ ಹೀಯಾಳಿಸುವ ಬಗೆ, 'ಹಾಗೇ ಆಗಬೇಕು' ಎನ್ನುವ ಬಗೆ.

ತುಟಿಮೀರು = ಆಡಬಾರದ ಮಾತು ಅರಿವಿಲ್ಲದೆ ಆಡುವುದು.

ತುಟ್ಟಿ = ದುಬಾರಿ.

ತುಡು = ಆಸೆ, ತಿನ್ನುವ ಆಸೆ ೨.ಎದೆ–ಹಾಲು.

ತುಡುಕೊಡು = ಮಗುವಿಗೆ ಹಾಲುಣಿಸು.

ತುಡುಗು = ತಿನ್ನುವ ದುರಾಸೆ.

ತುಡುಗೊಣ್ಣದು = ಆಸೆಪಟ್ಟುಕೊಳ್ಳುವುದು, ಬಾಯಲ್ಲಿ ನೀರೂರಿಸುವುದು, ಆಸೆಯಿಂದ ಇಕ್ಕಡಿಸುವುದು.

ತುಡುಬಡ್ಕು = ತುಡುಗು.

ತುಡುಬಡ್ಕಿ = ತಿನ್ನುವ ದುರಾಸೆಯವಳು.

ತುಡು ಬಿಡಿಸುವುದು = ತಾಯಿ ಮೊಲೆಹಾಲು ಕುಡಿಯುತ್ತಿರುವ ಮಕ್ಕಳು/ಕರುಗಳಿಗೆ ಹಾಲು ಕುಡಿಯುವ ಅಭ್ಯಾಸವನ್ನು ಮರೆಸುವುದು.

ತುಡುವೆ = ನೆಲದ ಹುತ್ತದಲ್ಲಿರುವ ಜೇನು, ಇದನ್ನೇ ಪೆಟ್ಟಿಗೆಯಲ್ಲಿಟ್ಟು ಸಾಕುವುದು.

ತುಣುಕು = ತುಂಡು, ಚೂರು.

ತುತ್ತರಿಕೆ = ಬೇಸರಿಕೆಯನ್ನು ವ್ಯಕ್ತಪಡಿಸುವ ರೀತಿ.

ತುತ್ತತುದಿ = ಮರ/ಶಿಖರ/ಬೆಟ್ಟಗುಡ್ಡಗಳ ಮೇಲ್ತುದಿ.

ತುತ್ತಿನ ಚೀಲ = ಹೊಟ್ಟೆ, ಜಠರ.

ತುತ್ತು = ಮುಷ್ಟಿಯಿಂದ ಹಿಡಿಯುವಷ್ಟು ಅನ್ನ, ಒಂದು ಸಾರಿಗೆ ಬಾಯಿಗೆ ಹಿಡಿಯುವಷ್ಟು.

ತುತ್ತೂರಿ = ಒಂದು ರೀತಿಯ ಕೊಳಲು ವಾದ್ಯದಂತೆ. ಮೊದಲು ಗಾಡಿ ಹೊಡೆಯುವವರು ಸದಾ ತಮ್ಮೊಂದಿಗೆ ಇಟ್ಟುಕೊಂಡು, ಕಾಡಿನಲ್ಲಿ ಹೋಗುವಾಗ ಹುಲಿ ಬರಬಾರದೆಂದು ಊದುತ್ತಾ ಹೋಗುತ್ತಿದ್ದರು.

ತುದಿ = ಕೊನೆ, ಅಂತ್ಯ.

ತುಪ್ಪ = ಬೆಣ್ಣೆಯನ್ನು ಹದವಾಗಿ ಕಾಯಿಸಿದ್ದು.

ತುಪ್ಪದಲ್ಲೇ ಕೈತೊಳಿ = ಸುಖವಾಗಿ ಸಲಹುವುದು (ಅಲಂ), ಅತ್ಯಂತ ಸುಖ, ಸಂತೋಷ ದಿಂದಿರುವುದು.

ತುಪ್ಪಟ = ಪ್ರಾಣಿಗಳ ಚರ್ಮ.

ತುಪ್ಪಳ = ಹಕ್ಕಿಗಳ ಪುಕ್ಕ.

ತುಪ್ಪೀರೇಕಾಯಿ = ಒಂದು ರೀತಿಯ ತರಕಾರಿ.

ತುಪ್ಪು = ೧.ಉಗುಳು, ೨.ಎಂಜಲು ಹೊರಹಾಕು.

ತುರಿ = ೧.ಕಾಯಿಯ ತುರಿ, ೨.ಪುಡಿ ಮಾಡು, ೩. ಸಣ್ಣ ಕಜ್ಜಿ.

ತುರಿಕೆ = ಕೆರೆತ, ತರಚು.

ತುರಿಮಣೆ = ಈಳಿಗೆಮಣೆ.

ತುರಿಸು = ಕೆರೆ, ಉಜ್ಜು.

ತುರುಗಚ್ಚಿ = ತುರಿ, ಸಣ್ಣಕಜ್ಜಿ, ತುಂಬಾ ತುರಿಕೆಯಾಗುವ ಕಜ್ಜಿ.

ತುರ್ಕು = ಒತ್ತಿತುಂಬು.

ತುರ್ತು = ಶೀಘ್ರ, ತ್ವರಿತ, ಕೂಡಲೇ.

ತುರುಬು = ಗೊಂಡೆ, ಮುಡಿ, ಹೆರಳು.

ತುರ್ಸಿ = ತುರಿಕೆ.

ತುಸು = ಸ್ವಲ್ಪ.

ತುಳಿ = ಕಾಲಿನಿಂದ ಒದೆ, ಮೆಟ್ಟು.

ತುಳ್ಕು = ತುಳುಕು, ಉಕ್ಕುವುದು, ಚೆಲ್ಲುವುದು.

ತೂಕ = ಭಾರ, ವಜನು

ತೂಕದಬಟ್ಟು = ತೂಕಕ್ಕೆ ತಕ್ಕಂತೆ ಉಪಯೋಗಿಸುವ ಕಲ್ಲು.

ತೂಕಡ್ಕೆ = ತೂಕಡಿಕೆ, ಕುಗುರುವುದು.

ತೂತ = ರಂಧ್ರ, ವಟ್ಟೆ.

ತೂಬು = ಕೆರೆ/ಅಣೆಕಟ್ಟೆಯ ಬಾಗಿಲು, ನಿಯಮಿತವಾಗಿ ನೀರು ಹೊರಬಿಡುವ ಬಾಗಿಲು.

ತೂರು = ಗಾಳಿ ಬೀಸುತ್ತಿರುವಾಗ ಧಾನ್ಯವನ್ನು ಹಾರಿಸುವುದು, ೨.ನುಸುಳು.

ತೆಂಗಿನೆಡ್ಲು = ತೆಂಗಿನ ಗರಿ.

ತೆಂಗಿನ ಮಟ್ಟೆ = ತೆಂಗಿನಕಾಯಿಯ ಗೊನೆ.

ತೆಂಬ್ಗಿ = ತಂಬಿಗೆ.

ತೆಕ್ಕು = ಮೊಟ್ಟೆಯಿಟ್ಟ ಕೋಳಿ ಕೂಗುವುದು.

ತೆಕ್ಕೆ = ೧.ಎರಡು ತೋಳುಗಳಲ್ಲಿ ಹಿಡಿಸುವಷ್ಟು (ಒಂದು ತೆಕ್ಕೆ ಸೌದೆ), ೨.ತೋಳು.

ತೆಕ್ಕೆಹಾಕು = ಅಪ್ಪಿಕೋ, ಅಂಟಿಕೊ, ತಬ್ಬು.
ತೆಕ್ಕೊಡು = ತೆಗೆದುಕೊಡು.
ತೆಗಳಿಕೆ = ನಿಂದೆ, ಅವಹೇಳನ.
ತೆಗಳು = ನಿಂದಿಸು, ಹೀಯಾಳಿಸು.
ತೆಗಿ = ಬಿಡು, ಬಿಚ್ಚು, ಬಿಟ್ಟುಬಿಡು.
ತೆತ್ತು = ದಂಡಕೊಟ್ಟು.
ತೆನೆ = ಹೊಡೆ, ಕದಿರು.
ತೆಣೆ = ಮನೆಯ ಹೊರಗಿನ ಕಟ್ಟೆ.
ತೆಪ್ಪ = ನೀರಿನಲ್ಲಿ ಹಾಯಲು ಮಾಡಿದ ಬಿದಿರಿನ ಹಾಯಿದೋಣಿ.
ತೆಪ್ಪಗೆ = ಸುಮ್ಮನೆ, ಮೌನವಾಗಿ .
ತೆಪ್‌ತೆಳ್ಳಗೆ = ಆಯಾಸದಿಂದ ಸುಸ್ತಾಗಿ, (ತೆಪ್‌ತೆಳ್ಳಗೆ ಕೂತ್ಕಂಬಿಟ್ಟೆ).
ತೆಪ್ಪೆ = ೧.ತೊಗಟೆ, ಸಿಪ್ಪೆ ೨. ಸಗಣಿ.
ತೆಪ್ಪೋತ್ಸವ = ನೀರಿನಲ್ಲಿ ದೇವರ ಉತ್ಸವ.
ತೆಯ್ಯಿ = ತೇಯು, ಅರೆ, ತಿಕ್ಕು.
ತೆರ = ಸುಂಕ, ೨. ವಧು ದಕ್ಷಿಣೆ.
ತೆರು = ದಂಡಕಟ್ಟು, ಸಲ್ಲಿಸು, ಕೊಡು.
ತೆರೆ = ಅಂತರ್ಪಟ, ೨. ಅಲೆ, ಸಮುದ್ರದ ಅಲೆ.
ತೆರ್ಲೆ = ಕೆನೆಕಟ್ಟು, ಬೂಸಲುಬೆಳೆ.
ತೆವ್ಲ = ಚಪಲ, ಬಯಕೆ.
ತೆಳು = ಬಡಕಲು, ಸಪುರ.
ತೆಳುಗ = ತೆಳ್ಳಗಿನ ದೋಸೆ.
ತೆಳುದೋಸೆ = ತೆಳುಗ.
ತೇಗ = ಸಾಗುವಾನಿ ಮರ.
ತೇಗು = ಹೊಟ್ಟೆ ತುಂಬಿದಾಗ ಬಾಯಿಂದ ಒತ್ತರಿಸಿಕೊಂಡು ಬರುವ ಗಾಳಿ, ತೇಗುವಿಕೆ.
ತೇದು = ತೇಯ್ದು, ಅರೆದು, ತೇಯು.
ತೇರು = ರಥ, ರಥೋತ್ಸವ.
ತೇರು ಹೂ = ರಥದ ಹೂ, ಒಂದು ರೀತಿಯ ಕೆಂಪು ಹೂ.
ತೇಯು = ತೆಯ್ಯಿ, ಅರೆ, ತಿಕ್ಕು (ಗಂಧ ತೇಯುವುದು).
ತೇಲು = ನೀರಿನ ಮೇಲೆ ಚಲಿಸು.
ತೇಲುಗಣ್ಣು = ಆಯಾಸದ ಕಣ್ಣು, ಸಾಯುವ ಪರಿಸ್ಥಿತಿ.
ತೊಂಡೆ = ಬಳ್ಳಿಯಲ್ಲಿ ಬೆಳೆಯುವ ಒಂದು ತರಕಾರಿ.
ತೊಂದ್ರೆ = ತೊಂದರೆ, ಕಷ್ಟ.
ತೊಗರಿ = ದ್ವಿದಳದಾನ್ಯ.
ತೊಗಲು = ಚರ್ಮ.
ತೊಟಕು = ಹನಿ, ಜಿನುಗು, ತೊಟ್ಟು.
ತೊಟ್ಟಿಕ್ಕು = ಸೋರು, ಹನಿಹನಿಯಾಗಿ ಬೀಳು.
ತೊಟ್ಟು = ೧.ಸ್ವಲ್ಪ, ತುಸು ೨.ಹನಿ ೩.ಹೂವು/ಎಲೆ/ಕಾಯಿಯು ಗಿಡಕ್ಕೆ ನೇತಾಡುವ ಬುಡಭಾಗ, ೪.ಮೊಲೆಯ ತುದಿ (ಮೊಲೆತೊಟ್ಟು).
ತೊಟ್ಲು = ಚಿಕ್ಕ ಮಕ್ಕಳನ್ನು ತೂಗಿ ಮಲಗಿಸುವ ಪಲ್ಲಂಗ.
ತೊಟ್ಲು ಕಳಿಸದು = ಬಾಣಂತನ ಕಳೆದ ಮೇಲೆ, ಮಗು ಬಾಣಂತಿಯನ್ನು ಗಂಡನ ಮನೆಗೆ ಕಳಿಸುವ ಆಚರಣೆ.
ತೊಟ್ಲುಶಾಸ್ತ್ರ = ನಾಮಕರಣ, ಮಗು ಹುಟ್ಟಿ ಹನ್ನೊಂದನೇ ದಿನಕ್ಕೆ ತೊಟ್ಟಿಲಿಗೆ ಹಾಕುವ ಆಚರಣೆ.
ತೊಡ್ನಟ್ಟಿ = ಮೊದಲ ದಿನದ ಗದ್ದೆ ನಾಟಿ.
ತೊಡಿ = ಹಚ್ಚು, ಲೇಪಿಸು, ಬಳಿ.
ತೊಡಿಯುದು = ಹಚ್ಚುವುದು, ಬಳಿಯುವುದು.

ತೊಡ್ರು = ತೊಡರು, ತಡೆ, ತೊಂದರೆ, ತೊಡಕು.

ತೊಡೆ = ಸೊಂಟದಿಂದ ಮಂಡಿ-ಯವರೆಗಿನ ಭಾಗ.

ತೊಣಕು = ಉಕ್ಕು, ಚೆಲ್ಲು.

ತೊದಲು = ನಾಲಿಗೆ ಹಿಡಿದು ಮಾತಾಡು, ತಪ್ಪು ಉಚ್ಚರಿಸು.

ತೊದ್ಲುಮಾತು = ಚಿಕ್ಕ ಮಕ್ಕಳಾಡುವ ತೊದಲು ನುಡಿ.

ತೊನ್ನು = ಚರ್ಮ ಬೆಳ್ಳಗಾಗುವ ರೋಗ, ಪಾಂಡುರೋಗ.

ತೊನೆ = ತೂಗಾಡು, ನೇತಾಡು.

ತೊಯ್ಯು = ಒದ್ದೆಯಾಗು, ನೆನೆ.

ತೊರಂಗ್ಲುಮರ = ಹೊಂಗೆಮರ, ಎತ್ತರ ಅಗಲವಾಗಿ ರಾಶಿರಾಶಿ ಎಲೆಗಳಿಂದ ಕೂಡಿ ಒಳ್ಳೆಯ ನೆರಳು ನೀಡುತ್ತವೆ.

ತೊರ್ಡಡಿಪಾಲು = ಅವಮಾನದ ಪಾಲು, ಕರೆದರೂ ಶಿಕಾರಿಗೆ ಬರದಿದ್ದವರಿಗೂ ಅನಿವಾರ್ಯ ವಾಗಿ ಕೊಡಬೇಕಾದ ಮಾಂಸದ ಪಾಲು ೨. ಈಡಿನ ಶಬ್ಧ ಕೇಳಿದ ಮೇಲೆ ಬಂದವರಿಗೆ ಕೊಡಬೇಕಾದ ಅರ್ಧಪಾಲು.

ತೊಲ = ಒಂದು ತೂಕ, ಹನ್ನೊಂದು ಗ್ರಾಂ ಚಿನ್ನ.

ತೊಲಗು = ದೂರ ಹೋಗು, ಹೊರಟು-ಹೋಗು (ಅಸಡ್ಡೆ ಯಿಂದ).

ತೊಲ್ಡು = ತೊರಡು, ವೃಷಣ.

ತೊಲೆ = ಮನೆಯ ಮಾಳಿಗೆಗೆ ಆಧಾರವಾಗಿ ಗೋಡೆಯ ಮೇಲೆ ಹಾಕುವ ಮರದ ದಿಮ್ಮಿ, ಚೌಬೀನೆ.

ತೊಸಿ = ನೆಲದ ಮೇಲೆ ಹೊರಳಾಡು.

ತೊಳಸು = ಕೈಯಿಂದ ಕಲಕು, ನೀರಿಂದ ತೊಳೆದು ಶುದ್ಧೀಕರಿಸು, ಕುಟ್ಟು (ಅಕ್ಕಿ ತೊಳಸು).

ತೊಳಾರ್‌ಬಳಿ = ಮಲೆನಾಡು ಒಕ್ಕಲಿಗರ ಒಂದು ಬಳಿ/ಗೋತ್ರ.

ತೊಳ್ಗಾಳು = ತೊಳೆದು ಶುದ್ದೀಕರಿಸಿದ ಹಣ್ಣು ಮೆಣಸಿನ ಕಾಳು, ಬಿಳಿ ಮೆಣಸಿನ ಕಾಳು.

ತೊಳಿ = ೧. ಸ್ವಚ್ಛಮಾಡು, ಶುದ್ಧಮಾಡು, ೨.ಹಾಳುಮಾಡು, ನಾಶಮಾಡು (ಅಲಂ).

ತೊಳ್ಳೆ = ೧.ಶ್ವಾಸಕೋಶ ೨.ಹುರಿದ ಮಾಂಸದ ತುಂಡು.

ತೊಳ್ಳೆಮೀನು = ಗದ್ದೆಯಲ್ಲಿ ಮಳೆಗಾಲದಲ್ಲಿ ಸಿಗುವ ಒಂದು ಜಾತಿಯ ರುಚಿಕರ ಮೀನು.

ತೋಟ = ೧.ಬಾಗಾಯ್ತು ೨.ಬಂದೂಕಿನ ಗುಂಡು.

ತೋಟಕೋವಿ = ಸಿದ್ಧಪಡಿಸಿದ ಗುಂಡು (ತೋಟ)ಗಳನ್ನು ಹಾಕಿ ಬಳಸುವ ಸುಧಾರಿತ ಕೋವಿ.

ತೋಟ ಹಾಕದು = ಹೊಸದಾಗಿ ಗಿಡಮರಗಳನ್ನು ನೆಟ್ಟು ತೋಟ ಮಾಡುವುದು ೨.ಒಂದು ಬಗೆಯ ಮೀನಿನ ಶಿಕಾರಿ, ನೀರಿಗೆ ಗುಂಡು ಹೊಡೆದು ಮೀನು ಸಾಯಿಸುವುದು.

ತೋಡಾ = ಗಂಡಸರು ಕೈಗೆ ಹಾಕುವ

ಬಳೆ .

ತೋಡು = ೧.ಅಗೆಯುವುದು, ಆಳ ಮಾಡುವುದು ೨.ಮಗೆದು ತೆಗೆಯುವುದು (ನೀರು ಮಗೆ).

ತೋಪಿ = ಟೋಪಿ, ಟೊಪ್ಪಿಗೆ, ತಲೆಯ ಉಡುಪು .

ತೋರ = ದಪ್ಪ.

ತೋರ್ಣ = ಹಬ್ಬ ಹರಿದಿನಗಳಲ್ಲಿ ಬಾಗಿಲಿಗೆ ಹೂವು, ಎಲೆಗಳ ಮಾಲೆ ಹಾಕುವುದು, ದಾರಿಗೆ ಕಂಬನೆಟ್ಟು ತೋರಣ ಕಟ್ಟುವುದು.

ತೋರು = ಕಾಣುವುದು, ನೋಡುವುದು ೨.ಭಾಸವಾಗು, ಹೊಳೆಯುವುದು.

ತೋರ್ಬೆರ್ಳು = ಹೆಬ್ಬೆರಳಿನ ಪಕ್ಕದ ಬೆರಳು.

ತೋಲಂಡೆ = ತೋಲಾಂಡಿ, ಮಹಾದೊಡ್ಡ ಯಜಮಾನ ಎಂಬ ವ್ಯಂಗ್ಯಾರ್ಥದಲ್ಲಿ ಹೇಳುವುದು.

ತೋಳ = ನಾಯಿಯಂತಿರುವ ಒಂದು ಕಾಡು ಪ್ರಾಣಿ.

ತೋಳತಿಂದಂಗೆ = ಹೊಟ್ಟೆ ಬಾಕತನ (ಅಲಂ) (**ಹೋಲಿಕೆ**).

ತೋಳ್ಸಿ = ತುಳಸಿ, ತುಳಸಿಗಿಡ, ಮಲೆನಾಡಿಗರ ದೇವರು.

ತೋಳ್ಸಿ ಕಟ್ಟೆ = ಮಲೆನಾಡ ಒಕ್ಕಲಿಗರ ಮನೆಯ ಮುಂದೆ ಇರುವ ತುಳಸಿಯ ಕಟ್ಟೆ/ತುಳಸಿಯನ್ನು ಪ್ರತಿಷ್ಠಾಪಿಸಿದ ಕಟ್ಟೆ/ಪೀಠ.

ತೊಳ್ಸಿಕಲ್ಲು = ತುಳಸಿ ಕಟ್ಟೆಯ ಮೇಲೆ, ಕೆತ್ತನೆಯ ಕೆಲಸ ಮಾಡಿದ ವಿಶಿಷ್ಟವಾದ ಬಳಪದ ಕಲ್ಲು.

ತೋಳು = ರಟ್ಟೆ, ಭುಜ, ಕೈತೋಳು.

ತೌಡು = ಬತ್ತದ ಒಳಗಿರುವ ಪದರ, ಅಕ್ಕಿಯ ಕೇಸು.

ತೌರು = ತವರು, ತಾಯಿಯ ಮನೆ.

ತೌರ್ಮನೆ = ತೌರು.

ತ್ಯಳ್ಗ = ತೆಳುಗ, ತೆಳ್ಳಗಿನ ದೋಸೆ.

ತ್ಯಗಣೆ = ತಿಗಣೆ, ರಕ್ತ ಹೀರುವ ಕೀಟ, ಹಾಸಿಗೆ/ಗೋಡೆಯ ಬಿರುಕಿನಲ್ಲಿ ವಾಸಿಸುವ ಕ್ರಿಮಿ.

ತ್ಯಗಿ = ತೆಗಿ, ಬಿಟ್ಟುಬಿಡು.

ತ್ಯಕ್ಕೆ = ೧.ತೋಳು, ೨.ಸೌದೆಯ ಚಕ್ಕೆ ೩.ತೆಕ್ಕೆ, ಬಾಹು.

ತ್ಯಪ್ಪೆ = ತೊಗಟೆ, ಮರದ ಸಿಪ್ಪೆ.

ತ್ಯವ್ಲು = ಗೀಳು, ಚಟ, ತೀವ್ರ ಹಂಬಲ, ತೆವಲು.

ತ್ಯಾಪೆ = ಹರಿದ ಬಟ್ಟೆಗೆ ಬೇರೆ ಬಟ್ಟೆಯಿಟ್ಟು ಹೊಲಿದಿದ್ದು.

ತ್ಯಾಮಾನೆ = ನಷ್ಟ, ಬಂಗಾರದ ಆಭರಣಗಳನ್ನು ಮಾಡಲು ಉಜ್ಜಿದಾಗ ಉಂಟಾಗುವ ಧೂಳು.

ತ್ರಾಣ = ಬಲ, ಶಕ್ತಿ, ಕಸು.

ತ್ವಂದ್ರೆ = ತೊಂದರೆ, ಕಷ್ಟ.

ತ್ವಂಡೆ = ತೊಂಡೆ, ತರಕಾರಿ.

ತ್ವಳ್ಗಾಳು = ತೊಳೆದ ಮೆಣಸಿನ ಕಾಳು, ಬಿಳಿಯ ಮೆಣಸಿನ ಕಾಳು.

ತ್ವಾಟ = ತೋಟ, ಬಾಗಾಯ್ತು.

ತ್ವಾಟದೂರ = ೧.ದೂರದ ತೋಟ,

೨.'ಕಿವಿ ಕೇಳಿಸುವುದಿಲ್ಲ' ಎಂದು ಹೇಳುವ ರೀತಿ.

ತ್ವಾರ್ಣ = ತೋರಣ.

ತ್ವಾಳ = ತೋಳ, ಕಾಡುಪ್ರಾಣಿ.

ಥ

ಥಟ್ಟಂತ = ಕೂಡಲೆ, ಬೇಗನೆ.

ಥಂಡಿ = ವದ್ದೆ, ಶೀತ, ಹಸಿ.

ಥಡಿ = ಹಾಸಿಗೆ, ತಡಿ.

ಥರಗುಟ್ಟು = ನಡುಗು, ಕಂಪಿಸು.

ಥಳ = ಸ್ಥಳ ೨. ಧರ್ಮಸ್ಥಳ–ಪವಿತ್ರ ದೇವಸ್ಥಾನ.

ಥಳಕು = ವೈಯ್ಯಾರ, ಬೆಡಗು.

ಥಳಥಳ = ಹೊಳಪು, ಹೊಳೆಯುತ್ತಿದೆ ಎಂದು ಹೇಳುವುದು.

ಥೂನನ್ನ = ತನ್ನ ತಪ್ಪಿಗೆ ತಾನೇ ಬೈದುಕೊಳ್ಳುವ ಪದ.

ಥೂನಿನ್ನ = ಬೇರೆಯುವರ ತಪ್ಪಿಗೆ ಅಸಮಾಧಾನ ವ್ಯಕ್ತಪಡಿಸುವ ಪದ/ರೀತಿ.

ಥೇಟು = ತದ್ರೂಪ, ಒಂದೇ ರೀತಿಯ.

ದ

ದಂಗು = ವಿಸ್ಮಯ, ಸೋಜಿಗ, ಗಾಬರಿ.

ದಂಟು = ಕಾಂಡ, ಕಡ್ಡಿ, ದಡಿ.

ದಂಡ = ವ್ಯರ್ಥ, ೨. ಶಿಕ್ಷೆ, ಜುಲ್ಮಾನೆ.

ದಂಡ್ಗಿ = ಮಧುಮಕ್ಕಳನ್ನು ಕೂರಿಸಿ ಹೊತ್ತುಕೊಂಡು ಹೋಗುವ ಮರದ ಸಾಧನ.

ದಂಡು = ೧. ಗುಂಪು, ರಾಶಿ ೨.ಸೈನ್ಯ, ೩.ಹಿಂಡು.

ದಂಡೆ = ೧.ತೀರ, ದಿಡ ೨.ಒತ್ತಾಗಿ ಕಟ್ಟಿದ ಹೂಮಾಲೆ.

ದಂಬೆ = ದೊಂಬೆ, ವದಗೆ, ನೀರು ಸರಾಗವಾಗಿ ಹರಿಯುಲು ಮಾಡಿರುವ ದೋಣಿಯಾಕಾರದ ಸಾಧನ.

ದಕ್ಕು = ೧.ಲಭ್ಯ, ದೊರಕು, ಸಿಕ್ಕು, ವಶವಾಗು ೨.ಜೀರ್ಣ (ತಿಂದಿದ್ದು ದಕ್ಕುವುದು) ೩.ಬಲಿತ ಎಲೆ (ವೀಳ್ಯದೆಲೆ ದಕ್ಕಾಗಿದೆ).

ದಕ್ಷ = ಕಾರ್ಯ ತತ್ಪರ, ನುರಿತ ಕೆಲಸಗಾರ, ನಿಷ್ಟ

ದಗ = ಮೋಸ, ವಂಚನೆ.

ದಗಲ್ಬಾಜಿ = ಮೋಸಗಾರ, ವಂಚಕ.

ದಗಲೆ = ೧.ಸಡಿಲ, ಅಳ್ಳಕ ೨.ಅರ್ಧ ತೋಳಿನ ಅಂಗಿ.

ದಗಾಕೋರ = ದಗಲ್ಬಾಜಿ.

ದಗೆ = ಕಾವು, ಝಳ, ಸೆಖೆ, ತಾಪ.

ದಗ್ನೆದ್ದು = ತಟ್ಟನೆ ಎದ್ದು.

ದಟ್ಟಿ = ೧.ಮಡಿಪಂಚೆ, ೨.ಜರಿಯ ಅಂಚು.

ದಟ್ಟಿಸೀರೆ = ಚಿನ್ನಬೆಳ್ಳಿಯ ಜರಿಯ ಅಂಚಿನ ಸೀರೆ.

ದಡ = ತೀರ, ದಂಡೆ, ಏರಿ, ಅಂಚು.

ದಡಕಾಣ್ಸು = ಗುರಿಮುಟ್ಟಿಸು.

ದಡಗುಡಿಸು = ೧. ಆತುರಪಡಿಸು, ೨. ಗೊಂದಲ ಮಾಡು, ದಡಬಡ ಎಂದು ಶಬ್ಧ ಮಾಡು.
ದಡ್ಡ = ಜಾಣನಲ್ಲ, ಬುದ್ಧಿಹೀನ.
ದಡಾರ = ಗ್ವಾರೆ, ಮೈಮೇಲೆ ಏಳುವ ಸಣ್ಣಗುಳ್ಳೆ, ಅಂಟುರೋಗ.
ದಡಿ = ದಂಟು, ಕಾಂಡ.
ದಡಿಯ = ೧.ದಪ್ಪನೆಯ ವ್ಯಕ್ತಿ, ದಾಂಡಿಗ ೨. ದಡೆ.
ದಡೂತಿ = ದಡಿಯ, ೨.ದೊಡ್ಡದು ಬೃಹದಾಕಾರದ್ದು.
ದಡೆ = ೧.ಹತ್ತು ಸೇರಿನ ತೂಕ, ಹನ್ನೆರಡು ಸೇರಿನ ಅಳತೆ, ೨. ಚಿಂತಾಲು, ದೊಡ್ಡ ತಕ್ಕಡಿ.
ದಡೆಕಲ್ಲು = ಹತ್ತು ಸೇರಿನ ತೂಕದ ಕಲ್ಲು, ತೂಕದ ಕಲ್ಲು.
ದಡ್ಡೆ = ಹೆಣ್ಣು ಹಂದಿ, ಮರಿಹಾಕಿದ ಹಂದಿ.
ದಣಿ = ೧.ದಣಿವು, ಆಯಾಸ ೨.ಬಹಳ ಜಾಸ್ತಿ ೩. ಒಡೆಯ, ಯಜಮಾನ.
ದಣು = ದಣಿವು.
ದತ್ತೂರಿ ಗಿಡ = ಅಗಲ ಎಲೆ, ಕಾಯಿ ಮೇಲೆ ಮುಳ್ಳಿರುವ ಸಸ್ಯ.
ದದ್ದು = ಪಿತ್ಥದಿಂದಾದ ದಂದೆ, ಕಜ್ಜಿ.
ದದ್ದುಹಿಡುಕ = ಕಜ್ಜಿ ಬುಡಕ.
ದನ = ಹಸು, ಆಕಳು.
ದನಕಾಯು = ದನಗಳನ್ನು ಮೇಯಿಸುವುದು.
ದನಿ = ಸ್ವರ, ಮಾತು.
ದನಿಉಡುಗು = ಮಾತು ನಿಂತು ಹೋಗುವುದು.
ದಪ = ಸಲ, ಸರ್ತಿ, ಬಾರಿ, ಸರದಿ.
ದಪನ್ನು = ಹೆಣವನ್ನು ಹೂಳುವುದು, ಮಣ್ಣು ಮಾಡುವುದು.
ದಪ್ಪ = ತೋರ, ದಡೂತಿ, ಗಾತ್ರ
ದಪೇದಾರ = ಪೊಲೀಸು ಪೇದೆಗಳ ಮುಖ್ಯಸ್ಥ.
ದಬ್ಬಣ = ಗೋಣಿ ಹೊಲಿಯುವ ದೊಡ್ಡ ಸೂಜಿ, ದಬ್ಬಳ.
ದಬ್ಬಳ = ದಬ್ಬಣ.
ದಬ್ಬಾಕು = ಬೋರಲು ಹಾಕು, ಕವುಚಿ ಹಾಕು, ಎರಡು ತೋಳುಗಳಿಂದ ಬಳಸಿ ಹಿಡಿಯುವುದು (ದಬ್ಬಾಕಿ ಹಿಡಿ).
ದಬ್ಬು = ತಳ್ಳು, ನೂಕು.
ದಬ್ಬೆ = ಸಿಗಿದ ಬಿದಿರು ಅಥವಾ ಅಡಕೆಯ ಪಟ್ಟಿ
ದಮ್ಕಟ್ಟು = ಕೆಲಸ ಮಾಡುವಾಗ ಉಸಿರು ಬಿಗಿಹಿಡಿ, ಶಕ್ತಿ ಉಪಯೋಗಿಸು.
ದಮ್ಮಯ್ಯ = ತಪ್ಪಾಯ್ತು ಎಂದು ಕೇಳಿಕೊಳ್ಳುವುದು ೨.ಗೋಗರೆಯುವುದು
ದಮ್ಮಸ್ಸು ಹೊಡಿ = ೧.ಮರದ ಮಣೆಗೆ ಮಧ್ಯಕ್ಕೆ ಒಂದು ಕೋಲು ಅಳವಡಿಸಿ ಅದರಿಂದ ನೆಲವನ್ನು ಬಡಿದು. ಸಮ ಮಾಡುವುದು/ ನಂಉ ಮಾಡುವುದು ೨.ಹೊಲಗದ್ದೆಗಳಲ್ಲಿ ಮಣ್ಣಿನ ಹೆಂಟೆ ಒಡೆಯುವುದು.
ದಮ್ಕಿ = ಬೆದರಿಕೆ ಹಾಕು, ಹೆದರಿಸು.
ದಮ್ಮು = ಗೂರು, ಉಬ್ಬಸ, ಗೂರಲು.

ದಯ್ಯ = ದೆವ್ವ, ಭೂತ, ದೈವ.
ದಯಾಳು = ದಯಾವಂತ, ಕರುಣೆಯುಳ್ಳವ.
ದರ = ಬೆಲೆ.
ದರಕಾರ = ಮುಲಾಜು, ಸಂಕೋಚ.
ದರಕಾಸು = ಸರ್ಕಾರಿ ಭೂಮಿ.
ದರಗಿನ ಜಲ್ಲೆ = ಒಣಗಿದ ಎಲೆ/ದರಗು ತುಂಬುವ ಬುಟ್ಟಿಯಂತಹ ದೊಡ್ಡ ಚೀಲ/, ಕಿಲ್ಲೆ.
ದರ್‍ಗಿನ ಕುತ್ರೆ = ಒಣಗಿದ ಎಲೆಗಳನ್ನು ರಾಶಿ ಹಾಕಿ ಹುಲ್ಲಿನಿಂದ ಮುಚ್ಚಿಡುವುದು, ಮಳೆಗಾಲದಲ್ಲಿ ಕೊಟ್ಟಿಗೆಗೆ ಹಾಕಿದರೆ ದನಕರುಗಳು ಬೆಚ್ಚಗೆ ಮಲಗುತ್ತವೆ.
ದರಗು = ಒಣಗಿದ ಎಲೆಗಳು, ಉದುರಿದ ಎಲೆಗಳು.
ದರದರಾಂತ = ದರದರನೆ, ಎಳೆದು ಕೊಂಡು ಹೋಗು ಎಂದು ಹೇಳುವುದು.
ದರಿದ್ರ = ಸೋಮಾರಿ, ನತದೃಷ್ಟ.
ದರೆ = ಆಳವಾದ ಕಮರಿ, ಕಂದರ.
ದರ್ಜಿ = ಚಿಪ್ಪಿಗ, ಬಟ್ಟೆ ಹೊಲಿಯುವವನು.
ದರ್ಬಾರು = ೧.ಮಹಾರಾಜರು ನಡೆಸುತ್ತಿದ್ದ ಒಡ್ಡೋಲಗ ೨.ಆಡಂಬರ, ಅನವಶ್ಯಕವಾಗಿ ಹಣವ್ಯಯ ಮಾಡುವುದು.
ದರ್ಬೇಸಿ = ದರಿದ್ರ, ಬಡವ, ಅನಾಥ.
ದರ್ದು = ಅಗತ್ಯ, ಅವಶ್ಯಕತೆ.
ದವಡೆ ಹಲ್ಲು = ಹಿಂಭಾಗದ ಹಲ್ಲು.
ದವಲತ್ತು = ದೌಲತ್ತು, ಜಂಬ, ಅಹಂಕಾರ.
ದಸಗಿ = ಚೂಪಾದ ತುದಿಯುಳ್ಳ ಬಡಿಗೆ, ತುದಿ ಚೂಪು ಮಾಡಿದ ಕೋಲು.
ದಸಿಕೆ = ದಸಗಿ, ಮುಳ್ಳು, ದಪ್ಪಮುಳ್ಳು.
ದಸ್ಗಿ = ದಸಗಿ.
ದಳ್ಳಾಳಿ = ಮಧ್ಯಸ್ಥಿಕೆ ಮಾಡುವವನು, ಮಧ್ಯವರ್ತಿ.
ದಳಿ = ೧. ತಟ್ಟಿಗೋಡೆ , ತಡಿಕೆ, ಎತ್ತಿನ ಗಾಡಿಯ ಮೇಲೆ ಎರಡು ಕಡೆ ಕಟ್ಟಿರುವ ತಡಿಕೆ. ೨. ದೀಪೋತ್ಸವಗಳಲ್ಲಿ ಹಣತೆಗಳನ್ನಿಡಲು ಮಾಡಿದ ಅಡಿಕೆ ದೆಬ್ಬೆ ಅಥವಾ ಮರದ ಪಟ್ಟಿ.
ದಾಂದ್ಲೆ = ದಾಂದಲೆ, ತೊಂದರೆ, ಗಲಾಟೆ.
ದಾಕು = ಡಾಕು, ಚುಚ್ಚುಮದ್ದು.
ದಾಕಾಕದು = ಡಾಕು ಹಾಕುವುದು, ಚುಚ್ಚುಮದ್ದು ಚುಚ್ಚುವುದು.
ದಾಕ್ಷಣೆ = ಸಂಕೋಚ, ಮುಜುಗರ.
ದಾಟು = ಹಾರು, ಜಿಗಿ.
ದಾಟಿ = ಕ್ರಮ, ರೀತಿ, ಶೈಲಿ.
ದಾಡಿ = ರೋಗ, ತೊಂದರೆ, ೨. ಗಡ್ಡ.
ದಾಡೆ = ಹಂದಿಯ ಕೋರೆ ಹಲ್ಲು.
ದಾತು = ಪ್ರಜ್ಞೆ, ತಿಳುವಳಿಕೆ.
ದಾನ = ಉಂಬಳಿ, ಕೊಡುಗೆ.
ದಾಪುಗಾಲು = ದೂರ ದೂರಕ್ಕೆ ಹೆಜ್ಜೆಯಿಡುತ್ತಾ ನಡೆಯುವುದು.
ದಾಯಾದಿ = ಅಣ್ಣತಮ್ಮಂದಿರ ಮಕ್ಕಳು.
ದಾರ = ಸಣ್ಣ ಹಗ್ಗ (ಬಾಳೆಪಟ್ಟೆ ಹಗ್ಗ,

ಸುತ್ತಿ ಹಗ್ಗ), ನೂಲು.

ದಾರದುಂಡೆ = ನೂಲನ್ನು ಸುತ್ತಿ ಸುತ್ತಿ ಉಂಡೆ ಮಾಡಿರುವುದು.

ದಾರಾಕಾರ = ಎಡೆಬಿಡದೆ, ಒಂದೇ ಸಮನೆ ಸುರಿಯುವ ಮಳೆ/ನೀರು.

ದಾರಾಳ = ಜಿಪುಣತನವಿಲ್ಲದ, ಕೊಡುಗೈ, ಉದಾರ ಮನಸ್ಸು.

ದಾರಾಳಿ = ಉದಾರ ಮನಸ್ಸಿನವನು.

ದಾರೆಕುಕ್ಕೆ = ಗಂಡಿನ ಕಡೆಯಿಂದ ಹೆಣ್ಣಿನ ಮನೆಗೆ ತೆಗೆದುಕೊಂಡು ಹೋಗುವ ಬುಟ್ಟಿಗಳಲ್ಲೊಂದು.

ದಾರೆ = ಮದುವೆಯಲ್ಲಿ ಮಾಡುವ ಮುಖ್ಯ ಪದ್ಧತಿ.

ದಾರೆಯರೆಯುವುದು = ಹೆಣ್ಣಿನ ತಂದೆ ತಾಯಿಯರು ಮಗಳನ್ನು ವರನಿಗೆ ಒಪ್ಪಿಸುವ ಆಚರಣೆ.

ದಾಲ್ಚಿನ್ನಿ ಚಕ್ಕೆ = ದಾಲ್ಚಿನ್ನಿ ಮರದ ತೊಗಟೆ, ಒಂದು ಸಾಂಬಾರ ಪದಾರ್ಥ, ಪರಿಮಳಯುಕ್ತ.

ದಾವಣಿ = ಹೆಣ್ಣುಮಕ್ಕಳ ಉಡುಗೆ, ಅರ್ಧ ಸೀರೆ, ೨.ಎತ್ತುಗಳನ್ನು ಒಂದೇ ಹಗ್ಗದಿಂದ ಕಟ್ಟಿ ಒಕ್ಕುವುದು/ ಗಾಣದಿಂದ ಎಣ್ಣೆ ತೆಗೆಯುವುದು, ದನಕರುಗಳನ್ನು ಸಾಲಾಗಿ ಕಟ್ಟುವ ಹಗ್ಗ.

ದಾವಾ = ಮೊಕದ್ದಮೆ, ವ್ಯವಹಾರಕ್ಕೆ ಸಂಬಂಧಿಸಿದ ಮೊಕದ್ದಮೆ, ನ್ಯಾಯಕ್ಕಾಗಿ ನ್ಯಾಯಾಲಯದ ಮೊರೆಹೋಗು .

ದಾವ್ಣಿ = ಅರ್ಧಸೀರೆ, ದಾವಣಿ.

ದಾವ್ಣೆ = ಒಕ್ಕಲುಮಾಡಲು ಬೇಟಿಗೆ ಉದ್ದುದ್ದ ಹಗ್ಗಗಳನ್ನು ಕಟ್ಟಿ ಅದಕ್ಕೆ ಸಾಲಾಗಿ ಎತ್ತುಗಳನ್ನು ಕಟ್ಟುವುದು.

ದಾವು = ದಾಹ, ಬಾಯಾರಿಕೆ, ನೀರಡಿಕೆ.

ದಾಸಣ = ದಾಸವಾಣ, ದಾಸವಾಳ, ಒಂದು ಜಾತಿಯ ಹೂ ಬಿಡುವ ಗಿಡ.

ದಾಸಣ ಸೊಪ್ಪಿನ ದ್ವಾಸೆ = ಬಿಳಿ ದಾಸ–ವಾಳದ ಎಲೆಗಳನ್ನು ಹಾಕಿ ಮಾಡಿದ ದೋಸೆ (ಮೈ ಮೇಲೆ ಉಷ್ಣತೆಯಿಂದ ಏಳುವ ಕುರಕಜ್ಜಿಗಳು ವಾಸಿಯಾಗುತ್ತವೆ).

ದಾಸಯ್ಯ = ಶಂಖ, ಜಾಗಟೆಯನ್ನು ಬಾರಿಸುತ್ತ, ತಿರುಪತಿ ತಿಮ್ಮಪ್ಪನ ಹೆಸರಲ್ಲಿ "ಗೋವಿಂದ," ಗೋವಿಂದಾ" ಎಂದು ಮನೆ ಮನೆಗೆ ಹೋಗಿ ಭಿಕ್ಷೆಯೆತ್ತುವವ.

ದಾಸ್ತಾನು = ಸಂಗ್ರಹ, ಶೇಕರಣೆ.

ದ್ವಾರಬಾಗ್ಲು = ದೊಡ್ಡ ಮನೆಯ ಮುಂಬಾಗಿಲು.

ದ್ವ್ಯಾಸ = ಎಚ್ಚರ, ಗಮನ, ಪ್ರಜ್ಞೆ

ದ್ವಾರ್ಣೆ = ಧೋರಣೆ, ಮಂದಗತಿ, ನಿಧಾನ.

ದಾಳಿ = ಲೂಟಿ, ಆಕ್ರಮಣ, ಮುತ್ತಿಗೆ.

ದಿಂಡ್ಗ = ಒಂದು ಜಾತಿಯ ಹಳ್ಳದ ಬದಿಯಲ್ಲಿ ಬೆಳೆಯುವ ಸಸ್ಯ.

ದಿಂಡು = ಮರದ ಕಾಂಡ, ಬಾಳೆಯ ಮರದೊಳಗಿನ ತಿರುಳು.

ದಿಂಡು ಮಾವು = ಉಪ್ಪಿನ ಕಾಯಿಗೆ ಬಳಸುವ ಉತ್ತಮ ಜಾತಿಯ ಮಾವಿನ ಮಿಡಿ, ದೊಡ್ಡ ಜಾತಿಯ ಕಾಡುಮಾವು, ಹಣ್ಣು

ರುಚಿಯಿರುವುದಿಲ್ಲ–ಗ್ರಾತ.

ದಿಂಡೆ = ೧.ದೊಡ್ಡ (ದಿಂಡೇದೊಡ್ಡ), ೨.ಒರಟು, ಹಟಮಾರಿ ೩.ದೊಡ್ಡ ಶರೀರದವಳು.

ದಿಂಡೆ ಬಜಾರಿ = ಸೊಕ್ಕಿನವಳು, ಎಗ್ಗು ತಗ್ಗಿಲ್ಲದವಳು.

ದಿಂಡೆ ಬಸವಿ = ಎಗ್ಗು ತಗ್ಗು ಇಲ್ಲದವಳು, ದೇವರಿಗೆ ಬಿಟ್ಟ ಹೆಣ್ಣುಮಗಳು.

ದಿಂಬು = ಒರಗು, ಮೆತ್ತೆ, ತಲೆ ಮತ್ತು ಬೆನ್ನಿಗೆ ಆಸರೆಂಯಾಗಿ ಇಟ್ಟುಕೊಳ್ಳುವ ಮೆತ್ತೆ.

ದಿಕ್ಕು = ದಾರಿ, ೨. ಗತಿ ೩. ಆಶ್ರಯ.

ದಿಕ್ಕೆಡು = ದಾರಿ ತಿಳಿಯದಂತಾಗು, ೨.ದಿಗ್ಭ್ರಮೆ ಹೊಂದು, ಆಶ್ಚರ್ಯಪಡು.

ದಿಗ್ಗನೆ = ತಟ್ಟನೆ, ಕೂಡಲೇ, ಸಟ್‌ಅಂತ.

ದಿಟ = ನಿಜ, ಸತ್ಯ, ಬದ್ಧ.

ದಿಟ್ಟಿ = ದೃಷ್ಟಿ, ನೋಟ, ಲಕ್ಷ್ಯ

ದಿಟ್ಟಿಮಣಿ = ಮಕ್ಕಳಿಗೆ ದೃಷ್ಟಿ–ಯಾಗದಿರಲೆಂದು /ಬೇರೆಯವರ ಕಣ್ಣು ತಾಗದಿರಲೆಂದು ಹಾಕುವ ಕಪ್ಪುಬಿಳಿ ಮಣಿಯ ಸರ ಮತ್ತು ಬಳೆ.

ದಿಟ್ಟೆ = ಧೈರ್ಯಶಾಲಿ, ಗಡಸುಗಾತಿ.

ದಿಡ = ದಿಬ್ಬ, ದಿಣ್ಣೆ, ಎತ್ತರದ ಜಾಗ.

ದಿಡಗಿ = ದಿಡ, ದಿಬ್ಬ.

ದಿಡೀರ್ನೆ = ತಕ್ಷಣ, ಒಮ್ಮಿಂದೊಮ್ಮೆಲೆ.

ದಿಡುದಿಡು = ಎಂಬ ಶಬ್ದ, ಕೋಪದಿಂದ ನೆಲಕ್ಕೆ ಕಾಲು ಅಪ್ಪಳಿಸುತ್ತ ನಡೆ–ಯುವುದು.

ದಿಣ್ಣೆ = ದಿಡ, ದಿಬ್ಬ,. ಏರಿ, ತೆವರಿ.

ದಿನ = ಹಗಲು, ದಿನಾಂಕ, ತಾರೀಖು.

ದಿನಸಿ = ಅಡಿಗೆಗೆ ಬಳಸುವ ಸಾಂಬಾರ ಪದಾರ್ಥಗಳು.

ದಿನತುಂಬು = ಗರ್ಭಧರಿಸಿ ಒಂಬತ್ತು ತಿಂಗಳು ಕಳೆದಿರುವುದು, ಹೆರಿಗೆಂಯ ಸಮಯಂಯ ಹತ್ತಿರವಾಗುವುದು.

ದಿನಂಪ್ರತಿ = ದಿನಾ, ಪ್ರತಿದಿನ.

ದಿನಬಿಟ್ಟುದಿನ = ಒಂದು ದಿನ ಬಿಟ್ಟು ಮರುದಿನ.

ದಿನಾ = ಪ್ರತಿದಿನ, ಪ್ರತಿನಿತ್ಯ, ಸತತ, ಯಾವಾಗಲೂ.

ದಿನಾದಿನ = ಪ್ರತಿದಿನ, ದಿನಾ.

ದಿನಾಲೂ = ಪ್ರತಿದಿನವೂ, ಪ್ರತಿನಿತ್ಯವೂ.

ದಿಬ್ಣ = ಮದುವೆ ಮಂಟಪಕ್ಕೆ ಹೋಗುವ ಮೆರವಣಿಗೆ.

ದಿಬ್ಬ = ದಿಡ.

ದಿಮ್ಮನೆ = ಸುಮ್ಮನೆ, ತೆಪ್ಪಗೆ.

ದಿಮಾಕು = ಜಂಬ, ದರ್ಪ, ಅಹಂಕಾರ.

ದಿಮ್ಮಿ = ದೊಡ್ಡ ಮರದ ತುಂಡು

ದಿರ್ಕ = ದೀರ್ಕ, ಒಂದು ಜಾತಿಯ ಕಾಡಿನಮರ.

ದಿರ್ಕನ ಓಡು = ದೀರ್ಕನ ಕಾಯನ್ನು ಹೆರೆದು ಒಣಗಿಸಿದ್ದು, ಇದರಿಂದ ಅಡುಳಿ ಎಂಬ ಹುಳಿದ್ರಾವಣವನ್ನು ಮಾಡುತ್ತಾರೆ.

ದಿರ್ಕನ ಕಾಯಿ = ದೀರ್ಕನ ಮರದಲ್ಲಿ ಬಿಡುವ ಹಸಿರುಕಾಯಿ, ಹಳದಿ ಮಿಶ್ರಿತ ಕೇಸರಿ ಹುಳಿಹಣ್ಣು.

ದಿವಿನು = ಸೊಗಸು, ಚಂದ (ಏನು ದಿವಿನಾಗದಳೆ).

ದಿಷ್ಟಿ = ದೃಷ್ಟಿ, ನೋಟ.
ದಿಷ್ಟಿ ತೆಗಿ = ಮಕ್ಕಳಿಗೆ ದೃಷ್ಟಿಯಾಗದಿರಲೆಂದು ಉಪ್ಪು, ಕಾರ ಇತ್ಯಾದಿಗಳನ್ನು ನಿವಾಳಿಸಿ ಬೆಂಕಿಗೆ ಹಾಕಿ, ಆ ಮಸಿಯನ್ನು ಮಕ್ಕಳ ಹಣೆಗೆ ತಿಲಕವಿಡುವುದು.
ದಿಷ್ಟಿದಂಡೆ = ದಿಷ್ಟಿದಾರ.
ದಿಷ್ಟಿದಾರ = ದೃಷ್ಟಿಯಾಗದಿರಲೆಂದು ಕಪ್ಪುದಾರಕ್ಕೆ ಗಂಟುಗಂಟುಗಳನ್ನು ಹಾಕಿ ಕುತ್ತಿಗೆಗೆ ಕಟ್ಟುವುದು.
ದಿಸಿ = ಹತ್ತಿರ, ಪಕ್ಕ (ಕಾಲ್ದಿಸಿ, ತಲೆದಿಸಿ).
ದೀಡು = ಗಿರವಿ, ಅಡ, ಸಾಲದ ಹಣಕ್ಕೆ ಬದಲಾಗಿ ವಸ್ತು, ಒಡವೆ/ಜಮೀನನ್ನು ಗಿರವಿ ಇಡುವುದು.
ದೀಪ = ಸೊಡರು, ಬೆಳಕು.
ದೀಪದ ಕಂಬ = ದೀಪವನ್ನಿಡುವ ಮರದ ಸಣ್ಣಕಂಬ, ದೀಪವನ್ನು ಅಳವಡಿಸಿರುವ ಲೋಹದ ಕಂಬ.
ದೀಪದ ಮಲ್ಲಿ = ನೀಲಾಂಜನ, ದೇವರ ಮುಂದೆ ಹತ್ತಿಸುವ ಸಣ್ಣದೀಪ.
ದೀಪದ್‌ಹುಳ = ದೀಪದ ಬೆಳಕಿನಿಂದ ಆಕರ್ಷಿತವಾಗಿ ಬಂದು ದೀಪಕ್ಕೆ ತಾಗಿ ರೆಕ್ಕೆಸುಟ್ಟುಕೊಳ್ಳುವ ಒಂದು ರೀತಿಯ ಕೀಟ, ಮಳೆ ಹುಳ.
ದೀಪೋಳ್ಗಿ = ದೀವಳ್ಗಿ.
ದೀರ್ಕ = ದಿರ್ಕ.
ದೀವಟ್ಗಿ = ಪಂಜು, ಹಿಲಾಲು.
ದೀವಳ್ಗಿ = ದೀಪಾವಳಿ ಹಬ್ಬ, ದೀಪಗಳ ಹಬ್ಬ.
ದೀಳ್ಗಿ ಹಬ್ಬ = ದೀವಳ್ಗಿ.
ದುಂಡು ದುಂಡಗೆ = ಗುಂಡುಗುಂಡಾಗಿ ಮುದ್ದು ಮುದ್ದಾಗಿರುವ ಮಗು/ಮಕ್ಕಳನ್ನು ಕುರಿತು.
ದುಂದುಗಾರ್ಕಿ = ಅತಿಯಾಗಿ ಖರ್ಚು ಮಾಡುವುದು.
ದುಂಬಾಲು ಬೀಳು = ಅಂಗಲಾಚು, ಬೇಡು ೨. ಬೆನ್ನು ಹತ್ತು.
ದುಃಖ = ಅಳು, ನೋವು, ಕಷ್ಟ.
ದುಗುಳು = ಧೂಳು, ಮಣ್ಣಿನಹುಡಿ.
ದುಡುಬು = ಕಲಕು, ಅಲ್ಲಾಡಿಸು (ಮಜ್ಜಿಗೆ ದುಡುಬು) ದ್ರವಪದಾರ್ಥಕ್ಕೆ ಕೈ ಹಾಕಿ ಕಲಕು.
ದುಡುದುಂಡಗೆ = ನಗ್ನವಾಗಿ, ವಿವಸ್ತ್ರವಾಗಿ.
ದುಡಿತ = ಕೆಲಸ, ದುಡಿಯುವಿಕೆ.
ದುಡಿಮೆ = ೧.ಗಳಿಕೆ, ಸಂಪಾದನೆ, ೨.ಕಾಯಕ, ಕೆಲಸ.
ದುಡುಕು = ಮುಂದಾಲೋಚನೆಯಿಲ್ಲದೆ ಕಾರ್ಯ ನಿರ್ವಹಿಸು.
ದುಡ್ಡು = ಹಣ, ರೊಕ್ಕ.
ದುಣ್ಣ = ೧.ದಡಿಯ, ದಪ್ಪಗಿರುವವನು ೨.ಒಂದು ಬೈಗುಳ.
ದುಬಾರಿ = ತುಟ್ಟಿ, ಹೆಚ್ಚು.
ದುಬುಕ್ಕನೆ = ಒಂದೇ ಸಾರಿಗೆ ಬೀಳುವುದು.
ದುಮುಕು = ಕೆಳಗೆ ಹಾರು, ನೀರಿಗೆ ಬೀಳು.
ದುರ್ನಾತ = ಕೆಟ್ಟವಾಸನೆ, ಗಬ್ಬುವಾಸನೆ.
ದುರ್ಭಿಕ್ಷೆ = ಬರ, ಕೊರತೆ, ಅಭಾವ
ದುರವಸ್ಥೆ = ದುಃಸ್ಥಿತಿ, ಹೀನಸ್ಥಿತಿ
ದುರಸ್ತಿ = ರಿಪೇರಿ.
ದುರಾಕ್ಷಿ = ದ್ರಾಕ್ಷಿ, ದ್ರಾಕ್ಷಿಹಣ್ಣು.

ದುರಾಸೆ = ಅತಿಯಾಸೆ.

ದುರುದುಂಡಿ = ನಗ್ನೆ, ಬಟ್ಟೆ ಹಾಕದೆ ಇರುವವಳು.

ದುರುದುರು = ಕೋಪದಿಂದ ನೋಡುವಿಕೆ.

ದುರ್ತು ಬರಾದು = ಉಬ್ಬಿ ಬರುವುದು, ಗಾಯ ಉಬ್ಬಿಬರುವುದು, ಹಿಟ್ಟು ಉಬ್ಬಿ ಬರುವುದು.

ದುಷ್ಟ = ನೀಚ, ಕೆಟ್ಟಗುಣವುಳ್ಳವನು.

ದುಳ್ಳ = ಹೊಟ್ಟೆ ದಪ್ಪಗಿರುವವನು, ದೊಳ್ಳ.

ದುಳುಬು = ಕರಡು, ಕಲಕು, ದುಡುಬು.

ದೂಕು = ನೂಕು, ತಳ್ಳು, ದಬ್ಬು

ದೂತ = ಆಳು, ಕೆಲಸಗಾರ.

ದೂತ್ರು = ದೂರ್ತರು, ಮೋಸಗಾರರು.

ದೂಪ = ಉರಿಯುವ ಕೆಂಡಕ್ಕೆ ಗಂಧ/ಸಾಂಬ್ರಾಣಿ ಹಾಕಿ ಹೊಗೆ ಹಾಕುವುದು.

ದೂಪದ ಓಡು = ದೂಪದ ಮರದಿಂದ ದ್ರವಿಸುವ ಒಂದು ಕರ್ಪೂರ ದಂತಹ ಅಂಟು ಅದನ್ನು ಕಿತ್ತುತಂದು. ದೀಪಾವಳಿಯಂದು, ತುಳಸಿಹಬ್ಬದಂದು ದೀಪದಂತೆ ಉರಿಸುತ್ತಾರೆ.

ದೂಪ ಹಾಕುವುದು = ದೂಪದಿಂದ ಜಕ್ಕಣಿಗೆ ಆರತಿ ಹಾಕುವುದು, ಮಗು ಬಾಣಂತಿ ತಲೆ ಕಾಯಿಸಲು ದೂಪ ಹಾಕಿ ಕೊಂಡು ತಲೆ ಒಣಗಿಸುವುದು.

ದೂಪದ ಮರ = ಒಂದು ಜಾತಿಯ ದೊಡ್ಡಮರ– ಗಟ್ಟಿಕಾಯಿ, ಒಳಗೆ ಬಾದಾಮಿಯಂತಹ ಬೀಜ ವಿರುತ್ತದೆ.

ದೂಪಾರ್ತಿ = ೧.ಜಕ್ಕಣಿಗೆ ದೂಪ ಹಾಕಲು ಮಾಡಿಕೊಂಡಿರುವ ಮಣ್ಣಿನ ಸಾಧನ, ೨. ದೇವರಿಗೆ ದೂಪಹಾಕಲು ಲೋಹದ ಆರತಿ

ದೂರ = ಸಮೀಪವಲ್ಲ, ಹತ್ತಿರವಲ್ಲ.

ದೂರು = ನಿಂದೆ, ಚಾಡಿ.

ದೂರ್ತ = ಮೊಸಗಾರ, ಕಪಟಿ.

ದೂಳು = ದುಗುಳು.

ದೃಷ್ಟಿ = ಕಣ್ಣು, ಕಣ್ಣಿನ ನೋಟ.

ದೃಷ್ಟಿತೆಗೆ = ನಿವಾಳಿಸು, ಮಕ್ಕಳಿಗೆ ಕೆಟ್ಟ ಕಣ್ಣುತಾಗದಿರಲೆಂದು ಮಾಡುವ ಒಂದು ಆಚರಣೆ.

ದೃಷ್ಟಿದಂಡೆ = ದನಕರುಗಳಿಗೆ ಕಣ್ಣು–ತಾಗದಂತೆ ಕೊರಳಿಗೆ ಕಟ್ಟುವ ದಪ್ಪ ಕಂಬಳಿ ದಾರ/ಕಪ್ಪು ಹಗ್ಗ.

ದೃಷ್ಟಿದೋಷ = ಕಣ್ಣು ಕಾಣದಿರುವುದು, ಕಣ್ಣಿನ ನ್ಯೂನತೆ.

ದೆಗೆಪುಟ = ತೋಟಕ್ಕೆ ಹೊಂದಿ ಕೊಂಡಂತೆ ಮೇಲ್ಭಾಗದಲ್ಲಿರುವ ಕಾಡು.

ದೆಬ್ಬೆ = ಸೀಳಿದ ಅಡಿಕೆ ಮರ.

ದೆಯ್ಯ = ದೈವ, ದೆವ್ವ, ಭೂತ.

ದೆಯ್ಮಳೆ = ಭಾರೀ ಮಳೆ.

ದೆರೆ = ಧರೆ, ಗುಡ್ಡ, ಗುಡ್ಡದಮಣ್ಣು.

ದೆರ್ಸು = ಜರ್ಸು, ಬೀಳಿಸು, ಕಡಿಯುವುದು.

ದೆಸಿ = ದೆಸೆ, ಅದೃಷ್ಟ ೨. ಕಾರಣ (ನಿನ್ನ ದೆಸಿಯಿಂದ, ಮಳೆಯ ದೆಸಿಯಿಂದ).

ದೇಣ್ಗಿ = ದೇಣಿಗೆ, ಚಂದಾಹಣ, ದಾನ.

ದೇಯ = ದೇಹ, ಶರೀರ.

ದೇವದಾರಿ = ದೇವದಾರು, ಎತ್ತರದ

ಗಟ್ಟಿಮರ, ಇದರ ನಾಟ ತುಂಬಾ ಹೊಳಪುವುಳ್ಳದ್ದು.

ದೇವರಹಲಗೆ = ದೇವರಿಗೆ ನಿತ್ಯ ದೀಪ ಹಚ್ಚಿಸಿಡುವ ಎತ್ತರದಲ್ಲಿ ಅಳವಡಿಸಿರುವ ಮರದ ಮಣೆ.

ದೇವರೂಟ = ಮದುವೆಯ ಹಿಂದಿನ ದಿನ ರಾತ್ರಿ ದೇವರಿಗೆ ಕಾಯಿ ತೆಗೆದಿಟ್ಟು, ದೇವರನ್ನು ಸ್ಮರಿಸಿ ನೆಂಟರಿಷ್ಟರೊಂದಿಗೆ ಮಾಡುವ ಸಿಹಿಯೂಟ

ದೇವಸಾಲಿ = ಒಂದು ಜಾತಿಯ ಬತ್ತ.

ದೇವಹಲಸು = ಜೀಗುಜ್ಜೆ, ಸಣ್ಣ ಜಾತಿಯ ಹಲಸು ತರಕಾರಿಯಾಗಿ ಬಳಸುತ್ತಾರೆ.

ದೇವ್ರಾಣೆ = ದೇವರ ಹೆಸರಲ್ಲಿ ಪ್ರಮಾಣ ಮಾಡಿ, ತಾನು ನಿಜವನ್ನೇ ಹೇಳುತ್ತಿರುವುದಾಗಿಯೂ/ಯಾವ ತಪ್ಪನ್ನೂ ಮಾಡಿಲ್ಲವೆಂದು ದೃಢಪಡಿಸುವುದು.

ದೇಸ್ಥಾನ = ದೇವಸ್ಥಾನ, ದೇವರಗುಡಿ.

ದೇಸಾಂತ್ರ ಹೋಗು = ಹೇಳದೆ ಕೇಳದೆ ಮನೆ ಬಿಟ್ಟು ದೂರ ಹೊರಟು–ಹೋಗುವುದು.

ದೈನಾಸಿ = ಬೇಡುವುದು, ಯಾಚಿಸುವುದು.

ದೈನೆ = ದೈನ್ಯ, ವಿನಯ.

ದೈನೆ ಅಂದ್ರೆ = ದೈನ್ಯದಿಂದ ಬೇಡಿಕೊಂಡರೆ, ಅಂಗಲಾಚಿದರೆ.

ದೈಯ್ಯ ಬಿಡಿಸು = ಕೆಲವು ಮಂತ್ರ ತಂತ್ರಗಳಿಂದ ಆವೇಶದಿಂದ ಹೊರಬರುವಂತೆ ಮಾಡುವುದು.

ದೈವೇಚ್ಛೆ = ದೈವ ಸಂಕಲ್ಪ, ದೇವರ ಇಚ್ಛೆ, ಹಣೆಬರಹ.

ದೊಂಟೆ = ಜಾನುವಾರುಗಳಿಗೆ ಶಬ್ಧ ಬರುವಂತೆ ಕಟ್ಟುವ ಮರದ ಅಥವಾ ಬಿದಿರಿನ ಕೊರಳ ಗಂಟೆ, ಮರಗುಣಿ.

ದೊಂದಿ = ಪಂಜ, ಬಿದಿರು/ ಅಡಿಕೆ ದೆಬ್ಬೆಯ ತುದಿಗೆ ಎಣ್ಣೆ ಬಟ್ಟೆಯನ್ನು ಸುತ್ತಿ ಹೊತ್ತಿಸಿ ಕೊಳ್ಳುವ ಬೆಳಕು.

ದೊಂಬರವ = ಕಸರತ್ತು ಮಾಡಿ ಜೀವಿಸುವವ, ದೊಂಬರಾಟ ಆಡುವವನು.

ದೊಂಬಿ = ಗದ್ದಲ, ಗುಂಪು, ಗಲಾಟೆ.

ದೊಂಬೆ = ನೀರು ಸರಾಗವಾಗಿ ಮಾಡಿಯಿಂದ ಹರಿದು ಹೋಗಲು ಹಾಕಿರುವ ಹೆಂಚು.

ದೊಗಲೆ = ಸಡಿಲವಾದ ಉಡುಪು.

ದೊಗ್ಗಾಲು = ಮಂಡಿ ಮಾತ್ರ ಮಡಿಸಿ ಕೂರುವುದು, ಊರಿದ ಮೊಣಕಾಲು.

ದುಗ್ಗಾಲು ಮಂಡಿ = ದೊಗ್ಗಾಲು.

ದೊಗಿ = ತೋಡು, ಹೊಂಡ ತೋಡು, ಕುಣಿಮಾಡು.

ದೊಡ್ಡ = ಹಿರಿಯ, ದೊಡ್ಡವ್ನ.

ದೊಡ್ಡತನ = ಘನತೆ, ಹಿರಿತನ.

ದೊಡಪಯ್ಯ = ದೊಡ್ಡಪ್ಪ.

ದೊಡಮ = ದೊಡ್ಡಮ್ಮ, ತಾಯಿಯ ಅಕ್ಕ.

ದೊಡಯ್ಯ = ದೊಡ್ಡಪ್ಪ.

ದೊಡ್ಡಪ್ಪ = ತಂದೆಯ ಅಣ್ಣ, ದೊಡ್ಡಮ್ಮನ ಗಂಡ.

ದೊಡ್ಡಬೇಟೆ = ದೊಡ್ಡ ಶಿಕಾರಿ, ಕೂಡು

ಬೇಟೆ.

ದೊಡವ್ವ = ದೊಡ್ಡಮ್ಮ.

ದೊಡ್ಕಳ್ಳಿ = ಕಣಿಗಲೆ ಮರ, ಬಿಳಿಯ ಹೂವು, ಉದ್ದ ಎಲೆ, ಕೊಟ್ಟಿಗೆಯ ಮುಂದೆ ಬೆಳೆಸಿದರೆ ಜಾನುವಾರುಗಳಿಗೆ ಒಳ್ಳೆಯದು ಎಂಬ ನಂಬಿಕೆ.

ದೊಡ್ಡಾಳು = ಗಾತ್ರದ ವ್ಯಕ್ತಿ, ಎತ್ತರ/ದಪ್ಪಕ್ಕಿರುವವರು.

ದೊಡ್ಡಿನ ಕೊಂಬು = ಕಾಡುಕೋಣ ಅಥವಾ ಕಾಡೆಮ್ಮೆಯ ಕೋಡು.

ದೊಡ್ಡಿ = ಹಂದಿಗಳನ್ನು/ವಾರಸು-ದಾರರಿಲ್ಲದ ಜಾನುವಾರುಗಳನ್ನು ಕೂಡಿ ಹಾಕುವ ಕೊಟ್ಟಿಗೆ.

ದೊಡ್ಲಿಕಾಯಿ = ದೊಡ್ಡ ಜಾತಿಯ ಕಂಚಿಕಾಯಿ, ದೊಡ್ಡ ಹೆರಳೇಕಾಯಿ

ದೊಡ್ಡು = ಕಾಡುಕೋಣ, ಕಾಡೆಮ್ಮೆ.

ದೊಣೆಯ = ಅಗತ್ಯಕ್ಕಿಂತ ವಿಪರೀತ ದಪ್ಪಗಿರುವವ, ದೊಡ್ಡಾಳು.

ದೊಣೆ = ಸರಲು, ಸರಕಲಿನ ನೀರು, ನೀರಿನ ಹೊಂಡ.

ದೊಣ್ಣೆ = ಬಡಿಗೆ, ಕೋಲು.

ದೊನ್ನೆ = ಬಾಳೆಎಲೆ ಒಣಗಿಸಿ ಮಾಡಿದ ಲೋಟ.

ದೊಳ್ಳ = ದುಳ್ಳ, ದಪ್ಪ ಹೊಟ್ಟೆಯವರು.

ದೊಳ್ಳು = ೧.ಚರ್ಮದ ದೊಡ್ಡ ಶಬ್ದ ಬರುವ ಮದ್ದಳೆ ೨.ಬೊಜ್ಜು.

ದೊಳ್ಳೊಟ್ಟೆ = ದಪ್ಪ ಹೊಟ್ಟೆ, ಭಾರಿಗಾತ್ರದ ಹೊಟ್ಟೆ.

ದೋಚು = ಬಾಚು, ಕೊಳ್ಳೆಹೊಡಿ, ಅಪಹರಿಸು.

ದೋಟಿ = ಉದ್ದನೆಯ ಕೋಲು, ಕೊಕ್ಕೆ.

ದೋಣಿ = ಸಣ್ಣ ಹಡಗು, ನಾವೆ. ೨. ಕಲಬಿ.

ದೋಣಿ ಕಂಡಿ = ನದಿ, ಹೊಳೆ ದಾಟಲು ದೋಣಿಗ ಹತ್ತುವ/ಇಳಿಯುವ ಸ್ಥಳ.

ದೋಸೆ = ಕಲ್ಲಿನ ಕಾವಲಿಯಲ್ಲಿ ಬೇಯಿಸಿ ಮಾಡುವ ಅಕ್ಕಿಯ ತಿಂಡಿ.

ದೌತಿ = ಮಸಿಕುಡಿಕೆ, ಶಾಯಿ ಕುಡಿಕೆ.

ದೌರ್ಭಾಗ್ಯ = ದುರ್ಭಾಗ್ಯ, ದುರದೃಷ್ಟ.

ದೌಲತ್ತು = ಜಂಭ, ಅಹಂಕಾರ, ಗರ್ವ.

ದ್ರಾಕ್ಷಿ = ಹಣ್ಣು, ಒಂದು ಬಗೆಯ ಕಪ್ಪು/ಬಿಳಿಯ ಸಿಹಿ/ಹುಳಿ ಮಿಶ್ರಿತ ಹಣ್ಣು.

ದ್ರಿಷ್ಟಿಮಣಿ ಸರ = ಮಕ್ಕಳ ಕೊರಳಿಗೆ ಹಾಕುವ ಕಪ್ಪು/ಬಿಳಿ ಮಣಿಯ ಸರ.

ದ್ರಿಷ್ಟಿಮಂದ = ದೃಷ್ಟಿಮಾಂದ್ಯ, ಕಣ್ಣು ಸರಿಯಾಗಿ ಕಾಣದಿರುವುದು.

ದ್ರೋಹ = ಕೆಟ್ಟದ್ದನ್ನು ಮಾಡುವುದು, ಮೋಸ ಕಪಟ

ದ್ವಣೆ = ದೊಣೆ.

ದ್ವಣ್ಣೆ = ದೊಣ್ಣೆ.

ದ್ವಾರಣ್ಣು = ಸಿಹಿಗೊಂಡ ಸಾಮಾನ್ಯಹಣ್ಣು.

ದ್ವಾರಬಾಗಿಲು = ಮನೆಯ ಮುಂದಿನ ಬಾಗಿಲು.

ದ್ವಾರ್ಗಾಯಿ = ಹುಳಿ ಸಿಹಿ ಮಿಶ್ರಿತ ಇನ್ನೂ ಮಾಗಬೇಕಾದ ಹಣ್ಣು.

ದ್ವೇಷ = ಹಗೆ, ಅಸೂಯೆ, ಮತ್ಸರ.
ದ್ವಾಸೆ = ದೋಸೆ.
ದ್ವಾರಣೆ = ಉದಾಸೀನತೆ, ಅಲಕ್ಷ್ಯ.
ದ್ಯಾಸ = ಗ್ಯಾನ, ಎಚ್ಚರ, ಪ್ರಜ್ಞೆ.
ದ್ವಂಸ = ನಾಶ, ಹಾಳು.

ಧ

ಧಗಧಗ = ಬೆಂಕಿ ಉರಿಯುವುದನ್ನು ವಿವರಿಸುವ ಶಬ್ಧ.
ಧಗೆ = ಸೆಕೆ , ಕಾವು, ಬಿಸಿಲ ತಾಪ.
ಧಡಕ್ನೆ = ಥಟ್ಟನೆ, ಇದ್ದಕ್ಕಿದ್ದಂತೆ.
ಧಡಾಕಿ = ಹೆಚ್ಚು ಶಬ್ಧವಾಗುವ ದೊಡ್ಡ ಪಟಾಕಿ, ೨. ಫಿರಂಗಿ ಗುಂಡು.
ಧಡಾರ್ನೆ = ಧಡಕ್ನೆ.
ಧಡಿಯ = ಹತ್ತು ಸೇರಿನ ತೂಕ.
ಧಮಕಿ = ಬೆದರಿಕೆ.
ಧಮ್ಮಿಲ್ಲ = ಧೈರ್ಯವಿಲ್ಲ, ಶಕ್ತಿಯಿಲ್ಲ.
ಧಮ್ಮು = ಧೈರ್ಯ, ಶಕ್ತಿ ೨. ಗೂರಲು, ಉಬ್ಬಸ, ಎಳೆತ.
ಧರ್ಮಚತ್ರ = ಬಿಟ್ಟಿ ಊಟ, ವಸತಿ ಸಿಗುವ ಮನೆ.
ಧರ್ಮಸಂಕ್ಟ = ಯಾವುದೇ ಒಂದು ತೀರ್ಮಾನಕ್ಕೆ ಬರಲಾಗದ ಸ್ಥಿತಿ.
ಧರ್ಮಾರ್ಥ = ಬಿಟ್ಟಿ, ಪುಕ್ಕಟೆ.
ಧಾಡಿ = ಕೇಡು, ತೊಂದರೆ.
ಧಾತು = ಪ್ರಜ್ಞೆ, ಎಚ್ಚರ.
ಧಾತೋತು = ಪ್ರಜ್ಞೆ ಹೋಯ್ತು, ಪ್ರಜ್ಞಾಹೀನವಾದ.
ಧಾರಣೆ = ವಸ್ತುಗಳ ಮಾರಾಟ ಬೆಲೆ.
ಧಾರಾಳ = ಉದಾರ ಬುದ್ಧಿ.
ಧಾರಾಳ್ತನ = ಉದಾರತೆ, ದಾನಶೀಲತೆ.
ಧಾರೆ = ಕನ್ಯಾದಾನ, ಮದುವೆಯ ವಿಧಿ.
ಧಾರೆ ದೀಪ = ಕನ್ಯಾದಾನ / ಮದುವೆಯಾಗಿ ಸರಿಯಾಗಿ ಎಂಟು ದಿನಕ್ಕೆ ಹೆಣ್ಣಿನ ಮನೆಗೆ ಬಂದು ಸಿಹಿಂಯೂಟ ಮಾಡುವುದು.
ಧೂಪ = ಬೆಂಕಿತಾಗಿದಾಗ ಸುವಾಸನೆ ಬೀರುವ ಪದಾರ್ಥ/ಅಂಟು, ಹಾಲುಮಡ್ಡಿ, ಸಾಂಬ್ರಾಣಿ.
ಧೂಪಣಗಿ = ಧೂಪಾರತಿ.
ಧ್ಯಾನ = ಲಕ್ಷ್ಯ, ಗಮನ, ಯೋಚನೆ.

ನ

ನಂಗೆ = ನನಗೆ.
ನಂಗೋಟು = ನನಗೆ ಸ್ವಲ್ಪ, ನನಗೂ ಅಷ್ಟು, (ನಂಗೋಟುಕೊಡು).
ನಂಚಕ್ಕೆ = ಊಟದ ಜೊತೆಯಲ್ಲಿ ನಂಚಿಕೊಳ್ಳಲು.
ನಂಚು = ನಂಚಿಕೊಳ್ಳು, ನಾಲಿಗೆಗೆ ಹಚ್ಚಿಕೊಳ್ಳುವ ಪದಾರ್ಥ.
ನಂಜು = ವಿಷಕಾರಿ, ದೇಹಕ್ಕೆ ಒಗ್ಗದಿರುವುದು.
ನಂಜುಬಟ್ಲು = ನಂದಿಬಟ್ಟಲು, ಒಂದು ಜಾತಿಯ ಪರಿಮಳಯುಕ್ತ ಹೂವು.

ನಂಟ = ಸಂಬಂಧಿ, ಬಂಧು.

ನಂಟಸ್ತಿಕೆ = ಹೆಣ್ಣು ಕೊಟ್ಟು/ತಂದು ಸಂಬಂಧ ಮಾಡುವುದು.

ನಂದಿಬಟ್ಟಲು = ನಂಜುಬಟ್ಲು.

ನಂದು = ನನ್ನದು.

ನಂದೋತು = ೧.ನಂದಿಹೋಯ್ತು, ಆರಿತು (ಬೆಂಕಿನಂದೋತು) ೨.ಆರಿಹೋಗು, ನಂದಿಹೋಗು.

ನಂಬಿದ್ರೆ ನಂಬು ಬಿಟ್ರೆಬಿಡು = ನಂಬಿದರೂ ಬಿಟ್ಟರೂ ತನಗದರ ಪರಿವೆಯಿಲ್ಲ ಎಂದು ಹೇಳುವುದು.

ನಂದಿ = ದೊಡ್ಡ ಜಾತಿಯ ಗಟ್ಟಿ ನಾಟದ ಕಾಡುಮರ.

ನಂಬ್ಕಿ = ನಂಬಿಕೆ, ಆತ್ಮ ವಿಶ್ವಾಸ.

ನಂಬು = ನಂಬಿಕೆಯಿಡು, ಒಪ್ಪುವುದು.

ನಕಲು = ಮೂಲರೂಪ, ಯತಾವತ್ತು, ಮುದ್ರಣದ ಮೂಲರೂಪ.

ನಕ್ರಬಳಿ = ಒಕ್ಕಲಿಗರ ಒಂದುಕುಲ (ಸತ್ರಬಳಿ).

ನಗ್ನ = ೧.ಲಗ್ನ, ಮದುವೆ, ವಿವಾಹ ೨.ವಿವಸ್ತ್ರ, ದುಡದುಂಡಗೆ.

ನಗಾಟ = ತಮಾಷೆ, ನಗು, ವಿನೋದ.

ನಗಾಡು = ನಗು, ವಿನೋದವಾಗಿರು, ತಮಾಷೆಮಾಡು.

ನಗಿ = ನಗು, ವಿನೋದ, ನಗಾಟ.

ನಗು = ನಗಿ, ತಮಾಷೆ, ಕುಶಾಲು.

ನಟಗಿ = ಬೆರಲ ಗಂಟುಗಳ ಶಬ್ದ, ಬೆರಳು–ಗಳನ್ನು ಮಡಿಸಿದರೆ ಉಂಟಾಗುವ 'ಟಕ್' ಎಂಬ ಶಬ್ದ.

ನಟಗಿಮುರಿ = ೧.ಬೆರಳನ್ನು ಮುರಿದಂತೆ ಮಾಡಿ ಶಬ್ಧಮಾಡು ೨.ಶಾಪ ಹಾಕು, ಅಸಮಾಧಾನ ವ್ಯಕ್ತಪಡಿಸು.

ನಟ್ಟಿ = ನಾಟಿ.

ನಟ್ಟಿಕೆಸ = ಗಡ್ಡೆಗಳನ್ನು ನಾಟಿ ಮಾಡಿ ಬೆಳಸಿದ ಕೆಸು, ಒಂದು ತರಕಾರಿಯಾಗಿ ಬಳಕೆ.

ನಡಂತ್ರ = ಮಧ್ಯದಲ್ಲಿ, ನಟ್ಟನಡುವೆ.

ನಡ್ಕ = ನಡುಕ, ಚಳಿ.

ನಡಿ = ನಡೆದಾಡು, ಹೆಜ್ಜೆಯಿಡು.

ನಡು = ಸೊಂಟ.

ನಡುನೀರು = ೧.ನೀರಿನ ಮಧ್ಯೆ, ೨. ನಂಬಿಸಿ ಮೋಸಮಾಡು. (ಅಲಂ)

ನಡುವೆ = ಮಧ್ಯದಲ್ಲಿ ೨. ಸಂದರ್ಭದಲ್ಲಿ.

ನಡೆದಿಬ್ಣ = ಕಾಲುನಡಿಗೆಯಲ್ಲಿ ಹೋಗುವ ಮದುವೆ ಮೆರವಣಿಗೆ.

ನತ್ರ = ನೆತ್ತರ, ರಕ್ತ.

ನತ್ತಿ = ನೆತ್ತಿ.

ನತ್ತು = ಮೂಗುಬಟ್ಟು, ಮೂಗುತಿ.

ನನ್ನ = ತನ್ನನ್ನು ಉದ್ದೇಶಿಸಿ ಹೇಳುವುದು.

ನನ್ನ ಕೈಯಿಂದ = ನನ್ನಿಂದ.

ನಮ್ನಿ = ನಮೂನೆ, ರೀತಿ.

ನಮೂನಿ = ನಮೂನೆ, ನಮ್ನಿ.

ನಯ್ಯಿರ = ಅತಿಸಣ್ಣ ಇರುವೆ.

ನರ = ದೇಹದಲ್ಲಿರುವ ತಂತುಗಳು, ಮೆದುಳಿಗೂ ದೇಹದ ಇತರ ಭಾಗಕ್ಕೂ ಸಂದೇಶ ನೀಡುವ ನರತಂತುಗಳು.

ನರಳು = ಮುಲುಗು, ನೋವಿನಿಂದ ನರಳುವುದು.

ನರಿ = ಒಂದು ಚಾಣಾಕ್ಷ ಪ್ರಾಣಿ.

ನರಿಬುದ್ಧಿ = ೧.ಉಪಾಯದಲ್ಲಿ ಮೋಸ

ಮಾಡುವುದು ೨. ಉಪಾಯ/ ಬುದ್ಧಿವಂತಿಕೆಯಿಂದ ಮೋಸ ಮಾಡುವವರು (ಅಲಂ)

ನರಿಗೆ = ನಿರಿಗೆ, ಸೀರೆಯ ಮಧ್ಯಭಾಗ.

ನರುಗು = ಬತ್ತವನ್ನು ಒಕ್ಕಲು ಹಾಕುವುದು, ಒಕ್ಕಲು ಮಾಡಲು ಕಣದಲ್ಲಿ ಹರಡಿರುವ ಬತ್ತದ ಮೆದೆ.

ನರ್ಕು = ನರಕು, ನರಳು.

ನರೆ = ವಯಸ್ಸಾಗು, ಮುದಿತನ.

ನರೆಕೂದ್ಲು = ಬಿಳಿಯಾಗುತ್ತಿರುವ ಕೂದಲು.

ನಲಿ = ಕುಣಿ, ಕುಣಿದಾಡು.

ನಲ್ಲಿ = ೧.ನೆಲ್ಲಿ, ಒಂದು ಹುಳಿಯಿರುವ ಕಾಯಿ ೨. ನೀರು ಬರುವ ನಳ.

ನಲುಗು = ಸೊರಗು, ಸೋಲು, ಬಾಡು.

ನವಣ = ಬೆಳ್ಳಿ/ಬಂಗಾರದ ಉಡಿದಾರ, ನವಳ.

ನವ್ಲಕ್ಕಿ = ನವಿಲು, ಮಯೂರ.

ನವ್ಲೆ = ಹೇನಿನ ಮೊಟ್ಟೆಯಿಂದ ಆಗತಾನೇ ಹೊರಬಂದ ಮರಿ, ಅತಿ ಸಣ್ಣಹೇನು.

ನಷ್ಟ = ಹಾನಿ, ನಾಶ, ಕೊರತೆ.

ನಸರಿಜೇನು = ಸಣ್ಣ ಜಾತಿಯ ಜೇನು, ಕಚ್ಚುವುದಿಲ್ಲ. ಮುಖ/ಮೈಗೆಲ್ಲಾ ಮುತ್ತುತ್ತವೆ.

ನಸರಿ ತುಪ್ಪ = ಸಣ್ಣ ಜಾತಿಯ ಜೇನಿನ ತುಪ್ಪ, ಔಷಧಿಯುಕ್ತ.

ನಸೀಬು = ಹಣೆಬರಹ, ಅದೃಷ್ಟ.

ನಸುಕು = ಮುಂಜಾವು, ಬೆಳಗಿನ ಜಾವ.

ನಸುಗುನ್ನಿಕಾಯಿ = ಒಂದು ಬಳ್ಳಿ, ಅದರ ಕಾಯಿ ಒಣಗಿದರೆ ಅದರ ಮೇಲಿರುವ ಚುಂಗು (ಒಂದು ರೀತಿಯ ಮುಳ್ಳು) ಹಾರಿ ಮೈಗೆಲ್ಲಾ ಅಂಟಿಕೊಳ್ಳುತ್ತದೆ.

ನಸೆ = ನಶೆ, ಮತ್ತು, ಅಮಲು.

ನಳಗ = ನೊಳಗ, ಜಾನುವಾರುಗಳಿಗೆ ಔಷಧಿ, ಕಷಾಯವನ್ನು ಕುಡಿಸಲು ಉಪಯೋಗಿಸುವ ಸಣ್ಣ ನಳಿಕೆ/ ಬಿದಿರಿನ ಕೊಳವೆ.

ನಳಿಗಿ = ೧.ನಳಗ ೨. ಲಾಳ್ಕೆ, ಸೀಮೆಎಣ್ಣೆ ಸೇಯುವ ಸಾಧನ, ಲಾಳ್ಕಿ.

ನಳಿಗೆ = ನಳಿಕೆ, ಕೊಳವೆ.

ನ್ಯವ = ನೆವ, ನೆಪ.

ನ್ಯೆಪ = ನ್ಯವ.

ನಾಕರಾಗ = ನಾಲ್ಕರಲ್ಲಿ, ನಾಲ್ಕರೊಳಗೆ.

ನಾಕ್ಜನ = ನಾಲ್ಕು ಜನ, ನಾಲ್ಕು ಮಂದಿ.

ನಾಕಾಣೆ = ೧.ನಾಲ್ಕು ಆಣೆ, ನಾಲ್ಕು ಕಾಸು ೨.ನಂಗೆ ಗೊತ್ತಿಲ್ಲ. ೩ ನಾನು ನೋಡಿಲ್ಲ.

ನಾಕ್ನಾಕು = ನಾಲ್ಕಕ್ಕೆ ಇನ್ನು ನಾಲ್ಕು ನಾಲ್ಕು ಸೇರಿಸುತ್ತಾ ಹೋಗುವುದು.

ನಾಕ್ಹಿಡಿ = ನಾಲ್ಕು ಹಿಡಿ, ನಾಲ್ಕು ಮುಷ್ಠಿ, ನಾಲ್ಕಿಡಿ.

ನಾಕು = ನಾಲ್ಕು, ನಾಕರ ಸಂಖ್ಯೆ.

ನಾಗಂದಿಗಿ = ಬಾಗಿಲ ಮೇಲೆ ಗೋಡೆಯ ಮೇಲೆ ಹಲಗೆಯನ್ನು ಹಾಕಿ ಮಾಡಿದ ಗೂಡು.

ನಾಗರ = ೧.ತಲೆಗೆ ಹಾಕುವ ಒಡವೆ, ೨. ನಾಗರ ಹಾವು.

ನಾಗಸಂಕೋಲೆ = ಅಗ್ನಿಸರ್ಪ, ಸರ್ಪಸುತ್ತು, ಒಂದು ಕಾಯಿಲೆ.

ನಾಗಸಂಪಿಗೆ = ಮರದ ಜಾತಿಯಲ್ಲೇ

ಅತಿ ಗಟ್ಟಿಮರ, ನಾಗರಹೆಡೆಯಂತೆ ಬಿಳಿ ಪರಿಮಳದ ಹೂ ಬಿಡುತ್ತದೆ.

ನಾಚಿಕಿ ಗಿಡ = ಮುಟ್ಟಿದರೆ ಮುನಿ, ಮುಟ್ಟಿದಾಗ ಮುದುಡಿಕೊಳ್ಳುವ ಒಂದು ಮುಳ್ಳಿನ ಗಿಡ, ಔಷಧಿಯುಕ್ತ.

ನಾಚ್ಗಿ = ನಾಚಿಕೆ, ಸಂಕೋಚ.

ನಾಚ್ಗಿ ಮುಳ್ಳು = ನಾಚ್ಕಿ ಗಿಡದ ಮುಳ್ಳು.

ನಾಟ = ಮರದ ಸಲಕರಣೆಗಳು, ಹಲಗೆ, ದಿಮ್ಮಿ, ತೊಲೆ ಇತ್ಯಾದಿ.

ನಾಟಿಕೋಳಿ = ಸಾಕಿದ ಕೋಳಿ.

ನಾಟು = ೧.ತಾಗು, ಮುಟ್ಟು, ಚುಚ್ಚು, ೨.ಮನಸ್ಸಿಗೆ ಹಿಡಿಸು.

ನಾಡಂಚು = ನಾಡಹೆಂಚು, ಕುಂಬಾರನ ಕೈಯಿಂದ ಮಾಡಲ್ಪಟ್ಟ ಹೆಂಚು.

ನಾಡ್ದು = ನಾಳೆಯ ಮರುದಿನ, ನಾಡಿದ್ದು.

ನಾತ = ವಾಸನೆ, ದುರ್ವಾಸನೆ.

ನಾದ್ನಿ = ಗಂಡನ ತಂಗಿ, ಹೆಂಡತಿಯ ತಂಗಿ, ತಮ್ಮನ ಹೆಂಡತಿ, ಮಾವನ ಮಗಳು.

ನಾದು = ಕಲಸು, ಹಿಟ್ಟನ್ನು ನೀರು ಹಾಕಿ ಕಲಸಿ ಹದಗೊಳಿಸು.

ನಾನೂರು = ನಾಲ್ಕು ನೂರು, ನಾಲ್ಕು ಬಾರಿ ನೂರು.

ನಾಪತ್ತೆ = ಕಳೆದುಹೋಗಿರುವುದು.

ನಾಮ = ತಿಲಕ, ಹಣೆಗೆಯಿಡುವ ಕೆಂಪುಬಣ್ಣ.

ನಾಮಕಾವಸ್ತೆ = ಹೆಸರಿಗೆ ಮಾತ್ರ

ನಾಮಧಾರಿ = ೧.ಒಕ್ಕಲಿಗರಲ್ಲಿ ಒಂದು ಗುಂಪು ೨.ತಿರುಪತಿ ವೆಂಕಟರಮಣನ ಭಕ್ತರು.

ನಾಯ = ನ್ಯಾಯ.

ನಾಯ್ಕ = ನಾಯಕ.

ನಾಯಿ = ಕುನ್ನಿ, ಶುನಕ.

ನಾಯಿಕೆಮ್ಮು = ಎಪ್ಪತ್ತರ ಕೆಮ್ಮು, ಎಡೆಬಿಡದೆ ಉಸಿರುಕಟ್ಟಿ ಬರುವ ಕೆಮ್ಮು.

ನಾಯಿನೇರಳೆ = ನಾಯಿಗಳು ತಿನ್ನುವ ದಪ್ಪಗಿರುವ ನೇರಳೆ ಹಣ್ಣು, ಜನ್ನೇರ್ಲು.

ನಾಯಿರಾಗಿ ಜಡ್ಡು = ಒಂದು ಜಾತಿಯ ಹುಲ್ಲು, ಇದರ ರಸ ತುರಿಕೆಗೆ, ದಡಾರಕ್ಕೆ ಉಪಯೋಗ.

ನಾಯಿಹಲಸು = ಕಾಯಿ ಬಿಡದ ಹಲಸಿನ ಮರ.

ನಾರು = ೧.ಹಗ್ಗ, ಎಳೆ, ಎಳೆದರೆ ಉದ್ದಕ್ಕೆ ತುಂಡಾಗದ ವಸ್ತು, ೨.ಗಬ್ಬು ವಾಸನೆ ಬರುವುದು.

ನಾರೆ = ಬತ್ತದ ಗದ್ದೆಯಲ್ಲಿ ಬತ್ತದ ಸಸಿಯಂತೆಯೇ ಇರುವ ಕಳೆ.

ನಾರೆ ಉಗಿಯದು = ಬತ್ತದ ಗದ್ದೆಯಲ್ಲಿರುವ ಕಳೆಯನ್ನು ತೆಗೆಯುವುದು.

ನಾಲ್ಗಿ = ನಾಲಿಗೆ.

ನಾಲ್ಗಿ ಬಿದ್ದುಹೋಗ = ಮಾತಾಡದಂತೆ ಆಗಲಿ ಎಂದು ನಿಂದನೆ.

ನಾಲ್ಗಿ ಬಿದ್ದುಹೋಗುವುದು = ಮಾತು ನಿಂತು ಹೋಗುವುದು. ನಾಲಿಗೆ ಹೊರಳದಷ್ಟು ನಿಶಕ್ತರಾಗುವುದು, ಮರಣದ ಸಮಯ

ನಾಲ್ಗಿ ಸೇದೋಗ = ಒಂದು ಬೈಗುಳ.

ನಾಲೆ = ತೋಡು, ಕಾಲುವೆ.

ನಾಸ್ನ = ನಾಶ, (ಕುಲನಾಸ್ನಾಗ್ಲಿ) ಹಾಳು.
ನಾಳ = ಕೊಳವೆ (ಗಂಟಲುನಾಳ, ಅನ್ನನಾಳ).
ನಾಳೆ = ಇಂದಿನ ಮುಂದಿನ ದಿನ, ನಾಡಿದ್ದಿನ ಹಿಂದಿನ ದಿನ.
ನ್ಯಾಮ = ನಾಮ, ತಿಲಕ.
ನ್ಯಾಯ = ತೊಂದರೆಯಾಗದಿರುವುದು, ಅನ್ಯಾಯವಲ್ಲದ್ದು.
ನ್ಯಾಲ್ಗಿ = ನಾಲಗಿ, ನಾಲಿಗೆ.
ನ್ಯಾಲೆ = ನಾಲೆ.
ನಿಂಗೆ = ನಿನಗೆ.
ನಿಂದು = ನಿನ್ನದು, ನಿನಗೆ ಸೇರಿದುದು.
ನಿಂಬೆ = ಲಿಂಬೆ, ಉಪ್ಪಿನ ಕಾಯಿಗೆ/ ಪಾನಕಕ್ಕೆ ಬಳಸುವ ಹುಳಿಕಾಯಿ.
ನಿಕ್ಕಳಿಸು = ಕುತ್ತಿಗೆ ಉದ್ದಮಾಡಿಕೊಂಡು ನೋಡು, ನಿಣುಕು.
ನಿಗ = ಎಚ್ಚರಿಕೆ, ಜಾಗರೂಕತೆ.
ನಿಗದಿ = ಬೆಲೆ ನಿಶ್ಚಯ ಮಾಡು.
ನಿಗರು = ನೆಟ್ಟಗಾಗು, ಹೆಣವಾಗು, ೨. ಚಾಚು, ನೀಡು.
ನಿಗರು ಬಡಿ = ನಾಶವಾಗು.
ನಿಗಿನಿಗಿ = ಪ್ರಜ್ವಲಿಸುತ್ತಿರುವ ಬೆಂಕಿಕೆಂಡ.
ನಿಗೂಢ = ಯಾರಿಗೂ ತಿಳಿಯದ, ಅತಿಗುಟ್ಟಿನ, ಅರ್ಥವಮಾಡಿ ಕೊಳ್ಳಲಾಗದ.
ನಿಚ್ಚ = ನಿತ್ಯ.
ನಿಚ್ಚಯ = ನಿಶ್ಚಯ, ನಿಶ್ಚಿತಾರ್ಥ.
ನಿಚ್ಚೇಸು = ಗಟ್ಟಿ ಮನಸ್ಸು ಮಾಡು, ಏನಾದರಾಗಲೆಂದು ತೀರ್ಮಾನ ಮಾಡು.
ನಿಜ = ಸತ್ಯ, ದಿಟ.
ನಿಟ್ಟು = ದಿಕ್ಕು, ದೆಸೆ.
ನಿಟ್ಟೇಸು = ನೆಟ್ಟಗೆ ನಿಲ್ಲುವುದು, ನೆಟ್ಟನೋಟದಿಂದ ನೋಡು ವುದು.
ನಿಣುಕು = ಇಣುಕು, ಹಣಿಕಿ ನೋಡು.
ನಿತ್ಗ = ನಿಲ್ಲು, ಎದ್ದು ನಿಲ್ಲು, ನಿಂತುಕೋ.
ನಿತ್ಗಳ = ನಿಂತುಕೊಳ್ಳೋ (ಪು).
ನಿತ್ಗಳಿ = ನಿಂತುಕೊಳ್ಳಿ (ಬ.ವ.).
ನಿತ್ಗಳೆ = ನಿಂತುಕೊಳ್ಳೆ (ಸ್ತ್ರೀ) .
ನಿತ್ರಾಣ = ತ್ರಾಣವಿಲ್ಲದಿರುವಿಕೆ, ನಿಶ್ಯಕ್ತಿ ಬಲಹೀನತೆ.
ನಿಧಾನ = ಮೆಲ್ಲಗೆ, ಚುರುಕಿಲ್ಲದೆ.
ನಿದ್ರೆ = ನಿದ್ದೆ.
ನಿನ್ನ = ನಿನಗೆ ಸೇರಿದ, ನಿನ್ನದಾದ.
ನಿನ್ನೆ = ಹಿಂದಿನ ದಿನ, ಕಳೆದ ದಿನ.
ನಿಪ್ಪಟ್ಟೆ ನೀರು = ಉಪ್ಪು ಹುಳಿ ಕಾರ ಸಾಕಾಗದ ನೀರಾದ ಸಾರು.
ನಿಮಿತ = ನಿಮಿತ್ತ, ಜೋತಿಷ್ಯ, ಘಳಿಗೆ.
ನಿಮ್ಮಗೆ = ಗಟ್ಟಿಯಾಗಿ, ನೇರವಾಗಿ.
ನಿರಗಿ = ನೆರಿಗೆ, ಸೀರೆಯ ಮಧ್ಯಭಾಗ, ಸೀರೆಯುನ್ನು ಪದರವಾಡಿ (ನೆರಿಗೆ ಹಿಡಿದು) ಸೊಂಟಕ್ಕೆ ಸಿಕ್ಕಿಸಿಕೊಳ್ಳುವ ಭಾಗ.
ನಿರ್ನಾಮ = ನಾಶಹೊಂದು, ಹೇಳಕ್ಕೆ ಹೆಸರಿಲ್ಲದಂತಾಗು, ಅಡಗಿ ಹೋಗು, ಸರ್ವನಾಶ.
ನಿರ್ವಾಹಿಲ್ಲ = ಗತ್ಯಂತರವಿಲ್ಲ, ಅನಿವಾರ್ಯ.
ನಿರಾತಂಕ = ಆತಂಕವಿಲ್ಲದಿರುವುದು, ತೊಂದರೆಯಿಲ್ಲದಿರುವುದು.

ನಿರಾಳ = ಸಲೀಸು, ೨. ಪ್ರಶಾಂತ, ನೆಮ್ಮದಿ.

ನಿರಿಗಿ = ನಿರಗಿ, ನೆರಿಗೆ.

ನಿರುಂಬ್ಳ = ನಿರಾತಂಕ, ನಿರುಮ್ಮಳ, ಸಮಾಧಾನ, ನೆಮ್ಮದಿ.

ನಿಲ = ಬಾಗಿಲಿನ ಚೌಕಟ್ಟು.

ನಿಲ ನಿಲ್ಸುವುದು = ಕಟ್ಟಡದ ಬಾಗಿಲು/ ಕಿಟಕಿಯ ಚೌಕಟ್ಟುಗಳನ್ನು ನಿಲ್ಲಿಸುವುದು.

ನಿಲ್ಲಿಸು = ಎತ್ತಿ ನಿಲ್ಲಿಸು, ನಿಲ್ಲುವಂತೆ ಮಾಡು.

ನಿಲುವಂಗಿ = ಮಂಡಿವರೆಗಿನ ಅಂಗಿ/ ಉಡುಪು.

ನಿಲ್ಲು = ಇರು, ಹೋಗಬೇಡ, ಚಲಿಸದಿರು.

ನಿವಾಳ್ಸು = ನಿವಾಳಿಸು, ದೃಷ್ಟಿತೆಗೆ, ಸುತ್ತುಬರಿಸು.

ನಿಶ್ಶೇಷ = ಸಂಪೂರ್ಣನಾಶ, ೨. ಭಾಜಕ, ಸಂಖ್ಯೆಗಳನ್ನು ಭಾಗಿಸಿದಾಗ ಶೇಷ ಉಳಿಯದಿರುವುದು.

ನಿಷ್ಟುರ = ಖಡಾಖಂಡಿತ, ಅಪವಾದ.

ನೀಚ = ಕೇಡಿ, ದುಷ್ಟ.

ನೀಡು = ಕೊಡು, ಚಾಚು, ಕೈನೀಡು.

ನೀನು = ನಿನ್ನನ್ನು ಕುರಿತು.

ನೀರಟ್ಟೆ ಬೇರು = ನೀರುವಾಟೆ ಮರದ ಬೇರು ನಿಂಬೆರಸದೊಂದಿಗೆ ತೇದು ನೆಕ್ಕಿದರೆ ಬೇದಿ ಶಮನ.

ನೀರಲ್ಲಿ ಹೋಮ = ನಿಷ್ಫಲ, ನಿಷ್ಪ್ರಯೋಜಕ (**ಅಲಂ**).

ನೀರಂಡೆ = ನೀರು ತುಂಬಿಸಿಡುವ ಚೋರಿಗೆ/ ಪಾತ್ರೆ.

ನೀರಿನ ದೋಣಿ = ಮನೆಯ ಹೆಂಚಿನ ಮೇಲೆ ಬಿದ್ದ ಮಳೆ ನೀರು ಒಟ್ಟಾಗಿ ಕೆಳಗೆ ಸುರಿಯುವಂತೆ ಕಟ್ಟಿರುವ ವದಗೆ/ ಅರ್ಧ ಚಂದ್ರಾಕೃತಿಯ ದೋಣಿ.

ನೀರಿನ ಸರವು = ನೀರಿನ ಒಡಲು, ನೀರು ಹರಿಯುವ ಸರಕಲು.

ನೀರಿಸುಬು = ಚರ್ಮದಲ್ಲಿ ವ್ರಣವಾಗಿ ನೀರು – ಕೀವು ಸುರಿಯುವ ರೋಗ.

ನೀರು = ಜಲ.

ನೀರು ನಿಲ್ಲು = ಗರ್ಭಧರಿಸುವುದು, ಬಸಿರಾಗುವುದು.

ನೀರು ಮುಳ್ಕಾ = ನೀರಲ್ಲಿ ಮುಳುಗಿ ಏಳುವ ಹಕ್ಕಿ.

ನೀರು ಸಿಡಿತ = ಕೆಳಗೆ ಬಿದ್ದ ನೀರು ಬಿದ್ದ ರಭಸಕ್ಕೆ ಮತ್ತೆ ಹಾರುವುದು.

ನೀರು ಸೋಕುವುದು = ಗುಂಡಿಯಿಂದ ನೀರು ಬರಿದು ಮಾಡಿ ಅದರಲ್ಲಿರುವ ಮೀನು ಏಡಿಗಳನ್ನು ಹಿಡಿಯುವುದು

ನೀರುಳ್ಳಿ = ಈರುಳ್ಳಿ, ಉಳ್ಳಾಗಡ್ಡೆ.

ನೀರುಳ್ಳಿಮರ = ಭಾರೀ ದೊಡ್ಡ ಸುತ್ತಳತೆಯ ನಾಟದ ಮರ, ಆದರೆ ಹೆಚ್ಚುಗಟ್ಟಿ ಬರುವುದಿಲ್ಲ.

ನೀರುಳ್ಳಿಹಾವು = ಮಳೆಗಾಲದಲ್ಲಿ ನೀರಿನಲ್ಲಿ ಹರಿದಾಡುವ ಹಾವು.

ನೀರುವಾಟೆಮರ = ದೊಡ್ಡ ಕಾಡುಮರ ಇದರ ತೆಪ್ಪೆಯ ರಸವನ್ನು ಹಲ್ಲು ಕುರಕ್ಕೆ ಮುಟ್ಟಿಸಿದ ತಕ್ಷಣವೇ 'ಟಪ್'ಎಂದು ಕುರು

ಒಡೆಯುತ್ತದೆ.

ನೀರೂರು = ನೀರು ಸುರಿಯುವುದು, ಆಸೆಯಿಂದ ಬಾಯಲ್ಲಿ ನೀರು ಬರುವುದು.

ನೀರೆರೆಯುವುದು = ಬಾಣಂತಿ ಮತ್ತು ಮಗುವಿಗೆ ಸ್ನಾನ ಮಾಡಿಸುವುದು.

ನೀರೆರೆಯುವ ಶಾಸ್ತ್ರ = ಋತುಮತಿಯಾದವಳಿಗೆ ನೀರನ್ನು ಹಾಕುವುದು, ಹನ್ನೊಂದನೇ ದಿನದ ಶಾಸ್ತ್ರ.

ನೀವು = ೧.ನಿಮ್ಮ ಎಂದು ಹೇಳುವುದು, ೨. ನೇವರಿಸು, ಸವರು.

ನುಂಗು = ತಿನ್ನು, ಹಲ್ಲಲ್ಲಿ ಅಗಿಯದೆ ಹಾಗೇ ತಿನ್ನು.

ನುಗ್ಗು = ೧.ನುಸುಳು, ೨.ಪಾತ್ರೆಗಳು ತಗ್ಗುವುದು.

ನುಗ್ಗಾಗು = ಪುಡಿ ಪುಡಿಯಾಗು, ತಗ್ಗಿ ಹೋಗು.

ನುಚ್ಚು = ಕಡಿ ಅಕ್ಕಿ, ತುಂಡಾದ ಅಕ್ಕಿ.

ನುಡಿ ಬಿದ್ದುಹೋಗು = ಮಾತು ನಿಂತು ಹೋಗು, ಸಾಯುವ ಸಂದರ್ಭ ದಲ್ಲಿ ಮಾತಾಡಲು ಸಾಧ್ಯವಾಗ ದಿರುವುದು.

ನುಡಿಬಿದ್ದುಹೋಗ = ನಾಲಿಗೆ ಸೇದು ಹೋಗಲಿ ಎಂಬ ಬೈಗುಳ.

ನುಣ್ಣಗೆ = ನಯವಾಗಿ.

ನುಣುಚು = ಪಾರಾಗು, ತಪ್ಪಿಸಿಕೊಳ್ಳು.

ನುಣುಪು = ನಯವಾದ, ಜಾರಿಕೆಯ.

ನುರಿ = ಒತ್ತಿ ಕಲಸು.

ನುರ್ಜುಕಲ್ಲು = ಸಣ್ಣ ಸಣ್ಣ ಕಲ್ಲುಗಳಿಂದ ಕೂಡಿದ ಭೂಮಿ.

ನುಲಿ = ೧.ಕೊಸರಾಡು ೨.ಎಳೆಯ/ಚಿಗುರಡಿಕೆ, ೩.ಬೆಸೆ, ಹೆಣೆ.

ನುಸಿ = ೧.ನುಸುಳು, ನುಗ್ಗು ೨.ಸೊಳ್ಳೆಯಂತಹ ಸಣ್ಣ ಕೀಟ.

ನೂಲಿನುಂಡೆ = ದಾರದುಂಡೆ, ನೂಲನ್ನು ಸುತ್ತಿ ಸುತ್ತಿ ಗುಂಡಗೆ ಮಾಡಿಡುವುದು.

ನೂಲು = ದಾರ, ಎಳೆ.

ನೂಲೆಗೆಣಸು = ಮುಳ್ಳಿನ ಬಳ್ಳಿ, ಬೆಲಗೆಣಸಿನ ಜಾತಿ, ಭೂಮಿ ಹುಣ್ಣಿಮೆಯಂದು ಕಿತ್ತು ತಿನ್ನುತ್ತಿದ್ದರು.

ನೂವು = ನೋವು.

ನೂಯ್ತದೆ = ನೋವಾಗುತ್ತದೆ.

ನೆಂಗಳಿಸು = ಕುತ್ತಿಗೆ ಉದ್ದಮಾಡಿನೋಡು.

ನೆಂಗು = ಎಟುಕದಿದ್ದಾಗ ಕಷ್ಟದಿಂದ ತೆಗೆಯುವುದು.

ನೆಂಚು = ಸ್ವಲ್ಪ ಸ್ವಲ್ಪವಾಗಿ ನಾಲಿಗೆಗೆ ಹಚ್ಚಿಕೊಳ್ಳುವುದು.

ನೆಂಜಲು = ಎಂಜಲು.

ನೆಂಟ = ಸಂಬಂಧಿ.

ನೆಂಟಭಾವ = ಹೆಂಡತಿಯ ಅಣ್ಣ.

ನೆಂಟರು ಬರುವ ಶಾಸ್ತ್ರ = ಗೌರಿಹಬ್ಬದಲ್ಲಿ ಹೊಸ ಮದುಮಕ್ಕಳನ್ನು ಕರೆದುಕೊಂಡು ಬಂದು ಹುಡುಗಿಯ ಮನೆಯಲ್ಲಿ ಉಪಚರಿಸುವುದು.

ನೆಂಟ್ರೂಟ = ವರನ ಮನೆಯಲ್ಲಿ ಕೊಡುವ ಊಟ.

ನೆಕ್ಕಿಗಿಡ = ಒಂದು ಬಗೆಯ ಮರ.

ನೆಕ್ಕು = ನಾಲಿಗೆಯಿಂದಲೇ (ಕೈಯನ್ನು ಬಳಸದೇ) ಎತ್ತಿ ತಿನ್ನು.
ನೆಗಿ = ಹಾರು, ಜಿಗಿ, ನೆಗೆ.
ನೆಗ್ಗಿಹೋಗು = ನುಗ್ಗಾಗು, ಕುಳಿಬೀಳು, ತಗ್ಗಿಹೋಗು, ಚಕ್ಕು ಬೀಳು.
ನೆಗ್ಗು = ಎತ್ತು, ಎತ್ತಿಕೋ, ಕೈಯಿಂದ ಎತ್ತು, ೨. ನೆಗ್ಗಾಗು, ನೆಗ್ಗಿಹೋಗು, ಮುಕ್ಕಾಗು (ಪಾತ್ರೆಗಳು ನೆಗ್ಗಿ ಹೋಗಿವೆ).
ನೆಙ್‌ಚ್ಕ = ನೆಂಚ್ಕ, ನೆಂಚಿಕೋ.
ನೆಙ್‌ನೋಡು = ರುಚಿ ನೋಡು.
ನೆಚ್ಚು = ನಂಬು, ವಿಶ್ವಾಸವಿಡು.
ನೆಟಿಗೆ ಮುರಿ = ಕೈ ಬೆರಳುಗಳನ್ನು ಸಶಬ್ಧವಾಗಿ ಮಡಚಿ ಬೇರೆಯವರನ್ನು ದ್ವೇಷಿಸುವ ರೀತಿ.
ನೆಟಿಗೆ ತೆಗಿ = ಕೈಬೆರಳುಗಳನ್ನು ಸಶಬ್ಧವಾಗಿ ಮಡಚಿ ಮಕ್ಕಳಿಗೆ ದೃಷ್ಟಿ ತೆಗೆಯುವ ರೀತಿ.
ನೆಟ್ಟಿ = ನಾಟಿ.
ನೆಟ್ಟಿಡು = ಭೂಮಿಗೆ ಊರಿಡು, ನೆಡು.
ನೆಡು = ನೆಟ್ಟಿಡು.
ನೆಣ = ಕೊಬ್ಬು, ಚರ್ಬಿ.
ನೆತ್ರ = ನೆತ್ತರ, ರಕ್ತ.
ನೆತ್ತಿ = ತಲೆಯ ಮೇಲ್ಭಾಗ.
ನೆತ್ತಿಗೆ ಹತ್ತು = ಆಹಾರದ ಚೂರು ಉಸಿರು ನಾಳಕ್ಕೆ ಸೇರುವುದು, ನೆತ್ತಿಗೇರು ೨. ಅಮಲೇರು.
ನೆತ್ತಿ ಬಾಯಿ = ಎಳೆಯ ಮಕ್ಕಳ ನೆತ್ತಿಯಿನ್ನೂ ಕೂಡದಿದ್ದಾಗ ನೆತ್ತಿಯ ಮೇಲಿರುವ ಕುಳಿ.
ನೆತ್ತಿಬಿಡು = ನೆತ್ತಿ ಬಾಯಿ ಕೂಡದಿದ್ದಾಗ ಮಕ್ಕಳಿಗೆ ಸೀತ, ಕೆಮ್ಮು ಆಗಿ ಅಳುವಾಗ ಧ್ವನಿ ಬದಲಾಯಿಸುತ್ತದೆ, ಆಗ ನೆತ್ತಿ ಬಿಟ್ಟಿದೆ ಎಂದು ಅರ್ಥ
ನೆತ್ನೀರು = ಹೆಣ್ಣು ಗರ್ಭಧರಿಸಿದ ಮೇಲೆ ಗರ್ಭಕೋಶದಲ್ಲಿರುವ ನೀರು.
ನೆತ್ನೀರು ಒಡೆಯುವುದು = ಹೆರಿಗೆಯ ಬೇನೆ ಕಾಣಿಸಿಕೊಳ್ಳುತ್ತಿದ್ದಂತೆ ಮಗು ಹುಟ್ಟುವ ಮೊದಲೇ ಗರ್ಭಕೋಶದ ನೀರು ಸ್ರವಿಸುವುದು.
ನೆನೆ = ತೊಯ್ಯು, ಮಳೆಯಲ್ಲಿ ನೆನೆಯುವುದು, ಒದ್ದೆಯಾಗು ೨. ಸ್ಮರಿಸು, ಧ್ಯಾನಿಸು.
ನೆನೆಯಕ್ಕೆ ಹಾಕು = ೧. ಬಟ್ಟೆಯನ್ನು ನೀರಲ್ಲಿ ಹಾಕಿಡು ೨. ಅಕ್ಕಿ/ಬೇಳೆ ಕಾಳುಗಳನ್ನು ಉನಿಹಾಕು, ನೆನೆಸು.
ನೆಪ = ನೆವ, ಏನೋ ಒಂದು ಸಮರ್ಪಕವಲ್ಲದ ಕಾರಣ.
ನೆಪಳಿ = ಅನಾರೋಗ್ಯದಿಂದ ತುಂಬಾದಿನ ಹಾಸಿಗೆ ಹಿಡಿಯುವುದು.
ನೆಪ್ಪು = ನೆನಪು, ಅರಿವು.
ನೆಯ್ಯಿರ = ನಯ್ಯಿರ, ಅತಿ ಸಣ್ಣ ಇರುವೆ.
ನೆರಗಿ = ನಿರಗಿ.
ನೆರ್ಮನೆ = ೧.ಅಕ್ಕ ಪಕ್ಕದಲ್ಲಿರುವ ಮನೆಗಳು.
ನೆರೆ = ಪ್ರವಾಹ ೨.ಮೈ ನೆರೆಯುವುದು, ಋತುಮತಿಯಾಗುವುದು ೩.ಜನರ ಗುಂಪು.
ನೆರೆತ = ಬಲಿತ ೨. ವಯಸ್ಸಿಗೆ ಬಂದಿರುವ.

ನೆರ್‌ಹೊರೆ = ನೆರೆಹೊರೆ, ಅಕ್ಕಪಕ್ಕದ ಮನೆಯಲ್ಲಿ ವಾಸಿಸುವವರು.

ನೆಲ = ೧.ಗುಡಿಸಿ, ಸಾರಿಸಿ ಅಚ್ಚು–ಕಟ್ಟಾಗಿರುವ ಭೂಮಿ ೨.ತಾಯ್ನಾಡು, ಮಾತೃಭೂಮಿ, ಭೂಮಿ.

ನೆಲಗಟ್ಟು = ಪಾಯ, ಅಡಿಪಾಯ, ಮನೆ ಕಟ್ಟಬೇಕಾಗಿರುವ / ಕಟ್ಟಿರುವ / ಕಟ್ಟಿ ಬಿದ್ದು ಹೋಗಿರುವ ಜಾಗ, ನಿವೇಶನ.

ನೆಲಗಡ್ಲೆ = ನೆಲದೊಳಗೆ ಗಿಡದ ಬೇರಿನಲ್ಲಿ ಬಿಡುವ ಒಂದು ದ್ವಿದಳ ಧಾನ್ಯ, ಕಡ್ಲೆಕಾಯಿ.

ನೆಲದ್‌ಪಾಲು = ಬೇರೆಯವರಿಗೆ ಸೇರಿದ ಜಾಗದಲ್ಲಿ ಶಿಕಾರಿಯಾದ್ರೆ ಅವರಿಗೆ ಕೊಡುವ ಮಾಂಸದ ಪಾಲು.

ನೆಲನೆಲ್ಲಿ = ಸಣ್ಣ ಎಲೆಯ ಸಣ್ಣಗಿಡ, ಅಗ್ನಿಸರ್ಪಕ್ಕೆ ಔಷದಿಯಾಗಿ ಬಳಕೆ.

ನೆಲಮಾಣ್ಗಿ = ನೆಲಮಟ್ಟಕ್ಕಿಂತ ಕೆಳಗಿರುವ ಮನೆಯ ಭಾಗ.

ನೆಲಸಮ = ಹಾಳುಮಾಡುವುದು, ನಿರ್ನಾಮ.

ನೆಲ್ಲಕ್ಕಿ = ಅಕ್ಕಿಯ ಜೊತೆ ಹೆಚ್ಚು ಬತ್ತ ಸೇರಿರುವುದು.

ನೆಲು = ನಿಲು, ಸಿಕ್ಕ, ಹಗ್ಗದಲ್ಲಿ ಜೋಳಿಗೆ ನೆಯ್ದು ನೇತುಹಾಕಿ ಅದರೊಳಗೆ ಬೆಕ್ಕಿಗೆ ಸಿಗದಂತೆ ಹಾಲು ಬೆಣ್ಣೆಗಳ ಮಡಿಕೆಗಳನ್ನಿಡುವುದು.

ನೆಲ್ಲು = ಬತ್ತ.

ನೆವ = ನೆಪ.

ನೆವಳ = ಗಂಡಸರು ಸೊಂಟಕ್ಕೆ ಹಾಕುವ ಬಂಗಾರದ ಸರಪಳಿಯಂತಹ ಆಭರಣ.

ನೆಸಿ = ಮೇಲಕ್ಕೆ ನೆಗೆಯುವುದು, ನಿಂಗಳ್ಸು.

ನೆಳ = ನೊಣ, ಒಂದು ಕೀಟ.

ನೆಳಲು = ನೆರಳು, ಛಾಯೆ.

ನೆಳ್ಳು = ನೆಳಲು.

ನೇಕಾರ = ಮಗ್ಗದವ, ನೇಯ್ಗೆಯವನು.

ನೇಗ್ಲು = ನೇಗಿಲು, ಉಳುಮೆಯ ಒಂದು ಮರದ ಉಪಕರಣ.

ನೇಣು = ಅಡಿಕೆ ಗೊನೆಯನ್ನು ಮರದಿಂದ ಕೆಳಗಿಳಿಸುವ ಸುಮಾರು ಎಂಭತ್ತು ಅಡಿ ಉದ್ದದ ಹಗ್ಗ, ಕೊನ್ನೇಣು, ಕೊನೆ ಹಿಡಿಯುವ ನೇಣು.

ನೇತಾಕು = ತೂಗು ಹಾಕು.

ನೇತಾಡು = ತೂಗಾಡು, ನೇಲು.

ನೇದ್ಲೆ ಹೂ = ನೈದಿಲೆ, ಕಮಲದ ಹೂವು.

ನೇಮ = ನಿಯಮ, ಕಟ್ಟಳೆ.

ನೇಯು = ಹೆಣೆಯುವುದು, ಹೊಸೆಯುವುದು.

ನೇರ = ನೆಟ್ಟಗೆ ೨.ಸರಳ.

ನೇಲು = ನೇತಾಡು, ತೂಗಾಡು, ಇಳಿಬೀಳು.

ನೇಸಲು = ನೇಸರ, ಸೂರ್ಯನ ಬೆಳಗಿನ ಕಿರಣ

ನೊಗ = ಗಾಡಿ/ನೇಗಿಲನ್ನು ಎಳೆಯಲು ಎತ್ತಿನ ಹೆಗಲ ಮೇಲಿಡುವ ಮರದ ದಿಂಡು.

ನೊಗದ ಕೀಲು = ಎತ್ತುಗಳನ್ನು ನೊಗಕ್ಕೆ ಹಗ್ಗದಿಂದ ಕಟ್ಟಿ ಸಿಕ್ಕಿಸುವ ಮರದ ಕೋಲು.

ನೊಗ್ಲಿ = ಒಂದು ಜಾತಿಯ ಉದ್ದ ಮೀನು.

ನೊಚ್ಚಗೆ = ಹಿತವಾದ ಬೆಚ್ಚಗೆ, ಹಿತವಾದ ಬಿಸಿ.

ನೊದ್ಲೆ = ನೊರೆ, ಜಾನುವಾರುಗಳ ಬಾಯಲ್ಲಿ ಕೆಲವೊಮ್ಮೆ ಬರುವ ನೊರೆ ಮಿಶ್ರಿತ ಜೊಲ್ಲು.

ನೊಣ = ನೆಳ, ಮನೆ/ಕೊಟ್ಟಿಗೆಗಳಲ್ಲಿ ಹಾರಾಡುವ ಕೀಟ.

ನೊಣಿ = ನೆಕ್ಕು, ನಿಧಾನವಾಗಿ ತಿನ್ನು (ಅಲಂ) (ಅದೆಂಥ ನೊಣಿತಾ ಕೂತೀಯಲ್ಲ).

ನೊಣೆ = ೧.ತೀಡು, ಸವರು, ಹಚ್ಚು ೨.ನಿಧಾನವಾಗಿ ತಿನ್ನು.

ನೊರೆ = ಬುರುಗು, ದ್ರವ ಪದಾರ್ಥಗಳ ಮೇಲೆ ನಿಂತಿರುವ ಬುರುಗು.

ನೊರೆ ತೊಳ್ಳೆ = ಗುಲ್ಮ.

ನೊಸ್ಲ = ಹಣೆ, ಲಲಾಟ.

ನೊಸೆಹುಲ್ಲು = ೧.ಒಂದು ಜಾತಿಯ ಹುಲ್ಲು.

ನೊಳ = ೧.ನೊಣ, ನಳ, ನ್ವಣ, ಒಂದು ಕೀಟ ೨.ಗಟ್ಟಿಯಾದ ಕಾಡಿನ ನಾಟಾ ಮರ.

ನೊಳಗ = ನಳಿಗೆ, ನಳಗ.

ನೊಳ್ಳಿ = ಹೂಟಿಯಾದ ಮೇಲೆ ಕೆಸರು ಗದ್ದೆಯನ್ನು ಮಟ್ಟ ಮಾಡುವುದು.

ನೋಟು = ಕಾಗದದ ಹಣ.

ನೋಡು = ಕಾಣು, ನೋಟ.

ನೋಡ್ನೋಡ್ತ = ನೋಡುತ್ತಿದ್ದಂತೆ

ನ್ಯರ್ಕ್ನೆ = ನೆರ್ಮನೆ, ನೆರೆಯಲ್ಲಿರುವ ಮನೆ.

ನ್ವಣ = ನೊಣ, ನೊಳ.

ನ್ಯಾಮ = ನಾಮ.

ನ್ಯಾರ = ನೇರ.

ನ್ಯಾಲ್ಗಿ = ನಾಲಿಗೆ, ಜಿಹ್ವೆ.

ನ್ಯಾಲೆ = ಬಟ್ಟೆಯನ್ನು ನೇತು ಹಾಕುವ ಹಗ್ಗ, ಬಟ್ಟೆಗಳನ್ನು ಒಣಗಿಸುವ ಹಗ್ಗ.

ನೌಟು = ಕೌಟು, ಗೌಂಟು, ಎಣ್ಣೆಯ ಜಿಡ್ಡು.

ಪ

ಪಂಕ್ತಿ = ಸಾಲು, ಗುಂಪು.

ಪಂಕ್ತಿ ಭೋಜನ = ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುವುದು.

ಪಂಚಪತ್ರೆ = ಹಸಿರು ಎಲೆಯ ಸಾಮಾನ್ಯ ಪರಿಮಳದ ಸಣ್ಣಗಿಡ.

ಪಂಚಾತ್ಗಿ = ಪಂಚಾಯಿತಿ, ನ್ಯಾಯ ತೀರ್ಮಾನ, ಹರಟೆ ಹೊಡೆಯುವುದು.

ಪಂಚಿ = ಪಂಚೆ, ದೋತರ, ವಲ್ಲಿ.

ಪಂಚೇತಿ = ಪಂಚಾತ್ಗಿ.

ಪಂಚೇರು = ಐದು ಸೇರಿನ ಅಳತೆ, ಅರ್ಧ ದಡಿಯ.

ಪಂಜ = ಪ್ರಾಣಿಗಳ ಕಾಲಿನ ಉಗುರು.

ಪಂಜ್ರ = ಪಂಜರ, ಹಕ್ಕಿಗಳು/ಪ್ರಾಣಿಗಳನ್ನು ಕೂಡಿ ಹಾಕುವ ಗೂಡು.

ಪಂಜಿ = ಪಂಚಿ, ಪಂಚೆ.

ಪಂಜು = ೧.ದೀವಟಿಗೆ, ೨. ಬೆಂಕಿ ೩. ಪಂಜ, ಉಗುರು.

ಪಂಜ್ರೊಳ್ಳಿ = ಒಂದು ದೈವ /ಭೂತದ ಹೆಸರು.

ಪಂಡಿತ = ವೈದ್ಯ, ನಾಟಿವೈದ್ಯ.

ಪಂತ = ಛಲ, ಪಂದ್ಯ, ಶರತ್ತು, ಪಂಥ.

ಪಂತಿ = ಪಂಕ್ತಿ, ಊಟದ ಸಾಲು, ಸಾಲಾಗಿ ಊಟಕ್ಕೆ ಕೂತವರ ಒಂದು ತಂಡ.

ಪಂಥ = ಪಂತ.

ಪಕಳೆ = ಹೂವಿನ ಎಸಳು, ಚಿಟ್ಟೆಯ ರೆಕ್ಕೆ.

ಪಕ್ಕನೆ = ಬೇಗನೆ, ತಕ್ಷಣ, ಒಮ್ಮೆಲೆ, ಕೂಡಲೇ.

ಪಕಾಸಿ = ಜಂತೆಯ ಜೊತೆಯಲ್ಲಿ ಬಳಸುವ ಮರದ ದೊಡ್ಡ ಪಟ್ಟಿ, ಹೆಂಚಿನ ಮನೆಯ ಜಂತೆ.

ಪಕ್ಕೆ = ಪಕ್ಕೆಲುಬು.

ಪಕ್ಷ = ಪಿತೃಪಕ್ಷ, ಮಾಲಾಯ.

ಪಕ್ಷಮಾಸ = ಹುಣ್ಣಿಮೆಯಿಂದ ನವರಾತ್ರಿ ಅಮಾವಾಸ್ಯೆವರೆಗಿನ ಹದಿನೈದು ದಿನಗಳು.

ಪಗಡೆ = ಚೌಕಾಬಾರದಂತೆ ಒಂದು ಆಟ.

ಪಗಾರ = ಸಂಬಳ, ತಿಂಗಳ ಗಳಿಕೆ.

ಪಚ್ಚಂಪಾಡು = ಚಲ್ಲಾಪಿಲ್ಲಿ, ಅಸ್ತವ್ಯಸ್ತ.

ಪಚಿಡಿ = ಪಚಡಿ, ನಂಚಿಕೊಳ್ಳಲು ಮಾಡುವ ಒಂದು ಬಗೆಯ ವ್ಯಂಜನ.

ಪಚ್ಚಿ = ಕರುಳು, ಪಿತ್ಥಕೋಶ.

ಪಚ್ಚೆ = ಆಭರಣವಾಗಿ ಉಪಯೋಗಿಸುವ ಹಸಿರು ಬಣ್ಣದ ಕಲ್ಲು, ಹಸಿರು ರತ್ನ.

ಪಚ್ಚೆತೆನೆ = ಪರಿಮಳಯುಕ್ತ ತೆನೆಬಿಡುವ ಒಂದು ಗಿಡ, ದೀಪಾವಳಿಯಲ್ಲಿ ಪೂಜೆಗೆ ಉಪಯೋಗಿಸುತ್ತಾರೆ, ಪಚೋಲಿ.

ಪಟ = ೧. ಫೋಟ, ಚಿತ್ರ ೨.ದಿಡ, ಅಂಚು ೩.ಗಾಳಿಪಟ ೪.ಸಾಲು.

ಪಟಪಟ = ಚುರುಕಾಗಿ, ಸ್ಪಷ್ಟವಾಗಿ ಮಾತಾಡು ೨. ನೀರ ಹನಿಗಳ ಶಬ್ದ.

ಪಟ್ಟ = ಅಧಿಕಾರ, ಪದವಿ ೨. ಸಿಂಹಾಸನ.

ಪಟ್ಟಪಾಡು = ಪಾಡುಪಡು, ತೊಂದರೆ, ಅನುಭವಿಸಿದ ಕಷ್ಟ.

ಪಟ್ಟಂಗ = ವ್ಯರ್ಥವಾದ ಮಾತು, ಹರಟೆ.

ಪಟ್ಟಂಗಿ = ಹರಟೆಮಲ್ಲ, ಬಡಾಯಿ ಕೊಚ್ಚುವವನು.

ಪಟ್ಟದವರೆ = ದಪ್ಪ ಕೆಂಪು ಬೀಜದ ಅವರೆಕಾಯಿ.

ಪಟ್ಟನೆ = ಪಟಕ್ಕಂತ, ಪಟಾರ್ನೆ, ತಟ್ಟಂತ ಬೇಗನೆ.

ಪಟ್ಣ = ನಗರ, ಪೊಟ್ಟಣ, ಕೊಟ್ಟೆ.

ಪಟಾಪಟಿ = ಮಾತುಕತೆ, ಕೆಲಸಕ್ಕೆ ಬಾರದ ಮಾತು.

ಪಟಾರ್ನೆ = ಪಟ್ಟನೆ.

ಪಟಾಲಂ = ಪಟಾಲಮು, ಪಡೆ, ಗುಂಪು (ತನ್ನ ಕೆಲಸಕ್ಕಾಗಿ ಮಾತ್ರ ಭೇಟಿ– ಯಾಗುವವರಿಗೆ "ಏನು ಪಟಾಲಂ ಈ ಕಡೆ ದಯಮಾಡಿ ಸಿದ್ದೀರಲ್ಲ ಎಂದು ವ್ಯಂಗ್ಯ ಮಾಡುವುದು).

ಪಟಿಂಗ = ದುರುಳ, ದುಷ್ಟತನವನ್ನು ಮೈಗೂಡಿಸಿಕೊಂಡವನು.

ಪಟ್ಟೆ = ಡಾಬು, ಸೊಂಟದ ಆಭರಣ.

ಪಟ್ಟು = ೧.ಹಟ ೨.ಪಂದ್ಯಕಟ್ಟು, ೩.ಬಿಗಿ ಹಿಡಿತ.

ಪಟ್ಲುಕಾಯಿ = ಪಡವಲಕಾಯಿ, ಬಳ್ಳಿಯಲ್ಲಿ

ಬಿಡುವ ಉದ್ದಕಾಯಿ, ಒಂದು ತರಕಾರಿ.

ಪಟ್ಟೆ = ಗಾಡಿಯ ಚಕ್ರ ಸವೆಯದ ಹಾಗೆ ಚಕ್ರದ ಸುತ್ತ ಹಾಕುವ ಕಬ್ಬಿಣದ ಬಳೆ, ೨. ಜಮೀನಿನ ದಾಖಲು ಪತ್ರ, ೩. ಭೂಮಿ ಸ್ವಂತದ್ದೆಂದು ಹೇಳುವ ದಾಖಲೆ.

ಪಟ್ಟೆ ಹುಲಿ = ಹೆಬ್ಬುಲಿ.

ಪಡಪೋಸಿ = ಗತಿಯಿಲ್ಲದವ್ನ, ಕೆಲಸಕ್ಕೆ ಬಾರದವ್ನ.

ಪಡ್ಚ = ಓಡಿಹೋಗುವುದು, ಹೆದರಿ ಓಡಿಹೋಗುವುದು (ಹೆದರಿ ಪಡ್ಚ).

ಪಡಿ = ಭಿಕ್ಷೆ, ೨. ಅಕ್ಕಿ ರೂಪದ ಸಂಬಳ, ಧಾನ್ಯ ರೂಪದ ಭತ್ಯೆ.

ಪಡಿಯಚ್ಚು = ತದ್ರೂಪ, ಒಂದೇ ರೀತಿಯ.

ಪಣ = ೧.ಪಟ್ಟುಹಿಡಿ, ೨.ಪಂದ್ಯಕಟ್ಟು ೩.ಜೂಜು.

ಪಣತ = ಭತ್ತವನ್ನು ತುಂಬಿಡುವ ದೊಡ್ಡ ಮರದ ಕಣಜ, ಮರದ ಹಲಗೆಗಳನ್ನು ಸೇರಿಸಿ ಮಾಡಿದ ದೊಡ್ಡ ಕಣಜ.

ಪಣತೆ = ಮಣ್ಣಿನಿಂದ ಮಾಡಿದ ಊಟದ ಬಟ್ಟಲು, ಮಣ್ಣಿನ ತಟ್ಟೆ.

ಪಣ್ತೆ = ಪಣತೆ.

ಪತ್ರಡೆ = ಕೆಸುವಿನೆಲೆಯನ್ನು ಬೇಯಿಸಿ ಮಾಡಿದ ತಿಂಡಿ, ಪತ್ರೊಡೆ.

ಪತಾಳ = ಪಾತಾಳ, ತುಂಬಾ ಆಳ.

ಪತ್ತಾಸು = ಸಣ್ಣ ಪಣತ, ಮೇಲಿನಿಂದ ಬಾಗಿಲಿರುವ ಉದ್ದದ ಮೇಜು.

ಪತ್ತಿಲ್ಲ = ಪತ್ತೆಯೇ ಇಲ್ಲ, ಸಿಗಲಿಲ್ಲ, ಕಂಡಿಲ್ಲ.

ಪತ್ತಿಲ್ದಿದ್ದಂಗೆ = ಗೊತ್ತಾಗದ ಹಾಗೆ, ಯಾರಿಗೂ ತಿಳಿಯದ ಹಾಗೆ.

ಪತ್ತೆ = ಗುರುತು, ವಿಳಾಸ.

ಪತ್ತೆಹಚ್ಚು = ಕಂಡು ಹಿಡಿ, ಹುಡುಕು, ಹುಡುಕುವುದು.

ಪತ್ರೊಡೆ = ಕೆಸುವಿನೆಲೆ ಮತ್ತು ಅಕ್ಕಿಯ ತಿಂಡಿ, ಪತ್ರಡೆ.

ಪಥ್ಯ = ಆಹಾರದಲ್ಲಿ ಕಟ್ಟುನಿಟ್ಟು.

ಪದ = ಹಾಡು.

ಪದರ = ಮಡಿಕೆ, ಎಳೆ.

ಪದಾರ್ಥ = ೧.ವಸ್ತು ೨.ನಮ್ಮವರು.

ಪದೇ ಪದೇ = ಮತ್ತೆ ಮತ್ತೆ, ಆಗಾಗ.

ಪನ್ನ = ಸೀರೆ/ಪಂಚೆಯ ಉದ್ದ/ಅಗಲ.

ಪನ್ನೀರ್ ದಾನಿ = ಪರಿಮಳದ ನೀರನ್ನು ಚಿಮುಕಿಸುವ ವಿಶಿಷ್ಟ ರೀತಿಯ ಗಿಂಡಿ, ಪನ್ನೀರುಗಿಂಡಿ.

ಪನ್ನೀರ್‌ಗಿಂಡಿ = ಪನ್ನೀರ್‌ದಾನಿ.

ಪನ್ನೀರು = ಸುಗಂದಯುಕ್ತ ನೀರು, ಗುಲಾಬಿ ಜಲ.

ಪನ್ನೀರ್‌ದಾನಿ ಮರ = ದೊಡ್ಡಮರ, ಗಟ್ಟಿಯಿಲ್ಲ, ತೆನೆಯಂತೆ ಬಿಳಿಯ ಸಣ್ಣ ಹೂಗಳು ಮರದ ತುಂಬಾ ದಟ್ಟ ಎಲೆಗಳು.

ಪನ್ನೇರ್ಳೆ = ಒಂದು ಜಾತಿಯ ಪರಿಮಳ ಭರಿತ ಹಣ್ಣು ಬಿಡುವ ಮರ.

ಪಪ್ಪಳೆ ಹಣ್ಣು = ಪಪ್ಪಾಯ, ಪರಂಗಿ ಹಣ್ಣು, ಅಕ್ಕ ತಂಗಿ ಹಣ್ಣು.

ಪರಂಗಿ = ಪರ ಊರಿನವನು, ಪರಕೀಯ.

ಪರಂಗಿ ಹಣ್ಣು = ಪಪ್ಪಳೆ ಹಣ್ಣು.

ಪರಭಾರೆ = ಇತರರಿಗೆ ವಹಿಸಿ

ಕೊಡುವುದು, ವರ್ಗಾಯಿಸು.

ಪರಮಶಿ = ೧.ಆಕಸ್ಮಿಕ, ಅವಘಡ, ಹೆಚ್ಚುಕಡಿಮೆ ೨.ಕೈ ತಪ್ಪು, ಕೈಮೀರು.

ಪರವಶಾವಧಿ = ಜೀವಿತಾವಧಿ, ಜೀವವಿರುವವರೆಗೆ.

ಪರವಾನಗಿ = ಅನುಮತಿ.

ಪರವಾಗಿಲ್ಲ = ೧.ಉತ್ತಮ ೨.ಮಧ್ಯಮ ಗುಣಮಟ್ಟದ.

ಪರಾಣ = ಪ್ರಾಣ, ಜೀವ.

ಪರಾಣಿ = ಪ್ರಾಣಿ.

ಪರಾಯ = ಪ್ರಾಯ, ವಯಸ್ಸು.

ಪರಾರಿ = ಓಡಿಹೋಗುವುದು, ತಲೆ ತಪ್ಪಿಸಿ ಕೊಳ್ಳುವುದು.

ಪರಿಕಾರ = ೧.ಎಲ್ಲಾ ವಸ್ತುಗಳು, ಪರಿಕರ, ೨.ಲಂಗ, ಹೆಣ್ಣು ಮಕ್ಕಳ ಉಡುಪು.

ಪರೆ = ೧.ಪೊರೆ, ಕಣ್ಣಿನ ರೋಗ, ೨.ಹಾವಿನ ಚರ್ಮ.

ಪರೆಕಳ್ಚು = ೧.ಹಾವು ಪೊರೆ ಬಿಡುವುದು ೨.ತಪ್ಪಿನ ಅರಿವಾಗುವುದು. (ಅಲಂ)

ಪರ್ಕಟ್ಟೆ = ಹರಿದ, ಚಿಂದಿಯಾದ.

ಪರ್ದೇಸಿ = ಗತಿಯಿಲ್ಲದ, ಅನಾಥ.

ಪರ್ಪಂಚ = ಪ್ರಪಂಚ, ಜಗತ್ತು.

ಪರ್ಮಳ = ಪರಿಮಳ, ಸುವಾಸನೆ, ಸುಗಂಧ.

ಪರ್ಮಾನ = ಪರಮಾನ್ನ, ಸಿಹಿಪಾಯಸ.

ಪರ್ಸಾದ = ಪ್ರಸಾದ, ದೇವರಿಗೆ ನೈವೇದ್ಯ ಮಾಡಿದ ತಿನಿಸು/ಅಡಿಗೆ.

ಪರ್ವತ ಬಾಳೆ = ಕಾಬಾಳೆ, ಬಾಳೆ ಜಾತಿಗೆ ಸೇರಿದ ಹೂ ಬಿಡುವ ಗಿಡ.

ಪರಿಬೇಧ = ಪಕ್ಷಪಾತ, (ಪಂಕ್ತಿಯಲ್ಲಿ ಪರಿಬೇಧ ಎಲ್ಲರಿಗೂ ಬಡಿಸು ವಾಗ ಒಬ್ಬೊಬ್ಬರಿಗೆ ಒಂದೊಂದು ರೀತಿ ಬಡಿಸು ವುದು).

ಪಲ್ಲ = ಹತ್ತುಕೊಳಗ ಅಥವಾ ನೂರು ಸೇರು, ಒಂದು ಅಳತೆ, ಎರಡು ಖಂಡುಗದ ಅಳತೆ.

ಪಲ್ಲಕ್ಕಿ = ದೇವರನ್ನು ಕೂರಿಸಿ ಮೆರವಣಿಗೆ ಮಾಡಿಸುವ ಒಂದು ರೀತಿಯ ಮೇನೆ/ರಥ.

ಪಲ್ಲಂಗ = ಮಂಚ.

ಪಲಾಯನ = ಪರಾರಿ, ತಪ್ಪಿಸಿಕೊಂಡು ಓಡುವುದು.

ಪಲ್ಟಿ = ಲಾಗ, ತಲೆಕೆಳಗಾಗು.

ಪಲ್ಟಿ ಹೊಡಿ = ಲಾಗ ಹಾಕು, ತಲೆಕೆಳಗಾಗಿ ಬೀಳು.

ಪಲ್ಲೆ = ತರಕಾರಿ ಸಾರು.

ಪವನ್ನು = ಚಿನ್ನದ ತೂಕ, ಒಂದು ಪವನ್ನಿಗೆ ಎಂಟು ಗ್ರಾಂ.

ಪವಾಡ = ಅದ್ಭುತ.

ಪಸೆ = ತೇವ, ಹಸಿ, ಥಂಡಿ.

ಪಳಪಳ = ಪಳಗುಟ್ಟು, ಮಿರಮಿರನೆ ಹೊಳೆ (ಪಳಪಳಾಂತ ಮಿಂಚು).

ಪಳಗುಟ್ಟು = ಪಳಪಳ ಎನ್ನು, ಹೊಳೆ.

ಪಳಾದ್ಯ = ತಿನಿಸು, ಊಟ.

ಪಾಕ = ಅಡುಗೆ, ನಳಪಾಕ, ಅಡುಗೆ ಮಾಡುವುದು.

ಪಾಚಿ = ಹಾಸುಂಬ, ನೀರು ನಿಂತಲ್ಲಿ ಹಸಿರಾಗಿ ಪಾಚಿ ಬೆಳೆಯುವುದು.

ಪಾಟ = ಓದುವಿಕೆ, ಅಭ್ಯಾಸ.

ಪಾಟಿ = ಬರೆಯುವ ಸಣ್ಣ ಹಲಗೆ, ಬಳಪದಿಂದ ಬರೆಯುವ ಹಲಗೆ.

ಪಾಟ್ಲಿ = ಚಪ್ಪಟೆಯಾಗಿರುವ ದೊಡ್ಡ ಬಂಗಾರದ ಬಳೆ, ಗಂಡಸರ ಕೈ ಆಭರಣ.

ಪಾಡ್ಯ = ಅಮಾವಾಸ್ಯೆಯ ಮಾರನೇ ದಿನ.

ಪಾಡು = ಸ್ಥಿತಿ, ಗತಿ, ಕಷ್ಟ, ತೊಂದರೆ.

ಪಾಣಿ = ಬೆಳೆಯ ದಾಖಲೆ ಪತ್ರ ೨. ಓಲೆಯ ಹಿಂದಿನ ತಿರುಪು.

ಪಾಣಿ ಪಂಚಿ = ಸಣ್ಣ ತೆಳು ಪಂಚೆ.

ಪಾತಾಳ = ಲೆಕ್ಕಕ್ಕೆ ಸಿಗದಷ್ಟು ಆಳ, ಬಹುಆಳ.

ಪಾತಾಳ ಗರಡಿ = ನೀರಲ್ಲಿ ಮುಳುಗಿ ಹೋದ ವಸ್ತುಗಳನ್ನು ಹುಡುಕಿ ಹೊರ ತೆಗೆಯಲು ಉಪಯೋಗಿಸುವ ಕಬ್ಬಿಣದ ಕೊಕ್ಕೆಯುಳ್ಳ ಸಾಧನ.

ಪಾತಿ = ಮಡಿ, ಮುಡಿ, ಸಸಿಮುಡಿ, ಬಿತ್ತನೆ ಮಾಡಲು ಭೂಮಿಯನ್ನು ಹದ–ಗೊಳಿಸುವುದು ೨. ಮರ, ಗಿಡಗಳ ಸುತ್ತಲೂ ಮಣ್ಣನ್ನು ಸಡಿಲಿಸಿ, ಗೊಬ್ಬರ ಹಾಕಿ, ನೀರು ಹೊರಹೋಗದಂತೆ ಮಾಡುವುದು.

ಪಾತ್ರೆ = ಅಡಿಗೆ ಮಾಡುವ ಲೋಹದ ಉಪಕರಣಗಳು.

ಪಾದ = ೧.ಕಾಲು, ಅಡಿ, ಅಂಗಾಲು ಮತ್ತು ಮೇಗಾಲು, ೨. ಮುಂಡಿಗೆ ಕಂಬಕ್ಕೂ ನೆಲಕ್ಕೂ ಮಧ್ಯದಲ್ಲಿರುವ ಹಲಗೆ/ಚಪ್ಪಡಿ.

ಪಾದಕಲ್ಲು = ಕಂಬಗಳು ನೆಲದಲ್ಲಿ ಹೂತುಹೋಗದಂತೆ ಇಡುವ ಕಲ್ಲು, ಪಾದ.

ಪಾನಕ = ಹುಳಿ, ಸಿಹಿ ಮತ್ತು ಏಲಕ್ಕಿಯನ್ನು ಬೆರೆಸಿದ ನೀರು, ಶರಬತ್ತು.

ಪಾಪ = ತಪ್ಪು, ಕೆಟ್ಟದ್ದು ೨. ಸಾದು, ಮೃದುಸ್ವಭಾವ.

ಪಾಪಾಸು = ಕಳ್ಳಿ ಜಾತಿಯ ಮುಳ್ಳಿನ ಗಿಡ.

ಪಾಪಿ = ತಪ್ಪು ಮಾಡಿದವನು, ಕೇಡು ಬಗೆಯುವವನು, ತೊಂದರೆ–ಕೊಡುವವನು.

ಪಾಪಿಷ್ಟ = ಪಾಪಿ.

ಪಾಪು = ಹಸುಗೂಸು, ಚಿಕ್ಕಮಗು.

ಪಾಪೆ = ಕಣ್ಣಿನ ಗೊಂಬೆ.

ಪಾಯ = ಬುನಾದಿ, ತಳಹದಿ.

ಪಾಯಸ = ಹಾಲಿನಿಂದ ತಯಾರಿಸಿದ ಸಿಹಿಭಕ್ಷ್ಯ.

ಪಾಯ್ಖಾನೆ = ಮಲ, ಹೇಲು ೨. ಶೌಚಗೃಹ.

ಪಾಯ್ದೆ = ಲಾಭ, ಅನುಕೂಲ.

ಪಾರ = ಹಗಲೂ ರಾತ್ರಿ ಕಾಯುವುದು, ಕಾವಲು, ಪಾರಕಾಯೋದು.

ಪಾರಮಾರ್ಥಕತೆ = ಪ್ರಾಮಾಣಿಕತೆ.

ಪಾರ್ವಾಳ್ದ ಹಕ್ಕಿ = ಪಾರಿವಾಳ (ಬೂದು/ಬಿಳಿ ಬಣ್ಣದ ಹಕ್ಕಿ).

ಪಾರು = ತಪ್ಪಿಸಿಕೊಳ್ಳು, ಬಿಡುಗಡೆ ಹೊಂದು (ಕಷ್ಟದಿಂದ

ಪಾರಾಗು).

ಪಾರುಪತ್ತೆ = ಅಧಿಕಾರ, ಮೇಲ್ವಿಚಾರಣೆ.

ಪಾರೋತಿ = ದೇವತೆ, ಪಾರ್ವತಿ, ಶಿವನ ಮಡದಿ, ಪರ್ವತ ರಾಜನ ಮಗಳು.

ಪಾಲಾಗು = ಅಣ್ಣ ತಮ್ಮಂದಿರು ಆಸ್ತಿ ಮನೆಯನ್ನು ಹಂಚಿಕೊಂಡು ಬೇರೆ ಬೇರೆ ವಾಸಿಸುವುದು.

ಪಾಲು = ನಾಲ್ಕಾರು ಗ್ರಾಮಗಳನ್ನು ಸೇರಿಸಿದ ಸೀಮೆಯ ಒಂದು ಭಾಗ.

ಪಾಲು = ಭಾಗ, ವಿಭಾಗ.

ಪಾಲುದಾರ = ಭಾಗಸ್ಥ, ಒಂದು ಆಸ್ತಿ/ಮನೆ/ವಸ್ತುವನ್ನು ಪಡೆಯುವ ಹಕ್ಕುಳ್ಳವನು.

ಪಾವಲಿ = ನಾಣ್ಯ, ಹಿಂದಿನ ನಾಲ್ಕು ಆಣೆಯ ನಾಣ್ಯ.

ಪಾವ್ತಿ = ಹಣ ಸಂದಾಯ ಮಾಡುವುದು.

ಪಾವು = ಒಂದು ಅಳತೆ, ಚಟಾಕಿನ ನಾಲ್ಕರಷ್ಟು, ಒಂದು ಸೇರಿನ ನಾಲ್ಕನೇ ಒಂದು ಭಾಗ.

ಪಾಶ = ಹಗ್ಗ, ಸಾವು, ಯಮನಪಾಶ (ಅಲಂ).

ಪಾಷಾಣ = ವಿಷ.

ಪಾಸಾಂತ್ರ = ಪಾಸ್ಲೆ, ಪಾಸಲೆ, ಸುತ್ತಮುತ್ತ, ಸರಹದ್ದು.

ಪಾಸೆ = ಪಾಯಸ.

ಪಾಸ್ಲೆ = ಪಾಸಾಂತ್ರ.

ಪಿಂಡಹಾಕುವುದು = ಪಿತೃಗಳಿಗೆ ಅನ್ನಹಾಕುವುದು.

ಪಿಂಡಿ = ಕಟ್ಟು, ಕಂತೆ, ನಿರ್ದಿಷ್ಟ ಲೆಕ್ಕಾಚಾರದ ಕಟ್ಟು.

ಪಿಂಡಿನಾರು = ಪಿಂಡಿಗಿಡದಿಂದ ತೆಗೆದ ನಾರು.

ಪಿಕಳಾರ = ತಲೆಯ ಮೇಲೆ ಕೊಂಬಿರುವ ಬಣ್ಣಬಣ್ಣದ ಪುಟ್ಟಹಕ್ಕಿ.

ಪಿಕಾಸಿ = ಒಂದು ಕಡೆ ಚೂಪಾದ ಮೂತಿ, ಇನ್ನೊಂದು ಕಡೆ ಸ್ವಲ್ಪ ಅಗಲದ ಹಾರೆಯಿದ್ದು ಮಧ್ಯದಲ್ಲಿ ಮರದ ಕೋಲಿನ ಹಿಡಿಕೆಯಿರುವ ಮಣ್ಣು ಕಡಿಯುವ ಸಾಧನ.

ಪಿಚಗುಡಿ = ೧.ಗಾಯದಲ್ಲಿ ಹುಳವಾಗಿ ಒಂದೇ ಸಮನೆ ಮಿಸುಕಾಡುವುದು ೨.ಕೆಸರಲ್ಲಿ ಕಾಲಿಟ್ಟಾಗ ಆಗುವ ಮುಜುಗರ.

ಪಿಚಪಿಚ = ಪಿಚಗುಡಿ, ಕೆಸರು ಕೆಸರಾಗಿದೆ ಎಂದು ಹೇಳುವುದು.

ಪಿಟಾರಿ = ಮರದ ಪೆಟ್ಟಿಗೆ, ಮರದ ಸಂದೂಕ.

ಪಿಟ್ಟ = ಸಡಿಲವಾಗಿಲ್ಲದಿರುವುದು, ಉಡಲು ತೊಡಲು ಹಿಡಿಸದೇ ಇರುವುದು.

ಪಿತ್ಥ = ತಲೆಸುತ್ತು, ಹೊಟ್ಟೆತೊಳೆಸುವ ಒಂದು ರೋಗ.

ಪಿತ್ಥನೆತ್ತಿಗೇರು = ಬಹಳ ಕೋಪಗೊಳ್ಳು, ಕೋಪದಿಂದ ಕಿರುಚಾಡು, ವಿಪರೀತ ಕೋಪ, ಸೊಕ್ಕು, ಗರ್ವ. (ಅಲಂ)

ಪಿತ್ಥಕಾಂಬ್ಳಿ = ಕಾಮಾಲೆ, ಅರಿಸಿನ ಮುಂಡಿಗೆ.

ಪಿತೂರಿ = ಒಳಸಂಚು, ತಂತ್ರ, ಕಿತಾಪತಿ.

ಪಿತೃಪಕ್ಷ = ಮಾಲಾಯ, ಮಹಾಲಯ,

ಮಹಾಳಯ, ನವರಾತ್ರಿ ಅಮಾವಾಸ್ಯೆಯ ಹಿಂದಿನ ಹುಣ್ಣಿಮೆಯಿಂದ ಅಮಾವಾಸ್ಯೆ-ಯವರೆಗೆ ಒಂದು ದಿನ ಪಿತೃಗಳಿಗೆ ಮಾಡುವ ಹಬ್ಬ.

ಪಿನ್ನೇರ್ಲು ಮರ = ಬಹುದೊಡ್ಡ ಅಗಲವಾಗಿ ಬೆಳೆಯುವ ಮರ. ಕಡ್ಲೆಕಾಳು ಗಾತ್ರದ ಕೆಂಪು ಹಣ್ಣಾಗುವಾಗ ಮರದ ತುಂಬಾ ಹಕ್ಕಿಗಳು.

ಪಿರ್ಯಾದಿ = ದೂರು ಕೊಟ್ಟವನು.

ಪಿರ್ಯಾದು = ದೂರು.

ಪಿರಿಪಿರಿ = ೧.ಸಣ್ಣತೊಂದರೆ ಕೊಡು ೨.ಸದಾ ವಟಗುಟ್ಟು ೩.ಕುಟು ಕುಮಳೆ, ತುಂತುರು ಮಳೆ.

ಪಿರ್ಕಿ = ಹುಚ್ಚ, ತಲೆಹರಟೆ ೨. ನೀರನ್ನು ಹಾರಿಸುವ ಕೊಳವೆ, ಅಡಿಕೆ ಮರಕ್ಕೆ ಔಷಧಿ ಹಾಕುವ ಕೊಳವೆ.

ಪಿಲ್ಲೆ = ೧.ತುಂಡು, ಚೂರು, ೨. ಪದಕ ೩. ಕಾಲುಂಗುರ.

ಪಿಸಿಪಿಸಿ = ಗುನುಗು, ಗುಟ್ಟಾಗಿ ಮಾತಾಡು.

ಪಿಳಕಿ = ಮೊಳಕೆ, ಗಿಡದ ಬುಡದಿಂದ ಬರುವ ಚಿಗುರು.

ಪಿಳಿಪಿಳಿ = ಮುಗ್ಧತೆಯಿಂದ ಕಣ್ಣು ಮಿಟುಕಿಸುವುದು.

ಪಿಳ್ಳೆ = ೧. ಕೂಸು ೨. ಕೋಳಿಮರಿ

ಪಿಳ್ಳೆ ಮರ = ಸಣ್ಣ ಎಲೆಗಳ ಸಾಮಾನ್ಯ ಗಾತ್ರದ ಕಾಡುಮರ. ನಾಟಕ್ಕೆ ಆಗುವುದಿಲ್ಲ, ಕೊನೆ ತೆಗೆಯುವ ದೋಟಿಯ ತುದಿಗೆ ಕೊಕ್ಕೆ ಮಾಡಲು ಉಪಯೋಗಿಸುತ್ತಾರೆ. ಗಟ್ಟಿಯಾದ ಮರ ಇದರ ಸೌದೆ ಒಲೆಗೆ ಹಾಕಿದರೆ ಕೆಟ್ಟವಾಸನೆ.

ಪಿಳ್ಳೆ ಪಿಸ್ಕ = ೧.ಚಿಕ್ಕಮಕ್ಕಳು (ಅಲಂ) ೨.ಸಣ್ಣಪುಟ್ಟವು.

ಪೀಕದಾನಿ = ಉಗುಳುವ ಉದ್ದನೆಯ ಪಾತ್ರೆ

ಪೀಕು = ಉಗುಳು, ಕಕ್ಕು.

ಪೀಚು = ಬಡಕಲು, ಎಳೆಯದು, ಎಳಸು.

ಪೀಟ = ಗೇರು ಹಣ್ಣಿನ ತುದಿಯಲ್ಲಿರುವ ಬೀಜ.

ಪೀಠ = ದೇವರ ಮಂಟಪ, ಸಿಂಹಾಸನ.

ಪೀಡೆ = ೧.ದುಃಖ, ೨.ತೊಂದರೆ ೩.ರೋಗ ೪.ಪಿಶಾಚಿ, ದೆವ್ವ

ಪೀತಾಂಬ್ರ = ಬಂಗಾರದ ನೆಯ್ಗೆಯಿರುವ ಬಟ್ಟೆ

ಪೀಪಾಯಿ = ದೊಡ್ಡ, ಎತ್ತರದ, ಕಡಾಯಿಯಂತಹ ಡಬ್ಬ.

ಪೀಪಿ = ೧.ಊದುವ ಕೊಳವೆ, ೨. ಮರದ ಎಲೆಯನ್ನು ಸುರುಳಿಯಾಗಿ ಸುತ್ತಿ 'ಪೀ' ಎಂದು ಶಬ್ಧ ಮಾಡುವ ಮಕ್ಕಳ ಆಟಿಕೆ.

ಪೀಳಿಗೆ = ಸಂತತಿ, ವಂಶ, ಪರಂಪರೆ, ಮುಂದಿನ ಜನಾಂಗ.

ಪುಂಗಿ = ಹಾವಾಡಿಗರು ಊದುವ ಸೋರೆಬುರುಡೆಯ ವಾದ್ಯ.

ಪುಂಡ = ತಂಟೆಕೋರ.

ಪುಂಡಿ ನಾರಿನ ಕೋಲು = ಪುಂಡಿ ಸೊಪ್ಪಿನ ಗಿಡದ ಕೋಲು. ಇದರ ನಾರು ಹಗ್ಗ ಹೆಣೆಯಲು

ಬರುತ್ತದೆ.

ಪುಂಡಿ ಸೊಪ್ಪು = ಗೊಂಗರು, ಪುಂಡಿ ಗಿಡದ ಸೊಪ್ಪು, ಬೆಂಡೆಗಿಡದ ಎಲೆಯಂತೆ ಆಕಾರ, ಸೊಪ್ಪು ಹುಳಿಯಾಗಿರುತ್ತದೆ. ಆಹಾರವಾಗಿ ಬಳಕೆ.

ಪುಕಳಿ = ಪುಕ್ಕಿ, ಕುಂಡೆ, ತಿಕ, ಅಂಡು.

ಪುಕ್ಕ = ಹಕ್ಕಿಗಳ ಗರಿ, ತಿಪ್ಪಳ.

ಪುಕ್ಕಲ = ಹೇಡಿ, ಹೆದರುವವನು.

ಪುಕ್ಸಟ್ಟೆ = ಉಚಿತ, ಬಿಟ್ಟಿ, ಪುಕ್ಕಟ್ಟೆ.

ಪುಕ್ಕಳ = ಪುಕ್ಕ, ಗರಿ, ತಿಪ್ಪಳ.

ಪುಕಾರು = ಗಲಾಟೆ, ಜಗಳ, ದೂರು.

ಪುಕುಪುಕು = ಹೆದರಿಕೆ, ಭಯ (ಅಲಂ).

ಪುಕ್ಕು = ಹೆದರಿಕೆ, ಭಯ.

ಪುಕ್ಲು = ಹೆದರಿಕೆ, ಭಯ.

ಪುಗಸಾಟೆ = ಪುಕ್ಸಟ್ಟೆ.

ಪುಗ್ಗ = ೧.ಉಬ್ಬಿದ ಭಾಗ, ಬಲೂನು, ೨.ರವಿಕೆಯ ತೋಳು ಉಬ್ಬಿರುವುದು.

ಪುಗ್ಸಟ್ಟೆ = ಪುಕ್ಸಟ್ಟೆ.

ಪುಟಗೋಸಿ = ಬೆಲೆಯಿಲ್ಲದ, ಬಹು ಕೀಳಾದ.

ಪುಟ್ಟಂಪುರ್ಲೆ = ಬಟ್ಟೆಗೆ ಅಂಟಿಕೊಳ್ಳುವ ಗಿಡದ ಎಲೆ ಮತ್ತು ಬೀಜ.

ಪುಟ್ಬಾಳೆ = ಚಿಕ್ಕದಾದ ಒಂದು ಜಾತಿಯ ಬಾಳೆ.

ಪುಟಿ = ಗಾಡಿಯ ಚಕ್ರವನ್ನು ವೃತ್ತಾಕಾರ–ವಾಗಿಸಲು ಬಳಸುವ ಮರದ ಬಿಡಿ ಭಾಗಗಳು.

ಪುಡಿ = ಹಿಟ್ಟು, ಹುಡಿ, ಧೂಳು.

ಪುಡಿಗಾಸು = ಸ್ವಲ್ಪಹಣ, ಅಲ್ಪಲಾಭ.

ಪುಣುಗು = ಕಾಡು ಬೆಕ್ಕಿನ ವಾಸನೆ – ಅದರ ಗ್ರಂಥಿಯ ಸುವಾಸನೆ.

ಪುಣುಗಿನ ಬೆಕ್ಕು = ಕಾಡು ಬೆಕ್ಕಿನಂತೆ ಇದರ ಹಿಕ್ಕೆ ಪರಿಮಳ ಭರಿತ.

ಪುಣುಗಿನ ಚಟ್ಟು = ಪುಣುಗಿನ ಬೆಕ್ಕಿನ ತೊರಡು ಬೀಜವನ್ನು ಒಣಗಿಸಿದ್ದು, ಮೊಡವೆ ದೊಡ್ಡದಾದರೆ ಬೀಜವನ್ನು ಮುಟ್ಟಿಸಿದರೆ ವಾಸಿಯಾಗು ವುದೆಂಬ ನಂಬಿಕೆ.

ಪುಣ್ಯ = ಪಾಪವಿಲ್ಲದೆಯಿರುವುದು, ಸತ್ಕಾರ್ಯದಿಂದ ಸಂಪಾದಿಸಿದ ಒಳ್ಳೆಯ ತನ, ಗೌರವ.

ಪುನರೊಸು = ಪುನರ್ವಸು, ಒಂದು ಮಳೆ ನಕ್ಷತ್ರ.

ಪುನರ್ಪಾಕದ ಗಂಜಿ = ಬೇಯಿಸಿದ ಅನ್ನವನ್ನು ಮತ್ತೆ ಬೇಯಿಸಿ ಮೆತ್ತಗೆ ಮಾಡುವುದು.

ಪುನಾ = ಪುನಃ, ಮತ್ತೆ, ಮರಳಿ, ತಿರುಗಿ.

ಪುನಾಪುನ = ಪದೇ ಪದೇ, ಮತ್ತೆ ಮತ್ತೆ.

ಪುಬ್ಬೆ = ಪುಬ್ಬ, ಒಂದು ಮಳೆ ನಕ್ಷತ್ರ.

ಪುರಾಣ = ಹಳೆಯ ಕಥೆ, ಬಹುಹಿಂದಿನ ಕತೆ.

ಪುರಾವೆ = ಸಾಕ್ಷಿ.

ಪುರ್ಲೆ = ಜಿಗ್ಗು, ಸಣ್ಣ ಕಟ್ಟಿಗೆ/ಸೌದೆ.

ಪುರ್ಲೆ ಹಕ್ಕಿ = ಗುಬ್ಬಚ್ಚಿಯಂತಿರುವ ಇವುಗಳು ಕಬ್ಬಿನ ಹಿತ್ಲು, ಮುಂಡುಗನ ಹಿಂಡ್ಲಲ್ಲಿ ಗುಂಪಾಗಿರುತ್ತವೆ. ಕಾಲುಗಳು ಕಡ್ಡಿಯಂತೆ ಉದ್ದುದ್ದ.

ಪುರೇಸು = ಪೂರೈಸು, ನಿರ್ವಹಿಸು, ಮುಗಿಸು.

ಪುರ್ಸೊತ್ತು = ಬಿಡುವು, ಬಿಡುವಿನ ವೇಳೆ.
ಪುಸ್ತಕದ ಹುಳ = ಹಳೆಯ ಪುಸ್ತಕವನ್ನು ತಿನ್ನುವ ಕೀಟ, ಬೆಳ್ಳಿ ಮೀನು.
ಪುಸ್ಲಾಯ್ಸು = ಪೂಸಿ ಮಾಡು, ಮನಸ್ಸಿಗೆ ಹಿತವಾಗುವಂತೆ ಮಾತಾಡು, ಮನಸ್ಸು ಬದಲಾಯ್ಸು.
ಪುಸುಕ್ಕನೆ = ಒಮ್ಮೆಲೆ, ವಿಚಾರ ಮಾಡದೆ.
ಪುಸ್ಸೆ = ಪುಷ್ಯ, ಒಂದು ಮಳೆ ನಕ್ಷತ್ರ.
ಪುಳ್ಚಾರು = ಹುಣಿಸೆ ಹಣ್ಣಿನ ಸಾರು.
ಪೂಜೆ = ದೇವರನ್ನು ಪೂಜಿಸುವುದು, ದೇವರಕಾರ್ಯ, ದೈವಸ್ತುತಿ ಮಾಡು.
ಪೂಟು ಖರಾಬು = ದಾರಿಗಾಗಿ ಮೀಸಲಾದ ಸರ್ಕಾರಿ ಜಮೀನು.
ಪೂರ = ತುಂಬಾ, ಪೂರ್ತಿ, ಎಲ್ಲಾ.
ಪೂರ್ತಿ = ಎಲ್ಲಾ, ಪೂರ್ಣ.
ಪೂರ್ವೀಕ್ರು = ಪೂರ್ವಿಕರು, ಹಿಂದೆ ಆಗಿ ಹೋದವರು, ಪೂರ್ವಜರು.
ಪೂರೇಸು = ಮುಗಿಸು.
ಪೂರೇಸ್ತು = ಮುಗಿಯಿತು.
ಪೂಸಿಮಾಡು = ಪುಸಲಾಯಿಸು.
ಪೆಂಟೆ = ಮಣ್ಣಿನ ಹೆಂಟೆ, ಮಣ್ಣಿನ ಮುದ್ದೆ.
ಪೆಕ್ರ = ಪೆದ್ದ, ಬುದ್ಧಿಗೇಡಿ.
ಪೆಚ್ಚು = ಬಾಡಿದ ಮುಖ.
ಪೆಟ್ಗಿ = ಸಂದೂಕ, ಪೆಟ್ಟಿಗೆ.
ಪೆಟ್ಟು = ಹೊಡೆತ, ಗುದ್ದು.
ಪೆಟ್ಲು = ಬಿದಿರಿನ ಆಟಿಕೆ, ಸಣ್ಣ ರಂಧ್ರವಿರುವ ಬಿದಿರಿಗೆ ಗಜಹಾಕಿ, ಅರಮರ್ಲು ಕಾಯಿ ಹಾಕಿ ಬಂದೂಕಿನ ಗುಂಡು ಹಾರಿಸಿದಂತೆ ಹೊಡೆಯುವ ಆಟಿಕೆ.
ಪೆಟ್ಲುಕಾಯಿ = ಅರ್ಮರ್ಲು ಕಾಯಿ, ಬಲಿತಕಾಯಿಗಳನ್ನು ಪೆಟ್ಲಿಗೆ ಹಾಕಿ ಹೊಡೆದರೆ 'ಪಟಾರ್' ಎಂಬ ಶಬ್ಧ ಬರುತ್ತದೆ. ಎಳೆಯ ಕಾಯಿಗಳು ಉಪ್ಪಿನ ಕಾಯಿ ಜೊತೆ ಸೇರಿಸುತ್ತಾರೆ.
ಪೆದ್ನ = ಹೆಡ್ಡತನ, ಬುದ್ಧಿಗೇಡಿತನ.
ಪೇಚಾಟ = ಇಕ್ಕಟ್ಟು.
ಪೇಟ = ರುಮಾಲು.
ಪೇಟೆ = ಸಣ್ಣ ಪಟ್ಟಣ, ಪ್ಯಾಟೆ.
ಪೇರ್ಲ ಹಣ್ಣು = ಪೇರಳೆ ಹಣ್ಣು, ಸೀಬೆಹಣ್ಣು, ಪ್ಯಾರ್ಲಹಣ್ಣು.
ಪೈಕಿ = ಬುಡ, ವಂಶ, ಜಾತಿ.
ಪೈಪೋಟಿ = ಸ್ಪರ್ಧೆ, ಒಬ್ಬರನ್ನೊಬ್ಬರು ಮೀರಿಸುವುದು.
ಪೈರು = ಧಾನ್ಯದ ಬೆಳೆ, ಸಸಿ.
ಪೊಟ್ರೆ = ಪೊಟರೆ, ಬಿಲ, ಮರದ ಡೊಗರು.
ಪೊಳ್ಳು = ೧.ಹುರುಳಿಲ್ಲದುದು, ವ್ಯರ್ಥವಾದ ಅರ್ಥವಿಲ್ಲದ ಮಾತು, ಬೊಗಳೆ ೨.ಸುಳ್ಳು ಹೇಳುವವನು.
ಪೋಟ್ಲೀಸು = ಕೆಲವು ಔಷಧಿಯುಕ್ತ ತೆಪ್ಪೆ/ರಾಗಿ ಹಿಟ್ಟನ್ನು ಅರೆದು ಬಿಸಿಮಾಡಿ ಬಾವು, ಕುರಗಳಿಗೆ

ಹಾಕುವುದರಿಂದ ಬಾವು ಒಡೆದು, ಕೀವು ರಕ್ತ ಸೋರಿ, ನೋವು ಕಡಿಮೆಯಾಗುವುದು.

ಪೋಲು = ಹಾಳುಮಾಡುವುದು, ವ್ಯಯ ಮಾಡುವುದು.

ಪ್ರಕಾರ = ರೀತಿ, ಬಗೆ.

ಪ್ರಚಂಡ = ಅಸಾಮಾನ್ಯ ವ್ಯಕ್ತಿ. ಭಯಂಕರ.

ಪ್ರತಿಷ್ಠೆ = ೧.ಘನತೆ, ಗೌರವ ೨. ಗರ್ವ, ಸೊಕ್ಕು.

ಪ್ರತೀಸಲ = ಯಾವಾಗಲೂ, ಪ್ರತಿಬಾರಿ.

ಪ್ರಭಾತಭೇರಿ = ಮೆರವಣಿಗೆ, ಸ್ವಾತಂತ್ರ್ಯ ಹಾಗು ದೇಶಭಕ್ತಿಗೆ ಸಂಬಂಧಪಟ್ಟ ಜಾಥಾ.

ಪ್ರಮಾದ = ಅಜಾಗರೂಕತೆಯಿಂದ ಮಾಡಿದ ತಪ್ಪು.

ಪ್ರಸ್ತಾಪ = ಪ್ರಾರಂಭದ ಮಾತು, ವಿಷಯವನ್ನು ಮಂಡಿಸು.

ಪ್ಯಾಟೆ = ಪೇಟೆ, ಸಣ್ಣ ಪಟ್ಟಣ.

ಪ್ರಾಣ = ಜೀವ.

ಪ್ರಾಮಾಣಿಕ = ನಂಬಿಗಸ್ಥ.

ಪ್ಯಾರ್ಲಹಣ್ಣು = ಪೇರಲೇಹಣ್ಣು, ಸೀಬೆಹಣ್ಣು.

ಪ್ರಾಯ = ವಯಸ್ಸು, ಯೌವ್ವನ.

ಪ್ರಾರಂಭ = ಮೊದಲು, ಶುರು.

ಪ್ರಾರಬ್ಧ = ದುರದೃಷ್ಟ.

ಪ್ರಾಯಶಃ = ಬಹುಶಃ, ಇರಬಹುದು.

ಫ

ಫಟಿಂಗ = ನೀತಿಗೆಟ್ಟವನು.

ಫಸಲು = ಬೆಳೆ.

ಫಿರ್ಯಾದಿ = ನ್ಯಾಯಾಲಯಕ್ಕೆ ನೀಡುವ ದೂರು.

ಫಿರ್ಯಾದುದಾರ = ನ್ಯಾಯಾಲಯಕ್ಕೆ ದೂರು ನೀಡಿದವನು.

ಬ

ಬಂಗ = ಕಷ್ಟ, ತೊಂದರೆ.

ಬಂಗಡೆ = ಒಂದು ಜಾತಿಯ ಸಮುದ್ರದ ಮೀನು.

ಬಂಗದ ಕೂಳು = ಹಂಗಿನ ಊಟ, ಬೇರೆಯವರನ್ನು ಆಶ್ರಯಿಸ ಬೇಕಾದ ಅನಿವಾರ್ಯತೆ. (ಅಲಂ)

ಬಂಗಾರ = ಚಿನ್ನ, ಕನಕ, ಹೊನ್ನು.

ಬಂಗಿ = ಮಾದಕ ವಸ್ತು, ಮತ್ತು ಬರಿಸುವ ಗಿಡದ ಸೊಪ್ಪು.

ಬಂಗಿಸೇದು = ಮಾದಕ ವಸ್ತು ಸೇವನೆ.

ಬಂಗ್ಡೆ = ಬಂಗಡೆ.

ಬಂಗ್ಲೆ ಹೂ = ಪೊದೆ, ಮುಳ್ಳಿರುತ್ತವೆ. ಬಣ್ಣ ಬಣ್ಣದ ಹೂ. ಬೇಗ ಬಾಡುವುದಿಲ್ಲ.

ಬಂಜರು = ಏನೂ ಬೆಳೆಯದ ನಿಸ್ಸಾರ ಭೂಮಿ.

ಬಂಜೆ = ಹಡೆಯಲಾಗದವಳು, ಮಕ್ಕಳಿಲ್ಲದವಳು.

ಬಂಟ = ನೆಂಟನಲ್ಲದವನು.
ಬಂಟರು = ತುಳುನಾಡಿನವರು.
ಬಂಡ = ಮಾನ ಮರ್ಯಾದೆಯಿಲ್ಲದವನು.
ಬಂಡಗೆಟ್ಟ = ಮಾನವಿಲ್ಲದ, ಮರ್ಯಾದೆ ಬಿಟ್ಟ.
ಬಂಡಗೇಡಿ = ಬಂಡ, ನಾಚಿಕೆಯಿಲ್ಲದವ್ನ.
ಬಂಡಾಟ = ಒದ್ದಾಟ, ಕಷ್ಟ , ತೊಂದರೆ.
ಬಂಡ್ವಾಳ = ಅಸಲು, ತೊಡಗಿಸುವ ಹಣ.
ಬಂಡೆ = ದೊಡ್ಡ ಕಲ್ಲು, ಕಲ್ಲಿನ ಬೆಟ್ಟ, ಅರೆ.
ಬಂಡೆಕಲ್ಲು = ಬಂಡೆ.
ಬಂತು = ಬಂದಿತು, ಬಂದಿದೆ, ಬಂದರು (ಅಮ್ಮ ಬಂತು).
ಬಂದ = ಬಂದನು, ಬಂದಿದ್ದಾನೆ (ಪು).
ಬಂದಣಿಕೆ = ಪರಾವಲಂಬಿ ಸಸ್ಯ, ಬಂದಳಿಕಿ.
ಬಂದಳಿಕಿ = ಬಂದಣಿಕೆ.
ಬಂದ್ಯಾ = ಬಂದೆಯಾ.
ಬಂದ್ರಾ = ೧.ಬಂದಿದ್ದೀರಾ ೨.ಬಂದಿದ್ದಾರಾ, ೩.ಮನೆಗೆ ಬಂದ ಅತಿಥಿಗಳನ್ನು ಬರಮಾಡಿಕೊಳ್ಳುವಾಗ ಹೇಳುವ ಗೌರವ ಸೂಚಕ ಪದ, ಬಂದ್ರೆ.
ಬಂದಿಸರ್ಗಿ = ಮದುವೆಯಲ್ಲಿ ಹಸೆಗೆ ಕೂರುವ ಮೊದಲು ಹಾಕುವ ತಾಮ್ರದ/ಚಿನ್ನದ ಸರಿಗೆ ಮತ್ತು ತಾಳಿ
ಬಂದ್ಲು = ಬಂದಳು, ಬಂದಿದ್ದಾಳೆ (ಸ್ತ್ರೀ).
ಬಂದೆ = ಬಂದಿದ್ದೇನೆ, ಬರುತ್ತೇನೆ.
ಬಂದ್ರೆ = ೧.ಬಂದರೆ ೨.ಮನೆಗೆ ಬಂದ ಅತಿಥಿಗಳನ್ನು ಬರಮಾಡಿಕೊಳ್ಳುವ ಗೌರವ ಸೂಚಕ ಪದ.
ಬಕ = ಕೊಕ್ಕರೆ.
ಬಕ್‌ಲಕ್ಕಿ = ಮಡ್ಲಕ್ಕಿ, ಅಕ್ಕಿ, ಹಣ್ಣು, ಕಾಯಿ, ಎಲೆ, ಅಡಿಕೆ, ಬಳೆ ಮುಂತಾದುವನ್ನು ಮಡಿಲಿಗೆ ತುಂಬುವುದು.
ಬಕಾಸುರ = ದೊಡ್ಡ ದೊಡ್ಡ ತುತ್ತು ತಿನ್ನುವವನು, ಹೊಟ್ಟೆ ಬಾಕ (ಅಲಂ) ಮಹಾಭಾರತದಲ್ಲಿ ಬರುವ ಒಂದು ರಾಕ್ಷಸ ಪಾತ್ರ.
ಬಕ್ಕೆ = ೧.ಗುಳ್ಳೆ, ಕುರ, ೨.ಹಲಸಿನ ಹಣ್ಣಿನಲ್ಲಿ ಗಟ್ಟಿಯಾದ ಸೋಳೆಯಿರುವ ಒಂದು ಜಾತಿ.
ಬಕ್ಸೆ = ಬೊಗಸೆ, ಹಿಡಿ.
ಬಗನಿ = ಬೈನೆ, ತೆಂಗಿನ ಜಾತಿಗೆ ಸೇರಿದ ಕಾಡು ಮರ, ಬೈನೆ.
ಬಗನಿಕಳ್ಳು = ಬಗನಿಮರದ ಕಾಯಿಯ ಗೊಂಚಲು ಎಳೆಯದಾಗಿದ್ದಾಗ ಅದಕ್ಕೆ ಮಡಿಕೆ ಕಟ್ಟಿ ಒಂದು ರೀತಿಯಲ್ಲಿ ಸಂಗ್ರಹಿಸಿದ ರಸ.
ಬಗನಿಮರ = ಬಗನಿ, ಬೈನೆ ಮರ, ಇದರ ಕಾಯಿ ಕಾಡು ಬೆಕ್ಕುಗಳ ಆಹಾರ, ಕಾಯಾಗುವ ಮೊದಲು ಕಳ್ಳು ತೆಗೆಯುತ್ತಾರೆ.
ಬಗ್ಡ = ಕೆಸರು, ರಾಡಿ, ತಳದಲ್ಲಿ ನಿಂತಿರುವ ಮಣ್ಣು.
ಬಗರ್‌ಹುಕುಂ = ಸರ್ಕಾರಿ ಜಮೀನನ್ನು ಸಾಗುವಳಿ ಮಾಡಿಕೊಳ್ಳುವುದು.
ಬಗಬಗ್ನೆ = ಬೇಗ ಬೇಗನೆ, ತರಾತುರಿಯಲ್ಲಿ.
ಬಗ್ತಲೆ = ಬಗತಲೆ, ಕೂದಲನ್ನು ಎರಡು

ಭಾಗ ಮಾಡಿದಾಗ ತಲೆಯಲ್ಲಿ ಕಾಣುವ ಬರುಡೆ.

ಬಗ್ರಗಾಲು = ಡೊಂಕಾಗಿರುವ ಕಾಲು, ಅಟ್ಟೆಕಾಲು.

ಬಗಿ = ಸೀಳು, ಒಡೆಯುವುದು.

ಬಗ್ನೆ = ೧.ಬಗನೆ, ಬೈನೆಮರ, ಬಲಿತಮರದಿಂದ ಒನಕೆ, ನೇಗಿಲಿನ ಈಸು ಮಾಡುತ್ತಾರೆ. ೨. ಬೇಗನೆ .

ಬಗುಳು = ಬೊಗಳು, ನಾಯಿಯ ಕೂಗು.

ಬಗ್ಲ = ಬಗಲು, ಕಂಕುಳು.

ಬಗ್ಲಸಂಧಿ = ಕಂಕಳಿನಲ್ಲಿ, ಬಾಹುಮೂಲ.

ಬಗ್ಗು = ೧.ಬಾಗು, ೨.ಸೋಲೊಪ್ಪಿ-ಕೊಳ್ಳುವುದು. (ಅಲಂ)

ಬಗ್ಸು = ಬಗ್ಗಿಸು, ಬಾಗಿಸು, ಸುರಿ.

ಬಗೆ = ೧. ಯೋಚಿಸು, ಭಾವಿಸು ೨.ರೀತಿ, ರಿವಾಜು.

ಬಗೆಹರಿ = ತೀರ್ಮಾನ, ಇತ್ಯರ್ಥ.

ಬಗ್ಸೆ = ಬೊಗಸೆ, ಎರಡು ಹಸ್ತಗಳನ್ನು ಒಟ್ಟಿಗೆ ಹಿಡಿಯುವುದು (ಬಟ್ಟಲಾಕಾರದಲ್ಲಿ).

ಬಚಕಾನೆ = ನಾಲ್ಕು ಮೊಳದ ಮುಂಡು ಪಂಚೆ.

ಬಚ್ಚಲು = ಸ್ನಾನ ಮಾಡುವ ಸ್ಥಳ, ನೀರುಮನೆ.

ಬಚ್ಚಿ = ಉದ್ದಗಲ್ಲ ಮುಂದಕ್ಕೆ ಬಾಗಿರುವವಳು, ಕೆಳದವಡೆ ಮುಂದೆ ಬಂದಿರುವವಳು.

ಬಚ್ಚಿದ್ದು = ಇಂಗಿಸಿದ್ದು, ಗಟ್ಟಿಯಾಗಿ ಬೇಯಿಸಿದ್ದು.

ಬಚ್ಚಿದ್ಮೀನು = ಮಸಾಲೆ ಹಾಕಿ ಕುದಿಸಿ ಇಂಗಿಸಿದ ಮೀನು.

ಬಚ್ಚು = ಬಾಡಿಸು, ಇಂಗಿಸು.

ಬಚ್ಲೆ = ಬೆತ್ತಲೆ, ನಗ್ನ.

ಬಜ್ಜ = ಸತ್ತವರಿಗೆ ಹನ್ನೊಂದನೇ ದಿನ ಮಾಡುವ ಕ್ರಿಯೆ, ತಿಥಿ, ಉತ್ತರಕ್ರಿಯೆ.

ಬಜ್‌ಬೆಣ್ಣೆ = ನಾಲಿಗೆ ತೊಡಕಾಗ ದಿರಲೆಂದು ಬಜೆಯನ್ನು ಬೆಣ್ಣೆಯೊಂದಿಗೆ ತೇದು ಮಗುವಿನ ನಾಲಿಗೆಗೆ ನೆಕ್ಕಿಸುವುದು.

ಬಜೆ = ಔಷಧಿ ಬೇರು.

ಬಟವಾಡೆ = ಸಂಬಳವನ್ನು/ಸಂಬಳದ ಹಣವನ್ನು ಹಂಚುವುದು, ನಿಗದಿತದಿನ ಕೊಡುವ ಸಂಬಳ.

ಬಟ್ಟಗೆ = ಅಲ್ಲಿಂದಲ್ಲಿಗೆ, ಹೆಚ್ಚೂ ಆಗದೆ – ಕಡಿಮೆಯೂ ಆಗದಿರುವುದು, ಹದವಾದ ಎತ್ತರ/ದಪ್ಪವಿರುವುದು.

ಬಟ್ಟೆ ಇಳಿಸು = ಸಾರಾಯಿ ಮಾಡು.

ಬಟ್ಟೆಚಾರು = ಕರುಳುಜಾರು, ಕರುಳು ಸ್ಥಳಪಲ್ಲಟವಾಗುವುದು, ಇದರಿಂದ ತುಂಬಾನೋವಾ ಗುವುದು.

ಬಟ್ಟು = ೧.ತೂಕದ ಕಲ್ಲು ೨.ಮೂಗುತಿ ೩.ಕುಂಕುಮ.

ಬಟ್ಲು = ಅಗಲವಾದ ತಟ್ಟೆ, ಹರಿವಾಣ.

ಬಟ್ಟೆ = ಉಡುಪು, ವಸ್ತ್ರ.

ಬಟ್ಟೆಹರಡು = ವಸ್ತ್ರಗಳನ್ನು ಒಣಗಲು ಹಾಕು.

ಬಡಕಟ್ಟೆ = ಕೃಶ, ಬಡಕಲು, ಒಣಗಿದ.

ಬಡಕಿ = ಬಡ್ಗಿ, ಬಡ್ಕಿ, ಹೊಡೆಯುವ ಕೋಲು, ದೊಣ್ಣೆ.

ಬಡಕ್ಲು = ಬಾಡಿದ, ಬತ್ತಿಹೋದ, ಸೊರಗಿದ.

ಬಡ್ಗತ್ತಿ = ಹರಿತವಿಲ್ಲದ ಕತ್ತಿ.

ಬಡಗಿ = ೧.ಮರಗೆಲಸಮಾಡುವವನು, ೨. ದೊಣ್ಣೆ, ಕೋಲು, ಬಡ್ಗಿ.

ಬಡಬಡಿಸು = ಅರ್ಥವಾಗದಂತೆ ಮಾತಾಡು, ಬಾಯಿಗೆ ಬಂದಂತೆ ಹರಟು.

ಬಡಪಟ್ಟು = ಸಾದಾರಣಕ್ಕೆ, ಸಾಮಾನ್ಯ ಹೊಡೆತಕ್ಕೆ ಬಗ್ಗದಿರುವುದು.

ಬಡಸ್ತನ = ಬಡತನ.

ಬಡಪಾಯಿ = ದಿಕ್ಕಿಲ್ಲದ, ಅನಾಥ.

ಬಡಾಯಿ = ಆತ್ಮಸ್ತುತಿ, ಜಂಭ ಕೊಚ್ಚು ತನಗೆ ಗೊತ್ತಿಲ್ಲದ್ದನ್ನೂ ಗೊತ್ತಿರುವಂತೆ ಹೇಳಿಕೊಳ್ಳುವುದು.

ಬಡಿ = ೧.ಹೊಡೆ, ಪೆಟ್ಟುಕೊಡು, ಸಾಯಿಸು ೨. ಹಚ್ಚು. ಮೆತ್ತು, ಬಳಿ.

ಬಡ್ಕಿ = ಬಡಕಿ.

ಬಡ್ಗಿ = ಬಡಗಿ.

ಬಡ್ಡಿ = ಕೊಟ್ಟ ಹಣಕ್ಕೆ ಹೆಚ್ಚುವರಿ ಹಣ ಪಡೆಯುವುದು.

ಬಡಿವಾರ = ಹೆಬ್ಬುಬ್ಬೆ, ಬಡಾಯಿ,

ಬಡು = ಬಾಡು, ಮಾಂಸ, ಹುರಿದ ತುಂಡು.

ಬಡ್ಡು = ೧.ಕೆೊಳೆ, ಮಣ್ಣು, ೨.ಹರಿತವಿಲ್ಲದ, ಮಂಡ ೩. ದಡ್ಡ, ಚುರುಕಿಲ್ಲದ. (ಅಲಂ)

ಬಡ್ಡೆ = ಮರದ ಬುಡ, ಕಾಂಡ.

ಬಣ್ಣದ ಸೌತೆಕಾಯಿ = ಗದ್ದೆ ಸೌತೆಕಾಯಿ.

ಬಣಾಲೆ = ಬಾಂಡಲೆ, ಬಾಂಡ್ಲೆ, ತಳ ಗುಂಡಗಿದ್ದು ಅಗಲ ಬಾಯಿರುವ ಪಾತ್ರೆ/ವಸ್ತು.

ಬತ್ತ = ಒಂದು ಮುಖ್ಯ ಆಹಾರಧಾನ್ಯ.

ಬತ್ತದ ಚಿಟ್ಟೆ = ಬತ್ತ ಹಳೆಯದಾಗುತ್ತ ಬಂದಂತೆ ಅದರಲ್ಲಿ ಹುಟ್ಟಿಕೊಳ್ಳುವ ಸಣ್ಣ ಚಿಟ್ಟೆ.

ಬತ್ತದ ಹೊಡೆ = ಬತ್ತದ ಕದಿರು, ಬತ್ತದ ತೆನೆ.

ಬತ್ತದೆ = ಬರುತ್ತದೆ.

ಬತ್ತಾಬತ್ತಾ = ಬರುಬರುತ್ತಾ, ಈಚೀಚೆಗೆ.

ಬತ್ತಾನೆ = ಬರುತ್ತಾನೆ (ಪು).

ಬತ್ತಾರೆ = ಬರುತ್ತಾರೆ (ಬ.ವ).

ಬತ್ತಾಳೆ = ಬರುತ್ತಾಳೆ (ಸ್ತ್ರೀ).

ಬತ್ತಾಸು = ಸಕ್ಕರೆಯ ಮಿಠಾಯಿ.

ಬತ್ತಿ = ಹತ್ತಿಯಿಂದ ಮಾಡಿದ ದಾರ, ತೆಳು ಬಟ್ಟೆಯಿಂದ ದಾರದಂತೆ ಹೊಸೆದಿದ್ದು.

ಬತ್ತಿ ಕೋವಿ = ಹಳೆಯ ಕಾಲದ ಒಂದು ಬಂದೂಕು, ಯಾರಾದ್ರೂ ಸತ್ತಾಗ, ತೊಟ್ಲು ಶಾಸ್ತ್ರಕ್ಕೆ, ಮುಂತಾದ ವಿಶೇಷ ಸಂದರ್ಭದಲ್ಲಿ ಬಳಸುತ್ತಿದ್ದರು.

ಬತ್ತಿ ಹಣ್ಣು = ಕಾಡಿನಲ್ಲಿ ಬೆಳೆಯುವ ಹುಳಿಹಣ್ಣು.

ಬತ್ತು = ಒಣಗು, ಇಂಗು, ಬಾಡು.

ಬದನೆ = ಒಂದು ತರಕಾರಿ.

ಬದ್ದ = ಸತ್ಯ, ನಿಜ.
ಬದ್ಧವೈರ = ಪರಸ್ಪರ ಹಗೆ, ದ್ವೇಷ.
ಬದ್ದಾಗ್ಲೂ = ನಿಜವಾಗಿಯೂ, ಪ್ರಮಾಣವಾಗಿಯೂ.
ಬದಿ = ಪಕ್ಕ, ಹತ್ತಿರ.
ಬದುಕು = ೧.ಬಾಳು, ಜೀವನ, ೨.ಜೀವನವೋಪಾಯ.
ಬದ್ನೆಕಾಯಿ = ಬದನೆಕಾಯಿ, ಒಂದು ತರಕಾರಿ, ಬದನೆ
ಬನ = ಕಾಡು, ವನ, ದೈವದ ಕಲ್ಲುಗಳಿರುವ ಜಾಗ (ನಾಗರಬನ, ಚೌಡಿಬನ).
ಬನಕ್ಲು = ಅಂಟಿಕೊಂಡಿರುವ ಕೊಳೆ.
ಬನಿ = ಸತ್ವ, ಸಾರ.
ಬನ್ನಿ = ಬಾ ಎಂದು ಕರೆಯುವ ಪದ (ಬ.ವ).
ಬಮ್ಮಡಿ ಹೊಡಿ = ಎಷ್ಟು ಕೇಳಿಕೊಂಡರು, ಬಾಯಿ ಬಡಕೋ, ಕೂಗು (ಈ ಮಕ್ಕಳಿಗೆ ಬಮ್ಮಡಿ ಹೋಡದ್ರೂ ಕೇಳಲ್ಲ).
ಬಯಕೆ = ಆಸೆ, ಸೀಮಂತ.
ಬಯಕೆ ಹಾಕು = ಬಸುರಿ ಹೆಂಗಸಿಗೆ ಆಕೆಯ ಇಷ್ಟದ ತಿಂಡಿ ಊಟ ಗಳನ್ನು ಮಾಡಿಕೊಡುವ ಒಂದು ದಿನ, ಸೀಮಂತ
ಬಯಿನೆ ಹಿಡಿ = ಬೈನೆ ಹಿಡಿ, ಬೈನೆ ಮರದ ಹೆಡಲು ಕಡಿದು ಕಣದಲ್ಲಿರುವ ಬತ್ತದ ಮೇಲಿರುವ ಹುಡಿ ಹುಲ್ಲನ್ನು ತೆಗೆಯಲು ಪೊರಕೆಯಂತೆ ಬಳಸುವುದು.
ಬಯ್ಗು = ಸಂಜೆ, ಇಳಿಹೊತ್ತು.
ಬಯ್ಗ್ಗೆ = ಸಂಜೆಹೊತ್ತಿಗೆ, ಸಾಯಂಕಾಲಕ್ಕೆ.
ಬರ = ಕಡಿಮೆಯಾಗಿರುವಿಕೆ, ಕ್ಷಾಮ, ಕೊರತೆ, ೨. ರಭಸ, ವೇಗ (ಎಂಥಾಬರ ಮಳೆ ಬಂತು).
ಬರ್ಕ = ಕುರಿಯಂತೆ ಸಣ್ಣಗಿರುವ ಕಾಡಿನ ಪ್ರಾಣಿ, ಬೆನ್ನಿನ ಮೇಲೆ ಮೂರು ಸುಂದರವಾದ ಪಟ್ಟಿಯಿರುತ್ತದೆ. ಮೊಲಕ್ಕಿಂತ ಸ್ವಲ್ಪ ದೊಡ್ಡ ಗಾತ್ರ
ಬರ್ಕತ್ತು = ಉದ್ದಾರ, ಉಳಿವು, ಬಿಡುಗಡೆ, ಬರಕತ್ತು.
ಬರ್ಕತ್ತಾಗಂಗಿಲ್ಲ = ಉಳಿಗಾಲವಿಲ್ಲ, ತಪ್ಪಿಸಿಕೊಳ್ಳುವಂತಿಲ್ಲ, ಉದ್ಧಾರ ವಾಗಲ್ಲ.
ಬರಗಾಲ = ಕ್ಷಾಮ, ಬರ.
ಬರಗುಡಿಸು = ಶಬ್ಧಮಾಡು (ಅಲಂ) (ಏನು ಬರಗುಡಿಸುತ್ತಿ?).
ಬರಗೆಟ್ಟಂಗೆ = ಅನ್ನಕಾಣದವರ ಹಾಗೆ, ಹೊಟ್ಟೆಗಿಲ್ಲದವರಂತೆ ಬೇಗು.
ಬರಬ್ಬರಿ = ತುಂಬಾ, ಹೇರಳ, ಬರೋಬ್ಬರಿ.
ಬರಬರ = ಶಬ್ಧವಾಗುವುದನ್ನು ಹೇಳು (ಅಲಂ).
ಬರಾಟೆ = ರಭಸ, ಜೋರು.
ಬರಾವರ್ದು ಹಕ್ಕು = ಹಿಂದಿನಿಂದ ಬಂದ, ವಂಶಪಾರಂಪರ್ಯವಾಗಿ ಬಂದ ಹಕ್ಕು.
ಬರಾವು = ಬರಹ, ಓದುಬರಹ, ವಿದ್ಯೆ.
ಬರಿಟೆ = ಸುಮ್ಮನೆ, ವ್ಯರ್ಥವಾಗಿ, ಖಾಲಿಯಾಗಿ.

ಬರಿಬೆತ್ಲೆ = ಸಂಪೂರ್ಣ ಬೆತ್ತಲು, ನಗ್ನ.

ಬರಿಸಬು = ಕಜ್ಜಿಯಿಲ್ಲದೆ ಬರಿ ತುರಿಕೆ ಬರುವ ಒಂದು ಚರ್ಮರೋಗ.

ಬರೀ = ಕೇವಲ.

ಬರುವುದು = ಹಿಂತಿರುಗುವುದು, ವಾಪಸ್ಸಾಗುವುದು.

ಬರ್ಲು = ೧.ಪೊರಕೆ ೨.ಉತ್ತರಾಣಿಗಿಡದ ಹಿಡಿ.

ಬರೆ = ೧.ಗೆರೆ, ಗುರುತು ೨.ಧರೆ.

ಬರೆಹಾಕು = ಸುಡು ೨. ಮೈಮೇಲೆ ಕಾದ ಕಬ್ಬಿಣದಿಂದ ಗುರುತು ಮಾಡು.

ಬರ್ಗೆಟ್ಟು = ಬಹಳ ಹಸಿದು, ಬರದಿಂದ ಕಂಗೆಟ್ಟು.

ಬಲ್ಗಡೆ = ಬಲಗಡೆ, ಬಲಭಾಗ, ಬಲಮಗ್ಗುಲು.

ಬಲಗಡೇವ್ನ= ಮದುಮಗನ ಜೊತೆಗಾರ.

ಬಲಗಣೆಮರ = ತುಂಬಾ ಗಟ್ಟಿಮರ, ದಾವಣೆಯ ಬೇಟಿಗೆ ಮತ್ತು ಬುಗುರಿ ಮಾಡಲು ಉಪಯೋಗಿಸುತ್ತಾರೆ.

ಬಲಗೊಡತಿ = ಮದುಮಗಳ ಜೊತೆಗಾತಿ.

ಬಲಮಗ್ಲು = ಮಲಗಿದಾಗ ಬಲಭಾಗ.

ಬಲ್ಲಿ = ಬನ್ನಿ.

ಬಲೆ = ನೇಯ್ದ ಹಗ್ಗದ ಜಾಲ, ಜೇಡರ ಬಲೆ.

ಬಸವ = ಗೂಳಿ, ಹೋರಿ, ಅಲಂಕಾರ ಮಾಡಿದ ಎತ್ತು.

ಬಸವನ್ನ ಆಡ್ಸವ್ನ= ಎತ್ತಿಗೆ ಅಲಂಕಾರ ಮಾಡಿ ಮನೆಮನೆಗೆ ಕರೆತಂದು ಭಿಕ್ಷೆ ಬೇಡುವವ.

ಬಸವನ ಹುಳ = ಸಗಣಿಯನ್ನು ಉಂಡೆ ಮಾಡಿಕೊಂಡು ಕಚ್ಚಿಕೊಂಡು ಹರಿದಾಡುವ ಕೀಟ.

ಬಸವಳಿ = ಸಾಕಾಗು, ಸುಸ್ತಾಗು.

ಬಸರಿ = ಗರ್ಭಿಣಿ, ಗರ್ಭವತಿ.

ಬಸರಿಮರ = ಗೋಳಿ ಮರದಂತೆ ಬೇರೆ ಮರದ ಪೊಟರೆಯೊಳಗೆ ಬೀಜಬಿದ್ದು ಅಲ್ಲಿಯೇ ಗಿಡಬೆಳೆದು ಬೇರು ನೆಲದವರೆಗು ಹೋಗಿ ಮರವಾಗಿ ಬೆಳೆದು ಮೂಲ ಮರವನ್ನೇ ಸಾಯಿಸುತ್ತವೆ.

ಬಸಿ = ಸುರಿ, ಬಗ್ಗಿಸು.

ಬಸ್ರಿ = ಬಸರಿ, ಬಸುರಿ, ಗರ್ಭಿಣಿ.

ಬಸುರು = ಗರ್ಭ, ಹೊಟ್ಟೆ, ಬಸಿರು.

ಬಸ್ಲೆ = ಆಹಾರವಾಗಿ ಉಪಯೋಗಿಸುವ ಒಂದು ಬಳ್ಳಿ, ಬಸಲೆ.

ಬಸ್ಲೆ ಬೀಳು = ಬಸಲೆಯ ಬಳ್ಳಿ.

ಬಸ್ಲೆದಡಿ = ಬಸಲೆಯ ಎಲೆಯನ್ನು ತೆಗೆದು ಉಳಿದ ದಂಟು.

ಬಸ್ಲೆ ಚಪ್ರ = ಬಸ್ಲೆ ಬಳ್ಳಿಯನ್ನು ಹಬ್ಬಿಸುವ ಚಪ್ಪರ.

ಬಳಗ = ಬಂಧುಬಾಂಧವರು.

ಬಳಪ = ಸ್ಲೇಟಿನ ಮೇಲೆ ಬರೆಯುವ ಸಣ್ಣಕಡ್ಡಿಯಂತಹ ಸೀಮೆಸುಣ್ಣ.

ಬಳಪದ ಕಡ್ಡಿ = ಬಳಪ.

ಬಳಪದ ಕಲ್ಲು = ಒಂದು ರೀತಿಯ ಮೃದುವಾದ ಕಲ್ಲು.

ಬಳಾಲೆ = ಬಾಳೆಯ ಎಲೆ.

ಬಳ್ಗಾರ = ಬಳೆ ಮಲ್ಲಾರಗಳನ್ನು ಹೊತ್ತುಮಾರುವವನು.

ಬಳಿ = ೧.ಗೋತ್ರ, ವಂಶ, ೨.ಮೆತ್ತು,

ಸಾರಿಸು.

ಬಳ್ಳಿ = ಹಗ್ಗ, ಬೀಳು, ಲತೆ, ವಲ್ಲೀ.

ಬಳ್ಳಿಕ್ಕು = ೧.ಬೊಳ್ಳಿಕ್ಕು, ನರಿಯ ಕೂಗು, ೨.ನಾಯಿಯು ನರಿಯಂತೆ ವಿಕಾರವಾಗಿ ಕೂಗುವುದು (ಅಲಂ).

ಬಳ್ಳಿವುುಟ್ಟುವುದು = ಹಾವು ಕಡಿಯುವುದು, ಜಾನುವಾರುಗಳು ಕಾಡಿಗೆ ಮೇಯಲು ಹೋದಾಗ ಮೂಗಿಗೆ ಹಾವಿನ ಉಸಿರು ತಾಗಿಸಿಕೊಂಡು ಹೆದರುವುದು.

ಬಳುವಳಿ ಸೊಟುಗ = ತವರು ಮನೆಯಿಂದ ವಧುವಿಗೆ ಕೊಡುವ ಚಿತ್ತಾರದ ಸಟುಗ, ನಾಗದಂತ.

ಬಳೆ = ಕಡಗ, ಕೈಬಳೆ, ಕಾಲ್ಬಳೆ.

ಬಳ್ಳೆ = ಬಾಳೆಲೆ, ಬಳಾಲೆ, ಬಾಳೆಯ ಎಲೆ.

ಬಳ್ಳೆಕೀತು = ಹರಿದು ಬೇಕಾದ ಆಕಾರಕ್ಕೆ ಕತ್ತರಿಸಿದ ಬಾಳೆ ಎಲೆ, ಬಾಳೆ ಎಲೆಯ ಸಣ್ಣಭಾಗ.

ಬಳ್ಳೆಹಾಕು = ಬಾಳೆಯೆಲೆಯನ್ನು ಬೆಂಕಿಯಲ್ಲಿ ಬಾಡಿಸಿ, ತೊಳೆದು ಊಟಕ್ಕೆ ಇಡುವುದು.

ಬಾ = ಕರೆಯುವುದು, ಬರಬೇಕೆಂದು ಹೇಳುವುದು.

ಬಾಂದು = ಜಮೀನಿನ ಎಲ್ಲೆ.

ಬಾಂದುಕಲ್ಲು = ಗಡಿಕಲ್ಲು, ಜಮೀನಿನ ಎಲ್ಲೆಯ ಗುರುತಿಗಾಗಿ ಹಾಕಿರುವ ಕಲ್ಲು.

ಬಾಂವಿ = ಬಾವಿ, ಕೂಪ, ನೀರಿರುವ ಗುಂಡಿ.

ಬಾಂಡ್ಲೆ = ಎಣ್ಣೆಯಲ್ಲಿ ತಿಂಡಿ ಕರಿಯುವ ಅಗಲ ಪಾತ್ರೆ.

ಬಾಕಿ = ಉಳಿದಿದ್ದು, ಕಡ, ಉಳಿದ ಸಾಲ, ಹಿಂದಿನ ಕಡ.

ಬಾಕು = ೧. ದೊಡ್ಡಚಾಕು, ಅಲಗು ೨.ಮೈಗೆ ನೀರು ತುಂಬಿ ಊದಿ ಕೊಳ್ಳುವ ಒಂದು ಕಾಯಿಲೆ.

ಬಾಕ್ಲು = ಬಾಗಿಲು.

ಬಾಗ = ಪಾಲು.

ಬಾಗ್‌ಮರ್ಗಿ = ಅನ್ನವನ್ನು ಬಸಿದು ಗಂಜಿಯನ್ನು ತೆಗೆದು ಬಸಿಯುವ ಒಂದು ಉದ್ದ ಮರದ ಉದ್ದ ಬೋಗುಣಿ.

ಬಾಗಾಯ್ತು = ತೋಟ.

ಬಾಗು = ಬಗ್ಗು, ತಲೆಬಗ್ಗಿಸು, ತಲೆಬಾಗು, ಸೊಂಟಬಗ್ಗಿಸು.

ಬಾಚಣಿಗಿ = ಬಾಚಣಿಗೆ, ಕೂದಲಿನ ಸಿಕ್ಕನ್ನು ಬಿಡಿಸಿ ನಯಗೊಳಿಸುವ ಹಣಿಗೆ.

ಬಾಚಿ = ದೊಡ್ಡ ಮರದ ತೊಲೆಗಳನ್ನು ಕೆತ್ತುವ ಕಬ್ಬಿಣದ ಹತಾರು.

ಬಾಚು = ೧.ಬಾಚಣಿಗೆಯಿಂದ ಕೂದಲಿನ ಸಿಕ್ಕನ್ನು ಬಿಡಿಸಿ ನಯಗೊಳಿಸುವುದು, ೨.ಗೋರು, ಕೆರೆದು ತೆಗೆ (ಕೋಳಿ ಹೇಲು ಬಾಚು).

ಬಾಜು = ೧.ಹತ್ತಿರ, ೨. ದಾರಿಬಿಡಿ ಎಂದು ಹೇಳುವುದು.

ಬಾಟ್ಲಿ = ಸೀಸೆ, ಇಂಗ್ಲೀಷಿನ ಬಾಟ್ಲ್ ಅನ್ನುವ ಪದ.

ಬಾಡಿ = ಕುಪ್ಪಸದೊಳಗಿನ ಬಟ್ಟೆ ಒಳಕುಪ್ಪಸ.

ಬಾಡು = ೧.ಒಣಗು, ಮುದುಡು ೨.ಮಾಂಸದ ತುಂಡು.

ಬಾಡುಕ್ಲ್ = ಒಣಗಿದ, ಮುದುಡಿದ.

ಬಾಣ್ತಾರೈಕೆ = ಮಗುವನ್ನು ಹಡೆದ ತಾಯಿಗೆ ಕೆಲವು ದಿನಗಳವರೆಗೆ ಔಷಧ, ಊಟ, ಸ್ನಾನ ಮತ್ತು ವಿಶ್ರಾಂತಿಯನ್ನು ನೀಡಿ ಆರೈಕೆ ಮಾಡುವುದು.

ಬಾಣ್ತಿ = ಬಾಣಂತಿ, ಮಗುವನ್ನು ಹಡೆದು ಆರೈಕೆಯಲ್ಲಿರುವವಳು.

ಬಾತುಕೋಳಿ = ನೀರಿನಲ್ಲಿರುವ ಒಂದು ಹಕ್ಕಿ.

ಬಾದಕ = ಬಾದ್ಕ, ನೋವು, ಬೇನೆ.

ಬಾದಣ = ೧.ಸ್ನಾನದ ನೀರು ಹರಿದು ಹೋಗಲು ಮಾಡಿರುವ ರಂಧ್ರ ೨.ಸ್ನಾನ ಮಾಡುವಷ್ಟು ಜಾಗ.

ಬಾದಾಮಿ = ದೊಡ್ಡಮರದ ಕಾಯಿ, ಅದರ ಓಟೆಯೊಳಗಿನ ಬೀಜ ಆರೋಗ್ಯ-ವರ್ಧಕ.

ಬಾದಾಳ = ಬಾದಣ.

ಬಾದೆ = ಬಾದಕ, ತೊಂದರೆ.

ಬಾಧ್ಯಸ್ತ = ಹಕ್ಕುದಾರ.

ಬಾನಿ = ಕಲಗಚ್ಚು ಮುಂತಾದುವನ್ನು ಹಾಕುವ ಅಗಲಬಾಯಿಯ ದೊಡ್ಡ ಮಡಕೆ.

ಬಾಲ್ಲಕ್ಕಿ = ಬಾವಲಿ ಎಂಬ ಸಸ್ತನಿ, ಹಾಡ್ಲಕ್ಕಿ.

ಬಾಯ್ಕಳಿ = ಬಾಯಿತೆರೆ, ಬಾಯಿಬಿಡು, ಮಾತಾಡು.

ಬಾಯ್ಬಡ್ಕಿ = ಬಾಯಾಳಿ.

ಬಾಯಾಳಿ = ವಿಪರೀತ ಮಾತು/ ಜಗಳವಾಡುವವಳು.

ಬಾಯ್ಮಾತಿನ ಮೇಲೆ = ಮಾತಿನ ಮೇಲೆ ನಂಬಿಕೆಯಿಟ್ಟು, ಯಾವುದೇ ರೀತಿಯ ಸಾಕ್ಷವಿಲ್ಲದೆ.

ಬಾಯಿ = ಸಕಲ ಪ್ರಾಣಿಗಳೂ ಆಹಾರವನ್ನು ತಿನ್ನುವ ಅಂಗ.

ಬಾಯಿಕಟ್ಟು = ಆಹಾರ ನಿಯಂತ್ರಿಸಿ ಮಿತಾಹಾರಿಯಾಗಿರು.

ಬಾಯಿಗೆ ಕಡ್ಬ್ = (ಅಲಂ) ಮಾತಾಡದಿರುವುದು, (ಏನಾಗಿದೆ ನಿಂಗೆ? ಬಾಯಿಗೆ ಕಡ್ಬು ಹಾಕ್ಕಂಡಿದ್ದೀಯಾ?).

ಬಾಯಿಗೆ ಬಿಡು = ಸಾಯುವ ಸಮಯದಲ್ಲಿ ಬಾಯಿಗೆ ಗಂಗಾಜಲವನ್ನು ಹಾಕುವುದು.

ಬಾಯಿಗೆ ಸೇರಲ್ಲ = ಆಹಾರ ಸೇರ-ದಿರುವುದು.

ಬಾಯಿ ಚಪಲ = ಮಾತಾಡಲು ಅಥವಾ ತಿನ್ನುವ ಆಸೆ.

ಬಾಯಿ ಹಾಕು = ಬೇರೆಯವರು ಮಾತಾಡುತ್ತಿರುವಾಗ ಮಧ್ಯಮಧ್ಯ ದಲ್ಲಿ ಮಾತಾಡುವುದು.

ಬಾಯ್ಕುಕ್ಕೆ = ಕೆಲಸದ ವೇಳೆಯಲ್ಲಿ ಏನನ್ನೂ ತಿನ್ನಬಾರದೆಂದು ಎತ್ತುಗಳ ಬಾಯಿಗೆ ಕಟ್ಟುವ ಕಲ್ಲಿ.

ಬಾಯ್ಗೂಡು = ಜಾನುವಾರುಗಳಿಗೆ ಹಲ್ಲುಪೂರ್ತಿ ಬಂದಿರುವುದು, ಅದನ್ನು ನೋಡಿ ಅವುಗಳ ವಯಸ್ಸನ್ನು ಅಂದಾಜಿಸುವುದು /ನಿರ್ಧರಿಸುವುದು.

ಬಾರಟ್ಗಿ = ಅಡಿಕೆ ಒಣಗಿಸುವ ಚಪ್ಪರದ ಇಡಿ ಅಡಿಕೆ ಮರದ ತೊಲೆಗೆ ಅಡ್ಡಲಾಗಿ ಹಾಕುವ ಅರ್ಧ ಮಾಡಿದ ಅಡಿಕೆ ಮರ.

ಬಾರಾ = ಬಾರೊ ಎಂದು ಗಂಡಸನ್ನು ಕರೆಯುವುದು.

ಬಾರಾಷುರದ ಪಂಚೆ = ಹಿಂದೆ ಉಡುತ್ತಿದ್ದ ಮೊಣಕಾಲವರೆಗಿನ ಪಂಚೆ.

ಬಾರಿ = ಬಹಳ, ತುಂಬಾ ೨. ದೊಡ್ಡ.

ಬಾರು = ಚರ್ಮದ ದಾರ, ಚರ್ಮದ ಎಳೆ, ಹೊಸೆದ ಹಗ್ಗ.

ಬಾರುಕೋಲು = ಬಾರ್ಕೋಲು.

ಬಾರುಮಾಡು = ಕೋವಿಗೆ ಮದ್ದುಗುಂಡು ತುಂಬುವುದು.

ಬಾರ್ಸು = ಬಾರಿಸು, ಹೊಡೆ, ಪೆಟ್ಟುಕೊಡು.

ಬಾರೆ = ಬಾ ಎಂದು ಹೆಂಗಸನ್ನು ಕರೆಯುವದು.

ಬಾರ್ಕೋಲು = ಬೆತ್ತದ ಕೋಲಿಗೆ ಹಗ್ಗವನ್ನು ಹುರಿಮಾಡಿ ಕಟ್ಟಿ ಎತ್ತುಗಳನ್ನು ಓಡಿಸಲು ಬಳಸುತ್ತಾರೆ.

ಬಾಲ = ೧.ಲಾಂಗೂಲ ೨.ಜಾನು–ವಾರುಗಳನ್ನು ಲೆಕ್ಕ ಹಾಕುವ ಪರಿಮಾಣ.

ಬಾಲಗ್ರ = ಬಾಲಗ್ರಹ, ಮಕ್ಕಳಿಗೆ ಬರುವ ಸೆಳವು.

ಬಾಲ್ದಿ, = ಬಕೀಟು.

ಬಾಲೆ = ಹಸುಗೂಸು, ಹಸುಳೆ, ಮಗು.

ಬಾಲೆಬಳಿ = ಒಕ್ಕಲಿಗರ ಒಂದು ಗೋತ್ರ/ವಂಶ.

ಬಾವ = ಅಕ್ಕನ ಗಂಡ, ಗಂಡನ ಅಣ್ಣ, ಅತ್ತೆ/ಮಾವನ ಮಗ.

ಬಾವ್ಮೈದ್ನ = ಹೆಂಡತಿಯ ತಮ್ಮ.

ಬಾವಿ = ನೀರಿರುವ ಆಳದ ಕೊಳ, ಕೂಪ.

ಬಾವಿ ಚೌಕ = ಬಾವಿಗೆ ಕಲ್ಲು ಕಟ್ಟುವ ಮೊದಲು ಪಾಯಕ್ಕೆ ಹಾಕುವ ಮರದ ಚೌಕ. ಈ ಚೌಕದ ಮೇಲೆ ಕಲ್ಲು ಕಟ್ಟುತ್ತಾ ಬರುತ್ತಾರೆ. ಈ ಚೌಕವನ್ನು ನೆಲ್ಲಿ ಮರದ ಹಲಗೆಯಿಂದ ಮಾಡಿರುತ್ತಾರೆ. ನೆಲ್ಲಿ ಮರ ನೀರಿನಲ್ಲಿ ಬೇಗ ಹಾಳಾಗುವುದಿಲ್ಲ.

ಬಾವ್ಡಿ = ಮುಚ್ಚಳ, ದೋಸೆಗೆ ಮುಚ್ಚುವ ಮುಚ್ಚಳ.

ಬಾವ್ಲಿ = ಬಾವಲಿ, ಒಂದು ನಿಶಾಚರ ಹಾರುವ ಸಸ್ತನಿ.

ಬಾವು = ಊತ, ಗಡ್ಡೆ, ಗಂಟು, ದಪ್ಪನಾದ ಕುರ.

ಬಾವ್ನೆಂಟ = ಹೆಂಡತಿಯ ಅಣ್ಣ.

ಬಾಸಿಂಗ = ಮದುಮಕ್ಕಳಿಗೆ ಕಟ್ಟುವ ಬೆಂಡಿನ ಕಿರೀಟ.

ಬಾಸಿಂಗ ಸೂಡು = ಬಾಸಿಂಗ ಕಟ್ಟುವುದು.

ಬಾಸುಂಡೆ = ಹೊಡೆದ ರಭಸಕ್ಕೆ ಮೈಮೇಲೆದ್ದ ಕೆಂಪು ಬರೆ (ಹೊಡೆದೇ ಅಂದ್ರೆ ಬಾಸುಂಡೆ ಬರ್ಬೇಕು)

ಬಾಳ = ಬಹಳ, ತುಂಬಾ.

ಬಾಳಕ = ಮಜ್ಜಿಗೆ ಮೆಣಸಿನಕಾಯಿ, ಮಜ್ಜಿಗೆಯಲ್ಲಿ ನೆನೆಸಿ, ಜೀರಿಗೆ, ಉಪ್ಪು ಹಾಕಿ ಒಣಗಿಸಿದ ಹಸಿಮೆಣಸಿನಕಾಯಿ/ತೊಂಡೆ ಕಾಯಿ.

ಬಾಳಿಕೆ = ಹೆಚ್ಚು ದಿನ ಉಪಯೋಗಿಸುವುದು, ತಾಳಿಕೆ.

ಬಾಳು = ಬದುಕು, ಜೀವನ.

ಬಾಳೆಕಂದು = ಬಾಳೆಮರದ ಸಣ್ಣ ಗಿಡ.

ಬಾಳೆಕಾಯಿ = ೧.ಬಾಳೆಮರದಲ್ಲಿ ಬಿಡುವ ಹಸಿರು ಕಾಯಿ, ೨.ಸೀರೆ ನೆರಿಗೆಯನ್ನು ಸಿಕ್ಕಿಸಿಕೊಳ್ಳುವ ಹಳೆಯ ಒಂದು ವಿಧಾನ.

ಬಾಳೆಕೊನೆ = ಬಾಳೆಕಾಯಿಯ ಚಿಪ್ಪುಗಳಿರುವ ಗೊನೆ.

ಬಾಳೆ ಗಡ್ಡೆ = ಬಾಳೆಮರದ ಬುಡದಲ್ಲಿರುವ ಗಡ್ಡೆ.

ಬಾಳೆ ಚಿಪ್ಪು = ಬಾಳೆಕಾಯಿಯ ಗೊಂಚಲು.

ಬಾಳೆದಿಂಡು = ಬಾಳೆಮರದ ತೊಗಟೆ/ಪಟ್ಟೆಯ ಒಳಗಿರುವ ಸಣ್ಣಭಾಗ.

ಬಾಳೆನಾರು = ಒಣಗಿಸಿದ ಬಾಳೆಪಟ್ಟೆ.

ಬಾಳೆಪಟ್ಟೆ = ಬಾಳೆಮರದ ಮೇಲಿನ ಪದರಪದರಾಗಿರುವ ತೊಗಟೆ.

ಬಾಳೆಮರ = ಬಾಳೆಹಣ್ಣನ್ನು ಬಿಡುವ ಮರ.

ಬಾಳೆಮೂತಿ = ಬಾಳೆಗೊನೆಯ ತುದಿಯ ಹೂವು.

ಬಾಳೆಲೆ = ಬಾಳೆಮರದ ಎಲೆಯ ಒಂದು ತುಂಡು (ಕುಡಿಯೆಲೆ, ಕಂಡೆಲೆ, ಕೀತು).

ಬಾಳೆಹಣ್ಣು = ಬಾಳೆಮರದ ಹಸಿರು ಕಾಯಿಗಳು ಹಳದಿಯಾಗಿ ಹಣ್ಣಾಗಿರುವುದು – ಸಿಹಿ ರುಚಿ.

ಬಾಳೆಹುಲ್ಲು = ಸ್ವಲ್ಪ ಅಗಲ ಎಲೆಯ ಹುಲ್ಲು.

ಬಾಳೆಹೂ = ಹೆಂಬೆಯ ಒಳಗಿರುವ ಹೂವು.

ಬಾಳೆಹೆಡೆ = ಬಾಳೆಮರದ ಪೂರ್ತಿ ಎಲೆ.

ಬಾಳೆಹೆಡ್ಲು = ಬಾಳೆಹೆಡೆ.

ಬಾಳೆಹೆಂಬೆ = ಬಾಳೆ ಮೂತಿಯ ಒಂದೊಂದೆ ರೆಕ್ಕೆಗಳು.

ಬಾಳೆ ಮೀನು = ಒಂದು ಜಾತಿಯ ಹೊಳೆಮೀನು.

ಬಿಂಅಂತ = ಸಿಟ್ಟುಗೊಳ್ಳು, ಮೌನತಾಳು, ಮುಖದಪ್ಪಮಾಡಿಕೊಂಡಿರು.

ಬಿಂಕ = ಜಂಬ, ಹೆಮ್ಮೆ.

ಬಿಂಕಿ = ಬೆಂಕಿ, ಅಗ್ನಿ.

ಬಿಂಕಿಸರ = ಬೆಂಕಿಯ ಹತ್ತಿರ.

ಬಿಂಕಿಹಚ್ಚು = ೧.ಬೆಂಕಿಯನ್ನು ಹೊತ್ತಿಸುವುದು ೨.ದುರುದ್ದೇಶ/ಮಾತ್ಸರ್ಯದಿಂದ ಬೇರೆಯವರಲ್ಲಿ ಜಗಳ ತಂದಿಡುವುದು (ಅಲಂ)

ಬಿಂಗ್ರಿ = ಮರುಳು, ಹುಚ್ಚು.

ಬಿಕರಿ = ಮಾರಾಟ.

ಬಿಕ್ಕಟ್ಟು = ಮುಗ್ಗಟ್ಟು, ಅಡಚಣೆ, ತೊಂದರೆ.

ಬಿಕ್ಕಳ್ಕಿ = ಒಂದು ರೀತಿಯ ಉಸಿರು ಸಿಕ್ಕಿಕೊಳ್ಳುವಿಕೆ, ಬಿಕ್ಕಳಿಕೆ.

ಬಿಕಾರಿ = ನಿರ್ಗತಿಕ, ಭಿಕ್ಷುಕ.

ಬಿಕ್ಕಿ ಬಿಕ್ಕಿ ಅಳು = ತಡೆಯಿಲ್ಲದೆ ಗದ್ಗದಿಸಿ ಅಳು.

ಬಿಕ್ಕು = ೧.ಅಳು, ಗದ್ಗದಿಸು, ೨.ಚೆಲ್ಲು, ಎಸೆ, ಹರಡು.

ಬಿಗ್ಡಾಯ್ಸು = ಇನ್ನೂ ತೊಂದರೆಯಾಗು, ಹೆಚ್ಚಿನ ಕಷ್ಟಕ್ಕೆ ಗುರಿಯಾಗು.

ಬಿಗಿ = ಗಿರಿ, ಭದ್ರಮಾಡು, ಎಳೆದುಕಟ್ಟು.

ಬಿಗಿದು ಕಟ್ಟು = ಭದ್ರಮಾಡು, ಎಳೆದುಕಟ್ಟು.

ಬಿಚ್ಚು = ತೆಗೆ, ಕಳಚು.

ಬಿಚ್ಚೋಲೆ = ತಾಳೆ ಪಟ್ಟೆಯ ಓಲೆ, ಕಿವಿಗೆ ಹಾಕಿಕೊಳ್ಳುತ್ತಿದ್ದ ತಾಳೆ ಎಲೆಯ

ಸಣ್ಣಭಾಗ.

ಬಿಜಿಲುಮಾತು = ತೊದಲುಮಾತು, ತೊದಲ್ನುಡಿ.

ಬಿಟ್ಟಿ = ಪುಕ್ಕಟೆ, ಪುಕ್ಸಟ್ಟೆ.

ಬಿಟ್ಬಿಡು = ಬಿಟ್ಟುಬಿಡು, ಬಿಡು, ತ್ಯಜಿಸು.

ಬಿಡ = ಬಿಡುವುದಿಲ್ಲ.

ಬಿಡಾರ = ತಂಗುದಾಣ, ಗುಡಿಸಲು.

ಬಿಡಿ = ಪ್ರತ್ಯೇಕ, ಒಂಟಿ, ಬಿಟ್ಟುಬಿಡಿ.

ಬಿಡು = ೧.ಬಿಡುವು, ವಿಶ್ರಾಂತಿ ೨.ಅವಕಾಶ ೩.ಬಿಟ್ಟುಬಿಡು.

ಬಿತ್ತ = ಬೀಜ, ಕಾಳು.

ಬಿದ್ಕ = ಮಲಗಿಕೋ, ಬಿದ್ದುಕೋ.

ಬಿದಿರಕ್ಕಿ = ಬಿದಿರಿಗೆ ಕಟ್ಟೆ ಬಂದಿರುವುದು, ಅರವತ್ತು ವರ್ಷಕ್ಕೆ ಒಮ್ಮೆ ಸಿಗುವ ಬಿದಿರ ಬತ್ತದ ಅಕ್ಕಿ.

ಬಿದಿರಂಡೆ = ತಳವಿರುವ ಬಿದಿರ ಕೊಳವೆ.

ಬಿದಿರಡ್ಡೆ = ಒಣಗಿದ ಬಿದಿರು.

ಬಿದ್ದಿರು = ಮಲಗಿರು, ಬಿದ್ದುಕೋ, ಬಿದ್ಕ.

ಬಿದ್ರುಕಣ್ಕಲು = ಬಿದಿರಿನ ದಪ್ಪ ಉದ್ದ ಮುಳ್ಳು, ಮುಳ್ಳಿನ ಆಕಾರ ದಲ್ಲಿರುವ ಬಿದಿರಿನ ಹರೆ/ಗೆಲ್ಲು.

ಬಿದ್ರುಕಣೆ = ಉಡಿಯ ಮಧ್ಯದಿಂದ ನೇರವಾಗಿ ಉದ್ದಕ್ಕೆ ಹೋಗಿರುವ ಬಿದಿರು (ಅಡಿಕೆ ದೋಟಿ ಮಾಡುತ್ತಾರೆ).

ಬಿದ್ರು ಮುಳ್ಳು = ಬಿದಿರಿನ ಸಣ್ಣ ಮುಳ್ಳು.

ಬಿನ್ನಾಣ = ವಯ್ಯಾರ, ಬಿಂಕ.

ಬಿರಟೆ = ಬಿರಡೆ, ಸೀಸಕ್ಕೆ ಹಾಕುವ ಮುಚ್ಚಳ, ಬೆಂಡು.

ಬಿರಬಿರ್ನೆ = ಬೇಗ ಬೇಗನೆ/ಚುರುಕಾಗಿ, ಅವಸರದಿಂದ ನಡೆಯುವುದು.

ಬಿರಾಂತು = ಬ್ರಾಂತು, ಭ್ರಮೆ, ಹುಚ್ಚು.

ಬಿರಾಂಬ್ರು = ಬ್ರಾಹ್ಮಣರು

ಬಿರಿ = ೧.ಬಿಗಿ, ಗಿರಿ, ೨.ಹೂ ಅರಳು ೩.ಉಣಗೋಲನ್ನು ಬಿಗಿಗೊಳಿಸಲು ಹೊಡೆಯುವ ಮರದ ಚಕ್ಕೆ.

ಬಿರ್ಗಿ = ಬಾಯಿಗೆ ಬಂದಂತೆ ಹುಚ್ಚುಚ್ಚಾಗಿ ಹರಟುವವಳು.

ಬಿರ್ಕು = ಬಿರುಕು, ಗೋಡೆಯ ಸಂದು.

ಬಿರುಗು = ಬಾಯಿಗೆ ಬಂದಂತೆ ಮಾತಾಡುವುದು.

ಬಿರು = ಒರಟು, ಗಟ್ಟಿ

ಬಿರ್ಗು = ಬಿರುಗು.

ಬಿರುಬಿರ್ನೆ = ಬಿರಬಿರ್ನೆ.

ಬಿರ್ನೆ = ಬೇಗನೆ, ಪಕ್ಕನೆ.

ಬಿಲ = ಡೊಗರು.

ಬಿಲಗೊಬ್ಬೆ = ಮಳೆಗಾಲದಲ್ಲಿ ಮೈಶಾಖ ವಿರುವಂತೆ ಹೊಟ್ಟೆ ಬೆನ್ನು ಎದೆಗೆ ದಪ್ಪ ಬಟ್ಟೆ/ಕಂಬಳಿ ಹೊದ್ದು ಬೆನ್ನ ಮೇಲಿಂದ ತಂದು ಸೊಂಟದ ಬಳಿ ಗಂಟು ಹಾಕುವುದು.

ಬಿಲ್ಪತ್ರೆ = ಸಾಧಾರಣ ಎತ್ತರದ ಮರ, ಎಲೆಯನ್ನು ಪೂಜೆಗೂ, ಕಾಯನ್ನು ತಲೆಕೂದಲು ತೊಳೆಯಲು ಬಳಕೆ.

ಬಿಲ್ಲು = ೧.ಬಾಣ ಹೊಡೆಯಲು ಉಪಯೋಗಿಸುವ ಸಾಧನ ೨.ಶಿಕಾರಿಗೆ ಹೋದಾಗ ಪ್ರಾಣಿಗಳು ಬರುವ ಸಮಯಕ್ಕಾಗಿ ಕಾಯುತ್ತಾ ಕೂರುವ ನಿರ್ದಿಷ್ಟ ಜಾಗ, ೩.ಕೋವಿ/ಬಂದೂಕಿ

ನಿಂದ ಈಡು ಹಾರಿಸಲು ಉಪಯೋಗಿಸುವ ವೊಳೆ/ ಸಾಧನ (ಟ್ರಿಗರ್).

ಬಿಸಾಕು = ಎಸೆ, ಒಗೆ, ಬಿಸಾಡು.

ಬಿಸಾಡು = ಬಿಸಾಕು.

ಬಿಸಿ = ಕುದಿ, ಶಾಖ.

ಬಿಸ್ಲು = ಬಿಸಿಲು, ತಾಪ.

ಬಿಳಲು = ಮರದಿಂದ ತೂಗಿ ಬಿದ್ದ ಬಳ್ಳಿ, ಬಳ್ಳಿಂಯು ಕಾಲುಗಳು (ಏರಿಯಲ್ ರೂಟ್ಸ್).

ಬಿಳ್ವ = ಲೋಳೆಯಾಗಿರುವ ತೋಳೆ–ಗಳಿರುವ ಒಂದು ಜಾತಿಯ ಹಲಸು.

ಬಿಳಿ = ಬಿಳುಪು.

ಬಿಳಿಚಪ್ಲುಹಣ್ಣು = ಮಳೆಗಾಲದಲ್ಲಿ ಕುರುಚಲು ಗಿಡದಲ್ಲಿ ಬಿಡುವ ಹಣ್ಣು.

ಬಿಳಿಚಿಕೊಳ್ಳು = ನಿಸ್ತೇಜವಾಗು, ಕಳೆಗುಂದು.

ಬಿಳಿಚಿಬ್ಬೆ = ಒಂದು ರೀತಿಯ ಚರ್ಮ ರೋಗ, ಚಿಬ್ಬೆ.

ಬಿಳಿನ್ಯಾಮ = ಬಿಳಿಯ ನಾಮ.

ಬಿಳಿಸೆರಗು = ಬಿಳಿಯ ರಕ್ತಸ್ರಾವ, ಶ್ವೇತ ಪದರ.

ಬಿಳಿಹಾಲುವಾಣ = ಚನ್ನೆಮರ, ಇದರ ಕಾಯಿಗಳನ್ನು ಚನ್ನೆಮಣೆ ಆಟಕ್ಕೆ ಬಳಸುತ್ತಾರೆ.

ಬಿಳಿಹುಳ್ಚಪ್ಪು = ದೊಡ್ಡ ಹಿಡಿಬರ್ಲು ಮಾಡುವ ಗಿಡ, ಕಡ್ಡಿ (ಗಿಡದ ಹರೆಗಳು)ತುಂಬಾಗಟ್ಟಿ, ಅಂಗಳ ಗುಡಿಸಲು ಉಪಯೋಗ

ಬೀಗ = ಬೀಗದ ಕಾಯಿ, ಕೀಲಿ, ೨. ಹೆಣ್ಣಿನ ತಂದೆ – ತಾಯಿ ಹಾಗೂ ಗಂಡಿನ ತಂದೆ– ತಾಯಿ ಪರಸ್ಪರ ಬೀಗರು, ಒಂದು ಸಂಬಂಧ.

ಬೀಡಿ = ಒಂದು ಬಗೆಯ ಚುಟ್ಟ.

ಬೀಡು = ನೆಲೆ, ಉಳಿದುಕೊಳ್ಳುವ ಜಾಗ.

ಬೀಜ = ಕಾಳು, ಬಿತ್ತ, ಓಟೆಯ ಒಳಗಿರುವ ಬಿತ್ತ.

ಬೀಸಣಿಗೆ = ಕೈಯಿಂದ ಹಿಡಿದುಕೊಂಡು ಗಾಳಿಹಾಕುವ ಸಾಧನ.

ಬೀಸು = ೧.ಎಸೆ, ೨.ಬೀಸೇಕಲ್ಲನ್ನು ತಿರುಗಿಸು ೩.ಗಾಳಿಹಾಕು ೪.ಹಿಟ್ಟುಮಾಡು.

ಬೀಸೇಕಲ್ಲು = ಗೂಟವನ್ನು ಕೈಯಿಂದ ತಿರುಗಿಸಿ ಅಕ್ಕಿ ಪುಡಿ ಮಾಡುವ ಕಲ್ಲು.

ಬೀವು = ಪ್ರಾಣಿಗಳ ಬೆನ್ನಿನ ಮೇಲೆ ಎರಡು ಕಡೆಯಿರುವ ಮಾಂಸ.

ಬೀಳು = ಬಳ್ಳಿ, ಹಂಬು.

ಬುಂಡ್ಗನ ಬತ್ತ = ಒಂದು ರೀತಿಯ ದಪ್ಪ ಅಕ್ಕಿಯ ಬತ್ತ.

ಬುಕ್ಕಿ = ಕೆನ್ನೆ ದಪ್ಪ ಇರುವವಳು.

ಬುಕ್ಕು = ಕೆನ್ನೆ ತುಂಬಿಕೊಂಡು ದಪ್ಪಗಿರುವುದು.

ಬುಗುಡಿ = ಕಿವಿ ಚಟ್ಟೆಗೆ ಹಾಕುವ ಒಂದು ಆಭರಣ, ಮುತ್ತಿನ ಗೊಂಚಲು.

ಬುಗ್ಟು = ಬೂಸಲು, ಬೋರೆ, ಉಬ್ಬಿರುವುದು.

ಬುಗುಟು = ಬುಗ್ಟು.

ಬುಗುರಿ = ಒಂದು ಆಟದ ಸಾಮಾನು.

ಬುಗ್ಗೆ = ಚಿಲುಮೆ, ಕಾರಂಜಿ.

ಬುಜ = ಹೆಗಲು

ಬುಟ್ಟ = ಜರತಾರಿ ಸೀರೆಯ ಮೇಲಿನ ಕಸೂತಿ.

ಬುಟ್ಟಿ = ಹೆಡಿಗೆ, ಕುಕ್ಕೆ.

ಬುಡ = ೧. ಮೂಲ, ವಂಶ, ೨. ಪ್ರಾರಂಭ ೩. ತಳಭಾಗ ೪ ಹತ್ತಿರ.

ಬುಡಮೇಲು = ತಲೆಕೆಳಗು, ಕಾಲು ಮೇಲಾಗು, ಅಡಿಮೇಲಾಗು.

ಬುಡುಬುಡಿಕೆ = ಢಮರುಗ, ಕಿರುವಾದ್ಯ.

ಬುಡುಬುಡಿಕೆಯವ್ನ = ಬುಡುಬುಡಿಕೆ ಬಾರಿಸಿಕೊಂಡು ಶಕುನ ಹೇಳುವವ.

ಬುತ್ತಿ = ಕಟ್ಟಿಕೊಂಡು ಹೋಗುವ ಅನ್ನ, ಶಿಕಾರಿಗೆ ಹೋಗುವಾಗ ತೆಗೆದುಕೊಂಡು ಹೋಗುವ ಊಟ.

ಬುದ್ಧಿ = ಅರಿವು, ತಿಳುವಳಿಕೆ.

ಬುದುಕ್ನೆ = ಒಮ್ಮೆಗೆ, ಬೇಗನೆ.

ಬುರ್ನಾಸು = ಬೂಸು, ಕೆಲಸಕ್ಕೆ ಬಾರದ, ಏನೂ ತಿಳುವಳಿಕೆಯಿಲ್ಲದ, ಹುರುಳಿಲ್ಲದ.

ಬುರ್ಕಿ = ಆಗಿರುವವಳು, ಅಳುಬುರ್ಕಿ, ಸದಾ ಅಳುವವಳು. (ಸ್ತ್ರೀ)

ಬುರ್ಕ = ಅಳುಬುರ್ಕ, ಹೆದರು ಬುರ್ಕ. (ಪು)

ಬುರುಡೆ = ೧. ಬುಲ್ಡೆ, ತಲೆಓಡು, ೨. ಸುಳ್ಳು ಹೇಳುವುದು.

ಬುರುಬುರಿ = ಬಾಳೆಕಾಯಿಯನ್ನು ಹೆರೆದು ಎಣ್ಣೆಯಲ್ಲಿ ಕರಿದು ಉಪ್ಪು ಕಾರ ಹಾಕಿದ ತಿಂಡಿ.

ಬುಲ್ಡೆ = ಬುರುಡೆ.

ಬುಲ್ಡೆ ಬಿಸ್ನೀರು ಕಾಸು = ಬುದ್ಧಿ ಕಲಿಸು (ಅಲಂ).

ಬುಸ್ಗುಡು = ೧.ಏದುಸಿರು ಬಿಡು, ೨.ಹಾವಿನ ಉಸಿರು, ೩. ಕೋಪಗೊಳ್ಳು.

ಬೂತ = ದೆವ್ವ, ದೈವ.

ಬೂತಾಯಿ = ಒಂದು ಬಗೆಯ ಸಮುದ್ರದ ಮೀನು, ಬೈಗೆ ಮೀನು.

ಬೂತಾಳೆ ಹೂ = ಒಂದು ಬಗೆಯ ಕಾಡು ಹೂ.

ಬೂದಿ = ಬೆಂಕಿ ಆರಿದ ನಂತರ ಉಳಿದ ಕಟ್ಟಿಗೆಯ ಧೂಳು.

ಬೂದಿ ತಳಿ = ತರಕಾರಿ ಗಿಡಗಳಿಗೆ ಹುಳ ಹುಪ್ಪಟೆ ಬರದಂತೆ ಬೂದಿಯನ್ನು ಚಿಮುಕಿಸುವುದು.

ಬೂದಿ ಬಡುಕ = ೧.ಬೂದಿಯಲ್ಲಿ ಹೊರಳಾಡಿದ ನಾಯಿ ೨.ಒಣಗಿದ ಚರ್ಮ ೩. ಕೊಳಕಾಗಿರುವವನು.

ಬೂದಿ ಬಿಡುವುದು = ಅಸ್ತಿದಾನ, ಶವದ ಬೂದಿಯನ್ನು ನೀರಿಗೆ ಬಿಡುವುದು.

ಬೂದ್ಗುಂಬ್ಳ = ಬೂದಿ ಕುಂಬಳ ಕಾಯಿ, ಬಳ್ಳಿಯಲ್ಲಿ ಬಿಡುವ ತರಕಾರಿ.

ಬೂಮ್ತಾಯಿ = ತಾಯಿಯಂತಿರುವ ಭೂಮಿ.

ಬೂರಿ ಹಬ್ಬ = ದೀಪಾವಳಿಯ ಹಿಂದಿನ ದಿನದ ಒಂದು ಹಬ್ಬದ ಆಚರಣೆ.

ಬೂರುಗ = ಒಂದು ಜಾತಿಯ ಹತ್ತಿಯ ಮರ.

ಬೂರೆ ಹಾಯದು = ಬೂರಿಹಬ್ಬದ ಹಿಂದಿನ ದಿನ (ನರಕ ಚತುರ್ದಶಿಯ ಹಿಂದಿನ ದಿನ)ದ ಆಚರಣೆಗಳು, ಗಂಗೆ ಪೂಜೆ, ನೀರು ತುಂಬು, ತರಕಾರಿ, ತೆಂಗಿನಕಾಯಿ ಕದಿಯುವುದು ಇತ್ಯಾದಿ.

ಬೂಲ = ೧.ಬಾಲ ೨.ಅವತಾರ, ವೇಶ.

ಬೂವ = ಬೂವ ಉಣ್ಣುವುದು, ಮದುಮಕ್ಕಳು ಒಟ್ಟಿಗೆ ಊಟ ಮಾಡುವುದು

ಬೂಸ = ಧಾನ್ಯದ ಸಿಪ್ಪೆ.

ಬೂಸು = ಬುರ್ನಾಸು, ಯಾತಕ್ಕೂ ಆಗದ.

ಬೂಸು ಮೈ = ಏನೂ ಶಕ್ತಿಯಿಲ್ಲದೆ ಸುಮ್ಮನೆ ಗುಂಡುಗುಂಡಾಗಿರುವ ದೇಹ.

ಬೂಂದಿ = ಕಡಲೆಹಿಟ್ಟಿನ ಸಿಹಿ ತಿಂಡಿ.

ಬೆಂಕಿ = ಅಗ್ನಿ.

ಬೆಂಗ್ಟೆ = ಮಾಡಿನ ಮೇಲೆ ಮಧ್ಯದ ತೊಲೆ.

ಬೆಂಡಾಲೆ = ಬೆಂಡಿನಿಂದ ಮಾಡಿದ ಕಿವಿಯ ಓಲೆ, ಚಿನ್ನದ ಕಿವಿಯ ಆಭರಣ.

ಬೆಂಡಾಗು = ಬಾಗು, ಓರೆ ಕೋರೆ ಯಾಗು.

ಬೆಂಡು = ೧.ನಿಸ್ಸಾರ ೨.ಹಗುರವಾದ ಪದಾರ್ಥ.

ಬೆಂಡೆ ಮರ = ಗಸಗಸೆ ಮರ, ಲಡ್ಡು, ಸಾಮಾನ್ಯ ಗಾತ್ರದ ಈ ಮರದ ಹಣ್ಣಿನಲ್ಲಿ ಗಸಗಸೆಯಂತಹ ಬೀಜ, ಬಾವಲಿಗಳಿಗೆ ತುಂಬಾ ಇಷ್ಟವಾದ ಹಣ್ಣು.

ಬೆಂತಟ್ಟು = ೧.ಬೆನ್ನುತಟ್ಟು ೨.ಪ್ರೋತ್ಸಾಹಿಸು.

ಬೆಂಬ್ಲ = ಬೆಂಬಲ, ಸಹಾಯ.

ಬೆಕ್ಕು = ಕೊತ್ತಿ, ಮಾರ್ಜಾಲ, ಹುಲಿ ಜಾತಿಗೆ ಸೇರಿದ ಸಾಕುಪ್ರಾಣಿ.

ಬೆಗರು = ಬೆವರು.

ಬೆಚ್ಚಗೆ = ೧.ಸ್ವಲ್ಪ ಬಿಸಿ, ಹಿತವಾದ ಬಿಸಿ ೨.ನೆಮ್ಮದಿಯಿಂದ, ಸುಖವಾಗಿ, ಹಿತವಾಗಿ (ಅಲಂ).

ಬೆಚ್ಚು = ೧.ಹೆದರು, ಬೆದರು ೨.ಬೆರಸು, ಓಡಿಸು.

ಬೆಟ್ಟ = ಗುಡ್ಡ, ಪರ್ವತ.

ಬೆಟ್ಟಡಕೆ = ತುಂಡು ಮಾಡಲಿಕ್ಕಾಗದ ಗಟ್ಟಿ ಅಡಕೆ.

ಬೆಟ್ಟದ ಸೀಮೆ = ಗುಡ್ಡಗಾಡು ಪ್ರದೇಶ.

ಬೆಟ್‌ಬಾಳೆ = ಗುಡ್ಡದ ಬಾಳೆ, ಕಲ್ಬಾಳೆ, ಹಣ್ಣಿನಲ್ಲಿ ಕಪ್ಪುಬೀಜಗಳು ತುಂಬಿರುತ್ತವೆ.

ಬೆಟ್ಟು = ಬೆರಳು ೨. ಒಣಗಿದ, ಗಟ್ಟಿನೆಲ, ಕಲ್ಲುಭೂಮಿ.

ಬೆಡಗು = ಬಿನ್ನಾಣ, ಸೌಂದರ್ಯ.

ಬೆಣಕು = ಬೆಳಕು, ದೀಪ.

ಬೆಣಚುಕಲ್ಲು = ಬಿಳಿಯ ಕಲ್ಲು, ಕುಟ್ಟಿದಾಗ ಕಿಡಿಕಾರುವ ಕಲ್ಲು, ಮಕ್ಕಳಿಗೆ ದೃಷ್ಟಿತೆಗೆಯಲು ಸುಳಿದೊಡೆಯುವ ಕಲ್ಲು.

ಬೆಣತಕ್ಕಿ = ಬಿಳಿ ಅಕ್ಕಿ, ಹಸಿಬತ್ತದ ಅಕ್ಕಿ.

ಬೆಣ್ಣೆ = ನವನೀತ, ಕೆನೆ ಮೊಸರಿನಿಂದ ತೆಗೆದ ಸಾರ, ಬೈಣ್ಣೆ.

ಬೆಣ್ಣೆ ಹಚ್ಚು = ಪುಸಲಾಯಿಸು, ಮುಖಸ್ತುತಿ

ಮಾಡು (ಅಲಂ).

ಬೆಣ್ಣೆ ಹೂವು = ಬಿಳಿಯ ಹೂವು ಬಿಡುವ ಒಂದು ಬಳ್ಳಿ.

ಬೆಣ್ಣಾವು = ಬಿಸಿ ಮಾಡಿದ ಬೆಣ್ಣೆ, ಸ್ವಲ್ಪ ಕರಗಿಸಿದ ಬೆಣ್ಣೆ.

ಬೆಣೆ = ಗೂಟ, ಬಿರಡೆ, ಅಲುಗಾಡದಂತೆ ಉಣಗೋಲನ್ನು ಬಿಗಿಗೊಳಿಸಲು ಹಾಕುವ ಮರದ ಚಕ್ಕೆ.

ಬೆತ್ಲೆ = ನಗ್ನ, ಬಟ್ಟೆ ಧರಿಸದಿರುವುದು.

ಬೆತ್ತ = ಭಾರೀ ಮುಳ್ಳು, ಆಶ್ರಯಕ್ಕೆ ಸಿಕ್ಕಿದರೆ ಭಾರಿ ಎತ್ತರ ಬೆಳೆಯುತ್ತದೆ. ವಾಟೆ, ಬಿದಿರಿನ ಜಾತಿಗೆ ಸೇರಿ ತೆಳುವಾಗಿರುವ ವಾಟೆ.

ಬೆತ್ತದ ಪೆಟ್ಗಿ = ಬೆತ್ತದಿಂದ ತಯಾರಿಸಿದ ಪೆಟ್ಟಿಗೆ.

ಬೆದಕು = ಕೆದಕು, ಹುಡುಕಾಡು, ಪ್ರಶ್ನಿಸು.

ಬೆದೆ = ಮದ, ಸೊಕ್ಕು, ಹಲುಬು.

ಬೆದ್ರುಗುಂಡು = ಪ್ರಾಣಿಗಳನ್ನು ಹೆದರಿಸಲು ಹಾರಿಸುವ ಹುಸಿಗುಂಡು.

ಬೆನವ = ಬೆನಕ, ಗಣಪತಿ ೨. ಅಡಿಕೆ ಕಾಯಿಯು ಒಳಗೆ ಎರಡು ಸುಲಿಬೇಳೆಗಳು ಒಟ್ಟಿಗಿರುವುದು.

ಬೆನ್ನಟ್ಟು = ಬೆಂಬತ್ತು, ೨. ಓಡಿಸಿಕೊಂಡು ಹೋಗು.

ಬೆನ್ನು = ದೇಹದ ಹಿಂಭಾಗ ೨. ಒಡಹುಟ್ಟಿದವರು, ಒಡಹುಟ್ಟಿದ ಕಿರಿಯರು.

ಬೆನ್ನುಹುರಿ = ಮೇರುದಂಡ, ಬೆನ್ನೆಲುಬು.

ಬೆಪ್ಪ = ದಡ್ಡ, ಮೂರ್ಖ.

ಬೆಪ್ಪು = ಏನೂ ತಿಳಿಯದ, ಹೇಡಿ ೨. ಆಶ್ಚರ್ಯಪಡು.

ಬೆಪ್ಪುತಕ್ಕಡಿ = ತಿಳಿಗೇಡಿ, ಮೂರ್ಖ.

ಬೆಬ್ಬೆಬ್ಬೆ = ಏನೂ ಹೇಳಲು ಗೊತ್ತಾಗದೆ ತೊದಲುವುದು (ಸರಿಯಾಗಿ ಓದ್ಲೋ ಆಮೇಲೆ ಬೆಬ್ಬೆಬ್ಬೆ ಅಂದ್ರೆ ನಂಗೊತ್ತಿಲ್ಲ).

ಬೆಮಾರ್ಲ = ಸಿಹಿಯಾದ ಮುತ್ತಿನಂತ ಹಣ್ಣು ಬಿಡುವ ಒಂದು ಜಾತಿಯ ಮುಳ್ಳಿನ ಗಿಡ.

ಬೆಯ್‌ಬೆಯ್ತ = ಬೇಯುತ್ತಿದ್ದಂತೆಯೇ.

ಬೆರಕೆ = ಎಲ್ಲಾ ರೀತಿಯ, ಒಟ್ಟುಗೂಡಿದ, ಮಿಶ್ರಣ.

ಬೆರಕೆಸೊಪ್ಪು = ಭೂಮಿಹುಣ್ಣಿಮೆಯ ದಿನ ಮಾಡುವ ಎಲ್ಲ ರೀತಿಯ ಸೊಪ್ಪುಗಳ ಪಲ್ಯ.

ಬೆರಗು = ವಿಸ್ಮಯ, ಸೋಜಿಗ.

ಬೆರಸು = ಸೇರಿಸು, ಕೂಡಿಸು.

ಬೆರ್ಸು = ಓಡಿಸು, ೨. ಬೆರಸು

ಬೆರ್ಗು = ಬೆರಗು, ಆಶ್ಚರ್ಯ.

ಬೆರ್ಕೋಲು = ಸುಮಾರು ಐದು ಅಡಿ ಉದ್ದದ ಒಕ್ಕಲು ಮಾಡುವಾಗ ಹುಲ್ಲನ್ನು ಎಳೆಯಲು/ಮಗುಚಲು ಅದರದೇ ಒಂದು ಮುಳ್ಳು ತುದಿಗಿರುವ ಬಿದಿರಿನ ಕೋಲು.

ಬೆಲಗೆಣಸು = ಬಳ್ಳಿಯ ಬುಡದಲ್ಲಿ ನೆಲದೊಳಗೆ ಸಿಗುವ ಗೆಣಸು.

ಬೆಲ್ಲ = ಕಬ್ಬಿನ ರಸವನ್ನು ಕುದಿಸಿ ಹದವಾಗಿ ಗಟ್ಟಿಮಾಡಿದ್ದು.

ಬೆಲ್ಲದ್‌ಪಾಕ = ಬೆಲ್ಲವನ್ನು ಮತ್ತೆ ಬೇಯಿಸಿ ಮಾಡಿದ ಅಂಟುಪಾಕ.

ಬೆವರ್‌ಸಾಲೆ = ಬೆವರ್ಸಾಲೆ, ಬಿಸಿಲಿಗೆ ಬೆವರಿ ಆಗುವ ಮೈಮೇಲಿನ ಗುಳ್ಳೆ.

ಬೆಸಗಿ = ಬೆಸುಗೆ, ಜೋಡಣೆ, ಪಾತ್ರೆಗಳ ತೂತ ಮುಚ್ಚಲು ಹಾಕುವ ಲೋಹದ ಲೇಪ.

ಬೆಸ್ತ = ಮೀನುಗಾರ.

ಬೆಸೆ = ೧.ಬಿಲ್ಲಿನಂತಹ ಪ್ರಾಣಿ ಹಿಡಿಯುವ ಸಾಧನ, ೨.ಹೆಣೆ, ನೇಯು, ಜೋಡಿಸು.

ಬೆಳಕು ಹರಿ = ಬೆಳಗಾಗು.

ಬೆಳಗಾನ = ಬೆಳಗಾಗುವವರೆಗು.

ಬೆಳಗಾಗ್ಯದೆ = ಬೆಳಗಾಗಿದೆ, ಬೆಳಕು ಬಿಟ್ಟಿದೆ.

ಬೆಳಗು = ಬೆಳಿಗ್ಗೆ, ಮುಂಜಾನೆ ೨. ಪಾತ್ರೆ ತೊಳೆಯುವುದು ೩. ಬೆಳಕಾಗಿಸು (ದೀಪ ಬೆಳಗು, ಆರತಿ ಬೆಳಗು).

ಬೆಳ್ಳಕ್ಕಿ = ಬಿಳಿಯ ಕೊಕ್ಕರೆ, ಸಣ್ಣ ಬಕಪಕ್ಷಿ.

ಬೆಳ್ಳಗೆ = ಬಿಳಿಯಾದದ್ದು, ಬೆಳ್ಳಗಿರುವುದು.

ಬೆಳ್ಳಟ್ಟೆಗಿಡ = ದೊಡ್ಡಗಾತ್ರದ ಗಿಡ, ಮಳೆಗಾಲದಲ್ಲಿ ಗಿಡದ ಎಲೆಗಳು ಅಚ್ಚಬಿಳಿಯಾಗುತ್ತವೆ.

ಬೆಳಾಲೆ ಮರ = ದೊಡ್ಡ ಜಾತಿಯ ಗಟ್ಟಿಮರ, ಇದರ ನಾಟ ತಿಳಿ ಕಪ್ಪು ಬಣ್ಣ.

ಬೆಳಿಗ್ಗೆ = ಮುಂಜಾನೆ.

ಬೆಳ್ದಿಂಗ್ಳು = ಬೆಳದಿಂಗಳು, ಹುಣ್ಣಿಮೆಯ ರಾತ್ರಿ

ಬೆಳ್ಳಿ = ರಜತ, ಬೆಲೆಬಾಳುವ ಬಿಳಿಯ ಲೋಹ.

ಬೆಳ್ಳಿಗುಲ = ಒಕ್ಕಲಿಗರ ಒಂದು ಗೋತ್ರ/ ಬಳಿ.

ಬೆಳ್ಳಿಪಟ್ಟಿ = ಬೆಳ್ಳಿಯ ಸೊಂಟದ ಆಭರಣ.

ಬೆಳ್ಳು = ಬೆರಳು, ಬೆಟ್ಟು.

ಬೆಳ್ಳುಳ್ಳಿ = ಒಂದು ಗಡ್ಡೆ, ಸಾಂಬಾರ ಪದಾರ್ಥ.

ಬೆಳ್ಳೇಡಿ = ಗದ್ದೆಯಲ್ಲಿ ಸಿಗುವ ಕಂದು–ಬಿಳಿಯ ಬಣ್ಣದ ಏಡಿ.

ಬೇಕಾಬಿಟ್ಟಿ = ಕಂಡಾಪಟ್ಟೆ, ಯದ್ವಾತದ್ವ, ಮನಬಂದಂತೆ.

ಬೇಗ = ತ್ವರೆ, ಶೀಘ್ರ

ಬೇಗಡೆ = ಹೊಳೆಯುವ ತಗಡಿನಂತೆ ತೆಳುಕಾಗದ.

ಬೇಗು = ಹೆಚ್ಚು ಆಸೆಪಡು, ತುಡುಗುಣ್ಣು.

ಬೇಜಾರು = ಬೇಸರ.

ಬೇಟಿ = ದಾವ್ಣೆ ಕಟ್ಟಲು ಕಣದ ಮಧ್ಯದಲ್ಲಿ ಹಾಕುವ ಮರದ ಕಂಬ (ಸಾಮಾನ್ಯವಾಗಿ ಬಲಗಣೆ ಮರದಲ್ಲಿ ಮಾಡುತ್ತಾರೆ).

ಬೇಡ್ರವ್ನ= ಬೇಟೆಗಾರ, ಬೇಡುವವನು.

ಬೇಣ = ಬ್ಯಾಣ, ಹುಲ್ಲುಗಾವಲು.

ಬೇತಾಳ = ಭೂತ, ಅತಿ ಉದ್ದಕ್ಕಿರುವವನು.

ಬೇದ = ಭಿನ್ನಾಭಿಪ್ರಾಯ.

ಬೇದಿ = ನೀರಿನಂತೆ ತೆಳ್ಳಗಿರುವ ಮಲ, ಅತಿಸಾರ.

ಬೇಯಿನ್‌ಸೊಪ್ಪು = ಕರಿಬೇವು, ಕರಿಬೇವಿನ ಸೊಪ್ಪು.

ಬೇರು = ಗಿಡಮರಗಳ ಭೂಮಿಯೊಳಗಿನ ಭಾಗ .

ಬೇರುಬಿಡು = ತಳವೂರು.

ಬೇರು ಬಿಚ್ಚಟ್ಟೆ = ಔಷಧಿಗೆ ಬಳಸುವ ನಾರು ಬೇರು.

ಬೇರೂರು = ಬೇರುಬಿಡು.

ಬೇಲಿಸುರಗಿ = ಪೊದೆಯಂತಹ ಗಿಡ, ಇದರ ಚಿಗುರಿಗೆ ಸುರುಳಿ ಕುಡಿ

ಎನ್ನುತ್ತಾರೆ. ದೇಹಕ್ಕೆ ತಂಪು ನೀಡುವುದು.

ಬೇವರ್ಸಿ = ಹಾದರಕ್ಕೆ ಹುಟ್ಟಿದ, ವ್ಯಭಿಚಾರದ.

ಬೇವು = ಕಹಿಬೇವು, ಔಷಧೀಯ ಗುಣವುಳ್ಳ ಮರ.

ಬೇವು ಕಟ್ಟಿಸುವುದು = ಕೋವಿಯ ನಳಿಗೆಯನ್ನು ಕೊರೆದು ಹದ ಮಾಡಿ ಕೋವಿಯ ಗುಂಡು ನೇರವಾಗಿ ಎತ್ತರಕ್ಕೆ ಹಾರುವಂತೆ ಮಾಡುವುದು.

ಬೇಸ್ತಾರ = ಬೃಹಸ್ಪತಿವಾರ, ಗುರುವಾರ.

ಬೈ = ಬೈಯ್ಯು, ನಿಂದಿಸು.

ಬೈಕ = ಬೈಯ್ಯುತ್ತಿರು, ನಿಂದಿಸಿಕೋ.

ಬೈಗ್ಗಪ್ಪು = ಸಂಜೆ ಗತ್ತಲು.

ಬೈಗು = ಸಂಜೆ.

ಬೈಗುಳ = ಬೈಯ್ಯುವುದು, ನಿಂದಿಸುವುದು.

ಬೈಗೂ ಬೆಳಗೂ = ಸಂಜೆ – ಬೆಳಿಗ್ಗೆ, ಹಗಲೂ–ರಾತ್ರಿ, ಇಡೀಹಗಲು ಇಡೀರಾತ್ರಿ.

ಬೈಗೆ = ಭೂತಾಯಿ, ಒಂದು ಜಾತಿಯ ಸಮುದ್ರದ ಸಣ್ಣ ಮೀನು.

ಬೈಣ್ಣೆ = ಬೆಣ್ಣೆ.

ಬೈತಲೆ = ಬಗತಲೆ, ಕೂದಲನ್ನು ಭಾಗಮಾಡಿ ಬಾಚಿರುವುದು.

ಬೈತಿಡು = ಅವುಸಿಡು, ಕದ್ದಿಡು, ಮುಚ್ಚಿಡು.

ಬೈನೆ ಕೈ = ಕಳ್ಳನ್ನು ತಯಾರಿಸುವ ಬೈನೆ ಮರದ ಹೂವು/ಹಿಂಗಾರ, ಇದರ ಹಣ್ಣು ಕಬ್ಬೆಕ್ಕು, ಹಾರ್ಬೆಕ್ಕು, ಮಂಗಟ್ಟೆಹಕ್ಕಿ ಮುಂತಾದವುಗಳಿಗೆ ಇಷ್ಟ

ಬೈನೆ = ಬಗನೆ, ಒಂದು ಜಾತಿಯ ತೆಂಗಿನ ಮರದಂತಹ ಮರ. ಈಚಲ ಮರದ ಜಾತಿಗೆ ಸೇರಿದ್ದು.

ಬೈನೆಗುತ್ತು = ಕಳ್ಳುಗುತ್ತು, ಬೈನೆಮರದ ಕಳ್ಳನ್ನು ಒಂದು ಕಳ್ಳ ಜಾಗದಲ್ಲಿಡುವುದು.

ಬೈನೊತ್ತು = ಸಂಜೆಹೊತ್ತು, ಕತ್ತಲಾಗುವ ಸಮಯ.

ಬೈನೆಮಡ್ಲು = ಬೈನೆ ಮರದ ದೊಡ್ಡ ಎಲೆ.

ಬೈರ್ಗಿ = ರಂಧ್ರ ಕೊರೆಯುವ ಸಾಧನ.

ಬೈಸ್ಕಾರ = ಬಹಿಷ್ಕಾರ, ನಿಷೇಧ.

ಬೊಂಬಾಯಿ ಬಳೆ = ಬಂಗಾರದ ಕೈಯ ಆಭರಣ.

ಬೊಂಬೆ = ೧. ಗೊಂಬೆ, ಆಟಿಕೆ ೨. ಕಣ್ಣಿನ ಗೊಂಬೆ.

ಬೊಗಸೆ = ಎರಡು ಹಸ್ತಗಳನ್ನು ಜೋಡಿಸಿ ಬಟ್ಟಲಿನಂತೆ ಮಾಡುವುದು.

ಬೊಡ್ಡೆ = ಮರದ ಕಾಂಡ.

ಬೊಬ್ಬೆ = ಚೀರಾಟ.

ಬೋಗರಿ = ಶಬ್ಧವಾಗುವುದು.

ಬೋಗ್ಯ = ಹಣಕೊಟ್ಟು ಒಂದು ನಿರ್ಧಿಷ್ಟ ಅವಧಿಯವರೆಗೆ ಮನೆ/ಜಮೀನನ್ನು ಪಡೆಯುವುದು.

ಬೋಗಿ = ಕಿರನ್‌ಬೋಗಿ ಎಂಬ ದೊಡ್ಡ ಜಾತಿಯ ಗಟ್ಟಿ ಮರ, ಉದ್ದಕ್ಕೆ ನೇರವಾಗಿ ಬೆಳೆಯುತ್ತದೆ.

ಬೋಗುಣಿ = ಅಡಿಗೆ ಮಾಡಲು ಉಪಯೋಗಿಸುವ ಒಂದು ಪಾತ್ರೆ, ದೊಡ್ಡಪಾತ್ರೆ.

ಬೋಡು = ೧.ವಸಡು, ಹಲ್ಲಿಲ್ಲದ ವಸಡು,

೨. ತಲೆಬುರುಡೆ.

ಬೋಣಿ = ದಿನದ ಮೊದಲ ವ್ಯಾಪಾರ.

ಬೋಣ್ಗೆ = ಬೋಣಿಗೆ, ಬೋಣಿ.

ಬೋದ = ಎಚ್ಚರ, ಪ್ರಜ್ಞೆ.

ಬೋದಿಗೆ = ಕಂಬದ ಮೇಲೆ ತೊಲೆ ಕೂರಿಸಲು ಇರುವ ಮರದ ತುಂಡುತೊಲೆಗಳು.

ಬೋನ = ಅನ್ನ.

ಬೋನು = ಪಂಜರ, ಗೂಡು.

ಬೋರಂತ = ಬೋರ್ ಎಂಬ ಶಬ್ಧ.

ಬೋವೇರು = ದಂಡಿಗೆ ಹೊರುವವರು.

ಬೋಸುಡಿ = ವಿಧವೆ, ಕೆಟ್ಟ ನಡತೆಯವಳು.

ಬೋಳುಗಾಡಿ = ಸಾಮಾನು ಸಾಗಿಸಲು ಅನುಕೂಲವಾಗುವಂತೆ ಕಮಾನು ತೆಗೆದು ಹಾಕಿದ ಎತ್ತಿನಗಾಡಿ.

ಬೌಬೌ = ನಾಯಿ ಬೊಗಳುವಿಕೆ.

ಬ್ಯರ್ಕೋಲು = ಬತ್ತ ಒಕ್ಕಲು ಮಾಡುವಾಗ ಹುಲ್ಲು ತಿರುಗಿಸಿ ಹಾಕಲು ಮಾಡಿಕೊಂಡ ಸುಮಾರು ಐದು ಅಡಿಯ ತುದಿಯಲ್ಲಿ ಅದರದೇ ಮುಳ್ಳು ಇರುವ ಸಣ್ಣ ಬಿದಿರಿನ ಕೊಕ್ಕೆ, ಬೆರ್ಕೋಲು.

ಬ್ರಮ್ಮ = ಹಣೆ ಬರಹ ಬರೆಯುವವನು. ದೇವರು, ಮಲೆನಾಡಿನಲ್ಲಿ ದೈವವೆಂದು ಪೂಜಿಸುತ್ತಾರೆ.

ಬ್ಯಳ್ಗಾಗ = ಬೆಳಕು ಹರಿಯುವವರೆಗೂ.

ಬ್ಯಾಗ = ಬೇಗ.

ಬ್ಯಾಗಡೆ = ಬೇಗಡೆ.

ಬ್ಯಾಡ = ಬೇಡ.

ಬ್ಯಾಣ = ಹುಲ್ಲುಗಾವಲು.

ಬ್ಯಾತಾಳ = ಬೇತಾಳ.

ಬ್ಯಾನೆ ತೊಡಗು = ಹೆರಿಗೆ ನೋವು ಅನುಭವಿಸು.

ಬ್ಯಾರ್ಕೋಲು = ಬ್ಯರ್ಕೋಲು.

ಬ್ಯಾಸಾಯ = ಬೇಸಾಯ.

ಭ

ಭಂಗ = ಕಷ್ಟ.

ಭಂಗಿ = ಮತ್ತೇರಿಸುವ ಸೊಪ್ಪು, ಗಾಂಜಾ.

ಭಂಗಿ ಗಿಡ = ಗುಡ್ಡದ ಸರುಕಲಿನಲ್ಲಿ ಬೆಳೆಯುವ ಗಿಡ, ಇದರ ಎಲೆ/ ಬೀಜ ತಿಂದರೆ ತುಂಬಾ ಮತ್ತುಬರುತ್ತದೆ.

ಭಂಗು = ಮುಖದ ಮೇಲೆ ಉಂಟಾಗುವ ಕಪ್ಪು ಕಲೆ/ ಚರ್ಮರೋಗ.

ಭಂಡ = ನಾಚಿಕೆಗೆಟ್ಟವನು.

ಭಂಡಬಾಳು = ಹೀನ ಸ್ಥಿತಿ, ಹೀನವಾದ ಜೀವನ.

ಭುಗ್ = ಬೆಂಕಿ ತಕ್ಷಣ ಹೊತ್ತಿಕೊಳ್ಳುವುದನ್ನು ಸೂಚಿಸುವ ಶಬ್ಧ.

ಭಗ್ವಂತ = ಭಗವಂತ, ದೇವರು.

ಭುಗ್ಗಂತ = ತಕ್ಷಣ, ಧಡಕ್ಕನೆ, ಕ್ಷಣಮಾತ್ರದಲ್ಲಿ.

ಭಜನೆ = ದೇವರನ್ನು ಸ್ತುತಿಸುವುದು, ಹಾಡಿನಿಂದ ಸ್ತುತಿ.

ಭಟ್ಟಿಜಾರು = ಕರುಳು ಸುಲಿದು

ಕೊಳ್ಳುವುದು.
ಭಟ್ಟಿಸರಾಬು = ಮನೆಯಲ್ಲೆ ತಯಾರಿಸಿದ ಮಧ್ಯ/ಸಾರಾಯಿ.
ಭರಣಿ = ೧.ಉಪ್ಪಿನಕಾಯಿ/ತುಪ್ಪ ಹಾಕಿಡುವ ಜಾಡಿ ೨.ಒಂದು ಮಳೆ ನಕ್ಷತ್ರ.
ಭರಾಟೆ = ವೇಗ, ರಭಸ.
ಭಾಗ = ಪಾಲು.
ಭಾಗಸ್ಥ = ಪಾಲುದಾರ.
ಭಾಗ್ಯ = ಪುಣ್ಯ.
ಭಾರ = ತೂಕ, ವಜನು.
ಭಾವ = ಅಕ್ಕನ ಗಂಡ, ಗಂಡನ ಅಣ್ಣ.
ಭಿಲ್ವಾರ = ಸಣ್ಣ ಜಾತಿಯ ಗಟ್ಟಿನಾಟದ ಮರ, ಬೆಳಾಲೆಯಂತೆ ಆದರೆ ಸಣ್ಣ ಎಲೆ.
ಭೂತ = ದೆವ್ವ, ಪಿಶಾಚಿ.
ಭೂತ ಕನ್ನಡಿ = ಇರುವುದಕ್ಕಿಂತ ದೊಡ್ಡದಾಗಿ ಪ್ರತಿಬಿಂಬಿಸುವ ಕನ್ನಡಿ.
ಭೂಮಿ = ನೆಲ, ಮಣ್ಣು.
ಭೂಮಿ ಬಲಿಯುವುದು = ಭೂಮಿ ಹುಣ್ಣಿಮೆಯ ಮರುದಿನ.
ಭೂರಗನ ಮರ = ಮರ ಲಡ್ಡು, ಇದರ ಕಾಯಿ ಒಣಗಿ ಹತ್ತಿಯಾಗುತ್ತದೆ.
ಭೋಗ್ಯ = ಗುತ್ತಿಗೆ.
ಭೋಗ್ಯ ಪತ್ರ = ಗುತ್ತಿಗೆಯ ಕರಾರು ಪತ್ರ.
ಭೋರಂತ = "ಭೋರ್" ಎಂದು ಮಳೆ ಸುರಿಯುವ ಶಬ್ಧ (ಅಲಂ).
ಭ್ರಮೆ = ಹುಚ್ಚು.
ಭ್ರಾಂತು = ಹುಚ್ಚು.

ಮ

ಮಂಕ = ದಡ್ಡ, ಪೆದ್ದ.
ಮಂಕು = ೧. ಬೆಪ್ಪು, ೨. ಮಸುಕು.
ಮಂಗ = ೧. ಕೋತಿ, ೨. ಬೇಜವಾಬ್ದಾರಿ ಮನುಷ್ಯ (**ಅಲಂ**).
ಮಂಗಟ್ಟೆಹಕ್ಕಿ = ಒಂದು ಪಕ್ಷಿ.
ಮಂಗನ ಬಳ್ಳಿ = ಅಮೃತಬಳ್ಳಿ, ಹೆಂಡಮಾಡಲು ಹಾಕುತ್ತಾರೆ.
ಮಂಗಮಾಯ = ಕಣ್ಮರೆ, ಇದ್ದಕ್ಕಿದ್ದಂತೆ ಕಣ್ಮರೆಯಾಗುವುದು.
ಮಂಚ = ಎತ್ತರದ ಪೀಠ.
ಮಂಜಟ್ಟೆಬೇರು = ಒಂದು ಜಾತಿಯ ಬಳ್ಳಿಯ ಬೇರು ಭೇದಿ ನಿಲ್ಲಲು ಔಷಧಿಯಾಗಿ ಬಳಕೆ. ೨.ಒಣಗಿಸಿ ಪುಡಿ ಮಾಡಿ ಅಡಿಕೆ ಬೇಯಿಸುವಾಗ ಬಣ್ಣವಾಗಿ ಬಳಕೆ.
ಮಂಜು = ೧.ಇಬ್ಬನಿ, ಹಿಮ, ೨.ಮಸುಕು, ಮಬ್ಬು.
ಮಂಜೂರು = ಮಾನ್ಯತೆ, ಒಪ್ಪಿಗೆ, ಅನುಮತಿ.
ಮಂಟಪ = ಅಲಂಕೃತವಾದ ಕಿರು ಚಪ್ಪರ.
ಮಂಟೇನಾಗ = ಹಾಳಾಗ (ನಿನ್ನ ಮನೆ ಮಂಟೇನಾಗ)ಒಂದು ಬೈಗುಳ.
ಮಂಡ = ಮೊಂಡ, ಹರಿತವಿಲ್ಲದ್ದು.
ಮಂಡಕ್ಕಿ = ಪುರಿ, ಹುರಿದ ಅಕ್ಕಿ.
ಮಂಡ್ಗತ್ತಿ = ಚೂಪಾಗಿರುವ ಅಗಲ

ಬಾಯಿಯ ಕತ್ತಿ.

ಮಂಡ್ಲ = ಮಂಡಲ, ಪರಿಧಿ, ಚಕ್ರಾಕಾರದ ಪರಿಧಿ.

ಮಂಡ್ರಗಪ್ಪೆ = ದೊಡ್ಡಕಪ್ಪೆ, ಡೊಂಗರ ಗಪ್ಪೆ.

ಮಂಡಾಳೆ = ಅಡಿಕೆ ಹಾಳೆಯಿಂದ ಮಾಡಿದ ತಲೆಯುಡುಗೆ/ಟೊಪ್ಪಿ.

ಮಂಡಿ = ೧. ಮೊಣಕಾಲಿನ ಗಂಟು, ೨.ಅಡಿಕೆಯ ಸಗಟು ವ್ಯಾಪಾರದ ದಾಸ್ತಾನು ಮಳಿಗೆ.

ಮಂಡೆ = ತಲೆ, ಶಿರ.

ಮಂದ = ನಿಧಾನ, ಆಲಸ್ಯ ೨. ಕಾಂತಿ ಹೀನ, ಮಬ್ಬು ೩. ದಪ್ಪ.

ಮಂದಬುದ್ಧಿ = ತಿಳಿಗೇಡಿ, ದಡ್ಡ.

ಮಂದಬೆಣ್ಕು = ಮಬ್ಬು ಬೆಳಕು.

ಮಂದಾರ = ತಿಳಿಹಳದಿ ಬಣ್ಣದ ಹೂ / ಅದರ ಗಿಡ.

ಮಕಾಡೆ = ಮುಖ ಕೆಳಗೆ ಮಾಡಿ (ಮಕಾಡೆ ಮಲಗುವುದು).

ಮಕ್ಕಿ = ಮಳೆ ಬಂದರೆ ಮಾತ್ರ ನೀರಿದ್ದು ಉಳಿದಂತೆ ಒಣಭೂಮಿ, ಮೇಲಿನ ನೀರಿಲ್ಲದ ಗದ್ದೆ.

ಮಕ್ಕಿಗದ್ದೆ = ನೀರಿಲ್ಲದ ಮೇಲಿನ ಗದ್ದೆ.

ಮಖ = ಮಗೆ ಮಳೆ, ಒಂದು ಮಳೆ ನಕ್ಷತ್ರ, ಮುಖ.

ಮಗ = ಪುತ್ರ, ಸುತ.

ಮಗಚು = ಮಗ್ಚು, ತಿರುವಿಹಾಕು.

ಮಗಳು = ಪುತ್ರಿ, ಸುತೆ.

ಮಗಿ = ತೋಡು, ದ್ರವಪದಾರ್ಥವನ್ನು ತೋಡು (ನೀರುತೋಡು/ಮಗಿ).

ಮಗ್ಗಿ = ಲೆಕ್ಕ, ಗುಣಾಕಾರ.

ಮಗ್ಚಿ ಮನಗು = ಮುಖ ಅಡಿಮಾಡಿ ಮಲಗು, ಮಕಾಡೆಯಾಗು.

ಮಗ್ಗು = ಮೊಗ್ಗು, ಇನ್ನೂ ಅರಳದ ಹೂ.

ಮಗ್ಚು = ಮಗುಚು, ತಿರುವಿ ಹಾಕು.

ಮಗೆ = ಸಣ್ಣ ಕಂಠವಿರುವ ಕುಡಿಕೆ.

ಮಚ್ಗಿ = ಮಂಚಿಗೆ, ಕಾವಲು ಗುಡಿಸಲು.

ಮಚ್ಚೆ = ಹುಟ್ಟಿನಿಂದಲೇ ಇರುವ ಮೈಮೇಲಿನ ಕಲೆ.

ಮಜಲು ಮಾಡುವುದು = ಕುದುರೆ ಗಾಡಿಯಲ್ಲಿ ಪ್ರಯಾಣಿಸುವಾಗ ದಾರಿಮಧ್ಯೆ ವಿಶ್ರಾಂತಿಗಾಗಿ ನಿಲ್ಲುವುದು.

ಮಜ್ಜಾನ = ಮಧ್ಯಾಹ್ನ.

ಮಜ್ಗಿ = ಮಜ್ಜಿಗೆ, ಕಡೆದ ಮೊಸರು.

ಮುಜ್ಗಿಕಾಯಿ = ಹುಳಿಕಾಯಿ ಪೊದೆಯಲ್ಲಿರುತ್ತದೆ ತಿನ್ನಲು ರುಚಿ, ಬಲಿತ ಕಾಯಿಗಳನ್ನು ಪೆಟ್ಲು ಹೊಡೆಯಲು ಉಪಯೋಗಿಸುತ್ತಾರೆ.

ಮುಜ್ಗಿ ಹುಲ್ಲು = ಏಲಕ್ಕಿ, ಶುಂಠಿ, ನೀರಿನೊಂದಿಗೆ ಪಿತ್ಥ ಶಮನಕಾರಿ.

ಮಜ್ಗಿ ಸಾರು = ಒಗ್ಗರಿಸಿದ ಮಜ್ಜಿಗೆ.

ಮಟಮಟ ಮಧ್ಯಾಹ್ನ = ಹನ್ನೆರಡು ಗಂಟೆಯ ಉರಿಬಿಸಿಲಿನ ಸಮಯ.

ಮಟ್ಟಿ = ಸಮತಲ, ರಸಮಟ್ಟ.

ಮಟ್ಗೋಲು = ಗೋಡೆ ಕಟ್ಟುವಾಗ ಗೋಡೆಯನ್ನು ನೇರಗೊಳಿಸಲು ಬಳಸುವ ಪಟ್ಟಿಕೋಲು, ಮಟ್ಟ ಮಾಡುವ ಕೋಲು

ಮಟ್ಟಹಾಕು = ಇನ್ನೊಬ್ಬರನ್ನು ಬೆಳೆಯಗೊಡದಿರು, ನಿಯಂತ್ರಿಸು.
ಮಟ್ಟು = ಮೊಟ್ಟು, ಪೊದೆ.
ಮಡಕೆ = ಮಣ್ಣಿನ ಪಾತ್ರೆ.
ಮಡಚು = ಮಡಿಸು, ಪದರ ಮಾಡು, ಇಂಬುಳ್ಸು.
ಮಡಕೆ ಓಡು = ಮಡಕೆಯ ಚೂರು.
ಮಡ್ಲಕ್ಕಿ = ಮಡಿಲು ತುಂಬಿಸುವ ಅಕ್ಕಿ.
ಮಡಿ = ೧.ಪಾತಿ, ಬಿತ್ತನೆ ಮಾಡಲು ಹದಗೊಳಿಸಿದ ಚೌಕಾಕಾರದ ಭೂಮಿ ೨.ಶುಚಿ ೩.ಒಣಗಿಸಿದ ಪದಾರ್ಥಗಳನ್ನು ಒಟ್ಟುಮಾಡು (ಅಡಿಕೆ ಮಡಿ).
ಮಡಿಕೆ = ಮಡಿಸಿದುದು, ನೆರಿಗೆ.
ಮಡ್ಕಿ = ಮಡಿಕೆ.
ಮಡ್ಡಿ = ೧.ತಳದಲ್ಲಿ ನಿಂತ ಗಸಿ, ೨.ದನಕರುಗಳಿಗಾಗಿ ಬೇಯಿಸಿದ ತಿನಿಸು.
ಮಡ್ಲು = ೧.ಮಡಿಲು, ೨.ತೆಂಗು/ಅಡಿಕೆಯ ಹೆಡ್ಲು/ಗರಿ ೩.ಕಣ ಗುಡಿಸುವ ದೊಡ್ಡಗರಿ.
ಮಡ್ಲೆ = ಗಟ್ಟಿಮರ, ಹೂವುಕಾಯಿ ಬಿಡುತ್ತದೆ.
ಮಣಕ = ಇನ್ನೂ ಪ್ರಾಯಕ್ಕೆ ಬರುತ್ತಿರುವ ಜಾನುವಾರು.
ಮಣಲು = ಮರಳು.
ಮಣಿಕಟ್ಟು = ೧.ಹಸ್ತ/ಪಾದದ ಮೂಳೆ ಮತ್ತು ಸಂದುಗಳು ೨.ಲೆಕ್ಕ ಕಲಿಸುವ ಮಣಿಗಳಿರುವ ಚೌಕ.
ಮಣಿಹಾಡ್ಲಹಕ್ಕಿ = ದೂಪದ ಕಾಯಿ, ಕೂಳೆಕಾಯಿ ತಿನ್ನುವ ಹಸಿರು/ಕಪ್ಪುಹಕ್ಕಿ.
ಮಣ್ಣು = ಧೂಳು, ನೆಲ, ಭೂಮಿ.
ಮಣೆ = ಮರದ ಪೀಠ, ನೆಲಮಟ್ಟಕ್ಕೆ ಕುಳಿತುಕೊಳ್ಳುವ ಹಲಗೆಯ ತುಂಡು.
ಮಣೆಗಾರ್ಕಿ = ಪಾರುಪತ್ಯಗಾರಿಕೆ.
ಮಣ್ಣೊಡ್ಡ = ಮಣ್ಣಿನ ಕೆಲಸ ಮಾಡುವವನು.
ಮತ್ತಿ ಅವರೆ = ಕೆಂಪುಬೀಜ, ಹಸಿರು ಕೆಂಪುಕಾಯಿ.
ಮತ್ತಿಮರ = ಗಟ್ಟಿನಾಟದ ಮರ.
ಮತ್ತು = ಅಮಲು.
ಮತ್ತೆ = ಪುನಃ, ತಿರುಗಿ, ಇನ್ನೊಂದು ಸಲ.
ಮತ್ತೆ ಮತ್ತೆ = ಪುನಃ ಪುನಃ, ಪದೇ ಪದೇ.
ಮತ್ತೊಂದು = ಇನ್ನೊಂದು.
ಮತ್ತೋಟು = ಇನ್ನಷ್ಟು, ಮತ್ತಷ್ಟು.
ಮದರಂಗಿ = ಗೋರಂಟಿ.
ಮದ್ದ್ರರ್ಸನ ಮರ = ನಂದಿಬಟ್ಟಲಿನಂತೆ ಹೂ ಬಿಡುವ, ಹಾಲು ಒಸರುವ ಔಷದಿಯುಕ್ತ ಸಣ್ಣಮರ.
ಮದ್ಲಗಿತ್ತಿ = ಮದುಮಗಳು.
ಮದಲಿಂಗ = ಮದುಮಗ.
ಮದ್ದಾಲೆ ಮರ = ದೊಡ್ಡ ಜಾತಿಯ ಮರ, ಇದರ ತೆಪ್ಪೆ ಔಷಧಿಯುಕ್ತ, ಕೊಡೆ ಅಮಾವಾಸ್ಯೆಯಂದು ಬೆಳಗಾಗುವ ಮೊದಲೇ ತೆಪ್ಪೆಯ ರಸವನ್ನು ಕುಡಿಯುತ್ತಾರೆ.
ಮದ್ಲಿಂದ = ಮೊದಲಿಂದ.
ಮದ್ದು = ಔಷಧಿ.

ಮದುಮಕ್ಳು = ಮದುಮಗ ಮತ್ತು ಮದುಮಗಳು.

ಮದ್ದುಹಾಕದು = ಗೋಸುಂಬೆಯನ್ನು ಕೊಂದು ತಯಾರಿಸಿದ ವಿಷವನ್ನು ಊಟದಲ್ಲಿ ಬೆರೆಸಿ ಕೊಡುವುದು ಎಂಬ ನಂಬಿಕೆ.

ಮದ್ದುಹಿಂಡು = ಕೆಮ್ಮು, ಕಫ, ಗೂರಲಿಗೆ ಮದ್ದಿನ ಸೊಪ್ಪನ್ನು ಅರೆದು ಕುಡಿಸುವುದು.

ಮದೆ = ಮದವೆ, ಲಗ್ನ, ವಿವಾಹ.

ಮದೆಮನೆ = ಮದುವೆಮನೆ.

ಮದೋಣ್ಗ = ಮದುವಣಿಗ

ಮದೋಳ್ಗ = ಮದ್ಲಗಿತ್ತಿ.

ಮನಕ = ಮಲಗು.

ಮನಗಾಣು = ತಿಳಿದುಕೋ.

ಮನ್‌ತನ = ಮನೆತನ, ವಂಶ.

ಮನ್‌ದಳ = ಮನೆಕಟ್ಟುವ ಜಾಗ, ನಿವೇಶನ.

ಮನ್‌ಮನೆ = ಪ್ರತಿಮನೆ, ಪ್ರತಿಯೊಂದು ಮನೆ.

ಮನಸ್ತಾಪ = ವೈಮನಸ್ಸು.

ಮನ್ನ = ಮೂಗ, ಬಾಯಿ/ಮಾತು ಬರದೇಯಿರುವುದು.

ಮನ್ನಿಂದ = ಮೊನ್ನೆಯಿಂದ.

ಮನುಗು = ಮಲಗು, ನಿದ್ದೆಮಾಡು.

ಮನೆ ಆಯ = ನಿಜಮನೆಯ ಅಳತೆಯನ್ನು ಮನೆಯ ಯಜಮಾನರ ನಕ್ಷತ್ರಕ್ಕೆ ತಕ್ಕಂತೆ ನಿಗದಿಪಡಿಸುವುದು.

ಮನೆನೋಡೋಶಾಸ್ತ್ರ = ಗಂಡು ಹೆಣ್ಣು ಒಪ್ಪಿಗೆಯಾದ ಮೇಲೆ ಪರಸ್ಪರರ ಮನೆ ನೋಡಲು ಹೋಗುವುದು.

ಮನೆಯಾಳ್ತನ = ಮಗಳನ್ನು ಮದುವೆ ಮಾಡಿಕೊಟ್ಟು ಅಳಿಯನನ್ನು ಮನೆಯಲ್ಲಿಯೇ ಇಟ್ಟುಕೊಳ್ಳುವುದು.

ಮನ್ನೆ = ಮೊನ್ನೆ.

ಮಲ್ಗು = ಮಲಗು.

ಮಬ್ಬು = ಮಸುಕು, ಸ್ಪಷ್ಟವಾಗಿ ಕಾಣದಿರುವುದು.

ಮಬ್ಬುಗತ್ಲೆ = ಸಂಜೆಗತ್ತಲು.

ಮಯತ್ತು = ಅನುಭವ (ಮಯತ್ತು ಇಲ್ಲದಿದ್ರೆ ಕೆಲಸ ಮಾಡುವುದು ಕಷ್ಟ).

ಮರ = ದೊಡ್ಡಗಿಡ, ವೃಕ್ಷ, ತರು ೨. ಧಾನ್ಯಗಳನ್ನು ಶುದ್ಧ ಮಾಡಲು ಬಳಸುವ ಬಿದಿರಿನ ಸಾಧನ, ಮೊರ.

ಮರಕುಟ್ಗ = ಮರಕುಟಿಗ, ಒಂದು ಹಕ್ಕಿ.

ಮರಗುಳಿ = ಮರೆಯುವ ಅಭ್ಯಾಸ-ವಿರುವವನು, ನೆನಪಿನ ಶಕ್ತಿ ಕುಂದಿರುವವನು.

ಮರಗೆಣಸು = ಬಳ್ಳಿಯ ಬುಡದಲ್ಲಿ ಗೆಣಸಿನಂತೆ ಸಣ್ಣ ಗಡ್ಡೆ.

ಮರಟ್ಲು = ಮರ್ಚಿಟ್ಟೆ, ಅನ್ನದ ಗಂಜಿಯನ್ನು ಬಸಿಯಲು ಅನ್ನದ ಪಾತ್ರೆಯ ಬಾಯಿಗೆ ಸಿಬ್ಲದ ಮೇಲೆ ಮುಚ್ಚುವ ಮರದ ಹಲಗೆ.

ಮರ್ಗಡು = ಜೋಮುಹಿಡಿ, ಜಡವಾಗು.

ಮರ್ಮ = ಗುಟ್ಟು, ರಹಸ್ಯ.

ಮರವರ್ಲೆ = ಮರದ ಮೇಲೆ ಜೇನುಗೂಡಿನಂತಿರುವ ಗೆದ್ದಲು.

ಮರಸು ಬೇಟೆ = ಮರೆಯಲ್ಲಿ ಕುಳಿತು ಪ್ರಾಣಿಗಳನ್ನು ಬೇಟೆಯಾಡುವ

ಒಂದು ವಿಧಾನ.
ಮರ್ಯಾದಿ = ಮರ್ಯಾದೆ, ಗೌರವ.
ಮರಿ = ಕರು, ಪಿಳ್ಳೆ, ಕೂಸು.
ಮರಿಅಗ್ಚು = ಕೆಲವು ದಿನಗಳು ಸಲಹಿದ ನಂತರ ಕೋಳಿ, ನಾಯಿ ಮುಂತಾದವು ಮರಿಯಿಂದ ಬೇರಾಗುವುದು.
ಮರ್ಗಿ = ಹಿಟ್ಟನ್ನು ಕಲೆಸುವ ಅಗಲವಾದ ಮರದ ಸಾಧನ.
ಮರ್ಚಿಟ್ಟೆ = ಮರಟ್ಲು.
ಮರ್ದಿನ = ಮರುದಿನ.
ಮರುಗು = ಕೊರಗು, ದುಃಖಪಡು.
ಮರ್ಗುಣಿ = ದೊಂಟೆ, ದನಗಳ ಕೊರಳಿಗೆ ಕಟ್ಟುವ ಬಿದಿರಿನ ಗಂಟೆ.
ಮರೆಮಾಚದು = ಇನ್ನೊಬ್ಬರಿಗೆ ವಿಷಯ/ ವಸ್ತುವನ್ನು ಗಮನಕ್ಕೆ ತಾರದೆ ಗೋಪ್ಯವಾಗಿ ಇಡುವುದು.
ಮಲ್‌ನಾಡು = ಮಲೆನಾಡು, ಕಾಡು-ಗಳಿರುವ ಪ್ರದೇಶ.
ಮಲ = ಮೊಲ.
ಮಲತಾಯಿ = ತಂದೆಯ ಇನ್ನೊಬ್ಬ ಹೆಂಡತಿ.
ಮಲಮಗ = ಸವತಿಯ ಮಗ.
ಮಲಮಗಳು = ಸವತಿಯ ಮಗಳು.
ಮಲ್‌ಸೀಮೆ = ಮಲ್ನಾಡು.
ಮಲ್ಕ = ಮಲಗು.
ಮಲ್ಲಾರ = ಬಳೆಗಳ ಗೊಂಚಲು, ಬಳೆಗಳ ಗೊಂಚಲನ್ನಿಡುವ ಚೀಲ.
ಮಲ್ಗಿ ಹೂ = ಮಲ್ಲಿಗೆ ಹೂ, ಬಳ್ಳಿಯಲ್ಲಿ ಬಿಡುವ ಸುವಾಸನೆಯ ಬಿಳಿ ಹೂ.
ಮಲ್ಗಿಮಗ್ಗು = ಮಲ್ಲಿಗೆ ಹೂವಿನ ಮೊಗ್ಗು, ಬಂಗಾರದ ಕೇಶಾಲಂಕಾರ.
ಮಲ್ಗು = ಮಲಗು, ಮಲ್ಕ.
ಮಲ್ಲು ಬಟ್ಟೆ = ತೆಳುವೂ ನಯವೂ ಆದ ಬಿಳಿಯ ಹತ್ತಿ ಬಟ್ಟೆ.
ಮಲೆ ಉಣ್ಸು = ಎದೆಹಾಲನ್ನು ಕುಡಿಸು, ಮಗುವಿಗೆ ಹಾಲು ಕುಡಿಸು.
ಮಲೆಕೊಡು = ಮಲೆಉಣ್ಸು, ತುಡುಕೊಡು.
ಮಲೆತೊಟ್ಟು = ಮೊಲೆಯ ತುದಿಯ ಹಾಲುಣಿಸುವ ಭಾಗ.
ಮಲೆಸುಳಿ = ಎದೆಬಾವು, ಹಾಲುಣಿಸುವ ಹೆಂಗಸರಲ್ಲಿ ಕಾಣಿಸುವ ಒಂದು ರೀತಿಯ ನೋವಿನ ಗೆಡ್ಡೆ.
ಮವಳ = ಶ್ರಾವಣ ಮಾಸಕ್ಕೆ ಮೊದಲು ಗ್ರಾಮದೇವರಿಗೆ ಹರಕೆಕೊಟ್ಟು ಹಬ್ಬಮಾಡಿ ನೆಂಟರಿಷ್ಟರಿಗೆ ಊಟ ಹಾಕುವುದು.
ಮಸ್‌ತಾಗಿ = ಮಸ್ತಾಗಿ, ಹೆಚ್ಚಾಗಿ, ಯಥೇಚ್ಛವಾಗಿ.
ಮಸಣ = ಸ್ಮಶಾನ, ಶವಸಂಸ್ಕಾರ ಮಾಡುವ ಜಾಗ
ಮಸಲತ್ತು = ಉಪಾಯ, ಹಂಚಿಕೆ.
ಮಸಳೆ = ಮೊಸಳೆ, ದೊಡ್ಡ ಜಲಚರ.
ಮಸಿ = ೧. ಹೊಗೆಯ ಕರಿ ೨. ಆರಿಸಿದ ಕೆಂಡ ೩. ಶಾಯಿ ೪ ಕೊಳೆ ೫ ಕೋವಿಗೆ ತುಂಬುವ ರಂಜಕದ ಪುಡಿ.
ಮಸಿಚೀಲ = ಶಿಕಾರಿಯವರು ಬಳಸುವ ಮದ್ದುಗುಂಡು ತುಂಬಿಡುವ ಬಟ್ಟೆ ಅಥವಾ ಚರ್ಮದ ಚೀಲ.

ಮಸಿಡಬ್ಬಿ = ರಂಜಕದ ಪುಡಿಯನ್ನು ತುಂಬಿಸಿಡುವ ಡಬ್ಬಿ.
ಮಸುಕು = ಮಬ್ಬು, ಮಂದ ಬೆಳಕು.
ಮಸ್ತು = ಹೆಚ್ಚು, ಯತೇಚ್ಛ.
ಮಸೆಗೋಲು = ಬೆಣಚು ಕಲ್ಲಿನ ಪುಡಿ ಹಾಕಿ ಆಯುಧಗಳನ್ನು ಹರಿತಗೊಳಿಸುವ ಮರದ ತುಂಡು.
ಮಸೆಹುಲ್ಲು = ಚಾಪೆ ಮತ್ತು ಇತರ ವಸ್ತುಗಳನ್ನು ಮಾಡಲು ಉಪಯೋಗಕ್ಕೆ ಬರುವ ಒಂದು ಜಾತಿಯ ಹುಲ್ಲು.
ಮಳ = ಅಳತೆ, ಕೈಗಂಟಿನಿಂದ ಮಧ್ಯ ಬೆರಳಿನ ತುದಿಯವರೆಗಿನ ಅಳತೆ ಒಂದು ಮಳ/ಮೊಳ.
ಮಳ್ಕೆ = ಮೊಳಕೆ.
ಮಳಗಾಲ = ಮಳೆಗಾಲ, ಮಳೆ ಹುಯ್ಯುವ ಕಾಲ.
ಮಳಲು = ಮರಳು, ಹೂಗೆ.
ಮಳ್ಳು = ೧.ಮರುಳು, ಹುಚ್ಚು, ೨.ಮಳಲು.
ಮಳೆ = ೧.ಮುಗಿಲಿನಿಂದ ನೀರು ಸುರಿಯುವುದು, ವರ್ಷ, ವೃಷ್ಟಿ ೨.ಮೊಳೆ.
ಮಳೆಬಿಲ್ಲು = ಕಾಮನಬಿಲ್ಲು.
ಮಳೆಹನಿಗಡ್ಡದೆ = ಮಳೆ ಹನಿ ಹಾಕುವುದು ನಿಂತಿದೆ, ಮಳೆ ನಿಂತಿದೆ.
ಮಳೆ ಹುಯ್ಯು = ಮಳೆ ಸುರಿ, ಮಳೆ ಬರುವುದು.
ಮಳೆ ಹೊಳು ಆಗು = ಮಳೆ ಕಡಿಮೆಯಾಗು, ಮಳೆ ಬಂದು ನಿಂತು ಹೋಗು.
ಮಾಂಗಲ್ಯ = ಮದುವೆಯಲ್ಲಿ ವರನಿಂದ ವಧುವಿನ ಕೊರಳಿಗೆ ಕಟ್ಟಿಸಿದ ತಾಳಿ.
ಮಾಂಸ = ಬಾಡು, ತುಂಡು.
ಮಾಗು = ೧. ಪಕ್ವವಾಗು, ಹಣ್ಣಾಗು ೨. ಗುಣವಾಗು.
ಮಾಜರು = ಮಹಜರು, ಪಂಚನಾಮೆ.
ಮಾಟ = ೧. ಮೋಸ, ಕೇಡು, ಯಕ್ಷಿಣಿ ೨. ಬೇರೆಯುವರಿಗೆ ಕೇಡು ಮಾಡುವ ಒಂದು ಕ್ರಿಯೆ ೨. ಕೆಲಸದಲ್ಲಿ ಕೌಶಲ್ಯ, ಕುಸುರಿ ಕೆಲಸ.
ಮಾಟಿ = ಕಿವಿಯಿಂದ ಕೂದಲಿಗೆ ಸಿಕ್ಕಿಸುವ ಒಂದು ಚಿನ್ನದ ಆಭರಣ.
ಮಾಡ = ಹಲಸಿನ ಹಣ್ಣಿನಲ್ಲಿ ತೋಳೆಗಳು ಅಂಟಿಕೊಂಡಿರುವ ಮಧ್ಯಭಾಗ.
ಮಾಡಟಿಗೆ = ಮಾಡುತ್ತಿದ್ದಂತೆ, ಮಾಡುವಷ್ಟರಲ್ಲಿ.
ಮಾಡ್ಕಂಬೈದು = ಮಾಡಿಕೊಳ್ಳಬಹುದು.
ಮಾಡಾಗಲ ಕಾಯಿ = ಸಣ್ಣದಾದ, ತುಂಬಾ ಕಹಿಯಿರುವ ಹಚ್ಚಹಸಿರು ಹಾಗಲಕಾಯಿ.
ಮಾಡಿ = ಮಹಡಿ.
ಮಾಡು = ೧. ನಿರ್ವಹಿಸು ೨. ಸೂರು, ಛಾವಣಿ.
ಮಾಣಿ = ಬ್ರಾಹ್ಮಣರ ಎಳೆಯ ಹುಡುಗ.
ಮಾಣಿಕಾಯಿ = ಅಡಕೆಯ ಅತಿಸಣ್ಣ ಸುಲಿಬೇಳೆ.
ಮಾಣಿಗಿ = ನಡುಮನೆ.
ಮಾಣ್ಗಿ = ಮಾಣಿಗಿ.

ಮಾಣ್ಗೆ ವಳ್ಗೆ = ನಡುಮನೆಯಲ್ಲಿ, ನಡುಮನೆಯ ಒಳಗೆ.

ಮಾತಿಗ್ಮಾತಾಡು = ಎದುರಾಡು, ಎದುರುತ್ತರ ಕೊಡು.

ಮಾತು = ಶಬ್ಧ, ನುಡಿ.

ಮಾತುಕತೆ = ಸಂಭಾಷಣೆ.

ಮಾತುತುಂಡುಗಡಿ = ೧.ಮಾತನ್ನು ಅರ್ಧಕ್ಕೆ ನಿಲ್ಲಿಸು, ೨. ಮುಂದೆ ಮಾತಾಡಲು ಬಿಡದಿರುವುದು.

ಮಾತು ತುಂಡುಗಡಿಯುದೆಯಿಲ್ಲ = ವಿರಾಮವಿಲ್ಲದೆ ಒಂದೇ ಸಮನೆ ಬೇರೆಯವರಿಗೆ ಅವಕಾಶವನ್ನೂ ಕೊಡದೆ ಮಾತಾಡುವಿಕೆ.

ಮಾತೆತ್ತು = ವಿಷಯ ಪ್ರಸಾಪಿಸು.

ಮಾತ್ರ = ಆದರೆ, ಕೇವಲ.

ಮಾತ್ರೆ = ಗುಳಿಗೆ.

ಮಾದಾರ = ಕುಳುವಾಡಿ, ಊರಿನ ಪ್ರಮುಖರು ಸತ್ತಾಗ ಎಲ್ಲರಿಗೂ ಸುದ್ದಿ ತಿಳಿಸಿ, ಕಟ್ಟಿಗೆ-ಸೂಡು ಮಾಡುವ ಮಾದಾರರ ಮುಖ್ಯಸ್ಥ.

ಮಾನ = ಗೌರವ, ಘನತೆ.

ಮಾಮೂಲಿ = ರೂಢಿ, ಸಂಪ್ರದಾಯ.

ಮಾಮೇರಿ = ಸಿಕ್ಕಾಪಟ್ಟೆ, ಬಹಳ, ಬಹಳ ದೊಡ್ಡ.

ಮಾಯ = ೧.ಇಂದ್ರ ಜಾಲ ೨. ಕಣ್ಕಟ್ಟು, ಮರೆಯಾಗು, ಕಾಣದಾಗು.

ಮಾಯ್ಕ = ಯಾರಿಗೂ ಗೊತ್ತಿಲ್ಲದಂತೆ/ ಗೊತ್ತಾಗದಂತೆ ಮಾಡು.

ಮಾಯು = ಗುಣವಾಗು, ವಾಸಿಯಾಗು.

ಮಾರಾಯ = ಮಹಾರಾಯ, ಸಲಿಗೆಯಿಂದ ಗಂಡಸರನ್ನು ಕರೆಯುವ ರೀತಿ, ಮಾರಾಯ್ನೆ.

ಮಾರಾಯ್ತಿ = ಮಹಾರಾಯತಿ, ಸಲಿಗೆಯಿಂದ ಹೆಂಗಸನ್ನು ಕರೆಯುವ ರೀತಿ, ಮಾರೇತಿ.

ಮಾರಿ = ಒಂದು ದೈವ, ಎಲ್ಲ ಊರಿನವರೂ ಗಡಿದಾಟಿ ಸುತ್ತಾರೆ.

ಮಾರಿಗಡಿದಾಟ್ಸು = ಸಾಂಕ್ರಾಮಿಕ ರೋಗಗಳು ಬರದಿರಲೆಂದು, ಮರದಲ್ಲಿ ಮಾರಿಯ ಬೊಂಬೆಮಾಡಿ ಊರಗಡಿಯಿಂದ ಹೊರಗೆ ಬಿಟ್ಟು ಬರುವ ಒಂದು ಆಚರಣೆ.

ಮಾರೀಪತ್ತು = ಜವಾಬ್ದಾರಿ, ಹೊಣೆ.

ಮಾರು = ೧.ವ್ಯಾಪಾರ ಮಾಡು, ವಿಕ್ರಯಿಸು ೨.ಹನ್ನೆರಡು ಗಜದ ಒಂದು ಅಳತೆ, ಎರಡೂ ಕೈಗಳನ್ನು ಪಕ್ಕಕ್ಕೆ ಚಾಚಿದಾಗ. ಎಡಮಧ್ಯ ಬೆರಳಿನ ತುದಿಯಿಂದ ಬಲಮಧ್ಯಬೆರಳಿನ ತುದಿಯ ವರೆಗಿನ ಅಳತೆ.

ಮಾರುಗಾಲು = ಮಾರಿಗೊಂದೊಂದು ಕಾಲು ಹಾಕಿ ನಡೆಯುವುದು ೨.ದಾಪುಗಾಲು.

ಮಾರೇತಿ = ಮಾರಾಯ್ತಿ, ಮಹಾರಾಯ್ತಿ.

ಮಾರ್ನೋಮಿ = ಮಹಾನವಮಿ, ನವರಾತ್ರಿಯ ಒಂಭತ್ತನೆಯ ದಿನ.

ಮಾಲದು = ಬಾಗುವುದು, ಒರಗುವುದು.

ಮಾಲ್ಗಣ್ಣು = ಮೆಳ್ಳಗಣ್ಣು, ವಾರ್ಗಣ್ಣು.

ಮಾಲಾಯ = ಮಹಾಲಯ, ಪಿತೃಪಕ್ಷ.
ಮಾಲಿಸು = ಒರಗಿಸು, ಒರಗಿ ನಿಲ್ಲಿಸು.
ಮಾಲು = ೧.ಬಾಗು, ಓರೆಯಾಗು ೨.ಸರಕು ೩.ಒರಗು.
ಮಾಲೆ = ಸರ, ಹೂವಿನಸರ.
ಮಾಲೇರು = ಒಂದು ಬುಡಕಟ್ಟಿನ ಹೆಸರು.
ಮಾವ = ೧.ಹೆಂಡತಿ/ಗಂಡನ ತಂದೆ ೨. ಅತ್ತೆಯ ಗಂಡ ೩. ತಾಯಿಯ ತಮ್ಮ.
ಮಾವಟಿಗ = ಮಾವುತ, ಆನೆ ನಡೆಸುವವನು.
ಮಾವಯ್ಯ = ಗಂಡನ ತಂದೆ, ಮಾವ.
ಮಾವಳ = ಮವಳ.
ಮಾವುತ = ಮಾವಟಿಗ, ಆನೆ ನಡೆಸುವವ.
ಮಾಸ = ೧. ತಿಂಗಳು ೨. ಮಾಂಸ, ಬಾಡು.
ಮಾಸಲು = ಕಾಂತಿಯಿಲ್ಲದ, ಮಂಕು.
ಮಾಸ್ತಿಕಲ್ಲು = ಮಹಾಸತಿಯ ನೆನಪಿನಲ್ಲಿ ಹಾಕಿದ ಕಲ್ಲು.
ಮಾಸು = ೧.ಹೆರಿಗೆಯ ನಂತರ ಹೊರ ಬೀಳುವ ಕೂಸಿನ ಚೀಲ, ಕರುಹಾಕಿದ ನಂತರ ಹೊರ ಬರುವ ಕಸ ೨.ಬಣ್ಣಗೇಡು.
ಮಾಸ್ಗೋಣದು = ಪ್ರಾಣಿಗಳ ಹಾಲು ಉತ್ಪತ್ತಿ ನಿಲ್ಲುವುದು.
ಮಾಳ ಬೆಕ್ಕು = ಗಂಡುಬೆಕ್ಕು, ಮ್ಯಾಣ್ಬೆಕ್ಕು.
ಮಾಳಿಗೆ = ಮಣ್ಣಿನ ಛಾವಣಿ.
ಮ್ಯಾಣ್ಬೆಕ್ಕು = ಮಾಳಬೆಕ್ಕು.
ಮಿಂಚು = ಮದುವೆ ಗಂಡಿನ ಕಾಲಿಗೆ ಹಾಕುವ ಉಂಗುರ, ಹೆಂಗಸರು ಕಾಲಿನ ಮೂರನೇ ಬೆರಳಿಗೆ ಹಾಕಿಕೊಳ್ಳುವ ಬೆಳ್ಳಿಯ ಆಭರಣ.
ಮಿಂಚುಳ = ಮಿಣುಕು ಹುಳ.
ಮಿಂಚುಳ್ಳಿ = ಮೀನು ಹಿಡಿಯುವ ಹಕ್ಕಿ, ಮೀಂಚುಳ್ಳಿ, ಗುಂಡು ಮುಳುಕನ ಹಕ್ಕಿ.
ಮಿಂಡ = ಜಾರ, ಉಪಪತಿ, ಗಂಡ ನಲ್ಲದವ.
ಮಿಂದ್ಕ ಬರೂದು = ೧.ಸ್ನಾನ ಮಾಡುವುದು, ೨. ಮುಟ್ಟಾದ ಮೂರು/ಐದನೇ ದಿನ ಮಾಡುವ ಸ್ನಾನ.
ಮಿಂಡ್ಗಾತಿ = ಅನೈತಿಕ ಸಂಬಂಧವನ್ನು ಹೊಂದಿರುವವಳು.
ಮಿಗ್ತೆ = ಗೇಣಿ.
ಮಿಜಿಮಿಜಿ = ವ್ರಣದಲ್ಲಿ ಜಾಸ್ತಿ ಹುಳಗಳಾಗಿ ಮಿಸುಕಾಡು ವುದು. (ಅಲಂ)
ಮಿಟುಗಾಣ್ಸು = ಸೋಗಲಾಡಿತನ ಮಾಡು, ವೈಯ್ಯಾರಮಾಡು.
ಮಿಟುಗಾತಿ = ಮಿಟಕಲಾಡಿ, ವಯ್ಯಾರಿ, ಸೋಗಲಾಡಿ.
ಮಿಟುಗುಡಿ = ಹಾಳಾದ ಆಹಾರದಿಂದ ಹೊರಬರುವ ಸಣ್ಣ ಶಬ್ಧ.
ಮಿಟುಗಾಸಕೆ = ಅಲುಗಾಡಿಸಲು, ಬೇರೆ ಕೆಲಸ ಮಾಡಲು.
ಮಿಡತೆ = ಹಾರುವ ಒಂದು ಕೀಟ, ಶಿವನ ಕುದುರೆ.
ಮಿಡಿ = ೧. ಹೀಚು, ಕಸಗಾಯಿ, ಎಳೆಯಕಾಯಿ ೨. ಮೇಲೆ ಹಾರಿಸು, ಚಿಮ್ಮು.

ಮಿಡಿ ಹೆಣೆಯದು = ಗದ್ದೆಯಲ್ಲಿ ಒಡಗು ಬಿದ್ದಾಗ ಕೋಲು ಸೊಪ್ಪುಗಳಿಂದ ಅಡ್ಡಗಟ್ಟೆ ಕಟ್ಟುವುದು.

ಮಿಣ್ಣಗೆ = ಸುಮ್ಮನೆ, ಮಾತಾಡದೆ.

ಮಿಣಿ = ಹಗ್ಗ.

ಮಿಣಿದೇವ್ರು = ದೀಪಾವಳಿಯಲ್ಲಿ ಆಯುಧಗಳನ್ನಿಟ್ಟು, ಬಲೀಂದ್ರನನ್ನು ಹೂಡಿ ಪೂಜಿಸುವ ಒಂದು ದೇವರ ಹೆಸರು.

ಮಿಣ್ಣಿ = ಮೆಂತ್ಯದ ಹಿಟ್ಟಿನಿಂದ ತಯಾರಿಸಿದ ಸಿಹಿ ಭಕ್ಷ.

ಮಿಣುಕುಹುಳ = ಮಿಂಚುಳ, ದೇಹದಿಂದ ದೀಪ ಹಾಕುವ ಕೀಟ.

ಮಿತಿ = ಎಲ್ಲೆ, ಇತಿಮಿತಿ.

ಮಿತ್ಗರಿ = ಹೆಚ್ಚಾಗು.

ಮಿದಿ = ಕಲಸು, ನಾದು.

ಮಿದು = ಮೃದು, ಮೆದು, ಮೆತ್ತಗೆ

ಮಿನ್ನತ್ತು = ೧. ಉಪಚಾರ ೨. ಬಡಿವಾರ, ಆಯ್ಕುಟ್ಟು ೩. ಅತಿಯಾದ ಉಪಚಾರ ಮಾಡಿಸಿಕೊಳ್ಳುವುದು

ಮಿಲಾಕತ್ತು = ಬೆರೆಸುವುದು, ಚೆನ್ನಾಗಿ ಕಲಸುವುದು.

ಮಿಲಾಯ್ಸು = ಮಿಲಾಕತ್ತುಮಾಡು ೨. ಜಗಳಕಾಯುವುದು (ಕೈಕೈ ಮಿಲಾಯ್ಸು).

ಮಿಸ್ರೆಸರ = ಕಂಠಾಭರಣ.

ಮಿಳ್ಳೆ = ಕಂಚಿನ ಚಿಕ್ಕ ಚೊಂಬು.

ಮೀ = ಸ್ನಾನ ಮಾಡು, ಮೀಯು.

ಮೀನಂಗಿಮರ = ದೊಡ್ಡ ಜಾತಿಯ ಹೊಳೆ ಬದಿಯಲ್ಲಿ ಬೆಳೆಯುವ ಮರ. ಸುವಾಸನೆಯುಕ್ತ ಹೂವು, ಬಿಳಿಹಣ್ಣು

ಮೀನು = ಒಂದು ಜಲಚರ.

ಮೀನು ಕೂಣಿ = ಮೀನು ಹಿಡಿಯಲು ಬಳಸುವ ಒಂದು ರೀತಿಯ ಕುಕ್ಕೆ

ಮೀಯದು = ಸ್ನಾನ ಮಾಡುವುದು.

ಮೀಯಾನ = ಸ್ನಾನ ಮಾಡೋಣ.

ಮೀಯು = ಮೀ, ಸ್ನಾನಮಾಡು.

ಮೀರು = ದಾಟು.

ಮೀಸು = ಸ್ನಾನ ಮಾಡಿಸು, ಈಜು.

ಮೀಸೆ = ಗಂಡಸರ ಮೇಲ್ತುಟಿಯ ಮೇಲಿರುವ ಕೂದಲು.

ಮೀಸೆ ಬರು = ಪ್ರಾಯಕ್ಕೆ ಬರುವುದು.

ಮುಂಗ್ರಿ = ಮುಂಗ್ಸಿ.

ಮುಂಗ್ಸಿ = ಮುಂಗಸಿ, ಉಡದಂತಹ ಒಂದು ಪ್ರಾಣಿ, ಹಾವಿನ ಶತ್ರು.

ಮುಂಗಡ = ಮುಂಚಿತ್ವಾಗಿ ಹಣ ಪಡೆಯುವುದು.

ಮುಂಚಿತ = ಮೊದಲೇ, ಆಗಲೇ.

ಮುಂಚಿತವಾಗಿ = ಮುಂಚಿತ.

ಮುಂಚೆ = ಮೊದಲು, ಹಿಂದೆ, ಪೂರ್ವದಲ್ಲಿ.

ಮುಂಚಿಕಡೆ = ಮನೆಯ ಮುಂದುಗಡೆ.

ಮುಂಟಗಿ = ದಪ್ಪನೆಯ ಮರದ ಕಂಬ.

ಮುಂಟ ಬಸ್ರು = ಒಂದು ಮಗುವಾಗಿ ಮುಟ್ಟಾಗದೇ ಇನ್ನೊಂದು ಗರ್ಭ ಧರಿಸುವುದು.

ಮುಂಟಾಮೋಚ್ತು = ಮುಂಡವನ್ನು ನೆಲದಲ್ಲಿ ಮುಚ್ಚುವುದು, ಹೂಳುವುದು, ಒಂದು ಬೈಗುಳ.

ಮುಂಟಾಸ = ತಲೆಗೆ ಸುತ್ತಿಕೊಳ್ಳುವ ಒಂದು ರೀತಿಯ ರುಮಾಲು.

ಮುಂಡಾಸು = ಮುಂಡಾಸ, ತಲೆಗೆ ಸುತ್ತಿಕೊಂಡ ವಸ್ತ್ರ.

ಮುಂಡಿಗೆ ಕಂಬ = ಮನೆಯ ಒಳಗಿನ ಆಧಾರಕಂಬ, ಮುಂಡಗಿ.

ಮುಂಡು = ೧.ತುಂಡಾದ ದಪ್ಪ ಮರ ೨.ತುಂಡು ಪಂಚೆ, ಸಣ್ಣ ಪಂಚೆ.

ಮುಂಡುಕೋಳಿ = ಕಾಡುಕೋಳಿ.

ಮುಂಡುಗ = ನೀರಿನ ಸರುವಿನಲ್ಲಿ ಬೆಳೆಯುವ ಒಂದು ಜಾತಿಯ ಗಿಡ, ಕೇದಿಗೆ ಜಾತಿಯದು.

ಮುಂಡುಗನ ಚಾಪೆ = ಎಲೆಗಳನ್ನು ಒಣಗಿಸಿ, ಮುದುರಿ ಕತ್ತಾಳೆ ನಾರಿನಿಂದ ಹೆಣೆದ ಚಾಪೆ.

ಮುಂಡುಗನ ಬತ್ತ = ಒಂದು ಜಾತಿಯ ಬತ್ತ.

ಮುಂಡುಗಿಳಿ = ಸಾಮಾನ್ಯಗಿಳಿಗಿಂತ ಸಣ್ಣ ಜಾತಿಯ, ಹಣ್ಣು ಹಂಪಲು ತಿನ್ನುವ ಹಕ್ಕಿ. ಮೂತಿ ತುಂಬಾ ಬಾಗಿದ್ದು, ಬತ್ತದ ತೆನೆಗಳನ್ನು ಕತ್ತರಿಸುತ್ತದೆ.

ಮುಂಡೆ = ಗಂಡ ಸತ್ತವಳು.

ಮುಂಡೆ ಗಂಡ = ಗಂಡ ಸತ್ತವಳನ್ನು ಮದುವೆಯಾದವನು.

ಮುಂಡೆ ಮಗ = ಗಂಡಸತ್ತ ಮೇಲೆ ಹುಟ್ಟಿದ ಮಗು.

ಮುಂಡೆ ಮಕ್ಳು = ಮುಂಡೆಗೆ ಹುಟ್ಟಿದ ಮಕ್ಕಳು.

ಮುಂಡೇಡಿ = ಗದ್ದೆಯ ಅಂಚಿನಲ್ಲಿರುವ ಮೋಟು ಕಾಲುಗಳುಳ್ಳ ಏಡಿ.

ಮುಂದು = ಮುಂದುಗಡೆ.

ಮುಂದುಗಡೆ = ಮುಂಚೆಕಡೆ.

ಮುಂದೂಡು = ಮುಂದಕ್ಕೆ ಹಾಕು (ಯಾವುದಾದರೂ ವಿಚಾರ) ಮುಂದೆ ತಳ್ಳು, ಮುಂದಕ್ಕೆ ನೂಕು

ಮುಂದೆ = ಎದುರು.

ಮುಂಬರಿ = ಮುಂದುವರಿ.

ಮುಂಬಲ್ಲು = ಉಬ್ಬುಹಲ್ಲು.

ಮುಂಬಾರ = ಮುಮ್ಮಂಡಿ. ಎತ್ತಿನ ಗಾಡಿಗೆ ಮುಂದೆ ಭಾರ ಜಾಸ್ತಿಯಾಗುವುದು.

ಮುಂಬು = ಮುಂಬಲ್ಲು.

ಮುಂಬೂದಿ = ಬಿಸಿಯಿರುವ ಬೂದಿ.

ಮುಕಳಿ = ತಿಕ, ಅಂಡು, ಪಿರ್ರೆ, ಗುದದ್ವಾರ.

ಮುಕಳಿ ಮುರಿ ಕೆಲಸ = ವಿಪರೀತ ಕೆಲಸ, ಬಹಳ ಕೆಲಸ.

ಮುಕಳಿ ತುರ್ಸಕ್ಕು ಪುರಸೊತ್ತಿಲ್ಲ = ಮುಕಳಿ ಮುರಿ ಕೆಲಸ.

ಮುಕ್ಕರಿಸು = ಎಡವಿ ಮುಂದಕ್ಕೆ ಬೀಳುವಂತಾಗು, ಎಡವು.

ಮುಕ್ಕಾಲುವಾಸಿ = ನಾಲ್ಕನೇ ಮೂರು ಭಾಗ.

ಮುಕ್ಕುಡುಕನ ಗಿಡ = ಎಲೆ ತುಂಬಾ ಕಹಿ, ಕೆಪಟರಾಯ ಆದಾಗ ಹಚ್ಚುತ್ತಾರೆ, ಗದ್ದೆಗೆ ಹಾಕಿದರೆ ಹುಳ ಬರುವುದಿಲ್ಲ, ಶ್ರೀಗಂಧದ ಎಲೆಯಂತಹ ಎಲೆ.

ಮುಕ್ಕು = ೧.ಗಬಗಬನೆ ತಿನ್ನು, ೨.ತುಂಡಾಗಿರುವುದು, ಮುರಿದಿರುವುದು.

ಮುಖ ಮುರೆಸಿಕೊಣ್ಣಾದು = ೧.ಮುಖವನ್ನು ಮುಚ್ಚಿಕೊಳ್ಳುವುದು ೨.ನಾಚಿಕೆ/ಅವಮಾನ

ದಿಂದ ಯಾರಿಗೂ ಕಾಣಿಸಿಕೊಳ್ಳ
ದಿರುವುದು.
ಮುಗ್ಗಟ್ಟು = ಬಿಕ್ಕಟ್ಟು, ಅಭಾವ, ತೊಂದರೆ.
ಮುಗ್ಲಕ್ಕಿ = ಮುಗ್ಗಲಾದ/ಕೆಟ್ಟುಹೋದ ಅಕ್ಕಿ.
ಮುಗ್ತಾಯ = ಮುಕ್ತಾಯ, ಕೊನೆ.
ಮುಗ್ಟು = ೧.ಬೆಳವಣಿಗೆ ನಿಂತು ಹೋಗುವ ಒಂದು ರೋಗ, ರೊಗ ಪೀಡಿತ ಗಿಡ, ೨.ಬೇಯಿಸಿದ ಅಡಿಕೆ ಸರಿಯಾಗಿ ಒಣಗದಿದ್ದರೆ ಬರುವ ಬೂಸಲು.
ಮುಗ್ಗುಲು = ೧. ಮುಗ್ಗಿದ, ೨. ಬೂಸ್ಟು ಹಿಡಿದ, ಕೆಟ್ಟವಾಸನೆ ಬರುತ್ತಿರುವ.
ಮುಗುಳಕ್ಕಿ = ಅರೆಬೆಂದ ಅಕ್ಕಿ.
ಮುಗ್ತೆ ಕೊಡದು = ನಿರ್ದಿಷ್ಟ ಕೆಲಸವನ್ನು ಬೇರೆಯವರಿಗೆ ವಹಿಸಿ ಕೊಡುವುದು.
ಮುಚ್ಚಂಜೆ = ಮುಸ್ಸಂಜೆ, ಬೈಗು, ಸಂಜೆ.
ಮುಚ್ಚಳಿಕೆ = ಕರಾರುಪತ್ರ, ತಪ್ಪೊಪ್ಪಿಗೆ ಪತ್ರ.
ಮುಚ್ಗಿ = ೧. ಮುಸುಕು ೨.ಛಾವಣಿಯ ಕೆಳಗೆ ಹಲಗೆ ಹಾಸಿ ಭದ್ರಮಾಡಿರುವುದು.
ಮುಚ್ಚು = ಮರೆಮಾಡು, ಅಡಗಿಸು, ಕಾಣದಂತೆ ಮಾಡು.
ಮುಚ್ಚುಮರೆ = ಗುಟ್ಟು, ರಹಸ್ಯ.
ಮುಟ್‌ಚಿಟ್ಟು = ಮುಟ್ಚಿಟ್ಟು.
ಮುಟ್ಟಾಳೆ = ಅಡಿಕೆ ಹಾಳೆಯಿಂದ ಮಾಡಿದ ಟೊಪ್ಪಿ.
ಮುಟ್ಟಾಳು = ಮುಟ್ಟಬಾರದೆಂಬ ನಿಯಮಕ್ಕೆ ಒಳಪಡದ ಆಳು/ ಕೃಷಿ ಕಾರ್ಮಿಕ.
ಮುಟ್ಟಿ = ಮುಷ್ಟಿ.
ಮುಟ್ಚಿಟ್ಟು = ೧.ಮಡಿ, ೨.ಮುಟ್ಟ-ಬಾರದೆಂಬ ನಿಯಮ ೨.ಸೂತಕ, ಮೈಲಿಗೆ.
ಮುಟ್ಟು = ೧. ಸ್ಪರ್ಶಿಸು, ೨. ಋತುಸ್ರಾವ ೩. ತಲುಪು, ಸೇರು.
ಮುಟ್ಟು ನಿಂತಿದೆ = ಪ್ರೌಢ ವಯಸ್ಸು ಕಳೆದ ಮೇಲೆ ಋತು ಚಕ್ರ ನಿಲ್ಲುವುದು.
ಮುಡಿ = ಕೂದಲು, ೨. ಅಕ್ಕಿ, ಉಪ್ಪು ಮುಂತಾದುವನ್ನು ಮಳೆಗಾಲದಲ್ಲಿ ಸಂಗ್ರಹಿಸಿಡಲು ತಯಾರಿಸಿದ ಬಾಳೆಹಗ್ಗದ ಸಾಧನ.
ಮುಡಿ ಕೊಡು = ದೇವರ ಹೆಸರಲ್ಲಿ ಕೂದಲನ್ನೆಲ್ಲಾ ತೆಗೆದು ತಲೆ ಬೋಳಿಸಿ-ಕೊಳ್ಳುವುದು.
ಮುಡ್ಚಿಟ್ಟು = ಮುಟ್ಚಿಟು. ಸೂತಕ, ಮೈಲಿಗೆ.
ಮುಡಿವಾಳದ ಬೇರು = ಬಟ್ಟೆಯಲ್ಲಿಡುವ ಪರಿಮಳದ ಬೇರು, ಮಡಿವಾಳದ ಬೇರು.
ಮುಡುಗ್ಲು = ಮುಡುಗಿ ಹೋಗಿರುವುದು, ಇಸ್ತ್ರಿ ಹೋದ ಬಟ್ಟೆ.
ಮುಡುಗು = ೧.ಬಟ್ಟೆ/ಕಾಗದ ಮುದ್ದೆಯಾಗುವಿಕೆ, ೨.ಕೈಕಾಲುಗಳನ್ನು ಮಡಚುವುದು ೩.ಚಳಿಯಿಂದ ಕೈ/ಕಾಲು /ಶರೀರ ಮುದ್ದೆಯಾಗು.
ಮುತ್ತಜ್ಜ = ಅಜ್ಜನ/ಅಜ್ಜಿಯ ತಂದೆ.
ಮುತ್ತಜ್ಜಿ = ಅಜ್ಜನ/ಅಜ್ಜಿಯ ತಾಯಿ.
ಮುತುವರ್ಜಿ = ೧. ಆಸಕ್ತಿ, ಶ್ರದ್ಧೆ, ೨.ನಿಗಾ, ಕಾಳಜಿ.

ಮುತ್ತುಗ = ಅಗಲ ಎಲೆ, ಲಡ್ಡುಮರ, ಊಟದೆಲೆ ಹೆಣೆಯುತ್ತಾರೆ.

ಮುದಿಗೆಮ್ಮು = ಕೆಮ್ಮಲಾರದೆ ಮುದುಕರಂತೆ ಕೆಮ್ಮುವುದು.

ಮುದಿಯ = ವಯಸ್ಸಾಗಿರುವವನು.

ಮುದುಕ = ಮುದಿಯ.

ಮುದುಕಿ = ವಯಸ್ಸಾಗಿರುವವಳು.

ಮುದುರು = ಒಣಗು, ಬಾಡು.

ಮುದ್ರೆ ಉಂಗ್ರ = ಗಂಡಸರ ಕೈ ಬೆರಳಿನ ಉಂಗುರ.

ಮುನ್ನೂರು = ಮೂರು ನೂರು, ನೂರು ಮತ್ತು ಮೂರರ ಗುಣಾಕಾರ.

ಮುಮ್ಮಂಡಿ = ಮುಂಭಾರ, ಗಾಡಿಯಲ್ಲಿ ಮುಂದಕ್ಕೆ ಹೆಚ್ಚು ಭಾರವಾಗುವುದು.

ಮುಯ್ಯಾಳು = ಆಳಿಗೆ ಆಳು, ಪರಸ್ಪರ ಸಹಕಾರದಿಂದ ಕೆಲಸ ನಿರ್ವಹಿಸುವುದು.

ಮುಯ್ಯಿ = ಮದುವೆಯಲ್ಲಿ ಕೊಡುವ ಉಡುಗೊರೆ ೨. ಕೇಡು ಮಾಡಿದವರಿಗೆ ತಿರುಗಿ ಕೇಡೆಸಗುವುದು.

ಮುರ = ಜಾನುವಾರುಗಳ ಆಹಾರ, ಹುಲ್ಲು, ತೌಡು, ನೀರಿನೊಂದಿಗೆ ಬೇಯಿಸಿದ ಹಸು ಆಹಾರ.

ಮುರಿ = ೧.ತುಂಡು ಮಾಡು ೨.ಸಾಯಿಸು (ಕೋಳಿಮುರಿ), ೩.ಕೊಡ ಬೇಕಾದ ಹಣದಲ್ಲಿ ತನ್ನ ಭಾಗವನ್ನು ಹಿಡಿದುಕೊಳ್ಳುವುದು.

ಮುರಿಹಾಕು = ವಜಾಮಾಡು.

ಮುರುಗನ ತುಪ್ಪ = ಒಂದು ಜಾತಿಯ ಹುಳಿಕಾಯಿ ಬಿಡುವ ಇದರ ಬೀಜದಿಂದ ಎಣ್ಣೆ ತೆಗೆದರೆ ತುಪ್ಪದಂತೆಯೇ ಇರುತ್ತದೆ.

ಮುರುಗನ ಹುಳಿ = ಪುನರ್ಪುಳಿ.

ಮುರ್ಕುಪರ್ಕು = ಹಾಳು ಮೂಳು, ಅಳಿದುಳಿದಿದ್ದು.

ಮುರುಟು = ಮುದುಡು, ಒಣಗು, ಬಾಡು.

ಮುರೆಹಾಕು = ವಜಾಮಾಡು, ಕಳೆಯುವುದು, ಮುರಿಹಾಕು.

ಮುಲ್ಟ = ಮುರುಟು.

ಮುಲಾಜು = ಸಂಕೋಚ, ಮುಜುಗರ.

ಮುಲುಕು = ನರಳು.

ಮುಷ್ಟ = ೧. ತಡೆಯೊಡ್ಡು ಕೆಟ್ಟದ್ದಾಗಬಾರದು/ಒಳ್ಳೆಯದಾಗ ಬೇಕೆಂದು ಮಾಡುವ ಒಂದು ಆಚರಣೆ (ಉದಾ; ೧.ಕಾಲು ನೋವು ಕಡಿಮೆಯಾಗಲೆಂದು ಕಾಲಿಗೆ ಕಂಬಳಿಯ ದಾರ ಕಟ್ಟುವುದು ೨.ನಾಯಿ ನಮ್ಮ ಮನೆ ಬಿಟ್ಟು ಓಡಿ ಹೋಗಬಾರದೆಂದು ನೆಲಸುಟ್ಟು ಅನ್ನ ಹಾಕುವುದು ಇತ್ಯಾದಿ ....).

ಮುಷ್ಟಿ = ಹಿಡಿ, ಸೆರೆ.

ಮುಸಿಯ = ಕೋಡಿಂಗ, ಕಪ್ಪು ಮುಖದ ಮಂಗ.

ಮುಸಿಮುಸಿ = ಒಳಗೊಳಗೇ ನಗುವುದು (ಅಲಂ).

ಮುಸಿಕಿನ ಸೀರೆ = ಮದುವೆಯಲ್ಲಿ ಹೆಣ್ಣಿಗೆ ಹೊದಿಸುವ ಗಂಡಿನ ಮನೆಯ ಸೀರೆ.

ಮುಸುಡಿ = ಮುಖ, ಮೂತಿ, ಮೋರೆ.

ಮುಸ್ರೆ = ೧.ಕಲಗಚ್ಚು, ೨. ಅಡಿಗೆ ಮಾಡಿದ ಪಾತ್ರೆಗಳು.

ಮುಳಕ = ಹಲಸಿನ ಸೋಳೆಯು ಸಿಹಿತಿಂಡಿ.

ಮುಳ್ಳರವೆ = ಒಂದು ಜಾತಿಯ ತರಕಾರಿ ಸೊಪ್ಪು, ಗಿಡದ ಕಾಂಡದಲ್ಲಿ ಮುಳ್ಳುಗಳಿರುತ್ತವೆ.

ಮುಳ್ಳಿಲಿ = ಬಾಲಯಿಲ್ಲದಿರುವ ಇಲಿ.

ಮುಳ್ಳಿಸೊಪ್ಪು = ೧.ಕಾಡಿನ ಸೊಪ್ಪು, ತರಕಾರಿಯಾಗಿ ಬಳಕೆ.

ಮುಳುಗು = ೧.ತಲ್ಲೀನವಾಗು ೨.ನೀರಿನಲ್ಲಿ ಕಂತಿ ಹೋಗು.

ಮುಳ್ಳು = ಕಂಟಕ, ಗಿಡದಲ್ಲಿರುವ ಚೂಪಾದ ಭಾಗ.

ಮುಳ್ಳೊತ್ತು = ಚಪ್ಪಲಿ, ಮೆಟ್ಟು.

ಮೂಕಿನ ಮರ = ಇಡೀ ಗಾಡಿಗೆ ಆಧಾರವಾಗಿರುವ ಉದ್ದನೆಯ ಮರದ ತುಂಡು.

ಮೂಕು = ಗಾಡಿಯು ನೊಗದ ಮುಂದಿರುವ ಮೂತಿ.

ಮೂಕುಮುರಿ = ಸ್ವಲ್ಪವೂ ತೊಂದರೆ ತೆಗೆದುಕೊಳ್ಳದಿರುವುದು.

ಮೂಗ = ಮೂಕ (ಪು).

ಮೂಗ್ಬಟ್ಟು = ಮೂಗುತಿ, ನತ್ತು.

ಮೂಗ್ತಿ = ಮೂಗ್ಬಟ್ಟು.

ಮೂಗಿ = ಮೂಕಿ (ಸ್ತ್ರಿ).

ಮೂಗು = ನಾಸಿಕ.

ಮೂಗುದಾರ = ಎತ್ತು, ಕೋಣಗಳನ್ನು ಪಳಗಿಸಲು ಮೂಗಿಗೆ ಹಾಕುವ ದಾರ.

ಮೂಗುಸುರಿ = ನತ್ತು ಹಾಕಲು ಮೂಗನ್ನು ಚುಚ್ಚಿ ತೂತ ಮಾಡುವುದು.

ಮೂಗೇಟು = ಹೊರಗೆ ಗಾಯಕಾಣದೆ ಒಳಗೊಳಗೇ ಬಿದ್ದಿರುವ ಪೆಟ್ಟು/ಏಟು.

ಮೂಗೊಸ್ತ್ರ = ಮೂಗನ್ನು ಶುಚಿಗೊಳಿಸಲು ಬಳಸುವ ಕರವಸ್ತ್ರ.

ಮೂಡ್‌ನಂಬ್ಕಿ = ಮೂಢನಂಬಿಕೆ.

ಮೂತಿ = ಮುಸುಡಿ, ಬಾಯಿ, ೨. ಹಕ್ಕಿಯ ಕೊಕ್ಕು, ೩. ಕತ್ತಿಯ ಅಲಗು.

ಮೂತಿತಿರ್ಪು = ತುಟಿಯನ್ನು ಕೊಂಕಿಸಿ ಮೂದಲಿಸುವುದು.

ಮೂತುಮುರ್ಕಿ = ಸಿಡುಕಿ, ಸದಾ ಕೋಪಿಷ್ಟೆ.

ಮೂತು ಮುರ್ಕನ ಕಾಯಿ = ದಿರ್ಕನ ಕಾಯಿ.

ಮೂತು ಮುರ್ಕನ ಸಾರು = ದಿರ್ಕನ ಹಣ್ಣು ಒಣಗಿಸಿ ಮಾಡಿದ ಸಾರು.

ಮೂರ್ಮೂರು = ಮೂರುಬಾರಿ ಎಂದು ಒತ್ತಿ ಹೇಳುವುದು.

ಮೂರ್‌ಸಲಿ = ಮೂರು ಬಾರಿ.

ಮೂರ್‌ಹೊತ್ತು ಅಳು = ಸದಾ ಅಳು, ಅಳುವುದರಲ್ಲೆ ಕಾಲಕಳೆ.

ಮೂರ್ತ = ಮುಹೂರ್ತ.

ಮೂಲ = ೧.ಹುಟ್ಟು, ವಂಶ ೨.ಆದಿ, ಆರಂಭ.

ಮೂಲವ್ಯಾದಿ = ಗುದದ್ವಾರದಲ್ಲಿ ಒತ್ತಡದಿಂದ ನೋವು ಬರುವುದು, ಮೊಳೆರೋಗ.

ಮೂಲೆ = ಸಂದಿ.

ಮೂಲೆಗುಂಪು = ಉಪಯೋಗಕ್ಕೆ ಬರದಿರು.

ಮೂಲೆ ಮಟ್ಟ = ಮನೆಕಟ್ಟುವಾಗ ಬಳಸುವ ಸಾಧನ.
ಮೂಸು = ವಾಸನೆ ನೋಡು.
ಮೂಳ = ಮುಟ್ಠಾಳ.
ಮೂಳನಾಯಿ = ಕಂತ್ರಿನಾಯಿ.
ಮೂಳೆ = ಎಲುಬು.
ಮೃಗೇಶ್ರ = ಮೃಗಶಿರ, ಒಂದು ಮಳೆ ನಕ್ಷತ್ರ.
ಮೆಂತೆ = ಒಂದು ಸಾಂಬಾರ ಪದಾರ್ಥ.
ಮೆಕ್ಲುಮಣ್ಣು = ಫಲವತ್ತಾದ ಮಣ್ಣು.
ಮೆಟ್‌ಕತ್ತಿ = ತರಕಾರಿ ಹೆಚ್ಚಲು ಬಳಸುವ ಒಂದು ರೀತಿಯ ಕತ್ತಿ ೨.ಅಡಿಕೆ ಸುಲಿಯಲು ಬಳಸುವ ಕತ್ತಿ.
ಮೆಟ್ಟಕ್ಕಿ ಸಿಬ್ಲ = ಮದುವೆಯಲ್ಲಿ ಬಳಸುವ ಅಕ್ಕಿ ಬತ್ತ ಹಾಕಿರುವ ಸಿಬ್ಬಲಿ.
ಮೆಟ್ಗತ್ತಿಮಣೆ = ಅಡಿಕೆ ಸುಲಿಯುವ ಕತ್ತಿಯನ್ನು ಹೊಡೆದು ಅದರ ಮೇಲೆ ಕುಳಿತು ಅಡಿಕೆ ಸುಲಿಯುವ ಮಣೆ
ಮೆಟ್ಟು = ೧.ತುಳಿ ೨.ಚಪ್ಪಲಿ.
ಮೆಣಸು = ಕಾಳುಮೆಣಸು.
ಮೆಣ್ಸಿನ ಕಾಯಿ = ಕೆಂಪುಮೆಣಸಿನ ಕಾಯಿ, ಒಣಮೆಣಸಿನ ಕಾಯಿ.
ಮೆತ್ತಗೆ = ೧.ಮೃದು, ಮೆದು, ಮೃದು ಸ್ವಭಾವ ೨.ಮೃದುವಾದ ವಸ್ತು.
ಮೆತ್ತು = ಬಳಿ, ಲೇಪಿಸು, ಮಣ್ಣು ಮೆತ್ತು, ಸುಣ್ಣ ಮೆತ್ತು.
ಮೆದೆ = ಹುಲ್ಲು /ಬತ್ತದ ಸಸಿಯ ಇಪ್ಪತ್ತರ ಕಟ್ಟು ೨. ಒಣಗಿದ ಬತ್ತದ ಹುಲ್ಲಿನ ಇಪ್ಪತ್ತರ ಕಟ್ಟು.
ಮೆದೆಲೆಕ್ಕ = ಒಂದು ಮೆದೆಗೆ ಇಷ್ಟರಂತೆ ಎಂದು ಸಂಬಳ ಲೆಕ್ಕ ಹಾಕಿ ಕೊಡುವುದು.
ಮೆದ್ಲು = ಮಿದುಳು.
ಮೆಲ್ಲಕ್ಕೆ = ನಿಧಾನಕ್ಕೆ.
ಮೆಳ್ಗಣ್ಣು = ವಾರೆಕಣ್ಣು.
ಮೆಳೆ = ಬಿದಿರು/ಬಿದಿರಿನ ಜಾತಿಗೆ ಸೇರಿದ ಗಿಡಗಳ ಗುಂಪು.
ಮೇಕಿ = ಪೈಪೋಟಿ.
ಮೇಗ್ಳಮನೆ = ಮೇಲಿನ ಮನೆ.
ಮೇಜು = ಒಂದು ಪೀಠೋಪಕರಣ.
ಮೇಜುಕಟ್ಟು = ೧.ಗೋಡೆಯ ಕೆಳಭಾಗದಲ್ಲಿ ಎಳೆಯುವ ಬಣ್ಣದಗೆರೆ, ಕಾರಣೆ ೨.ಮೇಳಿ.
ಮೇಣಿ = ಕುಂಟೆ/ನೇಗಿಲುಗಳನ್ನು ಹಿಡಿದುಕೊಳ್ಳಲು ಆಧಾರವಾಗಿ ಜೋಡಿಸಿದ ಹಿಡಿಕೆ, ಮೇಳಿ.
ಮೇಣಿಕಟ್ಟು = ದಾವಣಿಗೆ ಎತ್ತುಗಳನ್ನು ಕಟ್ಟಿ ಬತ್ತ ಒಕ್ಕುವುದು.
ಮೇದಾರ = ಬಿದಿರು/ಬೆತ್ತದ ಕೆಲಸ ಮಾಡುವವನು.
ಮೇದೊಳಿಗೆ ಸೀರೆ = ಗೊಬ್ಬೆಸೀರೆಯಲ್ಲ, ಈಗಿನಂತೆ ಉಡುವ ಸೀರೆ, ಹನ್ನೆರಡು ಮಳದ ಸೀರೆ.
ಮೇನೆ = ಪಲ್ಲಕ್ಕಿ.
ಮೇಲ್ಗಡೆ = ಮೇಲೆ, ಎತ್ತರದಲ್ಲಿ.
ಮೇಲ್ಮೇಲೆ = ಮೇಲಿನಿಂದ ಮೇಲೆ, ಪದೇಪದೇ.
ಮೇಸಕ್ಕೆ = ಮೇಯಿಸುವುದಕ್ಕೆ.
ಮೇಳಿ = ಮೇಣಿ.
ಮೈ ಇಳಿ = ಗರ್ಭಪಾತವಾಗು.
ಮೈ ಬೆಚ್ಚಗಾಗು = ಜ್ವರ ಬರುವುದು.
ಮೈಗೆ ಒಳ್ಳೇದು = ಮೈಗೆ ಹಿಡಿ.

ಮೈಗೆ ಹಿಡಿ = ಜೀರ್ಣವಾಗು, ರಕ್ತಗತವಾಗು, ಪುಷ್ಟಿ ನೀಡು.

ಮೈಗೆ ಹಿಡಿಸ್ಯದೆ = ಪುಷ್ಟಿನೀಡಿದೆ, ಶಕ್ತಿ/ಬಲ ಬಂದಿದೆ.

ಮೈ ತುಂಬಾ = ಲೆಕ್ಕವಿಲ್ಲದಷ್ಟು (ಮೈ ತುಂಬಾ ಸಾಲ).

ಮೈದ್ನ = ಗಂಡನ ತಮ್ಮ ಅಥವಾ ತಂಗಿಯ ಗಂಡ.

ಮೈನೆರೆ = ಋತುಮತಿಯಾಗುವುದು, ದೊಡ್ಡವಳಾಗು.

ಮೈಮುರಿ = ಕಷ್ಟಪಡು.

ಮೈಮುಟ್ಟು = ದೇಹಸ್ಪರ್ಶಿಸು, ೨. ಮದುವೆಯಲ್ಲಿ ಕೊಡುವ ಉಡುಗೊರೆ.

ಮೈಮೆ = ಮಹಿಮೆ, ಪ್ರತಾಪ.

ಮೈಮೇಲೆ ಬರು = ದೆವ್ವ ಹಿಡಿ, ಆವೇಶಗೊಳ್ಳು.

ಮೈಯಿಂದ ಹೋಗು = ರಕ್ತಸ್ರಾವವಾಗು.

ಮೈಲಿಕಲ್ಲು = ಅಳತೆಯ ಗುರುತಿಗೆ ಹಾಕಿರುವ ಕಲ್ಲು.

ಮೈಲುತುತ್ತು = ನೀಲತುತ್ತೆ, ಕಾಪರ್ ಸಲ್ಫೇಟ್, ಅಡಿಕೆಮರಕ್ಕೆ ರಾಳದೊಂದಿಗೆ ಹೊಡೆಯುವ ಔಷಧಿ.

ಮೈಸವ್ರು = ಮೈದಡವು, ಮೈಸವರು.

ಮೈಸಾಲ = ದೀರ್ಘಾವಧಿ ಸಾಲ, ಬಡ್ಡಿಯ ಸಾಲ.

ಮೈಸುಲಿ = ಹಾಸಿಗೆ ಹುಣ್ಣು, ಬಹಳ ದಿನ ಮಲಗಿ ಮಲಗಿ ಆದ ಹುಣ್ಣು.

ಮೊಂಡ = ಹಟಮಾರಿ.

ಮೊಂಡರಗಪ್ಪೆ = ದಪ್ಪಗಾತ್ರದ ಕಪ್ಪೆ.

ಮೊಂಡು = ೧.ಚೂಪಿಲ್ಲದ, ೨. ಹಠವಾದಿ.(ಅಲಂ)

ಮೊಗ = ಮಗು, ಬಾಲೆ.

ಮೊಗೆ = ಚಿಕ್ಕಮಣ್ಣಿನ ಕೊಡ, ಸಣ್ಣ ಬಾಯಿರುವ ಮಣ್ಣಿನ ಮಡಕೆ.

ಮೊಟ್ಟು = ಪೊದೆ, ಮಟ್ಟು.

ಮೊಣಕಾಲು = ಮಂಡಿಯಿಂದ ಪಾದದವರೆಗಿನ ಕಾಲಿನ ಭಾಗ.

ಮೊಣಕೈ = ಕೆಳಗಿನ ಅರ್ಧಕೈ.

ಮೊನೆ = ತುದಿ, ಚೂಪಾದ ತುದಿ.

ಮೊಸ್ಳೆ = ಮೊಸಳೆ, ದೊಡ್ಡ ಜಲಚರ, ಮಸಳೆ.

ಮೋಟ = ಚೊಟ್ಟ.

ಮೋಟು = ಗಿಡ್ಡ, ಕುಬ್ಜ.

ಮೋಡ = ಮುಗಿಲು.

ಮೋಡಗಟ್ಟಿದೆ = ಮೋಡ ದಟ್ಟವಾಗಿದೆ, ಮಳೆ ಬರುವ ಸೂಚನೆ.

ಮೋಡ ಹಿರಿ = ದಟ್ಟಮೋಡ ಸರಿಯುವುದು.

ಮೋಡಿ = ಮರುಳು ಮಾಡು, ಸಂಮೋಹನಗೊಳಿಸು ೨. ಗುಂಡಗಿಲ್ಲದ ಬರವಣಿಗೆ.

ಮೋಣು = ಯೋನಿ.

ಮೋಪು = ಸರಕ್ಕೆ ಜೋಡಿಸಿದ ಆಭರಣ, ಸರದ ಎಳೆಗಳು ಕೂಡುವ ಕೊಂಡಿ.

ಮೋರಿ = ನೀರು ಹರಿವ ಸಣ್ಣನಾಲೆ.

ಮ್ಯಾಗೈ = ಹಸ್ತದ ಹಿಂಬದಿ.

ಮ್ಯಾಣ = ಮೇಣ.

ಮ್ಯಾಣೆ = ಗಂಟಲು.

ಮ್ಯಾಲೆ = ಮೇಲೆ.

ಮ್ಯಾಳ = ಮೇಳ.

ಮೈಲ್ಲಕ್ಕೆ = ಮೆಲ್ಲಗೆ.

ಯ

ಯಂತ = ಏನು.

ಯಂತಕೆ = ಏತಕ್ಕೆ, ಯಾಕೆ.

ಯಂತದಂತ = ಏನಂತ, ಏನು ಎಂದು.

ಯಂತದು = ಏನದು, ಯಂತದದು

ಯಃಕಶ್ಚಿತ್ = ಜುಜುಬಿ.

ಯಜಮಾನ = ಮನೆಯ ಹಿರಿಯ, ಜವಾಬ್ದಾರಿ ಹೊರುವವನು, ಗಂಡ.(ಪು)

ಯಜಮಾನ್ಕಿ = ಮನೆಯ ಜವಾಬ್ದಾರಿ ಹೊರುವುದು, ೨. ಮನೆಯ ವ್ಯವಹಾರ ನೋಡಿಕೊಳ್ಳುವುದು.

ಯಜಮಾನ್ತಿ = ಮನೆಯ ಹಿರಿಯಳು, ಹೆಂಡತಿ.(ಸ್ತ್ರೀ)

ಯಡವಟ್ಟು = ೧. ಕ್ರಮ ತಪ್ಪಿದ, ೨. ರೂಢಿಗೆ ವಿರೋಧ ೩. ಕಿತಾಪತಿ.

ಯಡೆ = ಎಡೆ, ದಾರಿ ೨. ಅವಕಾಶ, ೩.ದೈವಕ್ಕೆ/ದೇವರಿಗೆ ಬಡಿಸುವ ನೈವೇದ್ಯ.

ಯತ್ತ = ಯಾವಕಡೆ.

ಯತ್ಲಗ = ಯತ್ತ.

ಯತ್ತಮಕ = ಯತ್ತ.

ಯತೆ = ವ್ಯಥೆ, ದುಃಖ.

ಯಥಾವತ್ತಾಗಿ = ಇದ್ದದ್ದು ಇದ್ದಂತೆ, ಪರಿಷ್ಕರಿಸದೆ.

ಯದ್ವಾತದ್ವ = ಸಿಕ್ಕಾಪಟ್ಟೆ, ಬೇಕಾಬಿಟ್ಟಿ, ಮನಬಂದಂತೆ.

ಯದೆ = ಎದೆ

ಯುದೆಗುಂದು = ಕಳವಳಪಡು, ಉದ್ವೇಗಗೊಳ್ಳು.

ಯದೆಗೂಡು = ಎದೆಯ ಗೂಡು, ಎಲುಬು.

ಯಪ್ಪತ್ರ ಕೆಮ್ಮು = ನಾಯಿಕೆಮ್ಮು.

ಯಯ = ವ್ಯಯ, ಖರ್ಚು.

ಯರ್ರಾಬಿರ್ರಿ = ಅಸ್ತವ್ಯಸ್ತ.

ಯರೆ = ದ್ರವ ಪದಾರ್ಥವನ್ನು ಸುರಿ, ಧಾರೆಯೆರೆ, ನೀರು ಎರೆ, ಎರೆ.

ಯಲ್ಡ = ಮಲ.

ಯಲ್ಡು = ಎರಡು.

ಯವಸ್ಥೆ = ವ್ಯವಸ್ಥೆ ೨. ಅವಸ್ಥೆ.

ಯವಾರ = ವ್ಯವಹಾರ.

ಯವೆ = ರೆಪ್ಪೆ.

ಯಳಿ = ಎಳೆಯುವುದು.

ಯಳೆ = ದಾರ.

ಯಳೆ ಬಿಸ್ಲು = ಎಳೆಬಿಸಿಲು.

ಯಕ್ಷ = ಮಲೆನಾಡಿಗರು ಪೂಜಿಸುವ ಒಂದು ದೈವ.

ಯಾಕಂದ್ರೆ = ಏಕೆಂದರೆ.

ಯಾಕಾರ = ಯಾಕಾದರೂ.

ಯಾಕೆ = ಏಕೆ.

ಯಾಗವ = ಯಾವಾಗ.

ಯಾಜ = ವ್ಯಾಜ್ಯ.

ಯಾತ = ಏತ, ಸ್ವಲ್ಪ ಆಳದಲ್ಲಿ

ಹರಿಯುತ್ತಿರುವ ನೀರನ್ನು ಹೊಲಕ್ಕೆ ಹಾಯಿಸುವ ಸಾಧನ.
ಯಾತರ = ಯಾವ ರೀತಿ.
ಯಾಲಕ್ಕಿ = ಏಲಕ್ಕಿ.
ಯಾಲಕ್ಕಿಸರ = ಏಲಕ್ಕಿಯಾಕಾರದ ಚಿನ್ನದ ಸರ.
ಯಾವತ್ತು = ಯಾವ ದಿನ.
ಯಾವತ್ತೂ = ಯಾವಾಗಲೂ, ಪ್ರತಿಬಾರಿ, ಅವಿರತ.
ಯಾಸ = ವೇಶ, ಅವತಾರ.
ಯೋಗ್ಯ = ತಕ್ಕ, ಸಮರ್ಥ, ಒಳ್ಳೆಯ.
ಯೋಗ್ಯತೆ = ಬೌದ್ಧಿಕ–ನೈತಿಕ–ಗ್ರಾಹಕ–ಆರ್ಥಿಕ ಶಕ್ತಿ.

ರ

ರಂಗೇರು = ಕಳೆಕಟ್ಟು.
ರಂಚು ಹಾಕುವುದು = ಹೊಟ್ಟೆ ನೋವಿಗೆಂದು ಔಷಧಿ ಮಾಡುವ ಕ್ರಮ.
ರಂಜ = ಒಂದು ಕಾಡುಮರ, ಸುವಾಸನೆ–ಯುಳ್ಳ ಹೂವು, ಸಿಹಿ ಒಗರು ರುಚಿಯ ಹಣ್ಣು ಬಿಡುತ್ತದೆ.
ರಂಡೆ = ಹಾದರಗಿತ್ತಿ.
ರಂಪ = ರಗಳೆ, ಗಲೀಜು.
ರಕ್ತ = ನೆತ್ತರು.
ರಕ್ತಕಾರು = ನೆತ್ತರನ್ನೇ ವಾಂತಿ ಮಾಡಿ–ಕೊಳ್ಳುವುದು.
ರಕ್ತೇಶ್ವರಿ = ರಣ, ಒಂದು ಶಕ್ತಿದೇವತೆ.
ರಗಳೆ = ತೊಂದರೆ, ಹಟ.
ರಚ್ಚು = ರೊಚ್ಚು, ದ್ವೇಷ.
ರಚ್ಚೆ = ಒಂದೇ ಸಮನೆ ಅಳುವುದು.
ರಟ್ಟು = ಗುಟ್ಟಿನ ವಿಚಾರವನ್ನು ಹೊರ ಹಾಕುವುದು, ಗುಟ್ಟು ರಟ್ಟು ಮಾಡು.
ರಟ್ಟೆ = ತೋಳು, ಕೈತೋಳು.
ರಣ = ೧.ವಿಪರೀತ ಬಿಸಿಲು, ರಣಬಿಸಿಲು. ೨.ದೆವ್ವದ ಹೆಸರು
ರಣಬಿಸ್ಲು = ವಿಪರೀತ ಸುಡುಬಿಸಿಲು.
ರಣರಂಪ = ಚಲ್ಲಾಪಿಲ್ಲಿ, ಗಜಿಬಿಜಿ.
ರತ್ನಚೂಡಿ = ಒಂದುಬತ್ತದ ತಳಿ.
ರದ್ದು = ವಜಾ.
ರದ್ದುಗೊಳಿಸು = ವಜಾಮಾಡು.
ರಬ್ಸ = ರಭಸ.
ರವಕಿ = ಕುಪ್ಪಸ.
ರವಕಿ ಕಣ = ಕುಪ್ಪಸದ ಬಟ್ಟೆ.
ರಸ = ದ್ರವ, ನೀರು.
ರಸಿಗಿ = ಕೀವು.
ರಸ್ತಿ = ರಸ್ತೆ, ದಾರಿ, ಹಾದಿ.
ರಾಗಟೆ = ತಲೆಗೆ ಹಾಕುವ ಆಭರಣ.
ರಾಗಿ = ಒಂದು ಆಹಾರ ಧಾನ್ಯ.
ರಾಜಮುಡಿ = ಒಂದು ಜಾತಿಯ ಬತ್ತದ ತಳಿ.
ರಾಜಿ = ಸಂಧಾನ, ಒಡಂಬಡಿಕೆ, ಒಪ್ಪಂದ.
ರಾಟೆ = ತಿರುಗಣೆ, ನೀರು ಸೇದುವ ಸಾಧನ.
ರಾಟೆ = ಬೇಯಿಸಿದ ಬತ್ತವನ್ನು ಕುಟ್ಟಿ ಅವಲಕ್ಕಿ ಮಾಡುವ ಮರದ

ಸಾಧನ.

ರಾಡಿ = ಕೆಸರು.

ರಾಣಾರಂಪ = ರಣರಂಪ.

ರಾತ್ರೆ = ರಾತ್ರಿ, ಇರುಳು.

ರಾವು ಬಿಡಿಸುವುದು = ಮೈಗೆ ಹಿಡಿದ ದುಷ್ಟಶಕ್ತಿಯನ್ನು ಬಿಡಿಸುವುದು.

ರಾಸಿ = ರಾಶಿ.

ರಾಕ್ಷಸ = ರಕ್ಕಸ, ದಾನವ.

ರಿವಾಜು = ಪದ್ಧತಿ, ಆಚರಣೆ.

ರೀಪು = ಹೆಂಚು ಹೊದಿಸಲು ಪಕಾಸಿಯ ಮೇಲೆ ಹಾಕುವ ಮರದ ಪಟ್ಟಿಗಳು.

ರುಣ = ಹಂಗು.

ರೆಕ್ಕೆ = ಗರಿ, ಪುಕ್ಕ.

ರೇವತಿ = ಒಂದು ಮಳೆ ನಕ್ಷತ್ರ.

ರೊಟ್ಟಿ = ಒಂದು ಬಗೆಯ ತಿಂಡಿ, ಬೆಳಿಗ್ಗೆಯ ಉಪಾಹಾರ.

ರೊಟ್ಟಿ ಸಟುಗ = ರಮಕೆ.

ರೊಟ್ಟಿಸುಡು = ರೊಟ್ಟಿಯನ್ನು ಕಾವಲಿಯಲ್ಲಿ ಬೇಯಿಸಿದ ಮೇಲೆ ಕೆಂಡದಲ್ಲಿ ಬೇಯಿಸುವುದು.

ರೊಣೆ = ಪ್ರಾಣಿಗಳ ಮೈಮೇಲಿನ ಕೂದಲು.

ರೋಗ = ರ್‍ವಾತೆ, ಖಾಯಿಲೆ.

ರೋಣ್ಗಲ್ಲು = ಚಕ್ರಾಕಾರದ ಕಲ್ಲು, ಒಕ್ಕಲು ಮಾಡಲು ಉಪಯೋಗಿಸುತ್ತಿದ್ದರು.

ರೋಣಿಮಳೆ = ರೋಹಿಣಿ ಎಂಬ ಮಳೆ ನಕ್ಷತ್ರ (ರೋಣಿಮಳೇಲಿ ದೋಣಿ ಹಾಕಬೇಕು).

ರೋಮ = ಮೈಮೇಲಿನ ಕೂದಲು.

ರೋಸಿಹೋಗು = ಸಾಕಾಗಿ ಹೋಗು, ಅಸಹ್ಯಹುಟ್ಟು.

ರ್‍ವಾತೆ = ಜಡ, ರೋಗ, ಕಾಯಿಲೆ

ಲ

ಲಂಗ = ಹೆಣ್ಣು ಮಕ್ಕಳ ಉಡುಪು.

ಲಂಗುಲಗಾಮು = ಹಡಬಿಟ್ಟಿ, ಹತೋಟಿ.

ಲಂಗೋಟಿ = ತುಂಡುವಸ್ತ್ರ, ಒಂದು ಒಳಉಡುಪು.

ಲಕ್ಕಿಸರ್ಪ = ನಾಗರ ಹಾವಿನಲ್ಲೇ ಸಣ್ಣ ಹಾವು, ತುಂಬಾ ಕೋಪಿಷ್ಟ ಹಾವು ಅತಿವಿಷಕಾರಿ.

ಲಕ್ಷ = ನೂರು ಸಾವಿರ.

ಲಕ್ಷಗಟ್ಲೆ = ನೂರಾರು ಸಾವಿರ.

ಲಕ್ಷಣ = ರೂಪ.

ಲಕ್ಷ್ಮಿಗುಲಾಬಿ = ತಿಳಿಗೆಂಪುಬಣ್ಣದ ಗುಲಾಬಿ, ಅತಿ ಪರಿಮಳಯುಕ್ತವಾದ ಇದರಿಂದ ಗುಲಾಬಿ ಜಲ ತಯಾರಿಸುತ್ತಾರೆ.

ಲಗತ್ತು = ಹೊಂದಿಕೊಂಡಂತೆ, ಹೊಂದಿಕೊಳ್ಳು, ಲಗ್ತು, ಅನುಕೂಲವಾಗುವಂತೆ.

ಲಗ್ನ = ಮದುವೆ.

ಲಗಾಮು = ೧. ಮೂಗಿಗೆ ಹಾಕುವ ದಾರ, ೨. ಹದ್ದುಬಸ್ತು.

ಲಗುಬಗೆ = ಅವಸರ, ಗಡಿಬಿಡಿ.

ಲಟಾಪಟಿ = ಜಗಳ, ವಿವಾದ, ವಾಗ್ವಾದ.

ಲಡಾಯ = ಜಗಳ, ಕುಸ್ತಿ.

ಲಡ್ಡು = ಲಾಡು ಉಂಡೆ, ಒಂದು ಸಿಹಿ ತಿನಿಸು.

ಲತ್ತೆ = ಏಟು, ಪೆಟ್ಟು, ಹೊಡೆತ.

ಲದ್ದಿ = ಆನೆ, ಕುದುರೆ ಮುಂತಾದ ಪ್ರಾಣಿಗಳ ಮಲ.

ಲವಂಗ = ಸಾಂಬಾರ ಪದಾರ್ಥ, ಸಣ್ಣ ಮರದಲ್ಲಿ ಬಿಡುವ ಹೂವಿನ ಮೊಗ್ಗು.

ಲವಲೇಶ = ಅಣು, ಕಣ, ಸಲ್ಪ ಕೂಡ ಇಲ್ಲದ.

ಲವಂಗದ ಕಡ್ಡಿ = ಕಿವಿಯ ಮೇಲಿನ ಆಭರಣ.

ಲಾಚಾರು = ಬಡಕಲು, ಕೃಶ.

ಲಾಟೀನು = ಕಂದೀಲು, ಲಾಂದ್ರ.

ಲಾಡಿ = ಉಡುಪು ಕಟ್ಟಲು ಬಳಸುವ ದಾರ.

ಲಾಡು = ಲಡ್ಡು.

ಲಾಲ್ಕಿ = ದ್ರವ ಪದಾರ್ಥ ಚೆಲ್ಲದಂತೆ ತುಂಬುವ ಸಾಧನ, ಆಲಿಕೆ, ಲಾಲ್ಕೆ

ಲಾಳ = ಎತ್ತಿನ ಕಾಲಿಗೆ ಕಟ್ಟುವ ಹಲ್ಲೆ.

ಲಿಂಗದಾರಿ = ಕೊಯ್ಯಲೂ ಆಗದಂತಹ ಗಟ್ಟಿ ನಾಟಾಮರ, ಮನೆಗೆ ಬಳಸುವುದಿಲ್ಲ, ದೇವಸ್ಥಾನ ಕಟ್ಟಲು ಬಳಕೆ.

ಲಿಂಬೆಹಣ್ಣು = ಒಂದು ಹುಳಿಹಣ್ಣು, ಉಪ್ಪಿನ ಕಾಯಿ, ಪಾನಕಕ್ಕೆ ಬಳಕೆ.

ಲೇಪ = ಹಚ್ಚುವ /ಬಳಿಯುವ ಔಷಧಿ.

ಲೇವಾದೇವಿ = ಕೊಟ್ಟು ತೆಗೆದು ಕೊಳ್ಳುವುದು.

ಲೇಹ = ಲೇಹ್ಯ, ನೆಕ್ಕುವ ಔಷಧಿ.

ಲೇಸು = ಉತ್ತಮ, ವಾಸಿ, ಇನ್ನೂ ಚೆನ್ನಾಗಿ.

ಲೊಚಗುಡು = ೧.ಚಪ್ಪರಿಸು ೨.ಹಲ್ಲಿ ಕೂಗುವುದು.

ಲೋಟ = ಕುಡಿಯುವ ಸಣ್ಣ ಪಾತ್ರೆ.

ಲೋಬಾನ = ಒಂದು ಪರಿಮಳದ ವಸ್ತು, ಸಾಂಬ್ರಾಣಿ, ಗುಗ್ಗುಳ, ಧೂಪ.

ವ

ವಂಕಿ = ತೋಳ ಬಂದಿ, ತೋಳಿನ ಆಭರಣ.

ವಂಕು = ಡೊಂಕು, ವಕ್ರ

ವಂಕೊಂಕು = ಡೊಂಕು ಡೊಂಕಾ–ಗಿರುವುದು.

ವಂಚ್ನೆ = ಮೋಸ, ಕಪಟ, ದ್ರೋಹ.

ವಂಟಿ = ಉಂಟಿ, ಒಂಟಿ, ಗಂಡಸರು ಒಂದು ಕಿವಿಗೆ ಮಾತ್ರ ಹಾಕಿಕೊಳ್ಳುವ ಆಭರಣ. ೨. ಒಬ್ಬಂಟಿ, ಒಬ್ಬ.

ವಂದ = ೧.ಒಂದ, ಉಂದ, ಮೂತ್ರ, ೨.ಒಂದು ಎಂದು ಲೆಕ್ಕ ಹಾಕುವುದು.

ವಂಸ = ವಂಶ, ಕುಲ, ಮನೆತನ.

ವಕ್ಕಂಡು = ಒಗೆದುಕೊಂಡು, ಬಟ್ಟೆ ತೊಳೆದುಕೊಂಡು.

ವಕ್ಕರ್ಸು = ಇಷ್ಟವಿಲ್ಲದವರ ಆಗಮನ, ಬೇಡವಾದಾಗ ಬರುವುದು, ಆಮಂತ್ರಣವಿಲ್ಲದಿದ್ದರೂ ಬರುವುದು.

ವಕ್ವಕ್ರ = ವಕ್ರವಕ್ರ, ವಂಕೊಂಕು, ಡೊಂಕುಡೊಂಕು, ಓರೆಓರೆ-ಯಾಗಿರುವುದು.

ವಕ್ರ = ಡೊಂಕು, ಓರೆ, ವಾರೆ.

ವಕ್ಲೇಳು = ಒಕ್ಕಲೇಳು, ಜಾಗ ಖಾಲಿಮಾಡು, ಊರುಬಿಟ್ಟು ಓಡು.

ವಕ್ಲೆಬ್ಸು = ಒಕ್ಕಲೆಬ್ಬಿಸು, ಜಾಗ ಖಾಲಿ ಮಾಡಿಸು, ಊರು ಬಿಟ್ಟು ಓಡಿಸು.

ವಗ್ಗರ್ಣೆ = ಒಗ್ಗರಣೆ, ಮಾಡಿದ ಅಡಿಗೆಗೆ ಎಣ್ಣೆಕಾಯಿಸಿ, ಒಣಮೆಣಸಿನ ಕಾಯಿ ಸಾಸಿವೆ, ಬೆಳ್ಳುಳ್ಳಿ, ಕರಿಬೇವಿನ ಸೊಪ್ಪು. ಮುಂತಾದುವನ್ನು ಹಾಕಿ, ರುಚಿಗೆ ಅಥವಾ ಅಲಂಕಾರಕ್ಕೆ ಹಾಕುವುದು.

ವಗಾಸು = ಎಸಿ, ವಗಿ, ಬಿಸಾಡು, ದೂರಕ್ಕೆ ಹಾಕು.

ವಗಾಯ್ಸು = ವಗಾಸು.

ವಗಾಸ್ದ ಹೊಡ್ತಕ್ಕೆ = ಎಸೆದ ರಭಸಕ್ಕೆ.

ವಗ್ತಾನ = ಅಚ್ಚುಕಟ್ಟು, ಕ್ರಮವರಿತ ಕೆಲಸ, ಒಪ್ಪ.

ವಗಿ = ೧. ವಗಾಸು ೨. ಬಟ್ಟೆ ಒಗೆಯುವುದು, ಶುದ್ಧ ಮಾಡುವುದು, ಸ್ವಚ್ಛಗೊಳಿಸು.

ವಗುರು = ಉಪ್ಪು-ಹುಳಿ-ಕಹಿಯ ಮಿಶ್ರಣ ಷಡ್ರಸಗಳಲ್ಲಿ ಒಂದು.

ವಗ್ರು = ವಗುರು.

ವಜನ್ನು = ಭಾರ, ತೂಕ.

ವಜಾಹಾಕು = ಸಂಬಳದ ಹಣವನ್ನು ಸಾಲದ ಹಣಕ್ಕಾಗಿ ಹಿಡಿದು ಕೊಳ್ಳುವುದು, ಮುರಿ ಹಾಕ್ಕೊಣದು.

ವಟ್‌ಮಡ್ಕೆ ಹಣ್ಣು = ಒಂದು ಜಾತಿಯ ಮುಳ್ಳಿನ ಪೊದೆಯಲ್ಲಿ ಬಿಡುವ ಸಣ್ಣಕಪ್ಪು ಹಣ್ಣು, ತುಂಬಾ ರುಚಿ.

ವಟವಟ = ೧.ಗೊಣಗುವಿಕೆ, ವಟಗುಟ್ಟುವಿಕೆ, ೨.ಕಪ್ಪೆಯ ಕೂಗು.

ವಟಗುಡು = ೧.ಸದಾ ಬೈಯುತ್ತಿರು, ಗೊಣಗು ೨.ಒಂದೇ ಸಮ ಕಪ್ಪೆ ಕೂಗುತ್ತಿರುವುದು.

ವಟ್ಲು = ಪಾತಿ, ಅಗೆ, ಸಸಿಮಾಡಿ ನೆಡುವ ಮುನ್ನ ಬೀಜವನ್ನು ಭೂಮಿ ಹಸನು ಮಾಡಿ ಬಿತ್ತುವುದು.

ವಟ್ಲುಹಾಕು = ಬೀಜಹಾಕು, ಅಗೆಹಾಕು, ಪಾತಿಮಾಡು.

ವಟ್ಟೆ = ತೂತು, ಕಂಡಿ, ರಂಧ್ರ.

ವಡಕ್ಲು = ಧಾನ್ಯಗಳನ್ನು ಅರ್ಧಂಬರ್ಧ ಒಡೆದಿರುವುದು, ನುಚ್ಚು, ತರಿ.

ವಡಗು = ಗದ್ದೆಯಲ್ಲಿ ಕಟ್ಟಿದ ಅಂಚು ಮಳೆ ನೀರು ಜಾಸ್ತಿಯಾಗಿ ಒಡೆಯುವುದು.

ವಡ್ಡ = ವಡ್ಡರವನು, ಕಲ್ಲು ಮಣ್ಣಿನ ಕೆಲಸ ಮಾಡುವವನು.

ವಡ್ಡ = ತಿಳುವಳಿಕೆಯಿಲ್ಲದವನು, ನಯನಾಜೂಕಿಲ್ಲದವನು (ಅಲಂ)

ವಡ್ಡಗೈ = ೧. ವಾರೆಕೈ, ಡೊಂಕು ಕೈ, ೨. ಎಡಚು, ಎಡಗೈಯನ್ನು ಹೆಚ್ಚಾಗಿ ಬಳಸುವುದು.

ವಡ್ಡಡ್ಕು = ಮೊದಲೇ ಇದ್ದ ಬೇಲಿಯಲ್ಲಿ

ಕಂಡಿಗಳಾಗಿದ್ದರೆ, ಬೇಲಿ ಗೂಟಗಳು ಹೋಗಿದ್ದರೆ ಅದನ್ನು ಸರಿಪಡಿಸುವುದು.

ವಡಾಳೆ = ಹೊಂಬಾಳೆ.

ವಡ್ಹಾಕು = ಬೇಲಿಹಾಕು, ತಡೆಹಾಕು.

ವಡಿ = ಒಡೆ, ಚೂರುಮಾಡು, ಹೋಳುಮಾಡು.

ವಡ್ಡಿ = ಗೂಡು, ಪ್ರಾಣಿಗಳನ್ನು ಕೂಡಿ ಹಾಕುವ ಸಣ್ಣ ಕೊಟ್ಟಿಗೆ (ಹಂದಿವಡ್ಡಿ, ಕೋಳಿವಡ್ಡಿ).

ವಡ್ಡಿ = ವಡ್ಡರವಳು, ಕಲ್ಲು ಮಣ್ಣಿನ ಕೆಲಸದವಳು.

ವಡ್ಡಿ = ತಿಳುವಳಿಕೆಯಿಲ್ಲದವಳು, ದಡ್ಡಿ, ನಯ ನಾಜೂಕಿಲ್ಲದವಳು. (ಅಲಂ)

ವಡು = ನೀರು ಹೋಗುವ ಕಂಡಿ/ರಂಧ್ರ, ಕೆರೆಯ ತೂಬು.

ವಡು ಬಿದ್ದದೆ = ನಿಲ್ಲಿಸಿದ ನೀರಿನ ಕಟ್ಟೆಯೊಡೆದಿದೆ.

ವಡುಬೀಳು = ನಿಲ್ಲಿಸಿದ ನೀರು ಕಂಡಿ ಮಾಡಿಕೊಂಡು ಹೊರ ಹೋಗುವುದು. ಗದ್ದೆಯ ಅಂಚು ಒಡೆದು ನೀರು ಹೊರ ಹೋಗುವುದು.

ವಡ್ಡು = ಬೇಲಿ, ತಡೆಬೇಲಿ.

ವಡ್ಲುಜರ = ಒಡಲು ಜ್ವರ, ಒಳಗಿಂದೊಳಗೇ ಕಾಣಿಸಿ ಕೊಳ್ಳುವ ಜ್ವರ, ಸಣ್ಣಜ್ವರ.

ವಡ್ಕು = ಒಡೆದಿದ್ದು, ಸೀಳು, ಸಿಡಿ ಕಂಡಿ.

ವಡ್ಕು = ಒಡಕು, ಭಿನ್ನಾಭಿಪ್ರಾಯ.

ವಡ್ಲು = ಒಡಲು.

ವಡೆ = ಒಡೆ, ಒಡೆದುಹಾಕು, ಚೂರುಮಾಡು, ೨. ಒಂದು ಕಾರದ ತಿಂಡಿ.

ವಡೆಕಲ್ಲು = ಬತ್ತವನ್ನು ಬೀಸಿ ಅಕ್ಕಿ ಮಾಡುವ ದೊಡ್ಡಕಲ್ಲು.

ವಡೆಯ = ಒಡೆಯ, ಆಳುಗಳನ್ನಿಟ್ಟು ಕೊಂಡು ಕೃಷಿ ಕೆಲಸ ಮಾಡಿಸುವವನು.

ವಣಕು = ಒಣಗಿದ, ಬತ್ತಿದ, ನೀರು ಇಂಗಿದ.

ವಣಕ್ಮೀನು = ಒಣಗಿಸಿದ ಮೀನು, ಬಿಸಿಲಲ್ಲಿ ಒಣಗಿಸಿದ ಮೀನು (ಬೆಂಕಿಯ ಹತ್ತಿರ ಹೊಗೆಯಲ್ಲಿ ಒಣಗಿಸಿದ್ದು, ಕರ್ಮೀನು).

ವತ್ತಾಯ = ಒತ್ತಾಯ, ಬಲವಂತ.

ವತ್ತುಕಟ್ಟು = ಒತ್ತಾಯ ಮಾಡು, ಬಲವಂತ ಮಾಡು.

ವತ್ತೆ = ಒತ್ತೆ, ಅಡ, ಗಿರವಿ.

ವದಗೆ = ಸರಾಗವಾಗಿ ನೀರು ಹರಿಯಲು ಹಾಕಿದ ಬೈನೆ/ಅಡಿಕೆ ಮರವನ್ನು ಸೀಳಿ ಒಳಗಿನ ತಿರುಳನ್ನು ತೆಗೆದು ಮಾಡಿದ ದಂಬೆ, ನೀರ್ವೀಳು.

ವದಗು = ಒದಗು, ಸಮಯಕ್ಕಾಗು, ಆಗಿಬರು.

ವದಗು = ಹೆಚ್ಚಾಗು, ಉಬ್ಬಳಿಸಿ ಬರುವುದು.

ವದರು = ಒದರು, ಬಡಬಡಿಸು, ಬಾಯಿಗೆ ಬಂದಂತೆ ಮಾತಾಡು.(ಅಲಂ)

ವದುರು = ಕೊಡವು, ಕೊಡಕು, ಒದರು.

ವದ್ದೆ = ತೇವ, ಥಂಡಿ, ನೀರಿನಂಶ ವಿರುವುದು, ಒಣಗಿಲ್ಲದುದು.

ವಧೆ = ಪೆಟ್ಟು, ಹೊಡೆತ, ಸಾಯುವಂತೆ ಹೊಡೆ.

ವನ = ಬನ, ಸಣ್ಣಕಾಡು.

ವನಕೆ = ಒರಳಿನಲ್ಲಿ ಕುಟ್ಟಲು ತುದಿಯಲ್ಲಿ ವಿಶಿಷ್ಟವಾದ ಕಬ್ಬಿಣದ ಬಳೆಗಳಿರುವ ಉದ್ದವುರದ ತುಂಡು, ಇದನ್ನು ಬಲಿತ, ದಿಂಡು ದಪ್ಪವಿರುವ ತೂಕದ ಬೈನೆ ಮರದಿಂದಲೂ, ಕಿರನ್‌ಬೋಗಿ ಮರದಲ್ಲೂ ಮಾಡುತ್ತಾರೆ.

ವನಕೆ ಮುಂಡು = ವನಕೆಯಂತೆಯೇ ಅದರ ಅರ್ಧಭಾಗ ಮಾತ್ರ ಉದ್ದವಿರುವ ಮರದತುಂಡು.

ವನಿ = ಧಾನ್ಯಗಳನ್ನು ಮೊರದಲ್ಲಿಟ್ಟು ಅಲ್ಲಾಡಿಸಿ ಹಸನುಮಾಡು, ಘನಮಾಡು.

ವನಿ = ತೂಗು, ತೂಗಾಡು, ತೂಗಿಸು, ಅಲ್ಲಾಡಿಸು (ತೊಟ್ಲುವನಿ, ತಲೆವನಿ).

ವಪ್ಪ = ಒಪ್ಪ, ಓರಣ, ಅಚ್ಚುಕಟ್ಟು.

ವಪ್ಪತ್ತು = ಒಂದು ಹೊತ್ತು, ಅರ್ಧದಿನ.

ವಪ್ಪತ್ತು = ಪ್ರತಿ ಶನಿವಾರ ಒಂದು ಹೊತ್ತು ಊಟಮಾಡಿ, ರಾತ್ರಿ ಫಲಾಹಾರ ಸೇವಿಸುವುದು(ಶನ್ವಾರ ಒಪ್ಪತ್ತು – ದ್ವಾಸೆ ಇಪ್ಪತ್ತು).

ವಪ್ಪಮಾಡು = ಶವಸಂಸ್ಕಾರ ಮಾಡುವುದು.

ವಮನ = ವಾಂತಿ.

ವಯಸ್ಸು = ಒಂದು ಜೀವಿಯ ಆಯಸ್ಸು.

ವಯಸ್ಸು = ಹರೆಯ, ಪ್ರಾಯ.

ವಯಸ್ಸಾಗು = ವೃದ್ಧಾಪ್ಯ, ಸಾಕಷ್ಟು ವಯಸ್ಸನ್ನು ಕಳೆದಿರುವುದು.

ವಯ್ಯಾರ = ಒಯ್ಯಾರ, ಬೆಡಗು.

ವಯಿನ = ಚಂದ, ಸುಂದರ.

ವಯಿನ = ಅನುಕೂಲ, ಲಾಯಕ್ಕು.

ವಯಿಸು = ಒಪ್ಪಿಸು, ಕೊಡು, ವರ್ಗಾಯಿಸು.

ವರಳು = ಒರಳು, ರುಬ್ಬುವ/ಕಡೆಯುವ ಕಲ್ಲು, ಬತ್ತಕುಟ್ಟಲು ನೆಲದಲ್ಲಿ ಹುಗಿದ ಕಲ್ಲು.

ವರ್ಚಗಣ್ಣು = ವಾರೆಗಣ್ಣು, ಮೆಳ್ಳಗಣ್ಣು.

ವರ್ಚ = ವಾರೆಕಣ್ಣುಳ್ಳವನು.(ಪು)

ವರ್ಚಿ = ವಾರೆಕಣ್ಣುಳ್ಳವಳು.(ಸ್ತ್ರೀ)

ವರ್ತನೆ = ನಡವಳಿಕೆ.

ವರ್ತ್ಮಾನ = ವರ್ತಮಾನ, ವಾರ್ತೆ.

ವರ್ಸ = ವರ್ಷ, ವರುಷ.

ವರ್ಕ = ಹಚ್ಚಿಕೊ, ಲೇಪಿಸಿಕೋ, (ಮುಲಾಮು ವರ್ಕ, ಎಣ್ಣೆ ವರ್ಕ).

ವರ್ಷಾವರ್ಷ = ಪ್ರತಿವರ್ಷ, ಸಾಲಿಯಾನ.

ವರ್ಮಾನ = ವರಮಾನ, ಆದಾಯ.

ವರ್ಸಾದಿ = ವರ್ಷಾವಧಿ, ವರ್ಷಗಟ್ಟಲೆ, ವರ್ಷಪೂರ್ತಿ.

ವರ್ಸಾನುಗಟ್ಲೆ = ವರ್ಷಾನುಗಟ್ಲೆ, ವರ್ಷವರ್ಷವೂ.

ವರಿ = ಕುಕ್ಕು, ಸಾಯಿಸು (ಹೇನುವರಿ).

ವರಿ = ಅಂಟಿಸು, ಲೇಪಿಸು, ಹಚ್ಚು.

ವರ್ಗಿ = ವಾರಿಗೆ, ಓರಗೆ, ಒಂದೇ ವಯಸ್ಸಿನ (ಒಂದೇ ವರ್ಗಿಯವರು).

ವರ್ಗು = ಒರಗು, ಹಿಂದಕ್ಕೆ ಬೆನ್ನು ಆನಿಸಿಕೊಂಡು ಕುಳಿತುಕೊ.

ವರ್ಗು = ಮಲಗು, ನಿದ್ದೆಮಾಡು, ನಿದ್ದೆಹೋಗು.

ವರುಕ್ಕಾ = ೧. ಮಲಗಿಕೋ, ನಿದ್ದೆಮಾಡು ೨. ಒರಗು, ವರ್ಗು.

ವರುಸ್ತೊಡ್ಕು = ದೀಪಾವಳಿಯ ಮರುದಿನ ಕರಿ, ಕರಿಯ ಮರುದಿನ ವರ್ಷ ತೊಡ್ಕು, ಹಬ್ಬಗಳ ಮರುದಿನ

ವರ್ಲೆ = ಗೆದ್ದಲು, ವರಲೆ.

ವಲ್ಲಿ = ಗೊಬ್ಬೆಸೀರೆಯ ಮೇಲೆ ಕಟ್ಟಿಕೊಳ್ಳುತ್ತಿದ್ದ ವಸ್ತ್ರ, ಮೇಲೆ ಹೊದ್ದುಕೊಳ್ಳುವ ಉಡುಗೆ.

ವಲೆ = ಒಲೆ, ಅಡಿಗೆ ಬೇಯಿಸಲು ಬೆಂಕಿ ಹಾಕುವ ಸ್ಥಳ.

ವಲೆಚಡಿ = ಒಲೆಯ ಮೇಲಿನ ಖಾಲಿಜಾಗ.

ವಲೆತೋಳು = ಒಲೆಯ ಒಂದೊಂದು ಭಾಗ.

ವಲೆಸರ = ಒಲೆಯ ಹತ್ತಿರ, ಒಲೆಯ ಪಕ್ಕದಲ್ಲಿ, ಒಲೆಗಳ ಸಾಲು (ಒಲೆಸರ, ಬೆಂಕಿಸರ).

ವಶ = ಅಧೀನ, ಅಂಕೆ, ಹತೋಟಿ.

ವಸಗೆ = ಮೈ ನೆರೆಯುವುದು, ಋತುಮತಿ, ಪುಷ್ಪವತಿ.

ವಸಗೆ ಮನೆ = ಮೈ ನೆರೆದಾಗ ಹಸೆ ಚಾಪೆಯ ಮೇಲೆ ಕೂರಿಸಿ ಮಾಡುವ ಶಾಸ್ತ್ರ.

ವಸ್ತು = ಪದಾರ್ಥ, ಸಾಮಾನು.

ವಸ್ತು ಸ್ಥಿತಿ = ನಿಜಸ್ಥಿತಿ, ನಿಜಸಂಗತಿ.

ವಸೂಲಿ = ಕೊಟ್ಟಿದ್ದನ್ನು ಹಿಂದಕ್ಕೆ ಪಡೆಯುವುದು, ವಸೂಲು ಮಾಡುವುದು.

ವಳಶುಂಠಿ = ಒಳತೊಡೆಯನ್ನು ನೋವಾಗುವಂತೆ ಹಿಂಡುವುದು (ಮಕ್ಕಳಿಗೆ ಕೊಡುತ್ತಿದ್ದ ಶಿಕ್ಷೆ).

ವಳಲೆ = ಒಳಲೆ, ಒಳ್ಳೆ, ಚಿಕ್ಕ ಮಕ್ಕಳಿಗೆ ಹಾಲು ಕುಡಿಸಲು ಚೂಪಾದ ಮೂತಿಯಿರುವ ಸಣ್ಣಪಾತ್ರೆ.

ವಳ್ಕಡೆ = ಜಮೀನಿನ ಒಳಗೆ ದನಕರುಗಳು ಮೇಯುವ ಸ್ಥಳ, ಬ್ಯಾಣ, ಹುಲ್ಲುಗಾವಲು.

ವಳಾಂತ್ರ = ಒಳಗಿನ ವಿಚಾರ, ಒಳಗುಟ್ಟು.

ವಳಾಂತ್ರದಾಗ = ಹಿಂದಿನಿಂದ, ಇನ್ನೊಬ್ಬರಿಗೆ ಗೊತ್ತಿಲ್ಲದೆಯೇ.

ವಳ್ಳೆ = ವಳಲೆ, ಒಳಲೆ.

ವಳ್ಳೆ = ಒಳ್ಳೆಯ, ಉತ್ತಮ, ಗುಣವಂತರಾದ, ನೀತಿವಂತರಾದ.

ವಳ್ಳೆಣ್ಣೆ = ಕಡಲೆಕಾಯಿ ಬೀಜದ ಎಣ್ಣೆ, ಶೇಂಗಾ ಎಣ್ಣೆ.

ವ್ಯವಾರ = ವ್ಯವಹಾರ.

ವ್ಯವ್ಸಾಯ = ವ್ಯವಸಾಯ, ಬೇಸಾಯ, ಕೃಷಿ.

ವಳ್ದಾರಿ = ಹತ್ತಿರದ/ಸಮೀಪದ ಹಾದಿ.

ವಾಂತೆ = ವಾಂತಿ, ವಮನ.

ವಾಕರಕಿ = ವಾಕರಿಕೆ, ಒಗಡಿಕೆ, ಒಗಡು, ವಾಂತಿಬರುವಂತಾಗು.

ವಾಟ = ಇಳಿಜಾರು, ಓಟ.

ವಾಟಗರ್ಕೆ ಹುಲ್ಲು = ಕರ್ಕಿ ಹುಲ್ಲಿನಂತೆ ಸ್ವಲ್ಪ ಎತ್ತರ ಬೆಳೆಯುತ್ತದೆ, ತುಂಬಾ ಗಟ್ಟಿ.

ವಾಟಕೊಡು = ಇಳಿಜಾರುಮಾಡು, ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡು.

ವಾಟಬಾಳೆ = ಪುಟ್ಟಬಾಳೆಯಂತೆ ಸಣ್ಣಹಣ್ಣು, ತುಂಬಾ ರುಚಿಕರ.

ವಾಟಾಳ = ಅಡಿಕೆ ಹಾಳೆಂಬು ತಲೆಯುಡುಗೆ

ವಾಟೆ = ಗೊರಟು, ಬೀಜ.

ವಾಟೆ = ಸಣ್ಣಜಾತಿಯ ಬಿದಿರು, ಉದ್ದಕ್ಕೆ ಮೇಲೆ ಹೋಗುತ್ತದೆ.

ವಾಟೆಕಾಯಿ = ಹಸಿರು ಕಾಯಿ ಮತ್ತು ತೆಳುಹಳದಿ ಬಣ್ಣದ ವಾಟೆಮರದ ಕಾಯಿ.

ವಾಟೆ ಸಲಕಿನ ಬುಟ್ಟಿ = ವಾಟೆಯನ್ನು ಸೀಳಿ ತೆಳುಬಳ್ಳಿಯಂತೆ ಮಾಡಿ ಅದರಿಂದ ಹೆಣೆದ ಬುಟ್ಟಿ.

ವಾಟೆಮರ = ಹುಳಿಯಾದ ಕಾಯಿಗಳನ್ನು ಬಿಡುವ ಒಂದು ಜಾತಿಯ ಮರ, ಗಟ್ಟಿಯಾದ ಮರ.

ವಾಟೆಹುಳಿ = ವಾಟೆಕಾಯನ್ನು ಕೊಯ್ದು, ಹೆರೆದು, ಬೀಜವನ್ನು ತೆಗೆದು ಒಣಗಿಸಿ ಹುಣಿಸೇ ಹಣ್ಣಿನ ಬದಲಿಗೆ ಉಪಯೋಗಿಸುವ ಔಷಧೀಯ ಗುಣವುಳ್ಳ ಒಂದು ಹುಳಿ.

ವಾಟೆಹುಳ = ಸಗಣಿಯಲ್ಲಾಗುವ ಹುಳ, ಸಗಣಿಹುಳ.

ವಾಡ್ಕಿ = ವಾಡಿಕೆ, ಪದ್ಧತಿ, ರೂಢಿ.

ವಾತ = ವಾಯು ಸಂಬಂಧಿ ಕಾಯಿಲೆ ಕೈಕಾಲು ಸಂದುಗಳು ಮತ್ತು ಮೈಕೈನೋವಿನ ರೋಗ.

ವಾದ = ಚರ್ಚೆ, ಮರುಉತ್ತರ, ಮಾತಿಗೆ ಮಾತು.

ವಾದ್ಯ = ಮದುವೆಯಲ್ಲಿ ನುಡಿಸುವ ಓಲಗ.

ವಾಪಾಸು = ತಿರುಗಿ, ಹಿಂತಿರುಗಿ, ಪುನಃ, ಮತ್ತೆ.

ವಾಪಸ್ಸು = ವಾಪಾಸು.

ವಾಯು = ಗಾಳಿ, ಹೂಸು.

ವಾಯು = ಸಂಧಿವಾತ.

ವಾಯ್ದೆ = ವಾಯಿದೆ, ಗಡುವು.

ವಾರ = ತಿಂಗಳಲ್ಲಿ ಬರುವ ನಾಲ್ಕು ವಾರಗಳಲ್ಲಿ ಒಂದು, ತಿಂಗಳ ಏಳುದಿನ (೧. ಭಾನು /೨. ಸೋಮ /೩. ಮಂಗಳ /೪ ಬುಧ /೫ ಗುರು/ ೬ ಶುಕ್ರ / ೭ ಶನಿ).

ವಾರಸ್ದಾರ = ವಾರಸುದಾರ, ಹಕ್ಕುದಾರ, ಬಾಧ್ಯಸ್ಥ.

ವಾರ್ಗಟ್ಲೆ = ವಾರಗಟ್ಟಲೆ, ವಾರವೆಲ್ಲಾ, ಪ್ರತಿವಾರವು.

ವಾರ್ಗಣ್ಣು = ವಾರೆಕಣ್ಣು, ವರ್ಚುರ್, ಕಡೆಗಣ್ಣು.

ವಾರಿಗೆ = ಒಂದೆವರ್ಗಿಂಬುವರು, ಸಮವಯಸ್ಸು, ವಾರಗೆ.

ವಾರ್ಗಿತ್ತಿ = ವಾರಗಿತ್ತಿ, ಓರಗಿತ್ತಿ, ಗಂಡನ ಅಣ್ಣ/ತಮ್ಮನ ಹೆಂಡತಿ.

ವಾರೆ = ಓರೆ, ಡೊಂಕು, ವಕ್ರ, ಸೊಟ್ಟ.

ವಾರೆಕ್ವಾರೆ = ಓರೆಕೋರೆ, ಅಂಕುಡೊಂಕು, ನೇರವಿಲ್ಲದ.

ವಾರೆಂತೆ = ಸಂಪೂರ್ಣ, ಎಲ್ಲಾ, ಅಪೂಟು.

ವಾಲಗ = ಬಾಯಿಂದ ಊದುವ ಒಂದು ವಾದ್ಯ, ಓಲಗ.

ವಾಲಾಟ = ಓಲಾಡುವುದು, ತೊಳಲಾಟ, ಬಳುಕಾಟ.

ವಾಲಾಡು = ಓಲಾಡು, ತೊಳಲಾಡು, ಅತ್ತಿಂದಿತ್ತ, ಇತ್ತಿಂದತ್ತ ಮನಸ್ಸಿನ ತುಂಯ್ದಾಟ, ನಿಧಾನಕ್ಕೆ ನಡೆಯುವುದು.

ವಾಲು = ಬಾಗು, ತೂಗು.

ವಾಲು = ಒಬ್ಬರ ಪರವಹಿಸು, ಒಬ್ಬರ ಪಕ್ಷವಹಿಸು (ಅಲಂ).

ವಾಲೆ = ಓಲೆ, ಕಿವಿಯ ಆಭರಣ.

ವಾಲೆಗರಿ = ತಾಳೆಮರದ ಗರಿ, ಹಿಂದೆ ಬರೆಯಲು ಪುಸ್ತಕದ ಬದಲಿಗೆ ಬಳಸುತ್ತಿದ್ದರು.

ವಾಲೆಬೆಲ್ಲ = ಪಿಲ್ಲೆಮಾಡಿ ವಾಲೆಗರಿ–ಯೊಳಗಿಟ್ಟಿರುವ ಬೆಲ್ಲ, ತಾಳೆ ಮರದಿಂದ ತಯಾರಿಸಿದ ಬೆಲ್ಲ.

ವಾಲ್ಪೆಟ್ಟು = ಗೋಡೆಯ ಮೇಲೆ ಕೂರಿಸಿದ/ಗೋಡೆಯೊಳಗೆ ತೂರಿಸಿದ ಮರದ ತೊಲೆ.

ವಾಸ್ತವಾಂಶ = ನಿಜಸ್ಥಿತಿ, ವಸ್ತುಸ್ಥಿತಿ.

ವಾಸ್ಕಾಲು = ಬಾಗಿಲಿನ ಚೌಕಟ್ಟು, ನಿಲ.

ವಾಸಿ = ಗುಣಮುಖ, ಸುಧಾರಿಸಿದ ಆರೋಗ್ಯ.

ವಾಸಿ = ಉತ್ತಮ, ಆಗಬಹುದು (ಅದಕ್ಕಿಂತ ಇದೇ ವಾಸಿ).

ವಾಸ್ನೆ = ವಾಸನೆ, ನಾತ, ಸುಗಂಧ/ದುರ್ಗಂಧ.

ವಾಳ್ಯ = ಒಂದು ಬತ್ತದ ತಳಿ.

ವ್ಯಾಜ = ಜಗಳ, ವ್ಯಾಜ್ಯ.

ವಿಂಗ್ಡ = ವಿಂಗಡಿಸು, ಬೇರೆಮಾಡು.

ವಿಗ್ರ = ವಿಗ್ರಹ, ಮೂರ್ತಿ.

ವಿಧಿ = ಅದೃಷ್ಟ, ಬ್ರಹ್ಮ, ದೇವರು.

ವಿನಾ = ವಿನಹ, ಹೊರತು, ಉಳಿದು, ಬಿಟ್ಟು.

ವಿನಾಕಾರಣ = ಸುಂಕಾಸುಂವೆನ್ನ, ಕಾರಣವಿಲ್ಲದೆ.

ವಿಪರೀತ = ಜಾಸ್ತಿ, ಅತಿ.

ವಿರೋಧ = ವೈರ, ಹಗೆತನ, ಪರವಿಲ್ಲದಿರುವುದು.

ವಿಶ್ವಾಸ = ಪ್ರೀತಿ.

ವಿಳ್ಳೆ = ವೀಳ್ಯ, ತಾಂಬೂಲ.

ವಿಳ್ಳೆ ಕೊಡುವುದು = ಶುಭಕಾರ್ಯಕ್ಕೆ ನಿಗದಿಪಡಿಸಲು ತಾಂಬೂಲ ಕೊಡುವುದು.

ವಿಳ್ಳೆ ತಿದ್ದುವ ಶಾಸ್ತ್ರ = ಮದುವೆಗೆ ಬಂದ ಅತಿಥಿಗಳಿಗೆಲ್ಲರಿಗೂ ಗೌರವಾರ್ಥವಾಗಿ ಎರಡು ವೀಳ್ಯದೆಲೆ, ಎರಡು ಅಡಿಕೆಯಿಟ್ಟು ತಲೆಗೆ ಮುಂಡಾಸು ಸುತ್ತಿಕೊಂಡು, ಪಾಲು ಮುಖಂಡರ ಅಪ್ಪಣೆ ಪಡೆದು ಹೆಣ್ಣಿನ ಮನೆಯಲ್ಲಿ ದಾರೆಗೆ ಮೊದಲು ಎರಡೂ ಕಡೆಯವರು ಎಲ್ಲರ ಅಪ್ಪಣೆ ಕೇಳುವುದು.

ವಿಭೂತಿ = ಭಸ್ಮ.

ವೀರ ಭದ್ರ ದೇವಸ್ಥಾನ = ವೀರಭದ್ರಸ್ವಾಮಿ ದೇವರಗುಡಿ.

ವೀಸೆ = ಐದು ಸೇರಿನ ಒಂದು ಅಳತೆ.

ವುಂಟೆ = ಗಂಡಸರು ಹಾಕಿಕೊಳ್ಳುವ ಒಂದು ಕಿವಿಯ ಆಭರಣ.

ವುಂದೇ ಏಕ = ಒಂದೇ ಸಮ, (ಆ ಗಿಡವುಂದೇ ಏಕ ಬೆಳೆದಿದೆ).

ವುಂದು = ಒಂದು, ಒಂದರ ಸಂಖ್ಯೆ.

ವುತ್ಪತ್ತಿ = ಉತ್ಪತ್ತಿ, ವರಮಾನ.

ವೃಥಾ = ವ್ಯರ್ಥವಾಗಿ.
ವುರ್ಸ = ವರ್ಷ.
ವೆಚ್ಚ = ಖರ್ಚು.
ವೆನಿಲಾ = ಹಸಿರುಬಳ್ಳಿ, ಬಳ್ಳಿಯನ್ನು ಕತ್ತರಿಸಿ ಕೆಳಗೆ ನೇತುಬಿಟ್ಟರೆ ಹೂವಾಗುತ್ತದೆ. ಹೂವನ್ನು ಕೃತಕವಾಗಿ ಪರಾಗ ಸ್ಪರ್ಶ ಮಾಡಿದರೆ ಮಾತ್ರ ಕಾಯಿ ಬಿಡುತ್ತದೆ. ಕಾಯನ್ನು ಸಂಸ್ಕರಿಸಿ ಪರಿಮಳ ದ್ರವ್ಯವಾಗಿ ಉಪಯೋಗಿಸುತ್ತಾರೆ.
ವೇಗ = ಚುರುಕು, ರಭಸ, ಶೀಘ್ರ.
ವೇಶ = ವಿರೂಪ.
ವೈಡೂರ್ಯ = ಪದ್ಮರಾಗ, ಅಮೆಥಿಸ್ಟ್, ನೀಲಿ ಮಿಶ್ರಿತ ನೇರಳೆಬಣ್ಣದ ಬೆಲೆಬಾಳುವ ಕಲ್ಲು.
ವೈದ್ಯ = ಪಂಡಿತ, ಹಕೀಮ.
ವೈನ = ರುಚಿ, ಚಂದ, ರೂಪ.
ವೈಮನಸ್ಸು = ವೈರ, ಮುನಿಸು, ಮನಸ್ತಾಪ.
ವೈಯಾರ = ಬೆಡಗು, ಆಡಂಬರ.
ವೈರ = ಹಗೆತನ, ಶತ್ರುತ್ವ
ವೈವಾಟು = ವ್ಯವಹಾರ, ವ್ಯವಹಾರದ ಮೇಲ್ವಿಚಾರಣೆ.
ವೈಷಮ್ಯ = ದ್ವೇಷ, ಹಗೆತನ.
ವೈಸು = ವಹಿಸು, ಒಪ್ಪಿಸು.

ಶ

ಶಂಕೆ = ಸಂದೇಹ, ಸಂಶಯ.
ಶಂಖ = ಸಮುದ್ರ ತಡಿಯಲ್ಲಿ ಸಿಗುವ ದೊಡ್ಡ ಕಪ್ಪೆ ಚಿಪ್ಪು, ಪೂಜಾ ಸಮಯದಲ್ಲಿ ಊದುವ ಪೂಜಾ ಸಾಮಗ್ರಿ.
ಶಂಖದ ಹೂ = ಶಂಖದಾಳ, ಗಿರಿಕರ್ಣಿಕೆ.
ಶಿಂಗಾರ = ಅಡಿಕೆಯ ಹೂ, ಹಿಂಗಾರ.
ಶಕುನ = ನಿಮಿತ್ತ.
ಶನ್ವಾರ = ಶನಿವಾರ, ವಾರದ ಏಳು ದಿನಗಳಲ್ಲಿ ಒಂದು.
ಶೃಪ್ಪ = ಶಾಟ, ಮರ್ಮಾಂಗದ ಮೇಲಿನ ಕೂದಲು.
ಶರಾಬು = ಸಾರಾಯಿ, ಮದ್ಯ.
ಶರಬತ್ತು = ಪಾನಕ, ಹಣ್ಣಿನ ರಸದ ಪಾನೀಯ.
ಶಲ್ಲೆ = ಉತ್ತರೀಯ, ಶಾಲು.
ಶವ = ಹೆಣ.
ಶಾಖ = ಬಿಸಿ, ಉಷ್ಣ.
ಶಾಟ = ಶೃಪ್ಪ, ಮರ್ಮಾಂಗದ ಮೇಲಿನ ಕೂದಲು.
ಶಾಟತರಿ = ಕೆಲಸಕ್ಕೆ ಬಾರದ/ ಉಪಯೋಗವಿಲ್ಲದ ಕೆಲಸ ಮಾಡುವುದು. (ಅಲಂ)
ಶಾನುಭೋಗ = ಗ್ರಾಮದ ಲೆಕ್ಕಾಧಿಕಾರಿ.
ಶಾಪ = ನಿಂದೆ, ಬಯ್ಗಳು.
ಶಾವಿಗೆ = ಶಾವ್ಗೆ, ಒಂದು ಬಗೆಯ ತಿನಿಸು.
ಶಾವ್ಗಿ ಒಳ್ಳು = ಶಾವಿಗೆ ಮಾಡುವ ಮರದ ಒರಳು.
ಶಾವ್ಗೆ = ಶಾವಿಗೆ.
ಶಾಸ್ತಿ = ಶಿಕ್ಷೆ, ದಂಡನೆ.
ಶಿಕಾರಿ = ಬೇಟೆ, ಬೇಟೆಯ ಪ್ರಾಣಿ.
ಶಿಖಂಡಿ = ನಪುಂಸಕ, ಗಂಡೂ ಅಲ್ಲ ಹೆಣ್ಣೂ ಅಲ್ಲದ.
ಶಿಲ್ಪಿ = ಶಿಳ್ಳು, ಪೀಪಿ.

ಶಿಲ್ಕು = ಸಿಲ್ಕು, ಬಾಕಿ, ಉಳಿಕೆ.
ಶಿಳ್ಳು ಹೊಡೆ = ಶಿಲ್ಪಿ ಹೊಡೆಯುವುದು, ಬರೀಬಾಯಿ/ಕೈಯನ್ನು ಬಳಸಿ ಪೀಪಿಯಂತೆ ಶಬ್ಧಮಾಡುವುದು.
ಶೆಟ್ಟಿ ಬಳಿ = ಒಕ್ಕಲಿಗರ ಒಂದು ಗೋತ್ರ.
ಶೇರ್ವಾ = ಮೂಳೆಗಳನ್ನು ಬೇಯಿಸಿ ತೆಗೆದ ರಸದಿಂದ ಮಾಡಿದ ಸಾರು.
ಶೇಷ್ಟ = ಶ್ರೇಷ್ಠ, ಉತ್ತಮವಾದದ್ದು.
ಶೇಷ್ಟಗಾರ = ಉತ್ತಮವಾದುದನ್ನೇ ಬಯಸುವವ, ಆಯ್ಕಟ್ಟುಗಾರ. (ಪು)
ಶೇಷ್ಟಗಾತಿ = ಉತ್ತಮವಾದುದನ್ನೇ ಬಯಸುವವಳು, ಆಯ್ಕಟ್ಟುಗಾರ್ತಿ. (ಸ್ತ್ರೀ)
ಶ್ರಾವಣ ಶನಿವಾರ = ೧.ಶುದ್ಧವಾಗಿ ಅಡಿಗೆ ಮಾಡಿ, ತುಳಸಿ ಪೂಜೆಮಾಡಿ ಮಧ್ಯಾಹ್ನ ಮಾತ್ರ ಊಟ, ರಾತ್ರಿ ಬರಿ ಫಲಾಹಾರ, ಇದೇ ರೀತಿ ಮಾಸದ ಪ್ರತಿ ಶನಿವಾರವು ಒಪ್ಪತ್ತು, ತಿಂಗಳೆಲ್ಲಾ ಮಾಂಸಾಹಾರ, ಮಧ್ಯಪಾನ ವರ್ಜಿತ, ೨.ಶ್ರಾವಣ ಮಾಸದ ಶನಿವಾರಗಳು.

ಷ

ಷಂಡ = ನಪುಂಸಕ, ಅಪ್ರಯೋಜಕ.
ಷಡ್ಕ = ಷಡ್ಡಕ, ನಾದಿನಿ/ಅತ್ತಿಗೆಯ ಗಂಡ.
ಷರತ್ತು = ಒಪ್ಪಂದ, ಕರಾರು.

ಸ

ಸಂಕ = ಸೇತುವೆ, ಸಾರ.
ಸಂಕ್ಟ = ಸಂಗ್ಟ, ದುಃಖ, ಸಂಕಷ್ಟ.
ಸಂಕೆ = ಶಂಕೆ, ಅನುಮಾನ.
ಸಂಖ = ಶಂಖ, ಒಂದು ಪೂಜಾ ಸಾಮಗ್ರಿ, ಪಾಂಚಜನ್ಯ.
ಸಂಗ್ಟ = ಸಂಕ್ಟ
ಸಂಗ್ಡ = ಸಂಗಡ, ಜೊತೆಗೆ.
ಸಂಗ್ತಿ = ಸಂಗತಿ, ವಿಚಾರ.
ಸಂಚ್‌ಕಾರ = ಕುತ್ತು, ಆಪತ್ತು, ಕೇಡು, ಮುಂಗಡವಾಗಿ ಕೊಟ್ಟಿದ್ದನ್ನು ತಿರುಗಿ ಕೊಡದೆ ವೋಸ ಮಾಡುವುದು.
ಸಂಜ್ಞೆ = ಸನ್ನೆ, ಕೈ/ಕಣ್ಣಿಂದಲೇ ತಿಳಿಸಿ ಹೇಳುವುದು.
ಸಂಡ್ಗೆ = ಒಣಗಿಸಿದ ಮಾಂಸ.
ಸಂತೆ = ವಾರಕ್ಕೊಮ್ಮೆ ಸೇರುವ ಮಾರುಕಟ್ಟೆ ನಿರ್ದಿಷ್ಟ ಸಮಯದಲ್ಲಿ ಒಂದೇ ಜಾಗದಲ್ಲಿ ನಡೆಯುವ ವ್ಯಾಪಾರ ವಹಿವಾಟು
ಸಂತೋಸ = ಸಂತೋಷ, ಗೆಲುವು, ಖುಷಿ.
ಸಂದಿ = ಮೂಲೆ, ಬಿರುಕು.
ಸಂದಿಗೊಂದಿ = ಮೂಲೆಮೂಲೆಗಳು.
ಸಂದಿನೂವು = ಕೀಲುಗಳಲ್ಲಿ ನೋವು.
ಸಂದು = ಕೀಲು, ಗೆಣ್ಣು.

ಸಂದು = ಸಂದಿ.

ಸಂದೂಕ = ಪೆಟ್ಟಿಗೆ, ಪಿಠಾರಿ.

ಸಂಪಾದ್ನೆ = ಸಂಪಾದನೆ, ಗಳಿಸಿದ್ದು, ಗಳಿಕೆ, ವರಮಾನ.

ಸಂಪಾಲು = ಸಮಪಾಲು, ಸಮಭಾಗ.

ಸಂಪ್ಗೆಮರ = ಒಂದು ಜಾತಿಯ ಕಾಡುಮರ, ದೊಡ್ಡಮರ, ಹಳದಿ ಬಣ್ಣದ ಇದರ ಹೂವು ತುಂಬಾ ಪರಿಮಳ.

ಸಂಪ್ಗೆಹೂ = ಸಂಪ್ಗೆ ಮರದಲ್ಲಿ ಬಿಡುವ ಸುವಾಸನೆಯ ಹೂವು, ಚಂಪಕ.

ಸಂಪ್ಗೆಹಣ್ಣು = ಕಾಡಿನಲ್ಲಿ ಬೆಳೆಯುವ ಸಾಮಾನ್ಯ ದೊಡ್ಡವಿರುವ ಮರದಲ್ಲಿ ಬಿಡುವ ಹಣ್ಣು.

ಸಂಬಾರ = ಮಸಾಲೆ, ಅಡಿಗೆ ಮನೆಯ ಪದಾರ್ಥಗಳು.

ಸಂಬಾರ ಮರ್ಗಿ = ಸಂಬಾರ ಪದಾರ್ಥಗಳನ್ನು ಹಾಕಿಟ್ಟು ಕೊಳ್ಳುವ ಹಲವಾರು ಅರೆಗಳಿರುವ ಮರದ ಪೆಟ್ಟಿಗೆ.

ಸಂಬಾರಸೊಪ್ಪು = ಕೊತ್ತಂಬರಿ ಸೊಪ್ಪು.

ಸಂಭಾವ್ನೆ = ದೇವಸ್ಥಾನದಿಂದ ಮನೆ ಮನೆಗೆ ಪ್ರಸಾದ ತಂದುಕೊಟ್ಟ ಬ್ರಾಹ್ಮಣರಿಗೆ ಕೊಡುತ್ತಿದ್ದ ಅಡಿಕೆ, ಅಕ್ಕಿ, ಹಣ್ಣು ಇತ್ಯಾದಿ.....ಗಳ ಕಾಣಿಕೆ

ಸಂಬಾಳ್ಸ್ಗ = ಸುಧಾರಿಸಿಕೋ, ಸಮಾಧಾನ ಮಾಡಿಕೊ.

ಸಂಬಾಳ್ಸು = ಸಮಾಧಾನ ಪಡಿಸು, ಸುಧಾರಿಸು.

ಸಂಸಾರ = ಕುಟುಂಬ.

ಸಕತ್ತು = ತುಂಬಾ, ಬಾರಿ, ಬಹಳ.

ಸಕತ್ತು = ತೀವ್ರ, ಉಲ್ಬಣ.

ಸಕ್ಳುದಾರ ಕಟ್ಟುವುದು = ಮೊದಲದಿನ ಉಳುಮೆ ಮಾಡುವುದು.

ಸಕ್ರೆ = ಸಕ್ಕರೆ, ಅತಿಸಿಹಿಯಾದ ಪದಾರ್ಥ.

ಸಗಟು = ರಾಶಿ, ಒಟ್ಟು ಮೊತ್ತ.

ಸಗಣಿ = ಜಾನುವಾರುಗಳ ಮಲ, ಲದ್ದಿ.

ಸಗಣಿ ಬಳಿಯದು = ಸಗಣಿಯಿಂದ ನೆಲವನ್ನು ಸಾರಿಸುವುದು.

ಸಗ್ತಿ = ಶಕ್ತಿ, ಬಲ.

ಸಜಾ = ಶಿಕ್ಷೆ, ಜೈಲು ಶಿಕ್ಷೆ, ದಂಡನೆ, ಕಾನೂನು ರೀತ್ಯ ದಂಡನೆ/ಶಿಕ್ಷೆ.

ಸಜ್ಜಾಗು = ತಯಾರಾಗು, ಏರ್ಪಾಡು ಮಾಡು.

ಸಜ್ಜು = ಅಣಿ, ಏರ್ಪಾಡು, ಸಿದ್ಧತೆ.

ಸಟಕ್ನೆ = ಸಟ್ಟನೆ, ತಕ್ಷಣ, ಬೇಗನೆ.

ಸಟ್ಗ = ಸಟ್ಟುಗ, ಅಗಲವಾದ ಮರದ ಸೌಟು/ಚಮಚ.

ಸಟ್ಟುಗ = ಸಟ್ಗ.

ಸಟೆ = ಸುಳ್ಳು, ದಿಟವಲ್ಲದ್ದು.

ಸಟ್ನೆ = ತಟ್ಟನೆ, ಸಟಕ್ನೆ.

ಸಡಕ = ಶಡ್ಕ, ಹೆಂಡತಿಯ ಅಕ್ಕ/ತಂಗಿಯರ ಗಂಡಂದಿರು.

ಸಡ್ಲ = ಸಡಿಲ, ಅಳ್ಳಕ.

ಸಡ್ಡುಹೊಡಿ = ತೊಡೆತಟ್ಟಿ ಜಗಳಕ್ಕೆ ನಿಲ್ಲು, ಎದುರುನಿಲ್ಲು, ಮಾತಿಗೆ ಎದುರು ಮಾತಾಡು.

ಸಣಕಯ್ಯ = ಸಣ್ಣಅಕ್ಕಯ್ಯ, ಅಕ್ಕಂದಿರಲ್ಲಿ ಚಿಕ್ಕವಳು.

ಸಣಣಯ್ಯ = ಸಣ್ಣಅಣ್ಣಯ್ಯ, ಅಣ್ಣಂದಿರಲ್ಲಿ ಚಿಕ್ಕವನು.

ಸಣಯ್ಯ = ಚಿಕ್ಕಪ್ಪ.
ಸಣಕಲು = ಬಡವಾದ, ಕೃಶ.
ಸಣ್‌ಕೆಲ್ಸ = ಮರ್ಯಾದೆಗೆ ಕುಂದುತರುವ ಕೆಲಸ ೨. ಶ್ರಮವಿಲ್ಲದ ಕೆಲಸ, ಶೀಘ್ರವಾಗಿ ಮಾಡುವಂತ ಕೆಲಸ.
ಸಣ್ಣ = ಚಿಕ್ಕ, ಕೃಶ, ಸೂಕ್ಷ್ಮ.
ಸಣ್ಕಳ್ಳಿ = ಬೇಲಿಗೆ ಹಾಕುವ ಕಳ್ಳಿ.
ಸಣ್ತನ = ಸಣ್ಣತನ, ಅಲ್ಪತನ, ಕೀಳುತನ.
ಸಣ್ಣ ಮಾಡು = ಕಿರಿದು ಮಾಡು.
ಸಣ್ಣೆ = ಸಾರಣೆ, ವಂದರಿ.
ಸಣ್ಣೆಕಲ್ಲು = ಸಾಣೇ ಕಲ್ಲು, ಗಂಧ ತೇಯುವ ಕಲ್ಲು.
ಸಣ್ಣೆಲೆಸದುಗ = ಸಾಮಾನ್ಯವಾಗಿ ಗದ್ದೆಯಲ್ಲಿ ಬೆಳೆಯುವ ಒಂದು ಔಷಧೀಯ ಸಸ್ಯ, ಹೆಂಡ ಮಾಡಲು ಬಳಸುತ್ತಾರೆ.
ಸತ್ತ = ಸಾವು ಸಂಭವಿಸಿದ. ಜೀವವಿಲ್ಲದ.
ಸತ್ತಸದೆ = ಗುಡಿಸದೇ ಹಾಗೇ ಬಿಟ್ಟಿರುವ ಮನೆಯೊಳಗಿನ ಕಸ, ೨. ಹಿಂದಿನ ದಿನದ ಕಸ.
ಸತ್ವ = ಸತು, ಸಾರ, ಸದ್ಗುಣ.
ಸತಾಯ್ಸು = ಅನವಶ್ಯಕ ಕಿರಿಕಿರಿಯುಂಟು ಮಾಡು, ವಿಳಂಬಮಾಡು, ಮಾತಿಗೆ ತಪ್ಪು.
ಸತು = ಸತ್ವ, ಸಾರ.
ಸದರ = ಸಲಿಗೆ, ಸಸಾರ, ಗೌರವ ನೀಡದಿರುವುದು.
ಸದ್ಯ = ಈಗ, ಪ್ರಕೃತ.
ಸದಾ = ಯಾವಾಗಲೂ, ಸತತ.
ಸದು = ಅವಕಾಶ, ಬಿಡುವು.
ಸದ್ದು = ಗದ್ದಲ, ಗಲಾಟೆ, ಶಬ್ಧ.
ಸದೆ = ಮನೆಯೊಳಗಿನ ಕಸ.
ಸದೆಬಡಿ = ತಲೆಯೆತ್ತದಂತೆ ಮಾಡು, ನಾಶವಮಾಡು, ಸಾಯಿಸು, ಬಗ್ಗುಬಡಿ ೨. ತೋಟದ ಕಳೆ ಹೊಡೆಯುವುದು.
ಸನಕಿ = ಎಲೆ ಗುದ್ದಲಿ, ಮಣ್ಣು ಎಳೆಯುವ ಸಾಧನ, ಸಲಕಿ.
ಸನಿ = ೧.ಶನಿ, ಗ್ರಹಚಾರ ೨.ಕೆಟ್ಟವನು, ನಕ್ಷತ್ರಿಕ.
ಸನಿವಾರ = ಶನಿವಾರ, ವಾರದ ಒಂದು ದಿನ.
ಸನ್ನಿ = ಉನ್ಮಾದ, ಜ್ವರದ ತಾಪದಿಂದ ಬಾಯಿಗೆ ಬಂದಂತೆ ಮಾತಾಡುವುದು, ಹುಚ್ಚು.
ಸನ್ನೆ = ಸೂಚನೆ, ಮಾತಾಡದೇ ಕೈ/ ಕಣ್ಣಿಂದಲೇ ಕರೆಯುವುದು/ ಹೇಳುವುದು, ಸಂಜ್ಞೆ.
ಸನ್ನೇಶ = ಸನ್ನಿವೇಶ, ಸಂದರ್ಭ.
ಸಪ್ಪಳ = ಸಪ್ಪಳ, ಸದ್ದು, ಗಲಾಟೆ, ಶಬ್ಧ.
ಸಪಾಟು = ಸಮತಲ, ಚಪ್ಪಟೆ.
ಸಪಾಯಿ = ನುಣ್ಣಗೆ, ಗೋಡೆ/ನೆಲವನ್ನು ನುಣ್ಣಗೆ ಮಾಡುವುದು.
ಸಪೂಟು = ಸಂಪೂರ್ಣ, ಏನೂ ಇಲ್ಲದಂತೆ.
ಸಪೂರ = ಸಣ್ಣಗೆ, ಕೃಶ, ಬಡಕಲು, ಬಡಕಟ್ಟೆ
ಸಬಕಾರ = ಸಾಬೂನು.
ಸಬರ = ಪ್ರಾಣಿಗಳ ಬೆನ್ನ ಮೇಲಿನ ಹೊರೆ, ಕತ್ತೆಯ ಬೆನ್ನ ಮೇಲಿನ ಬಟ್ಟೆಯ ರಾಶಿ.
ಸಬ್ಧ = ಶಬ್ಧ, ಸದ್ದು, ಸಪ್ಪಳ.

ಸಬ್ಬಲ್ಲು = ಮಣ್ಣು ಅಗೆಯುವ ಕಬ್ಬಿಣದ ಉದ್ದಹಾರೆ.

ಸಬ್ಬಲ್ಲು = ಒರಳಲ್ಲಿ ಕುಟ್ಟುವ ಸಣ್ಣ ಹಾರೆ, ಸಣ್ಣಬ್ಬಲ್ಲು.

ಸಬ್ಬಸ್ಗಿ = ಸೊಪ್ಪುಸೀಗೆ, ಒಂದು ಬಗೆಯ ತರಕಾರಿ ಸೊಪ್ಪು.

ಸಬೂಬು = ನೆವ, ನೆಪ, ಕಾರಣ, ಹೆಳೆ.

ಸಬೆ = ಹಕ್ಕಿಗಳನ್ನು ಬೇಟೆಯಾಡಲು ಬಳಸುವ ಉರುಳು, ಸೆಬೆ.

ಸಮ = ೧.ಸರಿ, ಸಮಾನ, ಓರಗೆಯ ೨.ಮಟ್ಟ, ಒಂದೇ ರೀತಿ.

ಸಮಗಾರ = ಚಮ್ಮಾರ, ಚರ್ಮದ ಕೆಲಸ ಮಾಡುವವನು, ಚಪ್ಪಲಿ ಹೊಲಿ–ಯುವವನು.

ಸಮತಟ್ಟು = ಮಟ್ಟಸ, ಏರು ಪೇರು/ತಗ್ಗುದಿಣ್ಣೆಗಳಿಲ್ಲದ.

ಸಮತಲ = ಸಮತಟ್ಟು.

ಸಮಯ = ಕಾಲ, ವೇಳೆ.

ಸಮ್ಸಮ = ಸಮಸಮ, ಹೆಚ್ಚುಕಡಿಮೆ, ಒಂದೇಸಮ.

ಸಮ್ಮಂದೀಕ್ರು = ಬಂದುಗಳು, ಬಾಂಧವರು, ಸಂಬಂಧಿಕರು.

ಸಮೃದ್ಧ = ಯತೇಚ್ಚ, ಅದಿಕ, ಹೇರಳ, ಬೇಕಾದಷ್ಟು.

ಸಮಾತಟ್ಟು = ಚೆನ್ನಾಗಿ ಹೊಡಿ, ಸರಿಯಾಗಿ ಪೆಟ್ಟುಕೊಡು, ಸಮಾಬಾರ್ಸು.

ಸಮಾಧಾನ = ತಾಳ್ಮೆ, ಶಾಂತಿ,ನೆಮ್ಮದಿ, ತೃಪ್ತಿ.

ಸಮಾಬಾರ್ಸು = ಸಮಾತಟ್ಟು.

ಸಮೇತ = ಸಹಿತ, ಸಂಗಡ, ಒಡನೆ, ಜೊತೆಗೆ.

ಸರ = ಹಾರ, ಮಾಲೆ.

ಸರಕಲು = ಸಣ್ಣ ಝುರಿ, ಹಳ್ಳ.

ಸರಕಲು = ಎರಡು ಬೆಟ್ಟಗಳ ನಡುವಿನ ಕಡಿದಾದ ಪ್ರದೇಶ.

ಸರಕು = ರಾಶಿ, ರಾಶಿಪದಾರ್ಥಗಳು, ಸಾಮಾನು.

ಸರ್ಕ = ಜರುಗು, ಅತ್ತ ಹೋಗು, ಪಕ್ಕಕ್ಕೆ ಸರಿ.

ಸರ್ಗಲು = ಸರಗೋಲು, ಕಡುಬು ಬೇಯಿಸುವ ಮಣ್ಣು /ಲೋಹದ ಪಾತ್ರೆ, ಇಡ್ಲಿಪಾತ್ರೆ.

ಸರ್ವನಾಶ = ಸಂಪೂರ್ಣಹಾನಿ.

ಸರ್ತ = ನೇರ, ನೆಟ್ಟಗೆ, ಓರೆಯಿಲ್ಲದ.

ಸರಗುಣಿಕೆ = ಸುಲಭದಲ್ಲಿ ಬಿಡಿಸಲು ಸಾಧ್ಯವಾಗುವಂತಹ ಗಂಟು, ಜೀರುಗುಣಿಕೆ, ಕುಣಿಕೆ, ಸರಗುಣಿ.

ಸರಡು = ಬಳ್ಳಿ ಹಬ್ಬಲು ಆಧಾರವಾಗಿ ಕೊಡುವ ಮುಳ್ಳುಎಲೆಸಹಿತವಾದ ಕೋಲು.

ಸರಪ್ಣಿ = ಸರಪಳಿ, ಸರಪಣಿ.

ಸರಬ್ಲು = ಸರಡು, ಒಣಗಿದ ಬಾಳೆಪಟ್ಟೆ.

ಸರಳು = ಕಬ್ಬಿಣದ ಸಲಾಕೆ, ಕಬ್ಬಿಣದ ಹಲಗಣೆ.

ಸರಿ = ಹೌದು, ನಿಜ, ಆಯಿತು, ಒಪ್ಪಿಗೆ ಎಂದು ಒಪ್ಪಿಕೊಳ್ಳುವುದು.

ಸರಿಸರಿ = ಸರಿಯ ದ್ವಿರುಕ್ತಿ, ಹೌದೌದು.

ಸರ್ತಿ = ಸಾರಿ, ಬಾರಿ, ಸಲ, ಸರ್ಗಿ (ಎಷ್ಟು ಸರ್ತಿ ಹೇಳ್ಬೇಕು?).

ಸರ್ಗಿ = ಸರ್ತಿ.

ಸರ್ತಿಅಡಿಗೆ = ಅವಿಭಕ್ತ ಕುಟುಂಬದಲ್ಲಿ

ವಾರಕ್ಕೊಬ್ಬರಂತೆ ಅಡಿಗೆ ಮಾಡುವುದು, ಸರದಿಯ ಅಡಿಗೆ.

ಸರ್ದಿ = ಸರದಿ.

ಸರ್ಪ = ಹಾವು, ಉರಗ.

ಸರ್ಪನ ಹಾವು = ನಾಗರಹಾವು.

ಸರ್ಪಸುತ್ತು = ಅತಿವೇದನೆಯ ಚರ್ಮರೋಗ, ಕುತ್ತಿಗೆ, ಸೊಂಟದಲ್ಲಾದರೆ ಸರ್ಪದಂತೆ ಸುತ್ತಲು ಹರಡುತ್ತಾ ಹೋಗುವ ನೀರು ತುಂಬಿದ ಗುಳ್ಳೆಗಳು, ವೈರಾಣುಗಳಿಂದ ಬರುವ ಸೋಂಕು.

ಸರ್ಹದ್ದು = ಸರಹದ್ದು, ಮೇರೆ, ಗಡಿ, ಎಲ್ಲೆ.

ಸರಾಗ = ಸಲೀಸು, ಸುಲಭ.

ಸರಾಬು = ಸಾರಾಯಿ, ಮದ್ಯ.

ಸರಾಸರಿ = ಸಾಮಾನ್ಯ ಅಂದಾಜು, ಶೇಕಡಾವಾರು.

ಸರಿ = ಸಮ, ಸಮಸಂಖ್ಯೆ.

ಸರಿ = ಜರುಗು, ಪಕ್ಕಕ್ಕೆ ಹೋಗು.

ಸರಿಗಿ = ಸಣ್ಣ ಲೋಹದ ಎಳೆ, ತಂತಿ, ಕಂಬಿ

ಸರಿಗಿ = ಜರಿ, ಕಲಾಬತ್ತು.

ಸರಿದೂಗು = ಸಮತೋಲನ ಮಾಡು.

ಸರಿಬರು = ಸರಿಯಾಗು, ಹೊಂದು.

ಸರಿಬೀಳು = ಸರಿಬರು.

ಸರಿಬೆಸ = ಒಂದು ರೀತಿಯ ಆಟ.

ಸರಿಮಾಡು = ತಿದ್ದು, ಕ್ರಮಗೊಳಿಸು.

ಸರಿರಾತ್ರಿ = ನಡುರಾತ್ರಿ, ಮಧ್ಯರಾತ್ರಿ

ಸರಿಸುಮಾರು = ಹೆಚ್ಚುಕಡಿಮೆ, ಒಂದು ಅಂದಾಜು.

ಸರೀಕ್ರು = ಸರಿಸಮಾನರು, ಸಮ್ಮಂದಿಕರು.

ಸರ್ಲು = ಕಾಡಿನ ಮಧ್ಯದಲ್ಲಿನ ಸರುಕಲಲ್ಲಿ ಸದಾ ಹರಿಯುವ ನೀರು.

ಸರೂತ = ಸರ್ತ, ನೇರ.

ಸರೆ = ಸೆರೆ, ಬೊಗಸೆ, ಸ್ಯರೆ.

ಸರ್ಗೋಲು = ಸರಗಲ್ಲು.

ಸಲ = ಸರ್ತಿ, ಬಾರಿ, ಸಾರಿ (ಎಷ್ಟು ಸಲ).

ಸಲಕು = ಸೀಳಿನ ಸಣ್ಣ ಭಾಗ, ಬಿದಿರಿನ/ ವಾಟೆಯ ದಬ್ಬೆ (ವಾಟೆಸಲಕು, ಬಿದಿರಿನ ಸಲಕು).

ಸಲಗ = ಗಂಡುಹಂದಿ, ಗಂಡಾನೆ.

ಸಲ್ಕಿ = ಸಲಕು, ಸಣ್ಣಕೋಲು.

ಸಲಿಗಿ = ಸದರ, ಅತಿಸ್ನೇಹ.

ಸಲೀಸು = ಸರಾಗ.

ಸವಕಲು = ಸವೆದ, ತೇದುಹೋದ, ಬಳಸಿ ಬಳಸಿ ಹಳತಾದ, ಕ್ಷೀಣಿಸಿದ.

ಸವಕಳಿ = ಸವೆಯುವಿಕೆ.

ಸವತಿ = ಗಂಡನ ಇನ್ನೊಬ್ಬ ಹೆಂಡತಿ.

ಸವರನ್ನು = ಚಿನ್ನದ ತೂಕ, ಒಂದು ಸವರನ್ನಿಗೆ ಹತ್ತುಗ್ರಾಂ.

ಸವರು = ನೇವರಿಸು ೨. ಲೇಪಿಸು, ಹಚ್ಚು.

ಸವರು = ಗಿಡಗಳನ್ನು ಮೇಲೆ ಮೇಲೆ ಕಡಿದು ಹಾಕು.

ಸವಲತ್ತು = ಅನುಕೂಲ, ಸೌಕರ್ಯ.

ಸರ್ವ = ಸಕಲ, ಎಲ್ಲ.

ಸರ್ವನಾಶ = ಸಂಪೂರ್ಣ ಹಾಳು-ಗೆಡುವುವುದು.

ಸವಾರಿ = ಪ್ರಾಣಿ/ವಾಹನಗಳ ಮೇಲೆ ಪ್ರಯಾಣ ಮಾಡುವದು.

ಸವ್ಣೇಗೋಲು = ಸಬ್ಬಲ್ಲು.

ಸರ್ವೇಸಾಮಾನ್ಯ = ರೂಢಿಯಲ್ಲಿರುವ, ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ, ಎಲ್ಲರಿಗೂ ಸರಿಹೊಂದುವ

ಸವ್ಣಿ = ಸವಕಲು.

ಸವ್ಣ = ಚಿಮುಟ, ಸವಣ.

ಸವಳುಭೂಮಿ = ಚೌಳು, ಉಪ್ಪು ಮಿಶ್ರಿತ ಮಣ್ಣಿರುವ ಭೂಮಿ.

ಸವಾಸ = ಸಹವಾಸ, ಒಡನಾಟ.

ಸವ್ರು = ಸವರು, ಮೈದಡವು ೨. ಗಿಡಗಳನ್ನು ಸವರು ೩. ಲೇಪಿಸು.

ಸವ್ತೆಕಾಯಿ = ಸೌತೆಕಾಯಿ, ಬೇಸಿಗೆಯಲ್ಲಿ ಬೆಳೆಯುವ ಒಂದು ತರಕಾರಿ, ಚೌತೆಕಾಯಿ.

ಸಸರ = ಅಸಡ್ಡೆ, ಹಗುರ, ಅಗ್ಗ.

ಸಸಿ = ಎಳೆಯ ಗಿಡ, ಸಣ್ಣಗಿಡ, ಬತ್ತದ ಸಣ್ಣಗಿಡ.

ಸಳಿ = ಚಳಿ, ನಡುಕ.

ಸಳ್ಳೆ = ಇದರ ತೆಪ್ಪೆ ಕಣ್ಣಿಗೆ ಔಷಧಿಯುಕ್ತ, ಸೌದೆಗಾಗಿ ಉಪಯೋಗ, ಸೊಳ್ಳೆಮರ.

ಸ = ಸಹ ಒಟ್ಟಿಗೆ, ಕೂಡ (ನೀನೂ ಸ ಬಾ).

ಸಹಾಯ = ಸಹಕಾರ, ನೆರವು, ಬೆಂಬಲ.

ಸಳಗ = ವಯಸ್ಸಿಗೆ ಬಂದ ಹೆಣ್ಣು ಕೋಳಿ.

ಸಾಂಕಾಲ = ಸಾಯಂಕಾಲ, ಬೈಗು, ಸಂಜೆ.

ಸಾಂಬಾರ್‌ಮರ್ಗಿ = ಸಾಂಬಾರ ಪದಾರ್ಥ–ಗಳನ್ನು ಹಾಕಿಡುವ ಮುಚ್ಚಳವಿರುವ ಮರದ ಸಾಧನ.

ಸಾಕ್ಮಗ = ದತ್ತು ಮಗನಂತೆ ಸಾಕುವುದು.

ಸಾಕ್ಮಗಳು = ಸಾಕಿದ ಹೆಣ್ಣು ಮಗಳು.

ಸಾಕ್ಷ್ಯ = ರುಜುವಾತು, ಪ್ರಮಾಣ, ಸಾಕ್ಷಿ.

ಸಾಕು = ಬೇಕಾಗಿಲ್ಲ, ಬೇಡ, ನಿಲ್ಲಿಸು.

ಸಾಕುವುದು = ಕಾಪಾಡುವುದು, ಪೋಷಿಸುವುದು.

ಸಾಗು = ವ್ಯವಸಾಯ, ಬೇಸಾಯ.

ಸಾಗುವಾನಿ = ತೇಗದ ಮರ, ಉತ್ತಮ ನಾಟವಾಗಿ ಉಪಯೋಗ.

ಸಾಗುವುದು = ಮುಂದುವರಿಯುವುದು, ಮುಗಿಯುವುದು.

ಸಾಗೊಳಿ = ಸಾಗುವಳಿ, ಬೇಸಾಯ, ಕೃಷಿ.

ಸಾಟಿ = ಸರಿಸಮಾನ, ಹೋಲಿಕೆ.

ಸಾಣ್ಸು = ಸಾಣೆಸು, ಜರಡಿಹಿಡಿ, ವಂದರಿಯಾಡಿಸು.

ಸಾಣೇಕಲ್ಲು = ಆಯುಧಗಳನ್ನು ಹರಿತಗೊಳಿಸಲು ಬಳಸುವ ಕಲ್ಲು.

ಸಾದಾ = ಸರಳ, ನಿಷ್ಕಪಟ.

ಸಾದಾಪಟ್ಟಿ = ಸೊಂಟದ ಆಭರಣ, ಯಾವುದೇ ಚಿತ್ತಾರವಿಲ್ಲದ ಪಟ್ಟಿ.

ಸಾದಾಬಳೆ = ಕೊಚ್ಚಿಂಯಾಗಲೀ, ಕೆತ್ತಿಯಾಗಲೀ ಇಲ್ಲದ ಬಳೆ, ಬಂಗಾರದ/ಗಾಜಿನ ಬಳೆ.

ಸಾದಾರಣ = ಸಾಮಾನ್ಯ.

ಸಾದಾಸೀದ = ಸಾದಾ, ಇದ್ದದ್ದನ್ನು ಇದ್ದಂತೆ ಆಡುವವ, ನೇರ ನಡೆ ನುಡಿಯ.

ಸಾದು = ಯೋಗಿ, ಯತಿ, ಶರಣ.

ಸಾದು = ಮೃದು ಸ್ವಭಾವದವ, ಮುಗ್ಧ.

ಸಾದು = ಅಕ್ಕಿ ಬೆಲ್ಲದ ಪಾಕದಿಂದ ತಯಾರಿಸಿದ ಹಣೆಗಿಡುವ ತಿಲಕ.

ಸಾದೃಸ್ಯ = ಸಾದೃಶ್ಯ, ಹೋಲಿಕೆ, ಸಮಾನ.

ಸಾನ = ಸ್ನಾನ, ಜಳಕ.
ಸಾಬಾನು = ಸಾಬೂನು, ಸಬಕಾರ.
ಸಾಬೀತು = ರುಜುವಾತು, ಸ್ಥಿರೀಕರಿಸುವುದು.
ಸಾಬ್ರು = ಸಾಬರು,. ಮುಸಲ್ಮಾನರು.
ಸಾಮ್ಯ = ಅನುರೂಪ, ತಕ್ಕ (ವರಸಾಮ್ಯ).
ಸಾಮಾನು = ಪದಾರ್ಥಗಳು, ದಿನಸಿ ವಸ್ತುಗಳು.
ಸಾಮಾನ್ಯ = ಸಾಧಾರಣ.
ಸಾಯ = ಸಹಾಯ.
ಸಾಯು = ಸತ್ತುಹೋಗು, ಪ್ರಾಣಬಿಡು.
ಸಾಯ್ಸು = ಸಾಯಿಸು, ಕೊಲ್ಲು.
ಸಾರ = ಸತ್ವ, ತಿರುಳು, ರಸ.
ಸಾರ = ಅಡಿಕೆ ಮರದ ಸೇತುವೆ, ಸಂಕ.
ಸಾರಾ ಸಗಟು = ಒಟ್ಟು ರಾಶಿ, ಇಡಿಯಾಗಿ.
ಸಾರು = ಖಾರ/ಮಸಾಲೆ ಹಾಕಿ ಮಾಡಿದ ಪದಾರ್ಥ.
ಸಾರು = ಡಂಗುರ ಸಾರುವುದು, ಎಲ್ಲರಿಗೂ ತಿಳಿಸಿ ಹೇಳುವುದು.
ಸಾಲ = ಕಡ, ಕೈಗಡ.
ಸಾಲಗ = ಜೇಡ.
ಸಾಲಾವಳಿ = ವಧೂವರರ ಜಾತಕ ಕೂಡುವಿಕೆ.
ಸಾಲಾವಳಿಕುಕ್ಕೆ = ವರನ ಮನೆಯಿಂದ ಒಯ್ಯುವ ಧಾರೆಗೆ ಬೇಕಾದ ಸಲಕರಣೆಗಳಿರುವ ಬುಟ್ಟಿ.
ಸಾಲಾವಳಿ ಶಾಸ್ತ್ರ = ನಿಶ್ಚಿತಾರ್ಥ, ಹೂಮುಡಿಸುವ ಶಾಸ್ತ್ರ.
ಸಾಲ್ಗಾರ = ಸಾಲ ಮಾಡಿದವನು, ಸಾಲಗಾರ.
ಸಾಲು = ೧.ವರ್ಷದ ಅವಧಿ, ಇಸವಿ ೨.ಪಂಕ್ತಿ, ಶ್ರೇಣಿ.
ಸಾಲುಧೂಪ = ದೊಡ್ಡಮರ, ಧೂಪದ ಮರದಂತೆಯೇ ಕಾಯಿ ಬಿಡುತ್ತದೆ. ಆದರೆ ಒಳಗೆ ರುಚಿಕರವಾದ ಬೀಜ ವಿರುವುದಿಲ್ಲ.
ಸಾಲುವುದು = ಸಾಕಾಗುವುದು.
ಸಾಲೆ = ಶಾಲೆ, ಇಸ್ಕೋಲು.
ಸಾಲೊಳ್ಳಿ ಕುಕ್ಕೆ = ಮದುವೆ ಧಾರೆಗೆ ಬೇಕಾದ ಸಾಮಾನು ತುಂಬಿದ ಕುಕ್ಕೆ, ಸಾಲಾವಳಿ ಕುಕ್ಕೆ.
ಸಾಲೊಳ್ಳಿ = ಸಾಲಾವಳಿ.
ಸಾವ್ರ = ಸಾವಿರ, ಹತ್ತುನೂರು.
ಸಾವ್ರಗಟ್ಲೆ = ಸಾವಿರಾರು.
ಸಾವ್ರಕಾಲಿನ ಚೇಳು = ಒನಕೆ ಮಂಡಿ ಹುಳ, ಶತಪದಿ, ಜರಿ.
ಸಾವ್ಕಾರ = ಸಾಹುಕಾರ, ಧನಿಕ, ಶ್ರೀಮಂತ.
ಸಾವ್ಕಾಸ = ಸಾವಕಾಶ, ವಿಳಂಬ, ನಿಧಾನ, ತಡ.
ಸಾವಾಸ = ಸಹವಾಸ, ಜೊತೆಸೇರು, ಗೆಳೆತನ ಮಾಡುವುದು.
ಸಾವು = ಮರಣ, ನಿಧನ.
ಸಾಸಿವೆ = ಒಂದು ಸಾಂಬಾರ ಪದಾರ್ಥ.
ಸಾಸ್ವೆ = ಸಾಸುವೆ, ಮಾವಿನ ಹಣ್ಣಿನ ಸೀಕರಣೆ, ಒಂದು ವ್ಯಂಜನ.
ಸಿಂಗಾರ = ಶೃಂಗಾರ, ಅಲಂಕಾರ.
ಸಿಂಗುಡುಕ = ಸಿಂಗಳೀಕ, ಮಂಗ.
ಸಿಂಡ = ಚಪ್ಪಟೆ /ಸಣ್ಣ ಮೂಗಿನವನು.
ಸಿಂಡಿ = ಚಪ್ಪಟೆ /ಸಣ್ಣ ಮೂಗಿನವಳು.
ಸಿಂಡು = ಸಣ್ಣ /ಗಿಡ್ಡ/ ಮೊಂಡುಮೂಗು.
ಸಿಂಡ್ರುಸು = ಮುಖಗಂಟಿಕ್ಕು.

ಸಿಂಧು = ಕಾರ್ಯರೂಪಕ್ಕೆ ಬರುವುದು, ಜಾರಿಯಾಗುವುದು.

ಸಿಂಪಿಗ = ಚಿಪ್ಪಿಗ, ದರ್ಜಿ, ಬಟ್ಟೆ ಹೊಲೆಯುವವನು.

ಸಿಂಬ್ಳ = ಗೊಣ್ಣೆ, ಮೂಗಿನಿಂದ ಸುರಿಯುವ ಅಂಟು ದ್ರವ, ಸಿಂಬಳ.

ಸಿಂಬ್ಳಸುರ್ಕ = ಸದಾ ನೆಗಡಿಯಿಂದ ಮೂಗಿನಲ್ಲಿ ಸೊರಸೊರ ಶಬ್ಧ ಮಾಡುವವನು.

ಸಿಂಬ್ಳಸುರ್ಕಿ = ಸದಾ ನೆಗಡಿಯಿಂದ ಮೂಗಿನಲ್ಲಿ ಸೊರಸೊರ ಶಬ್ಧ ಮಾಡುವವಳು.

ಸಿಂಬೆ = ಇರ್ಕೆ, ಪಾತ್ರೆಗಳು ಚಕ್ಕಾಗದಂತೆ ಅಡಿಗೆ ಇರಿಸುವ ಸುತ್ತಿದ ಬತ್ತದ ಹುಲ್ಲು/ಬಿದಿರು ಅಥವಾ ಒಣಗಿದ ಬಳ್ಳಿಯ ಇರಿಕೆ

ಸಿಂಬೆ = ಭಾರ ಹೊರುವಾಗ ತಲೆಯ ಮೇಲೆ ಇಟ್ಟುಕೊಳ್ಳುವ ಬಟ್ಟೆಯ ಚಂಡು.

ಸಿಕ್ಕ = ಇರುವೆ ಮುತ್ತದಂತೆ/ಬೆಕ್ಕುಗಳು ಬಾಯಿಹಾಕದಂತೆ/ಮಕ್ಕಳಿಗೆ ಎಟುಕದಂತೆ ಪದಾರ್ಥಗಳ ಪಾತ್ರೆ ಇಡಲು ನೇತು ಹಾಕಿದ ಹಗ್ಗದ ಜೋಳಿಗೆ, ನೆಲು.

ಸಿಕ್ಕಣಿಗೆ = ಕೂದಲಿನ ಗಂಟು ಬಿಡಿಸುವ ಬಾಚಣಿಗೆ.

ಸಿಕ್ಕನುಂಡೆ = ಕರಿದ ಒಂದು ಸಿಹಿಯಾದ ಉಂಡೆ.

ಸಿಕ್ಕಾಕು = ಸಿಕ್ಸು, ಸಿಕ್ಕಿಸು, ತೂಗುಹಾಕು.

ಸಿಕ್ಕಾಪಟ್ಟೆ = ಅಂದಾಜಿಗೆ ನಿಲುಕದ, ಅತಿಯಾಗಿ, ಮನಸ್ಸಿಗೆ ಬಂದಂತೆ ಕಂಡಾಪಟ್ಟೆ.

ಸಿಕ್ಕು = ಸಿಗು, ದೊರಕು, ಭೇಟಿಯಾಗು.

ಸಿಕ್ಕು = ಗಂಟಾದ ಕೂದಲು.

ಸಿಕ್ಸು = ಸಿಕ್ಕಿಸು, ಜೋಡಿಸು, ನೇತುಹಾಕು.

ಸಿಗಳು = ಚೂರು, ಸೀಳಿದ ಚೂರು, ಸೀಳು, ಹೋಳು.

ಸಿಗತೆ = ಬಾಳೆ ಎಲೆಯ ಚೂರು/ಸೀಳು, ತುಂಡು ಮಾಡಿದ, ಒಂದು ಹೋಳು.

ಸಿಗಿ = ಸೀಳು, ಕತ್ತರಿಸು.

ಸಿಗು = ಸಿಕ್ಕು, ಭೇಟಿಯಾಗು.

ಸಿಗುರು = ಚಕ್ಕೆ.

ಸಿಗುರು = ಉಗುರಿನ ಪಕ್ಕದಲ್ಲಿ ಚರ್ಮ ಎದ್ದಿರುವುದು, ಸಿಗಿದು ಹೋಗಿರುವ.

ಸಿಗ್ಳು = ಸಿಗಳು.

ಸಿಟ್ಟು = ಕೋಪ, ಕ್ರೋಧ, ಕನಲಿಕೆ.

ಸಿಡ್ತ = ಬೇನೆ, ನೋವು.

ಸಿಡಿ = ಸಿಡಿತ, ನೋವು, ಸೆಳೆತ.

ಸಿಡಿ = ಬಿರಿ, ಹೊಟ್ಟಿಹಾರು, ಸಿಡಿದುಹಾರು (ಮಳೆಹನಿ ಸಿಡಿ, ಬೆಂಕಿ ಸಿಡಿಯುವುದು).

ಸಿಡಿ = ಬಿರುಕು, ಒಡೆ, ಹಾರು, ಚಿಮ್ಮು.

ಸಿಡಿತ = ನೋವು, ಬೇನೆ.

ಸಿಡಿಬಿಡುವುದು = ಬಿರುಕು ಬಿಡುವುದು, ಸೀಳಿರುವುದು.

ಸಿಡಿಮಿಡಿ = ಕನಲು, ಕೋಪ, ಅಸಂತೋಷ ವ್ಯಕ್ತಪಡಿಸು.

ಸಿಡಿಸಿಡಿ = ಕೋಪದಿಂದ ಮಾತಾಡುವುದು.

ಸಿಡಿತದೆ = ಸಿಡಿಯುತ್ತಿದೆ, ನೋಯುತ್ತಿದೆ.

ಸಿಡುಕ = ಮುಂಗೋಪಿ, ಕೋಪಿಷ್ಟ.
ಸಿಡುಕು = ಮುಂಗೋಪ, ಸಿಟ್ಟು, ಕೋಪ.
ಸಿಡುಗುಟ್ಟು = ಸಿಡುಕಿನಿಂದ ಮಾತಾಡು, ಕೋಪಗೊಳ್ಳು.
ಸಿಡುಬು = ಮೈಲಿ, ದೊಡ್ಡಮ್ಮ.
ಸಿದ್ದೆ = ಒಂದು ಅಳತೆ, ಅಕ್ಕಿ ಅಳೆಯುವ ಮರದ/ಲೋಹದ ಅಚ್ಚೇರು.
ಸಿದ್ದೆಗುಮ್ಮ = ಕೆಂಡಕ್ಕೆ ಮೆಣಸಿನಕಾಯಿ ಹಾಕಿ ಹೊಗೆಯಿಂದ ಬರುವ ಆ ಘಾಟನ್ನು ಮೂಗಿಗೆ ಹಿಡಿಯುವ ಶಿಕ್ಷೆ.
ಸಿನುಗು = ಗೌಲು ವಾಸನೆ, ಜಿಡ್ಡು ವಾಸನೆ.
ಸಿಪ್ಪಟ್ಟೆ ಸಿಯ್ಯ = ತುಂಬಾ ಸಿಹಿ, ಅತಿಯಾದ ಸಿಹಿ
ಸಿಪಾಯಿ = ಮನೆಯ ಮಾಡಿನ ಎರಡು ಪಕಾಸಿಗಳು ಜಾರದಂತೆ ಹಾಕುವ ಮರದ ಪಟ್ಟಿ
ಸಿಪ್ಪೆ = ತೊಗಟೆ, ಹಣ್ಣಿನ ಮೇಲಿನ ಪದರ, ತರಕಾರಿಗಳ ಮೇಲಿನ ಚರ್ಮ.
ಸಿಪ್ಪೆ ಅಳಬಿ = ಅಡಿಕೆ ಸಿಪ್ಪೆಯ ರಾಶಿಯಲ್ಲಿ ಮಳೆಗಾಲದಲ್ಲಿ ಏಳುವ ಅಣಬೆ.
ಸಿಪ್ಪೆಗೋಟು = ಅಡಿಕೆಯನ್ನು ಸುಲಿಯದೆ ಸಿಪ್ಪೆ ಸಹಿತ ಒಣಗಿಸಿದ್ದು, ಚಾಲಿ.
ಸಿಬ್ಲ = ಅನ್ನದ ಗಂಜಿಯನ್ನು ಬಸಿಯಲು ಉಪಯೋಗಿಸುವ ಬಿದಿರಿನ / ಒಣಗಿದ ಬಳ್ಳಿಯ ತಡಿಕೆ.
ಸಿಬುರು = ಬಿದಿರಿನ ತೆಳುವಾದ ದೆಬ್ಬೆ/ ಸೀಳು.
ಸಿಯ್ಯ = ಸಿಹಿ, ಷಡ್ರಸಗಳಲ್ಲಿ ಒಂದು.
ಸಿರಿಬಾಯಿ = ಸೀಳುಬಾಯಿ, ಹರಿದ ತುಟಿ.
ಸಿಲಾವರ = ಅಲ್ಯೂಮಿನಿಯಂ ಎಂಬ ಲೋಹ.
ಸಿಲ್ಕು = ಬಾಕಿ, ಉಳಿಕೆ, ಉಳಿದಿದ್ದು.
ಸಿಳ್ಳು = ಸೀಟಿ, ಶಿಳ್ಳೆ, ಶಿಲ್ಪಿ.
ಸಿಸ್ತು = ಶಿಸ್ತು, ಗಾಂಭೀರ್ಯ.
ಸಿಸ್ತು ಕಟ್ಟುವುದು = ಕೋವಿಯ ಬಿಲ್ಲಿಗೆ ದಾರ ಕಟ್ಟಿ ಪ್ರಾಣಿಗಳು ಬಂದಾಗ ತಾನಾಗಿ ಈಡು ಹಾರುವಂತೆ ಮಾಡುವುದು.
ಸಿ = ಸಿಹಿ, ಸಿಯ್ಯ.
ಸೀ = ಸೀದುಹೋಗು, ಸುಟ್ಟುಹೋಗು.
ಸೀಕಂಚಿ = ಚಕ್ಕೋತ.
ಸೀಕಲು = ಸೀದು ಹೋದ, ಕರುಕಾದ, ಸುಟ್ಟ.
ಸೀಗಡಿ = ಮುಳ್ಳು ಇರದ ಒಂದು ಜಾತಿಯ ಸಣ್ಣ ಮೀನು.
ಸೀಗೆ = ಒಂದು ಜಾತಿಯ ಮುಳ್ಳಿನ ಪೊದೆಯಲ್ಲಿ ಬಿಡುವ ಕಾಯಿ ಇದನ್ನು ಒಣಗಿಸಿ, ಕುಟ್ಟಿ ಪುಡಿಮಾಡಿ ತಲೆ ಮತ್ತು ಮೈಗೆ ಸ್ನಾನಕ್ಕೆ ಉಪಯೋಗಿಸುತ್ತಾರೆ.
ಸೀಗೆ ಉಡಿ = ಸೀಗೆಯ ಪೊದೆ.
ಸೀಡುವುದು = ಅಡಿಕೆ ಮರಕ್ಕೆ ಪಿಚಕಾರಿಯಿಂದ ಔಷದಿಯನ್ನು ಸಿಂಪಡಿಸುವಾಗ ಮೇಲೆ ಹಾರಲೆಂದು ಗಾಳಿ ಹೊಡೆಯುವುದು, ಸೈಕಲ್ ಚಕ್ರಕ್ಕೆ ಗಾಳಿ ಹಾಕು.
ಸೀಡ್ಸು = ಬಿಚ್ಚು, ಬಿಡಿಸು (ಕೊಡೆ ಸೀಡ್ಸು) ನೇತುಹಾಕು.
ಸೀತ = ನೆಗಡಿ, ಮೂಗಿನಿಂದ ಸುರಿಯುವ ನೀರು.
ಸೀತಾಲ ಸಿಡುಬು = ಸಣ್ಣ ಸಣ್ಣ ಗುಳ್ಳೆ

ಗಳೇಳುವ ಸಾಂಕ್ರಾಮಿಕ ರೋಗ, ಅಮ್ಮ.

ಸೀದ = ತಳಹಿಡಿದ, ಸುಟ್ಟ.

ಸೀದಾ = ನೇರವಾಗಿ, ನೆಟ್ಟಗೆ.

ಸೀನು = ನೆಗಡಿ /ಘಾಟು ಮುಂತಾದವುಗಳಿಂದ ಮೂಗಿನ ಹೊಳ್ಳೆಯಲ್ಲಿ ಕಿರಿಕಿರಿಯುಂಟಾಗಿ ಬರುವ ಸಶಬ್ಧವಾದ ಗಾಳಿ.

ಸೀಟಿ = ಶಿಳ್ಳೆ, ಸಿಳ್ಳೆ, ಸಿಳ್ಳು, ಶಿಲ್ಪಿ.

ಸೀಮಂತ = ಗರ್ಭಿಣಿಯಾದ ಹೆಣ್ಣಿಗೆ ಮಾಡುವ ಬಯಕೆಯೂಟ.

ಸೀಮೆ = ಕ್ಷೇತ್ರ, ಪ್ರದೇಶ, ಸೀಮೆಗಳನ್ನು ಕೂಡಿಸಿ ಹೋಬಳಿ, ಹೋಬಳಿಗಳನ್ನು ಕೂಡಿಸಿ ತಾಲ್ಲೂಕು.

ಸೀಮೆಧಾರಣೆ = ಆಯಾ ಪ್ರದೇಶದಲ್ಲಿ ಚಾಲ್ತಿಯಿರುವ ಪದಾರ್ಥಗಳ ಧಾರಣೆ/ಬೆಲೆ.

ಸೀಯಪ್ಪ = ಬಾಳೆಹಣ್ಣು ಮತ್ತು ಅಕ್ಕಿ ಹಿಟ್ಟಿನ ತಿಂಡಿ.

ಸೀಯ್ಯ = ಸಿಯ್ಯ, ಸೀ, ಸಿಹಿ.

ಸೀಯ್ಯದಡಿಗೆ = ಸೀ ಅಡ್ಗಿ, ಸಸ್ಯಾಹಾರ, ಜೈನಡಿಗೆ.

ಸೀಯು = ತಳಹಿಡಿ, ಸುಟ್ಟುಹೋಗು.

ಸೀಯ್ಯಾಳ = ಎಳನೀರು, ಎಳೆಯ ತೆಂಗಿನ ಕಾಯಿಯ ನೀರು.

ಸೀರುಡಿಕೆ = ಮರುಮದುವೆ, ಕೂಡಾವಳಿ.

ಸೀರೆ = ಹೆಂಗಸರ ಬಟ್ಟೆ.

ಸೀಲ = ೧. ಸದಾಚಾರ ೨. ಬೇಕೆಂದೇ ಬೇರೆಯವರ ಗಮನ ಸೆಳೆಯಲು ಮಾಡುವ ಕುಚೇಷ್ಟೆ, ಶೀಲ

ಸೀಲ = ವೇಶ, ಅಶಿಸ್ತು.

ಸೀಸ = ಒಂದು ರೀತಿಯ ಲೋಹ.

ಸೀಸದ ಕಡ್ಡಿ = ಮರದ ಸಣ್ಣ ಕಡ್ಡಿಗೆ ಸೀಸವನ್ನು ತುಂಬಿಸಿ ಬರೆಯಲು ಸಾಧ್ಯವಾಗುವಂತೆ ಮಾಡಿದ ಕಡ್ಡಿ.

ಸೀಸೆ = ಗಾಜಿನ ಬಾಟಲಿ.

ಸೀಳು = ಸಿಗಿ, ಬಗಿ, ಹೋಳುಮಾಡು.

ಸೀಳುದಾರಿ = ಕವಲುದಾರಿ, ಅಡ್ಡರಸ್ತೆ.

ಸುಂಕ = ತೆರಿಗೆ, ಜಕಾತಿ.

ಸುಂಕದ ಕಟ್ಟೆ = ಸುಂಕವನ್ನು ವಸೂಲು ಮಾಡುವ ನಿರ್ದಿಷ್ಟ ಸ್ಥಳ.

ಸುಂಟರಗಾಳಿ = ಸುತ್ತಿ ಸುತ್ತಿ ಬರುವ ಬಲವಾದ ಗಾಳಿ.

ಸುಂಟಿ = ಶುಂಟಿ, ಒಂದು ಔಷಧೀಯ ಬೇರು.

ಸುಂಡ್ರು = ಸುಟ್ಟ ವಾಸನೆ.

ಸುಂದರ = ಚೆಲುವು, ಅಂದ, ಚೆಲುವ.

ಸುಂದ್ರಿ = ಚೆಲುವೆ, ಅಂದಗಾತಿ.

ಸುಕನಾತಿ = ಸೂಳೆಗಾರಿಕೆ ಮಾಡುವವಳು, ಹಾದರಗಿತ್ತಿ.

ಸುಕಾಸುಮ್ನೆ = ವಿನಾಕಾರಣ, ಕಾರಣವಿಲ್ಲದೆ, ಸುಮ್ಮಸುಮ್ಮನೆ (ಸುಕಾಸುಮ್ನೆ ಒಬ್ಬರ ಮೇಲೆ ತಪ್ಪು ಹೊರಿಸಬಾರದು).

ಸುಕಾಲೇರು = ಲಂಬಾಣಿಗರು.

ಸುಕ್ಕುಂಡೆ = ಸಿಕ್ಕನುಂಡೆ, ಒಂದು ಸಿಹಿತಿಂಡಿ.

ಸುಕ್ಕು = ಮುದುಡಿದ, ಮಡಿಕೆಯಾದ, ಮುದುರಿದ, ಚರ್ಮದ ಮೇಲಿನ ನೆರಿಗೆ.

ಸುಕ್ಕುಗಟ್ಟು = ಮುಖದಲ್ಲಿ ನೆರಿಗೆ ಬಂದು

ವಯಸ್ಸಾಗು, ಮುದುರು, ಮುರುಟು.
ಸುಗಂಧಿಬೇರು = ಹಾಲುಬಳ್ಳಿ, ಪರಿಮಳದ ಬೇರು, ಔಷದಿಯುಕ್ತ.
ಸುಗಮ = ಸಲೀಸು, ಸುಲಭಸಾಧ್ಯ.
ಸುಗ್ಗಿ = ಧಾನ್ಯಗಳ ಕೊಯ್ಲಿನ ಕಾಲ, ವಸಂತಕಾಲ.
ಸುಗ್ಗಿ = ಸಮೃದ್ಧಿ, ಹೆಚ್ಚಳ.
ಸುಗ್ಗಿಹಬ್ಬ = ಸಮೃದ್ಧವಾದ ಬೆಳೆಯನಂತರ ವಸಂತಕಾಲದಲ್ಲಿ ಮಾಡುವ ಹಬ್ಬ/ಹರಕೆ.
ಸುಟಿ = ಫಾಟು, ಖಾರ, ಚುರುಕು.
ಸುಡು = ಬೇಯಿಸು, ಬೆಂಕಿಗೆ ಹಾಕು.
ಸುಡುಗಾಡು = ಸ್ಮಶಾನ, ಮಸಣ.
ಸುಡುಬಿಸ್ಲು = ವಿಪರೀತ ಬಿಸಿಲು, ಮಟಮಟ ಮಧ್ಯಾಹ್ನದ ಬಿಸಿಲು.
ಸುಣ್ಣ = ಚೂರ್ಣ, ತಾಂಬೂಲ ಮೆಲ್ಲುವಾಗ ಎಲೆಗೆ ಹಚ್ಚಿಕೊಳ್ಳುವ ಕ್ಯಾಲ್ಸಿಯಂ ಇರುವ ಒಂದು ರೀತಿಯ ಬಿಳಿಯ ಮಣ್ಣು, ಶುಭ್ರವಾಗಿ ಕಾಣಲು ನಯವಾದ ಗೋಡೆಗೆ ಬಳಿಯುವ ಜೇಡಿ.
ಸುಣ್ಣದ್‌ಕಾಯಿ = ವೀಳ್ಯದೆಲೆಗೆ ಹಚ್ಚಿಕೊಳ್ಳಲು ಇಟ್ಟುಕೊಳ್ಳುವ ಸಣ್ಣ ಸುಣ್ಣದ ಡಬ್ಬಿ.
ಸುತ್ಗಿ = ಸುತ್ತಿಗೆ, ಚಾಣಕ್ಕೆ ಹೊಡೆಯುವ ಸಾಧನ, ಚಮ್ಮಟಿಗೆ.
ಸುತ್ತ = ಸುತ್ತಲೂ, ಎಲ್ಲ ಕಡೆಯಲ್ಲೂ.
ಸುತ್ತಮುತ್ತ = ಸುತ್ತಲೂ, ಅಕ್ಕಪಕ್ಕ.
ಸುತ್ನಾಕ್‌ದಿಕ್ಕಿನಾಗ = ಹತ್ತಿರದಲ್ಲೆಲ್ಲು, ನಾಲ್ಕು ದಿಕ್ಕುಗಳಲ್ಲೂ.
ಸುತ್ನಾಕುದಿಕ್ಕು = ಸುತ್ತಮುತ್ತ ಎಲ್ಲೆಲ್ಲು, ನಾಲ್ಕೂದಿಕ್ಕು, ಎಲ್ಲಾಕಡೆ.
ಸುತ್ತಾಟ = ಅಲೆದಾಟ, ತಿರುಗಾಟ.
ಸುತ್ತು = ೧. ಅಲೆ, ತಿರುಗು ೨. ಪ್ರದಕ್ಷಿಣೆ, ೩. ಸುರುಳಿ.
ಸುತ್ತುವರಿ = ಸುತ್ತುಗಟ್ಟು, ಬಳಸು, ಆವರಿಸು.
ಸುತ್ತುಹಾಕು = ಪ್ರದಕ್ಷಿಣೆ ಮಾಡು.
ಸುದಾರಸ್ಗ = ಸುಧಾರಿಸಿಕೊ, ವಿಶ್ರಮಿಸು, ಆರಾಮ ತಗೊ.
ಸುದಾರ್ಸು = ಸಂಭಾಳ್ಸು, ಸರಿಮಾಡು, ತಿದ್ದು.
ಸುಪರ್ದಿ = ವಶ, ಅಧೀನ, ಹತೋಟಿ.
ಸುಪ್ಪತ್ಗಿ = ಒಳ್ಳೆಯ ಹಾಸಿಗೆ, ಗಾದಿ.
ಸುಪ್ಪಾಣಿ = ಸೂಕ್ಷ್ಮದೇಹ ಪ್ರಕೃತಿಯವಳು (ಸುಪ್ಪಾಣಿ ಹೆಣ್ಣು – ಸುಂದರ ಬಾಳೆಹಣ್ಣು).
ಸುಮಾರು = ಹೆಚ್ಚುಕಡಿಮೆ, ಕಳಪೆ, ಸಾಧಾರಣವಾದ.
ಸುಮ್ನೆ = ಸುಕಾಸುಮ್ನೆ.
ಸುಯ್ಯು = ನಿಟ್ಟುಸಿರು ಬಿಡು.
ಸುರಗಿಬಳೆ = ಕೈಗೆ ಹಾಕುತ್ತಿದ್ದ ಆಭರಣ.
ಸುರಹೊನ್ನೆ = ಹೊನ್ನೆ ಮರದಂತೆಯೇ, ಎಲೆಗಳ ವಿನ್ಯಾಸದಲ್ಲಿ ವ್ಯತ್ಯಾಸ.
ಸುರಗಿಮರ = ಎತ್ತರಕ್ಕೆ ನೇರವಾಗಿ ಬೆಳೆಯುವ ಮರ, ಇದರ ಕಾಂಡದ ನಾಟ ಬಲುಗಟ್ಟಿ, ಪರಿಮಳಯುಕ್ತ.
ಸುರಗಿಹೂ = ಸುರಹೊನ್ನೆ, ಒಂದು ಬಗೆಯುಹೂ, ಸುರ್ಗಿ ಹೂ, ಪರಿಮಳವಾದ ಈ ಹೂವು ಬೇಗ ಬಾಡುವುದಿಲ್ಲ ಬಾಡಿದ ಮೇಲೂ

ಪರಿಮಳ ಮಾತ್ರ ಹಾಗೆ ಇರುತ್ತದೆ ನೋಡಲು ರಂಜದ ಹೂವಿನಂತಿರುತ್ತದೆ.

ಸುರಿ = ಬಾಯಲ್ಲಿ ನೀರೂರು, ಮೇಲಿಂದ ಕೆಳಕ್ಕೆ ಹಾಕು, ಚೆಲ್ಲು, ತೂರು.

ಸುರು = ಶುರು, ಪ್ರಾರಂಭ, ಆದಿ.

ಸುರುಗು = ಚೆಲ್ಲು, ಧಾರಾಳವಾಗಿ ಕೆಳಗೆ ಹಾಕು.

ಸುರುಟು = ಮುದುಡು, ಸುರುಳಿಯಾಗು.

ಸುರುಳಿಕುಡಿ = ಬೇಲಿಸುರಗಿಂಯ ಸುರುಳಿಯಾಗಿರುವ ಚಿಗುರೆಲೆ.

ಸುಲ್ತ = ಅಡಕೆಯನ್ನು ಸಂಪೂರ್ಣ ಸಂಸ್ಕರಿಸುವುದು.

ಸುಲ್ತಕ್ಕೆ ಕೊಡುವುದು = ಅಡಕೆ ಸಂಸ್ಕರಿಸಲು ಬೇರೆಯವರಿಗೆ ವಹಿಸಿ ಕೊಡುವುದು.

ಸುಲಿ =ಸಿಪ್ಪೆತೆಗೆ, ಎಡೆಯುವುದು.

ಸುಲಿಗಿ = ಸುಲಿಗೆ, ಕೊಳ್ಳೆ, ಲೂಟಿ, ಸೂರೆ.

ಸುಲಿಬ್ಯಾಳೆ = ಸುಲಿದ ಅಡಿಕೆಯನ್ನು ಹೋಳುಮಾಡಿರುವುದು, ಸುಲಿದು ಕತ್ತರಿಸಿದ ಅಡಿಕೆ, ಸುಲಿದ ಅಡಿಕೆ.

ಸುಸಿತ್ರ = ಸುಸೂತ್ರ, ಸರಾಗ, ಸಲೀಸು, ಎಲ್ಲಾ ಸರಿಯಾಗಿರುವುದು.

ಸುಸ್ತು = ಬಳಲಿಕೆ, ರೋಗದಿಂದ/ ಅತಿಯಾದ ಕೆಲಸದಿಂದಾದ ದಣಿವು.

ಸುಳಿ = ಆರತಿ ಬೆಳಗು, ೨. ಸುಳಿದಾಡು, ಸುತ್ತಾಡು.

ಸುಳಿ = ತಲೆಯಲ್ಲಿರುವ ಅಥವಾ ಹಣೆಯಲ್ಲಿರುವ ಕೂದಲಿನ ತಿರುವು.

ಸುಳಿ = ನೀರಿನ ಆಳದ ವರೆಗಿರುವ ತಿರುವು.

ಸುಳಿದು ಚೆಲ್ಲು = ಆರತಿಯಂತೆ ಕೆಂಪು ನೀರನ್ನು ಸುಳಿದು ದೃಷ್ಟಿ ತಾಗಬಾರದೆಂದು ಮೂರು ದಾರಿ ಕೂಡುವಲ್ಲಿ ಚೆಲ್ಲುವುದು.

ಸುಳು = ಸುಳಿವು, ಕುರುಹು, ಗುರುತು.

ಸುಳ್ಳು = ಸಟೆ, ನಿಜವಲ್ಲದ್ದು.

ಸುಳ್ಳು ಬುರ್ಕ = ಸುಳ್ಳು ಹೇಳುವವನು (ಪು).

ಸುಳ್ಳು ಬುರ್ಕಿ = ಸುಳ್ಳು ಹೇಳುವವಳು (ಸ್ತ್ರೀ).

ಸೂಜಿ = ಬಟ್ಟೆ ಹೊಲಿಯಲು ಬಳಸುವ ಸಣ್ಣ ಮೊನಚಾದ ಪಿನ್ನು.

ಸೂಜಿಮದ್ದು = ಚುಚ್ಚುಮದ್ದು.

ಸೂತ್ಕ = ಮಗು ಹುಟ್ಟಿದಾಗ, ಮನುಷ್ಯರು (ಕುಲಬಾಂಧವರು) ಸತ್ತಾಗ ಉಂಟಾಗುವ ಮೈಲಿಗೆ, ಸೂತಕ.

ಸೂತ್ಕ ತೆಗೆಯುವುದು = ಮಗುಹುಟ್ಟಿ/ ಯಾರಾದ್ರೂ ಸತ್ತು ಹನ್ನೊಂದು ದಿನ ಕಳೆದಾಗ ಮನೆಯನ್ನೆಲ್ಲಾ ಶುಚಿಗೊಳಿಸಿ, ಬಟ್ಟೆಗಳನ್ನೆಲ್ಲಾ ಒಗೆದು, ಎಲ್ಲರೂ ಸ್ನಾನ ಮಾಡಿ ಮನೆಗೆಲ್ಲಾ ಗೋಮಂಯ ಹಾಕುವುದು.

ಸೂಟಿ = ಚುರುಕು, ಬುದ್ಧಿವಂತ.

ಸೂಡು = ಮಳೆ/ಬಿಸಿಲಿನಲ್ಲಿ ರಕ್ಷಣೆ ಪಡೆಯಲು ಕೊಡೆಬಿಡಿಸು, ಕಂಬಳಿ ಹಾಕಿಕೊಳ್ಳುವುದು (ಕೊಡೆಸೂಡು).

ಸೂಡು = ಶವ ಸಂಸ್ಕಾರ ಮಾಡುವ

ಸ್ಥಳ, ಸುಡುಗಾಡು.

ಸೂರು = ಮನೆಯ ಇಳಿಜಾರಾದ ಮಾಡು.

ಸೂರೆ = ಸುಲಿಗೆ, ಲೂಟಿ, ಕೊಳ್ಳೆ, ಸುಲಿಗಿ.

ಸೂಲಗಿತ್ತಿ = ಪರಿಣತೆಯಿಂದ ಹೆರಿಗೆ ಮಾಡಿಸುವ ವೈದ್ಯರ ಸಹಾಯಕಿ.

ಸೂಲೆ = ಶೂಲೆ, ನೋವು, ಸಿಡಿತ, ವೇದನೆ.

ಸೂಲ್‌ಮರ್ಗು = ೧.ಸೂಲೆ ಮರುಗು, ನೋವಿನ ನಿಟ್ಟಿಸಿರು ಬಿಡು, ೨.ಬೇರೆಯವರ ಏಳ್ಗೆಯನ್ನು ನೋಡಿ ಸಹಿಸಿಕೊಳ್ಳಲಾಗದೆ ನಿಡುಸುಯ್ಯುವುದು, ಹೊಟ್ಟೆ ಕಿಚ್ಚುಪಡು (ಅಲಂ).

ಸೂಸು = ತುಂಬಿ ತುಳುಕು, ಹೊರಚೆಲ್ಲು.

ಸೂಸ್ಲು = ೧.ಕೋಳಿ ಮೊಟ್ಟೆಯನ್ನು ಈರುಳ್ಳಿ ಹಸಿಮೆಣಸಿನ ಕಾಯಿ ಹಾಕಿ ಹುರಿದಿದ್ದು ೨.ಅರಿಸನ ದೆಲೆಯ ಕಡುಬು.

ಸೂಳೆ = ವೇಶ್ಯೆ, ವ್ಯೈವಾರಿ ಜೀವಿಸುವವಳು.

ಸೂಳೆಗಾರ್ಕಿ = ವೇಶ್ಯಾವೃತ್ತಿ.

ಸೂಳೆಮಗ = ವೇಶ್ಯೆಯ ಮಗ, ಒಂದು ಬೈಗುಳ.

ಸೆಕೆ = ಧಗೆ, ತಾಪ.

ಸೆಖೆಗುಳ್ಳೆ = ಬೆವರುಸಾಲೆ.

ಸೆಗಣಿ = ಸಗಣಿ, ಜಾನುವಾರುಗಳ ಮಲ, ಹಿಕ್ಕೆ, ಲದ್ದಿ.

ಸೆಗ್ಗು = ಸಂದಿ, ಮೂಲೆ, ಕಂಡಿ.

ಸೆಟದು ನಿಲ್ಲು = ನೆಟ್ಟಗೆ ನಿಲ್ಲು, ಜಗಳವಾಡಲು ಮುಂದಾಗು.

ಸೆಟ್ಟಿ = ವ್ಯಾಪಾರಿ.

ಸೆಟ್ಟಿ = ಜಿಪುಣ (ಅಲಂ).

ಸೆಟೆದ್ಕೊಣದು = ಕೈಕಾಲುಗಳು ತಾತ್ಕಾಲಿಕವಾಗಿ ಹಿಡಿದು ಕೊಳ್ಳುವುದು, ಕೊಕ್ಕೆಯಾಗುವುದು, ಜೋವು ಹಿಡಿಯುವುದು.

ಸೆಡು = ಸೆಡುವು, ಧಿಮಾಕು, ಕೋಪ, ತಾಪ.

ಸೆಡುವುದು = ಒಂದು ನಿರ್ದಿಷ್ಟ ರೀತಿಯಲ್ಲಿ ಕಟ್ಟು/ಹೆಣೆಯುವುದು (ಅಡಿಕೆ ಮರಕ್ಕೆ ಕೊಟ್ಟೆಸಟ್ಟುವುದು, ಸೀಗೆ ಕೊಟ್ಟೆಸೆಡು).

ಸೆಣಬು = ಒಂದು ರೀತಿಯ ನಾರಿನ ಗಿಡ, ಕತ್ತಾಳೆ.

ಸೆದೆ = ಸದೆ. ಕಸ.

ಸೆಬೆ = ಸಬೆ, ಬಳ್ಳಿಗಳನ್ನು ಕಟ್ಟಿ ಹಕ್ಕಿಗಳನ್ನು ಹಿಡಿಯಲು ಮಾಡಿದ ಉರುಳು.

ಸೆರಗು = ಸೀರೆಯ ಹೊದೆಯುವ ಭಾಗ.

ಸೆರಗು ನಿಲ್ಲು = ವಯಸ್ಸಾದ ನಂತರ ಮುಟ್ಟು ನಿಲ್ಲುವುದು, ಋತುಸ್ರಾವ ನಿಲ್ಲುವುದು.

ಸೆರೆ = ಬೊಗಸೆ, ಮುಷ್ಟಿ.

ಸೆರೆ = ಸೆರೆಮನೆ, ಜೈಲು.

ಸೆರೆ = ಹೆಂಡ, ಮದ್ಯ, ಕುಡಿಯುವ ಮಾದಕ ಪಾನೀಯ.

ಸೆಲೆ = ಒರತೆ ನೀರು ಒಸರುವ ಜಾಗ.

ಸೆಲ್ಲೆ = ಶಲ್ಲೆ, ಶಲ್ಯ, ಶಾಲು.

ಸೆವಳ = ಸೊಂಟಕ್ಕೆ ಹಾಕುತ್ತಿದ್ದ ಬೆಳ್ಳಿಯ ನೆವಳ, ಗಂಡಸರ ಆಭರಣ.

ಸೆಳೆ = ಎಳೆತ, ಎಳೆದುಕೊಳ್ಳುವುದು.

ಸೇಂದಿ = ಸೆರೆ, ಕಳ್ಳು, ನೀರಾ.

ಸೇಡು = ಪ್ರತೀಕಾರ, ವೈರ.

ಸೇದು = ಸೆಳೆತ, ನೋವು (ಕಾಲು ಸೇದು

ಬರ್ತಿದೆ).

ಸೇದು = ಮೇಲೆತ್ತು, ಬಾವಿಯಿಂದ ನೀರೆಳೆಯುವುದು (ನೀರುಸೇದು, ನೀರುಸೇಯು).

ಸೇದು = ಎಳೆಯುವುದು, ಸೇವಿಸುವುದು (ಹೊಗೆ ಬತ್ತಿ ಸೇದುವುದು).

ಸೇದುಹೋಗ = ಕೈಕಾಲು ಕೊಕ್ಕೆಯಾಗಲಿ/ ನಿಶ್ಚೇಷ್ಟಿತವಾಗಲಿ/ ಸೆಳೆದು ಹೋಗಲಿ ಎಂಬ ಒಂದು ಬೈಗುಳ.

ಸೇಯು = ಸೇದು.

ಸೇರು = ಒಂದು ಅಳತೆ, ನಾಲ್ಕು ಪಾವಿನ ಒಂದು ಅಳತೆ.

ಸೇರು = ಕೂಡು, ಒಂದಾಗಿರು. ಒಟ್ಟಿಗಿರು, ಒಗ್ಗಟ್ಟಿನಿಂದಿರು.

ಸೇರು = ತಲುಪು.

ಸೇರು = ಹಿಡಿಸು, ರುಚಿಸು (ಊಟ ಸೇರಲ್ಲ).

ಸೇರೆಗಾರ = ಮೇಸ್ತ್ರಿ, ಕೆಲಸಕ್ಕೆ ಆಳುಗಳನ್ನು ಕರೆದು ತರುವಾತ, ಕೃಷಿ ಕೆಲಸದ ಮೇಲ್ವಿಚಾರಕ.

ಸೇವಿಗೆ = ಶ್ಯಾವಿಗೆ.

ಸೈ = ೧.ಸರಿ, ನಿಜ, ೨.ಆಗಬಹುದು.

ಸೈ = ಮುಗಿಯಿತು, ಇನ್ನಿಲ್ಲ (ಇಲ್ಲಿಗೇ ಸೈ).

ಸೈಸೈ = ಹೌದೌದು, ಅಹುದಹುದು.

ಸೈ ಮತ್ತೆ = ಸರಿ ಮತ್ತೆ, ಸರಿಬಿಡು.

ಸೈಜ್ಗಲ್ಲು = ಎತ್ತರ, ಉದ್ದ, ಅಗಲ ಎಲ್ಲವು ಒಂದೇ ಅಳತೆಯಂತೆ ಕೆತ್ತಿದ ಕಲ್ಲು.

ಸೈತಾ = ಸಹಿತ, ಕೂಡ, ಒಟ್ಟಿಗೆ.

ಸೈರ್ಣೆ = ತಾಳ್ಮೆ, ಸಹನೆ.

ಸೈಸ್ಕಾ = ಸಹಿಸಿಕೋ, ತಾಳಿಕೋ, ತಡ್ಕೋ, ತಾಳ್ಮೆತಗೋ.

ಸೈಸು = ಸೈಸ್ಕಾ, ಸಹಿಸಿಕೊಳ್ಳುವುದು.

ಸೈಯಾ = ಸರಿನಾ.

ಸೈಯಾ = ಇಷ್ಟೇನಾ, ಮುಗೀತಾ.

ಸೊಂಟ = ನಡು. ಕಟಿ.

ಸೊಂಟಮುಕ್ಕಿನ ಪಾಲು = ಶಿಕಾರಿಯಲ್ಲಿ ಮಾಂಸ ಹಂಚಿದವನಿಗೆ ಕೊಡುವ ಪಾಲು.

ಸೊಂತ = ಸ್ವಂತ, ಸ್ವತಃ, ವೈಯಕ್ತಿಕ.

ಸೊಂಪು = ಹುಲುಸು, ಸಮೃದ್ಧಿ.

ಸೊಕ್ಕು = ಬಿಂಕ, ಧಿಮಾಕು, ಗರ್ವ.

ಸೊಟ್ಟ = ವಾರೆ, ಡೊಂಕು, ವಕ್ರ ನೇರವಲ್ಲದ.

ಸೊಟ್ಟಾಪಟ್ಟ = ಓರೆಕೋರೆ, ಅಂಕು–ಡೊಂಕು, ಅಡ್ಡಾದಿಡ್ಡಿ.

ಸೊಟ್ಟೆ = ಸೊಟ್ಟ.

ಸೊಡ್ಡು = ಮುಖ, ಮೂತಿ, ಮುಸುಡಿ.

ಸೊನೆ = ಹಣ್ಣು/ಕಾಯಿ/ತರಕಾರಿ/ಗಿಡಗಳು ಮುಂತಾದ ಕೆಲವದರಲ್ಲಿರುವ ಬಾಯಿ ಸುಡುವಂತಹ ರಸ.

ಸೊಪ್ಪೀಗೆ = ಕಾಯಿ ಬಿಡದೆ ಸುಮ್ಮನೇ ಬೆಳೆಯುವ ಸೀಗೆಯ ಪೊದೆ.

ಸೊಪ್ಪುಸದೆ = ಬೇಕಾದ ಬೇಡದ ಎಲ್ಲಾ ಸೊಪ್ಪುಗಳು.

ಸೊರಗುಡಿ = ಸೀತ ಬಂದಾಗ ಯಾವಾಗಲು ಸೊರಸೊರ ಅಂತ ಮೇಲೆಳೆದುಕೊಳ್ಳುವುದು.

ಸೊರಬ್ಲು = ವೀಳ್ಯದೆಲೆಯ ಸಿರಿ, ಎಲೆಸಿರಿ, ೨. ಒಣಗಿ ಕೆಳಗೆ ನೇತುಬಿದ್ದಿರುವ

ಬಾಳೆಮರದ ಎಲೆ.

ಸೊರೂಪ = ಅಂದಗೆಡಿಸಿಕೊಂಡ ರೂಪ.

ಸೊಲ್ಪ = ಸ್ವಲ್ಪ, ಕಡಿಮೆ.

ಸೊಲುಪ = ಸ್ವಲ್ಪ.

ಸೊಸೆ = ಮಗನ ಹೆಂಡತಿ, ಗಂಡನ ಸೋದರಿಯ ಮಗಳು.

ಸೊಸೊಲ್ಪ = ಸ್ವಲ್ಪ ಸ್ವಲ್ಪವೇ, ಚೂರು ಚೂರು, ಆಗಾಗ.

ಸೋಗಲಾಡಿ = ವಯ್ಯಾರದಿಂದ ಕಪಟದಿಂದ ಮರುಳು ಮಾಡುವವಳು.

ಸೊಳ್ಳೆ = ರಕ್ತ ಹೀರುವ ಕೀಟ.

ಸೋಗು = ವಯ್ಯಾರ, ಕೃತಿಮತೆ, ಕೃತಕಭಾವ.

ಸೋಗೆ = ಅಡಿಕೆ ಮರದ ಒಣಗಿದ ಹೆಡ್ಲು /ಗರಿ.

ಸೋಜ್ಗ = ಸೋಜಿಗ, ಆಶ್ಚರ್ಯ, ವಿಸ್ಮಯ.

ಸೋತುಹೋಗು = ಗೆಲುವಾಗದಿರುವುದು, ಸೋಲಾಗುವುದು.

ಸೋತುಹೋಗು = ಬಡವಾಗು, ನಿಶ್ಶಕ್ತಿ ಹೊಂದು.

ಸೋತು ಸುಣ್ಣ ಆಗು = ಬಸವಳಿ, ಕೆಲಸಮಾಡಿ/ಕಷ್ಟ ಅನುಭವಿಸಿ, ಬಳಲಿಬೆಂಡಾಗು.

ಸೋದ್ರತ್ತೆ = ತಂದೆಯ ಅಕ್ಕ /ತಂಗಿ.

ಸೋದ್ರಮಾವ = ತಾಯಿಯ ಅಣ್ಣ/ತಮ್ಮ.

ಸೋಬ್ಲಕ್ಕಿ = ೧.ಮದುವೆಯಲ್ಲಿ ಉಪಯೋಗಿಸುವ ಅಕ್ಷತೆ ಕಾಳು ೨.ಮಡಿಲಕ್ಕಿ (ಹೆಣ್ಣಿಗೆ ಮಡಿಲು ತುಂಬುವಾಗ ಹಾಕುವ ಅಕ್ಕಿ).

ಸೋಬ್ನ = ಸೋಬಾನೆ, ಗಂಡು ಹೆಣ್ಣು ಕೂಡುವ ಮೊದಲ ರಾತ್ರಿ.

ಸೋಮಾರಿ = ಮೈಗಳ್ಳತನ ಮಾಡುವವನು, ಯಾವುದರಲ್ಲೂ ಆಸಕ್ತಿ ಯಿಲ್ಲದವನು.

ಸೋಮಾರಿತನ = ಮೈಗಳ್ಳತನ, ನಿರಾಸಕ್ತಿ.

ಸೋರೆಕಾಯಿ = ಒಂದು ರೀತಿಯ ಬಳ್ಳಿಯಲ್ಲಿ ಬೆಳೆಯುವ ತರಕಾರಿ.

ಸೋರೆ ಬುರುಡೆ = ಕಿಂದರಿ, ಏಕತಾರಿಗಳಲ್ಲಿ ಬಳಸುವ ಬಲಿತು ಒಣಗಿದ ಸೋರೆ ಕಾಯಿಯ ದಪ್ಪನೆಯ ಭಾಗ.

ಸೋಲು = ಪರಾಭವ, ಗೆಲ್ಲದಿರುವುದು.

ಸೋವು = ಶಿಕಾರಿಯವರಿಗೆ ದಾರಿ ಮಾಡಲು ಹಳ ಸವರುತ್ತ ಹೋಗುವುದು, ಹಳ ಸೋವುವುದು.

ಸೋಸಣ್ಗೆ = ಶೋಧಿಸಲು ಬಳಸುವ ಸಾಧನ.

ಸೋಸಬಟ್ಟೆ = ಕಾಪಿ, ಟೀ ಮುಂತಾದುವನ್ನು ಶೋಧಿಸಲು ಬಳಸುವ ತೆಳು ಬಟ್ಟೆ.

ಸೋಸು = ಶೋಧಿಸು, ಸ್ವಚ್ಛಮಾಡು (ಸೊಪ್ಪು ಸೋಸು).

ಸೋಸ್ಲು = ಒಂದು ಜಾತಿಯ ಮೀನು, ಸಣ್ಣ ಸಣ್ಣ ಮೀನುಗಳು.

ಸೌಂಟು = ಸೌಟು, ಸವುಟು, ಚಮಚ.

ಸೌತಿ = ಸವತಿ, ಗಂಡನ ಇನ್ನೊಬ್ಬ ಹೆಂಡತಿ.

ಸೌತಿ = ಒಂದು ಬಗೆಯ ಬಳ್ಳಿಯಲ್ಲಿ ಬೆಳೆಯುವ ತರಕಾರಿ, ಚೌತೆಕಾಯಿ.

ಸೌದೆ = ಕಟ್ಟಿಗೆ, ಬೆಂಕಿ ಉರಿಸಲು ಬಳಸುವ ಮರದ ಸಣ್ಣ ಸಣ್ಣ ಹರೆಗಳು.

ಸೌದೆಕಚ್ಚು = ಬೆಂಕಿ ಸರಾಗವಾಗಿ ಉರಿಯಲು ಮತ್ತೆ ಮತ್ತೆ ಒಲೆಗೆ ಸೌದೆಯನ್ನು ಹಾಕುವುದು.

ಸೌದೆ ಕೊಟ್ಗೆ = ಮಳೆಗಾಲದಲ್ಲಿ ಕಾಡಿಗೆ ಹೋಗಿ ಸೌದೆಯನ್ನು ತರಲು ಸಾಧ್ಯವಾಗದಿರುವುದರಿಂದ/ಸೌದೆ ವದ್ದೆಯಾಗಿ ಉರಿಯುದೇ ಇರುವುದರಿಂದ ಮಳೆಗಾಲಕ್ಕೆ ಬೇಕಾಗುವಷ್ಟನ್ನು ಬೇಸಿಗೆಯಲ್ಲೇ ಸಂಗ್ರಹಿಸಿ ಕೂಡಿಡುವ ಕೊಟ್ಟಿಗೆ.

ಸೌಳು ಮಣ್ಣು = ಸವಳುಭೂಮಿ, ನಿಸ್ಸಾರವಾದ ನೀರಿರುವ ಭೂಮಿ.

ಸ್ವಂಟ = ಸೊಂಟ.

ಸ್ವಂತ = ವೈಯಕ್ತಿಕ.

ಸ್ವತಃ = ಖುದ್ದಾಗಿ, ಸ್ವಂತ.

ಸ್ವಟ್ಟ = ಓರೆ, ಸೊಟ್ಟ, ವಕ್ರ.

ಸ್ವಯ = ಪ್ರಜ್ಞೆ, ಎಚ್ಚರ (ಮೈಮೇಲೆ ಸ್ವಯ ಇರಲಿ).

ಸ್ವಯಾರ್ಜಿತ = ಸ್ವಂತ ಸಂಪಾದಿಸಿದ ಆಸ್ತಿ/ವಸ್ತು.

ಸ್ವಾಡೆ = ಹಲಸಿನ ಹಣ್ಣನ್ನು ಬಗೆದು ಕೆಲವು ಹೋಳುಗಳನ್ನಾಗಿ ಮಾಡಿ ಸೋಳೆಗಳನ್ನು ಬಿಡಿಸಲು ಸುಲಭ ಮಾಡಿಕೊಳ್ಳುವಂತಹ ಒಂದು ಹೋಳು.

ಸ್ವಾಗೆ = ಸೋಗೆ, ಅಡಿಕೆ/ತೆಂಗಿನ ಗರಿ.

ಸ್ವಾತಿ = ಒಂದು ಮಳೆ ನಕ್ಷತ್ರ.

ಸ್ವಾಸ = ಶ್ವಾಸ, ಉಸಿರಾಡುವಿಕೆ.

ಸ್ವಾರ್ಲು ಮೀನು = ಒಂದು ಜಾತಿಯ ದೊಡ್ಡ ಮೀನು ಒಣಗಿಸಿದ್ದು.

ಸ್ವೊಂಟ ಮುರ್ಕ ಪಾಲು = ಶಿಕಾರಿಯಾದ ಅಷ್ಟೂ ಮಾಂಸವನ್ನು ಎಲ್ಲರಿಗು ಹಂಚೀ ಹಂಚಿ ಸೊಂಟ ನೋಯಿಸಿಕೊಂಡವನಿಗೆ ಕೊಡುವ ಮಾಂಸದ ಒಂದು ಪಾಲು, ಸೊಂಟ ಮುಕ್ಕಿನ ಪಾಲು.

ಸ್ವೊಸೆ = ಸೊಸೆ, ಮಗನ ಹೆಂಡತಿ, ಅಕ್ಕ/ತಂಗಿಯ ಮಗಳು.

ಸ್ವೋಂಗೆ =ಸೋಗೆ.

ಹ

ಹಂಗ = ಹಾಗಾ, ಹೌದಾ.

ಹಂಗಂತ = ಹಾಗಂತ, ಹಾಗೆಂದು.

ಹಂಗಂದ್ರೆಹಂಗೆ ಹಿಂಗಂದ್ರೆ ಹಿಂಗೆ = ಹೇಗೆಂದರೆ ಹಾಗೆ, ಇಬ್ಬಂದಿಯ ಮಾತು.

ಹಂಗನ್ನು = ಹಾಗೆ ಹೇಳು.

ಹಂಗನ್ನು ಮತ್ತೆ = ಹಾಗೆ ಹೇಳು ಎಂದು ಒತ್ತಾಯದ ಧ್ವನಿಯಲ್ಲಿ ಹೇಳುವುದು.

ಹಂಗರ್ಕ = ಒಂದು ರೀತಿಯ ಕಾಡಿನ ಮರ, ಹಾಲುವಾಣದ ಜಾತಿ, ಎಲೆಕಡಿಮೆ, ಇಡೀಮರವೆಲ್ಲಾ ಮುಳ್ಳೇ ಮುಳ್ಳು.

ಹಂಗ್ರಾಣೆ = ಹಂಗು, ಋಣ, ಅವಲಂಬನೆ, ಹಂಗ್ರಣೆ.

ಹಂಗಾಮಿ = ತಾತ್ಕಾಲಿಕ.

ಹಂಗಾರೆ = ಹಾಗಾದರೆ, ಹಂಗಾದ್ರೆ, ಹಂಗರೆ.

ಹಂಗಾದ್ರೆ = ಹಂಗಾರೆ.

ಹಂಗಾಸಿ = ಹಾಗೆ ಆಕಡೆಯಿಂದ, ಆಕಡೆ ಬಳಸಿಕೊಂಡು.

ಹಂಗು = ದಾಕ್ಷಿಣ್ಯ, ಋಣ.

ಹಂಗ್ಸು = ಹೀಯಾಳಿಸು, ಛೇಡಿಸು.

ಹಂಗೆ = ಹಾಗೆ, ಆರೀತಿ.

ಹಂಗೇ ಆಗ್ಲಿ = ಹಾಗೆಯೇ ಆಗಲಿ ಎಂದು ಒಪ್ಪಿಗೆ ಸೂಚಿಸುವುದು.

ಹಂಗೇ ಆಬಕು = ಹಾಗೇ ಆಗಬೇಕು.

ಹಂಗೇಯ = ಹಾಗೆಯೇ, ಹಂಗಾಸಿ.

ಹಂಚಿಕಡ್ಡಿ = ಬೆಳೆದ ಹಂಚಿ ಹುಲ್ಲಿನ ಪೊರಕೆ ಮಾಡುವ ಕಡ್ಡಿ.

ಹಂಚಿಹಿಡಿ = ಹಂಚಿಕಡ್ಡಿಯ ಪೊರಕೆ.

ಹಂಚಿಹುಲ್ಲು = ಗದ್ದೆ ಅಂಚಿನ ಮೇಲೆ ಬೆಳೆಯುವ ಒಂದು ಜಾತಿಯ ಉದ್ದಹುಲ್ಲು.

ಹಂಚು = ಮನೆಯ ಮಾಡಿಗೆ ಹೊದಿಸುವ ಹೆಂಚು.

ಹಂಚು = ವಿತರಿಸು, ಪಾಲುಮಾಡು, ಕೊಡು, ಕೊಡುತ್ತಾಹೋಗು.

ಹಂಡ = ಕಲೆ, ಪ್ರಾಣಿಗಳ ಮೈಮೇಲಿನ ಒಂದಕ್ಕಿಂತ ಹೆಚ್ಚಿನ ಬಣ್ಣ.

ಹಂಡಿ = ಮೈಮೇಲೆ ಹಂಡವಿರುವ ದನ/ಆಕಳು.

ಹಂಡುಂಡ = ಬೇರೆ ಬೇರೆ ಬಣ್ಣ–ಗಳಿರುವುದು.

ಹಂಡೆ = ನೀರು ತುಂಬುವ/ ಸ್ನಾನಕ್ಕೆ ನೀರು ಕಾಯಿಸುವ ದೊಡ್ಡ ಬೋಗುಣಿ, ಬಾಯಿ ಸಣ್ಣ, ಹೊಟ್ಟೆ ದೊಡ್ಡದಾಗಿರುವ ದೊಡ್ಡ ತಾಮ್ರದ ಪಾತ್ರೆ.

ಹಂತ = ಘಟ್ಟ, ಮಟ್ಟ.

ಹಂತಿ = ಪಂಕ್ತಿ, ಸಾಲು.

ಹಂದಾಡ್ಸಕ್ಕಾಗಲ್ಲ = ಅಲುಗಾಡಿಸಲು ಆಗುವುದಿಲ್ಲ.

ಹಂದಾಡ್ಸು = ಅಲುಗಾಡಿಸು.

ಹಂದಿ = ವರಾಹ, ಒಂದು ಪ್ರಾಣಿ.

ಹಂದಿ ಒಡ್ಡಿ = ಸಾಕಿದ ಹಂದಿಗಳನ್ನು ಕೂಡಿ ಹಾಕುವ ಕೊಟ್ಟಿಗೆ.

ಹಂದು = ಅಲುಗಾಡು.

ಹಂದೆಗಳ = ಮನೆಯ ಮಾಡಿಗೆ ಹಾಕಿದ ಬಿದಿರುಗಳ.

ಹಂಬ್ಬದೆ = ಹಬ್ಬಿದೆ.

ಹಂಬು = ಬಳ್ಳಿ.

ಹಂಬು = ಹಬ್ಬುವುದು.

ಹಂಸ = ನೀರಿನಲ್ಲಿ ವಾಸಿಸುವ ಒಂದು ಪಕ್ಷಿ.

ಹಕ್ಕಲು = ಹಕ್ಲು, ಚಿಕ್ಕ ಬಯಲು.

ಹಕ್ಕಲು ಹತ್ತಿ ಹೋಗು = ಸಂಪೂರ್ಣನಷ್ಟ ಹೊಂದು, ಹಾಳಾಗಿಹೋಗು (ಅಲಂ).

ಹಕ್ಕಳೆ = ಹಕ್ಳೆ, ಜಿರಲೆ.

ಹಕ್ಕಿ ಕೊರವರು = ೧. ಹಕ್ಕಿ ಪಿಕ್ಕ, ಹಕ್ಕಿ ಹಿಡಿಯುವುದರಲ್ಲಿ ನಿಸ್ಸೀಮರು, ೨. ಹಚ್ಚೆ ಕುಚ್ಚುವವರು.

ಹಕ್ಕಿ ಪಿಕ್ಕ = ಒಂದು ಬುಡಕಟ್ಟು ಜನಾಂಗ.

ಹಕ್ಕು = ಒಡೆತನ, ಸಾಮ್ಯ.

ಹಕ್ಕೆ ಮನೆ = ಮಚ್ಗಿ, ಕಾವಲು ಗುಡಿಸಲು, ಮಂಚಿಗೆ.

ಹಗಲು = ದಿನ, ಸೂರ್ಯ ಹುಟ್ಟಿ ಮುಳುಗುವವರೆಗಿನ ಕಾಲ.

ಹಗ್ಗ = ದಾರ, ದಪ್ಪದಾರ.

ಹಗೂರ = ಹಗುರ, ಸಾವಕಾಶ.

ಹಗೆ = ದ್ವೇಷ, ಅಸೂಯೆ, ವೈರ, ವೈರತ್ವ

ಹಗೆ = ಹಗೇವು, ಧಾನ್ಯವನ್ನು ದಾಸ್ತಾನು ಮಾಡಲು ನೆಲದೊಳಗೆ ಮಾಡಿರುವ ನೆಲಮಾಳಿಗೆ.

ಹಚ್ಗ = ಹಚ್ಚಿಕೋ, ಬಳಿದುಕೋ, ಲೇಪಿಸಿಕೋ.

ಹಚ್ಚಗೆ = ಏನೂ ಇಲ್ಲದಂತೆ, ಸಂಪೂರ್ಣ, ಪೂರ್ತಿ.

ಹಚ್ಚಡ = ಹೊದಿಕೆ.

ಹಚಾ = ನಾಯಿಯನ್ನು ಓಡಿಸುವ ಶಬ್ಧ.

ಹಚ್ಚಾಕು = ಚಾಡಿ ಹೇಳು, ಒಬ್ಬರಿಂದೊಬ್ಬರಿಗೆ ಜಗಳ ತಂದ್ಹಾಕು.

ಹಚ್ಚು = ಹೊತ್ತಿಸು (ದೀಪಹಚ್ಚು).

ಹಚ್ಚು = ಬಳಿ, ಲೇಪಿಸು.

ಹಚ್ಚೆ = ಯಾವುದೇ ರೀತಿಯಲ್ಲೂ ಅಳಿಸಿ ಹೋಗದಂತೆ ಸೊಪ್ಪಿನ ಮದ್ದನ್ನು ಹಚ್ಚಿ ಏಳು ಸೂಜಿಯಿಂದ ಚರ್ಮಕ್ಕೆ ತೂತು ಮಾಡಿ ಚಿತ್ರ ಬಿಡಿಸುವುದು.

ಹಚ್ಚೆಕುಚ್ಚುವುದು = ಹಚ್ಚೆ.

ಹಜಾಮ = ಕ್ಷೌರಿಕ, ನಾಯಿಂದ.

ಹಜಾಮ್ತಿ = ಕ್ಷೌರ, ಚೌರ.

ಹಟ = ಮೊಂಡುತನ, ಹಠಮಾರಿತನ.

ಹಟಾಹೊತ್ತು = ಮಾಡಿಯೇ ತೀರಬೇಕೆಂಬ ಹಟವಾರಿ ತನದಿಂದ (ಹಟಾಹೊತ್ತು ಬಂದೆ).

ಹಟ್ಟಿ = ಕೊಟ್ಟಿಗೆ.

ಹಡಬಿಟ್ಟಿ =ಎಲ್ಲೆಂದರಲ್ಲಿ ಅಲೆದು ಸಿಕ್ಕಿದ್ದನ್ನು ತಿಂದುಕೊಂಡಿರುವ.

ಹಡಬಿಟ್ಟಿ ಆಳು = ಸಂಬಳವಿಲ್ಲದೆ ದುಡಿಯುವ ಆಳು.

ಹಡಿ = ಹೆರು, ಪ್ರಸವಿಸು, ಮಗುವಿಗೆ ಜನ್ಮ ನೀಡು.

ಹಡ್ಲಿಗಿ ಬಳಿ = ಒಕ್ಕಲಿಗರಲ್ಲಿ ಒಂದು ಗೋತ್ರ.

ಹಡೆ = ಹಡಿ.

ಹಡೆ = ಕೆಟ್ಟ ಚಾಳಿ, ಕೆಟ್ಟ ಚಾಳಿಯವನು.

ಹಡ್ಡಿ = ಹಾಡ್ಯ, ಸಣ್ಣ ಕಾಡು.

ಹಡ್ಬೆ = ಅಂಕೆಶಂಕೆಯಿಲ್ಲದ, ಮಾನಮರ್ಯಾದೆಬಿಟ್ಟ, ಜಾರೆ, ಒಂದು ಬೈಗುಳ.

ಹಣಗಿ = ೧. ಬಾಚಣಿಗೆ ೨. ಬಾಳೆ ಹಣ್ಣಿನ ಚಿಪ್ಪು.

ಹಣ್‌ಹಾಕ್ಸದು = ದೇವರಿಗೆ /ನಾಗರಕ್ಕೆ ಬಾಳೆಗೊನೆಯನ್ನು ನೈವೇದ್ಯ ಮಾಡುವುದು.

ಹಣ್ಕಾಯಿ = ದೇವರಿಗೆ ಪೂಜೆಗೆ ಕೊಡುವ ಹೂವು ಹಣ್ಣು ತೆಂಗಿನ ಕಾಯಿ.

ಹಣ್ಣಾಗು = ೧.ವಯಸ್ಸಾಗು, ಮುಪ್ಪಾಗು, ೨.ಮಾಗು.

ಹಣಿ = ಕಬ್ಬಿಣವನ್ನು ಹರಿತ ಮಾಡುವ ಪ್ರಕ್ರಿಯೆ.

ಹಣಿ = ತಿಳಿ,ಸಾರ, ದ್ರಾವಣ, ರಸ.

ಹಣಿ =ಎಸೆ, ಬಿಸಾಕು.

ಹಣಿ = ಹೆಣೆ, ನೇಯು (ಜಡೆ ಹಣಿ).

ಹಣ್ಕೆನೋಡು = ಇಣುಕಿನೋಡು, ಮರೆಯಲ್ಲಿ ನಿಂತುನೋಡು.

ಹಣ್ಣು = ಕಳಿತ/ಮಾಗಿದಕಾಯಿ, ಫಲ.

ಹಣುಕು = ಇಣುಕು, ಕದ್ದುನೋಡು.
ಹಣೆ = ಲಲಾಟ, ನೊಸಲು.
ಹಣೇಬರ = ಹಣೆಯ ಬರಹ, ವಿಧಿಲಿಖಿತ, ಅದೃಷ್ಟ/ದುರಾದೃಷ್ಟ
ಹಣ್ತೆ = ದೀಪ, ದೀಪಾರತಿ, ಮಣ್ಣಿನ ದೀಪ.
ಹತ್ತ = ಬುಡ (ಗಿಡವನ್ನ ಹತ್ತ ಕಡಿದು ಹಾಕು).
ಹತ್ರ = ಹತ್ತಿರ, ಸಮೀಪ.
ಹತಾರ = ಕೃಷಿಗೆ ಸಂಬಂಧಿಸಿದ ಪರಿಕರಗಳು.
ಹತಾರ = ಆಯುಧ, ಶಸ್ತ್ರ.
ಹತ್ತಿ = ಅರಳೆ.
ಹತ್ಮೀನು = ದೊಡ್ಮಳೆ ಬಂದಾಗ ನೀರಿಗೆ ವಿರುದ್ಧ ದಿಕ್ಕಿನಲ್ಲಿ ಈಜಿಕೊಂಡು ಬರುವ ಮೀನುಗಳು.
ಹತ್ತು = ಹತ್ತರ ಸಂಖ್ಯೆ.
ಹತ್ತು = ಏರು (ಏಣಿಹತ್ತು).
ಹತ್ತು = ಉರಿ, ಜ್ವಾಲೆ, ಜ್ವಲಿಸು (ಬೆಂಕಿಹತ್ತಿತು).
ಹತ್ಗೂಣಿ = ದೊಡ್ಮಳೆ ಬಂದಾಗ ನೀರಿಗೆ ವಿರುದ್ಧ ದಿಕ್ಕಿನಲ್ಲಿ ಈಜಿಕೊಂಡು ಬರುವ ಮೀನುಗಳನ್ನು ಹಿಡಿಯಲು ಹಾಕುವ ಬಿದಿರಿನ ಕೂಣಿ.
ಹತ್ತೆ = ಸಮೀಪ, ಹತ್ತಿರ.
ಹತೋಟಿ = ಅಂಕೆ, ಹಿಡಿತ, ಹದ್ದು ಬಸ್ತು.
ಹದ = ಪರಿಮಿತಿ, ಕ್ರಮ, ಪಕ್ವತೆ, ಸರಿಯಾದ ಪಾಕ (ಈ ವರ್ಷ ಹದ ಮಳೆಯಾಯ್ತು).
ಹದಗೆಡು = ಹಾಳಾಗು, ಕೆಟ್ಟುಹೋಗು, ಹದ ತಪ್ಪು.
ಹದ್ದಿನಕಣ್ಣು = ಸೂಕ್ಷ್ಮದೃಷ್ಟಿ.
ಹದುಗು = ತಡವರಿಸು.
ಹದ್ದು = ಗಿಡುಗ, ಗರುಡ, ಗೃಧ್ರ.
ಹದ್ದುಬಸ್ತು = ಹತೋಟಿ.
ಹದ್ದುಮೀರು = ಎಲ್ಲೆಮೀರು, ಅಂಕೆತಪ್ಪು, ಮಿತಿಮೀರು, ಗಡಿದಾಟು.
ಹನಿ = ಬಿಂದು, ನೀರಿನ ಬಿಂದು, ತುಂತುರು.
ಹನಿತದೆ = ತುಂತುರುಮಳೆ ಬರುತ್ತಿದೆ.
ಹಪ್ಪಳ = ಊಟಕ್ಕೆ ನಂಚಿಕೊಳ್ಳುವ ಪದಾರ್ಥ, ಒಣಗಿದ ತೆಳು ಪದಾರ್ಥ.
ಹಪ್ಪು = ಕೊಳೆ, ಬಡ್ಡು, ಕೊಳಕು.
ಹಪ್ಪುಗಟ್ಟವು = ಕೊಳಕಾಗಿರುವವರು, (ಅಲಂ)ಯಾರೊಂದಿಗೂ ಸೇರದವರು.
ಹಪ್ತೆ = ಒಂದು ವಾರ, ವಾರದ ಏಳುದಿನ.
ಹಪ್ಪೆ = ಒಣಗಿದ ಚರ್ಮ, ಒಣಗಿದ ಗಾಯದ ಮೇಲಿನ ಚರ್ಮ, ಗಾಯದ ಮೇಲಿನ ಒಣಗಿದ ಚರ್ಮ.
ಹಬ್ಬ = ವಿಶೇಷದಿನ, ದೇವರು ಹಿರಿಯರನ್ನು ನೆನೆಸಿಕೊಳ್ಳುವ ವಿಶೇಷದಿನ.
ಹಬ್ಬದ ಕರಿ = ಹಬ್ಬದ ಮರುದಿನದ ವಿಶೇಷ ಆಚರಣೆ, ವಿಶೇಷವಾಗಿ ದೀಪಾವಳಿಯ ಮರುದಿನ.
ಹಬ್ಬು = ಬೆಳೆಯುವುದು, ಇನ್ನೊಂದು ಮರದ ಆಶ್ರಯದಲ್ಲಿ ಬಳ್ಳಿ ಬೆಳೆಯುವುದು, ಹರಡು,

ವ್ಯಾಪಿಸು ಹಂಬುವುದು.

ಹಬೆ = ಆವಿ, ಉಗಿ.

ಹಮ್ಮು = ಸೊಕ್ಕು, ಗರ್ವ, ಮದ, ಧಿಮಾಕು.

ಹರ = ಶಿವ, ದೇವರು.

ಹರಹರ = ಕಷ್ಟ, ತೊಂದರೆ (ಊಟಕ್ಕೆ ಹರಹರ).

ಹರಕತ್ತು = ತುರ್ತು, ಅವಸರ (ಅಂತ ಹರ್ಕತ್ತು ಏನಿತ್ತು?), ತರಾತುರಿ.

ಹರಕೆ = ಆಶೀರ್ವಾದ, ೨. ದೇವರಿಗೆ ಮಾಡುವ ಸೇವೆ.

ಹರಟೆ = ಕೆಲಸಕ್ಕೆ ಬಾರದ ಮಾತಾಡುವುದು.

ಹರಟೆಮಲ್ಲ/ಮಲ್ಲಿ = ಬಹಳ ಮಾತಾಡುವವನು/ವವಳು.

ಹರಡು = ಹರಡಿ, ಕಾಲುಗಂಟು, ಹಿಮ್ಮಡಿಯ ಮೇಲ್ಭಾಗದ ಗಂಟು.

ಹರಡು = ಒಣಗಿಸು, ಒಣಹಾಕು, ಪ್ರಸರಿಸು.

ಹರಳುಪ್ಪು = ಕಲ್ಲುಪ್ಪು.

ಹರಬು = ಕೆಲಸ, ಕಾರ್ಯ.

ಹರವು = ಬಾಹುಲ್ಯ, ವಿಶಾಲತ್ವ, ಸಮೃದ್ಧಿ.

ಹರ್‌ಸೇವೆ = ಹರಿಸೇವೆ, ತಿರುಪತಿಗೆ ಹೋಗಿ ಬಂದವರು ಹಂಚುವ ತೀರ್ಥಪ್ರಸಾದ (ದೇವಸ್ಥಾನದಲ್ಲಿ).

ಹರ್ತ = ಹರಿತ, ತೀಕ್ಷ್ಣ, ಚೂಪು.

ಹರ್ದಾಕು = ಹರಿ, ಚಿಂದಿಮಾಡು, ಹರಿದುಹಾಕು.

ಹರ್ದಾಡು = ತೆವಳು, ಓಡಾಡು, ಹರಿದಾಡು.

ಹರ್ಮಾಗಾಲ = ಕಷ್ಟ, ತೊಂದರೆ.

ಹರ್ವಾಣ = ಹರಿವಾಣ, ದೊಡ್ಡ ತಟ್ಟೆ.

ಹರಿ = ವಿಷ್ಣು, ದೇವರು.

ಹರಿ = ಹರ್ದಾಕು.

ಹರಿ = ಮಣ್ಣಿನ ಗೂಡೆ.

ಹರಿಬರಿ = ಆತುರ, ತರಾತುರಿ.

ಹರಿವೆ = ಗೂಡೆ, ಹರಿ, ಮಣ್ಣಿನ ದೊಡ್ಡ ಮಡಕೆ.

ಹರ್ಕು = ಹರಿದ, ಚಿಂದಿಯಾದ.

ಹರ್ಕ್ಲ್ =ಹರಕಲು, ಹರ್ಕು.

ಹರ್ಕು ಮುರ್ಕು = ಹರುಕು ಮುರುಕು, ಅಲ್ಪಸ್ವಲ್ಪ ಚೂರುಪಾರು.

ಹರುಗು = ಒಣಹಾಕು, ಒಣಗಿಸು.

ಹರ್ಳು = ೧. ಹರಳು, ಬೆಲೆಬಾಳುವ ಕಲ್ಲು ೨. ಮರಳು ಮರಳಾಗಿರುವ ವಸ್ತು.

ಹರೆ = ಗೆಲ್ಲು, ಟಿಸಿಲು, ಟೊಂಗೆ, ಶಾಖೆ.

ಹರ್ವೆಸೊಪ್ಪು = ಒಂದು ತರಕಾರಿಸೊಪ್ಪು, ಸಾರು/ಪಲ್ಯಗಳನ್ನು ಮಾಡುವ ಸೊಪ್ಪು.

ಹಲಗಣೆ = ಮರದ ಗೂಟ (ಸರಳು) ಗಳಿರುವ ದೊಡ್ಡ ಕಿಟಕಿ.

ಹಲ್ಗತ್ತಿ = ಗರಗಸದಂತೆ ಹಲ್ಲುಗಳಿರುವ ಗದ್ದೆಕೊಯ್ಯಲು ಉಪಯೋಗಿಸುವ ಕತ್ತಿ, ಹಲ್ಲುಗತ್ತಿ.

ಹಲಗೆ = ಮರದ ತೆಳುವಾದ ಚಪ್ಪಟೆಯಾದ ಭಾಗ (ಹಾಳೆ).

ಹಲಗೆಹಾಸು = ಮನೆಯ ಗೋಡೆಯ ಮೇಲೆ ಹಲಗೆಗಳನ್ನಿಟ್ಟು ಮಾಡಿದ ಅಟ್ಟ.

ಹಲಸು = ಒಂದು ರೀತಿಯ ದೊಡ್ಡ

ಹಣ್ಣು ಬಿಡುವ ಕಾಡಿನ ಮರ, ಸಿಹಿಯಾಗಿರುವ ಇದರ ಹಣ್ಣು ಮನುಷ್ಯರಂತೆ, ಜಾನುವಾರುಗಳು ಮತ್ತು ಮಂಗಗಳಿಗೂ ತುಂಬಾ ಪ್ರಿಯ.

ಹಲರಿ = ಬಾಯಿಗೆ ಬಂದಂತೆ ಮಾತಾಡುವುದು, ಕನವರಿಸು.

ಹಲ್ಕ = ನೀತಿಗೆಟ್ಟವ್ನ, ನೀಚವ್ಯಕ್ತಿ, ಕೆಟ್ಟ ಮಾತುಗಳನ್ನಾಡುವವ.

ಹಲ್ಕಟ್ಟು = ಹಲ್ಕ, ನೀಚ, ಪೋಕರಿ, ಲುಚ್ಛ, ಜವಾಬ್ಧಾರಿಯಿಲ್ಲದವನು.

ಹಲ್ಮಟ್ಟೆಕಚ್ಚು = ಸಿಟ್ಟಿನಿಂದ ಹಲ್ಲು ಕಡಿಯುವುದು ೨. ಮೇಲಿನ ಸಾಲಿನ ಹಲ್ಲುಗಳಿಂದ ಕೆಳತುಟಿಯನ್ನು ಕಚ್ಚಿ ಹೆದರಿಸುವುದು.

ಹಲ್ಲಂಡೆ = ಗೊತ್ತು ಗುರಿಯಿಲ್ಲದ, ಅಲೆಮಾರಿ.

ಹಲಾಲ್‌ಕೋರ = ಮೋಸಗಾರ, ದಗಲ್ಬಾಜಿ, ಒಂದು ಬೈಗುಳ.

ಹಲಾಲ್ ಟೋಪಿ = ಹಲಾಲ್‌ಕೋರ.

ಹಲ್ಲಿ = ಪಲ್ಲಿ, ಗೋಡೆಯ ಮೇಲೆ ಹರಿದಾಡುವ ಸಣ್ಣ ಪ್ರಾಣಿ .

ಹಲ್ಲು = ೧.ದಂತ, ದಂತಪಂಕ್ತಿ ೨.ಗರಗಸದ ಚೂಪಾದ ತುದಿ.

ಹಲುಮಕ್ಳಗಿಡ = ಸಣ್ಣ ಎಲೆಯ ಪೊದೆಯಂತಹ ಬಳ್ಳಿಯ ಗಿಡ. ಇದರ ಬೇರು ಔಷದಿಯುಕ್ತ.

ಹಲುಬು = ಸೊಕ್ಕು, ಬೆದೆ, ಮದವೇರು.

ಹಲ್ಲುಚಿಲಿ = ಹಲ್ಲುಕಿಸಿ.

ಹಲುವಂಗ = ವೇಶ, ಒಂದು ರೀತಿಯ ವಯ್ಯಾರ.

ಹಲ್ಲುಗತ್ತಿ = ಗರಗಸದಂತೆ ಅಲಗು ಇರುವ ಕತ್ತಿ.

ಹಲ್ಡು = ಹರಡು, ಹಿಮ್ಮಡಿಯ ಮೇಲ್ಭಾಗದ ಗಂಟು ೨. ಒಣ ಹಾಕು.

ಹಲ್ಲೆ = ೧ ಲೂಟಿ, ಗಲಾಟೆ, ೨.ಮೇಲೆ ಬೀಳು, ದಾಳಿಮಾಡು.

ಹಲ್ಲೆ = ಎತ್ತಿನ ಗೊರಸಿಗೆ ಕಟ್ಟುವ ಕಬ್ಬಿಣದ ಲಾಳ.

ಹಲ್ಲೆಕಟ್ಟು = ಲಾಳ ಹಾಕುವುದು.

ಹಲ್ಟೆ = ಹರಟೆ, ಲೋಕಾಭಿರಾಮದ ಮಾತು.

ಹಲ್ಮಲೆ = ಹಲುವಂಗ.

ಹಲ್ಕಿರಿ = ಅಂಗಲಾಚಿಬೇಡು, ಯಾಚಿಸು, ಹಲ್ಲನ್ನು ತೋರಿಸು.

ಹಲ್ಲುಕಿಸಿ = ಹಲ್ಕಿರಿ.

ಹಲ್ಲುಕಡಿ =ಹಲ್ಮಟ್ಟೆಕಚ್ಚು.

ಹಲ್ಲುಗಿಂಜು = ಹಲ್ಕಿರಿ.

ಹವಣಿಸು =ಲೆಕ್ಕಾಚಾರ ಹಾಕು, ಹೊಂಚುಹಾಕು, ಎಣಿಕೆಹಾಕು

ಹವಳ = ಸಮುದ್ರದಲ್ಲಿ ಸಿಗುವ ಬೆಲೆಬಾಳುವ ಕೆಂಪುಕಲ್ಲು.

ಹಸ = ಹಸು, ದನ.

ಹಸ = ಚಿಗುರು ಅಡಿಕೆ.

ಹಸಗಿ = ಕೊಂದ ಪ್ರಾಣಿಯ ಮಾಂಸವನ್ನು ತಿನ್ನಲು ಯೋಗ್ಯವಾಗುವಂತೆ ಹಸನುಮಾಡಿ ಕತ್ತರಿಸುವುದು.

ಹಸ್ತ = ಕೈ, ಕರ.

ಹಸ್ತಗತ = ಕರತಲಾಮಲಕ, ಕೈಯಿಂದ ಮಾಡುವ ಕೆಲಸಗಳಲ್ಲಿ ಕುಶಲತೆ, ಅನುಭವ, ನೈಪುಣ್ಯತೆ.

ಹಸಾಳೆ = ಸೊಪ್ಪಿನ ಸಾರು.

ಹಸಿ = ತೇವವಿರುವ, ಬೆಂದಿಲ್ಲದ, ಹಸಿವು.

ಹಸಿ = ಹಸಿವು.

ಹಸೀತದೆ = ಹಸಿವಾಗುತ್ತಿದೆ.

ಹಸಿಬಿಸಿ = ಅರೆಬೆಂದ, ಅರೆಕಾದ.

ಹಸಿಮೈ = ಹೆಂಗಸರು ಹಡೆದ ನಂತರ, ಮೈನೆರೆದಾಗಿನ ಅವರ ದೇಹಸ್ಥಿತಿ.

ಹಸ್ಗಿ = ಹಸಗಿ.

ಹಸುರು = ಹಸಿರು, ಎಲೆಯ ಬಣ್ಣ.

ಹಸು = ಹಸ, ದನ, ಆಕಳು.

ಹಸ್ರು ಹಾವು = ಹಸಿರುಹಾವು.

ಹಸೆ = ಚಾಪೆ, ಹಾಸಿಗೆ.

ಹಸೆಗೋಡೆ = ಮದುವೆಯಲ್ಲಿ ಒಂದು ನಿರ್ದಿಷ್ಟಜಾಗದಲ್ಲಿ ಅಲಂಕಾರಿಕ ವಾಗಿ ಬಣ್ಣ ತುಂಬಿದ ಗೋಡೆ.

ಹಸ್ತೆ = ಒಂದು ಮಳೆ ನಕ್ಷತ್ರ, ಹಸ್ತಾಮಳೆ.

ಹಸೆಮಣೆ = ಮದುವೆಗಾಗಿಯೇ ಬಳಸುವ ಚಿತ್ತಾರವಿರುವ ಮರದ ಮಣೆ.

ಹಳ = ತೋಟದಲ್ಲಿ ಬೆಳೆದ ಸದೆ, ಬೇಡದಿರುವ ಗಿಡಬಳ್ಳಿಗಳು, ಕಾಡಿನ ಗಿಡ, ಮೊದೆ, ಬಳ್ಳಿ.

ಹಳಕು = ಕಾಯಿಸಿದ ತುಪ್ಪ ಆರಿದಾಗ ಮರಳುಮರಳಾಗಿರುವುದು.

ಹಳಬ = ಮುದುಕ, ಹಿರಿಯ, ಅನುಭವಸ್ಥ.

ಹಳಸ್ಲು = ಹಳೆಯದಾದ, ಹಳಸಿದ, ರುಚಿಕೆಟ್ಟುಹೋದ, ಹಿಂದಿನ ದಿನದ ಪದಾರ್ಥ.

ಹಳ್ಳ = ಸಣ್ಣಝರಿ, ನದಿಯಂತೆ ಸಣ್ಣದಾಗಿ ಹರಿಯುವ ನೀರು, ನೀರಿನ ಝರಿ.

ಹಳಸವ್ರು = ಸದೆಬಡಿ, ಹಳವನ್ನು ಕಿತ್ತುಹಾಕು.

ಹಳ್ಳತೋಣಕು = ಗುಂಡಿಯಲ್ಲಿರುವ ನೀರನ್ನು ಖಾಲಿಮಾಡಿ ಅದರಲ್ಲಿರುವ ಮೀನು ಹಿಡಿಯುವ ಕ್ರಮ.

ಹಳ್ಳದ ಕಡೆ = ಮಲವಿಸರ್ಜನೆಗೆಂದು ಹೋಗುವುದು.

ಹಳಿ = ದೂರು, ತೆಗಳು, ನಿಂದಿಸು.

ಹಳಿ = ಕಬ್ಬಿಣದ ಪಟ್ಟಿ, ರೈಲಿನ ಕಂಬಿ.

ಹಳು = ಹಳ.

ಹಳ್ಳು = ಒಂದು ಬಗೆಯ ಸಿಹಿ ನೀರಿನ ಮೀನು, ಹಳ್ಳುಗುರ್ಗಿ

ಹಳ್ಳು = ಹರಳು, ಎಣ್ಣೆ ತೆಗೆಯುವ ಹರಳು ಬೀಜ

ಹಳ್ಳುಅಡ್ಲಿಗೆ ಹಾಕುವುದು = ಹರಳು ಬೀಜಗಳನ್ನು ಕುಟ್ಟಿ ಬೇಯಿಸಿ, ಎಣ್ಣೆ ತೆಗೆಯುವ ವಿಧಾನ

ಹಳ್ಳು ಹೊರಸಲು ಹಕ್ಕಿ = ಹೊರಸಲು ಹಕ್ಕಿಯಂತೆಯೇ ಬಣ್ಣ ಮಾತ್ರ ಹಸಿರು, ಬಸಿರಿ ಮರದ ಹಣ್ಣು ತಿನ್ನುತ್ತವೆ, ಗಿಳಿಗಳಿಗಿಂತ ಸ್ವಲ್ಪ ಸಣ್ಣ ಗಾತ್ರ.

ಹಳ್ಳೆಣ್ಣೆ = ಹರಳು ಬೀಜದ ಎಣ್ಣೆ.

ಹಳೇ ಹುಲಿ = ಅನುಭವಿ, ಪಳಗಿದವ (ಅಲಂ).

ಹಾಗಲಕಾಯಿ = ತುಂಬಾ ಕಹಿ ರುಚಿಯುಳ್ಳ ಒಂದು ತರಕಾರಿ–

ಮದುಮೇಹದವರಿಗೆ ಒಳ್ಳೆಯ ಔಷಧ.

ಹಾಗೂ = ಕೂಡ, ಸಹಿ, ಸಹ.

ಹಾಗೂ ಹೀಗು = ಹೇಗಾದರು.

ಹಾಡ್ಲಕ್ಕಿ = ಬಾಬ್ಲಕ್ಕಿ, ಪಾರಿವಾಳದಂತೆ ದೊಡ್ಡ ಹಕ್ಕಿ, ದೂಪದ ಕಾಯಿ ತಿನ್ನುತ್ತದೆ.

ಹಾಡ್ಯ = ಹಡ್ಡೆ, ಮನೆಯ ಹತ್ತಿರದ ಚಿಕ್ಕಕಾಡು.

ಹಾಡು = ಗೀತೆ, ಗಾನ, ಪದ.

ಹಾತೆಹುಳ = ಜಿರಳೆ, ಜಿರಳೆ ಜಾತಿಯ ಚಿಕ್ಕ ಹುಳ.

ಹಾದರ = ವ್ಯಭಿಚಾರ.

ಹಾದರಗಿತ್ತಿ = ಜಾರೆ, ನಡತೆ ತಪ್ಪಿದವಳು, ವ್ಯಭಿಚಾರಿಣಿ.

ಹಾದಿ = ದಾರಿ, ರಸ್ತೆ.

ಹಾದಿಬದಿ = ದಾರಿಯ ಅಕ್ಕಪಕ್ಕ.

ಹಾದಿಬಿಡು = ೧.ದಾರಿತಪ್ಪು, ನಡತೆ ತಪ್ಪು ೨.ದಾರಿಯಿಂದ ಪಕ್ಕಕ್ಕೆ ಸರಿದುಕೋ.

ಹಾದಿನಿಮಿತ್ತ = ದಾರಿಯಲ್ಲಿ ಹೋಗುವಾಗ ಕಂಡುಬರುವ ಶಕುನ-ಅಪಶಕುನಗಳು.

ಹಾನಿ = ನಷ್ಟ.

ಹಾಯಾಗಿ = ಹಿತವಾಗಿ, ಸಂತೋಷವಾಗಿ.

ಹಾಯಿ = ತಿವಿ, ಇರಿ.

ಹಾಯ್ನೀರು = ಗದ್ದೆಗೆ/ಗಿಡಮರಗಳಿಗೆ ಹರಿ ಬಿಡುವ ನೀರು, ಹಾಯಿಸುವ ನೀರು.

ಹಾಯು = ತಿವಿಯುವುದು, ಕೋಡಿನಿಂದ ಇರಿಯುವುದು.

ಹಾರ = ದೊಡ್ಡಸರ, ಮಾಲೆ.

ಹಾರ್ಕೀ ಈಡು = ಓಡುತ್ತಿರುವ ಪ್ರಾಣಿಗೆ ಹೊಡೆಯುವ ಬಂದೂಕಿನ ಗುಂಡು.

ಹಾರು = ೧.ಜಿಗಿ, ನೆಗೆ, ದಾಟು ೨.ಪ್ರಾಣಿಗಳ ಮುಂದಿನ ಕಾಲಿನ ತೊಡೆಯ ಮಾಂಸ.

ಹಾರು ಬೆಕ್ಕು = ಕಾಡುಬೆಕ್ಕು, ಬಾಲ ಉದ್ದವಿದ್ದು ಕಂದು ಬಣ್ಣದ ಮರದಿಂದ ಮರಕ್ಕೆ ಹಾರುವ ಸಸ್ಯಾಹಾರಿ ಸಸ್ತನಿ.

ಹಾರುಗೊಯ್ಲು = ಮೊದಲಿಗೆ ಬಲಿತ ಅಲ್ಪಸ್ವಲ್ಪ ಅಡಿಕೆಗೊನೆಯನ್ನು ಕೊಯ್ಲು ಮಾಡುವುದು.

ಹಾರುಂಬೆಹಾವು = ಸಣ್ಣಕ್ಕೆ ಉದ್ದಕ್ಕೆ ಇರುವ ಕಚ್ಚುವಾಗ ಹಾರಿ ಹಾರಿ ಕಚ್ಚುವ ಹಾವು [ಗುಬ್ಬಚ್ಚಿಯ ಮೊಟ್ಟೆ ಇದರ ಆಹಾರ].

ಹಾರೆ = ಮಣ್ಣು ಅಗೆಯುವ ಕಬ್ಬಿಣದ ಸಾಧನ, ಗುದ್ದಲಿ.

ಹಾಲ್ಗಚ್ಚು = ಬತ್ತದ ತೆನೆಯಲ್ಲಿ ಕಾಳು ಕಟ್ಟುವ ಮೊದಲು ರಸತುಂಬಿ ಬರುವುದು.

ಹಾಲ್ಗಟ್ಟು = ಹಾಲ್ಗಚ್ಚು.

ಹಾಲ್ಮಡ್ಡಿ = ಒಂದು ಕಾಡುಮರದಿಂದ ಸಿಗುವ ಸುವಾಸನೆಯುಳ್ಳ ಧೂಪ.

ಹಾಲ್ಮಣಿಬಳೆ = ಬಿಳಿ ಮತ್ತು ಕಪ್ಪು ಮಣಿಗಳನ್ನು ದೃಷ್ಟಿ ತಗುಲಬಾರದೆಂದು ಬೆಳ್ಳಿಸರಿಗೆಯಲ್ಲಿ ಪೋಣಿಸಿ ಮಕ್ಕಳ ಕೈಗೆ ಹಾಕುವ ಬಳೆ.

ಹಾಲ್ಮಣಿಸರ = ಹಾಲ್ಮಣಿಗಳನ್ನು ಪೋಣಿಸಿ ಮಕ್ಕಳ ಕತ್ತಿಗೆ ಹಾಕುವ ಸರ.

ಹಾಲಕ್ಕಚ್ಚು = ಅಕ್ಕಿ ತೊಳೆದ ನೀರು.

ಹಾಲುಕರಿ = ಹಾಲು ಹಿಂಡುವುದು.

ಹಾಲಕ್ಕಚ್ಚಿನ ಪಾನಕ = ಹಾಲಕ್ಕಚ್ಚಿಗೆ ಏಲಕ್ಕಿ ಬೆಲ್ಲ ಸೇರಿಸಿಕುಡಿದರೆ ತಂಪು.

ಹಾಲ್ಬಳ್ಳಿ = ಒಂದು ರೀತಿಯ ಕಾಡುಬಳ್ಳಿ ಇದರ ಬೇರಿನ (ಎಲೆ ಬೆರಕೆ) ಕಷಾಯ ದೇಹಕ್ಕೆ ತಂಪು ನೀಡುವುದಲ್ಲದೆ. ಬಾಣಂತಿ ಯರಿಗೆ ಎದೆಹಾಲು ಹೆಚ್ಚುವುದು ತಂಪು–ಪರಿಮಳ.

ಹಾಲುಕ್ಸು = ಗೃಹ ಪ್ರವೇಶದ ನಂತರ ಮೊದಲ ಬಾರಿಗೆ ಹೊಸಮನೆಯಲ್ಲಿ ಒಲೆಯ ಮೇಲೆ ಹಾಲಿಟ್ಟು, ಕಾಯಿಸಿ ಉಕ್ಕಿಸುವ ಒಂದು ಪದ್ಧತಿ.

ಹಾಲುಗಂಬ = ಧಾರೆಯ ಕಂಬ, ಮುಹೂರ್ತದ ಕಂಬ, (ಮದುವೆ ಹಿಂದಿನ ದಿನ ಮದುವೆ ಶಾಸ್ತ್ರಗಳು ಪ್ರಾರಂಭಕ್ಕೆ ಮೊದಲು ನೆಡುವ ಹಲಸಿನ ಮರದ ಒಂದು ಉದ್ದಗೆಲ್ಲನ್ನು ನೆಟ್ಟು ಮದುವೆ ಶಾಸ್ತ್ರಗಳು ಮುಗಿದ ಮೇಲೆ ಅಂದರೆ ಒಂದು ವಾರಕ್ಕೆ ಮದುಮಕ್ಕಳು ಆ ಕಂಬವನ್ನು ಕೀಳುತ್ತಾರೆ).

ಹಾಲ್ತುಪ್ಪ = ಮದುಮಕ್ಕಳಿಗೆ ಹಾಲಿಗೆ ತುಪ್ಪ ಬೆರೆಸಿ ಕುಡಿಯಲು ಕೊಡುವುದು.

ಹಾಲುಮಡ್ಡಿ = ಅಡಿಕೆ ತೋಟಕ್ಕೆ ಔಷಧಿ ಹೊಡೆಯುವಾಗ ಮೈಲು ತುತ್ತಿನ ಜೊತೆಗೆ ಸೇರಿಸಿಕೊಳ್ಳುವ ಅಂಟು, ರಾಳ.

ಹಾಲುಮಡ್ಡಿ ಮರ = ಲಡ್ಡು ಮರ, ಬೆಂಕಿಪೊಟ್ಟಣಕ್ಕೆ ಉಪಯೋಗ.

ಹಾಲುಸುರ್ಸು = ಜಾನುವಾರುಗಳು ಹಾಲು ಕರೆಯುವಾಗ ಸರಿಯಾಗಿ ಹಾಲು ಕೊಡುವುದು.

ಹಾಲುವಾಣ = ಒಂದು ಜಾತಿಯ ಸಣ್ಣಮರ, ಕಾಫಿಗಿಡಕ್ಕೆ ನೆರಳಿಗೆ ಹಾಕುತ್ತಾರೆ.

ಹಾಲೆ = ಕಿವಿಯ ಆಲೆ, ಹಲ್ಲೆ.

ಹಾಲೇಡಿ = ಮಳೆಗಾಲದಲ್ಲಿ ಗದ್ದೆಯಲ್ಲಿ ಸಿಗುವ ಬೆಳ್ಳಗಿರುವ ಸಣ್ಣ ಏಡಿ.

ಹಾವಳಿ = ಲೂಟಿ, ತಂಟೆ, ತಕರಾರು.

ಹಾವಾಡ್ಗೋರು = ಹಾವಾಡಿಗರು.

ಹಾವ್ರಾಣಿ = ಸಣ್ಣ ಹಾವನ್ನು ಹೋಲುವ ಓತಿಕ್ಯಾತ, ಊಸರವಳ್ಳಿ, ಹೆಂಟೆಗೊದ್ದ, ಅಣಲೆ.

ಹಾವು = ಉರಗ, ಸರ್ಪ.

ಹಾವುಗೆ = ಮರದ ಪಾದರಕ್ಷೆ.

ಹಾವುಮೀನು = ಹಿಮುಗಲ ಮೀನು, ಹಾವ್‌ಬತ್ತಿಮೀನು, ಹಾವನ್ನು ಹೋಲುವ ಉದ್ದಮೀನು.

ಹಾಸ್ಗಿ = ಹಾಸಿಗೆ, ಮಲಗಲು ಬಳಸುವ ಹತ್ತಿಯ ಮೆತ್ತೆ.

ಹಾಸ್ಗಿಹಿಡಿ = (ಅಲಂ) ಕಾಯಿಲೆ ಬೀಳು.

ಹಾಸಕ್ಕೆ = ಹಾಸುವುದಕ್ಕೆ.

ಹಾಸು = ಬಿಚ್ಚಿ ಹರಡು, (ಹಾಸಿಗೆ ಹಾಸು, ಚಾಪೆ ಹಾಸು).

ಹಾಸುಗಲ್ಲು = ಕುಳಿತುಕೊಳ್ಳಲು

ಯೋಗ್ಯವಾಗುವಂತೆ ಹಾಸಿದ ಕಲ್ಲು.

ಹಾಸುಂಬ = ಹಾಸುಂಬೆ, ಪಾಚಿ.

ಹಾಸುಂಬ ಹಂಬದು = ಪಾಚಿ ಬೆಳೆಯುವುದು.

ಹಾಳಿ = ದೊಡ್ಡ ಗದ್ದೆ, ವಿಸ್ತೀರ್ಣವಾದ ಗದ್ದೆ.

ಹಾಳುಮೂಳು = ಬೇಕಾಗಿದ್ದು ಬೇಡದಿದ್ದು ಎಲ್ಲಾ.

ಹಾಳು ಹೊಟ್ಟೆ = ಖಾಲಿ ಹೊಟ್ಟೆ, ಬೆಳಿಗ್ಗೆ ಎದ್ದ ಮೇಲೆ ಏನೂ ತಿನ್ನದಿರುವುದು.

ಹಾಳುಗರ್ದುಹೋಗ್ಲಿ = ಹಾಳಾಗಿ ಹೋಗಲಿ ಎಂಬ ಬೈಗುಳ.

ಹಾಳುಸುರಿ = ಪಾಳುಬಿದ್ದಿರುವುದು, ಒಂದು ಕಾಲಕ್ಕೆ ಚೆನ್ನಾಗಿದ್ದು ಈಗ ಹಾಳಾಗಿರುವುದು.

ಹಾಳೆ = ಕಾಗದ, ಕಾಗದದ ಪುಟ.

ಹಾಳೆ = ಅಡಿಕೆ ಗರಿಯ ಬುಡದ ಭಾಗ.

ಹಾಳೆ ಕೊಟ್ಟೆ = ಅಡಕೆ ಹಾಳೆಯಿಂದ ಮಾಡಿದ ತಲೆಯ ತೊಡುಗೆ.

ಹಿಂಗ = ಹೀಗಾ ? ಹೀಗೇನಾ?.

ಹಿಂಗಂತ = ಹೀಗಂತ, ಹೀಗೆಂದು.

ಹಿಂಗಾಗಿ = ಹೀಗಾಗಿ, ಈ ರೀತಿಯಾಗಿ.

ಹಿಂಗಾಗಲು = ಹೀಗಾಗಲು, ಈ ರೀತಿಯಾಗಲು.

ಹಿಂಗಾರ = ಸಿಂಗಾರ, ಅಡಕೆಯ ಹೂವು.

ಹಿಂಗಾರು = ಮಳೆಗಾಲದ ಕಡೆಯಲ್ಲಿ ಬೀಳುವ ಮಳೆಗಳು.

ಹಿಂಗು = ಬತ್ತಿ ಹೋಗು, ನೀರು ಕಡಿಮೆಯಾಗು, ಇಂಗು.

ಹಿಂಗ್ಸು = ೧. ಹೆಂಗಸು, ಮಹಿಳೆ, ೨. ಒಲೆಯ ಮೇಲಿಟ್ಟು ಇಂಗಿಸು.

ಹಿಂಗೆ = ಹೀಗೆ.

ಹಿಂಚೆಕಡೆ = ಹಿತ್ಲುಕಡೆ, ಮನೆಯ ಹಿಂಭಾಗ.

ಹಿಂಡ = ಹೆಂಡ, ಮತ್ತು ಬರಿಸುವ ಪಾನೀಯ.

ಹಿಂಡಿ = ಒಣಚರಟ, ಒಣಗಿದ ಕಡಲೆಕಾಯಿ ಸಿಪ್ಪೆ, ಎಣ್ಣೆ ತೆಗೆದ ನಂತರ ಉಳಿಯುವ ಕಾಯಿಯ ಸಿಪ್ಪೆ.

ಹಿಂಡ್ತಿ = ಹೆಂಡತಿ, ಮಡದಿ.

ಹಿಂಡು = ಗುಂಪು, ಸಮೂಹ.

ಹಿಂಡು = ಕಿವುಚು, ತಿರುಚು (ಬಟ್ಟೆ ಹಿಂಡು, ಕಿವಿಹಿಂಡು).

ಹಿಂಡ್ರು = ಹೆಂಡತಿಯರು.

ಹಿಂಡ್ಲು = ಮೆಳೆ, ಪೊದೆ (ಸೀಗೆಉಡಿ, ಬಿದಿರು ಹಿಂಡ್ಲು, ಕ್ಯಾದಿಗೆ ಹಿಂಡ್ಲು).

ಹಿಂಡ್ಲೆಕಾಯಿ = ದೀಪಾವಳಿಯಲ್ಲಿ ಬಳಕೆಗೆ ಬರುವ ಕಹಿಯಾದ ಕಾಯಿ (ತಿನ್ನಲು ಆಗುವುದಿಲ್ಲ) ಹಿಣ್ಲಚ್ಚೆಕಾಯಿ.

ಹಿಂದು = ಹಿಂದುಗಡೆ, ಬೆನ್ನ ಹಿಂದೆ, ಮನೆಯ ಹಿಂದೆ.

ಹಿಂದೆ = ಬಹಳ ಹಿಂದೆ, ಬಹಳ ಕಾಲದ ಹಿಂದೆ.

ಹಿಂದೇಟು ಹಾಕು = ಹಿಂಜರಿಯುವುದು, ಮುಂದುವರಿಯಲು ಅಂಜುವುದು.

ಹಿಂದುಳಿ = ಹಿಂದಕ್ಕೆ ಉಳಿದು

ಕೊಳ್ಳುವುದು, ಕಾಲಕ್ಕೆ ತಕ್ಕಂತೆ ಬದಲಾಗದೇ ಇರುವುದು.

ಹಿಂಜರಿ = ಅಳುಕು, ಸಂಕೋಚ ಪಟ್ಟುಕೊಳ್ಳುವುದು.

ಹಿಂಜರ್ಕಿ = ಅಳುಕು, ಸಂಕೋಚ, ಭಯ.

ಹಿಂಜು = ನೀರಿಗೆ ಹಾಕಿದ ನಂತರ ಬಟ್ಟೆಗಾತ್ರ ಕಳೆದುಕೊಳ್ಳುವುದು. ಎಳೆಗಳು ಮುದುಡಿಕೊಳ್ಳುವುದು.

ಹಿಂಬಾಳೆ = ಕೈಗೆ ಹಾಕುವ ಆಭರಣ.

ಹಿಕ್ಮತ್ತು = ಸಂಚು, ತಂತ್ರ.

ಹಿಕ್ಕು = ಕಣ್ಣಿನ ಪಿಸುರು, ಕಣ್ಣಿನಿಂದ ಬರುವ ಬಿಳಿಯ ಸಾಮಾನ್ಯ ಮೃದುವಸ್ತು.

ಹಿಕ್ಕೆ = ಪ್ರಾಣಿ ಪಕ್ಷಿಗಳ ಮಲ, ಪ್ರಾಣಿಗಳ ಕಾಳುಕಾಳಿನಂತೆ ಹಾಕುವ ಮಲ (ಕುರಿಹಿಕ್ಕೆ).

ಹಿಗ್ಗರಿ = ಬಿಕ್ಕು, ಬಿಕ್ಕಳಿಸಿ ಅಳುವುದು.

ಹಿಗ್ಗಾಮುಗ್ಗಾ = ಹಿಂದೆ ಮುಂದೆ, ಹೇಗೆಬೇಕೆಂದರೆ ಹಾಗೆ (ಹಿಗ್ಗಾಮುಗ್ಗಾ ಎಳೆದಾಡು).

ಹಿಗ್ಗು = ಸಂತೋಷ, ಗೆಲುವಾಗಿರುವುದು.

ಹಿಚಕೆ = ಪಕ್ಷಿಗಳ ಮಲ.

ಹಿಚ್ಚು = ಹಿಸುಕು, ಅಮುಕು.

ಹಿಟ್ಟು = ಪುಡಿ, ಧಾನ್ಯಗಳನ್ನು ಪುಡಿಮಾಡಿ ಧೂಳಿನಂತೆ ಮಾಡಿದ್ದು.

ಹಿಟ್ಟುಂಡೆ = ಗದ್ದೆಕೊಯ್ಲಿನ ನಂತರ ಗದ್ದೆಯಲ್ಲಿ ಬೆಳೆಯುವ ಬಿಳಿ ಹೂವಿನ ಕಳೆ/ಹುಲ್ಲು.

ಹಿಡ್ಕ = ೧.ಹಿಡಿದುಕೋ, ಕೈಯಲ್ಲಿ ಭದ್ರವಾಗಿ ಹಿಡಿ ೨.ಬೇರೆ ಪ್ರಾಣಿಗಳನ್ನು ಓಡಿಸು ಎಂದು ನಾಯಿಯನ್ನು 'ಛೂ' ಬಿಡುವುದು.

ಹಿಡ್ತ = ಹಿಡಿದುಕೊಳ್ಳುವುದು, ಅಂಕೆ.

ಹಿಡಿ = ಕಸಪರಕೆ, ಬರ್ಲು.

ಹಿಡಿ = ಹಿಡಿದುಕೋ.

ಹಿಡಿ = ಒಂದು ಸೆರೆ, ಒಂದು ಮುಷ್ಟಿ.

ಹಿಡಿಕುಂಟೆ = ಪೊರಕೆ, ಕಸಪೊರಕೆ, ಹಂಚಿಕಡ್ಡಿಯ ಪೊರಕೆ/ಹಿಡಿ.

ಹಿಡಿಗೂಟ = ಕಡೇ ಕಲ್ಲು/ಬೀಸೇಕಲ್ಲನ್ನು ತಿರುಗಿಸಲು ಹಿಡಿದು ಕೊಳ್ಳುವ ಗೂಟ/ಕೋಲು.

ಹಿಡಿಹುಲ್ಲು = ಹಂಚಿಕಡ್ಡಿಹುಲ್ಲು .

ಹಿಡ್ತಿ =ಹೆಂಡತಿ, ಮಡದಿ, ಹಿಂಡ್ತಿ.

ಹಿಡ್ಲು = ಪೊರಕೆ ೨. ಹರೆ, ರೆಂಬೆ, ಟಿಸಿಲು.

ಹಿಡುವಳಿ = ಒಡೆತನ, ಒಕ್ಕಲುತನ.

ಹಿಣ್ಣು = ಹೆಣ್ಣು, ಹೆಂಗಸು.

ಹಿಣ್ತಿ = ಹಿಂಡ್ತಿ, ಹೆಂಡತಿ, ಹಿಡ್ತಿ.

ಹಿಣ್ಲಚ್ಚಿಕಾಯಿ = ಹಿಂಡ್ಲೆಕಾಯಿ.

ಹಿತಶತ್ರು = ಎದುರಿಗೆ ಚೆನ್ನಾಗಿದ್ದು ಹಿಂದಿನಿಂದ ಹಗೆ ಸಾಧಿಸು ವವನು.

ಹಿತ್ತಾಳೆ ಕಿವಿ = ಯಾರು ಏನು ಹೇಳಿದರೂ ನಂಬುವವರು.

ಹಿತ್ಲು = ತರಕಾರಿ, ಕಬ್ಬು ಬೆಳೆಯುವ ಜಾಗ (ಸೌತೆಹಿತ್ಲು, ಕಬ್ಬಿನಹಿತ್ಲು).

ಹಿತ್ಲುಕಡೆ = ಹಿಂದುಗಡೆ, ಹಿಂಚೆಕಡೆ, ಮನೆಯ ಹಿಂದುಗಡೆ.

ಹಿತ್ಲುದಾರಿ = ೧.ಮನೆಯ ಹಿಂಭಾಗದ ಬಾಗಿಲು ೨.ಗುಟ್ಟಿನ ದಾರಿ, ಅಡ್ಡದಾರಿ, ಅನೈತಿಕ ಹಾದಿ.

ಹಿನ್ನು = ಇನ್ನು, ಮತ್ತೆ.

ಹಿಮ್ಮಂಡಿ = ಎತ್ತಿನ ಗಾಡಿಯಲ್ಲಿ ಹಿಂದಕ್ಕೆ ಜಾಸ್ತಿ ಭಾರವನ್ನು ಹಾಕುವುದು.

ಹಿಮ್ಡಿ =ಹಿಮ್ಮಡಿ, ಕಾಲಿನ ಪಾದಗಳ ಹಿಂಭಾಗ.

ಹಿಮ್ಮಡಿ = ಹಿಮ್ಡಿ.

ಹಿರಿ = ಎಳೆ, ಎಳೆದುಹಾಕು (ಬೆಂಕಿಹಿರಿ, ಚಪ್ಪರಹಿರಿ).

ಹಿರಿಮಗ = ಮಕ್ಕಳಲ್ಲಿ ಮೊದಲ ಮಗ.

ಹಿಸಿ = ಹರಿ, ಇಬ್ಭಾಗ ಮಾಡು, ಚಿಂದಿಮಾಡು.

ಹಿಸೆ = ಪಾಲು, ಭಾಗ, ಅಣ್ಣ ತಮ್ಮಂದಿರು ಆಸ್ತಿಯನ್ನು ಭಾಗ ಮಾಡಿ ಹಂಚಿಕೊಳ್ಳುವುದು.

ಹಿಸ್ಸೆ = ಹಿಸೆ.

ಹಿಸ್ಸೆದಾರ = ಪಾಲುದಾರ, ಭಾಗಸ್ಥ.

ಹಿಳ್ಳು = ಹೊಸದಾಗಿ ಹಲವು ರೆಂಬೆಗಳು ಮೊಳೆಯುವುದು, ಹರೆ, ಪಿಳಿಕೆ, ಚಿಗುರು.

ಹಿಳುಕು = ಎಸಳು, ಬೇಳೆ ಬೆಳ್ಳುಳ್ಳಿಯ ಒಂದು ಬೇಳೆ.

ಹಿಳ್ಕು = ಹಿಳುಕು.

ಹೀಗೂ = ಹೀಗೆ, ಇದರಂತೆ.

ಹೀನಾಮಾನ = ಸಿಕ್ಕಾಪಟ್ಟೆ, ಬಾಯಿಗೆ ಬಂದಂತೆ, ಅಪಮಾನ ವಾಗುವಂತೆ.

ಹೀಯಾಳ್ಸು = ಚಾಳಿಸು, ರೇಗಿಸು, ಅಪಮಾನಮಾಡು.

ಹೀರು = ೧.ಕುಡಿ, ೨.ಶೋಷಣೆ ಮಾಡು (ಅಲಂ).

ಹುಂ = ಆಯ್ತು, ಸರಿ.

ಹುಂಜ = ಗಂಡುಕೋಳಿ.

ಹುಂಟುಕೋಳಿ = ಹಳ್ಳದ ಬದಿಯಲ್ಲಿರುವ ಉದ್ದಕಾಲಿನ ಸಣ್ಣಹಕ್ಕಿ.

ಹುಂಡಿ = ಕಾಣಿಕೆ ಡಬ್ಬ, ಗೋಲಕ.

ಹುಂಡಿ = ಮದುವೆಯಾಗಲು ಬಂದಿರುವ ಸಂಬಂಧ.

ಹುಂಡು = ಹನಿ, ನೀರಹನಿ, ತೊಟ್ಟು, ಸ್ವಲ್ಪ.

ಹುಂಡ್ರು = ಕಿತಾಪತಿ, ಚೇಷ್ಟೆ, ಕಿತ್ಗ.

ಹುಂಡುಕೋಳಿ = ಕೆರೆ ಅಥವಾ ನೀರಿನ ಜೊಂಡಿನಲ್ಲಿ ವಾಸಿಸುವ ಹಕ್ಕಿ, ಹುಂಟುಕೋಳಿ.

ಹುಕ್ಳ = ಹೊಕ್ಕಳು, ನಾಭಿ.

ಹುಕ್ಳಬಳ್ಳಿ = ಗರ್ಭದಲ್ಲಿರುವ ಮಗುವಿಗೆ ಆಹಾರ ಸರಬರಾಜು ಮಾಡುವ ನಾಳ.

ಹುಕುಮ್ಮು = ಅಪ್ಪಣೆ, ಆಜ್ಞೆ.

ಹುಗಿ = ಹೂಳು, ನೆಲದಲ್ಲಿ ಕುಣಿಮಾಡಿ ಮುಚ್ಚು, ಕುಣಿಯಲ್ಲಿಟ್ಟು ಮುಚ್ಚು, ಮಣ್ಣುಮಾಡು.

ಹುಗ್ಗಿ ಅನ್ನ = ಅಕ್ಕಿ, ಮೆಂತೆ, ಬೆಲ್ಲ ಸೇರಿಸಿ ಮಾಡಿದ ಅನ್ನ.

ಹುಗುಳು = ನಿಂತ ನೀರು ಕಂಡಿ ಮಾಡಿಕೊಂಡು ಹೊರನುಗ್ಗುವ ಜಾಗ/ಕುಣಿ (ಗದ್ದೆಯಲ್ಲಿ).

ಹುಚ್ಮಳೆ = ಸಿಕ್ಕಾಪಟ್ಟೆ ಮಳೆ, ಅತಿವೃಷ್ಟಿ.

ಹುಚ್ಚಾಟ = ಮನಸ್ಸಿಗೆ ಬಂದಂತೆ ವರ್ತಿಸುವುದು.

ಹುಚ್ಚಾಪಟ್ಟೆ = ಸಿಕ್ಕಾಪಟ್ಟೆ, ಮಿತಿಯಿಲ್ಲದ.

ಹುಚ್ಚು = ಉನ್ಮಾದ, ಗೀಳು, ಚಟ, ಹವ್ಯಾಸ.

ಹುಟ್ಟಡಗಿಸು = ನಿರ್ನಾಮ ಮಾಡು, ಇಲ್ಲದಂತೆ ಮಾಡು.

ಹುಟ್‌ಮುರು = ಮಗುವಿಗೆ ಕಿವಿ ಚುಚ್ಚಿಸಿ ಮೊದಲು ತೊಡಿಸುವ ಕಿವಿಯ ಆಭರಣ/ಮುರುಗು, ತಾಮ್ರದ ಮುರುಗು.

ಹುಟ್ಟು = ಹುಟ್ಟುವಿಕೆ, ಜನನ, ಜನ್ಮ.

ಹುಟ್ಟು = ಜೇನುಗೂಡು, ಜೇನುಹುಟ್ಟು.

ಹುಟ್ಟು = ಸೌಟು, ಅನ್ನ ಬಡಿಸುವ ಕೈ(ಅನ್ನದ ಹುಟ್ಟು).

ಹುಟ್ಗುಣ = ಹುಟ್ಟುಗುಣ, ಹುಟ್ಟಿನಿಂದಲೇ ಬಂದ ಚಾಳಿ.

ಹುಟ್ಟುಮಚ್ಚೆ = ಜನ್ಮದಾರಭ್ಯ /ಹುಟ್ಟಿನಿಂದ ಶರೀರದ ಮೇಲಿರುವ ಕಲೆ/ಚಿಹ್ನೆ.

ಹುಟ್ಟುಮರುಗು = ತಾಮ್ರದ ಮುರುಗು, ಅದರಲ್ಲೆ ಕಿವಿ ಚುಚ್ಚಿ ಅದನ್ನೇ ಆಭರಣದಂತೆ ಬಳಸುವುದು, ಹುಟ್‌ಮುರು

ಹುಟ್ಟುಡುಗೆ = ಬೆತ್ತಲೆ, ಬರಿಮೈ.

ಹುಟ್ಟುಹಾಕು = ಮೊದಲು ಕಾರ್ಯರೂಪಕ್ಕೆ ತರುವುದು.

ಹುಟ್ಟುಹಾಕು = ಚಿಕ್ಕಾಣಿ ಹಿಡಿದು ದೋಣಿ ನಡೆಸುವುದು.

ಹುಟ್ಟೆಸ್ರು = ಹುಟ್ಟಿದಾಗ ಇಟ್ಟ ಹೆಸರು, ಜಾತಕದ ಹೆಸರು, ಜೋಯಸರು ಸಮಯ, ದಿನ ನಕ್ಷತ್ರ ಲೆಕ್ಕಾಚಾರ ಹಾಕಿ ಹೇಳಿದ ಹೆಸರು.

ಹುಡಿ = ಪುಡಿ, ಹಿಟ್ಟು, ಧೂಳು.

ಹುಡಿಹಾರ್ಸು = ದುಂದುವೆಚ್ಚಮಾಡು,. ವೈಭವದಿಂದ ಮೆರೆಯುವುದು.

ಹುಡುಕು = ಅರಸು, ಪತ್ತೆ ಹಚ್ಚು.

ಹುಡುಗ = ಬಾಲಕ, ಎಳೆ ವಯಸ್ಸಿನವ.

ಹುಡುಗಾಟ = ಚೆಲ್ಲಾಟ, ವಿನೋದ.

ಹುಡುಗಾಟ್ಗೆ = ಹುಡಗಾಟಿಕೆ, ಹುಡುಗಾಟ.

ಹುಡುಗಿ = ಬಾಲಕಿ, ಎಳೆಯವಳು.

ಹುಡುಗುಬುದ್ಧಿ = ಅಪ್ರಭುದ್ಧತೆ, ಹುಡುಗಾಟಿಕೆ.

ಹುಡುಗ್ರು = ಹುಡುಗರು, ಮಕ್ಕಳು.

ಹುಣ್ಣು = ವ್ರಣ, ಬಕ್ಕೆ, ದಪ್ಪಕಜ್ಜಿ.

ಹುಣ್ಮೆ = ಹುಣ್ಣಿಮೆ, ಪೌರ್ಣಿಮೆ.

ಹುತ್ತ = ಹಾವುಗಳು ವಾಸಿಸುವ ಸ್ಥಳ, ಗೆದ್ದಲು ಹುಳುಗಳು ಕಟ್ಟಿದ ಗೂಡು.

ಹುತ್ರ = ಗುಪ್ಪೆ, ರಾಶಿ, ಹುತ್ತದಂತೆ ಎಂಬ ಹೋಲಿಕೆ.

ಹುತ್ತುತ್ರ = ಗುಪ್ಪೆಗುಪ್ಪೆ, ರಾಶಿರಾಶಿ (ಕಜ್ಜಿ ಹುತ್ತುತ್ರಾಗಿ ಎದ್ದಿದ್ದು).

ಹುದಗು = ನೆನೆಸಿ ರುಬ್ಬಿದ ಹಿಟ್ಟು ಕೆಲವು ಗಂಟೆಗಳ ನಂತರ ಉಬ್ಬಿ ಬರುವುದು.

ಹುದುಗು = ಅಡಗು, ಮರೆಯಾಗು.

ಹುನ್ನಾರ = ಕಿತಾಪತಿ, ಉಪಾಯ, ಮಸಲತ್ತು.

ಹುಪ್ಪಟ್ಟೆ = ಹುಳ, ಕೀಟಗಳು.

ಹುಪ್ಪಟ್ಟೆ = ತುಂಬಾಹುಳಿ.

ಹುಪ್ಪಟ್ಟೆಹುಳಿ = ತುಂಬಾ ಹುಳಿ ಎಂದು ಒತ್ತಿ ಹೇಳುವುದು.

ಹುಬ್ಬು = ಕಣ್ಣಿನ ಮೇಲ್ಭಾಗದಲ್ಲಿರುವ ಕೂದಲಿನ ಸಾಲು.

ಹುಬ್ಬುಗಂಟಿಕ್ಕು = ಎರಡು ಹುಬ್ಬುಗಳನ್ನು ಬಿಗಿಗೊಳಿಸು (ಅಲಂ) ಅಸಮಾಧಾನವನ್ನು ವ್ಯಕ್ತಪಡಿ

ಸುವುದು.

ಹುಮ್ಮಸ್ಸು = ಆಸಕ್ತಿ, ಲವಲವಿಕೆ, ಉತ್ಸಾಹ.

ಹುಮ್ಮಹುಮ್ಮ = ಎತ್ತುಗಳು ಕೆಲಸದಲ್ಲಿ ಚುರುಕಾಗಲು ಆಗಾಗ ಎಚ್ಚರಿಸುವ ಮಾತು.

ಹುಯ್ಗಡಬು = ಸರಗೋಲಿಗೆ ಬಾಳೆಯೆಲೆ ಹಾಕಿ ಹಿಟ್ಟನ್ನು ಹೊಯ್ದು ಬೇಯಿಸಿದ ತಿಂಡಿ.

ಹುಯ್ಯಿ = ಹುಯ್ಯು, ಗಿಡಗಳಿಗೆ ನೀರು ಹಾಕುವುದು, ಮಳೆ ನೀರು ಸುರಿಯುವುದು.

ಹುಯ್ಗೆ = ಮರಳು.

ಹುಯ್ಯು = ಬಗ್ಗಿಸು, ಚೆಲ್ಲು, ಸುರಿ.

ಹುಯ್ಲು = ದೇವಸ್ಥಾನದಲ್ಲಿ ಕೊಡುವ ದೂರು.

ಹುರ್ದಕ್ಕಿ ಗಂಜಿ = ಅಕ್ಕಿಯನ್ನು ಹುರಿದು ಬೀಸಿ ಅದರ ರವೆಯನ್ನು ನೀರಲ್ಲಿ ಬೇಯಿಸಿ ಮಾಡಿದ ಗಂಜಿ.

ಹುರಕ್ಕಿ ಹಿಟ್ಟು = ಅಕ್ಕಿಯನ್ನು ಹುರಿದು ಬೀಸಿ ಮಾಡಿದ ಪುಡಿ.

ಹುರಕ್ಕಿ = ಹುರಿದ ಅಕ್ಕಿ.

ಹುರಿ = ಹಗ್ಗ, ನಾರನ್ನು ಮಸೆದು ಬೆಸೆದಿದ್ದು.

ಹುರಿ = ಬಾಣಲೆಯಲ್ಲಿ ಬಾಡಿಸು, ಕಾಳುಗಳನ್ನು ಬಿಸಿಮಾಡು.

ಹುರುಕ್ಲು = ಹುರಿದ ತರಕಾರಿ ಪಲ್ಯ.

ಹುರ್ತುಂಡು = ಹುರಿದ ತುಂಡು, ಹುರಿದ ಮಾಂಸದ ಚೂರುಗಳು.

ಹುರುಪೆ = ಹೊಟ್ಟು, ಗಾಯದ ಮೇಲಿನ ಒಣಗಿದ ಚರ್ಮ.

ಹುರುಳಿ ಹಕ್ಕಿ = ರೆಕ್ಕೆಯಲ್ಲಿ ಬಿಳಿಬಣ್ಣದ ಚಿತ್ರವಿರುವ ಸಣ್ಣ ಹಕ್ಕಿ.

ಹುಲ್ಲಟ್ಟ = ಮಳೆಗಾಲಕ್ಕೆಂದು ದನಕರುಗಳಿಗೆ ಒಣ ಹುಲ್ಲು ಕೂಡಿಡುವ ಕೊಟ್ಟಿಗೆಯು ಮೇಲಿನ ಅಟ್ಟಣಿಗೆ/ ಅಟ್ಟ.

ಹುಲಿ = ಕಾಡಿನ ಕ್ರೂರ ಮೃಗ, ಮಾಂಸಾಹಾರಿ.

ಹುಲಿ = ಹೊಲಿ, ಹೊಲಿಗೆ ಹಾಕು.

ಹುಲಿ ತೊರಡುಮರ = ದೊಡ್ಡದಾದ ಉದ್ದುದ್ದ ದಪ್ಪ ಕಾಯಿಗಳನ್ನು ಬಿಡುವ ಮರ.

ಹುಲಿ ಬಡ್ಡಿ = ಅಡಿಕೆ, ಬತ್ತ, ಬೆಲ್ಲ ಮುಂತಾದುವನ್ನು ಸಾಲ ಕೊಟ್ಟು, ಸುಗ್ಗಿಯ ನಂತರ ಒಂದಕ್ಕೆ ಎರಡರಷ್ಟು ವಸೂಲು ಮಾಡುವುದು.

ಹುಲಿಬತ್ತ = ಸಾಲಕ್ಕೆ ಬತ್ತ ತಂದು ಸುಗ್ಗಿಯಲ್ಲಿ ಹೆಚ್ಚು ಬತ್ತವನ್ನೇ ಕೊಟ್ಟು ತೀರಿಸುವುದು.

ಹುಲ್ಗಿ = ಹೊಲಿಗೆ.

ಹುಲಿಬೆಕ್ಕು = ಹುಲಿಯಂತೆ ಬಣ್ಣ ಪಟ್ಟೆ ಕೋಳಿಯನ್ನು ಹಿಡಿದು ತಿನ್ನುತ್ತದೆ. ಬೆಕ್ಕಿನಷ್ಟು ಗಾತ್ರ.

ಹುಲ್ಗಿ ಹಣ್ಣು = ಪೊದೆಯಲ್ಲಿ ಬೆಳೆಯುವ ಹಸಿರುಕಾಯಿ ಮತ್ತು ಹುಳಿಯಾದ ಕೆಂಪುಹಣ್ಣು.

ಹುಲಿಯಾಸ = ಮೊಹರಂ/ದೀಪಾವಳಿ/ ನವರಾತ್ರಿಯಲ್ಲಿ ಹುಲಿಯಂತೆ ಬಣ್ಣ ಬಳಿದುಕೊಂಡು ತಾಳಕ್ಕೆ ತಕ್ಕಂತೆ ಕುಣಿಯುತ್ತಾ ದಾರಿಯುದ್ದಕ್ಕೂ ಹೋಗುವುದು,

ಹುಲಿವೇಷ.

ಹುಲಿಯುಗುರು = ಹುಲಿಯ ಕಾಲುಗಳ ಪಂಜೆ, ಅದನ್ನು ಚಿನ್ನದೊಂದಿಗೆ ಪೋಣಿಸಿ ಆಭರಣವಾಗಿ ಧರಿಸುತ್ತಾರೆ.

ಹುಲಿಹುಣ್ಣು = ಸದಾ ಥಂಡಿಯಲ್ಲಿ-ರುವವರಿಗಾಗುವ ಕಾಲಿನ ಪಾದದಡಿಯಲ್ಲಿ ತೂತು ತೂತಾಗಿರುವುದು.

(ದೋಣಿ ನಡೆಸುವವರಿಗೆ ಹೆಚ್ಚಾಗಿ ಹುಲಿಹುಣ್ಣಾಗುತ್ತದೆ).

ಹುಲುಸು = ಸಮೃದ್ಧಿ.

ಹುಲ್ಲು = ತೃಣ, ಗರಿಕೆ.

ಹುಲ್ಕುತ್ರೆ = ಹುಲ್ಲಿನ ಬಣವೆ, ಬತ್ತವನ್ನು ತೆಗೆದ ಹುಲ್ಲನ್ನು ಹಾಕಿದ ರಾಶಿ.

ಹುಲ್ಲು ಚಂಡೆ = ಪಾತ್ರೆ ತೊಳೆಯಲು, ಜಾನುವಾರುಗಳ ಮೈ ತೊಳೆಯಲು ಮಾಡಿದ ಹುಲ್ಲಿನ ಮುದ್ದೆ/ಚೆಂಡು.

ಹುಲ್ಲು ಹುಳ = ದನ ಮೇಯಿಸುವವರಿಗೆ ಮಳೆಗಾಲದಲ್ಲಿ ಸಾರಣಿ ಕಣ್ಣಿನಂತಾದ ಪಾದ.

ಹುಲ್ಲೇಡಿ = ಹುಲ್ಲಿನ ಮೆಲೆ ಹರಿದಾಡುವ ಸಣ್ಣ ಕೆಂಬರುಬಣ್ಣದ ಏಡಿ.

ಹುಶಾರಿ = ಅತಿಜಾಗರೂಕ, ಯಾವುದೇ ಇಕ್ಕಟ್ಟಿಗೂ ಸಿಕ್ಕಿಹಾಕಿಕೊಳ್ಳದವನು.

ಹುಸಾರು = ಹುಷಾರು, ಆರೋಗ್ಯ.

ಹುಸಾರು = ಜಾಗ್ರತೆ, ಜಾಗರೂಕತೆ.

ಹುಸಿ = ಸುಳ್ಳು, ಸಟೆ.

ಹುಸಿಗುಂಡು = ಬೆದರುಗುಂಡು.

ಹುಸಿ ಬ್ಯಾನೆ = ದಿನ ತುಂಬಿದ ಗರ್ಭಿಣಿಗೆ ನೋವು ಆಗಾಗ ಬಂದು ಹೆರಿಗೆಯಾಗದಿರುವುದು.

ಹುಳ = ಹುಳು, ಕ್ರಿಮಿ, ಕೀಟ.

ಹುಳ್ಳಗೆ = ಉಪ್ಪು, ಹುಳಿ, ಖಾರದಿಂದ ಕೂಡಿದ, ಬಾಯಿಗೆ ರುಚಿಯಾದ.

ಹುಳ್ಚಪ್ಪು = ದೊಡ್ಡ ಹಿಡಿಬರ್ಲು ಮಾಡುವ ಗಿಡ, ಒಂದು ಬಗೆಯ ಸೊಪ್ಪು, (ದನಕರುಗಳ ಮೇವು).

ಹುಳಿ = ಹುಣಿಸೆಹಣ್ಣು.

ಹುಳಿಓಡು = ದೀರ್ಕನ ಕಾಯಿ / ವಾಟೆಹುಳಿಯನ್ನು ಹೆಚ್ಚಿ ಒಣಗಿಸಿದ್ದು.

ಹುಳಿತೇಗು = ಅಜೀರ್ಣದಿಂದಾಗಲೀ, ವಾಯುಪ್ರಕೋಪದಿಂದಾಗಲೀ ಬಾಯಿಂದ ಬರುವ ವಾಯು/ತೇಗು.

ಹುಳಿಹಿಂಡು = ಚೆನ್ನಾಗಿರುವವರ ಮಧ್ಯೆ ವೈಮನಸ್ಸು ತರುವುದು, ವಿರಸ ತರುವುದು, ಬೇಧಮಾಡುವುದು.

ಹುಳ್ಳಿ = ಹುರುಳಿ, ಒಂದು ಧಾನ್ಯ.

ಹುಳ್ಳಿ ಕಟ್ಟು = ಹುರುಳಿಯನ್ನು ಬೇಯಿಸಿ ತೆಗೆದ ರಸ.

ಹುಳ್ಳಿಕಟ್ಟು ಸಾರು = ಹುಳ್ಳಿ ಕಟ್ಟಿಗೆ ಉಪ್ಪು ಹುಳಿ, ಕಾರ ಸೇರಿಸಿ ಮಾಡಿದ ಸಾರು.

ಹುಳುಕಡ್ಡಿ = ಒಂದು ಚರ್ಮರೋಗ.

ಹುಳುಕಲ್ಲು = ಹುಳಹಿಡಿದು ತೂತಾಗಿರುವ/ ಕಪ್ಪಗಾಗಿರುವ ಹಲ್ಲು.

ಹುಳುಕು = ಹುಳ ಹಿಡಿದ/ಹುಳದಿಂದ

ಹಾಳಾಗಿರುವ ಪದಾರ್ಥ.

ಹುಳುಕು = ಕೆಟ್ಟಬುದ್ಧಿ, ದುರ್ವರ್ತನೆ, ದುಶ್ಚಟ (ಅಲಂ).

ಹುಳ್ಳುಳ್ಳಗೆ = ೧.ಹುಳ್ಳಗೆ ೨.ಮುಖದಲ್ಲಿ ತಪ್ಪಿತಸ್ಥ ಮನೋಭಾವ ತೋರಿಸುವುದು.

ಹೂಂ = ಸರಿ, ಹೌದು, ಆಯ್ತು, ಹುಂ.

ಹ್ಹೂಂ = ೧.ಉಳುಮೆ ಮಾಡುವಾಗ ಎತ್ತುಗಳಿಗೆ ಬಲಭಾಗಕ್ಕೆ ತಿರುಗಲು ಸೂಚನೆ ಕೊಡುವುದು ೨.ಹೂಗುಟ್ಟುವುದು, ಸಮ್ಮತಿ ಸೂಚಿಸುವುದು.

ಹೂಂಜ = ಗಂಡು ಕೋಳಿ, ಹುಂಜ.

ಹೂ = ಹೂವು, ಸುಮ.

ಹೂ = ಕಣ್ಣು ಗೊಂಬೆಯ ಮೇಲೆ ಉಂಟಾಗುವ ಬಿಳಿಯ ಮಚ್ಚೆ/ಪೊರೆ.

ಹೂಕುಯ್ಯು = ಗಿಡದಿಂದ ಹೂವನ್ನು ಕೀಳುವುದು, ಹೂ ಬಿಡಿಸುವುದು.

ಹೂ ಕೂರುವುದು = ಕಣ್ಣಿಗೆ ಪರೆ ಬೆಳೆಯುವುದು, ಕಣ್ಣಿಗೆ ಹೊಡೆತ ಬಿದ್ದು ಅಲ್ಲಿ ಬಿಳಿಯ ಗುರುತು ಉಳಿಯುವುದು.

ಹೂಡು = ಉಳುಮೆ ಮಾಡು.

ಹ್ಹೂಣಾ = ಸರಿಕಣೋ, ಆಯ್ತು ಕಣೋ (ಪು).

ಹೂನ್ಸು = ಹೂಸು, ಹೊಟ್ಟೆಯಲ್ಲಿ ತುಂಬಿದ ಗಾಳಿ ಗುದದ್ವಾರದ ಮೂಲಕ ಹೊರಗೆ ಹೋಗುವುದು.

ಹೂಟಿ = ಉಳುಮೆ, ಬೇಸಾಯ.

ಹ್ಹೂಣೇ = ಸರಿಕಣೇ, ಆಯ್ತು ಕಣೇ (ಸ್ತ್ರೀ).

ಹೂದ್ಲು = ಮಣ್ಣು/ಪದಾರ್ಥಗಳು ಹತ್ತಿಯಂತೆ ಮೃದು ವಾಗಿರುವುದು.

ಹೂಬಿಡು = ಹೂವಾಗು, ಹೂ ಅರಳು.

ಹೂಮುಡಿಸುವ ಶಾಸ್ತ್ರ = ನಿಶ್ಚಿತಾರ್ಥ.

ಹೂಯ್ದಕ್ಕಿ ಬೇಯಲ್ಲ (ಅಲಂ) = ಒಬ್ಬರಿಗೊಬ್ಬರನ್ನು ಕಂಡರಾಗದು (ಅವರಿಗೆ ಹೂಯ್ದಕ್ಕಿ ಬೇಯಲ್ಲ).

ಹೂರ್ಣ = ಹೂರಣ, ಬೇಯಿಸಿದ ಬೇಳೆ ಮತ್ತು ಬೆಲ್ಲದ ಮಿಶ್ರಣ.

ಹೂವಿನ ಕೋಲು = ನವರಾತ್ರಿಯಲ್ಲಿ ಒಂಭತ್ತು ದಿನಗಳು ಬಾಲಕರು ಮನೆಮನೆಗೆ ಹೋಗಿ ಹಾಡಿ ಹರಸುವಾಗ ಹಿಡಿದುಕೊಳ್ಳುವ ಬೆಂಡುಹೂವಿನ ಕೋಲು (ಆಶ್ವಯಜ ಶುದ್ಧ ಮಾರ್ನೋಮಿ ಬರಲೆಂದು, ಲೇಸಾಗಿ ಹರಿಸಿದೆವು ಬಾಲಕರು ಬಂದು)

ಹೂಸು = ಹೂನ್ಸು.

ಹೂಳು = ಕೆರೆಬಾವಿಗಳಿಗೆ ತುಂಬಿಕೊಳ್ಳುವ ಮಣ್ಣು, ಉಸುಬು

ಹೂಳೆತ್ತು = ಹೂಳು ಹೊರ ತೆಗೆಯುವುದು.

ಹೆಂಗ = ಹೆಂಗೆ, ಹೇಗೆ.

ಹೆಂಗರ = ಹೇಗಾದರೂ.

ಹೆಂಗರ = ಹೆಣ್ಣು ಕರು.

ಹೆಂಗಾರ = ಹೇಗಾದರೂ.

ಹೆಂಗಸು = ಸ್ತ್ರೀ, ನಾರಿ, ವನಿತೆ.

ಹೆಂಗೆ = ಹೇಗೆ.

ಹೆಂಗೆಂಗೊ = ಹೇಗೆ ಹೇಗೋ, ಮನಬಂದಂತೆ, ಹೇಗಾದರೂ.
ಹೆಂಚು = ಹಂಚು, ಮನೆಗೆ ಹೊದಿಸುವ ಮಣ್ಣಿನ ಹೆಂಚು.
ಹೆಂಟೆ = ಮಣ್ಣಿನ ಮುದ್ದೆ, ಗಂಟಾದ ಮಣ್ಣು, ಮುದ್ದೆ.
ಹೆಂಟೆಗೊದ್ದ = ಊಸರವಳ್ಳಿ.
ಹೆಂಡ = ಮಧ್ಯ, ಸಾರಾಯಿ.
ಹೆಂಡತಿ = ಪತ್ನಿ, ಸತಿ.
ಹೆಂಡದಂಗಡಿ = ಸಾರಾಯಿ ಮಾರುವ ಸ್ಥಳ.
ಹೆಂಬೇಡಿ = ಹೆಣ್ಣಿಗ, ಹೇಡಿ.
ಹೆಕ್ಕು = ಆಯು, ಆರಿಸಿಕೊಳ್ಳು.
ಹೆಗಲು = ಭುಜ.
ಹೆಗಲುಕೊಡು = ನೆರವಾಗು, ಸಹಾಯಮಾಡು, ನೆರವು ನೀಡು.
ಹೆಗ್ಗಣ = ದೊಡ್ಡ ಜಾತಿಯ ಇಲಿ ತರಹದ ಪ್ರಾಣಿ.
ಹೆಗ್ಗಪ್ಪು = ದೊಡ್ಡಕಪ್ಪು, ದೊಡ್ಡಕಾಲುವೆ.
ಹೆಗ್ಗಂಬಳಿ = ದೊಡ್ಡ ಕಂಬಳಿ.
ಹೆಗ್ಗಡ್ತಿ = ಹೆಗ್ಗಡಿತಿ, ಯಜಮಾನಿ.
ಹೆಗ್ಗಡೆ = ಮುಖ್ಯಸ್ಥ, ಯಜಮಾನ.
ಹೆಗ್ಗಾಲು ಅಳಬಿ = ಗೆದ್ದಲು ಮಣ್ಣು/ಹುತ್ತದ ಮಣ್ಣಿನಲ್ಲಿ ಗುಡುಗಿದ ಮರುದಿನ ಏಳುವ ವಿಶೇಷ ವಾದ ದೊಡ್ಡ ಅಣಬೆ, ಹೆಗ್ಗಾಲಳಬಿ.
ಹೆಗ್ಗೆಸ = ದೊಡ್ಡಜಾತಿಯ ಕೆಸು.
ಹೆಚ್ಚು = ಕೊಚ್ಚು, ತುಂಡು ಮಾಡು.
ಹೆಚ್ಚು = ಜಾಸ್ತಿ, ಸುಮಾರು.
ಹೆಜ್ಜೆ = ಕಾಲು, ಪಾದ.
ಹೆಜ್ಜೇನು = ದೊಡ್ಡ ಜಾತಿಯ ಜೇನು ದೊಡ್ಡ ದೊಡ್ಡ ಮರಗಳಲ್ಲಿ ಗೂಡು ಕಟ್ಟುತ್ತವೆ.
ಹೆಡ = ಇಡಿಯ ಬಾಳೆಯ ಎಲೆ.
ಹೆಡಗೆ = ದೊಡ್ಡ ಕುಕ್ಕೆ.
ಹೆಡ್ಲು = ತೆಂಗಿನಗರಿ.
ಹೆಣ = ಶವ.
ಹೆಣಗು = ಪ್ರಯತ್ನ ಮಾಡು, ಕಾದಾಡು.
ಹೆಣಭಾರ = ಹೆಣದಂತೆ ಭಾರವಿರುವ (ಹೋಲಿಕೆ).
ಹೆಡ್ಡ = ದಡ್ಡ.
ಹೆಡ್ಡತನ = ದಡ್ಡತನ.
ಹೆಡಿಗೆ ಬಳ್ಳಿ = ಸ್ವಲ್ಪ ದಪ್ಪಗಿರುವ ಬಳ್ಳಿ, ಹೆಡಿಗೆಯನ್ನು ಮಾಡುತ್ತಾರೆ.
ಹೆಡ್ಡಿ = ಎಗ್ಗಿ, ಪೆದ್ದಿ.
ಹೆಣಗಾಟ = ಹೋರಾಟ.
ಹೆಣ್ಗರ = ಹೆಣ್ಣು ಕರು, ಹೆಂಗರ.
ಹೆಣೆಗೆ = ನೇಯ್ಗೆ, ಹೆಣೆಯುವಿಕೆ.
ಹೆಣ್ಣಿಗ = ಹೆಂಡತಿಗೆ ಹೆದರುವವನು.
ಹೆಣ್ಮೊಗ = ಹೆಣ್ಣು ಮಗು.
ಹೆದ್ದಾರಿ = ಮುಖ್ಯರಸ್ತೆ, ದೊಡ್ಡದಾರಿ.
ಹೆದ್ರಿಕೆ = ಹೆದರಿಕೆ.
ಹೆದ್ದುಂಬೆ = ದೊಡ್ಡ ಜಾತಿಯ ತುಂಬೆ ಗಿಡ, ಏಡಿಕುಣಿಗೆ ಇದರ ಸೊಪ್ಪು ತುರುಕಿದರೆ ಏಡಿಗಳು ಸಾಯುತ್ತವೆ.
ಹೆಪ್ಪು = ಹಾಲಿಗೆ ಮಜ್ಜಿಗೆ ಸೇರಿಸುವಿಕೆ, ಮೊಸರು ಮಾಡುವುದು.
ಹೆಬ್ಬಲ್ಸು = ಒಂದು ಜಾತಿಯ ಕಾಡಿನ ಹಲಸು.
ಹೆಬ್ಬಾವು = ದೊಡ್ಡ ಹಾವು, ವಿಷದ

ಹಲ್ಲಿಲ್ಲ. ಪ್ರಾಣಿಗಳನ್ನು ಇಡಿಯಾಗಿ ನುಂಗುತ್ತದೆ.

ಹೆಬ್ಬಾಗ್ಲು = ಮನೆಯ ಮುಂದಿನ ದೊಡ್ಡ ಬಾಗಿಲು.

ಹೆಬ್ಬುಬ್ಬೆ = ಬೇಕೆಂದೇ ಬೇರೆಯವರನ್ನು ಹೊಗಳುವುದು, ತೋರುಗಾಣಿಕೆ.

ಹೆಬ್ಬೆಟ್ಟು = ಹೆಬ್ಬೆರಳು.

ಹೆಬ್ಬೆಳ್ಳು = ಹೆಬ್ಬೆಟ್ಟು.

ಹೆರಕು = ಹೆಕ್ಕು, ಆಯು, ಆರಿಸು.

ಹೆರಕಡೆ = ಹೊರಗಡೆ, ಮಲವಿಸರ್ಜನೆ.

ಹೆರ್ಕಣೆ = ಕೊಯ್ಲು ಆದ ಮೇಲೆ ಹಂದಿ, ಕಾಡುಕೋಳಿ, ನವಿಲು, ಹಕ್ಕಿಗಳು ಗದ್ದೆಂಯುಲ್ಲೆಲ್ಲಾ ಸುತ್ತಾಡಿ ಆಂಯ್ದುಕೊಳ್ಳುವ ಬತ್ತದ ಕಾಳುಗಳು ತೆನೆಗಳು.

ಹೆಕ್ಕಣೆ ಬತ್ತ = ಹೆಕ್ಕಣೆ.

ಹೆರಗೆ = ಹೊರಗೆ.

ಹೆರಸು = ಕೆರೆ, ಕೆರೆದು ತೆಗೆ, ಬೋಳಿಸು (ಬೋಳಿಸು).

ಹೆರಗಾಗು = ಹೊರಗಾಗು, ಮುಟ್ಟಾಗು, ರಜಸ್ವಲೆಯಾಗು.

ಹೆರಜಲು = ಹಾವಿನ ಪೊರೆ, ಮೀನಿನ ಮೈಮೇಲಿನ ಬಿಡಿಬಿಡಿಯಾದ ಸಿಪ್ಪೆಯಂತಹ ಓಡು, ಪೊರೆ.

ಹೆರಿ = ಹೆಚ್ಚುವುದು, ಹೆಚ್ಚು, ಕತ್ತರಿಸು.

ಹೆರಿಗಿ = ಹೆರಿಗೆ, ಪ್ರಸವ.

ಹೆರಿಂಯುದು = ಹೆಚ್ಚುವುದು, ಸುಲಿಯುವುದು, ಕೊಚ್ಚುವುದು, ಸೀಳುವುದು.

ಹೆರು = ಹೆರವುದು, ಹಡೆಯುವುದು, ಪ್ರಸವ, ಹೆರಿಗಿ.

ಹೆರ್ಕು = ಹೆಕ್ಕು, ಆಯು.

ಹೆರೆಮಣೆ = ತುರಿಮಣೆ, ಈಳಿಗೆಮಣೆ.

ಹೆಳೆ = ನೆಪ, ನೆವ (ಮಕ್ಕಳ ಹೆಳೆಲಿ ನಿದ್ದೆ ನೆಂಟರ ಹೆಳೆಲಿ ಊಟ).

ಹೇಟೆ = ಹೆಣ್ಣು ಕೋಳಿ.

ಹೇತ್ಲಾಂಡಿ = ಹೇಡಿ, ಕೈಲಾಗದವನು.

ಹೇನು = ತಲೆಯಲ್ಲಿರುವ ಕೀಟ, ಹುಳ.

ಹೇಮ = ಚಿನ್ನ, ಬಂಗಾರ.

ಹೇರಳ = ಸಮೃದ್ಧ, ಸಾಕಷ್ಟು, ವಿಫುಲ, ತುಂಬಾ.

ಹೇರು = ಕೂಡಿಡು, ಹೊರಿಸು, ಹೊರೆ, ಒಂದರ ಮೇಲೊಂದು ಪೇರಿಸು.

ಹೇಲು = ಮಲ, ಮಲ ವಿಸರ್ಜಿಸು.

ಹೇಲು ಹೆಮ್ಮಂಡೆ = ಸಿಕ್ಕ ಸಿಕ್ಕಿದ್ದೆಲ್ಲಾ, ಬೇಕಾಗಿದ್ದು ಬೇಡದಿರುವುದೆಲ್ಲಾ.

ಹೇಸು = ಹೇಸಿಗೆ, ಅಸಹ್ಯಪಡು.

ಹೇಸುವುದು = ಕಾಲು ಹೇಸು, ನೀರಿನಲ್ಲಿ ಕಾಲಬೆರಳ ಸಂದು ಕೊಳೆಯುವುದು, ಕೆಸರು ಹುಣ್ಣು.

ಹೇಸ್‌ಬೆಟ್ಟು = ಬೆರಳಸಂದಿ ಹೇಸುವುದು.

ಹೇಳಿ ಕೇಳಿ = ಎಲ್ಲರಿಗೂ ಗೊತ್ತಿರುವ ಹಾಗೆ.

ಹೇಳ್ಕಿ = ಹೇಳಿಕೆ, ಸಾಕ್ಷಿ.

ಹೇಳ್ತಿನಿ = ಹೇಳುತ್ತೇನೆ.

ಹೇಳ್ದಂಗೆ = ಹೇಳಿದ ಹಾಗೆ.

ಹೈಗ = ಹಡ್ಡೆ (ಹಾಡ್ಯ)ಯಲ್ಲಿ ಗುಂಪಾಗಿ ಬೆಳೆಯುವ ಒಂದು ಜಾತಿಯ ಮರ.

ಹೈಗನಳಬಿ = ಬೇಸಿಗೆಯಲ್ಲಿ ಉದುರಿದ ಹೈಗನ ಎಲೆಗಳು ಮಳೆಗಾಲದಲ್ಲಿ ಕೊಳೆತು ಅದರಿಂದ ಏಳುವ

ಅಣಬೆಗಳು (ಕೆಂಪು ಬಣ್ಣದ ಔಷಧೀಯುಕ್ತ ಅಣಬೆ), ಕಪ್ಪು ಹೈಗನಳಬಿಯೂ ಇವೆ.

ಹೈರಾಣ = ದಣಿವು, ಸೋಲು, ರಾದ್ಧಾಂತ, ಗೊಂದಲ, ತ್ರಾಸ.

ಹೈಲು = ವಿಚಿತ್ರ ಅಂಗಚೇಷ್ಟೆಗಳನ್ನು ಮಾಡುತ್ತಾ ಬಾಯಿಗೆ ಬಂದಂತೆ ಮಾತಾಡುವವನು, ಹುಡುಗು ಬುದ್ಧಿ.

ಹೈಲಾಟ = ಹುಡುಗಾಟಿಕೆ.

ಹೊಂಗಾರ್ಕನ ಮರ = ೧.ಒಂದು ಕಾಡುಮರ, ಹೊಂಗೆ ಮರ, ಜಾನುವಾರುಗಳಿಗೆ ಇದರ ಕೆಂಪು ತೆಪ್ಪೆಯನ್ನು ಬೇಯಿಸಿ ಗಂಜಿ ಮಾಡಿಕೊಟ್ಟರೆ ತುಂಬಾ ತಂಪು, ೨.ಲಕ್ಷ್ಮಣ ಈ ಮರವನ್ನು ಕಡಿದು, ಸೀತೆಯನ್ನು ಕಡಿದೆನೆಂದು ಶ್ರೀರಾಮನಿಗೆ ಕೆಂಪುಬಣ್ಣ ಹಿಡಿದ ಕತ್ತಿಯನ್ನು ತೋರಿಸಿದನಂತೆ ಎಂಬ ನಂಬಿಕೆಯಿದೆ.

ಹೊಂಗಾರ್ಕನ ಬೀಜ = ಹೊಂಗೆಮರದ ಬೀಜ.

ಹೊಂಗು = ಅಲ್ಲಾಡು, ತೂರಾಡು.

ಹೊಂಗೆ = ಹೊಂಗೆ ಮರ, ಎಲೆಭರಿತವಾದ ಹೆಚ್ಚು ನೆರಳು ನೀಡುವ ಮರ, ತಮಾಲ ವೃಕ್ಷ.

ಹೊಂಚು = ಸಂಚು, ಸಮಯ ಸಾಧಕತೆ.

ಹೊಂಚು ಹಾಕು = ಸಂಚು ಮಾಡಲು ಕಾಯುವುದು, ಬೇರೆಯವರಿಗೆ ಕಾಣದಂತೆ ಆಕ್ರಮಣ ಮಾಡಲು ಕಾಯುವುದು

ಹೊಂಡ = ಕುಳಿ, ಗುಳಿ, ತಗ್ಗು, ನೀರಿನ ಗುಮ್ಮಿ.

ಹೊಂಡ ತೋಣಕು = ತಳಸೋಸು, ಶೋಧಿಸು.

ಹೊಂಡ ತೋಣಕದು = ಹೊಂಡದಲ್ಲಿನ ನೀರನ್ನು ಹೊರಹಾಕಿ ಅದರಲ್ಲಿರುವ ಮೀನು, ಏಡಿಗಳನ್ನು ಹಿಡಿಯುವುದು.

ಹೊಂದಾಣ್ಕೆ = ೧.ಹೊಂದಿಕೊಳ್ಳುವ ಗುಣ, ೨.ಮದುವೆಗಾಗಿ ಹುಡುಗ ಹುಡುಗಿಯ ಈಡೂ-ಜೋಡು (ರೂಪ, ಗುಣ, ಎತ್ತರ, ದಪ್ಪ ಇತ್ಯಾದಿ) ಸರಿ ಹೊಂದುವುದೇ ಎಂದು ನೋಡುವುದು.

ಹೊಂದ್ಕ = ಸರಿಯಾಗು, ಒಪ್ಪಿಗೆಯಾಗು, ಸೇರಿಕೊಳ್ಳು, ಹೊಂದಿಕೊಳ್ಳು.

ಹೊಂದ್ಕಿ = ಹೊಂದಿಕೆ, ಒಪ್ಪಿಗೆ, ಸಾಮರಸ್ಯ.

ಹೊಂದು = ಸೇರಿಕೊಳ್ಳು, ಒಪ್ಪಿಗೆಯಾಗು.

ಹೊಕ್ಕ = ಹುಕ್ಕಳ, ನಾಭಿ, ಹೊಕ್ಕುಳ.

ಹೊಕ್ಕದ ಗಂಟು = ಗೊಬ್ಬೆಸೀರೆ ಉಡುವಾಗ ನೆರಿಗೆಯನ್ನು ಸುತ್ತಿ ಬಾಳೆಕಾಯಿ ಆಕಾರದಲ್ಲಿ ಹೊಕ್ಕಳ ಹತ್ತಿರ ಸಿಕ್ಕಿಸಿಕೊಳ್ಳುವುದು.

ಹೊಕ್ಕು = ಒಳನುಗ್ಗಿ, ಒಳನಡೆದು.

ಹೊಗ್ಗಂಡಿ = ಹೊಗೆ ಸರಾಗವಾಗಿ ಮೇಲೆ ಹೋಗಲು ಒಲೆಯ ಮೇಲ್ಭಾಗದಲ್ಲಿ ಮಾಡಿರುವ ಕಿಂಡಿ.

ಹೊಗು = ನುಗ್ಗು, ಪ್ರವೇಶಿಸು.

ಹೊಗೆ = ಧೂಮ.

ಹೊಗೆಕಂಡಿ = ಹೊಗ್ಗಂಡಿ.

ಹೊಗೆದಟ್ಟೆ = ಅಡಿಕೆಯನ್ನು ಬೇಯಿಸಿ ಒಣಗಿಸಲು ಕೆಳಗೆ ದೊಡ್ಡ ದೊಡ್ಡ ಮರದ ತುಂಡುಗಳಿಗೆ ಬೆಂಕಿಹಾಕಿ ಮೇಲೆ ಅಟ್ಟಣಿಗೆಯ ಮೇಲೆ ತಟ್ಟಿಹಾಕಿ ಒಣಗಿಸುವುದು.

ಹೊಗೆಬತ್ತಿ = ಚುಟ್ಟಾ.

ಹೊಗೆಸರ = ಹೊಗೆ ಇರುವ ಜಾಗದಲ್ಲಿ, ಹೊಗೆಯ ಹತ್ತಿರ.

ಹೊಗೆ ಸಾಮಾನು = ಬಾಣಂತಿಗೆ ಶೀತವಾಗದಿರಲೆಂದು ಹೊಗೆ ಹಾಕಿ ತಲೆ ಒಣಗಿಸಲು ಬಳಸುವ ಬೆಂಕಿ ಕೆಂಡ, ಸಾಂಬ್ರಾಣಿ, ಗಂಧದ ಚಕ್ಕೆ ಇತ್ಯಾದಿ......

ಹೊಚ್ಚು = ೧.ಹೊದೆಸು, ೨.ಹೊತ್ತಿಸು.

ಹೊಟ್ಬಾವಿ = ನೀರಿಲ್ಲದ ಬಾವಿ.

ಹೊಟ್ಟು = ೧.ಧಾನ್ಯಗಳ ಮೇಲಿನ ಸಿಪ್ಪೆ, ಜೊಳ್ಳು, ಸಾರವಿಲ್ಲದ್ದು, ೨.ತಲೆಯಲ್ಲಿರುವ ಒಣಗಿದ ಚರ್ಮದ ಪೊರೆ.

ಹೊಟ್ಟೆ = ಉದರ.

ಹೊಟ್ಟೆ ಕಚ್ಚು = ಹೊಟ್ಟೆನೋವು ಉದರ ಬೇನೆ.

ಹೊಟ್ಟೆಕಿಚ್ಚು = ಹೊಟ್ಟೆ ಉರಿ, ಇನ್ನೊಬ್ಬರಿಗೆ ಮತ್ಸರ ಪಡುವುದು, ಅಸಮಾಧಾನ.

ಹೊಟ್ಟೆ ಉಬ್ಬುರ್ಸು = ಅಜೀರ್ಣದಿಂದಾಗಿ ಹೊಟ್ಟೆ ಊದಿಕೊಳ್ಳುವುದು.

ಹೊಟ್ಕೆರೆ = ನೀರಿಲ್ಲದ ಕೆರೆ.

ಹೊಟ್ಟೆ ಉರಿ = ೧.ಹೆಚ್ಚಾಗಿ ಖಾರ/ಹುಳಿ ತಿನ್ನುವುದರಿಂದ ಬರುವ ಹೊಟ್ಟೆ ಭಾದಕ, ೨.ಹೊಟ್ಟೆಕಿಚ್ಚು.

ಹೊಟ್ಟೆಗೂಟ = ಬೀಸೇ ಕಲ್ಲಿನ ಕೆಳಭಾಗದ ಕಲ್ಲಿನ ಮಧ್ಯದಲ್ಲಿರುವ ಗೂಟ.

ಹೊಟ್ಟೆ ತಿರ್ಪು = ಹೊಟ್ಟೆ ತೊಳಸು, ವಾಂತಿ ಬಂದಂತಾಗು.

ಹೊಟ್ಟೆಪಾಡು = ಜೀವನೋಪಾಯ, ಬದುಕು.

ಹೊಟ್ಟೆಬಾಕ = ಅತಿಯಾಗಿ ತಿನ್ನುವವ, ಬಕಾಸುರ.

ಹೊಟ್ಟೆಹಾಳ = ಅತಿಯಾಗಿ ತಿಂದು ಹೊಟ್ಟೆ ಕೆಡಿಸಿಕೊಳ್ಳುವವನು.

ಹೊಟ್ಟೆಹುಳ = ಕರುಳಿನಲ್ಲಿ ವಾಸಿಸಿ ಉಪದ್ರವ ಕೊಡುವ ಜಂತುಹುಳಗಳು –ಇವುಗಳಿಂದ ರಕ್ತಹೀನತೆ ಯುಂಟಾಗುತ್ತದೆ.

ಹೊಟ್ಟೆಹೊರಿ = ಜೀವಿಸು ಬದುಕು.

ಹೊಟ್ ಸೀಗೆ = ಕಾಯಿ ಬಿಡದ/ ಬಿಟ್ಟರೂ ಬೀಜವಿಲ್ಲದ ಸೀಗೆಪೊದೆ .

ಹೊಡಬಿಟ್ಟಿ = ೧.ಕಾವಲಿಲ್ಲದ ದನಕರುಗಳು ೨.ಯಾರ ಹಂಗೂ ಇಲ್ಲದ, ಊರೂರು ತಿರುಗುವ.

ಹೊಡ ಬಿಟ್ಟಿ ಕೂಳು = ಯಾರ ಹಂಗೂ ಇಲ್ಲದೆ ಅಲ್ಲಿ ಇಲ್ಲಿ ಅಲೆಯುತ್ತಾ ಸಿಕ್ಕಿದಲ್ಲಿ ಬಿಟ್ಟಿ ಊಟ ಮಾಡುವುದು.

ಹೊಡಬೇಟೆ = ಹಬ್ಬದ ಮರುದಿನ/ ಹರಕೆಯ ದಿನ/ತೊಟ್ಲು ಶಾಸ್ತ್ರದ ದಿನಗಳಲ್ಲಿ ಶಿಕಾರಿಗೆ ಹೋಗುವುದು.

ಹೊಡ್ತ = ಏಟು, ಪೆಟ್ಟು.

ಹೊಡ್ತ = ರಭಸ, ಬಿರುಸು (ಮಳೆಯ ಹೊಡ್ತ).

ಹೊಡ್ದಾಟ = ಹೊಡೆದಾಟ, ಜಗಳ ಕಾಯುವುದು, ಕೈಕೈ ಮಿಲಾಯಿಸಿಕೊಳ್ಳುವುದು.

ಹೊಡಾಳೆ ಪಟ್ಟೆ = ಹೊಡೆ ಬಂದು ಬಿರಿದ ಅಡಕೇಹಾಳೆಯ ಪಟ್ಟೆ ಅಡಕೆಯ ಹಾಳೆ.

ಹೊಡಿ = ಏಟು ಹಾಕು, ಪೆಟ್ಟು ಕೊಡು.

ಹೊಡಿ = ಸಿಕ್ಕಿಸು (ಬಾಣ ಹೊಡಿ, ಮೊಳೆ ಹೊಡಿ).

ಹೊಡೆ = ತೆನೆ ಬಿಡುವ ಮೊದಲು ಉಬ್ಬಿದ ಭಾಗ.

ಹೊಡೆಗಟ್ಟು = ತೆನೆಬರಲು ಪ್ರಾರಂಭವಾಗು.

ಹೊಣ್ಕು = ಹೊರಳು, ಹೊರಳಿ ನೋಡು.

ಹೊಣ್ಕೆ ಬೀಳು = ಹೊರಳಿ ಬೀಳುವುದು.

ಹೋಣೆ = ಜವಾಬ್ದಾರಿ.

ಹೋಣೆಗಾರ = ಜಾಮೀನಾಗಿ ನಿಲ್ಲುವವನು.

ಹೋಣೆಗೇಡಿ = ಬೇಜವಾಬ್ದಾರಿ ಮನುಷ್ಯ.

ಹೊತ್ತಗೆ = ಪುಸ್ತಕ.

ಹೊತ್ತಲ್ದ ಹೊತ್ತು = ಮಧ್ಯರಾತ್ರಿ, ಮಟಮಟ ಮಧ್ಯಾಹ್ನ.

ಹೊತಾರೆ = ಬೆಳಿಗ್ಗೆ, ಹೊತ್ತು ಏರುವ ಮೊದಲು (ಹೊತಾರೆ ಬರುವ ಬಸ್ಸು).

ಹೊತಾರಿಕೆ = ಬೆಳಿಗ್ಗೆ, ಬೆಳಿಗ್ಗಗೆ (ಹೊತಾರಿಕೇ ಹೋಗೋಣ), ಬೆಳಿಗ್ಗೆ ಮುಂಚೆಯೇ.

ಹೊತ್ತಾರೆ = ಹೊತಾರೆ.

ಹೊತ್ತಾರಿಂದ್ಲೂ = ಬೆಳಿಗ್ಗೆಯಿಂದಲೂ.

ಹೊತ್ತಿಗ್ಮುಂಚೆ = ಹೊತಾರಿಕೆ, ಬೇಗನೆ, ತಕ್ಕ ಸಮಯದಲ್ಲಿ.

ಹೊತ್ತು = ಕಾಲ, ಗಂಟೆ, ಸಮಯ.

ಹೊತ್ತುಗೊತ್ತು = ಕಾಲ/ಸಮಯದ ಅರಿವು.

ಹೊದರು = ಪೊದರು, ಮಟ್ಟು, ಗಿಡಗಳ ಪೊದೆ .

ಹೊದ್ಕಿ = ಹೊದಿಕೆ, ಹೊದೆಯುವ ಬಟ್ಟೆ/ಕಂಬಳಿ.

ಹೊದ್ಕಂ = ಹೊದೆದುಕೊಂಡು, ಹೊದಿಕೆಯನ್ನು ಮೈಮೇಲೆ ಮುಚ್ಚಿಕೊಂಡು.

ಹೊನಗನೆ = ಒಂದು ಜಾತಿಯ ತರಕಾರಿ ಸೊಪ್ಪು.

ಹೊನ್ನೆ = ಒಂದು ಜಾತಿಯ ಮರ.

ಹೊನ್ನೊಣ = ಗುಯ್ಯ್ ಎಂದು ಕೂಗುವ ದಪ್ಪ ಕಪ್ಪು ನೊಣ.

ಹೊಪ್ಪಳೆ = ಸುಟ್ಟ ಬಕ್ಕೆ, ಬೊಬ್ಬೆ, ಗಾಯದ ಮೇಲಿನ ಒಣಗಿದ ಚರ್ಮ, ಒಣಗಿದ ವಸ್ತು ಹಾಲೆಯಂತಾಗುವುದು.

ಹೊರಗಾಗು = ಮುಟ್ಟಾಗು, ರಜಸ್ವಲೆಯಾಗು.

ಹೊರ್ಕಡೆ = ಹೊರಕಡೆ, ಮಲವಿಸರ್ಜನೆ.

ಹೊರ್ಕಡಿಗೆ ಹೋಗು = ಹೇಲಕ್ಕೆ ಹೋಗು, ಮಲವಿಸರ್ಜನೆ ಮಾಡು.

ಹೊರಸಲು ಹಕ್ಕಿ = ಸಾಮಾನ್ಯ ಗಾತ್ರದ, ಕಾಳುಗಳನ್ನು ಆಯುವ ಬೂದು ಬಣ್ಣದ ಹಕ್ಕಿ.

ಹೊರಸ್ಲಕ್ಕಿ = ಹಾರುವಾಗ ರೆಕ್ಕೆಯಲ್ಲಿ ಬಿಳಿಯ ದೊಡ್ಡ ಚುಕ್ಕೆಯಿರುವ ಪುಟ್ಟಹಕ್ಕಿ.

ಹೊರು = ಹೊರೆಯನ್ನು ತಲೆ

ಮೇಲಿಟ್ಟುಕೊಳ್ಳುವುದು.

ಹೊರ್ಸು = ಹೊರೆಯನ್ನು ತಲೆಯ ಮೇಲಿಡು.

ಹೊರ್ಗು = ಹೊರಗೆ, ಮುಟ್ಟು.

ಹೊರೆ = ಭಾರ, ಭಾರವಾದ ವಸ್ತು ಸೇರಿಸಿಕಟ್ಟಿದ ಗಂಟು.

ಹೊರತು = ಬಿಟ್ಟು, ಉಳಿದು, ಬೇರೆಯಾಗಿ.

ಹೊರ್ನೋಟ = ಹೊರನೋಟ, ಮೇಲುನೋಟ, ಬಾಹ್ಯ ಚಹರೆ, ಕಣ್ಣಿಗೆ ಕಂಡಂತೆ.

ಹೊಲಸು = ಮಾಂಸಾಹಾರ.

ಹೊಲಸಿನ ಒಳಗೆ = ಮನೆಯ ಹಿಂಭಾಗದ ಮಾಂಸಾಹಾರವನ್ನು ತಯಾರಿಸಲೆಂದೇ ಇರುವ ಕೋಣೆ.

ಹೊಲ್ಸಿನ ಒಲೆ = ಕೇವಲ ಮಾಂಸಾ–ಹಾರವನ್ನು ತಯಾರಿಸಲು ಮಾಡಿರುವ ಒಲೆ.

ಹೊಲ್ಸಿನ ಗಡಿಗೆ = ಮಾಂಸಾಹಾರವನ್ನು ಬೇಯಿಸಲೆಂದೇ ಇಟ್ಟುಕೊಂಡಿರುವ ಮಡಕೆ.

ಹೊಲ್ಡು = ಹೊರಡು.

ಹೊಸಿ = ಉಜ್ಜು, ತೀಡು, ಹೊಸೆ.

ಹೊಸಿಯದು = ಬತ್ತಿಮಾಡುವುದು, ಎರಡು ಎಳೆದಾರ/ಬಟ್ಟೆಯನ್ನು ಬತ್ತಿಯಂತೆ ಉಜ್ಜಿ ಜೋಡಿಸುವುದು.

ಹೊಸ್ಲು = ಹೊಸಿಲು, ಹೊಸ್ತಿಲು, ಮುಂಬಾಗಿಲನ್ನು ದಾಟಲು ಇರುವ ಬಾಗಿಲಿನ ಕೆಳಗಿನ ಮರದ ಪಟ್ಟಿ.

ಹೊಳಗಾರ = ಒಂದು ಕಾಡಿನನಾಟದ ಮರ. ಹೊಗೆಯಿರುವ ಜಾಗದಲ್ಲಿ ಮಾತ್ರ ಗೆದ್ದಲು ಹಿಡಿಯುವುದಿಲ್ಲ.

ಹೊಳಕೆ = ೧.ಹೋಳು, ಒಡೆದ ತೆಂಗಿನ ಕಾಯಿಯ ಒಂದು ಭಾಗ, ೨.ಗದ್ದೆಯ ಮಣ್ಣನ್ನು ಮೊದಲಿಗೆ ದೊಡ್ಡ ದೊಡ್ಡ ಹೆಂಟೆಗಳಾಗಿ ಉಳುಮೆಮಾಡುವುದು.

ಹೊಳಿ = ೧.ಹೊಳೆಯುವುದು, ೨.ಗಮನಕ್ಕೆ ಬರುವುದು.

ಹೊಳಿ = ಜಗಮಗಿಸು, ಕಣ್ಣುಕೋರೈಸು.

ಹೊಳ್ಳಿ = ಮರಳಿ, ತಿರುಗಿ, ಹೊರಳಿ, ಪುನಃ.

ಹೊಳೆ = ನದಿ.

ಹೊಳು = ಮಳೆಯು ಬಂದು ನಂತರ ನಿಲ್ಲುವುದು – (ಮಳೆ ಹೊಳವಾಗದೆ).

ಹೊಳ್ಳು = ಹೊರಳು, ಮಗ್ಗುಲಾಗು.

ಹೊಳೆಲಕ್ಕಿ = ಹೊಳೆ ಅಥವಾ ನೀರು ಹರಿಯುವ ಕಾಲುವೆಯ ದಡದಲ್ಲಿ ಬೆಳೆಯುವ ದೊಡ್ಡ ದೊಡ್ಡ ಲಕ್ಕಿಮರಗಳು.

ಹೊಳ್ಳೆ = ಮೂಗಿನ ರಂಧ್ರಗಳು.

ಹೊಳ್ಕೆ = ಸೀಳಿದ ಸೌದೆ ತುಂಡು.

ಹೊಳ್ಕೆ ಹೊಡೆಯದು = ಗದ್ದೆಯ ಮಣ್ಣನ್ನು ದೊಡ್ಡಮಣ್ಣಿನ ಹೆಂಟೆಗಳನ್ನಾಗಿ ಉಳುವುದು.

ಹೋಗ್ಬಕಂತ = ಹೋಗಬೇಕೆಂದುಕೊಂಡು.

ಹೋಗ್ಬಡ = ಹೋಗಬೇಡ.

ಹೋಗಾ = ಹೋಗು (ಪು).

ಹೋಗಾನ = ಹೋಗೋಣ, ತೆರಳೋಣ.
ಹೋಗಾನಂತ = ಹೋಗಬೇಕೆಂದು.
ಹೋಗಿ = ಹೋಗು (ಬ.ವ) .
ಹೋಗಾನಿ = ಹೋಗಾನ, ಹೋಗೋಣ.
ಹೋಗ್ಯಾರು ಹೋಗು = ಹೋಗುವು–ದಾದರೆ ಹೋಗು.
ಹೋಗು = ತೆರಳು, ನಡೆ.
ಹೋಗೆ = ಹೋಗು (ಸ್ತ್ರೀ).
ಹೋತ = ಗಂಡು ಆಡು.
ಹೋತ = ಹೋಯ್ತಾ? ಹೋಯಿತಾ? ಎಂದು ಕೇಳುವುದು.
ಹೋತದೆ = ಹೋಗುತ್ತದೆ.
ಹೋತು = ಹೋಯಿತು, ಹೋಯ್ತು.
ಹೋದ = ೧. ಮರಳಿದ, ಕಳೆದ, ಹಿಂದಿನ, ತೆರಳಿದ ೨. ಹೋದನು.
ಹೋದ್ರು = ತೆರಳಿದರು.
ಹೋದ್ಲು = ಹೋದಳು, ತೆರಳಿದಳು.
ಹೋಬಳಿ = ಕೆಲವು ಗ್ರಾಮಗಳು ಸೇರಿದ್ದು, ತಾಲ್ಲೂಕಿಗಿಂತ ಚಿಕ್ಕಪ್ರದೇಶ.
ಹೋರ್ಗರ = ಗಂಡು ಕರು, ಹೋರಿ ಕರು.
ಹೋರಾಟ = ಬಡಿದಾಟ, ಕಷ್ಟವನ್ನ ದುರಿಸುವ ಬಗೆ.
ಹೋರಿ = ವಯಸ್ಸಿಗೆ ಬಂದ ಎತ್ತು/ ಗಂಡುಕರು.
ಹೋರಿಮಂಗ = ದಷ್ಟಪುಷ್ಟವಾಗಿ ಬೆಳೆದ ಮಂಗಗಳ ಗುಂಪಿನ ನಾಯಕ ಮಂಗ.
ಹೋಳಿಗೆ = ಕಣಕದೊಳಗೆ ಹೂರಣವಿಟ್ಟು ಮಾಡಿದ ಸಿಹಿತಿಂಡಿ, ಒಬ್ಬಟ್ಟು.
ಹೌದು = ಸರಿ ಎಂದು ಒಪ್ಪಿಕೊಳ್ಳುವುದು, ನಿಜ.
ಹೌಹಾರು = ಚಕಿತನಾಗು, ಬೆಚ್ಚಿಬೀಳು.
ಹ್ವಗ್ಗಂಡಿ = ಹೊಗ್ಗಂಡಿ.
ಹ್ವಗೆ = ಹೊಗೆ.
ಹ್ಯಾಟೆ = ಹೇಟೆ, ಹೆಣ್ಣುಕೋಳಿ.
ಹ್ಯಾಡ = ಸ್ವಲ್ಪ ಎತ್ತರದ ಜಾಗ, ತೆಣೆ.
ಹ್ವತಾರೆ =ಹೊತಾರೆ, ಬೆಳಿಗ್ಗೆ.
ಹ್ವಡ್ತ = ಹೊಡೆತ.
ಹ್ಯಾಪ್‌ಮೋರೆ = ಸಪ್ಪೆಮುಖ, ಜೋಲುಮುಖ.
ಹ್ಯಮ್ಮೆ = ಹೆಮ್ಮೆ, ಜಂಬ.
ಹ್ವೊಚ್ಕೊಣದು = ಹೊದ್ದುಕೊಳ್ಳುವುದು, ಹೊದಿಕೆ.
ಹ್ವೊಚ್ಗೊಣಕ್ಕೆ = ಹೊದ್ದುಕೊಳ್ಳುವುದಕ್ಕೆ.
ಹ್ವೊಪ್ಪಳೆ = ಚಕ್ಕಳ, ಹೊಪ್ಪಳೆ.
ಹ್ವೊಳಕೆ = ಹೊಳಕೆ.
ಹ್ವೊಗಲೆ = ಒಲೆಯ ಹಿಂದಿರುವ ಹೊಗೆ ಹೋಗುವ ಕಂಡಿ – ಇದನ್ನು ಒಲೆಯಂತೆಯೂ ಬಳಸು ಬಹುದು.
ಹ್ವೊದ್ದಲ್ಲಿ = ಪಕ್ಕದಲ್ಲಿ, ಮೂಲೆಯಲ್ಲಿ.
ಹ್ವೊದ್ದಿಗೆ = ಪಕ್ಕಕ್ಕೆ, ಮೂಲೆಗೆ.

ಕರ್ನಾಟಕದಲ್ಲಿ ಭೌಗೋಳಿಕ ಪರಿಸರ ವೈವಿಧ್ಯಮಯವಾಗಿರುವಂತೆ ಆಯಾಯ ಪ್ರದೇಶ ವಾಸಿಗಳ ಭಾಷೆಯಲ್ಲೂ ವೈವಿಧ್ಯತೆ ಇರುವುದು ಕಂಡುಬರುತ್ತದೆ. ಪ್ರಾದೇಶಿಕ ಉಪಭಾಷೆಗಳು ಮತ್ತು ಸಾಮಾಜಿಕ ಉಪಭಾಷೆಗಳು ಭಾಷೆಯನ್ನು ಶ್ರೀಮಂತಗೊಳಿಸುತ್ತವೆ. ಭಾಷಿಕ ಶ್ರೀಮಂತಿಕೆಯನ್ನು ಹೆಚ್ಚುಗೊಳಿಸುವ ಈ ಬಗೆಯ ಹಲವು ಉಪಭಾಷೆಗಳನ್ನು ತಿಳಿಯಲು ಆಡುನುಡಿಕೋಶ, ಜಾನಪದ ಶಬ್ದಕೋಶಗಳು ಹೆಚ್ಚು ಸಹಾಯಕ್ಕೆ ಬರುತ್ತವೆ. ವಿಶೇಷವಾಗಿ ಮಲೆನಾಡು ಪ್ರದೇಶ ಭಾಷಾ ವೈವಿಧ್ಯತೆಯನ್ನು ಹೊಂದಿದ ವಿಶಿಷ್ಟ ಪ್ರದೇಶ. ಈ ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡು ಬಳಕೆಯಲ್ಲಿರುವ ಆಡುರೂಪಗಳನ್ನು ಕುರಿತು ಪದ, ಧ್ವನಿ, ಉಚ್ಚರಣೆ, ಅರ್ಥ ವೈವಿಧ್ಯ ಇತ್ಯಾದಿ ಸಂಗತಿಗಳನ್ನು ಅತ್ಯಂತ ಶ್ರದ್ಧೆಯಿಂದ ಗುರುತಿಸಿ, ದಾಖಲಿಸಿರುವುದು 'ಮಲೆನಾಡ ನುಡಿಕೋಶ'ದ ಹೆಗ್ಗಳಿಕೆ. ಮಲೆನಾಡು ಪ್ರದೇಶದ ಜನಸಂಸ್ಕೃತಿ ಹಾಗೂ ಶ್ರೀಮಂತ ಭಾಷಿಕ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಮಹತ್ವದ ಆಕರವೆನಿಸುವ ಪ್ರಕೃತ ನುಡಿಕೋಶವನ್ನು ಅತ್ಯಂತ ಶ್ರದ್ಧೆ, ಶ್ರಮವಹಿಸಿ ರೂಪಿಸಲಾಗಿದೆ. ನಾಡನುಡಿ ಕೋಶಗಳ ಚರಿತ್ರೆಯಲ್ಲಿ ಮುಖ್ಯವೆನಿಸಬಹುದಾದ ಈ ನುಡಿಕೋಶವನ್ನು ಸಿದ್ಧಪಡಿಸಿಕೊಟ್ಟ ಶ್ರೀಮತಿ ವೇಣಾಕ್ಷಿ ಎಸ್.ಡಿ. ಅವರು ವಿಶೇಷವಾಗಿ ಅಭಿನಂದನಾರ್ಹರು.

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

₹೧೫೦/-

ISBN 978-93-83149-11-7
9 789383 149117 >

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ